ಕರ್ನಾಟಕ

ದೃಶ್ಯಕಲಾ ಶಿಕ್ಷಣದ ಸಮಸ್ಯೆ ಮತ್ತು ಸವಾಲುಗಳು

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಅಂಬರೀಶ್ ಎಸ್.ಜಿ.



ಮಾರ್ಗದರ್ಶಕರು
ಡಾ. ಲಕ್ಷ್ಮಣಸಿಂಗ್ ಆರ್. ರಾಥೋಡ್
ಉಪನ್ಯಾಸಕರು
ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಮೈಸೂರು

700
AMB
K

ದೃಶ್ಯಕಲಾ ವಿಭಾಗ
ಲಲಿತ ಕಲಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೮

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

Shri Mahantesh
BOOK BINDING
Digital Colour Print
Laser Prints & Xerox
1st Flor Stadiaum Copelex KCD Road DW

949

ಅಕ್ಷರ ಗ್ರಂಥಾಲಯ
ಕನ್ನಡ ವಿ.ವಿ., ಹಂಪಿ.

ಕರ್ನಾಟಕ ದೃಶ್ಯಕಲಾ ಶಿಕ್ಷಣದ ಸಮಸ್ಯೆ ಮತ್ತು ಸವಾಲುಗಳು

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಅಂಬರೀಶ್ ಎನ್.ಜಿ.

ಮಾರ್ಗದರ್ಶಕರು

ಡಾ. ಲಕ್ಷ್ಮಣಸಿಂಗ್ ಆರ್. ರಾಥೋಡ್

ಉಪನ್ಯಾಸಕರು

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು

ಮೈಸೂರು

ದೃಶ್ಯಕಲಾ ವಿಭಾಗ

ಲಲಿತ ಕಲಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೯

700
AmB K

139095

ಪ್ರಮಾಣ ಪತ್ರ

"ಕರ್ನಾಟಕ ದೃಶ್ಯಕಲಾ ಶಿಕ್ಷಣದ ಸಮಸ್ಯೆ ಮತ್ತು ಸವಾಲುಗಳು" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಲಕ್ಷ್ಮಣಸಿಂಗ್ ಆರ್. ರಾಥೋಡ್**, ಉಪನ್ಯಾಸಕರು, ಮೈಸೂರು ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ವಿಷಯವನ್ನು ಇಡಿಯಾಗಿ ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರಾವುದೇ ಪದವಿಗಾಗಲಿ ಇಲ್ಲವೆ ಇತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

(ಅಂಬರೀಶ್ ಎನ್.ಜಿ)
ಪಿಎಚ್.ಡಿ. ಸಂಶೋಧನ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ದಿನಾಂಕ : 17.03.19
ಸ್ಥಳ : **ವಿದ್ಯಾರಣ್ಯ**

ದೃಢೀಕರಣ ಪತ್ರ

ಅಂಬರೀಶ್ ಎನ್.ಜಿ. ಅವರು **"ಕರ್ನಾಟಕ ದೃಶ್ಯಕಲಾ ಶಿಕ್ಷಣದ ಸಮಸ್ಯೆ ಮತ್ತು ಸವಾಲುಗಳು"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸಿರುತ್ತಾರೆ.

ಪ್ರಸ್ತುತ ಮಹಾಪ್ರಬಂಧದ ವಿಷಯವನ್ನು ಇಡಿಯಾಗಿ ಅಥವಾ ಬಿಡಿಯಾಗಿ ಈ ಮೊದಲು ಬೇರಾವುದೇ ಪದವಿಗಾಗಲಿ ಇಲ್ಲವೆ ಇತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದಶಕರು

ದಿನಾಂಕ : 17.03.19

ಸ್ಥಳ : **ವಿದ್ಯಾರಣ್ಯ**

(ಡಾ. ಲಕ್ಷ್ಮಣಸಿಂಗ್ ಆರ್. ರಾಥೋಡ್)
ಉಪನ್ಯಾಸಕರು
ಚಾಮರಾಜೇಂದ್ರ ಸರ್ಕಾರಿ
ದೃಶ್ಯಕಲಾ ಕಾಲೇಜು
ಮೈಸೂರು

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ಸ್ವರೂಪ

೧.೪. ಅಧ್ಯಯನದ ವ್ಯಾಪ್ತಿ

೧.೫. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೧.೬. ಅಧ್ಯಯನದ ವಿಧಾನ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

೧.೧. ಪ್ರಸ್ತಾವನೆ

ಕಲೆ ಎನ್ನುವುದು ಒಂದು ಯೋಗದಂತೆ. ಕಲಾವಿದನಾದವನು ವಿನೂತನತೆಯನ್ನು ಅವನೊಳಗೆ ಅವನೇ ರೂಪಿಸಿಕೊಳ್ಳಬೇಕಾಗುತ್ತದೆ. ತಾನು ಮೊದಲು ಒಂದು ವಿಷಯದ ಬಗ್ಗೆ ತಿಳಿದುಕೊಂಡರೆ ಬೇರೆ ವಿಷಯಗಳೆಲ್ಲ ತಾನಾಗಿಯೇ ತಿಳಿಯುತ್ತವೆ. "ವೈರುಧ್ಯ ಧ್ರುವಗಳು ಬಂದು ಸೇರುವ ಕ್ರಿಯೆ ಕಲೆಯಲ್ಲಿ ನಡೆಯುತ್ತದೆ. ಕಲಾಕ್ರಿಯೆಯಲ್ಲಿ ಕಲೆ, ಕಲಾವಿದ ಮತ್ತು ಕಲಾಕೃತಿಗಳು ಬೇರೆ ಬೇರೆ ಅಲ್ಲ ಎನ್ನುವಂತಹ ಸಂದರ್ಭ ಒದಗುತ್ತದೆ. ಮರಣ-ಜೀವನ, ಬೆಳಕು-ನೆರಳು ಎರಡು ಒಂದಕ್ಕೊಂದು ಬಿಟ್ಟಿರುವಂಥದ್ದಲ್ಲ, ಪ್ರಾರಂಭ ಮತ್ತು ಕೊನೆ ಎನ್ನುವಂಥದ್ದಲ್ಲ. ಕಲೆ ಸಮಗ್ರತೆಯಲ್ಲಿ ಹುಟ್ಟುತ್ತದೆ. ಕಲಾವಿದನು ಸಂಪೂರ್ಣವಾಗಿ ತಾನು ಕಲಿತಂತಹ ಕಲೆಯಲ್ಲಿ ಕಲಿತುಕೊಳ್ಳಲು ಸಾಧ್ಯವಾದಾಗ ಮಾತ್ರ ಕಲಾವಿದ ತನ್ನ ಕಲೆಯ ಮೂಲಕವೇ ತನ್ನನ್ನು ತಾನು ಗುರುತಿಸಿಕೊಳ್ಳಲು ಸಾಧ್ಯವಾಗುವುದು."[೧]

ಚಿತ್ರಕಲೆ ಎಂದರೇನು? ಎಂಬುವುದನ್ನು ಸಂಕ್ಷೇಪಿಸಿ ಹೇಳುವುದಾದರೆ "ಲಭ್ಯವಿರುವ ಸ್ಥಳಾವಕಾಶದಲ್ಲಿ ಬಣ್ಣ ಮತ್ತು ರೇಖೆಗಳಿಂದ ಮೂಡಿಸಿದ ಒಂದು ಆಕೃತಿ. ಈ ಒಂದು ಪದವನ್ನು ಸಾಧಾರಣವಾಗಿ ವಿವರಿಸುತ್ತಾ ಹೋದರೆ ಚಿತ್ರಕಲೆಯ ಪರಿಭಾಷೆ ಹಾಗೂ ಸಾಮಗ್ರಿಗಳ ಒಟ್ಟು ಕಲ್ಪನೆ ಬರುತ್ತದೆ. ಅಲ್ಲದೇ ಒಂದು ಕೃತಿಯನ್ನು ನೋಡಿ ಆಸ್ವಾದಿಸುವಲ್ಲಿ ಬೇಕೆನಿಸಿದರೆ ಅರ್ಥೈಸುವಲ್ಲಿ ಹಿನ್ನೆಲೆಯೂ ಆದೀತು."[೨]

"ಚಿತ್ರಕಲೆ ಒಂದು ನಾಡಿನ ಒಂದು ಜನಾಂಗದ ಇತಿಹಾಸವನ್ನು ತಿಳಿಸುತ್ತದೆ. ಅದು ಪ್ರಾಚೀನ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದರ ಜೊತೆಗೆ ಆನಂದವನ್ನು ನೀಡುತ್ತದೆ."[೩] ಸಾವಿರಾರು ವರ್ಷಗಳ ಇತಿಹಾಸವನ್ನು ನಮ್ಮ ಕಣ್ಣೆದುರು ತಂದು ನಿಲ್ಲಿಸುವಂತಹ ಶಕ್ತಿ ಒಂದು ಚಿತ್ರ ಇಲ್ಲವೆ ಶಿಲ್ಪಕಲಾ ಕೃತಿಗಿದೆ. ಭಾಷೆಯು ಹುಟ್ಟಿರುವುದಕ್ಕಿಂತ ಮುಂಚೆಯೇ ಸಂಜ್ಞೆಗಳ ಮೂಲಕ ಮಾನವನು ವ್ಯವಹರಿಸುತ್ತಿದ್ದನು. ಭಾಷೆ, ಲಿಪಿ ಇವುಗಳಿಗಿಂತ ಮೊದಲೇ ಚಿತ್ರಕಲೆ ಹುಟ್ಟಿಕೊಂಡಿದೆ. ಮೊದಲನೆಯ ಪಾಠ ಚಿತ್ರಗಳಿಂದಲೇ ಆರಂಭವಾಯಿತು."[೪] "ಚೀನಾ ದೇಶದ ಲಿಪಿಗಳು

ಚಿತ್ರಮಯವಾಗಿರುವುದು ಇಂದಿಗೂ ಈ ಮಾತಿಗೆ ನಿದರ್ಶನವಾಗಿದೆ."[೪] ಕಲ್ಲಿನ ಆಶ್ರಯದಲ್ಲೇ ಅವನ ಬದುಕಿನ ಚಟುವಟಿಕೆಗಳು ನಡೆದು ಬಂದವು. ನಂತರದಲ್ಲಿ ಭಾಷೆ, ಸಾಹಿತ್ಯ ಹುಟ್ಟಿಕೊಂಡು ಪ್ರವರ್ಧಮಾನಕ್ಕೆ ಬಂದಂತೆ ಚಿತ್ರಕಲೆಯೂ ಕೂಡ ತನ್ನದೇ ಆದ ಸ್ಥಾನವನ್ನು ಪಡೆದು ಕೊಂಡಿರುವುದನ್ನು ಗುರುತಿಸಬಹುದಾಗಿದೆ. "ಈ ಚಿತ್ರಕಲೆ ಶತಶತಮಾನದಿಂದ ರೂಪುಗೊಳ್ಳುತ್ತಾ ಅನೇಕ ರೀತಿಯಲ್ಲಿ ತನ್ನ ಬಳ್ಳಿಗಳನ್ನು ಚಾಚಿ ವೈವಿಧ್ಯಮಯವಾದ ಬೆಳವಣಿಗೆಯನ್ನು ಪಡೆದು ಲೋಕಜೀವನದ ಮೇಲೆ ವಿಶೇಷ ಪ್ರಭಾವವನ್ನು ಬೀರುತ್ತಾ ಬಂದಿದೆ."[೫]

ಪ್ರಾಚೀನ ಕಾಲದಲ್ಲಿ ಗುರುಕುಲ ಪದ್ಧತಿಯಲ್ಲಿ ಮಕ್ಕಳು ಶಿಕ್ಷಣ ಪಡೆದುಕೊಳ್ಳುತ್ತಿದ್ದರು. ಅದರಲ್ಲಿ ಚಿತ್ರಕಲೆಯ ಶಿಕ್ಷಣವೂ ಒಂದಾಗಿದೆ. ಇತ್ತೀಚೆಗೆ ಮಕ್ಕಳು ಮನೆಯಲ್ಲಿ ಪರೋಕ್ಷವಾಗಿ ಅನೇಕ ವಿಷಯಗಳನ್ನು ಕಲಿತಿರುತ್ತಾರೆ. ಆದರೆ "ಜೀವನದಲ್ಲಿ ಬದುಕಲು ತಿಳಿಯಬೇಕಾದಂತಹ ಅನೇಕ ವಿಷಯಗಳನ್ನು ಕಲಿಯುವಂತಹ ಸ್ಥಳ ಶಾಲೆಯಾಗಿರುತ್ತದೆ. ಅದೆಲ್ಲವನ್ನು ತಿಳಿಸಬೇಕಾದವನು ಶಿಕ್ಷಕ."[೬] ಪ್ರಸ್ತುತ ಸಂದರ್ಭದಲ್ಲಿ ಶಿಕ್ಷಣದಲ್ಲಿ ಯಾವ ವಿಷಯಗಳಿಗೂ ಹೆಚ್ಚಿನ ಮಹತ್ವವಿಲ್ಲದಂತಾಗಿದೆ. ಇದರಿಂದಾಗಿ ಎಲ್ಲಾ ಕಡೆಗಳಿಂದಲೂ ಸಮಾಧಾನವಿಲ್ಲದ ಒಂದು ವಾತಾವರಣ ನಿರ್ಮಾಣ ಗೊಂಡಿದೆ. ಈ ಕೊರತೆಯನ್ನು ನೀಗಿಸಲು ಶಿಕ್ಷಕ ಹಾಗೂ ಪಾಲಕರು ಜವಾಬ್ದಾರಿಯನ್ನರಿತು, ಭಾವನಾತ್ಮಕವಾಗಿ, ಮಾನಸಿಕವಾಗಿ, ವಿಚಾರಾತ್ಮಕವಾದ ವಿಷಯಗಳನ್ನು ಮಕ್ಕಳಿಗೆ ಹೇಳಿ ಅವರ ಬದುಕಿನ ಏಳಿಗೆಗೆ ಉಪಯೋಗವಾಗುವಂತಹ ದಾರಿಯನ್ನು ತೋರಿಸಬೇಕು. ತನ್ನ ಬದುಕನ್ನು ಯಶಸ್ವಿಯಾಗಿ ನಡೆಸಲು ಬೇಕಾದಂತಹ ಪರಿಸರ ನಿರ್ಮಾಣ ಮಾಡಿ ಆಟ, ಪಾಠಗಳೊಂದಿಗೆ ಶಿಕ್ಷಣದ ಮೂಲ ಉದ್ದೇಶಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಲು ಪ್ರಯತ್ನಿಸಬೇಕು.

"ಇಂದಿನ ಆಧುನಿಕ ಅರ್ಥ ಪರಿಕಲ್ಪನೆಯಲ್ಲಿ ಚಿತ್ರಕಲೆ ಮತ್ತು ಶಿಕ್ಷಣ ಬೇರೆ ಬೇರೆಯಾಗಿ ಕಂಡುಬಂದರೂ ಅವು ಪರಸ್ಪರ ಪೂರಕ ಮತ್ತು ಪ್ರೇರಕವಾದವುಗಳಾಗಿವೆ."[೭] ಬುದ್ಧಿಗೆ ಸಂಬಂಧಪಟ್ಟಂಥಹುದು ಶಿಕ್ಷಣವಾದರೆ ಅವನ ಭಾವನೆಗಳಿಗೆ ಸಂಬಂಧಿಸಿದ್ದು ಚಿತ್ರಕಲೆಯಾಗಿದೆ. ಇವೆರಡರ ಸರಿಸಮಾನತೆಯಿಂದ ಮಕ್ಕಳಲ್ಲಿ ಒಳ್ಳೆಯ ಪ್ರಜ್ಞೆ ಮೂಡಲು ಸಾಧ್ಯ. "ಚಿತ್ರಕಲೆಯಿಂದ ಶಿಕ್ಷಣವು ಕಳೆಗೊಂಡರೆ ಶಿಕ್ಷಣದಿಂದ ಚಿತ್ರಕಲೆ ಬಲಶಾಲಿಯಾಗುತ್ತದೆ. ಚಿತ್ರಕಲೆಯ ಸಂಪರ್ಕವಿಲ್ಲದ ಶಿಕ್ಷಣ ಒಂದು ರೀತಿಯಲ್ಲಿ ಸತ್ವಹೀನವಾಗುತ್ತದೆ. ರಸಾತ್ಮಕವಾದ ಈ ಚಿತ್ರಕಲೆ ಶಿಕ್ಷಣಕ್ಕೆ ಸತ್ವವನ್ನು, ಸೊಬಗನ್ನು ನೀಡುತ್ತದೆ."[೮] ಈ ಮೇಲಿನ ವ್ಯಾಖ್ಯೆಯನ್ನು ಗಮನಿಸಿದರೆ ಚಿತ್ರಕಲಾ ಶಿಕ್ಷಣ ಪ್ರತಿ ಹಂತದಲ್ಲೂ ಬಳಕೆಯಾಗುತ್ತಿದ್ದು, ಅದಕ್ಕೆ ಒಂದು ವಿಶೇಷ ಸ್ಥಾನಮಾನವಿರುವುದನ್ನು ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ.

"ಉಳಿದ ಅಕಾಡೆಮಿಕ್ ಶಿಕ್ಷಣದಂತೆಯೇ ಚಿತ್ರಕಲಾ ಶಿಕ್ಷಣದ ಬಗ್ಗೆಯೂ ನಮ್ಮ ದೃಶ್ಯಕಲಾ ಸಮುದಾಯಕ್ಕೆ ಕಾಳಜಿ ಇಲ್ಲವೆಂದು ಹೇಳಬಹುದು. ವಿದ್ಯಾರ್ಥಿ ಹಾಗೂ ಕಲಾತತ್ವ ಶಾಸ್ತ್ರಜ್ಞರೂ, ಕಲಾವಿದರೂ ಈ ಮೂವರಿಗೂ ದೃಶ್ಯಕಲಾ ಶಿಕ್ಷಣದಲ್ಲಿ ಅದನ್ನು ನೀಡುತ್ತಿರುವಂತಹ ಕ್ರಮದಲ್ಲಿ, ಏಕರೂಪ ಪಠ್ಯಕ್ರಮ, ವೇಳಾಪಟ್ಟಿ, ಏಕರೂಪ ಅಂಕಪಟ್ಟಿ, ಪಠ್ಯಪುಸ್ತಕಗಳ ಏಕೀಕರಣ, ವೃಂದ

ಮತ್ತು ನೇಮಕಾತಿ ಇತ್ಯಾದಿ ದೃಶ್ಯಕಲಾ ಸಮಸ್ಯೆಗಳಲ್ಲಿ ಅಸಮಾಧಾನವಿದೆ. ಮೂವರು ಪರಸ್ಪರ ಒಬ್ಬರತ್ತ ಒಬ್ಬರು ಕೈ ತೋರಿಸಿ ತಮ್ಮ ಜವಾಬ್ದಾರಿಯಿಂದ ಮುಕ್ತರಾಗುತ್ತಿದ್ದಾರೆ. ಸ್ವಾತಂತ್ರ್ಯ ಬರುವುದಕ್ಕಿಂತ ಸಾಕಷ್ಟು ಮೊದಲೇ ನಮಗೆ ಯಾವ ರೀತಿಯ ಶಿಕ್ಷಣ ಬೇಕು ಎಂಬುದರ ಬಗ್ಗೆ ಅನೇಕ ಚರ್ಚೆ, ವಾದ-ವಿವಾದಗಳಾಗಿವೆ."[೯] ಆದರೂ ಸಹ ಜನಸಂಖ್ಯೆಗೆ ತಕ್ಕಂತೆ ತಮ್ಮ ತಮ್ಮ ದೇಶದ ಸಂಪತ್ತನ್ನು ಉಪಯೋಗಿಸಿಕೊಳ್ಳುವಂತಹ ವಿಶ್ವ ಮಾರುಕಟ್ಟೆಯ ಜೊತೆಗೆ ಹೊಂದಾಣಿಕೆಯಾಗಿ ಟೊಂಕ ಕಟ್ಟಿ ನಿಲ್ಲಬೇಕಾಗುತ್ತದೆ. ದೇಶಿ ಮತ್ತು ವಿದೇಶಿಯರ ಮನೋಭಾವಗಳು ಆಗಾಗ ಬದಲಾದರೂ ತಮ್ಮ ದೇಶಿ ಸಂಸ್ಕೃತಿ ರೀತಿ, ನೀತಿ, ಪರಂಪರೆಗಳನ್ನು ಉಳಿಸಿ ಮುಂದಿನ ಜನಾಂಗಕ್ಕೆ ಜ್ಞಾನದ ಬುತ್ತಿಯನ್ನು ನೀಡುವಂತಹ ಆಧುನಿಕ ಜ್ಞಾನದ ಜಾಗತೀಕರಣಕ್ಕೆ ಹೊಂದಿಕೊಳ್ಳುವಂತಹ ದೃಶ್ಯಕಲಾ ಶಿಕ್ಷಣ ಸರಿಪಡಿಸಿಕೊಳ್ಳಬೇಕಾಗಿದೆ.

ಯಾವುದೇ ಒಂದು ಕಾರ್ಯ ಸಾಧನೆಯಾಗಬೇಕಾದರೆ ಅದರ ಬುನಾದಿ ಗಟ್ಟಿಯಾಗಿರಬೇಕು. ಇದರಿಂದ ಆ ಕೆಲಸಕ್ಕೆ ಒಂದು ಅರ್ಥ ಸಿಗುವಂತಾಗುತ್ತದೆ. ಅದೇ ರೀತಿಯಾಗಿ "ಶಿಕ್ಷಣದ ಅಡಿಪಾಯಕ್ಕೆ ಚಿತ್ರಕಲೆ ಚೇತೋಹಾರಿಯಾಗಿದೆ. ಇದನ್ನರಿತ ಪಾಶ್ಚಿಮಾತ್ಯ ದೇಶಗಳು ಕಲೆಯ ಮೂಲಕವೇ ಶಿಕ್ಷಣವನ್ನು ಪ್ರಾರಂಭಿಸಿವೆ(Education Through Art). ವಿದೇಶದಲ್ಲಿ ನೀಡಿದಂತೆ ನಮ್ಮ ದೇಶದ ಶಿಕ್ಷಣದಲ್ಲಿ ಕಲಾಶಿಕ್ಷಣಕ್ಕೆ ಇನ್ನೂ ಆ ಸ್ಥಾನ ಸಿಕ್ಕಿಲ್ಲ. ಆಡಿ, ಮಾಡಿ ನೋಡಿ, ಕೇಳಿ, ಓದಿ ಅರಿಯುವುದೇ ಶಿಕ್ಷಣ."[೧೦] ಈ ಮೇಲಿನ ಎಲ್ಲಾ ಕ್ರಿಯೆಗಳು ಅನುಭವದಿಂದ ಸಿಗುವಂತಹವು. ಚಿತ್ರಕಲೆಗೂ ಮನುಷ್ಯನ ಜೀವನಾನುಭವವೇ ಬುನಾದಿಯಾಗಿದ್ದು, ಶಿಕ್ಷಣ ಮತ್ತು ಕಲೆಗಳ ಒಳ್ಳೆಯ ಬಾಂಧವ್ಯವೇ ಮನುಷ್ಯನ ಅಭಿವೃದ್ಧಿಗೆ ದಾರಿಯಾಗುತ್ತ ಬಂದಿದೆ. ಚಿತ್ರಕಲಾ ಶಿಕ್ಷಣದ ಬಗ್ಗೆ ಹತ್ತು ಹಲವರು ತಿಳಿದಿರುವಂತೆ ಸೃಜನಾತ್ಮಕವಾದ ಚಿತ್ರಕಲಾ ಶಿಕ್ಷಣ ಬೇಕಾಗಿರುವುದು ಕೆಲವೊಬ್ಬರು ಕಲಾವಿದರಾಗಬೇಕೆಂಬುವವರಿಗೆ ಮಾತ್ರ ಎಂದು ತಿಳಿಸಿದ್ದಾರೆ. ಚಿತ್ರಕಲಾ ಶಿಕ್ಷಣ ಪಡೆದವರೆಲ್ಲ ಮುಂದಿನ ದಿನಗಳಲ್ಲಿ ಕಲಾವಿದರೇ ಆಗಬೇಕೆನ್ನುವುದಿಲ್ಲ. ಮುಂದೆ ಅವರು ಯಾವ ಶಿಕ್ಷಣವನ್ನೇ ಪಡೆದವರಾಗಿರಲಿ ಹಾಗೂ ಪಡೆಯದೇ ಇರುವವರಾಗಿರಲಿ ಕಲಾಶಿಕ್ಷಣ ಬೇಕೇ ಬೇಕು. ಮನುಷ್ಯ ಪ್ರತಿಯೊಂದು ಹಂತದ ಮೆಟ್ಟಲು ಏರಬೇಕಾದರೆ ಚಿತ್ರಕಲಾ ಶಿಕ್ಷಣದ ಅವಶ್ಯಕತೆ ಇದೆ. ಇದಕ್ಕೆ ಸಂಬಂಧಿಸಿದಂತೆ ಅನೇಕ ಮನಃಶಾಸ್ತ್ರಜ್ಞರು, ವಿದ್ವಾಂಸರು, ತತ್ವಜ್ಞಾನಿಗಳು ವಿವಿಧ ಪ್ರಯೋಗಗಳನ್ನು ಮಾಡುವ ಮೂಲಕ ಹಲವಾರು ನಿದರ್ಶನಗಳ ಮುಖಾಂತರ ಸಾಧಿಸಿ ತೋರಿಸಿದ್ದಾರೆ. "ಮಾರ್ಷಲ್ ಪಾಸ್ಟ್" ಎಂಬಾತ "ಕಲೆಯ ಮೂಲಕವೇ ನಾವು ನಮ್ಮಿಂದ ಹೊರಗೆ ಬರಲು ಸಾಧ್ಯವಾಗುತ್ತದೆ. ಅಲ್ಲದೆ ವಿಶ್ವಾಸವನ್ನು ಹಾಗೂ ನಿಸರ್ಗದ ದೃಶ್ಯಗಳನ್ನು ಹಾಗೆ ಉಳಿಸಿಕೊಂಡು ಪ್ರಕೃತಿ ಬಗ್ಗೆ ಹೊಂದಿರುವ ವಿವಿಧ ಮನೋಧೋರಣೆಗಳನ್ನು ತಿಳಿಯಲು ಸಾಧ್ಯವಾಗಿದೆ. ಇಲ್ಲದಿದ್ದರೆ ಇವುಗಳೆಲ್ಲವನ್ನು ತಿಳಿಯುವುದು ಅಸಾಧ್ಯವಾಗುತ್ತಿತ್ತು. ಬದಲಾದ ಈ ದೃಷ್ಟಿಕೋನ ನೀಡಿದ್ದಕ್ಕಾಗಿ ನಿಜಕ್ಕೂ ಚಿತ್ರಕಲೆಗೆ ಧನ್ಯವಾದ ಹೇಳಲೇಬೇಕು" ಎಂದಿದ್ದಾರೆ.

"ಕಲಾ ಶಿಕ್ಷಣವು ಸಾಮಾನ್ಯ ಶಿಕ್ಷಣದ ಜೊತೆಗೆ ಸಂಬಂಧ ಕಲ್ಪಿಸಿ, ಸಮಗ್ರ ಶಿಕ್ಷಣ ಕ್ರಮದ ಒಂದು ಅವಿಭಾಜ್ಯ ಅಂಗವಾಗಿ ಭಾವಿಸುವುದು ಇಂದು ಆಗಬೇಕಾದ ಕಾರ್ಯವಾಗಿದೆ. ವಿದ್ಯಾರ್ಥಿಗಳನ್ನು ಹೊಸ ದಾರಿಗಳ ಕಡೆಗೆ ತೆಗೆದುಕೊಂಡು ಹೋಗುವುದು; ಈ ದೃಷ್ಟಿಯಿಂದ ಹೊಸ ದೃಶ್ಯಕಲಾ ಶಿಕ್ಷಣದಲ್ಲಿ ಸ್ಪಷ್ಟ ವಿನೂತನ ನಿಯಮಗಳನ್ನು ರೂಪಿಸುತ್ತದೆ."[೧೧]

ಚಿತ್ರಕಲಾ ಶಿಕ್ಷಣವು ವಿದ್ಯಾರ್ಥಿಗೆ ಗೊತ್ತಿಲ್ಲದಂತೆಯೇ ಬೆಳೆಯುವ ಹೊಸ ಹೊಸ ವಿಷಯಗಳು ಮನಸ್ಸನ್ನು ಎಚ್ಚರಗೊಳಿಸುತ್ತದೆ. ಮಾನವನ ಆಲೋಚನೆಗಳು, ವಿಚಾರಗಳು, ಅನುಭವಗಳನ್ನು ರೂಪಿಸುವಂತಹ ಶಕ್ತಿಯನ್ನು ಚಿತ್ರಕಲೆ ಹೊಂದಿದೆ ಹಾಗೂ ಒಬ್ಬ ವ್ಯಕ್ತಿಯ ಒಳ್ಳೆಯ ವಿಚಾರಗಳನ್ನು ಹೊರಹಾಕುವುದಕ್ಕೆ ಸಹಕರಿಸುತ್ತದೆ. ಫ್ರೆಂಚ್ ಸಮಾಜಶಾಸ್ತ್ರ ಹಾಗೂ ಸಾಂಸ್ಕೃತಿಕ ತತ್ವಜ್ಞಾನಿ ಎಡ್ಗರ್ ಮಾರಿನ್ "ಕಲೆಯು ಮನುಷ್ಯನ ಜೀವನದಲ್ಲಿ ಎದುರಾಗುವಂತಹ ಆತಂಕ, ದುಗುಡ - ದುಮ್ಮಾನ ಹಾಗೂ ಉದ್ವೇಗಗಳಿಂದ ಬಿಡುಗಡೆ ನೀಡುತ್ತದೆ. ಅಲ್ಲದೇ ದೈನಂದಿನ ಜೀವನದಲ್ಲಿ ಏಕಾಗ್ರತೆ ಮೂಡಿಸುತ್ತದೆ. ಒಂಟಿತನ ದೂರ ಮಾಡುತ್ತದೆ" ಎಂದು ಹೇಳಿರುವನು. ಈ ತಾತ್ವಿಕ ಹೇಳಿಕೆಯೇ ದೃಶ್ಯಕಲಾ ಬೆಳವಣಿಗೆಗೆ ಒಂದು ಬಗೆಯ ಸ್ಫೂರ್ತಿ ತಂದಿದೆ.

ಮಾನವನು ದಿನನಿತ್ಯದ ಬದುಕಿನಲ್ಲಿ ಕಂಡುಕೊಳ್ಳುವಂತಹ ಔಪಚಾರಿಕ, ಅನೌಪಚಾರಿಕ ಶಿಕ್ಷಣದಲ್ಲಿ ದೃಶ್ಯಕಲಾ ಮಾಧ್ಯಮವೂ ಒಂದಾಗಿದೆ. ನಮ್ಮಲ್ಲಿರುವಂತಹ ಸುಂದರವಾದ ವಾತಾವರಣ ಮತ್ತು ಮಾನವ ನಡುವಿನ ಸಂಬಂಧ ಬಿಡಿಸಲಾಗದಂಥದ್ದು. ಈ ಒಂದು ಸಂಬಂಧವನ್ನು ದೃಶ್ಯ ಮಾಧ್ಯಮದ ಮೂಲಕ ನೋಡಿದಾಗ ಮಾತ್ರ ಅದರ ಒಂದು ವ್ಯವಸ್ಥಿತವಾದಂತಹ ಸ್ವರೂಪವನ್ನು ಕಾಣಬಹುದು. ಈ ಶಿಕ್ಷಣ ಕ್ರಮದಿಂದ ಬರವಣಿಗೆ ಕ್ರಮವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬಹುದು. ಇದಕ್ಕೆ ಉದಾ:- ಪರಿಸರ ದೃಶ್ಯ, ನಕ್ಷೆಗಳು, ಭಾವಚಿತ್ರಗಳು ಮುಂತಾದವುಗಳ ಮೂಲಕ ಕಾಣಬಹುದು. ಈ ಮೂಲಕ ಶಿಕ್ಷಣದಲ್ಲಿರುವಂತಹ ಜಟಿಲವಾದ ಸಮಸ್ಯೆಗಳನ್ನು ಸರಳವಾಗಿ ಬಗೆಹರಿಸಿಕೊಳ್ಳಲು ಸಾಧ್ಯವಾಗಿದೆ. ಪ್ರಸ್ತುತ ಸಂದರ್ಭದಲ್ಲಿ ದೃಶ್ಯ ಮಾಧ್ಯಮಗಳ ಪ್ರಭಾವ ಅಧಿಕವಾಗಿ ಕಂಡರೂ ದೃಶ್ಯಕಲಾ ಶಿಕ್ಷಣ ಕ್ರಮದಲ್ಲಿ ವ್ಯಕ್ತಿಗತವಾಗಿರುವುದು ಹೆಚ್ಚಾಗಿ ಕಂಡುಬರುತ್ತದೆ. ಸ್ವಂತಿಕೆಯಿಂದ ಕಲಿತವರು ಅವರವರ ಕಲ್ಪನೆಗಳ ಆಧಾರದ ಮೇಲೆ ದೃಶ್ಯಕಲೆಯನ್ನು ಬಿಂಬಿಸುವ ಪ್ರಯತ್ನವಾಗಿದೆ. ಒಂದು ಕ್ರಮವಾಗಿ ಈ ಶಿಕ್ಷಣದ ವ್ಯವಸ್ಥೆ ಇಲ್ಲದಿದ್ದರೂ ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ದೃಶ್ಯಕಲಾ ಮಾಧ್ಯಮವು ತನ್ನದೇ ಆದಂತಹ ನಿಲುವಿನಲ್ಲಿ ಎಲ್ಲ ಕ್ಷೇತ್ರದವರು ಪ್ರಭಾವ ಬೀರುವುದನ್ನು ಸಂಶೋಧನೆಯಿಂದ ತಿಳಿದುಕೊಳ್ಳಬಹುದು.

"ಕಲಾ ಶಿಕ್ಷಣವು ಪ್ರಮುಖವಾಗಿ ಎರಡು ಆಶಯಗಳನ್ನೊಳಗೊಂಡು ಮುನ್ನುಗ್ಗುತ್ತಿರುವುದು ಹೆಚ್ಚಾಗಿ ಕಂಡು ಬರುತ್ತದೆ. ಒಂದು ಮಗುವಿಗೆ ಕಲೆಯ ಸ್ವಾರಸ್ಯವನ್ನು ತಿಳಿಸುವುದು, ಇನ್ನೊಂದು ಪ್ರತಿಭಾನ್ವಿತ ಕಲಾವಿದನಿಗೆ ಕಲೆಯ ಶಿಕ್ಷಣ ಹಾಗೂ ಆತನಿಗೆ ಉತ್ತಮ ಪರಿಸರವನ್ನು ಒದಗಿಸಿ ಪ್ರೋತ್ಸಾಹಿಸುವುದು."[೧೨] ಈ ಮೇಲಿನ ಅಂಶಗಳಿಂದ ಕಲೆಯು ಶಿಕ್ಷಣದಿಂದ, ಮಗುವಿನಿಂದ

ಕಲಾವಿದನವರೆಗೂ ಮಾದರಿ ಶಿಕ್ಷಣ ನೀಡುವ ಪ್ರಯತ್ನ ಸಾಧ್ಯವಾಗುತ್ತದೆ ಎಂಬುದನ್ನು ಸಂಶೋಧನಾತ್ಮಕವಾಗಿ ನಾವು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಪ್ರಸ್ತುತ ದೃಶ್ಯಕಲಾ ಶಿಕ್ಷಣದ ಸಮಸ್ಯೆಗಳನ್ನು ತಿಳಿದು ಸವಾಲಾಗಿ ತೆಗೆದುಕೊಂಡು ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳುವುದು ಪ್ರಸ್ತುತ ಅಧ್ಯಯನದ ನಿಲುವಾಗಿದೆ.

೧.೨. ಅಧ್ಯಯನದ ಉದ್ದೇಶ

ದೃಶ್ಯಕಲಾ ಶಿಕ್ಷಣದ ಮಹತ್ವ ಮತ್ತು ಅಗತ್ಯದ ಚರ್ಚೆಯು ಜಾಗತಿಕ ಮಟ್ಟದಲ್ಲಿ ಹೆಚ್ಚಿನ ಆದ್ಯತೆ ಪಡೆದಿದ್ದರೂ ಕರ್ನಾಟಕದ ಸಂದರ್ಭದಲ್ಲಿ ಅದರ ಪ್ರಮಾಣ ತೀರಾ ವಿರಳವೆಂದೇ ಹೇಳಬೇಕಾಗುತ್ತದೆ. ಇಂದು ವಿವಿಧ ಮಾಧ್ಯಮಗಳಲ್ಲಿ ಹೆಚ್ಚು ಗುರುತಿಸಿಕೊಂಡಿರುವುದು ದೃಶ್ಯಕಲೆಯಾಗಿದೆ. ಅಂತೆಯೇ ದೃಶ್ಯಕಲಾ ಶಿಕ್ಷಣ ಪದ್ಧತಿಯನ್ನು ಅದರ ಸಮಸ್ಯೆ ಮತ್ತು ಸವಾಲುಗಳನ್ನು ಕುರಿತು ವಿವಿಧ ಆಯಾಮಗಳಲ್ಲಿ/ನೆಲೆಗಳಲ್ಲಿ ಇಲ್ಲಿ ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

ದೃಶ್ಯಕಲಾ ಚರಿತ್ರೆಯು ಪ್ರಾಗೈತಿಹಾಸಿಕ ಕಾಲದಿಂದ ಆರಂಭಗೊಂಡು ಗುರುಪರಂಪರೆಯ ಮೂಲಕ ಬೆಳೆದು, ಆಧುನಿಕ ಅಕಾಡೆಮಿಕ್ ಶಿಕ್ಷಣದವರೆಗೂ ಬೆಳೆದು ಬಂದಿರುವುದನ್ನು ಕಾಣಬಹುದು. ಶಿಕ್ಷಣ ಮಾಧ್ಯಮವನ್ನು ಚಿತ್ರಕಲೆ, ಶಿಲ್ಪಕಲೆ ಮುಂತಾದವುಗಳ ಮೂಲಕ ಗುರುತಿಸಲಾಗಿದೆ. ಈ ಕಲೆ ಮತ್ತು ಕಲಾಶಿಕ್ಷಣ ವ್ಯವಸ್ಥೆ ಅದರ ಸಮಸ್ಯೆ ಮತ್ತು ಎದುರಿಸುತ್ತಿರುವ ಸವಾಲುಗಳೇನು? ಎಂಬುದರ ಕುರಿತು ದೃಶ್ಯಕಲಾ ಶಿಕ್ಷಣದ ಐತಿಹಾಸಿಕ ನೆಲೆಯಲ್ಲಿ ಚರಿತ್ರೆಯನ್ನು ಕಟ್ಟಿಕೊಡುವುದಕ್ಕೆ ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

ಕರ್ನಾಟಕದಲ್ಲಿ ದೃಶ್ಯಕಲಾ ಶಿಕ್ಷಣವನ್ನು ಕಲಿಯುವ ವಿದ್ಯಾರ್ಥಿಗಳನ್ನು ಕಲಾವಿದರನ್ನಾಗಿಯೋ? ಕಲಾಶಿಕ್ಷಕರನ್ನಾಗಿಯೋ, ಕಲಾ ಉಪನ್ಯಾಸಕರಾಗಿಯೋ ಕಲಾ ಅಥವಾ ವಿಜ್ಞಾನಿಯನ್ನಾಗಿಯೋ ಬೆಳೆಸುವ ನಿಟ್ಟಿನಲ್ಲಿ ಸರಿಯಾದ ಶಿಕ್ಷಣ ಸಂಸ್ಥೆಗಳು, ಏಕರೂಪ ಪಠ್ಯಕ್ರಮ, ಮೌಲ್ಯಯುತವಾದ ನಿಯಮಗಳು ಪ್ರೌಢರಾದ ಶಿಕ್ಷಕರು, ಒಳ್ಳೆಯ ಕಲಾ ವಾತಾವರಣ ಇತ್ಯಾದಿಗಳು ಇಲ್ಲದಿರುವುದರಿಂದ ಇಂತಹ ಸಮಸ್ಯೆಗಳನ್ನು ಕುಂದುಕೊರತೆ ಅಥವಾ ವ್ಯವಸ್ಥಿತವಾಗಿ ಸ್ಥೂಲ ಹಾಗೂ ಸೂಕ್ಷ್ಮವಾದ ಅಧ್ಯಯನಕ್ಕೆ ಒಳಪಡಿಸುವ ಉದ್ದೇಶ ಹೊಂದಲಾಗಿದೆ.

ಕರ್ನಾಟಕದಲ್ಲಿ ದೃಶ್ಯಕಲಾ ಶಿಕ್ಷಣವು ಅನ್ಯಜ್ಞಾನ ಶಿಸ್ತುಗಳಷ್ಟೇ ಪ್ರಾಮುಖ್ಯತೆಯನ್ನು ಪಡೆದುಕೊಂಡಿಲ್ಲದಿರುವುದು ಹೆಚ್ಚಾಗಿ ಕಂಡುಬರುತ್ತದೆ. ಈ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಇದುವರೆಗೂ ನಡೆದಿರುವ ಅಧ್ಯಯನಗಳು ಅಷ್ಟಾಗಿ ಬೆಳಕು ಚೆಲ್ಲಲು ಪ್ರಯತ್ನಿಸದಿರುವುದು ಸಂಶೋಧನೆಯಿಂದ ಕಂಡುಬರುತ್ತದೆ. ಈ ಶಿಕ್ಷಣ ಕ್ರಮವು ಪ್ರಾಚೀನ ಕಾಲದಿಂದಲೂ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದಿದ್ದರೂ ವರ್ತಮಾನ ಸಂದರ್ಭದಲ್ಲಿ ಇದರ ಪ್ರಭಾವ ಸಣ್ಣ ಪ್ರಮಾಣದಲ್ಲಿ ಕಾಣಿಸಿಕೊಂಡಿದೆ. ಪ್ರತಿಯೊಂದು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾಗಿ ಮನಮುಟ್ಟುವಂತೆ ಪ್ರಭಾವ ಬೀರುವ ಪ್ರಮುಖ ಮಾಧ್ಯಮವಾಗಿದೆ.

ಇಂತಹ ಸಂಗತಿಗಳನ್ನು ಸಹ ಅರ್ಥ ಮಾಡಿಕೊಳ್ಳಲು ಸಹಕಾರಿಯಾಗಿದೆ. ದೃಶ್ಯಕಲಾ ಶಿಕ್ಷಣವು ಇತ್ತೀಚೆಗೆ ಜಾಗತಿಕ ಮನ್ನಣೆ ಪಡೆದಿರುವುದರಿಂದ ಇಂದು ಹಲವು ಸಂಗತಿಗಳು ಸಮಾಜದಲ್ಲಿ ದೃಶ್ಯ ಮಾಧ್ಯಮದ ಮೂಲಕ ಬೆಳಕಿಗೆ ಬರುತ್ತವೆ. ದೃಶ್ಯಕಲಾ ಶಿಕ್ಷಣವು ಇತಿಹಾಸದ ಹಲವಾರು ಅಂಶಗಳನ್ನು ತನ್ಮೂಲಕ ಬೆಳಕಿಗೆ ತಂದಿದೆ, ತರುತ್ತಿದೆ. ಈ ಶಿಕ್ಷಣ ಕ್ರಮವು ಪ್ರಸ್ತುತ ಸಂದರ್ಭದಲ್ಲಿ ಸಾರ್ವತ್ರೀಕರಣಗೊಂಡರೂ ಪ್ರಧಾನ ಭೂಮಿಕೆಯಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಯಾಕೆ? ಈ ಶಿಕ್ಷಣವು ಪ್ರಭಾವಿತವಾಗಿ ಗುರುತಿಸಿಕೊಳ್ಳಲಿಲ್ಲ. ಅದಕ್ಕೆ ಕಾರಣವಾದ ಅಂಶಗಳೇನು? ಶಿಕ್ಷಣ ಪಡೆಯುವುದರಿಂದ ಪ್ರಯೋಜನಗಳೇನು? ಪ್ರಸ್ತುತ ದೃಶ್ಯಕಲಾ ಸಮುದಾಯ ಇದರ ಬಗ್ಗೆ ಆಗುವ ಎಚ್ಚರಿಕೆ ವಹಿಸುತ್ತಿದೆಯೇ? ಈ ಶಿಕ್ಷಣ ಪಡೆಯುವುದರಿಂದ ಆಗುವ ಪರಿಣಾಮಗಳೇನು? ಎಂಬಿತ್ಯಾದಿ ಉದ್ದೇಶಗಳನ್ನಿಟ್ಟುಕೊಂಡು ಪ್ರಸ್ತುತ ಅಧ್ಯಯನ ಕೈಗೊಳ್ಳಲಾಗಿದೆ.

೧.೩. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನದ ವಿಷಯವನ್ನು ಆರು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡಿದ್ದು ಪ್ರತಿಯೊಂದು ಅಧ್ಯಾಯವನ್ನು ಕುರಿತು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ವಿವರಣೆ ನೀಡಲಾಗಿದೆ.

ಒಂದನೆಯ ಅಧ್ಯಾಯದಲ್ಲಿ ಪ್ರಸ್ತಾವನೆ, ಅಧ್ಯಯನದ ಉದ್ದೇಶಗಳು, ಅಧ್ಯಯನದ ವಿಷಯದ ಸ್ವರೂಪ, ಅಧ್ಯಯನದ ವ್ಯಾಪ್ತಿ, ದೃಶ್ಯಕಲಾ ಕ್ಷೇತ್ರದಲ್ಲಿ ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ ಮಾಡುವುದರೊಂದಿಗೆ ಹಾಗೂ ಸಂಶೋಧನೆಗೆ ಬಳಸಿರುವ ವೈಧಾನಿಕತೆಯ ಕುರಿತು ವಿವರಣೆ ನೀಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಆದಿಮಾನವನು ತನ್ನ ಪ್ರಾಕೃತಿಕ ಸಂಪರ್ಕದೊಂದಿಗೆ ಹೊಂದಿರುವ ಸಂಬಂಧ, ಚಿತ್ರಗಳ ಮೂಲಕ ತಿಳಿದುಕೊಂಡ ಜ್ಞಾನ, ಕಂಡುಕೊಂಡ ಸತ್ಯ; ದೃಶ್ಯಕಲಾ ಶಿಕ್ಷಣದ ವ್ಯವಸ್ಥಿತ ಇತಿಹಾಸ. ಸಿಂಧೂ ಕಣಿವೆಯ ಕಲೆ, ಹಾಗೆಯೇ ಹಂತ ಹಂತವಾಗಿ ಮುಂದುವರೆಸಿಕೊಂಡು ಬಂದಿರುವುದನ್ನು ತನಗೆ ತಾನೇ ಅಥವಾ ಇತರರಿಂದ ಅನುಕರಣಾತ್ಮಕವಾಗಿ ಕಲಿತುಕೊಂಡ ದೃಶ್ಯಕಲಾ ಶಿಕ್ಷಣದ ಇತಿಹಾಸದ ನೆಲೆ, ನಂತರ ಗುರುಕುಲ ಮತ್ತು ರಾಜಪ್ರಭುತ್ವ ವ್ಯವಸ್ಥೆಯಲ್ಲಿ ಹಂತ ಹಂತವಾಗಿ ಕಂಡ ಬೆಳವಣಿಗೆ, ಶಾಸನಗಳು ಮತ್ತು ಹಸ್ತಪ್ರತಿಗಳಲ್ಲಿ ಹಂತ ಹಂತವಾಗಿ ಬೆಳೆದು ತನ್ನದೇ ಆದ ಇತಿಹಾಸವನ್ನು ಹೊಂದಿರುವ ಈ ಕಲಾ ಶಿಕ್ಷಣ ವ್ಯವಸ್ಥೆಯ ಚಾರಿತ್ರಿಕ ಉಲ್ಲೇಖಗಳ ಅಧ್ಯಯನ ಇತ್ಯಾದಿ ವಿಷಯಗಳ ಕುರಿತು ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿನ ಶೈಕ್ಷಣಿಕ ವ್ಯವಸ್ಥೆ, ಕಲಾಶಿಕ್ಷಣದ ಸೌಲಭ್ಯಗಳು, ಚಿತ್ರಕಲಾ ಶಾಲೆಗಳು, ಪದವಿ ಹಂತದಲ್ಲಿ ಚಿತ್ರಕಲೆಯನ್ನು ಒಂದು ಐಚ್ಛಿಕ ವಿಷಯವಾಗಿ ಕಲಿಸುತ್ತಿರುವ ವಿದ್ಯಾಲಯಗಳು, ಅಂಚೆ ಮೂಲಕ ನೀಡುತ್ತಾ ಬಂದಿರುವ ವ್ಯವಸ್ಥೆ, ಚಿತ್ರಕಲಾ ಶಿಕ್ಷಣವನ್ನು ದೂರಶಿಕ್ಷಣದ ಮೂಲಕ ಚಿತ್ರಕಲಾ ಪದವಿ ನೀಡುತ್ತಿದ್ದ ಕಲಾ ವಿದ್ಯಾಲಯಗಳು, ಕಲಾಶಾಲೆಯ ಬೆಳವಣಿಗೆ ಚಟುವಟಿಕೆಗಳು ಹಂತ

ಹಂತವಾಗಿ ಬದಲಾವಣೆಯನ್ನು ಕಂಡು ಕೋರ್ಸ್‌ಗಳ ವಿವರ ಮೊದಲಾದ ವಿಷಯಗಳನ್ನು ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಕರ್ನಾಟಕ ದೃಶ್ಯಕಲಾ ಶಿಕ್ಷಣದ ಸಮಸ್ಯೆಗಳು ಯಾವ ರೀತಿಯಾಗಿವೆ ಎಂಬುದರ ಕುರಿತು ಕೂಲಂಕಷವಾಗಿ ಅಧ್ಯಯನ ಮಾಡಲಾಗಿದೆ. ಬಹಳ ಮುಖ್ಯವಾಗಿ ಇಲ್ಲಿರುವ ದೃಶ್ಯಕಲಾ ಶಿಕ್ಷಣವನ್ನು ಪ್ರಾಥಮಿಕ ಮತ್ತು ಪ್ರೌಢಶಾಲಾ ಚಿತ್ರಕಲಾ ಶಿಕ್ಷಣ ಮತ್ತು ವಿದ್ಯಾರ್ಥಿಗಳ ಸಮಸ್ಯೆಗಳು ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಶಿಕ್ಷಣದಲ್ಲಿನ ಸಮಸ್ಯೆಗಳು, ವಿದ್ಯಾರ್ಥಿಗಳ ಸಮಸ್ಯೆಗಳು ಅಲ್ಲದೆ ಎಂ.ಫಿಲ್. ಮತ್ತು ಪಿಎಚ್.ಡಿ. ಪದವಿಗಳನ್ನು ಪಡೆದ ವಿದ್ಯಾರ್ಥಿಗಳ ಸಮಸ್ಯೆಗಳು ಎಂಬುದಾಗಿ ವಿಭಾಗಿಸಿಕೊಂಡು ಎಲ್ಲಾ ಬಗೆಯ ಸಮಸ್ಯೆಗಳ ಬಗ್ಗೆ ಸಾಕಷ್ಟು ವ್ಯಾಪಕವಾಗಿ ಕ್ಷೇತ್ರಕಾರ್ಯ ಕೈಗೊಂಡ ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯ ಕರ್ನಾಟಕ ದೃಶ್ಯಕಲಾ ಶಿಕ್ಷಣದ ಸವಾಲುಗಳಿಗೆ ಸಂಬಂಧಿಸಿದಂತೆ ಇದ್ದು, ಇಲ್ಲಿ ಮುಖ್ಯವಾಗಿ ಪಠ್ಯಕ್ರಮ, ದೃಶ್ಯಕಲಾ ಶಿಕ್ಷಣದ ಸಮಸ್ಯೆ, ವಿವಿಧ ಪಠ್ಯವಿಷಯಗಳ ಬೋಧನೆ, ಮುಖ್ಯವಾಗಿ ನಿರ್ವಹಣೆ - ಇಂತಹ ಹಲವಾರು ವಿಷಯಗಳನ್ನು ಚರ್ಚಿಸಲಾಗಿದೆ. ಕೇವಲ ಸಮಸ್ಯೆಗಳ ಚರ್ಚೆಯಿಂದ ಪ್ರಯೋಜನವಾಗುವುದಿಲ್ಲವೆಂಬುದು ನಿಜ ಸಂಗತಿಯಾದರೂ ಸಮಸ್ಯೆಗಳ ಹುಡುಕುವಿಕೆ ನಂತರ ಆ ಸಮಸ್ಯೆಗಳಿಗೆ ಕಾರಣಗಳೇನು? ಎಂಬುದನ್ನು ತಿಳಿದ ಬಳಿಕ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಸಾಧ್ಯವೆಂಬುದನ್ನು ಪ್ರತಿಪಾದಿಸುತ್ತ ಎಲ್ಲಾ ಸೂಕ್ಷ್ಮಜ್ಞರ ಗಮನವನ್ನು ಈ ಕ್ಷೇತ್ರದ ಕಡೆಗೆ ಸೆಳೆಯುವ ಪ್ರಯತ್ನ ಮಾಡಲಾಗಿದೆ.

ಆರನೆಯ ಅಧ್ಯಾಯವು ಸಮಾರೋಪವಾಗಿದ್ದು ಒಟ್ಟಾರೆ ಮೇಲಿನ ಎಲ್ಲ ಅಧ್ಯಾಯಗಳಲ್ಲಿ ಅಡಗಿರುವ ಸೂಕ್ಷ್ಮ ಮತ್ತು ಕೆನೆಪದರಿನಂತಹ ಸಮಸ್ಯೆ, ಸವಾಲುಗಳನ್ನು ಹೆಕ್ಕಿ ತೆಗೆದು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಇದರಿಂದ ಆರಂಭದಲ್ಲಿ ಪ್ರಸ್ತುತ ವಿಷಯವನ್ನು ಕೈಗೆತ್ತಿಕೊಂಡು ಶೋಧನೆಗೆ ತೊಡಗಿದ್ದಾಗಿನ ಆತಂಕ ಅನುಮಾನಗಳೇನಿದ್ದವು? ಅವುಗಳ ಮೇಲೆ ಆನಂತರ ಯಾವ ರೀತಿ ಸಮಸ್ಯೆ ಮತ್ತು ಸವಾಲುಗಳ ಮೇಲೆ ಬೆಳಕು ಚೆಲ್ಲಲಾಗಿದೆ ಎಂಬಿತ್ಯಾದಿ ಸಂಗತಿಗಳ ಒಂದು ಸಿಂಹಾವಲೋಕನ ಈ ಅಧ್ಯಯನದಲ್ಲಿ ಮಾಡಲಾಗಿದೆ.

೧.೪. ಅಧ್ಯಯನದ ವ್ಯಾಪ್ತಿ

ಯಾವುದೇ ಅಧ್ಯಯನಕ್ಕೆ ಒಂದು ಖಚಿತ ನಿರ್ದಿಷ್ಟವಾದ ವ್ಯಾಪ್ತಿ ಇರಲೇಬೇಕು. ಅಂತೆಯೇ ಪ್ರಸ್ತುತ ಮಹಾಪ್ರಬಂಧಕ್ಕೆ ಇದರದೇ ಆದ ವ್ಯಾಪ್ತಿಯನ್ನು ಕಲ್ಪಿಸಿಕೊಳ್ಳಲಾಗಿದೆ ಮತ್ತು ಆ ಚೌಕಟ್ಟಿನಲ್ಲಿಯೇ ಅಧ್ಯಯನವನ್ನು ಮಾಡಿ ಮಹಾಪ್ರಬಂಧವನ್ನು ರಚಿಸಲಾಗಿದೆ. ಮುಖ್ಯವಾಗಿ ಕರ್ನಾಟಕದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ (೧೮೩೩) ಉಚಿತ ಶಾಲೆ ಮೈಸೂರಿನಲ್ಲಿ ಪ್ರಾರಂಭವಾಯಿತು. ನಂತರದ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಚಿತ್ರಕಲೆಯನ್ನು ಕುರಿತು ಶಿಕ್ಷಣ ಆಯೋಗಗಳಲ್ಲಿ ಪ್ರಸ್ತಾಪವಾದವು. ಮುಖ್ಯವಾಗಿ ಆರಂಭವಾದ ಚಿತ್ರಕಲಾ ಶಿಕ್ಷಣ

ಅಂದಿನಿಂದ ಪ್ರಸ್ತುತ ಸಂದರ್ಭದವರೆಗೂ ಸಾಗಿ ಬಂದಿದೆ. ಆದರೆ ಚಿತ್ರಕಲಾ ಶಿಕ್ಷಣದ ಸಮಸ್ಯೆ ಮತ್ತು ಸವಾಲುಗಳು ಬೆಳೆಯುತ್ತಲೇ ಬಂದಿವೆ. ಈ ಕುರಿತು ಸಂಶೋಧನಾ ಮಹಾಪ್ರಬಂಧದಲ್ಲಿ ಅಧ್ಯಯನ ಮಾಡಲಾಗಿದೆ. ಅಧ್ಯಯನದ ಜೊತೆಗೆ ಅವಶ್ಯವೆನಿಸಿರುವ ಮಾಹಿತಿಯನ್ನು ಕೂಡ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಕರ್ನಾಟಕ ಭೌಗೋಳಿಕ ವ್ಯಾಪ್ತಿಯಲ್ಲಿರುವ ವಿವಿಧ ಕಲಾಶಾಲೆ ವಿದ್ಯಾಲಯಗಳು, ಅಲ್ಲಿನ ಪಠ್ಯಕ್ರಮ ಕೋರ್ಸ್‌ಗಳು ಅಲ್ಲದೆ ಆಡಳಿತ ವರ್ಗ, ಶಿಕ್ಷಕರು, ವಿದ್ಯಾರ್ಥಿಗಳು ಅನುದಾನದ ಸಮಸ್ಯೆ ಮೊದಲಾದ ಸಂಗತಿಗಳನ್ನು ಕೂಲಂಕಷವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೫. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೧೯೮೫-೮೬ರ "ಕರ್ನಾಟಕ ರಾಜ್ಯ ಗ್ಯಾಸೆಟಿಯರ್" ದಶವಾರ್ಷಿಕ ಪುರವಣಿಯಲ್ಲಿ "ಕಲಾಶಿಕ್ಷಣ"ದ ಬಗ್ಗೆ ಎಂ.ಎಸ್. ಮೂರ್ತಿಯವರು ಬರೆದಿದ್ದು ಕರ್ನಾಟಕದ ಕಲಾಶಿಕ್ಷಣದ ಬಗ್ಗೆ ವಿಶ್ಲೇಷಿಸಿದ್ದಾರೆ. ಎಸ್.ಎಸ್.ಎಲ್.ಸಿ.ಯ ನಂತರದಲ್ಲಿ ಪ್ರವೇಶಕ್ಕೆ ಅವಕಾಶ ಎರಡರಿಂದ ಐದು ವರ್ಷ ಅವಧಿಯದಾಗಿರುತ್ತಿತ್ತು. ಇಲ್ಲಿ ವೃತ್ತಿಪರ ಶಿಕ್ಷಣದಲ್ಲಿ ಎರಡು ವರ್ಷ, ತಾಂತ್ರಿಕ ಶಿಕ್ಷಣ ವಲಯದಲ್ಲಿ ಐದು ವರ್ಷದ ಡಿಪ್ಲೋಮಾ ಹೀಗೆ ಹಂತ ಹಂತವಾಗಿ ಕೋರ್ಸ್‌ಗಳ ಬದಲಾವಣೆ ಮತ್ತು ಬೆಳವಣಿಗೆಯ ಬಗ್ಗೆ ವಿವರವಾಗಿ ಹೇಳಿದ್ದಾರೆ.

೧೯೮೯ರಲ್ಲಿ "ಕಲೆ ಮತ್ತು ರಸಾಸ್ವಾದನೆ" ಎಂಬ ಪುಸ್ತಕವನ್ನು ಪ್ರೊ. ಎಂ.ಎಚ್. ಕೃಷ್ಣಯ್ಯ ಸಂಪಾದಿಸಿದ್ದು, "ಶಿಕ್ಷಣ ಕಲೆ" ಎಂಬ ಲೇಖನವನ್ನು ಡಾ. ಡಿ.ಎಂ. ನಂಜುಂಡಪ್ಪನವರು ಬರೆದಿದ್ದಾರೆ. ಇದರಲ್ಲಿ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಕಂಡುಬರುವಂತಹ ಕುಂದುಕೊರತೆಗಳ ಬಗ್ಗೆ ವಿವರಿಸಿದ್ದಾರೆ. ಇದಕ್ಕೆ ಕಾರಣವೇನು?, ಅದನ್ನು ನಿವಾರಣೆ ಹೇಗೆ ಮಾಡುವುದೆಂಬ ಹಲವಾರು ಪ್ರಶ್ನೆಗಳು ಏಳುವುದು ಸಹಜ. ಹೀಗೆ ಕಲಾ ಶಿಕ್ಷಣದ ಬಗ್ಗೆ ವಿವಿಧ ಆಯಾಮದಲ್ಲಿ ವಿವರಿಸಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

೧೯೯೬ರಲ್ಲಿ ಆ.ಲ. ನರಸಿಂಹನ್ ಮತ್ತು ಎನ್. ಮರಿಶಾಮಾಚಾರ್ ಕೂಡಿ "ಚಿತ್ರಕಲಾ ಪ್ರಪಂಚ" ಎಂಬ ಸಂಪಾದಿಸಿದ ಕೃತಿಯಲ್ಲಿ "ಶಿಕ್ಷಣ ಮತ್ತು ಚಿತ್ರಕಲೆ" ಎಂಬ ಲೇಖನವನ್ನು ಆರ್.ಎಂ. ಹಡಪದ ಅವರು ಬರೆದಿದ್ದಾರೆ. ನಮ್ಮ ಜನರಲ್ಲಿ ಮತ್ತು ಸಮಾಜದಲ್ಲಿ ಹಾಗೂ ಅಧಿಕಾರಿಗಳಲ್ಲೂ ಸಹ ಕಲಾ ಶಿಕ್ಷಣ ಎಂದರೆ ತುಂಬ ಸಂಕುಚಿತವಾದ ಕಲ್ಪನೆ ಇದೆ. ಓದುವುದು, ಬರೆಯುವುದನ್ನು ಕಲಿಸುವುದೇ ಶಿಕ್ಷಣ: ಪ್ರಪಂಚದ ಜ್ಞಾನವನ್ನು ತಿಳಿಯುವುದು ವಿದ್ಯಾಭ್ಯಾಸದ ಗುರಿ ಎಂಬ ಭಾವನೆ ಇದೆ. ಆದರೆ ಅದಷ್ಟೇ ಶಿಕ್ಷಣ ಅಲ್ಲ, ನಿಜವಾದ ಶಿಕ್ಷಣದ ಅರ್ಥವೇ ಬೇರೆ. ಹಾಗೇ ಅದರ ಗುರಿಯೂ ಬೇರೆಯಾಗಬೇಕಾಗಿದೆ. ಮನುಷ್ಯನಲ್ಲಿ ಕೆಲವು ಅಂತಃಶಕ್ತಿಗಳಿರುತ್ತವೆ. ದೈವದತ್ತ, ಅವು ಹುಟ್ಟಿನಿಂದ ಸುಪ್ತವಾಗಿರುತ್ತವೆ. ಅವುಗಳನ್ನು ಹೊರತರಲು ಅವಕಾಶ ಬೇಕು. ಚಿಗುರಿ ಬೆಳೆದು ತನ್ನದೇ ರೀತಿಯಲ್ಲಿ ವ್ಯಕ್ತವಾಗಬೇಕು. ಚಿತ್ರಕಲಾ ಶಿಕ್ಷಣದಲ್ಲಿ

ಮನುಷ್ಯನ ಈ ಎಲ್ಲ ಬಗೆಯ ಸುಪ್ತಶಕ್ತಿಗಳು ವಿಕಾಸ ಹೊಂದಿ ಅಭಿವ್ಯಕ್ತಿ ಪಡೆಯಲು ಒಂದು ರಂಗವಾಗಬೇಕು. ಅದೇ ಪೂರ್ಣವಾದ ಶಿಕ್ಷಣ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆ.ಲ. ನರಸಿಂಹನ್ ಅವರ "ಚಿತ್ರಕಲಾ ಶಿಕ್ಷಣ" ಎಂಬ ಲೇಖನದಲ್ಲಿ ಉಳಿದ ಅಕಾಡೆಮಿಕ್ ಶಿಕ್ಷಣದಂತೆಯೇ ಚಿತ್ರಕಲಾ ಶಿಕ್ಷಣದ ಬಗ್ಗೆಯೂ ನಮ್ಮ ಸಮಾಜಕ್ಕೆ ಸಮಾಧಾನವಿಲ್ಲ. ಶಿಕ್ಷಕ, ವಿದ್ಯಾರ್ಥಿ ಹಾಗೂ ಸಮಾಜಶಾಸ್ತ್ರಜ್ಞರು ಈ ಮೂವರಿಗೂ ಶಿಕ್ಷಣವನ್ನು ಕೊಡುತ್ತಿರುವ ಕ್ರಮದಲ್ಲಿ, ಪಠ್ಯವಸ್ತುಗಳಲ್ಲಿ ಅಸಮಾಧಾನವಿದೆ. ಮೂಲಶಿಕ್ಷಣ ಸಾಮಾನ್ಯವಾಗಿ ನರ್ಸರಿಯನ್ನು ಬಿಟ್ಟು ಏಳು ವರ್ಷಗಳವರೆಗಿನದಾಗಿರುತ್ತದೆ. ಈ ಏಳು ವರ್ಷಗಳು ಚಿತ್ರಕಲೆ ಕೈಕಸುಬಾಗಿ ಅಥವಾ ಕೈಕಸುಬಿನ ಅಂಗವಾಗಿ ಬರುತ್ತದೆ. ಪಠ್ಯಕ್ರಮದಲ್ಲಿ ಸುಮಾರು ಇಪ್ಪತ್ತು ಕೈಕಸುಬುಗಳು ಇದ್ದು, ಚಿತ್ರಕಲೆ ಅದರೊಳಗಿನ ಒಂದು ಭಾಗವಾಗಿದೆ. ಶಾಲೆಗಳಲ್ಲಿ ಬೇರೆ ಬೇರೆ ವರ್ಗದವರಿಗೆ, ಬೇರೆ ಬೇರೆ ಕಸಬುಗಳನ್ನು ಇರಿಸಬಹುದು. ಅಲ್ಲದೆ ಬರಿಯ ಚಿತ್ರಕಲೆಯನ್ನೇ ತಮ್ಮ ಪಠ್ಯಕ್ರಮದಲ್ಲಿ ಹಾಕಿಕೊಂಡಿರುವ ಶಾಲೆಗಳು ಇಡೀ ಚಿತ್ರಕಲೆಯ ವಿಷಯವನ್ನು ತಮ್ಮದೇ ಆದ ರೀತಿಯಲ್ಲಿ ವಿಭಾಗಿಸಿಕೊಂಡು ಬೋಧಿಸುತ್ತದೆ. ಆದರೆ ಯಾವುದೇ ಕರಕುಶಲ ಕಲೆ, ಚಿತ್ರಕಲೆ ಮತ್ತು ಆವೆ ಮಣ್ಣಿನ ಶಿಲ್ಪಕಲೆಯಾಗಲಿ ಪರೀಕ್ಷೆಗೆ ಒಂದು ವಿಷಯವಲ್ಲದ ಕಾರಣ ವಿದ್ಯಾರ್ಥಿಗಳಿಗಾಗಲಿ, ಆಡಳಿತಾಧಿಕಾರಿಗಳಾಗಲಿ ಹೆಚ್ಚಿನ ಮುತುವರ್ಜಿಯಿಲ್ಲವೆಂಬ ಆರೋಪವನ್ನು ಅಲ್ಲಗಳೆಯಲು ಸಾಧ್ಯವಿಲ್ಲ ಎಂಬುದಾಗಿ ಇಲ್ಲಿ ಲೇಖಕರು ವಿಷಯ ಮಂಡಿಸಿದ್ದಾರೆ.

"ಶಿಕ್ಷಣದಲ್ಲಿ ಕಲೆ" ಎಂಬ ಈ ಲೇಖನದಲ್ಲಿ ಎಸ್. ಧನಲಕ್ಷ್ಮೀ ಅವರು ನಿಜವಾದ ಶಿಕ್ಷಣದ ಗುರಿಯನ್ನಾಗಲಿ, ಉದ್ದೇಶವನ್ನಾಗಲೀ ಇಂದಿನ ಸಮಾಜದಲ್ಲಿ ಶಿಕ್ಷಕರು ಹಾಗೂ ಪಾಲಕರು ಪಾಲಿಸದಿರುವುದು ನಮ್ಮ ಮಕ್ಕಳ ದುರಾದೃಷ್ಟವೇ ಸರಿ ಎಂದು ವಿಶ್ಲೇಷಿಸಿದ್ದಾರೆ. ಯಾರು ಮಕ್ಕಳಲ್ಲಿ ಕ್ರಿಯಾತ್ಮಕ ಶಕ್ತಿಯನ್ನು ಬೆಳೆಸಬೇಕೋ ಅವರೇ ಅದರ ಬಗ್ಗೆ ಅಸಡ್ಡೆಯಾಗಿ ಕೇವಲ ಅಂಕಗಳು, ಫಲಿತಾಂಶ ಒಂದೇ ಗುರಿಯನ್ನಾಗಿಟ್ಟುಕೊಂಡು ಕಲಿಸಿದರೆ ಸಮಾಜದಲ್ಲಿ ಎಂತಹ ವಿದ್ಯಾವಂತರನ್ನು ಸೃಷ್ಟಿಸಲು ಸಾಧ್ಯ? ಪ್ಲೇಟೋ ಎಂಬ ಮಹಾಶಯನು ಒತ್ತಿ ಹೇಳಿದಂತೆ "The Art Should be the basic of Education" ಕಲಾ ಮಾಧ್ಯಮದಿಂದಲೇ ಶಿಕ್ಷಣ ಆಗಬೇಕು ಎಂದು ಪ್ರತಿಪಾದಿಸಿದ್ದಾರೆ.

ಎಂ.ಎಸ್. ನಂಜುಂಡರಾವ್ ಅವರು "ಕರ್ನಾಟಕದಲ್ಲಿ ಕಲಾ ವಿದ್ಯಾಭ್ಯಾಸ" ಎಂಬ ಲೇಖನದಲ್ಲಿ ಕರ್ನಾಟಕ ರಾಜ್ಯದ ಕಲಾ ಶಿಕ್ಷಣವನ್ನು ಬೇರೆ ಬೇರೆ ಹಂತಗಳಲ್ಲಿ ಗುರುತಿಸಿದ್ದಾರೆ. ಹಿಂದಿನ ಸಾಂಪ್ರದಾಯಿಕ ಕಲಾಶಿಕ್ಷಣ, ವಂಶ ಪಾರಂಪರ್ಯವಾಗಿ ಮುಂದುವರೆಯುತ್ತಿದ್ದ ಪದ್ಧತಿ, ಬ್ರಿಟೀಷರ ಆಗಮನದಿಂದ ಬದಲಾದ ಪರಿಸ್ಥಿತಿಯಲ್ಲಿ ನಮ್ಮ ದೇಶದ ರಾಜಮನೆತನದ ಹಾಗೂ ಆಗಿನ ಸಮಾಜದ ಪ್ರತಿಷ್ಠಿತ ವ್ಯಕ್ತಿಗಳ ಒತ್ತಾಸೆ ದೊರಕಿದ್ದರಿಂದ ಒಂದು ರೀತಿಯ ಪಾಶ್ಚಾತ್ಯ ಪ್ರಭಾವದಿಂದ ಕಲೆಯ ಶಿಕ್ಷಣ ಬೆಳೆಯಲು ನೆರವಾಗಿರುವುದು ಇತ್ಯಾದಿ ಸಂಗತಿಗಳನ್ನು ಹಾಗೂ ಇಲ್ಲಿನ ಕಲಾಶಾಲೆಗಳನ್ನು ವಿವರಿಸಿದ್ದಾರೆ.

ವಿ.ಜಿ. ಅಂದಾನಿಯವರು "ಮಕ್ಕಳಿಗೆ ಕಲಾ ಶಿಕ್ಷಣದ ಆಗತ್ಯ" ಎಂಬ ಲೇಖನದಲ್ಲಿ ಬೆಳೆಯುವ ಮಕ್ಕಳ ಬೌದ್ಧಿಕ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸಲು ಅವರಿಗೆ ಸರಿಯಾದ ಪರಿಸರ ಹಾಗೂ ಸೂಕ್ತವಾದ ಕಲಿಕೆಯ ಅನುಭವಗಳು ಅವಶ್ಯಕ ಎಂದು ಹೇಳಿದ್ದಾರೆ. ಬೆಳೆಯುವ ಸಿರಿ ಮೊಳಕೆಯಲ್ಲಿಯೇ ಎಂಬ ಗಾದೆಯಂತೆ ಬೆಳೆಯುತ್ತಿರುವ ಮಗುವನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ ಎಂಬುದನ್ನು ಒತ್ತಿ ಹೇಳಿದ್ದಾರೆ.

ಚಿತ್ರಕಲೆಯೊಂದಿಗೆ ಸಂಗೀತ ಮತ್ತು ನೃತ್ಯಕಲೆಗಳ ಬಗ್ಗೆಯೂ ಹೆಚ್ಚು ಆಸಕ್ತಿ ವಹಿಸುವಂತೆ, ಪ್ರೋತ್ಸಾಹವನ್ನು ವಿದ್ಯಾರ್ಥಿಗಳಿಗೆ ನೀಡಬೇಕಾಗುತ್ತದೆ. ಮಗುವಿಗೆ ಪ್ರಪಂಚದ ಪ್ರತಿ ವಸ್ತುಗಳನ್ನು ನೋಡಿ, ವಿಷಯ ಗ್ರಹಿಸಿ, ವಸ್ತು ಜ್ಞಾನ ಪಡೆಯುವುದು ಅಗತ್ಯವಾಗಿದೆ. ಮಕ್ಕಳಿಗೆ ಬಾಲ್ಯದಲ್ಲಿ ಅನುಕರಣ ಹಾಗೂ ಕ್ರಿಯಾಶಕ್ತಿಯ ಪೂರ್ಣ ಉಪಯೋಗ ಮಾಡಿಕೊಂಡು ಚಿತ್ರ ಬರೆಯಲು ಸಹಾಯವಾಗುತ್ತದೆ. ಚಿಕ್ಕಮಕ್ಕಳಿಗೆ ಕಲಾಶಿಕ್ಷಣ ದೊಡ್ಡವರಿಗಿಂತ ಅತ್ಯಂತ ಅವಶ್ಯ ಅದರಿಂದ ಚಿಕ್ಕಮಕ್ಕಳಿಗೆ ಒದಗಬೇಕಾದ ಕಲಾಶಿಕ್ಷಣಕ್ಕೆ ಎಲ್ಲ ಹಂತದಲ್ಲಿಯೂ ಪ್ರಥಮ ಪ್ರಾಶಸ್ತ್ಯವನ್ನು ಒದಗಿಸಿಕೊಡಬೇಕು ಎಂಬುದು ಲೇಖಕರ ಧ್ಯೇಯವಾಗಿದೆ.

೧೯೯೫ರಲ್ಲಿ "ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು" ಎಂಬ ಪುಸ್ತಕದಲ್ಲಿ "ಚಿತ್ರಕಲೆ ಮತ್ತು ಶಿಕ್ಷಣ" ಎಂಬ ಲೇಖನವನ್ನು ಡಾ. ಎಸ್.ಸಿ. ಪಾಟೀಲರು ಬರೆದಿದ್ದು ಪ್ರಾಚೀನ ಕಾಲದಲ್ಲಿ ಕಲೆ ಮತ್ತು ವಿದ್ಯೆ, ವಿಜ್ಞಾನವನ್ನು ಸಮಾಜದಲ್ಲಿ ಬಳಸಿಕೊಂಡು ಬಂದಿದ್ದರು. ಬೃಹಸ್ಪತಿಯೂ ಚಿನ್ನದ ಆಭರಣಗಳ ರಚನೆ, ಮರಗೆಲಸ, ಕುಂಭಕಲೆ, ಸಂಗೀತ, ಚಿತ್ರ ನೃತ್ಯಗಳೆಲ್ಲ ವಿಜ್ಞಾನ ಶಿಲ್ಪಗಳೆಂದಿದ್ದಾನೆ. ಹೇಮಚಂದ್ರನು ವಿಜ್ಞಾನವೂ ಕಲೆಯೇ ಎಂದಿದ್ದಾನೆ. ವಾತ್ಸಾಯನನು ಕಲೆ ಮತ್ತು ವಿದ್ಯೆ ಎರಡನ್ನು ಸಮಾನಾರ್ಥದಲ್ಲಿ ಬಳಸಿದ್ದಾನೆ. ಅದರಂತೆ ಕೆಲವು ಕೃತಿಗಳಲ್ಲಿ ೬೪ ವಿದ್ಯೆಗಳಲ್ಲಿ ಚಿತ್ರಕಲೆಯು ಒಂದು ವಿಷಯವಾಗಿತ್ತು ಎಂಬುದು ತಿಳಿದುಬರುತ್ತದೆ. ಪಾಶ್ಚಿಮಾತ್ಯ ವಿದ್ವಾಂಸರನ್ನೂ ಒಳಗೊಂಡಿರುವಂತೆ ಚಿತ್ರಕಲಾ ಶಿಕ್ಷಣದ ಆಯೋಗಗಳ ಬಗ್ಗೆ ಇಲ್ಲಿ ಉಲ್ಲೇಖಿಸಿದ್ದಾರೆ. ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಚಿತ್ರಕಲೆ ಮತ್ತು ಶಿಕ್ಷಣ ಒಂದಕ್ಕೊಂದು ಪೂರಕವಾಗಿವೆ ಎಂಬುದನ್ನು ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ.

೧೯೯೫ರಲ್ಲಿ ವಜ್ರಮಹೋತ್ಸವ ಸ್ಮರಣ ಸಂಚಿಕೆ 'ಚಿತ್ರಾಕ್ಷಿ' ಡಾ. ಎಸ್.ಸಿ. ಪಾಟೀಲ ಸಂಪಾದಿಸಿದ್ದು ಇದರಲ್ಲಿ ಡಾ. ರಾಮಚಂದ್ರ ಜಂತಲಿಯವರು ಬರೆದಿರುವ "ಬೋಧನೆಯಲ್ಲಿ ಕಲಾಶಿಕ್ಷಣದ ಮಹತ್ವ" ಲೇಖನದಲ್ಲಿ ಸಕಲ ಜೀವಿಗಳಲ್ಲಿ ಕಲಿಕಾ ಪ್ರಕ್ರಿಯೆಯು ನಿರಂತರವಾಗಿ ನಡೆದಿರುತ್ತದೆ. ಕಲಿಕೆಯಲ್ಲಿ ಅನೇಕ ವಿಧಗಳು ಇವೆ. ಅದರಲ್ಲಿ ಬೋಧನೆಯಿಂದ ಕಲಿತ ವಿದ್ಯೆಗೆ ಹೆಚ್ಚಿನ ಮಹತ್ವವಿದೆ. ಬೋಧನೆಯು ಬೋಧನಾ ಕಲೆಯಾಗಿ ಮಾರ್ಪಾಟು ಹೊಂದಿ ಶಿಕ್ಷಕ ಒಬ್ಬ ಕಲಾಕಾರನಾಗಿ ವಿವಿಧ ರೀತಿಯ ಅನುಭವಗಳನ್ನು ಮಕ್ಕಳಿಗೆ ನೀಡುತ್ತಾ ಅವರ ನೈತಿಕ, ಬೌದ್ಧಿಕ, ಶಾರೀರಿಕ, ಸಾಮಾಜಿಕ ಮಟ್ಟಗಳನ್ನು ಎತ್ತರಿಸುತ್ತ ಮುಂದುವರೆಯುತ್ತಿರುತ್ತಾನೆ. ಇಂದಿನ

ಶಿಕ್ಷಣ ತಜ್ಞರು, ಅನುಭವಿಗಳು ಶಿಕ್ಷಕನು ಯಾಂತ್ರಿಕವಾಗಿ ಪಾಠ-ಪ್ರವಚನಗಳನ್ನು ಮುಂದುವರೆಸಬೇಕು. ಇದರಿಂದ ಶಿಕ್ಷಕರು ಕಲಿಸುವುದಕ್ಕಿಂತ ಮಕ್ಕಳು ಹೆಚ್ಚು ಕಲಿಯುವರು. ಇಂದಿನ ಆಧುನಿಕ ಶಿಕ್ಷಣ ನೀತಿಯು ಮತ್ತು ಆಧುನಿಕ ಶಿಕ್ಷಕನು ಕಲಾಶಿಕ್ಷಣವನ್ನು ಪೂರ್ತಿಯಾಗಿ ಅವಲಂಬಿಸಿ ಅದರಿಂದ ತನ್ನ ದೈನಂದಿನ ಜೀವನವನ್ನು ಅತ್ಯಂತ ಸ್ಫೂರ್ತಿದಾಯಕವನ್ನಾಗಿ ಮಾಡಿಕೊಂಡು ಕಲಾಜೀವಿಯಾಗಿ ಕಲಾಪ್ರೇಮಿಯಾಗಿ ಸದಾ ಕಾಲವೂ ಹಸನ್ಮುಖಿಯಾಗಿ ಮುಂದುವರೆಯುವಂತೆ ಮಾಡಲು ಪ್ರೇರಣೆಯನ್ನು ಒದಗಿಸುತ್ತದೆಯೆಂದರೆ ಅತಿಶಯೋಕ್ತಿಯಾಗಲಾರದು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೧೯೯೫ರಲ್ಲಿ "ಚಿತ್ರಕಲಾ ಚಿಂತನೆ" ಎಂಬ ಶಂಕರ ಪಾಟೀಲರ ಪುಸ್ತಕದಲ್ಲಿ "ಕಲಾ ಶಿಕ್ಷಣ" ಎಂಬ ಲೇಖನವಿದೆ. ಇದರಲ್ಲಿ ಇವತ್ತಿನ ಶಿಕ್ಷಣದಲ್ಲಿ ಮಗುವಿನ ಮುಕ್ತ ಮನಸ್ಸಿನಲ್ಲಿ ಮೂಡಬಹುದಾದ ಅಭಿವ್ಯಕ್ತಿಗೆ ರೂಪ ಕೊಡುವ ವ್ಯವಸ್ಥೆ ಅಥವಾ ಪರಿಸರ ಇಲ್ಲದಾಗಿದೆ. ಚಿತ್ರಕಲೆ ಮನಸ್ಸಿನ ಭಾವನೆಗಳಿಗೆ ಯಾವುದೇ ಮಾಧ್ಯಮದ ಮೂಲಕ ಅಭಿವ್ಯಕ್ತಿಯನ್ನು ಕಂಡುಕೊಳ್ಳಬಹುದಾದ ಸಾಧ್ಯತೆ ಇರುವುದರಿಂದ ಮಕ್ಕಳ ಶಿಕ್ಷಣದಲ್ಲಿ ಚಿತ್ರಕಲೆ ಮಹತ್ವದ ಪಾತ್ರವಹಿಸುತ್ತದೆ. ನಮ್ಮ ಚೈತನ್ಯಮಯ ಜೀವನ ಹಾಗೂ ಜೀವನೋಪಾಯ ಎರಡನ್ನೂ ಸಮತೋಲನಗೊಳಿಸಿಕೊಂಡು ಹೋಗುವ ಬದುಕನ್ನು ಕಲಿಸುವುದೇ ನಮ್ಮ ಶಿಕ್ಷಣದ ಗುರಿ ಆಗಬೇಕು. ಒಳಗೂ ಹೊರಗೂ ಸಂಪರ್ಕ ಕಲ್ಪಿಸಿ ಪರಿಸರದೊಂದಿಗೆ ಸಂಬಂಧ ಬೆಳೆಸುವ ಸ್ಥಿತಿಯನ್ನು ತರುವಂಥದ್ದೇ ನಿಜವಾದ ಶಿಕ್ಷಣ. ಆದ್ದರಿಂದ ಶಿಕ್ಷಣದಲ್ಲಿ ಕಲೆಯ ಉದ್ದೇಶ ಅಥವಾ ಗುರಿ ಏನು ಎಂದು ಪ್ರಶ್ನಿಸಿಕೊಂಡಾಗ ಇಡಿಯಾಗಿ ಕಲೆ ನಮ್ಮ ಸಂಪೂರ್ಣ ಶಿಕ್ಷಣ ಪದ್ಧತಿಯಲ್ಲಿ ತನ್ನ ಕೊಡುಗೆಯನ್ನು ಕೊಡಬಲ್ಲ ಪ್ರವೃತ್ತಿಯನ್ನು ಹೊಂದಿದೆ ಎಂಬುದನ್ನು ಮಾರ್ಮಿಕವಾಗಿ ಹೇಳಿದ್ದಾರೆ.

೧೯೯೮ರಲ್ಲಿ ಡಾ. ಮಹಾಬಲೇಶ್ವರ ರಾವ್ ಅವರು ಪ್ರಕಟಿಸಿದ "ರಾಷ್ಟ್ರೀಯ ಶಿಕ್ಷಣ ನೀತಿ" ಪುಸ್ತಕದಲ್ಲಿ "ಕಲಾ ಶಿಕ್ಷಣದ" ಬಗ್ಗೆ ಬರೆಯುತ್ತ ಮನುಷ್ಯ ಜೀವನದಲ್ಲಿ ಕಲೆಗಳಿಗೆ ವಿಶಿಷ್ಟ ಸ್ಥಾನವನ್ನು ನೀಡಿದ್ದಾನೆ. ಕಲೆಗಳು ಬರಡಾದ ಬಾಳಿಗೆ ಆನಂದ ತುಂಬುತ್ತವೆ. ಇಂದಿನ ಶಿಕ್ಷಣ ಕ್ರಮದಲ್ಲಿ ಬಾಯಿಪಾಠ, ಪುಸ್ತಕ ವಿದ್ಯೆ ಹಾಗೂ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವುದಕ್ಕೆ ನಾವು ಅತಿ ಪ್ರಾಶಸ್ತ್ಯ ನೀಡಿದ್ದೇವೆ. ಇದರಿಂದಾಗಿ ಮಕ್ಕಳಿಗೆ ಕಲಿಕೆಯಲ್ಲಿ ಲಾಭವಾಗುವುದಿಲ್ಲ. ಜೀವನದ ವೈವಿಧ್ಯಮಯ ನೋಟಗಳು, ಅನುಭವ ಸಮೃದ್ಧಿಯಾಗುವುದಿಲ್ಲ. ಪುಸ್ತಕ ವಿದ್ಯೆಗಿಂತ ಭಿನ್ನವಾದ ಕಲಾಶಿಕ್ಷಣವು ಮಕ್ಕಳ ಪಂಚೇಂದ್ರಿಯಗಳಿಗೆ ಅನುಭವ ಒದಗಿಸುತ್ತದೆ. ಕಲಾಶಿಕ್ಷಣವು ಸಂತಸ ಕಲಿಕೆಯ ವಾತಾವರಣವನ್ನು ನಿರ್ಮಿಸುತ್ತದೆ. ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಜೊತೆಗೂಡಿ ಸೃಜನಾತ್ಮಕವಾಗಿ ಕೆಲಸ ಮಾಡಲು ಒಂದು ಅವಕಾಶ ಕಲ್ಪಿಸುತ್ತದೆ. ಇಂದ್ರಿಯಾನುಭವಗಳ ಮೂಲಕವೇ ಪರಿಣಾಮಕಾರಿ ಕಲಿಕೆ ಸಾಧ್ಯವಾಗುತ್ತದೆ. ಅವಲೋಕನವು ಬದಲಾವಣೆಯನ್ನು

ಅರಿತು ವಿಚಾರಗಳ ಗ್ರಹಿಕೆ ಮತ್ತು ಸೂಕ್ಷ್ಮತೆಗಳನ್ನು ಬೆಳೆಸಿಕೊಳ್ಳುವುದು ಇವೆಲ್ಲ ಕಲಾಶಿಕ್ಷಣಕ್ಕೆ ಅತ್ಯಾವಶ್ಯಕ ಎಂಬುದನ್ನು ಹೇಳಿದ್ದಾರೆ.

೨೦೦೧ರಲ್ಲಿ ಡಾ. ಎಸ್.ಸಿ. ಪಾಟೀಲರ 'ವರ್ಣಸಂಚಯ' ಪುಸ್ತಕದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಎರಡು ಲೇಖನಗಳನ್ನು ನಾವು ಕಾಣಬಹುದು. "ಚಿತ್ರಕಲೆ ಮತ್ತು ಶಿಕ್ಷಣ" ಮಾನವನ ಜೀವನ ಮುಖ್ಯವಾಗಿ ತನು ಮನ ಆತ್ಮಗಳೆಂಬ ಮೂರು ಅಂಶಗಳನ್ನು ಹೊಂದಿದೆ. ಶಿಕ್ಷಣವು ಇವುಗಳನ್ನು ಸಂಸ್ಕರಿಸುವ ಕಾರ್ಯವನ್ನು ಸದಾಕಾಲವು ಮಾಡುತ್ತಿರುತ್ತದೆ. ಮನಸ್ಸಿನ ವಿಕಾಸಕ್ಕಾಗಿ ಸಾಹಿತ್ಯ, ಕಲೆ, ನೈತಿಕ ಮೌಲ್ಯಗಳನ್ನು ಆತ್ಮ ಉದ್ಧಾರಕ್ಕಾಗಿ ಧರ್ಮ, ಆಧ್ಯಾತ್ಮ, ಪಾರಮಾರ್ಥಿಕ ಮೌಲ್ಯಗಳನ್ನು ಕೊಡಬಲ್ಲದೆ ನಿಜವಾದ ಶಿಕ್ಷಣ. ಈ ಶಿಕ್ಷಣಕ್ಕೆ ಅಡಿಪಾಯ ಚಿತ್ರಕಲೆ. ಇದನ್ನರಿತ ಪಾಶ್ಚಿಮಾತ್ಯ ದೇಶಗಳು ಕಲೆಯ ಮೂಲಕ ಶಿಕ್ಷಣವನ್ನು "Art Through Education" ಪ್ರಾರಂಭಿಸಿವೆ. . ನಮ್ಮ ದೇಶದ ಶಿಕ್ಷಣದಲ್ಲಿ ಕಲೆಗೆ ಇನ್ನೂ ಆ ಮಧ್ಯದ ಸ್ಥಾನ ಸಿಕ್ಕಿಲ್ಲ. 'ನಲಿ ಕಲಿ', ಆಡಿ, ಮಾಡಿ, ನೋಡಿ, ಕೇಳಿ, ಓದಿ ಅರಿಯುವುದೇ ಶಿಕ್ಷಣ. ಇಲ್ಲಿ ಬೇರೆ ಬೇರೆ ದೇಶದ ಚಿತ್ರಕಲಾ ಶಿಕ್ಷಣದ ಬಗ್ಗೆ ಹಾಗೂ ಶಿಕ್ಷಣ ಆಯೋಗಗಳ ಬಗ್ಗೆ ಸ್ಪಷ್ಟವಾಗಿ ವಿವರಿಸುವ ಅಗತ್ಯವು ದೃಶ್ಯಕಲಾ ಶಿಕ್ಷಣಕ್ಕೆ ಹೆಚ್ಚಿನ ಒತ್ತು ಕೊಡುವುದರಿಂದ ಶಿಕ್ಷಣವನ್ನು ಮತ್ತಷ್ಟು ಗಟ್ಟಿಗೊಳಿಸಬಹುದಾಗಿದೆ ಎಂಬುದನ್ನು ವಿಶ್ಲೇಷಿಸಿದ್ದಾರೆ.

"ಕರ್ನಾಟಕದಲ್ಲಿ ಚಿತ್ರಕಲಾ ಶಿಕ್ಷಣ" ಎಂಬ ಲೇಖನದಲ್ಲಿ ಮಕ್ಕಳು ಪ್ರವೇಶಿಸುವಾಗ ನಮ್ಮ ಗುರಿ ಅವರೆಲ್ಲರನ್ನು ಕಲಾವಿದರನ್ನಾಗಿ ಮಾಡಬೇಕೆನ್ನುವುದಕ್ಕಿಂತಲೂ ಮುಖ್ಯವಾಗಿ ಅವರೆಲ್ಲ ಒಂದು ದಿನ ಭಾರತದ ಉತ್ತಮ ನಾಗರಿಕ ಪ್ರಜೆಯಾಗಿ ಬದುಕಬೇಕೆಂದು ಅವರ ಸಿದ್ಧತೆಗಳಲ್ಲಿ ಅನೇಕ ಅವಶ್ಯಕತೆಗಳು ಇರುವಂತೆ ಕಲಾಶಿಕ್ಷಣದ ಅವಶ್ಯಕತೆಯೂ ಇದೆಯೆಂದು ಹೇಳಲಾಗಿದೆ. ಅಲ್ಲದೆ ಚಿತ್ರಕಲಾ ಶಿಕ್ಷಣದ ಐತಿಹಾಸಿಕ ಹಿನ್ನೆಲೆಯ ಬಗ್ಗೆ ಹಾಗೂ ಕಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಿಫಾರಸ್ಸುಗಳು, ಸ್ವಾತಂತ್ರ್ಯಪೂರ್ವದ ಅವಧಿಯಲ್ಲಿನ ಚಿತ್ರಕಲಾ ಶಿಕ್ಷಣ ಹಾಗೂ ನಂತರದ ಶಿಕ್ಷಣದ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಅಲ್ಲದೇ ಕಲಾ ಶಿಕ್ಷಣದ ಉದ್ದೇಶ ಮತ್ತು ಗುರಿಗಳ ಬಗ್ಗೆ ಚರ್ಚಿಸಲಾಗಿದೆ.

ನಮ್ಮ ಮಕ್ಕಳಿಗೆ ಸಾಮಾನ್ಯ ವಿದ್ಯಾಭ್ಯಾಸದ ಜೊತೆಗೆ ಲಲಿತಕಲೆಗಳಲ್ಲಿ ಒಂದಾದ ಚಿತ್ರಕಲಾ ಶಿಕ್ಷಣವನ್ನು ಪೂರಕವಾಗಿ ಬೋಧನೆಯ ಮೂಲಕ ಕೊಡಲು ಕಾರ್ಯಪ್ರವೃತ್ತರಾಗಬೇಕಾಗಿದೆ ಎಂದು ಲೇಖನದಲ್ಲಿ ಒತ್ತಿ ಹೇಳಲಾಗಿದೆ.

೨೦೦೩ರಲ್ಲಿ ಟಿ.ಪಿ. ಅಕ್ಕಿಯವರು ಬರೆದ "ಕಲಾ ಚರಿತ್ರೆ" ಪುಸ್ತಕದಲ್ಲಿ ಚಿಕ್ಕ ಮಕ್ಕಳ ಚಿತ್ರಕಲೆ, ಶಿಕ್ಷಣ, ಶಿಕ್ಷಣದ ಗುರಿಗಳು ಹಾಗೂ ಕಲಾಕ್ಷೇತ್ರದ ತತ್ವಗಳ ಬಗ್ಗೆ ಮತ್ತು ಕಲೆಯ ಮುಖಾಂತರ ಶಿಕ್ಷಣ(Art Through Education) ಎಂಬ ಪುಸ್ತಕದಲ್ಲಿ ಹರ್ಬಟ್ ರೀಡ್‌ನು ಮಕ್ಕಳ ವಯಸ್ಸಿಗೆ ಅನುಗುಣವಾಗಿ ಏಳು ಭಾಗಗಳನ್ನಾಗಿ ವಿಂಗಡಿಸಿ ಅದಕ್ಕೆ ಮಾನಸಿಕ ತತ್ವಗಳ ಆಧಾರದ ಮೇಲೆ ನಿರೂಪಿತವಾಗಿರುವಂತಹ ಏಳು ಹಂತಗಳನ್ನು ವಿವರಿಸಿದ್ದಾರೆ.

೨೦೦೮ರ "ವಜ್ರವಿಜಯ" ನೆನಪಿನ ಸಂಚಿಕೆಯಲ್ಲಿ(ಸಂ), ಪ್ರೊ. ವಿಲ್ಸನ್ ಎಸ್. ಸೋನಾಫರ್, ಡಾ. ಮೋಹನರಾವ್ ಬಿ. ಪಂಚಾಳ, ಶ್ರೀಮತಿ ಪ್ರೇಮ ಹಂದಿಗೋಳ ಅವರ 'ಕಲಾಶಿಕ್ಷಣ' ಎಂಬ ಲೇಖನದಲ್ಲಿ ಸಾಹಿತ್ಯ ಸಂಗೀತ ಕಲೆಯನ್ನು ಸಂಗಮಗೊಳಿಸಿದ್ದಾರೆ. ಚಿತ್ರಕಲೆ ಸಂಸ್ಕೃತಿಯ ವ್ಯಾಕರಣವಾಗಿದೆ. ಚಿತ್ರಕಲಾ ಶಿಕ್ಷಣವನ್ನು ಪಡೆಯದೇ ಸಾಮಾನ್ಯ ಶಿಕ್ಷಣದಲ್ಲಿ ಸುಧಾರಣೆಯನ್ನು ಕಾಣಲಾರೆವು ಎಂದಿರುವರು.

ಶಿಕ್ಷಣದೊಂದಿಗೆ ಮಗುವಿನ ಸರ್ವತೋಮುಖ ಅಭಿವೃದ್ಧಿಗಾಗಿ ಕಲಾಶಿಕ್ಷಣ ಬೇಕು. ಮಗುವಿನ ಬುದ್ಧಿಶಕ್ತಿ ಬೆಳವಣಿಗೆಯಾಗುತ್ತದೆ. ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೂ ಚಿತ್ರಕಲಾ ಶಿಕ್ಷಣ ಅಗತ್ಯ ಕಲಾಶಿಕ್ಷಣವನ್ನು ಕಲಿಯುವುದರಿಂದ ಮಗುವಿನಲ್ಲಿ ನಿರೀಕ್ಷಣಾಶಕ್ತಿ, ಕಲ್ಪನಾಶಕ್ತಿ, ವಿಚಾರಶಕ್ತಿ, ರಚನಾತ್ಮಕ ಶಕ್ತಿ ಅಭಿವೃದ್ಧಿಗೊಳ್ಳುತ್ತವೆ. ಚಿತ್ರಕಲೆಯಿಂದ ಮಾನವನು ಸಾಧಿಸುವ ಪರಿಪೂರ್ಣ ಶಕ್ತಿ ಜ್ಞಾನವನ್ನು ಕಲೆಯಿಂದಲೇ ಪಡೆಯುತ್ತಾನೆ. ಲೋಕ ಜೀವನ ಮತ್ತು ಜೀವನೋಪಾಯಗಳನ್ನು ಸಮನ್ವಯ ರೀತಿಯಲ್ಲಿ, ಸುಂದರವಾಗಿ ತೋರಿಸಿಕೊಡುವ ಶಿಕ್ಷಣಕ್ಕೆ ಕಲೆ ಸಮರ್ಥ ಸಮರೂಪವಾಗಿ ಕಲಾಶಿಕ್ಷಣ ಗುರಿಯನ್ನು ಸಾಧಿಸುತ್ತದೆ ಎಂಬುದನ್ನು ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ.

೨೦೦೯ ಏಪ್ರಿಲ್, ಜೂನ್‌ರಲ್ಲಿ 'ಕರ್ನಾಟಕ ಕಲಾವಾರ್ತೆ', ಸಂಚಿಕೆ-೯೧ರಲ್ಲಿ(ಸಂ: ಮಹೇಂದ್ರ ಡಿ.) "ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಣ" ಎಂಬ ಲೇಖನವನ್ನು ಪಿ.ಬಿ. ಗವಾನಿಯವರು ಬರೆದಿದ್ದು ಚಿತ್ರಕಲಾ ಶಿಕ್ಷಕರ ಕರ್ತವ್ಯಗಳು ಮಗುವಿನ ಬೆಳವಣಿಗೆಯ ಹಂತದಲ್ಲಿ ಪ್ರಾಥಮಿಕ ಚಿತ್ರಕಲಾ ಶಿಕ್ಷಕನ ಪಾತ್ರ ಬಹುಮುಖ್ಯವಾಗಿದೆ. ಈ ಹಂತದಲ್ಲಿ ಶಿಕ್ಷಕನು ಹೇಳಿದ್ದನ್ನು ಯಥಾವತ್ತಾಗಿ ವಿದ್ಯಾರ್ಥಿಗಳು ಪಾಲಿಸುತ್ತಾರೆ. ಶಿಕ್ಷಕರು ತಮ್ಮ ಜವಾಬ್ದಾರಿಯನ್ನು ಅರಿತು ಸಂಪೂರ್ಣ ಪೂರ್ವ ತಯಾರಿಯೊಂದಿಗೆ ಪಾಠ ಮಾಡಬೇಕು. ಮಗುವಿನಲ್ಲಿ ಮನಸ್ಥಿತಿಗೆ ತಕ್ಕ ಅವರ ಹಂತಕ್ಕೆ ಇಳಿದು ಮಾರ್ಗದರ್ಶನ ಮಾಡಬೇಕು. ಇದಲ್ಲದೆ ಚಿತ್ರಕಲಾ ಶಿಕ್ಷಕನು ಅನೇಕ ಉಪ-ವಿಷಯಗಳನ್ನು ಬೋಧಿಸಬೇಕಾಗುತ್ತದೆ. ಮಕ್ಕಳನ್ನು ಸೃಜನಶೀಲ ಕಲೆಯಲ್ಲಿಯೇ ತೊಡಗಿಸಬೇಕು.

ಚಿತ್ರಕಲಾ ಶಿಕ್ಷಣದ ಬೆಳವಣಿಗೆಯಲ್ಲಿ ಸರಕಾರದ ಪಾತ್ರ ಚಿತ್ರಕಲಾ ಶಿಕ್ಷಣವನ್ನು ಮಕ್ಕಳಿಗೆ ನೀಡಲು ಮೊದಲ ಹೆಜ್ಜೆ ಇಟ್ಟಂತಾಗಿದೆ. ಇನ್ನು ಮುಂದೆ ರಾಜ್ಯದ ಎಲ್ಲ ಪ್ರಾಥಮಿಕ ಶಾಲೆಗಳಿಗೆ ಚಿತ್ರಕಲಾ ಶಿಕ್ಷಕರನ್ನು ನೇಮಕ ಹಾಗೂ ಖಾಲಿ ಇರುವ ಪ್ರೌಢಶಾಲೆಗಳಿಗೂ ಚಿತ್ರಕಲಾ ಶಿಕ್ಷಕರ ನೇಮಕ ಪ್ರಕ್ರಿಯೆಗೆ ಚಾಲನೆ ನೀಡಬೇಕು.

ಚಿತ್ರಕಲಾ ಶಿಕ್ಷಕರಾಗಲು ಅರ್ಹತೆ, ಪ್ರಾಥರ್ಮಿಕ ಶಾಲೆಗಳಲ್ಲಿ ಶಿಕ್ಷಕರಾಗಲು ಡಿ.ಎಂ.ಸಿ ಎರಡನೇ ವರ್ಷ ಹಾಗೂ ಎ.ಟಿ.ಸಿ.ಯನ್ನು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಲು ಆರ್ಟ್ ಮಾಸ್ಟರ್ ಅಥವಾ ಬಿ.ವಿ.ಎಡ್. ತರಬೇತಿಯನ್ನು ಹೊಂದಿರಬೇಕು. ಈ ಎರಡು ಕೋರ್ಸ್‌ಗಳನ್ನು

ವೃಂದ ಮತ್ತು ನೇಮಕಾತಿಯಲ್ಲಿ ಸರಕಾರ ಸೇರಿಸಬೇಕಾಗಿದೆ. ಇಲ್ಲದಿದ್ದರೆ ಈ ವಿದ್ಯಾರ್ಥಿಗಳ ಬಾಳು ಅತಂತ್ರವಾಗುತ್ತದೆ. ರಾಜ್ಯದ ಎಲ್ಲ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಚಿತ್ರಕಲಾ ಶಿಕ್ಷಕರ ನೇಮಕ ಮಾಡಿಕೊಳ್ಳಬೇಕು. ಚಿತ್ರಕಲಾ ಶಿಕ್ಷಕರು ವ್ಯವಸ್ಥಿತವಾಗಿ ಚಿತ್ರಕಲಾ ಪಾಠ ಬೋಧನೆಗೆ ಅನುಕೂಲವಾಗುವಂತೆ ಚಿತ್ರಕಲಾ ಶಿಕ್ಷಣದ ಕೈಪಿಡಿ, ಪಠ್ಯಕ್ರಮ ಹಾಗೂ ಚಿತ್ರಕಲಾ ಪಠ್ಯಪುಸ್ತಕಗಳನ್ನು ಮುದ್ರಿಸಿ, ವಿದ್ಯಾರ್ಥಿಗಳಿಗೆ ಪೂರೈಸಬೇಕು. ದೈಹಿಕ ಶಿಕ್ಷಣವನ್ನು ವಾರ್ಷಿಕ ಪರೀಕ್ಷೆಗೆ ಅಂಕಗಳನ್ನು ಪರಿಗಣಿಸಲು ಕ್ರಮಕೈಗೊಂಡಂತೆ ಚಿತ್ರಕಲಾ ಶಿಕ್ಷಣವನ್ನು ಒಂದರಿಂದ ಹತ್ತನೇ ತರಗತಿಯವರೆಗೆ ವಾರ್ಷಿಕ ಪರೀಕ್ಷಾ ವಿಷಯವಾಗಿ ಅಳವಡಿಸಬೇಕು. ಆಗ ಮಾತ್ರ ರಾಜ್ಯದ ಎಲ್ಲ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಣ ವ್ಯವಸ್ಥಿತವಾಗಿ ನಡೆಯುತ್ತದೆ ಎಂದು ಈ ಲೇಖನದಲ್ಲಿ ತಿಳಿಸಿದ್ದಾರೆ.

೨೦೧೧ರಲ್ಲಿ "ಚಿತ್ರಕಲಾ ಶಿಕ್ಷಣ" ಎಂಬ ಪುಸ್ತಕವನ್ನು ಮಂಜುನಾಥ ಮಾನೆಯವರು ಬರೆದಿದ್ದು, ಇದರಲ್ಲಿ ಚಿತ್ರಕಲೆಯ ಇತಿಹಾಸವನ್ನು ಹೇಳಲಾಗಿದೆ. ಚಿತ್ರಕಲೆಯು ಪ್ರಾಚೀನ ಕಾಲದಿಂದಲೂ ಮಾನವನ ಸಂಗಾತಿ ಚಿತ್ರಕಲೆಯು ಆಯಾ ಕಾಲದ ಮನೋಧರ್ಮಗಳನ್ನು ರೇಖೆ, ಬಣ್ಣಗಳಿಂದ ಪ್ರತಿಬಿಂಬಿಸುತ್ತದೆ. ಮಾನವನ ಮೊದಲ ಪಾಠವು ಚಿತ್ರಗಳಿಂದಲೇ ಆರಂಭವಾಯಿತ್ತೆಂದು ತಿಳಿಸಲಾಗಿದೆ. ಚಿತ್ರಕಲೆಯು ಸುಮಾರು ೫೦ ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದೆ. "ದಿ ಸ್ಟೋರಿ ಆಫ್ ಆರ್ಟ್" ಎಂಬ ಗ್ರಂಥದಲ್ಲಿ ಚಿತ್ರಗಳ ಪ್ರಾಚೀನತೆಯು ದಾಖಲಾಗಿರುವುದನ್ನು ನೋಡಬಹುದು. ಇದರಲ್ಲಿ ಸಿಂಧೂ ನಾಗರಿಕತೆ ವೇದಗಳ ಕಾಲದಲ್ಲಿ, ಕಾವ್ಯಪುರಾಣಗಳಲ್ಲಿ ಚಿತ್ರಕಲೆ ಬೆಳೆದು ಬಂದಿರುವುದನ್ನು ನೋಡುತ್ತೇವೆ.

ಕಲಾ ಶಿಕ್ಷಣವು ಸಾಮಾನ್ಯ ಶಿಕ್ಷಣದ ಜೊತೆಗೆ ಸಂಬಂಧ ಕಲ್ಪಿಸಿ ಸಮಗ್ರ ಶಿಕ್ಷಣ ಕ್ರಮದ ಒಂದು ಅವಿಭಾಜ್ಯ ಅಂಗವಾಗಿ ಭಾವಿಸುವುದು ಇಂದು ಆಗಬೇಕಾದ ಕಾರ್ಯವಾಗಿದೆ. ಶಾಲೆಗಳಲ್ಲಿ ಮಕ್ಕಳು ಬಹುಮುಖ ವ್ಯಕ್ತಿತ್ವ ಹೊಂದಿರುವ ಕುಸುಮಗಳಾಗಿರುತ್ತಾರೆ. ಶಿಕ್ಷಣದ ನಿರಂತರ ಪ್ರಕ್ರಿಯೆಯಲ್ಲಿ ಕಲಾಶಿಕ್ಷಣದ ಸಂಯೋಗವಿದ್ದಲ್ಲಿ ಮಾತ್ರ ವ್ಯಕ್ತಿತ್ವ ವಿಕಸನ ಹೊಂದುವುದು ಎಂದು ಹೇಳಲಾಗಿದೆ. ಇದರೊಂದಿಗೆ ಚಿತ್ರಕಲಾ ಶಿಕ್ಷಣ ನಡೆದು ಬಂದ ದಾರಿ, ಕಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ವರದಿ ಹಾಗೂ ಶಿಫಾರಸ್ಸುಗಳ ಬಗ್ಗೆ, ವಿದೇಶಗಳಲ್ಲಿ ಚಿತ್ರಕಲಾ ಶಿಕ್ಷಣಕ್ಕೆ ಕೊಡುತ್ತಿರುವಂತಹ ಪ್ರೋತ್ಸಾಹದ ಬಗ್ಗೆ ವಿವರವಾಗಿ ತಿಳಿಸಿಕೊಡಲಾಗಿದೆ.

ರವಿಕುಮಾರ ಕಾಶಿಯವರು "ಕರ್ನಾಟಕದಲ್ಲಿ ಕಲಾಶಿಕ್ಷಣ" (೨೦೧೨) ಎಂಬ ಲೇಖನದಲ್ಲಿ ಕರ್ನಾಟಕದ ಕಲಾಶಿಕ್ಷಣದ ಸ್ಥಿತಿಗತಿಯನ್ನು ವಿಶ್ಲೇಷಿಸಿದ್ದಾರೆ. ಕಲಾಶಾಲೆ, ಪಠ್ಯಕ್ರಮ, ಉದ್ಯೋಗ ಇನ್ನಿತರ ಕುಂದುಕೊರತೆಗಳ ಬಗ್ಗೆ ಈ ಲೇಖನ ಬೆಳಕು ಚೆಲ್ಲುತ್ತದೆ.

ಶಿವಾನಂದ ಎಚ್. ಬಂಟನೂರು ಅವರು "ದೃಶ್ಯ ಪದದೃಶ್ಯ" (೨೦೧೩) ಈ ಪುಸ್ತಕದಲ್ಲಿ ನಿಜವಾಗಿ ಮಕ್ಕಳ ಮನಸ್ಸನ್ನು ದೊಡ್ಡವರು ಗ್ರಹಿಸುವ ವ್ಯವಧಾನವನ್ನು ತೋರುವುದು ಅವಶ್ಯ.

ಮಕ್ಕಳು ತಾವು ಗ್ರಹಿಸಿದ ವಿಚಾರದ ಕುರಿತು ತಪ್ಪಾಗಿ ಉಚ್ಚರಿಸಿದರೂ ಸರಿಯಾಗಿಯೇ ಹೇಳಿರುತ್ತಾರೆ ಎಂಬುದನ್ನು ದೊಡ್ಡವರು ಸೂಕ್ಷ್ಮವಾಗಿ ಗ್ರಹಿಸಿ ಅವರೊಂದಿಗೆ ಸ್ಪಂದಿಸಬೇಕು. ಆಗಲೇ ಮಕ್ಕಳ ಮನಸ್ಸಿನ ಭಾವನೆಗಳನ್ನು ಅರಿತುಕೊಳ್ಳಲು ಸಾಧ್ಯ. ಅಲ್ಲದೆ ಪ್ರಪಂಚದ ಅನೇಕ ಶಿಕ್ಷಣ ತಜ್ಞರು, ಮನಃಶಾಸ್ತ್ರಜ್ಞರು, ಕಲಾವಿಮರ್ಶಕರು ವಿಶೇಷವಾಗಿ ಮಕ್ಕಳ ಚಿತ್ರಕಲೆ ಮತ್ತು ಕಲಾಶಿಕ್ಷಣದ ಬಗ್ಗೆ ಪ್ರಯೋಗಗಳನ್ನು ಮಾಡಿರುವುದನ್ನು ಇಲ್ಲಿ ನೋಡಲಾಗಿದೆ.

೨೦೧೨ರಲ್ಲಿ ಪ್ರಕಟವಾದ ಮಲ್ಲಿಕಾರ್ಜುನ ಸಿ. ಬಾಗೋಡಿ ಅವರ "ಕಲಾ ಕಂಪು" ಎಂಬ ಪುಸ್ತಕದಲ್ಲಿ ರಾಜಾಶ್ರಿತ ಕಲೆ ಬಗ್ಗೆ, ಇತಿಹಾಸ ಕಾಲದ ಆರಂಭದ ವೇಳೆಗೆ ಕಲೆಗಳು, ನಾಡನ್ನಾಳುವ ಅರಸುಮನೆತನಗಳ ಆಶ್ರಯ ಪೋಷಣೆಯೊಂದಿಗೆ ಬೆಳವಣಿಗೆಯನ್ನು ಕಂಡು ಕೊಳ್ಳುತ್ತದೆ. ಶಾಸ್ತ್ರೀಯ ನೆಲೆಯ ಕಲಾ ಬೆಳವಣಿಗೆಯನ್ನು ರಾಜಾಶ್ರಿತ ಕಲೆ ಎಂತಲೂ ಹೇಳುತ್ತಾರೆ. ಇಲ್ಲಿ ರಾಷ್ಟ್ರಕೂಟರು, ಕಲಚೂರಿಗಳು, ವಿಜಯನಗರದ ಸಾಮ್ರಾಜ್ಯದ ಬಗ್ಗೆ ಹಾಗೂ ಕಲೆಯ ಬೆಳವಣಿಗೆಯ ಬಗ್ಗೆ ಹೇಳಿದ್ದಾರೆ.

ಸ್ವಾತಂತ್ರ್ಯಪೂರ್ವ ಮತ್ತು ನಂತರದ ರಾಜ್ಯ ಏಕೀಕರಣಕ್ಕೆ ಮುಂಚೆ ನಾಡಿನ ಭೂಭಾಗ ಮೈಸೂರು ಪ್ರಾಂತ, ಮದ್ರಾಸ್ ಪ್ರಾಂತ, ಮುಂಬೈ - ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ಪ್ರಾಂತಗಳನ್ನೊಳಗೊಂಡ ಅಖಂಡ ಕರ್ನಾಟಕ ರಾಜ್ಯದ ಉದಯವಾಯಿತು. ಕರ್ನಾಟಕದ ಭಾಗದಲ್ಲಿನ ಕಲಾಸ್ತಕರು ಮೈಸೂರು ಅರಸರು ಪ್ರಾರಂಭಿಸಿದ ಚಿತ್ರಶಾಲೆಗಳಲ್ಲಿ ಪಾರಂಪರಿಕ ಶಿಕ್ಷಣವನ್ನು ಪಡೆದರೆ ಕೆಲವು ಮದ್ರಾಸ್ ಕಲಾಶಾಲೆಗಳಲ್ಲಿ ತಮ್ಮ ಕಲಾ ಉನ್ನತಿಯನ್ನು ಕಂಡುಕೊಂಡರು. ಹಾಗೇನೇ ಕರ್ನಾಟಕ ಕರಾವಳಿ, ಮುಂಬೈ ಕರ್ನಾಟಕ ಮತ್ತು ಹೈದರಾಬಾದ್-ಕರ್ನಾಟಕ ಪ್ರದೇಶದ ಕಲಾವಿದರು, ಮುಂಬೈನ ಜೆ.ಜೆ. ಕಲಾಶಾಲೆ ಮತ್ತು ನೂತನ ಕಲಾಮಂದಿರದಲ್ಲಿ ಅಧ್ಯಯನ ಮಾಡುವ ಮೂಲಕ ತಮ್ಮ ಉನ್ನತಿಯನ್ನು ಕಂಡುಕೊಂಡರು ಎಂಬುದನ್ನು ಇಲ್ಲಿ ವಿವರಿಸಿದ್ದಾರೆ.

೨೦೧೨ರಲ್ಲಿ ಪ್ರಕಟವಾದ ಮಲ್ಲಿಕಾರ್ಜುನ ಸಿ. ಬಾಗೋಡಿ ಅವರು ಸಂಪಾದಿಸಿದ "ಹೈದ್ರಾಬಾದ್-ಕರ್ನಾಟಕ ದೃಶ್ಯಕಲಾ ಪರಂಪರೆ" ಪುಸ್ತಕದಲ್ಲಿ ಪರಶುರಾಮ ಪಿ. ಇವರ "ದೃಶ್ಯಕಲಾ ಶಿಕ್ಷಣ" ಎಂಬ ಲೇಖನದಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶವು ಶಿಲ್ಪ, ವಾಸ್ತು ಚಿತ್ರಕಲೆಯಲ್ಲಿ ತನ್ನದೇಯಾದಂತಹ ವಿಶಿಷ್ಟ ಪರಂಪರೆಯನ್ನು ಹೊಂದಿದೆ. ಈ ಪ್ರದೇಶದ ದೃಶ್ಯಕಲಾ ಶಿಕ್ಷಣವನ್ನು ಬೇರೆ ಬೇರೆ ಹಂತಗಳಲ್ಲಿ ಗುರುತಿಸಬಹುದು. ಹಿಂದಿನ ಸಾಂಪ್ರದಾಯಿಕ ಕಲಾಶಿಕ್ಷಣ ಗುರುಕುಲ ಶಿಕ್ಷಣ ವಂಶ ಪರಂಪರೆಯಾಗಿ ಮುಂದುವರೆಯುತ್ತಿದ್ದ ಪದ್ಧತಿಗಳು ಇದ್ದವು. ಇಲ್ಲಿನ ಅನೇಕ ಕಲಾವಿದರು ಮುಂಬೈ, ಕೊಲ್ಕತ್ತಾ ಮತ್ತಿತರ ಕಲಾ ಶಾಲೆಗಳಲ್ಲಿ ಕಲಾಶಿಕ್ಷಣ ಪಡೆದುಕೊಂಡವರ ಮತ್ತು ಆ ಭಾಗದ ಕಲಾಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.

೨೦೧೫ರಲ್ಲಿ ಡಾ. ಪರಶುರಾಮ್ ಪಿ. ಇವರು ಬರೆದಿರುವ ದೃಶ್ಯಧ್ಯಾನ ಇಂಗ್ಲಿಷ್ ಲೇಖನ Visual Art Education in Hydrabad Karnataka Region ಎಂಬುದರಲ್ಲಿ ಆ

ಭಾಗದಲ್ಲಿ ಅತ್ಯುನ್ನತ ಸ್ಥಾನಕ್ಕೆ ಹೋಗಿರುವಂತಹ ಕಲಾವಿದರುಗಳ ಬಗ್ಗೆ ಆ ಭಾಗದಲ್ಲಿ ನಡೆಯುತ್ತಿರುವಂತಹ ಕಲಾ ಶಾಲೆಗಳ ಬಗ್ಗೆ, ಗುಲಬರ್ಗಾ ವಿಶ್ವವಿದ್ಯಾಲಯ ನೀಡುತ್ತಿರುವಂತೆ ಸ್ನಾತಕೋತ್ತರ ಶಿಕ್ಷಣವನ್ನು ಇನ್ನೂ ಹಲವಾರು ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ.

೨೦೧೫ರಲ್ಲಿ "ದೃಶ್ಯಕಲಾ ಸಂವೇದನೆ" ಎಂಬ ಪುಸ್ತಕವನ್ನು ಪ್ರೊ. ಎಸ್.ಸಿ. ಪಾಟೀಲ ಅವರು ಬರೆದಿದ್ದು "ಸ್ವಾತಂತ್ರ್ಯಪೂರ್ವ ಕರ್ನಾಟಕದ ದೃಶ್ಯಕಲಾ ಶಿಕ್ಷಣ ಮತ್ತು ಸಂಸ್ಥೆಗಳು" ಲೇಖನದಲ್ಲಿ ಕರ್ನಾಟಕದಲ್ಲಿ ಮೊದಲು ಚಿತ್ರಕಲಾ ಶಿಕ್ಷಣ ಗುರುಕುಲ ಪದ್ಧತಿಯಲ್ಲಿತ್ತು. ಮುಂದೆ ರಾಜಾಶ್ರಯದಲ್ಲಿ ಸಾಕಷ್ಟು ಪ್ರೋತ್ಸಾಹದಿಂದ ಬೆಳೆದುಕೊಂಡು ಬಂದಿದೆ. ಕರ್ನಾಟಕದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷ್ ಮಾದರಿಯ ಕಲಾಶಿಕ್ಷಣ ಸಂಸ್ಥೆಗಳು ಪ್ರಾರಂಭಗೊಂಡು ಚಿತ್ರಕಲೆ ಮತ್ತು ಕರಕುಶಲ ಕಲೆಗಳ ಕುರಿತಾಗಿ ತರಬೇತಿ ನೀಡುತ್ತಾ ಬಂದಿವೆ. ಅವು ಯಾವುವೆಂದರೆ ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಸಂಸ್ಥೆ, ಮೈಸೂರು, ಅ.ನ.ಸು. ಕಲಾಮಂದಿರ, ಬೆಂಗಳೂರು, ಸ್ಕೂಲ್ ಆಫ್ ಆರ್ಟ್, ಧಾರವಾಡ, ವಿಜಯ ಕಲಾಮಂದಿರ, ಗದಗ ಈ ಮೇಲಿನ ಕಲಾಶಾಲೆಗಳ ಪ್ರಾರಂಭ, ಅವುಗಳ ಬೆಳವಣಿಗೆ, ಅಲ್ಲಿನ ಪಠ್ಯಕ್ರಮಗಳ ಬಗ್ಗೆ ವಿವರಿಸಿದ್ದಾರೆ.

"ಶಾಲಾ ಹಂತದಲ್ಲಿ ಚಿತ್ರಕಲಾ ಶಿಕ್ಷಣ" ವಾತ್ಸಾಯನನ ಕಾಮಸೂತ್ರ, ಪಂಪನ ವಿಕ್ರಮಾರ್ಜುನ ವಿಜಯ, ಒಂದನೆಯ ನಾಗವರ್ಮನ ಕರ್ನಾಟಕ ಕಾದಂಬರಿ, ಬಾಣ, ಕಾಳಿದಾಸ ಮುಂತಾದವರ ಗ್ರಂಥಗಳಿಂದ ಅರವತ್ನಾಲ್ಕು ವಿದ್ಯೆಗಳಲ್ಲಿ ಚಿತ್ರಕಲೆಯೂ ಒಂದು ಅಧ್ಯಯನದ ವಿಷಯವಾಗಿತ್ತು ಎಂಬುದು ಗಮನಾರ್ಹ ಅಂಶವಾಗಿದೆ. ಅದಲ್ಲದೆ ಪಾಶ್ಚಿಮಾತ್ಯ ದೇಶಗಳಲ್ಲಿ ಚಿತ್ರಕಲಾ ಶಿಕ್ಷಣದ ಹಂತಗಳನ್ನು ಇಲ್ಲಿ ವಿವರಿಸಲಾಗಿದೆ. ಭಾರತದಲ್ಲಿ ಕಲಾಶಿಕ್ಷಣದ ಕುರಿತು ರೂಪುಗೊಂಡ ಆಯೋಗಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

೨೦೧೯ರಲ್ಲಿ ಪ್ರಕಟವಾದ ಕೆ.ಬಿ. ಸಿದ್ಧಲಿಂಗಪ್ಪ ಅವರು ಸಂಪಾದಿಸಿದ "ರಜತರೇಖೆ" ಸ್ಮರಣ ಸಂಚಿಕೆ ಈ ಪುಸ್ತಕದಲ್ಲಿ ಎಂ.ಆರ್. ಬಾಳಿಕಾಯಿ ಇವರ 'ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಣದ ಮಹತ್ವ' ಎಂಬ ಲೇಖನದಲ್ಲಿ ಒಬ್ಬ ಉತ್ತಮವಾದ ಚಿತ್ರಕಲಾ ಶಿಕ್ಷಕನಲ್ಲಿರಬೇಕಾದಂತಹ ಉತ್ತಮವಾದ ಗುಣಗಳನ್ನು ಮತ್ತು ಕಲಾಶಿಕ್ಷಕನಿಗೆ ಅಥವಾ ಕಲಾವಿದರಿಗೆ ಇರಬೇಕಾದ ಅರ್ಹತೆಗಳನ್ನು ಕುರಿತು ತಿಳಿಸಿಕೊಟ್ಟಿದ್ದಾರೆ.

ನಾಡೋಜ ಡಾ. ವಿ.ಟಿ. ಕಾಳೆ ಇವರು 'ಚಿತ್ರಕಲಾ ಶಿಕ್ಷಣ' ಎಂಬ ಲೇಖನದಲ್ಲಿ ಚಿತ್ರಕಲೆಯ ಅಗತ್ಯತೆಯ ಬಗ್ಗೆ ಆದಿಮಾನವನು ಹಂತ ಹಂತವಾಗಿ ನಾಗರಿಕತೆಯೊಂದಿಗೆ ಚಿತ್ರಕಲೆಯನ್ನು ಯಾವ ರೀತಿಯಾಗಿ ಬೆಳೆಸಿಕೊಂಡು ಬಂದನು. ಚಿಕ್ಕ ಮಕ್ಕಳಿಗೆ ಪಾಠಗಳಲ್ಲಿ ಚಿತ್ರಗಳೊಂದಿಗೆ ವಿವರಿಸಿದ ಪಾಠಗಳನ್ನು ಅಭ್ಯಸಿಸುವಾಗ ಆ ಮಕ್ಕಳಲ್ಲಿನ ಕಲಿಕೆಯ ಪ್ರಕ್ರಿಯೆ ಹೇಗೆ ನಡೆಯುತ್ತದೆ. ಪ್ರಸ್ತುತ ಕಲಾಶಾಲೆಗಳಲ್ಲಿ ನಡೆಯುವ ಚಿತ್ರಕಲಾ ಶಿಕ್ಷಣದ ಪಾತ್ರದ ಬಗ್ಗೆ ವಿವರಿಸಿದ್ದಾರೆ.

೧.೬. ಅಧ್ಯಯನದ ವಿಧಾನ

"ಕರ್ನಾಟಕ ದೃಶ್ಯಕಲಾ ಶಿಕ್ಷಣದ ಸಮಸ್ಯೆ ಮತ್ತು ಸವಾಲುಗಳು" ಎಂಬ ವಿಷಯದ ಕುರಿತು ಕೈಗೊಳ್ಳಲಾಗಿರುವ ಪ್ರಸ್ತುತ ಅಧ್ಯಯನಕ್ಕೆ ಮಾಹಿತಿ ಸಂಗ್ರಹಿಸಲು ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿಗಳು

೨. ಆನುಷಂಗಿಕ ಆಕರ ಸಾಮಗ್ರಿಗಳು

೧. ಮೂಲ ಆಕರ ಸಾಮಗ್ರಿಗಳು

ಒಂದು ನಾಡಿನ ಸಾಂಸ್ಕೃತಿಕ, ಐತಿಹಾಸಿಕ, ಕಲೆ, ಶಿಕ್ಷಣ ಜನಜೀವನಗಳಂತಹ ವಿಷಯಗಳ ಬಗ್ಗೆ ಸಂಶೋಧನೆ ಮಾಡುವಾಗ ಕ್ಷೇತ್ರಕಾರ್ಯ ಅನಿವಾರ್ಯ ಮತ್ತು ಅಗತ್ಯವಾಗುತ್ತದೆ. ಮೂಲ ಆಕರ ಸಾಮಗ್ರಿಗಳಿಂದ ಮಾಹಿತಿ ಸಂಗ್ರಹಿಸಿಕೊಳ್ಳುವ ವಿಧಾನ ಸುಲಭ ಮಾರ್ಗವಾಗಿದೆ.

ಕ್ಷೇತ್ರಕಾರ್ಯದ ವಿಷಯ ಸಂಗ್ರಹಣೆ ಮಾಡುವುದರಲ್ಲಿ ಮೂಲ ಆಕರ ಸಾಮಗ್ರಿಯು ತುಂಬಾ ಮಹತ್ವದ ಪಾತ್ರ ವಹಿಸುತ್ತದೆ. ಬೇರೆ ಕ್ಷೇತ್ರಕ್ಕೆ ಹೋಲಿಸಿದಾಗ ಚಿತ್ರಕಲಾ ಸಂಶೋಧನೆಯು ಬೇರೆ ಸ್ವರೂಪದ್ದಾಗಿರುತ್ತದೆ. ಮೂಲ ಆಕರ ಸಾಮಗ್ರಿಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧.೧. ಸಂದರ್ಶನ

ಸಂಶೋಧನ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಂದರ್ಶನವೂ ಒಂದು ಪ್ರಮುಖ ಅಂಶವಾಗಿದೆ. "ದೃಶ್ಯಕಲಾ ಶಿಕ್ಷಣದ ಸಮಸ್ಯೆ ಮತ್ತು ಸವಾಲುಗಳು" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಕಲಾಶಾಲೆಗಳ ಪ್ರಿನ್ಸಿಪಾಲರು, ಉಪನ್ಯಾಸಕರು, ಕಲಾವಿದರು, ಹಿರಿಯ ಕಲಾವಿದರು, ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರು, ಪ್ರಾಥಮಿಕ ಶಾಲಾ ಚಿತ್ರಕಲಾ ಶಿಕ್ಷಕರು ಮತ್ತು ವಿದ್ವಾಂಸರನ್ನು ಸಂದರ್ಶಿಸಿ ಅವರೊಂದಿಗೆ ಚರ್ಚೆ ಮಾಡಿ, ಧ್ವನಿ ಮುದ್ರಿಸಿಕೊಂಡು ವಿಷಯ ಸಂಗ್ರಹಿಸಿಕೊಂಡು ವಿಷಯಕ್ಕೆ ಅನುಸಾರವಾಗಿ ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

೧.೨. ಛಾಯಾಚಿತ್ರ

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಇನ್ನೊಂದು ಅಂಶವಾಗಿರುವುದು ಛಾಯಾಚಿತ್ರ. ವಸ್ತುವಿನ ನಿಜಸ್ಥಿತಿಯನ್ನು ಅರಿಯಲು ಮತ್ತು ದಾಖಲು ಮಾಡುವುದಕ್ಕಾಗಿ ಛಾಯಾಚಿತ್ರಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ. ಪ್ರಮುಖವಾಗಿ ಕಲಾಶಾಲೆಗಳ ಹಿರಿಯ ಕಲಾವಿದರ ಸಂದರ್ಶನಕ್ಕೆ ಸಂಬಂಧಿಸಿದಂತೆ ಛಾಯಾಚಿತ್ರಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿ

"ಕರ್ನಾಟಕ ದೃಶ್ಯಕಲಾ ಶಿಕ್ಷಣದ ಸಮಸ್ಯೆ ಮತ್ತು ಸವಾಲುಗಳು" ಎಂಬ ವಿಷಯ ಕುರಿತಾಗಿ ಪ್ರಕಟವಾದಂತಹ ಲೇಖನಗಳು, ಪ್ರಕಟಿತ ಸಾಹಿತ್ಯ ಕೃತಿಗಳು, ಸಂಶೋಧನ ಪ್ರಬಂಧಗಳು,

ಗ್ರಂಥಗಳು, ಗೆಝೆಟಿಯರ್‌ಗಳು, ಸಂಶೋಧನಾ ಲೇಖನಗಳು, ಪ್ರಕಟಿತ, ಅಪ್ರಕಟಿತ ಪ್ರಬಂಧಗಳನ್ನು ಅಧ್ಯಯನಕ್ಕೆ ಆನುಷಂಗಿಕ ಆಕರ ಸಾಮಗ್ರಿಗಳನ್ನಾಗಿ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಟಿಪ್ಪಣಿಗಳು

೧. ಶಂಕರ ಪಾಟೀಲ, **ಚಿತ್ರಾಂತರಂಗ,** ೧೯೯೮, ಪು. ೭.

೨. ಎಂ.ಎಚ್. ಕೃಷ್ಣಯ್ಯ(ಸಂ), **ಕಲೆ ಮತ್ತು ರಸಾಸ್ವಾದನೆ,** ೧೯೮೯, ಪು. ೨೪.

೩. ಅ.ಲ. ನರಸಿಂಹನ್, ಎನ್. ಮರಿಶಾಮಾಚಾರ್(ಸಂ), **ಚಿತ್ರಕಲಾ ಪ್ರಪಂಚ,** ೧೯೯೩, ಪು. ೫೨೦.

೪. ಅದೇ, ಪು. ೫೨೦.

೫. ಅದೇ, ಪು. ೫೨೦.

೬. ಅದೇ, ಪು. ೫೯೧.

೭. ಎಸ್.ಸಿ. ಪಾಟೀಲ(ಸಂ), **ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು,** ೧೯೯೫, ಪು. ೧೧೫.

೮. ಅದೇ, ಪು. ೧೧೫.

೯. ಅ.ಲ. ನರಸಿಂಹನ್, ಎನ್. ಮರಿಶಾಮಾಚಾರ್(ಸಂ), **ಚಿತ್ರಕಲಾ ಪ್ರಪಂಚ,** ೧೯೯೩, ಪು. ೫೭೯.

೧೦. ಎಸ್.ಸಿ. ಪಾಟೀಲ, **ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು,** ೧೯೯೫, ಪು. ೧೧೫.

೧೧. ಮಂಜುನಾಥ ಕೆ. ಮಾನೆ, **ಚಿತ್ರಕಲಾ ಶಿಕ್ಷಣ,** ೨೦೦೧, ಪು. ೧೬.

೧೨. ಡಾ. ಎಸ್.ಸಿ. ಪಾಟೀಲ, **ವರ್ಣಸಂಚಯ,** ೨೦೦೧, ಪು. ೪೬.

❖❖❖

ಅಧ್ಯಾಯ : ಎರಡು

ಶೈಕ್ಷಣಿಕ ವ್ಯವಸ್ಥೆಯ ಐತಿಹಾಸಿಕ ಹಿನ್ನೆಲೆ

೨.೧. ಇತಿಹಾಸಪೂರ್ವ ಮತ್ತು ಆರಂಭಿಕ ಕಾಲಘಟ್ಟದ ಶೈಕ್ಷಣಿಕ ಪರಿಕಲ್ಪನೆ

ಸಿಂಧೂ ಕಣಿವೆ ಕಲೆ

ವೇದಕಾಲೀನ ಚಿತ್ರಕಲೆಯ ಪರಿಕಲ್ಪನೆ

ವೇದಗಳ ಕಾಲಾನಂತರದ ಚಿತ್ರಕಲೆಯ ಪರಿಕಲ್ಪನೆ

ಚಿತ್ರಕಲೆಯನ್ನು ಕುರಿತ ಪ್ರಾಚೀನ ಗ್ರಂಥಗಳು

ರಾಜಾಶ್ರಯದಲ್ಲಿ ಬೆಳೆದು ಬಂದ ಕಲಾಶಿಕ್ಷಣ

೨.೨. ಮಧ್ಯಕಾಲೀನ ಸಂದರ್ಭದ ಶೈಕ್ಷಣಿಕ ವ್ಯವಸ್ಥೆ

೨.೩. ವಸಾಹತುಕಾಲದ ಶೈಕ್ಷಣಿಕ ವ್ಯವಸ್ಥೆ

ಮದ್ರಾಸ್ ಕಲಾಶಾಲೆ

ಕಲ್ಕತ್ತಾ ಕಲಾಶಾಲೆ

ಮುಂಬೈ ಕಲಾಶಾಲೆ

ಲಾಹೋರ್ ಕಲಾಶಾಲೆ

ಅಧ್ಯಾಯ : ಎರಡು

ಶೈಕ್ಷಣಿಕ ವ್ಯವಸ್ಥೆಯ ಐತಿಹಾಸಿಕ ಹಿನ್ನೆಲೆ

ಮಾನವನು ಸುಸಂಸ್ಕೃತನಾಗಿ ಬದುಕಲು ಅವನ ನಾಗರಿಕತೆ, ಪ್ರಗತಿಯ ಪ್ರಬುದ್ಧ ಕಲ್ಪನೆ ಕಾರಣ. ಇಂದು ಮಾನವನು ಶಿಕ್ಷಣದ ಮೂಲಕ ಅತ್ಯಂತ ಉತ್ತಮವಾದ ಸಂಸ್ಕಾರವನ್ನು ರೂಪಿಸಿಕೊಂಡು ಅತ್ಯಂತ ಬುದ್ಧಿಶಾಲಿಯಾಗಿದ್ದಾನೆ. ಹೆಚ್ಚು ದುಡಿದರೂ, ಗಳಿಸಿದರೂ ಅವನಿಗೆ ಪ್ರಗತಿ ಅತೃಪ್ತಿಕರವಾಗಿರುತ್ತದೆ. ಈ ಎಲ್ಲ ಕಾರಣಗಳಿಂದ ಒಳ್ಳೆಯ ಗುಣಗಳನ್ನು ತಿಳಿಯಲು ತಿಳಿದವರಿಂದ ತಿಳಿಯದವನಿಗೆ ತಿಳಿಯುವಂತೆ ಮಾಡುವುದೇ ಶಿಕ್ಷಣವಾಗಿದೆ. ಇದು ಆದಿಯಿಂದ ಆಧುನಿಕದವರೆಗೂ ನಿರಂತರವಾಗಿ ಬೆಳೆದುಬಂದಿದೆ. ಹಾಗಾದರೆ ಶಿಕ್ಷಣ ಎಂಬ ಪದವನ್ನು ಇಂದು ನಾವು ಯಾವ ಅರ್ಥದಲ್ಲಿ ಉಪಯೋಗಿಸಿಕೊಳ್ಳುತ್ತಿದ್ದೇವೆ? ಈ ಶಿಕ್ಷಣ ಎಂಬ ಪದದ ಅರ್ಥವೇನು? ಇಂತಹ ಹಲವಾರು ಪ್ರಶ್ನೆಗಳು ಉದ್ಭವಿಸುತ್ತಿರುತ್ತವೆ.

"ಶಿಕ್ಷಣ(Eduction) ಎಂಬ ಪದದ ಅರ್ಥ ಬಲು ಗಟ್ಟಿ. ಅದು ಉಕ್ಕಿನ ಕಡಲೆ ಆಗಿದೆ ಎಂದರೆ ತಪ್ಪಿಲ್ಲ. ಗಾಂಧೀಜಿ ಅದನ್ನು ವಿವರಿಸಲು ಹೆಣಗಾಡಿದರು. ಜಾನ್‌ಡ್ಯೂಯಿ ಎಂಬ ಮಹನೀಯರು ಅದರ ಅರ್ಥ ಅರುಹಲು ತವಕಿಸಿದರು. ಹಿಂದೆ ಸಾಕ್ರೆಟೀಸ್, ಪ್ಲೇಟೋ ಕೂಡಾ ಸಾಕಷ್ಟು ಶ್ರಮಿಸಿದರು. ಆದರೆ ಇದರ ಅರ್ಥ ಹೇಳುವುದು ಅಷ್ಟು ಸುಲಭವಲ್ಲ. ಏಕೆಂದರೆ ಅದರ ವಿಸ್ತಾರ ಆಗಸದಷ್ಟು ವಿಶಾಲವಾಗಿದೆ ಎಂದರೆ ಪ್ರಮಾದವಲ್ಲ. ಎಲ್ಲರ ದೃಷ್ಟಿಯಲ್ಲಿ ಶಿಕ್ಷಣ ವಿದ್ಯೆಯಾಗಿ ಪರಿಣಮಿಸಿದೆ. ಗುರುಕುಲ, ವ್ಯಾಪಾರಿ ವರ್ಗ, ಒಕ್ಕಲಿಗ, ವೈದ್ಯ, ರಾಜಕಾರಣಿ, ತತ್ವಜ್ಞಾನಿ, ಶಿಕ್ಷಕ, ಕಲಾವಿದ, ಮಾನವಶಾಸ್ತ್ರಜ್ಞ ಈ ಎಲ್ಲರೂ ತಮ್ಮ ಕಕ್ಷೆಯಲ್ಲಿ ಅದರ ಅರ್ಥವನ್ನು ಅರುಹಿರುವರು. ಆದರೆ ಈ ವ್ಯಾಖ್ಯೆಯ ಮೂಲಕ ಈ ವಿಶಿಷ್ಟ ವ್ಯಕ್ತಿಗಳ ಜೀವನ ದೃಷ್ಟಿಕೋನ ಮಾತ್ರ ನಮಗೆ ಸ್ಫುಟವಾಗಿ ಹೊಳೆದೀತು. ಅವರ ವ್ಯಾಖ್ಯಾನಗಳೆಲ್ಲ ವಿರೋಧಾಭಾಸ ಹುಟ್ಟಿಸುವಂತಹವು."[1] ಈ ಎಲ್ಲಾ ಕಾರಣಗಳಿಂದ 'ಶಿಕ್ಷಣ' ಎಂಬ ಪದಕ್ಕೆ ಸೂಕ್ತವಾದ ಶಾಬ್ದಿಕ ಅರ್ಥವನ್ನು ತಿಳಿದುಕೊಳ್ಳಬೇಕಾಗಿದೆ.

ಕಲಿಯುವ ವೇಗ ಹಾಗೂ ಉತ್ತಮ ಶಿಕ್ಷಣ ಪಡೆಯುವ ಗುಣವು ವಿಶೇಷವಾಗಿ ಪ್ರಾಣಿ ವರ್ಗದಲ್ಲಿ ಎಂದರೆ ಅದು ಮನುಷ್ಯನಲ್ಲಿ ಎಂದು ಹೇಳಬಹುದು. ಮಾನವನು ಯಾವಾಗಲೂ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಿರುತ್ತಾನೆ. ತನ್ನ ಜೀವನದಲ್ಲಿ ಯಾವಾಗಲೂ ಹಿಂದೆ

ಬೀಳದೆ ಮುನ್ನುಗ್ಗಬೇಕೆನ್ನುವುದು ಅವನ ಅಭೀಪ್ಸೆ ಇಂತಹ ಹಲವಾರು ಆಸೆಗಳನ್ನು ನೆರವೇರಲು ಒಂದು ಶಕ್ತಿ ಸ್ಫೂರ್ತಿ ನೀಡುತ್ತದೆ ಅದೇ ಶಿಕ್ಷಣ.

"ಶಿಕ್ಷಣ ಎನ್ನುವ ಪದ ಆಂಗ್ಲ ಭಾಷೆಯ 'Eduction' ಪದಕ್ಕೆ ಸಮಾನಾರ್ಥ ಪದವಾಗಿದೆ. 'Education' ಎನ್ನುವ ಪದ ಲ್ಯಾಟಿನ್ ಭಾಷೆಯ 'Educatum' ಎನ್ನುವ ಮೂಲ ಪದದಿಂದ ವ್ಯುತ್ಪತ್ತಿ ಹೊಂದಿದ್ದು, ಲ್ಯಾಟಿನ್ ಭಾಷೆಯ 'Edicere' ಮತ್ತು 'Educare' ಎಂಬ ಪದಗಳಿಂದಲೂ 'Education' ಎನ್ನುವ ಪದ ವ್ಯುತ್ಪತ್ತಿ ಹೊಂದಿದೆ. 'Educere' ಎಂದರೆ 'To lead out' or to draw out' 'ಅರ್ಥಾತ್' 'ಹೊರಗೆ ತಾ' ಎಂದಾಗುತ್ತದೆ. ಅಂದರೆ ಮಗುವಿನಲ್ಲಿ ಆಂತರಿಕವಾಗಿ ಸುಪ್ತಗೊಂಡಿರುವ ಶಕ್ತಿ ಸಾಮರ್ಥ್ಯಗಳನ್ನು ಹೊರತಂದು ವಿಕಸಿಸುವಂತೆ ಮಾಡುವುದೇ ಶಿಕ್ಷಣ ಎಂದು ಅರ್ಥವಾಗುತ್ತದೆ."[೨]

೨.೧. ಇತಿಹಾಸ ಮತ್ತು ಆರಂಭಿಕ ಕಾಲದ ಶೈಕ್ಷಣಿಕ ಪರಿಕಲ್ಪನೆ

ಮಾನವನ ಹುಟ್ಟಿನೊಂದಿಗೆ ವಿಕಸಿಸುತ್ತಿರುವ ಆತನ ಮನಸ್ಸು ಬೇರೆ ಬೇರೆ ಸಂಗತಿಗಳನ್ನು ಕುರಿತು ಚಿಂತಿಸತೊಡಗಿತು. ಈ ಹಿನ್ನೆಲೆಯಲ್ಲಿ ಹಲವಾರು ಕಲಾ ಪ್ರಕಾರಗಳು ಆವಿಷ್ಕಾರಗೊಂಡು ರೂಢಿಗೆ ಬಂದವು. ಅವುಗಳಲ್ಲಿ ದೃಶ್ಯರೂಪದ ಚಿತ್ರ ಮತ್ತು ಶಿಲ್ಪಗಳು ಪ್ರಮುಖವಾಗಿವೆ.

ಮಾನವನು ತನ್ನ ಸುತ್ತಮುತ್ತಲಿನ ಪ್ರಕೃತಿಯ ರಮಣೀಯತೆಯಿಂದ ಸ್ಫೂರ್ತಿಗೊಂಡು ಉತ್ತೇಜಿತನಾಗಿ ತನ್ನಿಂದ ರಚಿಸಲ್ಪಟ್ಟ ಕಲಾಕೃತಿಗಳಲ್ಲಿ ಅದರ ಬಗೆಗೆ ಮೆಚ್ಚುಗೆಯನ್ನು ಅಭಿವ್ಯಕ್ತಿಪಡಿಸಿದ್ದಾನೆ. ಈ ಅಭಿವ್ಯಕ್ತಿಕ್ರಮ ಪ್ರಾರಂಭದ ಕಾಲದಿಂದಲೂ ಬೆಳೆದು ಬಂದಿದೆ. ಅವನ ಮೇಲೆ ಸುದೀರ್ಘವಾದ ಕೋಮಲ ಪ್ರಭಾವವನ್ನು ಬೀರಿದೆ. ದೇಶದ ಹಲವಾರು ಕಡೆಗಳಲ್ಲಿ ಪ್ರಾಗೈತಿಹಾಸಿಕ ಯುಗದ ಪ್ರಾಚೀನ ಗುಹಾಚಿತ್ರಗಳ ನಿದರ್ಶನಗಳನ್ನು ನಾವು ಕಾಣಬಹುದು. ಶಿಲಾಯುಗದ ಮಾನವನ ಕಾಲದಿಂದಲೂ ಕಲೆಗೆ ಸ್ಥಾನವಿತ್ತು. ಮೊದಲು ಬರವಣಿಗೆ ಇರಲಿಲ್ಲ. ಆದ್ದರಿಂದ ಕಲೆಯನ್ನು ಪ್ರಾರಂಭದ ಭಾಷೆ ಎನ್ನಬಹುದು. ಮಾತನಾಡುವುದು ಶಾಬ್ದಿಕ ಭಾಷೆಯಾದರೆ, ಚಿತ್ರಕಲೆ (ನೋಡುವ) ದೃಶ್ಯ ಭಾಷೆಯಾಗಿದೆ.

ಲಲಿತಕಲೆಗಳಲ್ಲಿ ಬಹುಮುಖ್ಯವಾದ ಚಿತ್ರಕಲೆಯೂ ಮಾನವನ ಆಂತರಿಕ ಮನಸ್ಸಿನೊಂದಿಗೆ ತೀರಾ ಹಿಂದಿನಿಂದ ಸಂಬಂಧಗಳನ್ನು ರೂಪಿಸಿಕೊಂಡು ಬಂದಿದೆ. ಆದಿಮಾನವನ ಕಾಲದಲ್ಲಿಯೇ ಮಾನವನು ಚಿತ್ರಗಳನ್ನು ರಚನೆ ಮಾಡಿರುವ ಕುರುಹುಗಳು ಕಂಡುಬಂದಿವೆ. ಇವನ್ನು ಚಿತ್ರಕಲೆಯನ್ನು ಸಂಪರ್ಕ ಸಾಧನವಾಗಿ ಪ್ರಮುಖವಾಗಿ ಬಳಸುತ್ತಿದ್ದುದು ಕಂಡುಬರುತ್ತದೆ. ಅದರ ಜೊತೆಗೆ ಸಂತೋಷ ಸಂಭ್ರಮಗಳ, ಆಚರಣೆಗಳ, ಸಂದರ್ಭದ ಹಿನ್ನೆಲೆಯಲ್ಲಿ ಚಿತ್ರಗಳನ್ನು ರಚನೆ ಮಾಡಿರುವುದು ಕಂಡುಬರುತ್ತದೆ. ಪ್ರಾಚೀನ ಕಾಲದ ಮಾನವನ ದೈನಂದಿನ ಜೀವನದಲ್ಲಿ ಘಟಿಸುವ ಘಟನಾವಳಿಗಳನ್ನು ಸುಖ-ದುಃಖ ಮುಂತಾದ ಉದ್ವೇಗಗಳನ್ನು ಚಿತ್ರಗಳ ಮೂಲಕ ವ್ಯಕ್ತಪಡಿಸಿರುವರು. ಈ ಕಾರಣದಿಂದಾಗಿ ಅವರು ವಾಸಿಸುತ್ತಿದ್ದ ಸ್ವಂತ ಇಲ್ಲವೇ ಸ್ವಂತವಲ್ಲದ

ಇತರ ಜಾಗೆಗಳಲ್ಲಿ, ಗುಹೆಗಳು ಮತ್ತು ಶಿಲಾಶ್ರಯಗಳಲ್ಲಿ ಗೀಚತೊಡಗಿದನು. ಇದೇ ಮುಂದೆ ಹೋದಂತೆಲ್ಲಾ ಚಿತ್ರ ರಚನೆಗೆ ಮೂಲ ಪ್ರೇರಣೆಯಾಯಿತು. ಆದಿಮಾನವನು ತನ್ನ ಹೊಟ್ಟೆಪಾಡಿಗಾಗಿ ಬೇಟೆಯನ್ನೇ ತನ್ನ ಕಸುಬನ್ನಾಗಿಸಿಕೊಂಡಿದ್ದನು. ಈ ಕೆಲಸದ ಅನುಭವದಿಂದ ಅವನು ಮಾಡುತ್ತಿದ್ದಂತಹ ದಿನನಿತ್ಯದ ಕೆಲಸಗಳನ್ನು ತನ್ನ ವಿಷಯವಸ್ತುಗಳನ್ನಾಗಿಸಿಕೊಂಡನು. ಹೀಗೆ ಆದಿಮಾನವನ ಚಿತ್ರಕಲೆ ಮೊದಲಾಯಿತು.

"ಪ್ರಪಂಚದ ಕೆಲವು ಭಾಗಗಳಲ್ಲಿ ಗುಹಾಚಿತ್ರಗಳು ಮತ್ತು ಬಯಲು ಬಂಡೆ ಚಿತ್ರಗಳು ಶೋಧವಾಗಿವೆ. ಸ್ಪೇನ್, ಫ್ರಾನ್ಸ್, ಆಫ್ರಿಕಾ, ಜರ್ಮನಿ, ಇಂಗ್ಲೆಂಡ್, ರಷ್ಯಾ, ಜಪಾನ್ ಮತ್ತು ಭಾರತಗಳಲ್ಲಿ ಶೋಧವಾದ ಗುಹಾಚಿತ್ರಗಳು ಈಗಾಗಲೇ ಜಗತ್ಪ್ರಸಿದ್ಧವಾಗಿವೆ. ೧೮೩೭ರಲ್ಲಿ ಸರ್ ಜಾರ್ಜ್ ಗ್ರೆ ಅವರಿಂದ ಆಸ್ಟ್ರೇಲಿಯಾದಲ್ಲಿನ ವರ್ಣಚಿತ್ರಿತ ಗುಹೆಗಳ ಶೋಧನೆ ಪ್ರಥಮವಾದರೂ ಬಹುಶಃ ೧೮೭೯ರ ಅಲ್ತಮಿರದಲ್ಲಿನ ವರ್ಣಚಿತ್ರಿತ ಗುಹೆಗಳ ಶೋಧನೆ"[೩] ಆಯಿತು.

ಭಾರತದಲ್ಲೂ ಗುಹಾಚಿತ್ರ ಮತ್ತು ಬಂಡೆಚಿತ್ರಗಳ ಶೋಧನೆ ಆಕಸ್ಮಿಕವಾಗಿ ಪ್ರಾರಂಭವಾಯಿತೆಂದು ಹೇಳಬಹುದು. "ಮಿರ್ಜಾಪುರ ಜಿಲ್ಲೆಯ ಶೊಹಗಿ ಪಟ ಚಿತ್ರಗಳು ೮೦ರ ದಶಕದಲ್ಲಿ ಹೂಬರ್ಟ್ ನಾಕ್ಸ್ ಅವರು ಬಳ್ಳಾರಿಯ ಕಪ್ಪಗಲ್‌ನಲ್ಲಿ ಬಯಲು ಬಂಡೆಯಲ್ಲಿ ಕೊರೆದ ಚಿತ್ರಗಳನ್ನು ಶೋಧಿಸಿದರು."[೪] ಭಾರತದಲ್ಲಿ ಇತರ ಭಾಗಗಳಲ್ಲಿ ಮಾನವನ ಚಿತ್ರಗಳು ಕಂಡುಬಂದರೆ, "ಕರ್ನಾಟಕದಲ್ಲಿ ಕೊಪ್ಪಳ - ಹಿರೇಬೆಣಕಲ್, ಹಂಪಿ, ಪಟ್ಟದಕಲ್ - ಕುಟುಕನಕೇರಿ-ಐಹೊಳೆ, ಚಿತ್ರದುರ್ಗ ಮತ್ತು ವಿರಳವಾಗಿ ಪಶ್ಚಿಮ ಘಟ್ಟಗಳ ಪ್ರದೇಶಗಳಲ್ಲಿ ಪ್ರಾಗೈತಿಹಾಸಿಕ ಚಿತ್ರಗಳಿರುವುದನ್ನು ಗುರುತಿಸಲಾಗಿದೆ."[೫] ಕರ್ನಾಟಕದ ಪ್ರಾಗೈತಿಹಾಸಿಕ ಚಿತ್ರಗಳಲ್ಲಿ ಅತ್ಯಂತ ಪುರಾತನ ಚಿತ್ರಗಳು ಬಾದಾಮಿ ಪರಿಸರದಲ್ಲಿ ಕಂಡುಬಂದಿವೆ. ಸುಮಾರು ೬೦ ಸಾವಿರ ವರ್ಷದ ಹಿಂದಿನ ಚಿತ್ರಗಳು ಈ ಪ್ರದೇಶದಲ್ಲಿ ಶೋಧಿಸಲ್ಪಟ್ಟಿವೆ. ಕರ್ನಾಟಕದ ಪ್ರಾಗೈತಿಹಾಸಿಕ ಚಿತ್ರಗಳನ್ನು ಗಮನಿಸಿದಾಗ ಹಲವಾರು ವಸ್ತುವಿಷಯಗಳಿಗೆ ಸಂಬಂಧಿಸಿದಂತಹ ಚಿತ್ರಗಳು ಕಂಡುಬರುತ್ತವೆ.

ಆದಿಮಾನವನು ತನ್ನ ಅನಿಸಿಕೆಗಳನ್ನು ಮತ್ತೊಬ್ಬರಿಗೆ ತಿಳಿಸಲು ಗೀಚುವ ಇಲ್ಲವೆ ಕೊರೆಯುವುದರ ಮೂಲಕ ತನ್ನ ಸಂದೇಶವನ್ನು ತಿಳಿಸುತ್ತಿದ್ದ. ತಾನು ಅನುಭವಿಸಿದ ಮತ್ತು ಮನಸ್ಸಿನಲ್ಲಿ ಕಲ್ಪಿಸಿಕೊಂಡ ಚಿತ್ರಗಳನ್ನು ಸೃಷ್ಟಿಸಲು ಪ್ರಾರಂಭಿಸಿದ. ಈಟಿಯಿಂದ ಚುಚ್ಚಲ್ಪಟ್ಟ ಪ್ರಾಣಿ, ಪ್ರಾಣಿಗಳ ಬೇಟೆಗೆ ಹೋಗುವ ಮುಂಚೆ ಯಶಸ್ಸಿನ ಬೇಟೆಯನ್ನು ಸೂಚಿಸುವ ಸಮೂಹ ನೃತ್ಯ ಇವೇ ಮೊದಲಾದ ಚಿತ್ರಗಳನ್ನು ಬರೆಯುವ ಪದ್ಧತಿ ಬೆಳೆಯಿತು. ಗೂಳಿಯ, ಕಾಡುಗೋಣದ ಠೀವಿ ನಿಲುವು, ಜಿಂಕೆಯ ವೇಗದ ನಡಿಗೆ, ಕಡ್ಡಿ ಮನುಷ್ಯಾಕೃತಿ ಒಟ್ಟಿನಲ್ಲಿ ಇಂತಹ ಮೂಲಭೂತ ಅಂಶಗಳಿಂದ ಅವು ಜೀವಕಳೆಯಿಂದ ತುಂಬಿರಬೇಕು. ಇದರಿಂದ

ತಿಳಿಯುವುದೇನೆಂದರೆ ಒಟ್ಟಾರೆಯಾಗಿ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದರೆ ಆದಿಮಾನವನ ಕಾಲದಲ್ಲಿ ಶಿಕ್ಷಣವು ಔಪಚಾರಿಕವಾಗಿ ನಡೆಯದಿದ್ದರೂ ನೋಡಿ, ಕಲಿ, ಮಾಡಿ, ತಿಳಿ ತನ್ನಷ್ಟಕ್ಕೆ ತಾನೇ ಕಲಿತುಕೊಳ್ಳಲಿ ಎಂಬಂತೆ ಅನೌಪಚಾರಿಕವಾಗಿ ಕಲಾಶಿಕ್ಷಣ ಹಿಂದಿನ ಕಾಲದಲ್ಲಿ ಬೆಳೆದಿರಬಹುದು.

ಸಿಂಧೂ ಕಣಿವೆ ಕಲೆ

"ಸಿಂಧೂ ತೀರದ ಪ್ರಾಚೀನ ನಾಗರಿಕತೆಯ ಅವಶೇಷಗಳು ವಿದ್ವಾಂಸರನ್ನು ಚಕಿತಗೊಳಿಸಿದವು. ಭರತಖಂಡದ ಸಂಸ್ಕೃತಿಯ ಇತಿಹಾಸವನ್ನು ಸಾವಿರಾರು ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ಯುವುದು ಭಾರತೀಯ ಸಂಸ್ಕೃತಿಯ ವಿಕಾಸಕ್ಕೆ ಕಾರಣವಾದ ಹಿನ್ನೆಲೆಯ ಶಕ್ತಿಯೊಂದನ್ನು ಸಿಂಧೂ ಸಂಸ್ಕೃತಿ ಪರಿಚಯ ಮಾಡಿಕೊಟ್ಟಿತು. ಸಿಂಧೂ ಸಂಸ್ಕೃತಿಯೂ ಒಂದು ಸ್ಪಷ್ಟವಾದ ರೂಪವನ್ನು ಪಡೆಯುವುದಕ್ಕೆ ಇದು ಕೊಡುಗೆಯೆಂಬುದು ವಿದ್ವಾಂಸರ ಅಭಿಪ್ರಾಯ"[೬]ವಾಗಿದೆ.

ಬೇರೆ ಬೇರೆ ಕಲೆಗಳಿಗಿರುವಂತೆ ಚಿತ್ರಕಲೆಗೂ ಇತಿಹಾಸವಿದೆ. ಪ್ರಾಚೀನ ಕಾಲದಿಂದಲೂ ಮಾನವನ ಸಂಗಾತಿಯಾಗಿ ಚಿತ್ರಕಲೆ ಬೆಳೆದುಬಂದಿದೆ. ತನ್ನಲ್ಲಿ ಇರುವ ಭಾವನೆಗಳನ್ನು ಮನುಷ್ಯನು ಸಂಗೀತದಲ್ಲಿ ನಾದ ವಿನ್ಯಾಸದ ಮೂಲಕ, ನೃತ್ಯದಲ್ಲಿ ದೈಹಿಕ ಚಲನೆ ಮತ್ತು ಹಾವಭಾವಗಳಿಂದ ವ್ಯಕ್ತಪಡಿಸಿದರೆ ವರ್ಣ ಮತ್ತು ರೇಖೆಗಳ ಒಂದುಗೂಡಿಸುವಿಕೆಯಿಂದ ಚಿತ್ರಗಳನ್ನು ಭಾವನಾತ್ಮಕವಾಗಿ ಹೊರಹಾಕಲು ಪ್ರಯತ್ನಿಸಿದ್ದಾನೆ. ನವಶಿಲಾಯುಗದ ವೇಳೆಗಾಗಲೇ ಚಿತ್ರರಚನೆಯ ಪ್ರವೃತ್ತಿ ಮಾನವರಲ್ಲಿ ಬೆಳೆದುಬಂದಿದ್ದುದಕ್ಕೆ ಸಾಕ್ಷಿಗಳಿವೆ. ಮೊಹೆಂಜೊದಾರೋ-ಹರಪ್ಪಾಗಳಲ್ಲಿ ಇರುವಂತಹ ಚಿತ್ರಗಳನ್ನು ಈಜಿಪ್ಟ್‌ನ ಪ್ರಾಚೀನ ನಾಗರಿಕತೆಗೆ ಸೇರಿಸಬಹುದು.

ಮೊಹೆಂಜೊದಾರೋ, ಹರಪ್ಪಾಗಳಲ್ಲಿ ಸಿಂಧೂ ಕಣಿವೆಯ ಸಂಸ್ಕೃತಿಯ ಬಗ್ಗೆ ೧೯೨೧ರಿಂದೀಚೆಗೆ ಸಂಶೋಧನಗಳು ನಡೆದಿವೆ. ಮೊಹೆಂಜೊದಾರೋವು ಪಾಕಿಸ್ತಾನದಲ್ಲಿ ದಕ್ಷಿಣದ ಸಿಂಧ ರಾಜ್ಯದಲ್ಲೂ, ಹರಪ್ಪಾದ ಉತ್ತರದಲ್ಲಿ ಮಂಟಗುಮರಿ ಜಿಲ್ಲೆಯಲ್ಲೂ ಇವೆ. ಈ ಇತಿಹಾಸಪೂರ್ವದ ಕೇಂದ್ರಗಳಲ್ಲಿ ಚಿತ್ರಕಲೆಯಿಂದ ಕೂಡಿದ ತುಂಡು ಮಡಕೆಗಳು, ಮುದ್ರೆಗಳು, ಕಲಾವಸ್ತುಗಳು, ಮಣ್ಣಿನ ಮೂರ್ತಿಗಳು, ಆಭರಣಗಳು, ಬರಹಗಳು, ಅಲಂಕಾರ ಮಾದರಿಯ ಚಿತ್ರಗಳು ಲೋಹದ ವಿಗ್ರಹಗಳು ಸಿಕ್ಕಿವೆ. ಇವೆಲ್ಲವುಗಳಲ್ಲಿ ಪ್ರಾಚೀನ ಚಿತ್ರಕಲೆಯನ್ನು ಕಾಣಲು ಸಾಧ್ಯ. ಇವುಗಳಿಗೆ ಲೇಪಿಸಿದ ಬಣ್ಣಗಳನ್ನು ಅನೇಕ ವರ್ಷಗಳ ನಂತರವೂ ಗುರುತಿಸಬಹುದಾಗಿದೆ. ಈ ವಸ್ತುಗಳು "ಕ್ರಿ.ಪೂ. ೩೦೦೦ದಿಂದ ಕ್ರಿ.ಪೂ. ೨೦೦೦ದ ಕಾಲಕ್ಕೆ ಸೇರಿದವುಗಳಾಗಿವೆ. ಇದರಿಂದ ನಮಗೆ ಭಾರತೀಯ ಚಿತ್ರಕಲೆಯ ಇತಿಹಾಸವೂ ಸಾಮಾನ್ಯವಾಗಿ ೫೦೦೦ ವರ್ಷಗಳನ್ನು ಹೊಂದಿದೆ ಎಂಬುದು ತಿಳಿದುಬರುತ್ತದೆ."[೭]

ಕಲಾ ಸಂಪತ್ತಿನಿಂದ ಕೂಡಿದ ಮೊಹೆಂಜೊದಾರೋ ಮತ್ತು ಹರಪ್ಪಾಗಳಲ್ಲಿ ಈ ಕಲೆಯ ನಿಜವಾದ ಚಿತ್ರಣಗಳು ಚೆನ್ನಾಗಿ ಮೂಡಿಬಂದಿವೆ. ನದಿಯನ್ನು ದಾಟುವಾಗ ಒಬ್ಬ ಮನುಷ್ಯನು

ಹಸುವಿನ ಬಾಲವನ್ನು ಹಿಡಿದಿರುವ ಚಿತ್ರ, ತಾಯಿ-ಮಗು, ಗಿಡ, ಮರಗಳು, ಜಿಂಕೆ, ಒಂಟೆ, ಹುಲಿ, ಆಡು ಹೀಗೆ ನೈಜ ರೀತಿಯಲ್ಲಿ ಚಿತ್ರಿಸಲಾಗಿದೆ.

ಕಲ್ಲು, ಲೋಹ, ದಂತಗಳ ನೂರಾರು ಮುದ್ರೆಗಳು ದೊರೆತಿದ್ದು ಅವುಗಳ ಮೇಲೆ ಸಂಕೇತಗಳಿರುವುದನ್ನು ಗಮನಿಸಬಹುದು. ಆ ಮುದ್ರೆಗಳ ಮೇಲೆ ಹೋರಿ ಮತ್ತು ಇನ್ನು ವಿವಿಧ ಕೆಲವು ಪ್ರಾಣಿಗಳ ಚಿತ್ರಗಳನ್ನು ಕೊರೆಯಲ್ಪಟ್ಟಿವೆ, ಒಂದರಲ್ಲಿ ಭಾರತೀಯ ಸಂಪ್ರದಾಯದಂತೆ ಕಾಲು ಮಡಚಿ ಕುಳಿತಿರುವುದಿದೆ. ಕಿರೀಟದಂತಹ ಎರಡು ಕೋಡುಗಳು ಅವನ ತಲೆಯ ಮೇಲೆ ಇವೆ. ಇವನ ಸುತ್ತಲೂ ನಾಲ್ಕು ಪ್ರಾಣಿಗಳಾದ ಹುಲಿ, ಹೋರಿ, ಖಡ್ಗಮೃಗ, ಆನೆಗಳು ನಿಂತಿರುವುದನ್ನು ಇಲ್ಲಿ ಉಲ್ಲೇಖಿಸಿದ್ದಾರೆ. ಇದರಿಂದ ಪುರಾತನ ಕಾಲದಲ್ಲೇ ಭಾರತೀಯರು ಅಂತಹ ಕಲಾತಂತ್ರವನ್ನು ರೂಢಿಗತ ಮಾಡಿಕೊಂಡಿದ್ದರು ಎಂಬುದನ್ನು ತಿಳಿಯಬಹುದು.

ವೇದಕಾಲೀನ ಚಿತ್ರಕಲೆಯ ಪರಿಕಲ್ಪನೆ

ಪುರಾತನ ಸಿಂಧೂ ಕಣಿವೆ ಕಲೆಯು ಮಾಯವಾಗುತ್ತಿದ್ದಂತೆ ವೇದಕಾಲದ ಸಂಸ್ಕೃತಿ ರೂಪುಗೊಂಡಿರುವುದನ್ನು ಕಾಣಬಹುದು. ವೇದ ಎಂದರೆ ತಿಳಿದುಕೊಳ್ಳುವುದು ಎಂದರ್ಥ. ಋಗ್ವೇದ, ಸಾಮವೇದ, ಯಜುರ್ವೇದ ಮತ್ತು ಅಥರ್ವಣ ವೇದಗಳೆಂಬ ನಾಲ್ಕು ವೇದಗಳಿಂದ ಜ್ಞಾನ ಪ್ರಸಾರವಾಗುತ್ತಿತ್ತು. "ವೇದಕಾಲದ ಶಿಕ್ಷಣ ಗುರುಕುಲದಲ್ಲಿ ನಡೆಯುತ್ತಿತ್ತು. ನಗರ ಪ್ರದೇಶದ ಗದ್ದಲಗಳಿಂದ ಬಹುದೂರದಲ್ಲಿ ನಿಸರ್ಗ ಸಂಗಮದಲ್ಲಿ, ಶಾಂತ ವಾತಾವರಣಗಳಲ್ಲಿ ಶಾಲೆಗಳಿರುತ್ತಿದ್ದವು. ಮಾನಸಿಕ ಮತ್ತು ಇಂದ್ರಿಯಗಳ ಮೇಲಿನ ನಿಯಂತ್ರಣಕ್ಕೆ ಉಪನಯನದಂತಹ ಧಾರ್ಮಿಕ ವಿಧಿ ಅಗತ್ಯವೆಂದು ನಂಬಿ ಅದನ್ನು ನೆರವೇರಿಸಿದ ನಂತರವೇ ತಾಯ್ತಂದೆಗಳನ್ನು ಬಿಟ್ಟು ಬಹುದೂರದ ಗುರುಕುಲಕ್ಕೆ ಅಧ್ಯಯನಕ್ಕಾಗಿ ಬಂದು ಸೇರುತ್ತಿದ್ದರು."[೮]

ಲಲಿತಕಲೆಗಳು ಗುರುಕುಲ ಪದ್ಧತಿಯಲ್ಲಿ ಕಲ್ಪಿಸಲ್ಪಡುತ್ತಿದ್ದವು. ಇದಕ್ಕೆ ಕಾರಣ ಗುರುವಿನ ಕಣ್ಣ ಮುಂದೆ ಯಾವಾಗಲೂ ಶಿಷ್ಯ ಇರುವುದರಿಂದ ಸಂದರ್ಭ ಬಂದಾಗಲ್ಲೆಲ್ಲಾ ಆ ಕಲೆಗಳ ವಿವಿಧ ಆಯಾಮಗಳನ್ನು ಕುರಿತು ಹೇಳಿಕೊಡಲು ಅನುಕೂಲವಾಗುತ್ತಿತ್ತು. ಶಿಷ್ಯನಾದವನು ಒಂದು ಪರಂಪರೆಯನ್ನು ಹೊತ್ತು ತನ್ನ ಸಮಕಾಲೀನತೆಯೊಂದಿಗೆ ನವೀಕರಿಸಿ ಮುಂದಿನ ತಲೆಮಾರಿನವನಾದ ಶಿಷ್ಯನಿಗೆ ರವಾನಿಸುತ್ತಿದ್ದ. ಹೀಗೆ ಎರಡು ಮೂರು ತಲೆಮಾರಿನ ಸೇತುವೆಯಾಗುತ್ತಾನೆ. ತನಗೆ ಶಿಷ್ಯನಾಗುವನು ತನ್ನ ಹೆಸರು ಉಳಿಸಬಲ್ಲನೆಂಬ ನಿರೀಕ್ಷೆ ಇದ್ದರಷ್ಟೇ ಮನಪೂರ್ವಕವಾಗಿ ತನಗೆ ತಿಳಿದಿರುವ ತಂತ್ರ ಮಾಧ್ಯಮಗಳನ್ನು ತಿಳಿಸಿರುವನು. ವಿದ್ಯಾರ್ಥಿಗಳಿಗೆ ತನ್ನದೇಯಾದ ಶೈಲಿ ರೂಪಿತವಾಗುವವರೆಗೂ ಗುರುವಿನ ಪ್ರಭಾವ ಶಿಷ್ಯನ ಮೇಲೆ ಆಗುವುದು ಸಹಜ. ವರ್ಣಸಂಯೋಜನೆ ಆಕೃತಿಗಳ ನಿರೂಪಣೆಯಲ್ಲಿ ಅನುಕರಣೆ ಅನಿವಾರ್ಯ; ಅಂತೆಯೇ ಶಿಷ್ಯನಾದವನು ತನ್ನ ಮನಸ್ಸಿಗೆ ಒಗ್ಗುವ, ತಾನು ಬಯಸಿದಂತೆ ಶಿಕ್ಷಣ ನೀಡಬಲ್ಲ ಗುರುವನ್ನು ಆರಿಸಿಕೊಂಡು ದೇಶಾಂತರ ಹೊರಡುವುದು ನಿಜವಾದ ವಿದ್ಯಾರ್ಥಿಯ ಲಕ್ಷಣಗಳಲ್ಲಿ ಒಂದು.

ವೇದ ಮತ್ತು ಮಹಾಭಾರತದ ಕಾಲದ ಚಿತ್ರಗಳು ಈಗ ದೊರೆಯುವುದಿಲ್ಲ. ಆದರೂ ಆಗ ಚಿತ್ರಕಲೆಯೂ ಇತ್ತು ಎಂಬುದು ಅವುಗಳಲ್ಲಿರುವ ಮಾತುಗಳಿಂದ ನಮಗೆ ಗೊತ್ತಾಗುತ್ತದೆ. ವೇದಗಳ ಕಾಲದ ಚಿತ್ರಕಲೆ ಧಾರ್ಮಿಕ ಸ್ವರೂಪವನ್ನು ತಳೆದ್ದಿತು. "ಋಗ್ವೇದದಲ್ಲಿ ಅಗ್ನಿ ದೇವರನ್ನು ಸ್ತುತಿ ಮಾಡುವ ಶ್ಲೋಕಗಳಿವೆ. ಅದರಲ್ಲಿ "ದೇವರ ಚಿತ್ರವನ್ನು ಚರ್ಮದ ಹಾಳೆಯ ಮೇಲೆ ಚಿತ್ರಿಸುತ್ತೇನೆ" ಎಂಬ ವಾಕ್ಯವಿದೆ. ಚರ್ಮದ ಹಾಳೆಗಳ ಮೇಲೆ ಚಿತ್ರಿಸಿದ ಅನೇಕ ರೂಪಗಳನ್ನು ಪರ್ಶಿಯಾ ಮತ್ತು ಮೊಗಲರ ಶೈಲಿಯ ಚಿತ್ರಗಳಲ್ಲಿ ಈಗಲೂ ಕಾಣಬಹುದು. ಯಜ್ಞಗಳನ್ನು ಮಾಡುವಾಗ ವೇದಿಕೆಗಳನ್ನು ಬಣ್ಣ, ಇಟ್ಟಿಗೆಗಳಿಂದ ನಿರ್ಮಿಸುತ್ತಿದ್ದರು. ವೇದಿಕೆಯನ್ನು ವಿವಿಧ ವರ್ಣಗಳಿಂದ ಅಲಂಕರಿಸುತ್ತಿದ್ದರು.[೯]

ವೇದ ಕಾಲದ ಚಿತ್ರಕಾರರು ಋಷಿಮುನಿಗಳ ಅನೇಕ ಭಾವ - ಭಂಗಿಗಳನ್ನು ಚಿತ್ರಿಸಿದ್ದರು. ವಶಿಷ್ಠರು ಯಜ್ಞ ನಡೆಸುತ್ತಿರುವ ಚಿತ್ರ, ಸಪತ್ನಿಕರಾಗಿರುವ ಚಿತ್ರ, ಪತ್ನಿಯೊಡನೆ ಕುಳಿತಿರುವ ಅಂಗಿರಸ ಋಷಿ ಮೊದಲಾದ ಅಪೂರ್ವ ಚಿತ್ರಗಳನ್ನು ಹಲವು ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಿರುವುದು ಕಂಡುಬರುತ್ತದೆ. ಆ ಚಿತ್ರಗಳ ಕೆಳಗೆ ಬರೆದಿರುವ ವಾಕ್ಯಗಳಿಂದ ಅವರನ್ನು ಹೆಸರಿಸಬಹುದಾಗಿದೆ. ಅವೆಲ್ಲವೂ ವೇದಕಾಲದ ಪರಂಪರೆಯಿಂದ ರಚನೆಯಾದವುಗಳೆಂದು ತಿಳಿಯಲಾಗಿದೆ. ಸೂರ್ಯೋದಯ ಚಿತ್ರ, ಬೆಂಕಿ ತಗುಲಿ ಉರಿಯುತ್ತಿರುವ ಪರ್ವತ ಚಿತ್ರಗಳು, ಜೈನಕಲ್ಪಸೂತ್ರ ಎಂಬ ಕರಡು ಪ್ರಾಚೀನ ಸಾಹಿತ್ಯದಲ್ಲಿ ತೋರುತ್ತವೆ. ಅವು ವೇದಕಾಲದ ಚಿತ್ರ ಪರಂಪರೆಯನ್ನು ಸಮರ್ಥಿಸುತ್ತವೆ ಎಂಬುದಾಗಿ ಡಾ. ಆನಂದಕುಮಾರಸ್ವಾಮಿಯವರು ಹೇಳಿದ್ದಾರೆ.

ಕಲೆ ಮತ್ತು ಸಾಹಿತ್ಯ ಇವೆರಡು ಒಂದುಗೂಡಿಸಿಕೊಂಡು ಬೆಳವಣಿಗೆಯನ್ನು ಪಡೆದಿವೆ. ಶಿಲ್ಪ ಮತ್ತು ಚಿತ್ರ ಕಲೆಗಳು ಆ ಯುಗದ ಕಲೆಗಳಿಗೆ ಸಂಬಂಧಿಸಿದಂತೆ ಇವುಗಳು ಹುಟ್ಟಿಕೊಂಡವು. ಕಲೆಗಳನ್ನು ಅನೇಕ ಮಾಧ್ಯಮಗಳ ಮೂಲಕ ಸೌಂದರ್ಯ ಸಂಭೂತಿಯನ್ನು ತೋರಿಸುವುದು ವಿಶಿಷ್ಟ ಮತ್ತು ಏಕೈಕವಾದಂತಹದು, ಈ ವೈದಿಕ ಯುಗ. "ಶಿಶುನಾಗ, ಮೌರ್ಯ ಮತ್ತು ಗುಪ್ತರ ಕಾಲದಲ್ಲಿ ಕಂಡುಬರುವ ಮಹಾನ್ ಕಲಾಸಮೃದ್ಧಿಯ ಚರಮೋನ್ನತಿಯ ಸೂತ್ರವು ಇದೇ ಯುಗದಲ್ಲಿ ನಿರ್ಮಾಣವಾಗಿತ್ತು. ಜೈನ - ಬೌದ್ಧರ ಸ್ತೂಪಗಳು ವೈದಿಕ ಯುಗದ ಯಾವುದೇ ಪ್ರಮುಖ ವ್ಯಕ್ತಿಯ ಸ್ಮರಣೆಗಾಗಿ ಮಾಡಿದ ಮಣ್ಣಿನ ಸ್ತೂಪಗಳ ವಿಕಸಿತ ರೂಪಗಳು. ಅವುಗಳಲ್ಲಿ ಕುಂಭ(ಕೊಡ)ದೊಳಗೆ ಅಸ್ಥಿ(ಮೂಳೆ)ಗಳನ್ನು ಇಡಲಾಗುತ್ತಿತ್ತು. ನಂತರ ಅದರ ಮೇಲೆ ಅಲಂಕೃತವಾದ ಸ್ತಂಭವನ್ನು ನಿರ್ಮಿಸುತ್ತಿದ್ದರು. ಈ ಅಭಿಪ್ರಾಯಕ್ಕೆ ಋಗ್ವೇದದಲ್ಲಿ ಆಧಾರಗಳಿವೆ."[೧೦]

"ವಿಶಾಲ, ಸ್ವರ್ಣಮಯ ದ್ವಾರದೇವಿಯರನ್ನು ಯಜ್ಞಶಾಲೆಗಳ ನಾಲ್ಕು ಚೌಕಟ್ಟುಗಳಲ್ಲಿ ಚಿತ್ರಿಸಿದ ಅಲಂಕೃತ ಸ್ತ್ರೀ ಆಕೃತಿಗಳನ್ನು ನೋಡುತ್ತೇವೆ. ಯಜ್ಞಶಾಲೆಗಳ ಬಾಗಿಲಲ್ಲಿ ಸ್ವರ್ಣಮಯವಾಗಿ ಚಿತ್ರಿತವಾದ ಈ ದೇವಿಯರ ಆಕೃತಿಗಳನ್ನು ಪಾಣಿನಿಯು ಪ್ರಕೃತಿ ಎಂದಿದ್ದಾನೆ."[೧೧] ಈ ಕಾಲದ ದ್ವಾರದೇವಿಯರು ಹೇಗಿದ್ದರೆಂಬುದು ತಿಳಿದಿಲ್ಲ. ಆದರೆ ಆ ಪರಂಪರೆಯು ನಂತರವೂ ಬೆಳೆದಂತೆ,

ಅವುಗಳು ಅರ್ಧಚಿತ್ರಗಳಾಗಿದ್ದುವು ಎಂದು ತಿಳಿದುಬರುತ್ತದೆ. ವೇದ ಯುಗದಲ್ಲಿ ಅರ್ಧಚಿತ್ರ ದೇವಿ ಮತ್ತು ಪೂರ್ಣ ಚಿತ್ರದೇವಿಯನ್ನಾಗಿ ಚಿತ್ರಿಸುವ ಕಡೆಗೆ ಕಲಾಪ್ರಣವ ಋಷಿಗಳ ಗಮನವು ಋಗ್ವೇದ ಎರಡು ಸ್ತೋತ್ರಗಳು ಆಧಾರಗಳಿಂದ ಆ ಸೌಂದರ್ಯ ಪ್ರೇಮಿಗಳಾದ ಋಷಿಗಳ ಚಿತ್ರಗಳನ್ನು ಬರೆದರು. ಈ ಯುಗದಲ್ಲಿ ಯಜ್ಞಶಾಲೆಗಳ ಮೇಲೆ ಚಿತ್ರಿಸಿದ ದೇವಿಯರಲ್ಲಿ ರಾತ್ರಿ ಮತ್ತು ಉಷೆಗೆ ಪ್ರಾಮುಖ್ಯತೆಯಿತ್ತು. ಒಟ್ಟಾರೆಯಾಗಿ ವೇದಕಾಲದಲ್ಲಿಯೂ ಚಿತ್ರಕಲಾ ಶಿಕ್ಷಣ ಅನೌಪಚಾರಿಕವಾಗಿ ನಡೆಯುತ್ತಿತ್ತು ಎಂಬುದನ್ನು ಮೇಲಿನ ಉಲ್ಲೇಖಗಳ ಆಧಾರಗಳಿಂದ ಖಚಿತಪಡಿಸಿಕೊಳ್ಳಬಹುದಾಗಿದೆ.

ವೇದಗಳ ಕಾಲಾನಂತರದ ಚಿತ್ರಕಲೆಯ ಪರಿಕಲ್ಪನೆ

"ವೇದಗಳು ಪ್ರಾರಂಭಗೊಂಡಾಗ ಬ್ರಾಹ್ಮಣಗಳು, ಅರಣ್ಯಗಳು, ಉಪನಿಷತ್ತುಗಳು, ಧರ್ಮ ಮತ್ತು ಸಾಹಿತ್ಯದ ಸ್ವರೂಪ ಹಾಗೂ ಸ್ಥಾನಮಾನ ಪಡೆದುಕೊಂಡಿದ್ದವು. ವೈದಿಕ ಯುಗದಲ್ಲಿ ವಿಶೇಷ ತರಬೇತಿ ಪಡೆಯುತ್ತಿದ್ದ ಮೂರು ಬಗೆ ಪುರೋಹಿತರ ಜೊತೆಗೆ ಕರ್ಮಾಚರಣೆಗಳ ಅನುಷ್ಠಾನಕ್ಕೆ ಸಂಬಂಧಪಟ್ಟದ್ದಾಗಿದೆ. ನಾಲ್ಕನೆಯ ಬಗೆಯ ಪುರೋಹಿತರು ಅಂದರೆ ಬ್ರಾಹ್ಮಣರು ಸೃಷ್ಟಿಯಾದ ಧಾರ್ಮಿಕ ಕರ್ಮಿಗಳನ್ನು ನಡೆಸಲು ಯಜ್ಞಕುಂಡಗಳು ನಿರ್ಮಾಣವಾದವು. ವೈದಿಕಯುಗವನ್ನು ಬ್ರಾಹ್ಮಣೀಯ ಶಿಕ್ಷಣಯುಗವೆಂದು ಕರೆಯುತ್ತಾರೆ."[೧೨]

ಗುರುಕುಲಗಳಲ್ಲಿ ಗುರುಗಳ ಮೂಲಕ ವಿದ್ಯಾಭ್ಯಾಸವನ್ನು ಕಲಿಯುತ್ತಿದ್ದರು. ಈ ಪದ್ಧತಿ ಮುಂದೆ ವೇದಗಳನ್ನು ಬರೆದಿಡುವ ಪದ್ಧತಿಗೆ ಅನುಕೂಲವಾಯಿತು. ಅನಂತರ ವಿದ್ಯಾಲಯಗಳಲ್ಲಿ ಅಧ್ಯಯನ ಆರಂಭವಾಯಿತು. ಕ್ರಮೇಣ ಗುರುಪರಂಪರೆ ವಿದ್ಯಾಸಂಸ್ಥೆಗೆ ಶಾಖೆಗಳು ತಮ್ಮದೇಯಾದ ಅನನ್ಯತೆಯೊಂದಿಗೆ ಪ್ರಾರಂಭವಾದವು. "ಇಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಶ್ರೀಮಂತ ವರ್ಗದವರಾದ ಬ್ರಾಹ್ಮಣರು ಮತ್ತು ಮಧ್ಯಮ ವರ್ಗದವರಿಗೆ ಮಾತ್ರ ಅವಕಾಶವಿತ್ತು. ಕ್ಷತ್ರಿಯರು ಮೊದಲಿಗೆ ಏಕರೂಪಿ ಗುಂಪಾಗಿದ್ದು ಕಾಲ ಕಳೆದಂತೆಲ್ಲಾ ಮಾಡುವ ಕೆಲಸವನ್ನು ಆಧರಿಸಿ ವಿಭಜನೆಗೊಂಡರು. ಮೊದಲಿಗೆ ಶೂದ್ರರಿಗೆ ಇಲ್ಲಿ ಸ್ವಲ್ಪವಾದರೂ ವಿದ್ಯಾಭ್ಯಾಸ ಪಡೆಯುವಂತಹ ಅವಕಾಶಗಳಿದ್ದವು. ಆದರೆ ವೈದಿಕೋತ್ತರ ಯುಗದಲ್ಲಿ ಸಮಾಜದಲ್ಲಿ ಅವರ ಸ್ಥಾನ ತೀರಾ ಕೆಳಮಟ್ಟದಲ್ಲಿತ್ತು. ಅವರನ್ನು ಅಸ್ಪೃಶ್ಯರೆಂಬಂತೆ ಪರಿಗಣಿಸಲಾಗುತ್ತಿತ್ತು. ಹೀಗಾಗಿ ಅವರಿಗೆ ವಿದ್ಯೆ ಪಡೆಯುವ ಹಕ್ಕುಗಳು ನಿರಾಕರಿಸಲ್ಪಟ್ಟವು. ವೈದಿಕೋತ್ತರ ಅವಧಿಯಲ್ಲಿ ಬ್ರಾಹ್ಮಣ ಶಿಕ್ಷಣ ಹೊರತುಪಡಿಸಿದರೆ ಇತರ ವರ್ಗಗಳ ಶಿಕ್ಷಣದ ಬಗ್ಗೆ ಅತ್ಯಲ್ಪ ಉಲ್ಲೇಖಗಳು ಲಭ್ಯವಾಗಿವೆ."[೧೩]

ಚಿತ್ರಕಲೆಯನ್ನು ಕುರಿತ ಪ್ರಾಚೀನ ಗ್ರಂಥಗಳು

"ಚಿತ್ರಕಲೆಯನ್ನು ಕುರಿತು ಹೇಳುವ ಶಾಸ್ತ್ರ ಗ್ರಂಥಗಳಲ್ಲಿ ಎರಡು ಬಗೆಗಳನ್ನು ಕಾಣಬಹುದು. "ಅಭಿಲಾಷಿತಾರ್ಥ ಚಿಂತಾಮಣಿ", "ವಿಷ್ಣುಧರ್ಮೋತ್ತರ ಪುರಾಣ", "ಸಮರಾಂಗಣ ಸೂತ್ರ", "ಶಿವತತ್ವ ರತ್ನಾಕರ" ಇತ್ಯಾದಿ ವಿಶ್ವಕೋಶಗಳಂತಹ ರಚನೆಗಳಲ್ಲಿ ಚಿತ್ರಕಲೆಯನ್ನು ಕುರಿತು

ವಿಸ್ತಾರವಾಗಿ ಹೇಳಿದರೆ, "ನಾಟ್ಯಶಾಸ್ತ್ರ", "ಕಾಮಸೂತ್ರ", "ನಾರದಸೂತ್ರ" ಇತ್ಯಾದಿಗಳಲ್ಲಿ ಚಿತ್ರಕಲೆಯನ್ನು ಕುರಿತು ಪ್ರಾಸಂಗಿಕವಾದ ಹೇಳಿಕೆಗಳಿವೆ".[೧೪]

ಪ್ರಾಚೀನ ಗ್ರಂಥಗಳಲ್ಲಿ ಒಂದಾಗಿರುವ ವಿಶ್ವಕೋಶದಂತೆ ರಚನೆಯಾಗಿರುವ ವಿಷ್ಣುಧರ್ಮೋತ್ತರ ಪುರಾಣವು ಪ್ರಶ್ನೋತ್ತರ ರೂಪದಲ್ಲಿದೆ. ಇದರ ಮೂರನೆ ಖಂಡ ಸಂಪೂರ್ಣವಾಗಿ ಲಲಿತಕಲೆಗಳಿಗೆ ಮೀಸಲಾಗಿದೆ. ಮಾರ್ಕಂಡೇಯ ವ್ಯಾಕರಣ, ವಾದ್ಯ, ನೃತ್ಯ, ಪ್ರತಿಮಾ ಲಕ್ಷಣಗಳನ್ನು ಕ್ರಮವಾಗಿ ವಿವರಿಸುತ್ತಾ ಹೋಗುತ್ತಾನೆ. ಮೂವತ್ತೈದನೇ ಅಧ್ಯಾಯದಿಂದ ಶಿಲ್ಪ, ಚಿತ್ರಗಳ ವಿವರ ಕಂಡು ಬರುತ್ತದೆ. ನಾರಾಯಣ ಮುನಿ ಎಂಬ ಋಷಿ ಸಿಹಿಮಾವಿನ ಚಿಗುರುಗಳಿಂದ ರಸವನ್ನು ಹಿಂಡಿ ಭೂಮಿಯಲ್ಲಿ ಒಂದು ಸ್ತ್ರೀ ರತ್ನವನ್ನು ಚಿತ್ರದ ರೂಪದಲ್ಲಿ ಮಾಡಿದನು. ಆ ಚಿತ್ರದಿಂದ ದಿವ್ಯ ರೂಪಿಣಿಯಾದ ಅಪ್ಸರೆಯು ಉದ್ಭವಿಸುತ್ತಾಳೆ. ಮುಂದೆ ನೃತ್ಯವನ್ನು ಆಧಾರವನ್ನಾಗಿಟ್ಟುಕೊಂಡು ಪ್ರತ್ಯಂಗಗಳು ದೇಹದಲ್ಲಿ ಎಷ್ಟು ಪ್ರಮಾಣದಲ್ಲಿ ಇರಬೇಕೆಂಬುದನ್ನು ಹೇಳುತ್ತಾ ಹೋಗುತ್ತಾನೆ.

"ಭಿತ್ತಿಯ ಸಿದ್ಧತೆ, ಅವುಗಳಲ್ಲಿ ಬಗೆಗಳು, ಕುಂಚ, ವರ್ಣಗಳು ಲೇಪನ ರಕ್ಷಣೆ ನಾಲ್ಕು ವಿವಿಧ ಚಿತ್ರಗಳು, ಚಿತ್ರಕಾರನ ಮನೋಭಾವ, ದೇವರಾಜ, ಮಂತ್ರಿ, ಋಷಿ, ದೈತ್ಯ, ದಾನವ, ವಿದ್ಯಾಧರ ಪಿಶಾಚಿ, ವೇಶ್ಯಾ ಸ್ತ್ರೀಯರು, ಸಪ್ತಮಾತೃಕೆ, ವಿಧವೆ, ವೃದ್ಧೆ, ಸೇನಾಪತಿ, ಯೋಧ ಮಾವಟಿಗ, ಭೃತ್ಯರು, ಪುರಜನರು, ಜಟ್ಟಿಗಳು ಅಲ್ಲದೆ ಪ್ರಾಣಿಗಳನ್ನು ಹೇಗೆ ಬರೆಯಬೇಕೆಂದು ಹೇಳಿ "ನೋಡಿದ ವಸ್ತುವನ್ನು ಅದಕ್ಕೆ ಹೋಲುವಂತೆ ಬರೆಯುವಿಕೆಯೇ ಮುಖ್ಯ" ಎಂದೂ "ಚಿತ್ರಿಸುವ ದೇಶವನ್ನು ಅಲ್ಲಿಯ ಸಮುದಾಯ ಆಚಾರ, ಸ್ಥಾನ, ಕಸುಬುಗಳನ್ನು ತಿಳಿದು, ಅದಕ್ಕೆ ತಕ್ಕಂತೆ ಅಸನ, ಶಯನ, ಯಾನ, ವೇಷ ಇವುಗಳನ್ನು ಚಿತ್ರಿಸಬೇಕು" ಎನ್ನುತ್ತಾನೆ. ಮುಂದೆ ನದಿ, ಆಕಾಶ, ಪರ್ವತ, ಕಾಡು, ನಗರ, ದುರ್ಗ, ಅಂಗಡಿಬೀದಿ ಜೂಜುಕಟ್ಟೆ ಯುದ್ಧ ಭೂಮಿ ಆಯಾ ಸಮಯದಲ್ಲಿ, ಆಯಾ ಕೆಲಸದಲ್ಲಿ ಆಸಕ್ತರಾದ ಜನರನ್ನು ಚಿತ್ರಿಸಬೇಕು. ಹಗಲು, ಇರುಳು ಇತ್ಯಾದಿಗಳನ್ನು ಅಂತೆಯೇ ಋತುಗಳಲ್ಲಿ ಅವುಗಳ ಚಿನ್ಹೆಯಿಂದ ಚಿತ್ರಿಸಬೇಕು. ಉದಾಹರಣೆಗೆ ಗ್ರೀಷ್ಮದಲ್ಲಿ ಬಳಲಿದ ಜನ ಇತ್ಯಾದಿಗಳನ್ನು ಚಿತ್ರಿಸುವುದು"[೧೫] ಎಂದು ಹೇಳುತ್ತಾನೆ.

ಹೀಗೆ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಚಿತ್ರಕಲಾ ಶಿಕ್ಷಣವು ಆಗ ಔಪಚಾರಿಕ ವಾಗಿ ಇತ್ತು ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗಿದೆ. ಪಾರಮಾರ ಭೋಜನ 'ಸಮರಾಂಗಣ ಸೂತ್ರಧಾರವು ಕಲೆಯನ್ನು ಕುರಿತು ಮತ್ತೊಂದು ಗ್ರಂಥ ಅದರ ವಾಸ್ತುಶಿಲ್ಪ ಇದರ ಮುಖ್ಯ ವಸ್ತುವಾಗಿದೆ. ಚಿತ್ರಗಳಲ್ಲಿ ಕಂಡುಬರಬೇಕಾದ ರಸಗಳನ್ನು ವಿವರಿಸುವ ದೃಷ್ಟಿಯಿಂದ ಅದು ಚಿತ್ರಕಲೆಯನ್ನು ಕುರಿತು ಚಿಕ್ಕ ವಿಭಾಗವೊಂದನ್ನು ಹೊಂದಿದೆ.

೧೨ನೇ ಶತಮಾನದ ಸೋಮೇಶ್ವರನು ರಚಿಸಿದ ಅಭಿಲಾಷಿತಾರ್ಥ ಚಿಂತಾಮಣಿಯಲ್ಲಿ ಚಿತ್ರಕಲೆ ಬಗ್ಗೆ ಸ್ವಾರಸ್ಯಕರವಾದ ಒಂದು ಅಧ್ಯಾಯವಿದೆ. ನಾಟ್ಯಮಂಟಪವನ್ನು ಅಲಂಕರಿಸುವ ಸಮಯದಲ್ಲಿ ಚಿತ್ರಕಲೆ ವಿವರಿಸಲ್ಪಟ್ಟಿದೆ. "ಮೊದಲು ಗೋಡೆಯ ಸಿದ್ಧತೆಯನ್ನು ಮಾಡಿಕೊಂಡು

ವಜ್ರಲೇಪ (ಬಣ್ಣಗಳ ಮಿಶ್ರಣ) ಆನಂತರ ವಿವರಿಸಲ್ಪಟ್ಟಿದೆ. ಬಣ್ಣಗಳ ಸಂಖ್ಯೆ, ಕುಂಚಗಳು, ಅವುಗಳ ಭೇದಗಳು ಮತ್ತು ತೊಲಿಲಿಕಾ, ಲೇಖನಿ, ವರ್ತಿಕಾ ಮೊದಲಾದ ಕಲೆಯ ಉಪಕರಣಗಳನ್ನು ಪ್ರಸ್ತಾಪಿಸಲಾಗಿದೆ. ಬಣ್ಣಗಳಿಂದ ಮತ್ತು ಅವುಗಳ ಸಂಯೋಜನೆಯಿಂದ ಉಂಟಾಗುವ ನೆರಳು–ಬೆಳಕುಗಳ ಪರಿಣಾಮ ಮತ್ತು ಸ್ವರ್ಣಲೇಖನ ಮೆರಗು ಕೊಡುವಿಕೆ ಇತ್ಯಾದಿಗಳನ್ನು ಚರ್ಚಿಸಲಾಗಿದೆ. ನಾನಾ ಭಂಗಿಗಳು, ಪ್ರತಿಮೆಗಳ ರೂಪಗಳನ್ನು ಸಿದ್ಧಗೊಳಿಸುವ ರಸಿಕ ಚಿತ್ರ, ಗೂಳಿಯ ಚಿತ್ರ, ಭಾವಚಿತ್ರ, ವಿದ್ದಚಿತ್ರ ಮತ್ತು ಅವಿದ್ದಚಿತ್ರ”[೧೬] ವಿವಿಧ ರೀತಿಯಲ್ಲಿ ಗ್ರಂಥಗಳಲ್ಲಿ ಚರ್ಚಿಸಿರುವಂತೆ ಅಧ್ಯಯನದಿಂದ ತಿಳಿಯಬಹುದು.

೧೬ನೇ ಶತಮಾನದ ಶ್ರೀ ಕುಮಾರನ ಗ್ರಂಥ ಶಿಲ್ಪರತ್ನ ಚಿತ್ರಲಕ್ಷಣ ಹೆಸರಿನ ಚಿತ್ರಕಲೆಯ ವಿಭಾಗ ಹೊಂದಿದೆ. ಅದು ಚಿತ್ರ, ಅರ್ಧಚಿತ್ರ ಮತ್ತು ಚಿತ್ರಭಾಷಾ ಎಂಬ ಮೂರು ವಿಧಗಳನ್ನಾಗಿ ವಿಭಾಗಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಕೆಂಪು, ಹಳದಿ, ಬಿಳಿ, ಕಪ್ಪು, ನೀಲಿ ಎಂಬ ಐದು ರೀತಿಯ ಮೂಲವರ್ಣಗಳನ್ನು ತಿಳಿಸುತ್ತದೆ. ಕುಂಚಗಳ ವಿಧಗಳು ಅನೇಕ ರೀತಿಯ ಭಂಗಿಗಳು, ನೆರಳು - ಬೆಳಕಿನ ರೀತಿಗಳು, ಬಣ್ಣಗಳ ಮಿಶ್ರಣ, ಬಂಗಾರ ಲೇಪನ ಮತ್ತು ಮೆರಗು ಕೊಡುವಿಕೆಯನ್ನು ವಿವರಿಸಿದ್ದಾರೆ. ಈ ಗ್ರಂಥವು ಚಿತ್ರಗಳನ್ನು ರಸಚಿತ್ರ ಮತ್ತು ಧೂಳೀ ಚಿತ್ರಗಳೆಂದು ಎರಡು ಭಾಗಗಳನ್ನಾಗಿ ಮಾಡಿದೆ. ರಸಚಿತ್ರವೆನ್ನುವುದು ಅಭಿಲಾಷಿತಾರ್ಥ ಚಿಂತಾಮಣಿಯ ಭಾವಚಿತ್ರವಲ್ಲದೆ ಬೇರೆಯಲ್ಲ ಎಂಬುದನ್ನು ತಿಳಿಯಬಹುದು.

“ನಾರದ ಶಿಲ್ಪದಲ್ಲಿ ಎರಡು ಅಧ್ಯಾಯಗಳನ್ನೊಳಗೊಂಡಿದೆ. ಒಂದು ಚಿತ್ರಶಾಲೆಯನ್ನು ಮತ್ತೊಂದು ಚಿತ್ರಾಲಂಕೃತ ರಚನಾವಿಧಿಯನ್ನು ಕುರಿತು ವಿವರಿಸುತ್ತದೆ. ಮೊದಲನೆಯದು ಚಿತ್ರಶಾಲೆಗಳನ್ನು ಕುರಿತು ವಿವರಿಸಿದರೆ ಎರಡನೆಯದು ನೆಲ, ಗೋಡೆ ಮತ್ತು ಒಳಮಾಳಿಗೆಗಳಿಗೆ ಸಂಬಂಧಿಸಿದಂತೆ ಭೌಮಿಕಾ, ಕುಡ್ಯಾಕಾ ಮತ್ತು ಊರ್ಧ್ವಕಾ ಮೊದಲಾದ ಚಿತ್ರಗಳ ವರ್ಗೀಕರಣಗಳನ್ನು ವಿವರಿಸುತ್ತದೆ. ಮೊದಲನೆಯದಾಗಿ ನೆಲದ ಮೇಲಿನ ಅಲಂಕಾರವಾದ ಕೋಲು, ರಂಗೋಲಿ ಮತ್ತು ಅಲ್ಪನಾಗಳೇ ಆಗಿರುವ ಅಭಿಲಾಷಿತಾರ್ಥ ಚಿಂತಾಮಣಿಯ ರಸಚಿತ್ರ ಮತ್ತು ಧೂಳೀಚಿತ್ರಗಳು ಅಲಂಕಾರವಾಗಿದೆ. ಮೂರನೆಯದು ಸಹ ಒಳಮಾಳಿಗೆಯ ಮೇಲಿದೆ ಎಂಬುದನ್ನು ಬಿಟ್ಟರೆ ಬಹುಮಟ್ಟಿಗೆ ಇದೇ ಆಗಿದೆ. ಚಿತ್ರಗಳ ವಸ್ತುವಿಷಯ ಮತ್ತು ಅವುಗಳ ಯೋಗ್ಯ ಸ್ಥಾನ ನಿರ್ದೇಶನಗಳು ಕೂಡ ಒಂದು ಅಧ್ಯಾಯದ ವಿಚಾರವಾಗಿವೆ”.[೧೭]

ಸರಸ್ವತಿ ಶಿಲ್ಪ ಮೊದಲಿನಿಂದಲೂ ಚಾಲ್ತಿಯಲ್ಲಿದ್ದ ಚಿತ್ರ ಮತ್ತು ಅರ್ಧಚಿತ್ರ ಮತ್ತು ಚಿತ್ರಭಾಷಾ ಎಂಬುದಾಗಿ ವಿಭಾಗಿಸಲ್ಪಟ್ಟವುಗಳು ಪುನರುಕ್ತವಾಗಿರುವ ಚಿತ್ರಕಲೆಯನ್ನು ಕುರಿತು ಮತ್ತೊಂದು ಗ್ರಂಥ ವರ್ಣಸಂಸ್ಕಾರ ಅಥವಾ ಬಣ್ಣಗಳ ತಯಾರಿಕೆ ಮತ್ತು ವಿವಿಧ ಮೂರ್ತಿಗಳು ಮತ್ತು ಪ್ರತಿಮಾ ಲಕ್ಷಣ ಮೊದಲಾದ ವಿಷಯಗಳು ಇಲ್ಲಿ ನಿರೂಪಿಸಲ್ಪಟ್ಟಿವೆ.

"ಶಾಸ್ತ್ರ ಗ್ರಂಥಗಳ ಕಡೆಗೆ ಹೊರಳಿದರೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ನಗರ ನಿರ್ಮಾಣಕ್ಕೆ ಚಿತ್ರಕಲಾ ನಿಪುಣರ ನೆರವನ್ನು ಪಡೆಯಬೇಕೆಂದು ಹೇಳಿದೆ. ಬೌದ್ಧ ತ್ರಿಪಿಟಕ ಗ್ರಂಥಗಳಲ್ಲಿಯೂ ಚಿತ್ರ ಮತ್ತು ಚಿತ್ರ ಶಾಲೆಗಳ ಉಲ್ಲೇಖವಿದೆ."[೮] ಈ ಮೇಲಿನ ಅಂಶಗಳಿಂದ ಕೌಟಿಲ್ಯನ ಕಾಲದಲ್ಲಿಯೂ ಚಿತ್ರಕಲಾ ಶಿಕ್ಷಣ ಇತ್ತೆಂಬುದನ್ನು ತಿಳಿಯಬಹುದು.

ಚಿತ್ರಶಾಲೆಗಳು

ಭಾರತದಲ್ಲಿ ಕಲೆ ಜೀವನದ ವಿವಿಧ ಕ್ರಿಯೆಗಳಲ್ಲಿ ಆರಂಭದಿಂದಲೇ ಮೂಡಿಬಂದಿದೆ. ಕಲೆಯ, ಪ್ರಜ್ಞೆ ಇರುವ ಅಲಂಕಾರದ ಅಂಶವಿಲ್ಲದಿರುವ ಚಿಕ್ಕ ಪಾತ್ರೆಯಾಗಲಿ ಅಥವಾ ಕೊನೆಯ ಪಕ್ಷ ಅಂಚಿನಲ್ಲಾದರೂ ಸುಂದರವಾದ ಕಸೂತಿಯಿಲ್ಲದಿರುವ ಬಟ್ಟೆಯನ್ನಾಗಲಿ ಅಥವಾ ಅಲಂಕೃತ ಚಿತ್ರಗಳಿಲ್ಲದಿರುವ ಗೋಡೆಯಾಗಲಿ ಅಥವಾ ಚಿತ್ರಗಳ ರೂಪದಲ್ಲಿರುವಂತಹ ನೆಲವಾಗಲಿ ಕಾಣಸಿಗುವುದಿಲ್ಲ. ಮಡಕೆ, ಪಾತ್ರೆಗಳು ಬಣ್ಣಗಳಿಂದ ವಿನ್ಯಾಸಗೊಂಡಿರುತ್ತವೆ. ಅವುಗಳ ಮೇಲೆ ಉಬ್ಬು, ಅರೆಯುಬ್ಬು ಕೆತ್ತನೆಯ ಚಿತ್ರಗಳಿರುತ್ತವೆ. ಪ್ರಾಚೀನ ಕಾಲದಿಂದಲೂ ಕಲೆಯ ಉದ್ದೇಶಗಳನ್ನು ಒಟ್ಟಿಗೆ ತರಲು ಭಾರತದಲ್ಲಿ ಪ್ರದರ್ಶನ ಮಂದಿರಗಳು ರೂಪುಗೊಂಡು ಪೋಷಿಸಲ್ಪಡುತ್ತಾ ಬಂದಿವೆ. ಇಂತಹವುಗಳನ್ನು ಚಿತ್ರಶಾಲೆಗಳೆಂದು ಕರೆಯಲ್ಪಟ್ಟವು.

ದೇವರನ್ನು ಗುಡಿಗಳಲ್ಲಿ ಪ್ರತಿಷ್ಠಾಪಿಸುವಂತೆ, ಆಯ್ಕೆ ಮಾಡಿದ ಸುಂದರ ಚಿತ್ರಗಳನ್ನು ನೋಡುವವರಿಗೋಸ್ಕರ ಚಿತ್ರಶಾಲೆಗಳಲ್ಲಿ ತೂಗು ಹಾಕುವ ಪದ್ಧತಿ ನಮ್ಮಲ್ಲಿ ಪ್ರಾರಂಭದಿಂದಲೂ ಕಂಡುಬರುತ್ತದೆ. ರಾಮಾಯಣ, ಮಹಾಭಾರತದ ಕಾಲದಿಂದಲೂ ಇಂಥ ಚಿತ್ರಶಾಲೆಗಳ ಬಗ್ಗೆ ಉಲ್ಲೇಖವಿದೆ. ಇಂಥ ಚಿತ್ರಶಾಲೆಗಳು ಅರಮನೆಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಸ್ವತಃ ಶ್ರೀಮಂತರ ಮನೆಗಳಲ್ಲಿ ಸುಂದರ ಚಿತ್ರಗಳನ್ನು ನೋಡುವುದು ಒಂದು ಮಂಗಲ ಕಾರ್ಯ ಎಂದೇ ಜನರಲ್ಲಿ ಭಾವನೆ ಇತ್ತು. ಬಾಣ ಕವಿ ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಚಿತ್ರಗಳನ್ನು ತೂಗು ಹಾಕಿದ ಚಿತ್ರಶಾಲೆಗಳನ್ನು ಮಾಡಿದ್ದಕ್ಕೆ "ವಿಮನ ಪಂಕ್ತಿ" ಎಂದು ಭವಭೂತಿಯು ಉದ್ದವಾದ ಹಾಗೂ ಹೆಚ್ಚು ವಿಸ್ತಾರವುಳ್ಳ ಚಿತ್ರಶಾಲೆಗಳಿಗೆ ವಿಧಿ ಎಂದೂ ಹೇಳಿದ್ದಾರೆ. ನಾರದಶಿಲ್ಪ ಗ್ರಂಥವು ಇಂಥ ಶಾಲೆಗಳ ಬಗ್ಗೆ ಸಾಕಷ್ಟು ವಿವರಗಳನ್ನು ಕೊಡುತ್ತದೆ.

ದೇವದೇವತೆಗಳ, ಗಂಧರ್ವರ ಯಕ್ಷ-ಯಕ್ಷಿಯರ ಅಸುರರ, ಕಿನ್ನರ ಹಾಗೂ ಕೀರ್ತಿವಂತರು, ಶೂರವೀರರು, ಮಹಾಪುರುಷರು, ರಾಜಮನೆತನದವರು ಸುಂದರ ಪ್ರಮಾಣಬದ್ಧವಾದ ವಿನ್ಯಾಸ ದೊಂದಿಗೆ ಆಕರ್ಷಕ ಬಣ್ಣಗಳಿಂದ ಚಿತ್ರಿಸಿ ಬೆಲೆಬಾಳುವಂತಹ ಬಂಗಾರದ ಆಭರಣಗಳು ಮತ್ತು ವಜ್ರಗಳಿಂದ ವಿನ್ಯಾಸಗೊಳಿಸುವ ಚಿತ್ರ ಪದ್ಧತಿಯೂ ಆ ಕಾಲದಲ್ಲಿ ಇತ್ತು. ಇದೇ ವಿಷಯಗಳ ಭಿತ್ತಿಚಿತ್ರಗಳು ಇದ್ದವೆಂದು ಬಾಣ ಕವಿ ಬರೆದಿದ್ದಾನೆ.

"ಅರಮನೆಯ ಚಿತ್ರಶಾಲೆಗಳು, ಸಾರ್ವಜನಿಕ ಚಿತ್ರಶಾಲೆಗಳು ಮತ್ತು ಖಾಸಗಿ ಮನೆಗಳಲ್ಲಿರುವ ಚಿತ್ರಶಾಲೆಗಳೆಂದು ಮೂರು ಬಗೆಯ ಚಿತ್ರಶಾಲೆಗಳನ್ನು ಅಲ್ಲಿ ಗುರುತಿಸಲಾಗಿದೆ. ಮೊದಲನೇ

ವರ್ಗದ ಚಿತ್ರ ಶಾಲೆಗಳು ಅಂತಃಪುರಕ್ಕೆ ಸಂಬಂಧಿಸಿದವು. ಕೆಲವು ರಾಜಕುಮಾರಿಯರು ತಮ್ಮ ಶಯನಾಗಾರಗಳನ್ನೇ ಚಿತ್ರಶಾಲೆಗಳನ್ನಾಗಿ ಪರಿವರ್ತಿಸಿದ್ದರು. ತಮ್ಮ ಮಲಗುವ ಕೋಣೆಯ ಉಪಗೃಹವನ್ನೇ ಚಿತ್ರಶಾಲೆಗಳನ್ನಾಗಿ ಹೊಂದಿದ್ದರು. ನಿದ್ರೆಯಿಂದ ಎದ್ದಾಗ ಮಂಗಳಕರ ವಸ್ತುಗಳ ಕಡೆ ನೋಡುವುದು ಶುಭ ಶಕುನವೆಂದು ಭಾವಿಸಲಾಗಿದ್ದುದು ಈ ಚಿತ್ರಶಾಲೆಗಳ ಅಸ್ತಿತ್ವಕ್ಕೆ ಕಾರಣವಾಗಿತ್ತು. ಸ್ನಾನಗೃಹಗಳು ಕೂಡ ಚಿತ್ರಶಾಲೆಗಳನ್ನು ಹೊಂದಿರುತ್ತಿದ್ದುವು. ಅಭಿಷೇಕ ಚಿತ್ರಶಾಲೆಗಳು ಅವುಗಳಿಗೆ ಹೊಂದಿಕೊಂಡಿರುತ್ತಿದ್ದುವು".[೧೯]

ಚಿತ್ರಶಾಲೆಗಳನ್ನು ಸಾಮಾನ್ಯವಾಗಿ ಸಾಯಂಕಾಲದ ಸಮಯದಲ್ಲಿ ಪ್ರಾರಂಭಿಸುತ್ತಿದ್ದರು. ವೀಕ್ಷಕರು ಬಂದು ತಮ್ಮ ಸಮಯವನ್ನು ಚಿತ್ರಶಾಲೆಯಲ್ಲಿ ಕಳೆಯುವಂತಹ ಪರಿಸರ ಅಲ್ಲಿರುತ್ತಿತ್ತು. ಚಿತ್ರಶಾಲೆಗಳಿಗೆ ಉತ್ತಮ ಶೈಕ್ಷಣಿಕ ಉಪಯುಕ್ತತೆ ಹಾಗೂ ಮಹತ್ವ ಇತ್ತೆಂದು ಹೇಳಲಾಗಿದೆ. ಆಗಿನ ಕಾಲದಲ್ಲಿ ಇವುಗಳನ್ನು ಚಿತ್ರಶಾಲೆ ಎಂದರೆ ಆರ್ಟ್‌ಗ್ಯಾಲರಿ ಮ್ಯೂಜಿಯಂಗಳು ಎಂಬರ್ಥದಲ್ಲಿ ಪ್ರದರ್ಶನಗಳನ್ನು ಮಾಡುತ್ತಿದ್ದರು.

ಜನಪದ ಚಿತ್ರಕಲೆ

ಗ್ರಾಮೀಣ ಪ್ರದೇಶ ಅಥವಾ ಹಳ್ಳಿಯಲ್ಲಿರುವಂತಹವರು ಜನಪದರು. ಅವರು ತಮ್ಮ ಪರಿಸರದ ಹಾಗೂ ತಮ್ಮ ಮನಸ್ಥಿತಿಗೆ ಸಂಬಂಧಿಸಿದಂತೆ ಅಂದವಾದ ಮತ್ತು ಚಂದವಾದಂತಹ ಆಕಾರಗಳನ್ನು ರಚಿಸುತ್ತಿದ್ದರು. ಇದೇ ಜನಪದ ಚಿತ್ರಕಲೆಯಾಗಿದೆ. ವಿಶೇಷವಾಗಿ ಹಳ್ಳಿಗೆ ಸಂಬಂಧಿಸಿದಂತಹ ಸಾಂಪ್ರದಾಯಿಕ ಆಚರಣೆ ಮತ್ತು ಜನರ ಆಚಾರ-ವಿಚಾರಗಳು, ಮನುಷ್ಯನ ಜೀವನ ವಿಧಾನಗಳನ್ನು ತಮ್ಮದೇಯಾದ ಒಂದು ಶೈಲಿಯಲ್ಲಿ ಅಭಿವ್ಯಕ್ತಪಡಿಸುವುದನ್ನು ಜನಪದ ಚಿತ್ರಕಲೆ ಎಂದು ಹೇಳಬಹುದು. ಇದು ಮಾನವನ ಹುಟ್ಟಿನಿಂದಲೇ ಪ್ರಾರಂಭವಾಗಿ ಇಂದಿನ ಆಧುನಿಕ ಸಂದರ್ಭದಲ್ಲಿಯೂ ಹಳ್ಳಿಗಳಲ್ಲಿ ನೋಡಬಹುದು. ಜನಪದರು ತಮ್ಮ ಸುತ್ತಲಿನ ಪರಿಸರದಲ್ಲಿರುವಂತಹ "ಕಲ್ಲು, ಮಣ್ಣು, ಹೂ, ಎಲೆ ಇವುಗಳಿಂದ ಬಣ್ಣ ತಯಾರಿಸಿಕೊಳ್ಳುತ್ತಿದ್ದರು. ಅಲ್ಲದೆ ಹಬ್ಬ, ಉತ್ಸವ, ಜಾತ್ರೆ ಇನ್ನಿತರ ಸಂದರ್ಭಗಳಿಗೆ ತಕ್ಕಂತೆ ಚಿತ್ರ ಬಿಡಿಸುವುದು ಕಂಡುಬರುತ್ತದೆ".[೨೦] ರಂಗೋಲಿ ಚಿತ್ರಕಲೆ, ಹಸೆ ಚಿತ್ರಕಲೆ, ಹಚ್ಚೆ ಚಿತ್ರಕಲೆ, ಸೀಗೀ ಚಿತ್ರಕಲೆ ಅಲ್ಲದೆ ಕೌದಿಕಲೆ ಮೊದಲಾದವು. ಎಲ್ಲ ಜನಪದ ಚಿತ್ರಕಲೆಗಳು ಇವು ಗ್ರಾಮೀಣರಲ್ಲಿ ಸೃಷ್ಟಿಯಾಗಿ, ಪರಂಪರೆಯಾಗಿ ಮುಂದುವರೆದುಕೊಂಡು ಬಂದಿವೆ. ಪ್ರಸ್ತುತ ಸಂದರ್ಭದಲ್ಲಿ ಆಧುನಿಕತೆಯ ಪರಿಣಾಮವಾಗಿ ಜನಪದ ಕಲೆಯ ರಚನೆ ಮತ್ತು ಮಹತ್ವ ಕಡಿಮೆಯಾದರೂ ಇದನ್ನು ಆಧಾರವಾಗಿಟ್ಟುಕೊಂಡು ಅನೇಕ ಕಲಾವಿದರು ಜನಪದ ಕಲೆಗಳನ್ನು ಕಸುಬನ್ನಾಗಿಸಿಕೊಂಡು ತಮ್ಮ ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಕೆಲವರು ವಂಶಪಾರಂಪರಿಕ ವೃತ್ತಿಯಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಅಂತಹ ಹಲವು ನೆಲೆಗಳನ್ನು ಕರ್ನಾಟಕದಲ್ಲಿ ಕಾಣಬಹುದು.

ಬುಡಕಟ್ಟು ಚಿತ್ರಕಲೆ

ಹಲವು ಬುಡಕಟ್ಟು ಸಮುದಾಯಗಳು ನಮ್ಮ ರಾಜ್ಯದಲ್ಲಿ ಇರುವುದನ್ನು ಇಂದಿಗೂ ಕಾಣಬಹುದು. ಕಣಬಿಯವರು, ಮಲೆಕುಡಿಯರು ಹೀಗೆ ಸುಮಾರು ೫೦ ಸಮುದಾಯಗಳು ಅಲ್ಲಲ್ಲಿ ಕಂಡು ಬರುತ್ತಾರೆ. "ನಾಗರಿಕ ಸಮಾಜದಿಂದ ಬಹು ದೂರವಾಗಿ, ನಾಗರಿಕರಿಗಿಂತ ಭಿನ್ನವಾದ ಜೀವನಕ್ರಮವನ್ನು ರೂಢಿಸಿಕೊಂಡು ಬದುಕುತ್ತಿದ್ದರು. ತಮ್ಮ ವಿಶಿಷ್ಟವಾದ ಸಾಂಸ್ಕೃತಿಕ ಮೌಲ್ಯಗಳನ್ನು ಇಂದಿನವರೆಗೂ ಜೀವಂತವಾಗಿ ಉಳಿಸಿಕೊಂಡು ಬಂದಿರುವ ಒಂದು ಗುಂಪಿನ ಅಥವಾ ಸಮುದಾಯದ ಜನರನ್ನು "ಬುಡಕಟ್ಟು" ಎಂದು ಸಾಮಾನ್ಯವಾಗಿ ಗುರುತಿಸಲಾಗಿದೆ"[೨೦] ಬುಡಕಟ್ಟು ಜನರು ಹಿಂದಿನ ಕಾಲದಲ್ಲಿ ಸನ್ನೆಗಳ ಮೂಲಕ ಒಬ್ಬರು, ಇನ್ನೊಬ್ಬರಿಗೆ ಸಂದೇಶವನ್ನು ನೀಡುತ್ತಿದ್ದರು. ನಾಗರಿಕತೆ ಬೆಳೆದಂತೆಲ್ಲಾ ಬುಡಕಟ್ಟು ಜನರ ಬುದ್ಧಿಶಕ್ತಿಯು ಬೆಳೆಯತೊಡಗಿತು. ಬುದ್ಧಿಶಕ್ತಿಗೆ ತಕ್ಕಂತೆ ಅವರು ಚಿತ್ರಕಲೆಯು ಕೂಡ ಬೆಳವಣಿಗೆಯನ್ನು ಪಡೆಯಿತು. ಒಬ್ಬರಿಂದ ಇನ್ನೊಬ್ಬರಂತೆ ಈ ಚಿತ್ರಕಲೆಯು ಸಂದೇಶದ ಮಾಧ್ಯಮವಾಗಿ ಬೆಳೆದುಬಂದಿತು.

ಶಿಷ್ಟಪದ ಚಿತ್ರಕಲೆ

ಜನಪದ ಚಿತ್ರಕಲೆ ಜನಪದರ ಬದುಕಿನೊಂದಿಗೆ ಸೃಷ್ಟಿಯಾದರೆ ಶಿಷ್ಟಪದ ಚಿತ್ರಕಲೆಯು ಜನಪದ ಚಿತ್ರಕಲೆಯನ್ನು ಅವಲಂಬಿಸಿ ಬೆಳೆದಿದೆ. ಕಲಾವಿದರು ಆಕರ ಸಾಮಗ್ರಿಗಳನ್ನು ತೆಗೆದುಕೊಂಡು ವಿನ್ಯಾಸಕ್ಕೆ ಬೇಕಾಗಿರುವಂತಹ ಒಂದು ನಿರ್ದಿಷ್ಟವಾದಂತಹ ಜಾಗವನ್ನು ನಿರ್ಮಿಸಿಕೊಂಡು ಚಿತ್ರಗಳನ್ನು ಬರೆಯಲು ಪ್ರಾರಂಭಿಸಿದವರು. ಶಿಷ್ಟ ಕಲಾವಿದರು ಮತ್ತು ಅವರಿಂದ ಈ ರೀತಿಯಾಗಿ ಬೆಳೆದುಬಂದಂತಹ ಚಿತ್ರಕಲೆಯು ಇಂದು ತನ್ನತನವನ್ನು ಉಳಿಸಿಕೊಂಡಿರುವುದನ್ನು ಕಾಣುತ್ತೇವೆ.

ರಾಜಾಶ್ರಯದಲ್ಲಿ ಬೆಳೆದುಬಂದ ಶಿಕ್ಷಣ

ಬೌದ್ಧ ಚಿತ್ರಕಲೆ

ಇತಿಹಾಸ ಕಾಲ ಮತ್ತು ಇತಿಹಾಸೋತ್ತರ ಕಾಲದಲ್ಲಿ ಬೆಳೆದು ಬಂದಂತಹ ಚಿತ್ರಕಲೆಯ ವೈಶಿಷ್ಟ್ಯವನ್ನು ನೋಡಿದ್ದೇವೆ. ಇದರ ನಂತರದ ಕಾಲ ಬೌದ್ಧಕಾಲ ಎನ್ನಬಹುದು. "ಬೌದ್ಧ ಧರ್ಮವನ್ನು ಎಲ್ಲಾ ಕಡೆ ಒಂದು ಮಾಧ್ಯಮವಾಗಿ ಮತ್ತು ಎಲ್ಲರಿಗೂ ತಿಳಿಸುವ ನಿಟ್ಟಿನಲ್ಲಿ ಬೌದ್ಧರು ಚಿತ್ರಕಲೆಯನ್ನು, ಉಪಯೋಗಿಸಿಕೊಂಡು ತಮ್ಮ ಸಂದೇಶ ಭಾವನೆಗಳನ್ನು ಪ್ರಚಾರ ಮಾಡಲು ಒಂದು ಸಾಧನವನ್ನಾಗಿ ಮಾಡಿಕೊಂಡರು."[೨೧] ಹಿಂದಿನ ಕಾಲದಲ್ಲಿ ವಿದ್ಯಾಭ್ಯಾಸ ಪಡೆಯದ ಜನರಿಗೆ ಮಾತಿನಿಂದ ತಿಳಿಸಿದರೆ ಅವರಿಗೆ ಅರ್ಥವಾಗುವುದಿಲ್ಲವೆಂದು ತಿಳಿದು ಬುದ್ಧನ ಜೀವನ, ಸಂದೇಶ ಮತ್ತು ಚರಿತ್ರೆಯನ್ನು ಹಾಳೆಗಳ ಮೇಲೆ ಚಿತ್ರಿಸಿ ತೋರಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಬೌದ್ಧ ಕಾಲದಲ್ಲಿ ಅತ್ಯಧಿಕವಾಗಿ ಚಿತ್ರಕಲೆಯು ಬೆಳಕಿಗೆ ಬಂದಿತು. "ಧರ್ಮ ಪ್ರಚಾರಕರು ತತ್ಸಂಬಂಧ ಚಿತ್ರಗಳನ್ನು ಚರ್ಮದ ಹಾಳೆಗಳ ಮೇಲೆ ಚಿತ್ರಿಸಿಕೊಂಡು ಸಂಗಡ ಕೊಂಡೊಯ್ಯುತ್ತಿದ್ದರು."[೨೨] ತಾರನಾಥ ಎಂಬ ಚರಿತ್ರೆಕಾರನು ಬೌದ್ಧ ಸಂಪ್ರದಾಯದ ಕಲಾವಿದರ

ಕುರಿತು ಹೀಗೆ ಬರೆದಿದ್ದಾನೆ. "ಇವರು ಬಹುಮುಖ ಸಾಮರ್ಥ್ಯದವರು ಶಿಲ್ಪಕಲೆ, ವರ್ಣಚಿತ್ರ ಎರಡರಲ್ಲೂ ನಿಷ್ಣಾತರು, ಅನೇಕ ಬೌದ್ಧ ಕಲಾವಿದರು ಬುದ್ಧನ ಕಥೆ ಮತ್ತು ತತ್ತ್ವಗಳನ್ನು ಕಲೆಯ ಮೂಲಕ ಸಾರುತ್ತಿದ್ದರು". ತಾರಾನಾಥನ ಈ ಮಾತಿನಿಂದ ತಿಳಿಯುವುದೇನೆಂದರೆ ಚಿತ್ರಕಲೆಯ ಮೂಲಕ ಬೌದ್ಧ ಧರ್ಮವು ಎಲ್ಲಾ ಕಡೆ ಪಸರಿಸಿರುವುದನ್ನು ಕಾಣಬಹುದು.

ಜೈನ ಚಿತ್ರಕಲೆ

ಚಿತ್ರಕಲೆ ಕ್ಷೇತ್ರದಲ್ಲಿ ಜೈನ ಚಿತ್ರಕಲೆ ಅದರದ್ದೇ ಆದ ವಿಶೇಷತೆಯನ್ನು ಹೊಂದಿದೆ. ಜೈನರಲ್ಲಿ "ಶ್ವೇತಾಂಬರಿಯ ಜೈನರಿಗೆ ಮಹತ್ವಪೂರ್ಣ ಸ್ಥಾನವಿದೆ. "ಪ್ರಶ್ನೆವ್ಯಾಕರಣ ಸೂತ್ರ"ದಲ್ಲಿ ಜೈನರಿಗೆ ಸಂಬಂಧಿಸಿದ ಅನೇಕ ಚಿತ್ರಗಳನ್ನು ರಚಿಸಲಾಗಿದೆ. ಮರ, ಬಟ್ಟೆ ಮತ್ತು ಕಲ್ಲಿನ ಮೇಲೆ ಅನೇಕ ಬಣ್ಣಗಳ ಸಂಯೋಗದಿಂದ ರಚಿಸಿದ ಚಿತ್ರಗಳ ಸಾಮೂಹಿಕ ಹೆಸರು "ಲೇಪಕಂಪ"[೨೪] ಎಂದು ಹೇಳಲಾಗಿದೆ. ಈ ಕಾಲದಲ್ಲಿ ಮಣ್ಣು, ಕಲ್ಲು ಮತ್ತು ಆನೆಯ ದಂತದ ಮೇಲೂ ಚಿತ್ರ ರಚಿಸುತ್ತಿದ್ದರೆಂಬುದಾಗಿ ತಿಳಿಯುತ್ತದೆ. ಅಕ್ಕಿಯ ಪುಡಿಯಿಂದಲೂ ಚಿತ್ರ ಸಿದ್ಧಪಡಿಸುತ್ತಿದ್ದರು. "ಜೈನ ಗ್ರಂಥಗಳಲ್ಲಿ ನಮಗೆ 'ಅಲ್ಪನಾ' ಚಿತ್ರ ಪರಂಪರೆಯೂ ತಿಳಿದುಬರುತ್ತದೆ. ಇವು ಲೋಕ ಕಲೆಯ ಉನ್ನತ ಸ್ವರೂಪದ ಪರಿಚಯ ನೀಡುತ್ತದೆ.

ಜೈನ ಸಾಹಿತ್ಯದಲ್ಲಿ ಚಿತ್ರಕಲೆಯ ಬಗ್ಗೆ ಸುಳಿವು ಕಂಡುಬಂದ ಕಾಲದಲ್ಲಿ "ಜೈನರಲ್ಲಿ ಚಿತ್ರಕಲೆಯನ್ನು ರಚಿಸುವ ಪರಿಕಲ್ಪನೆ ಬೆಳೆದುಬಂತು. ಆದರೂ ಜೈನ ಬಸದಿಗಳು ಹಾಗೂ ಮಠಗಳಲ್ಲಿನ ವರ್ಣಚಿತ್ರಗಳು ಅಲ್ಲಲ್ಲಿ ದೊರಕಿರುವ ಹಸ್ತಪ್ರತಿಗಳಲ್ಲಿನ ಪತ್ರ ಫಲಕ ಚಿತ್ರ ರಚನೆಗಳು ಉದಾಹರಣೆಗಳಾಗಿವೆ."[೨೫] ಜೈನ ಸಾಹಿತ್ಯದಲ್ಲಿ ಚಿತ್ರಕಲೆ ವರ್ಣಚಿತ್ರಗಳಿಂದಾಗಿ ಚಾರಿತ್ರಿಕ ಮತ್ತು ಕಲಾಪರಂಪರೆಯ ಮೌಲ್ಯ ತಿಳಿಸುವಂತಿದೆ.

"ಭಾವ ವಿಲಸತ್ವರ್ಣ ಕ್ರಮವೃತ್ತಿಯಿಂದ ಪ್ರಕಟ ಮಾಡಿದ 'ಪೇಳ್ದ ಚಿತ್ರ ಕೃತಿ' ಎಂಬ ಉಲ್ಲೇಖ ಕವಿರಾಜಮಾರ್ಗದಲ್ಲಿದೆ. ಅದೇ ರೀತಿಯಾಗಿ ವಡ್ಡಾರಾಧನೆ ನವ ಯೌವ್ವನೆಯರಾದ ವಾಮರಥನ ಅಷ್ಟಕುಮಾರಿಯರು ಅಕ್ಷರಾಲೇಖ್ಯ, ಗಣಿತ ಗಾಂಧರ್ವ ನೃತ್ಯ, ಚಿತ್ರಕರ್ಮ ಪತ್ರಚ್ಛೇದಮೆಂದಿಮ ಚತುಷಷ್ಠಿ ಕಳಗಳೊಳಾದ ಮಾನುಂ ಕುಶಲೆಯರ್" ಎಂದು ಹೊಗಳಿರುವುದು ಕಂಡುಬರುತ್ತದೆ."[೨೬] ಜೈನ ಧರ್ಮದ ಪ್ರಚಾರಕ್ಕಾಗಿ ಚಿತ್ರಕಲೆ ಮತ್ತು ಚಿತ್ರಕಲಾವಿದರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿತ್ತು.

ವೈಷ್ಣವ ಚಿತ್ರಕಲೆ

ಕರ್ನಾಟಕದಲ್ಲಿ ವೈಷ್ಣವ ಪರಂಪರೆಗೆ ಸಂಬಂಧಿಸಿದಂತಹ ವಿಶೇಷವಾಗಿ ಭಿತ್ತಿಚಿತ್ರಗಳ ಕುರುಹುಗಳು ಮಂಗಳೇಶನ ಅವಧಿಯಲ್ಲಿ ದೊರಕಿವೆ. "ಕ್ರಿ.ಶ. ೫ರಲ್ಲಿ ರಚನೆಯಾದ ವೈಷ್ಣವ ಗುಹಾಲಯದಲ್ಲಿರಬಹುದಾದರೂ ಸದ್ಯ ಚಿತ್ರಗಳ ವಿವರಗಳು ಸಂಪೂರ್ಣ ನಾಶವಾಗಿವೆ. ಹಾಗಾಗಿ ವೈಷ್ಣವ ಚಿತ್ರಕಲೆಯ ವಿವರಗಳಾವುವೂ ಸಿಗುವುದಿಲ್ಲ. ಕೇವಲ ಅಲ್ಲಲ್ಲಿ ವರ್ಣಗಳ ಕುರುಹುಗಳನ್ನು ಮಾತ್ರ ಕಾಣಬಹುದು."[೨೭]

ಕರ್ನಾಟಕದಲ್ಲಿ ವೈಷ್ಣವ ಧರ್ಮದ ಹಿನ್ನೆಲೆಯಲ್ಲಿ ರಚನೆಗೊಂಡಂತಹ ಚಿತ್ರಕಲೆಯು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇದರಲ್ಲಿ ವಿಷ್ಣು (ಕೃಷ್ಣ) ರಾಮ, ಇತರೆ ದೇವತೆಗಳ ಹಾಗೂ ಆ ದೇವತೆಗಳ ಪರಿವಾರಗಳಂತಹ ವಸ್ತುವಿನ್ಯಾಸಗಳಿಂದ ಕೂಡಿದೆ.

ಗುಪ್ತರ ಚಿತ್ರಕಲೆ

ಗುಪ್ತ ಚಕ್ರವರ್ತಿಗಳು ಕಲೆ ಮತ್ತು ಸಾಹಿತ್ಯದ ಮಹಾ ಪೋಷಕರಾಗಿದ್ದರೆಂಬುದಾಗಿ ತಿಳಿದುಬರುತ್ತದೆ. ವೈಣಿಕನ ಚಿತ್ರದಿಂದ ಕೂಡಿದ ನಾಣ್ಯಗಳು ಹಾಗೂ ಶಾಸನದ ಹೇಳಿಕೆಗಳು ಇದನ್ನು ದೃಢಪಡಿಸುತ್ತವೆ. "ಗುಪ್ತರ ಮತ್ತೊಂದು ನಾಣ್ಯದಲ್ಲಿ ಹಾಗೂ ಎರಡೂ ತನ್ನ ಪಾರ್ಶ್ವಗಳಲ್ಲಿ ಲಕ್ಷ್ಮೀ, ಸರಸ್ವತಿಯರೊಂದಿಗೆ ಚಂದ್ರಗುಪ್ತ ಕುಳಿತಿರುವುದನ್ನು ಚಿತ್ರಿಸಿರುವುದನ್ನು ನೋಡುತ್ತೇವೆ."[೨೮] ಗುಪ್ತರ ಕಾಲದಲ್ಲಿ ಅನೇಕ ಆಕರ್ಷಕವಾದ ಚಿತ್ರಗಳನ್ನು ಕಾಣುತ್ತೇವೆ. ಇದರಲ್ಲಿನ ದೇವ-ದೇವತೆಗಳ, ರಾಜ-ರಾಣಿಯರ, ಸೇವಕರ ಚಿತ್ರಗಳು ಆ ಕಾಲದ ಕಲಾನೈಪುಣ್ಯತೆಯ ನಿದರ್ಶನಗಳಾಗಿವೆ.

ವಾಕಾಟಕರ ಕಾಲದ ಚಿತ್ರಕಲೆ

ದಕ್ಷಿಣದಲ್ಲಿ ಶಾತವಾಹನರ ಬಳಿಕ ವಾಕಾಟಕರು ಅಧಿಕಾರಕ್ಕೆ ಬಂದಿದ್ದರು. "ಪ್ರವರಸೇನನೆಂಬ ವಾಕಾಟಕ ರಾಜನು ಸಾಹಿತ್ಯಾಸಕ್ತನು ಮಾತ್ರವಲ್ಲ. ಕಲೆ ಮತ್ತು ಸೌಂದರ್ಯಗಳ ಎಲ್ಲ ರೂಪಗಳ ಪ್ರೋತ್ಸಾಹಕನೂ ಆಗಿದ್ದಂತೆ ಕಾಣುತ್ತದೆ. ಅಜಂತಾದ ಕೆಲವು ಗುಹೆಗಳಲ್ಲಿ ವಾಕಾಟಕರ ಕಾಲದ ಶಾಸನಗಳಿವೆ ಮತ್ತು ಅವುಗಳು ಈ ರಾಜರ ಕಾಲಕ್ಕೆ ಸೇರಿದವೆಂದು ಖಚಿತವಾಗಿ ಹೇಳಬಹುದು."[೨೯] ಅಲ್ಲದೇ ಚಿತ್ರಕಲೆಗೂ ಸಹ ವಿಶಿಷ್ಟವಾದಂತಹ ಪ್ರೋತ್ಸಾಹ ನೀಡುತ್ತಿದ್ದರು.

ಮೌರ್ಯ ಕಲೆ

ಮೌರ್ಯರ ಕಾಲದ ಅರಸರುಗಳಾದ ಚಂದ್ರಗುಪ್ತ, ಬಿಂದುಸಾರ ಹಾಗೂ ವಿಶೇಷವಾಗಿ ಅಶೋಕ ಇವರ ಕಾಲದಲ್ಲಿ ಲಲಿತಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಿದ್ದರು. ಇವರ ಆಡಳಿತದ ಅವಧಿಯಲ್ಲಿ ಚಿತ್ರಕಲೆಗೆ ಹೆಚ್ಚಿನ ಪ್ರಾಶಸ್ತ್ಯ ದೊರೆಯದಿದ್ದರೂ, ವಾಸ್ತು ಮತ್ತು ಶಿಲ್ಪಕಲೆಗಳಿಗೆ ವಿಶೇಷವಾದಂತಹ ಪ್ರೋತ್ಸಾಹವನ್ನು ನೀಡಲಾಗಿರುವುದನ್ನು ಇವತ್ತಿಗೂ ಅವು ಸಾರಿ ಹೇಳುತ್ತಿವೆ.

ಕಲ್ಯಾಣಿ ಚಾಲುಕ್ಯರು

ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಚಿತ್ರಕಲೆಗೆ ಸಂಬಂಧಿಸಿದಂತೆ ಮೂರನೇ ಸೋಮೇಶ್ವರನ 'ಮಾನಸೋಲ್ಲಾಸ' ಅಥವಾ 'ಅಭಿಲಾಷಿತಾರ್ಥ ಚಿಂತಾಮಣಿ' ಕೃತಿಯು ಉಲ್ಲೇಖಿಸುತ್ತದೆ. ಇದರ ಅಧ್ಯಾಯದಲ್ಲಿ ಚಿತ್ರಕಲೆಯ ರಚನೆಗೆ ಸಂಬಂಧಿಸಿದ ವಿಷಯಗಳನ್ನು (ಚಿತ್ರ ರಚನೆಗೆ ಬೇಕಾಗುವ ಸ್ಥಳ ಅಥವಾ ವಸ್ತುವಿನ ತಯಾರಿ, ಕುಂಚ ಮತ್ತು ಬಣ್ಣಗಳನ್ನು ಸಿದ್ಧಿಗೊಳಿಸಿಕೊಳ್ಳುವ ವಿಧಾನ, ಚಿತ್ರಗಳ ರಚನೆಗೆ ಸಹಾಯಕವಾಗುವ ಸೂತ್ರಗಳು ಇತ್ಯಾದಿ). ಕೂಲಂಕಷವಾಗಿ

ವಿಶ್ಲೇಷಿಸಲಾಗಿದೆ. ಹಾಗಾಗಿ ಈ ಕಾಲಾವಧಿಯಲ್ಲಿ ಚಿತ್ರಕಲೆಯ ತನ್ನ ಮಹತ್ವವನ್ನು ಕಾಯ್ದು ಕೊಳ್ಳುವುದರಲ್ಲಿ ಯಶಸ್ವಿಯಾಗಿತ್ತು"[೩೦] ಎಂದು ಖಚಿತವಾಗಿ ಹೇಳಬಹುದು.

ಚಾಲುಕ್ಯರ ಚಿತ್ರಕಲೆ

ಕರ್ನಾಟಕದಲ್ಲಿ ಶಿಷ್ಟ ಪರಂಪರೆಯ ಚಿತ್ರಕಲಾ ಶೈಲಿಗೆ ಭದ್ರ ಬುನಾದಿಯನ್ನು ಹಾಕಿದವರು ಬಾದಾಮಿ ಚಾಲುಕ್ಯರು. ಇವರ ಆಡಳಿತ ಕಾಲದಲ್ಲಿ ಚಿತ್ರಕಲೆಯು ಸಂಪದ್ಭರಿತವಾಗಿ ಬೆಳೆದುಬಂದ ಬಗ್ಗೆ ಹಲವಾರು ನಿದರ್ಶನಗಳು ನಮಗೆ ಸಿಗುತ್ತವೆ. "ಚಾಲುಕ್ಯರ ಕಾಲದಲ್ಲಿ ದೇವಾಲಯಗಳಿಗೆ ಲಗತ್ತಿಸಿದ ವಿದ್ಯಾಮಂದಿರಗಳಲ್ಲಿ ಉಚಿತವಾದ ಶಿಕ್ಷಣವನ್ನು ಕೊಡುತ್ತಿದ್ದರೆಂದು ಭಾವಿಸಲಾಗಿದೆ."[೩೧] ಚಾಲುಕ್ಯರಲ್ಲಿ ಮಂಗಳೇಶ, ಕೀರ್ತಿವರ್ಮ, ಎರಡನೇ ಪುಲಿಕೇಶಿ ಇವರೆಲ್ಲ ಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದ್ದಾರೆ. ಬಾದಾಮಿಯ ಉತ್ತರ ಗುಡ್ಡದಲ್ಲಿ ಕಂಡುಬಂದಿರುವ ಭಿತ್ತಿಚಿತ್ರಗಳು ಚಾಲುಕ್ಯರ ಪ್ರಾರಂಭದ ಹಂತವನ್ನು ಪ್ರತಿನಿಧಿಸುತ್ತದೆ. ಇವರ ಕಾಲದಲ್ಲಿನ ಚಿತ್ರಶೈಲಿಯು ಬಾದಾಮಿ ಪರಿಸರದಲ್ಲಿಯ ಹಾಗೆ ಅಜಂತಾದ ಕೆಲವು ಗುಹೆಗಳಲ್ಲಿಯೂ ಕಂಡುಬರುತ್ತದೆ. ಇಲ್ಲಿನ ಚಿತ್ರಗಳಲ್ಲಿ ಹಳದಿ ಬಣ್ಣದ ಲೇಪನವನ್ನು ಮಾಡಿದ್ದಾರೆ. ಅದರ ಮೇಲೆ ಕೆಂಪು ಬಣ್ಣದಿಂದ ಚಿತ್ರಗಳನ್ನು ಬರೆಯಲಾಗಿದೆ. ಇಲ್ಲಿ ಮಹಿಳೆಯರ ಚಿತ್ರಗಳು ಹೆಚ್ಚು ಆಕರ್ಷಕವಾಗಿವೆ. ವೈಷ್ಣವ ಗುಹೆಯ ಎಲ್ಲಾ ಗೋಡೆಗಳು ಭಿತ್ತಿಚಿತ್ರಗಳಿಂದ ಅಲಂಕೃತಗೊಂಡ ಬಗ್ಗೆ ಅನೇಕ ಕುರುಹುಗಳು ಸಿಗುತ್ತವೆ. ಒಟ್ಟಾರೆ ಹೇಳಬೇಕಾದರೆ ಚಾಲುಕ್ಯರ ಚಿತ್ರಶೈಲಿಯು ಚಲನಾತ್ಮಕ ಲಯಪೂರ್ವ ಹಾಗೂ ಸೂಕ್ಷ್ಮ ರೇಖೆಗಳಿಂದ ಕೂಡಿದ್ದು, ವರ್ಣಲೇಪನಾ ವಿಧಾನ, ಚಿತ್ರ ಸಂಯೋಜನೆಯ ಕ್ರಮ ಎಲ್ಲವೂ ಸಾಮಾಜಿಕ ನಿಲುವುಗಳಿಗೆ ಸ್ಪಂದಿಸುತ್ತ ಉತ್ತಮವಾಗಿ ಬೆಳೆದುಕೊಂಡು ಬಂದಿದೆ.

ಹೊಯ್ಸಳ ಚಿತ್ರಕಲೆ

ಕರ್ನಾಟಕ ಚಿತ್ರಕಲಾ ಪರಂಪರೆಗೆ ಹೊಯ್ಸಳರು ವಿಶೇಷ ಕೊಡುಗೆಯನ್ನು ನೀಡಿದ್ದಾರೆ. ಅದರಲ್ಲೂ ಇವರು ಶಿಲ್ಪಕಲಾ ಪ್ರಕಾರದಲ್ಲಿ ತಮ್ಮ ಹಿರಿಮೆಯನ್ನು ಮೆರೆದಿರುವಂತೆ ಚಿತ್ರಕಲಾ ಕ್ಷೇತ್ರದಲ್ಲಿಯೂ ಕೂಡ ಒಳ್ಳೆಯ ಕೊಡುಗೆಯನ್ನು ನೀಡಿದ್ದಾರೆ. ಹೊಯ್ಸಳರ ಕಾಲದಲ್ಲಿ ಚಿತ್ರಕಲೆಗಿಂತ ಹೆಚ್ಚಾಗಿ ಶಿಲ್ಪಕಲೆಯು ಹೆಚ್ಚು ಪ್ರಬುದ್ಧತೆಯಿಂದ ಬೆಳೆಯತೊಡಗಿತೆಂಬುದನ್ನು ತಿಳಿಯಬಹುದು. ಹೊಯ್ಸಳರ ಕಾಲದ ಚಿತ್ರಕಲಾ ಪರಂಪರೆಯನ್ನು ಗಮನಿಸಿದಾಗ ಶ್ರವಣಬೆಳಗೊಳದ ಪೊತವ್ವೆಯ ಬಸದಿ, ಶಾಂತಿನಾಥ ಬಸದಿ, ಆದಿತೀರ್ಥಂಕರರ ಬಸದಿಗಳಲ್ಲಿ ಇವರ ಕಾಲದಲ್ಲಿ ಭಿತ್ತಿಚಿತ್ರಗಳು ರಚನೆಯಾಗಿವೆ. ಹೊಯ್ಸಳರ ಕಾಲದಲ್ಲಿ ಇದ್ದಂತಹ ಚಿತ್ರಕಲಾ ಶೈಲಿಯ ಬಗ್ಗೆ ಅಂದಿನ ಕಾಲದಲ್ಲಿಯೇ ರಚನೆಗೊಂಡ ಶಾಸನಗಳು ಮತ್ತು ಸಾಹಿತ್ಯ ಕೃತಿಗಳು ಸಾಕಷ್ಟು ವಿವರಣೆಯನ್ನು ನೀಡುತ್ತವೆ.

"ಹೊಯ್ಸಳರ ಚಿತ್ರಕಲೆಗೆ ಸಂಬಂಧಿಸಿದಂತೆ ಮೂಡಬಿದ್ರೆಯ ಜೈನಮಠದಲ್ಲಿ ವರ್ಣಚಿತ್ರಗಳಿಂದ ಕೂಡಿದ ಹಸ್ತಪ್ರತಿಗಳಿವೆ. ಹಾಗೆಯೇ ಬೇಲೂರು ದೇವಸ್ಥಾನದ ತಾಮ್ರಶಾಸನಗಳ ಅಲಂಕಾರಿಕ

ಸಾಲುಗಳ ಬೆಳವಣಿಗೆಯೊಂದಿಗೆ ಈ ಹಸ್ತಪ್ರತಿಗಳ ಬರವಣಿಗೆಯನ್ನು ಹೋಲಿಸುವುದು ಸ್ವಾರಸ್ಯಕರವಾಗಿದೆ. ಉಜ್ವಲವಾದ ಬಣ್ಣಗಳಿಂದ ಕೂಡಿದ್ದು, ಇವೆಲ್ಲ ದೊಡ್ಡ ತಾಳೆಗರಿಗಳ ಮೇಲಿರುವ ಈ ವರ್ಣಚಿತ್ರಗಳು ಗ್ರಂಥದಲ್ಲಿನ ಅಕ್ಷರಗಳ ಸೌಂದರ್ಯ ಹಾಗೂ ಅದರ ಜೊತೆಗಿರುವ ಚಿತ್ರಗಳ ದೃಷ್ಟಿಯಿಂದ ಮಹತ್ವದ್ದಾಗಿದೆ."[೨೨] ಇಲ್ಲಿ ಚಿತ್ರ, ಶಿಲ್ಪ, ಶಾಸನ, ಹಸ್ತಪ್ರತಿಗಳಿಗೆ ಸಂಬಂಧಿಸಿದಂತೆ ಪ್ರೋತ್ಸಾಹವನ್ನು ನೀಡುತ್ತಿದ್ದರು.

ಪಲ್ಲವರ ಚಿತ್ರಕಲೆ

"ಕಂಚಿಯ ಪಲ್ಲವರು ದಕ್ಷಿಣ ಭಾರತದಲ್ಲಿ ಪ್ರಾಚೀನ ರಾಜ ಸಂತತಿಯನ್ನು ಪ್ರತಿನಿಧಿಸುತ್ತಾರೆ. "ಏತದ್ ಅನಿಷ್ಟಕಂ ಅದ್ರುಮಮ್ ಅಲೌಹಂ ಅಶುದ್ದಂ ವಿಚಿತ್ರ ಚಿತ್ತೇನ ನಿರ್ಮಾಪಿತಂ ನೃಪೇಣ ಬ್ರಹ್ಮೇಶ್ವರ ವಿಷ್ಣುಲಕ್ಷ್ಮೀತಾಯತಾನಾಂ" ಎಂಬ ಮಂಡಗಪಟ್ಟುವಿನಲ್ಲಿರುವ ಅವರ ಪ್ರಸಿದ್ಧ ಶಾಸನವು ಇಟ್ಟಿಗೆ, ಮರ, ಲೋಹ ಅಥವಾ ಗಾರೆಯ ಅವಶ್ಯಕತೆಯಿಲ್ಲದೆಯೇ ಬಂಡೆಗಳನ್ನು ಕಡಿದು ದೇವಾಲಯಗಳನ್ನು ನಿರ್ಮಿಸಬಹುದೆಂಬುದನ್ನು ಇದು ಪ್ರಥಮವಾಗಿ ತೋರಿಸುತ್ತದೆ"[೨೩] ಎಂಬುದನ್ನು ತಿಳಿಸುತ್ತದೆ. ರಾಜನು (ವಿಚಿತ್ರ ಚಿತ್ರ ವಿಲಕ್ಷಣ ಪ್ರಜ್ಞೆಯುನ್ನುಳ್ಳವನು) 'ಚಿತ್ರಕಾರಪುಲ'(ಚಿತ್ರಗಾರರಲ್ಲಿ ಹುಲಿ) ಮತ್ತು 'ವಿಲಾಸ ಚೈತ್ಯಕಾರಿ' ಮೊದಲಾದ ಬಿರುದುಗಳನ್ನು ಹೊಂದಿದ್ದನು. ಅವನ ಬಿರುದುಗಳು ಅವನ ಕಲೆಯ ಅಭಿರುಚಿಯ ದ್ಯೋತಕಗಳಾಗಿವೆ ಎಂಬುದನ್ನು ತಿಳಿಯಬಹುದಾಗಿದೆ.

ಮೊಗಲ್ ಚಿತ್ರಕಲೆ

ಮೊಗಲ್ ಸಾಮ್ರಾಜ್ಯದ ಸ್ಥಾಪಕನಾದ ಬಾಬರನು ಚಿತ್ರಕಲಾ ಪ್ರೇಮಿಯಾಗಿದ್ದನು. ಅಂತೆಯೇ ಭಾರತೀಯ ಕಲಾವಿದರಿಗೆ ಈ ಮೊಗಲರು ಆಶ್ರಯವನ್ನು ನೀಡಿದರು. ಮೊಗಲರ ಚಿತ್ರಕಲೆಯಲ್ಲಿ ಭಾರತೀಯ ಮತ್ತು ಪರ್ಶಿಯಾದ ಕಲಾವಿದರುಗಳು ಜೊತೆಯಾಗಿ ಚಿತ್ರಗಳ ತಂತ್ರ, ಶೈಲಿ, ಪ್ರಭಾವ ಬಳಸಿಕೊಂಡು ಚಿತ್ರಗಳನ್ನು ಬಿಡಿಸುತ್ತಿದ್ದರು. ಅಂತೆಯೇ ಚಿತ್ರಕಲೆಯ ಈ ಎರಡು ಶೈಲಿಗಳ ಮಧುರ ಮಿಲನವಾಯಿತು. ಈ ಕಾರಣದಿಂದ "ಭಾರತ ಮತ್ತು ಪರ್ಶಿಯಾವೆಂಬ ಮಿಶ್ರ ಚಿತ್ರಶೈಲಿ ಜನ್ಮ ತಾಳಿತು,"[೨೪] ಮುಂದೆ ತಂದೆಗೆ ತಕ್ಕ ಮಗನೆಂಬ ಹೆಗ್ಗಳಿಕೆಗೆ ಅಕ್ಬರನು ಪಾತ್ರನಾಗುತ್ತಾನೆ. ಇವನ ಕಾಲದಲ್ಲಿ ಪರ್ಶಿಯನ್ ಭಾಷೆಗೆ ತರ್ಜುಮೆಗೊಳಿಸಿದ ಹಿಂದೂ ಪುರಾಣಗಳ ಹಸ್ತಪ್ರತಿಗಳಲ್ಲೂ ಪರ್ಶಿಯಾದ ಶಾಸ್ತ್ರೀಯ ಕಾವ್ಯಗಳ ಹಸ್ತಪ್ರತಿಗಳಲ್ಲಿಯೂ ಹಲವಾರು ಚಿತ್ರಗಳು ರಚಿಸಲ್ಪಟ್ಟಿರುವುದನ್ನು ನೋಡಬಹುದು.

ಮತ್ತೋರ್ವ ಅರಸನಾದ ಜಹಾಂಗೀರನೂ ಚಿತ್ರಕಲಾ ಪೋಷಕನಾಗಿದ್ದನು. ಕಲೆಯ ಮೇಲೆ ವಿಶಿಷ್ಟವಾದ ಅಭಿರುಚಿ ಮತ್ತು ಸೂಕ್ಷ್ಮವಾದ ವಿಮರ್ಶಾ ದೃಷ್ಟಿಯುಂಟೆಂದು ಅಭಿಮಾನದಿಂದ ಹೀಗೆ ಹೇಳುತ್ತಿದ್ದನು. "ನನಗೆ ಚಿತ್ರಗಳೆಂದರೆ ಇಷ್ಟ. ಒಂದು ಚಿತ್ರವನ್ನು ನೋಡಿ ಅದನ್ನು ಯಾವ ಕಲಾವಿದನು ರಚಿಸಿದನೆಂದು ಹೇಳಬಲ್ಲೆನು. ಹಲವಾರು ಕಲಾವಿದರು ಸೇರಿ ಒಂದು

ಚಿತ್ರ ಮಾಡಿದರೂ ಯಾವ ಯಾವ ಭಾಗಗಳನ್ನು ಯಾರು ಯಾರು ಚಿತ್ರಿಸಿದರೆಂಬುದನ್ನು ಹೇಳಬಲ್ಲೆನು". ಜಹಾಂಗೀರನ ಕಾಲದಲ್ಲಿ ಹೆಚ್ಚಾಗಿ ನಿಸರ್ಗ ಸೌಂದರ್ಯಕ್ಕೆ ಸಂಬಂಧಿಸಿದ ಚಿತ್ರಗಳನ್ನು ಕಲಾವಿದರು ಬಿಡಿಸುತ್ತಿದ್ದರೆ; ಒಂಟೆಕಾಳಗ, ಮೊಗಲ ಸುಂದರಿ, ಬೇಟೆಯ ಚಿತ್ರಗಳು ಒಳಗೊಂಡಂತೆ ಹೂವುಗಳು, ಮೃಗಗಳು ಹಾಗೂ ಪಕ್ಷಿಗಳ ಚಿತ್ರಗಳನ್ನು ಅಧಿಕ ಸಂಖ್ಯೆಯಲ್ಲಿ ರಚನೆ ಮಾಡುತ್ತಿದ್ದರು. ರಾಜಧಾನಿಯಲ್ಲಿ ತೋರಿಬಂದ ಅಪೂರ್ವ ಪ್ರಾಣಿ, ಪಕ್ಷಿಗಳ ಚಿತ್ರ ರಚಿಸುವ ಸಲುವಾಗಿಯೇ ಆಸ್ಥಾನದಲ್ಲಿ ಕೆಲವು ಚಿತ್ರಕಲಾವಿದರನ್ನು ಜಹಾಂಗೀರನು ನಿಯೋಜಿಸಿದ್ದನು. ಈ ಹಿನ್ನೆಲೆಯಲ್ಲಿ ಗಮನಿಸಿದರೆ ಚಿತ್ರಕಲಾ ಶಿಕ್ಷಣಕ್ಕೆ ಇವರು ವಿಶೇಷ ಪ್ರೋತ್ಸಾಹ ನೀಡುತ್ತಿದ್ದರೆಂದು ಊಹಿಸಿಕೊಳ್ಳಬಹುದು.

ಪರ್ಸಿಬ್ರೌನ್‌ರವರು ಹೇಳಿದಂತೆ "ಮೊಗಲ ತಸವೀರುಗಳಲ್ಲಿ ಶ್ರೇಷ್ಠವೆನಿಸದಿದ್ದರೂ ಸಾಮಾನ್ಯ ಉದಾಹರಣೆಗಳೆಂದರೆ ಅರಸು ವಂಶದ ಚಿತ್ರಗಳು. ರಾಜವಂಶೀಯರ ಈ ಚಿತ್ರಗಳು, ಅಲ್ಲದೆ ಪ್ರಭಾ ಮಂಡಲ ಮತ್ತಿತರ ಅರಸೊತ್ತಿಗೆಯ ಕುರುಹುಗಳನ್ನು ಸಹಿತ ಬರೆಯುತ್ತಿದ್ದರು. ಅಲ್ಲಲ್ಲಿ ಸುವರ್ಣಮಯ ಆಭರಣಗಳನ್ನು ಬಿಡಿಸಿ ಅದರ ತೇಜಸ್ಸನ್ನು ಮತ್ತಷ್ಟು ಹೆಚ್ಚಿಸುತ್ತಿದ್ದರು. ಅಲ್ಲಲ್ಲಿ ಸಕಾಲಕ್ಕೆ ಉಪಯೋಗಿಸುವ ಅತಿ ತೆಳ್ಳಗಿನ ಬಟ್ಟೆಗಳ ಚಿತ್ರವನ್ನು ಬರೆದು ಅದರೊಳಗಿನಿಂದ ಶರೀರ ಸೌಂದರ್ಯವನ್ನು ಪ್ರದರ್ಶಿಸುತ್ತಿದ್ದರು."[೩೫]

ವಿಜಯನಗರ ಚಿತ್ರಕಲೆ

ವಿಜಯನಗರ ಚಿತ್ರಕಲೆಗೆ ಭಾರತದ ಕಲಾ ಇತಿಹಾಸದಲ್ಲಿ ಅತ್ಯುತ್ತಮ ಸ್ಥಾನವನ್ನು ಕೊಡಲಾಗಿದೆ. ಕರ್ನಾಟಕದಲ್ಲಿ ವಿಜಯನಗರದ ದೊರೆಗಳು ಶ್ರೇಷ್ಠ ಆಡಳಿತ ಮಾಡಿರುವುದಕ್ಕಾಗಿ ಹೆಸರುವಾಸಿಯಾದಂತೆ ಎಲ್ಲಾ ರಾಜವಂಶಸ್ಥರಿಗಿಂತ ಭಿನ್ನವಾಗಿ ಗುರುತಿಸಿಕೊಂಡಿರುವುದನ್ನು ಕಾಣಬಹುದು. ಇವರು ತಮ್ಮ ಕಾಲದಲ್ಲಿ ಶಿಲ್ಪ ಮತ್ತು ಚಿತ್ರಕಲೆಗೆ ಸಂಬಂಧಿಸಿದಂತೆ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಆದ್ದರಿಂದ ಈ ಕಾಲವನ್ನು ಅತ್ಯಂತ ಮಹತ್ವದ ಕಾಲವೆಂದು ಹೇಳಬಹುದಾಗಿದೆ. "ಅರಮನೆ, ಮಠ, ಮಂದಿರಗಳಿಗೆ ಮಾತ್ರ ಸೀಮಿತವಾಗಿದ್ದ ಚಿತ್ರಕಲೆಯು ಈ ಅರಸರ ಕಾಲದಲ್ಲಿ ಮನೆ ಮನೆಯಲ್ಲೂ ಮನಮನಗಳಲ್ಲೂ ಶೋಭಿಸುವಂತಾಯಿತು."[೩೬]

"ವಿಜಯನಗರ ಸಾಮ್ರಾಜ್ಯದ ಚಿತ್ರಕಲೆಯು ಪ್ರಾರಂಭವಾಗಿದ್ದು ತಿರುಪರುತ್ತಿಕುಸ್ರಮ್‌ನ ವರ್ಧಮಾನ ದೇವಾಲಯದ ಸಂಗೀತ ಮಂಟಪದಲ್ಲಿ ಕಾಣಬಹುದು. ಅದೇ ರೀತಿ ಕರ್ನಾಟಕದಲ್ಲಿ ಹಂಪಿಯ ವಿರೂಪಾಕ್ಷ ದೇವಾಲಯದ ಬೃಹತ್ ಮಂಟಪದ ಛಾವಣಿಯ ಮೇಲೆ ವರ್ಣಚಿತ್ರಗಳ ಅದ್ಭುತ ಸರಣಿ ಇದೆ."[೩೭] ಇದಲ್ಲದೆ ಭಿತ್ತಿಚಿತ್ರಗಳು, ಕಿರುರೂಪಚಿತ್ರಗಳು ಮತ್ತು ಹಸ್ತಪ್ರತಿ ಚಿತ್ರಗಳೂ ಇವರ ಕಾಲದಲ್ಲಿ ರಚನೆಯಾಗಿರುವುದನ್ನು ಕಾಣುತ್ತೇವೆ. ಹಲವು ಚಿತ್ರಗಳು ಲಭ್ಯವಿಲ್ಲದಿದ್ದರೂ ವಿದೇಶಿ ಪ್ರವಾಸಿಗರ ಬರಹಗಳು, ಕೆಲವು ದೇಶಿಯ ಬರಹಗಾರರ ವಿವರಣೆಗಳು ವಿಜಯನಗರ ಅರಮನೆ ಮತ್ತು ಇನ್ನಿತರ ಮನೆಗಳು, ದೇವಾಲಯಗಳು, ಮಂಟಪಗಳು ವೈವಿಧ್ಯಮಯ ಚಿತ್ರಗಳಿಂದ ಅಲಂಕಾರಗೊಂಡಿರುವ ಬಗ್ಗೆ ಮಾಹಿತಿ ಸಿಗುತ್ತದೆ.

"ಅರಮನೆ ಅಂತಃಪುರ ನೃತ್ಯಶಾಲೆ, ದರ್ಬಾರ್ ಭವನಗಳಲ್ಲಿ ದೇಶ ವಿದೇಶಗಳ ಜನಜೀವನ ಬಿಲ್ಲು ಬಾಣಗಳನ್ನು ಹಿಡಿದಿರುವ ನಾರಿಯರು, ನೃತ್ಯಭಂಗಿಗಳು ಮೊದಲಾದ ಸೊಗಸಾದ ವರ್ಣಚಿತ್ರಗಳಿದ್ದವು. ವಿಜಯನಗರ ಸಾಮ್ರಾಜ್ಯದ ಆಶ್ರಯದಲ್ಲಿ ಚಿತ್ರಕಲೆ ಸಾಕಷ್ಟು ಅಭಿವೃದ್ಧಿ ಹೊಂದಿತ್ತು"[೩೮] ಎಂಬುದಕ್ಕೆ ಯಾವ ಆತಂಕವೂ ಕಾಡುವುದಿಲ್ಲ.

"ಚಾಲುಕ್ಯ, ಚೋಳ, ಪಲ್ಲವ ಮತ್ತು ಹೊಯ್ಸಳರ ಶೈಲಿಯ ಎಲ್ಲಾ ಮಿಶ್ರಣಗಳಿಗಿಂತ ಭಿನ್ನವಾದ ಹೊಸ ಶೈಲಿಯಾಗಿ ವಿಜಯನಗರ ಚಿತ್ರಕಲೆ ರೂಪು ತಾಳಿತು."[೩೯] ಈ ಹಿನ್ನೆಲೆಯಲ್ಲಿ ಎಲ್ಲರಿಗಿಂತ ಭಿನ್ನವಾಗಿ ಚಿತ್ರಕಲೆಗೆ ಪ್ರೋತ್ಸಾಹ ನೀಡುತ್ತಿದ್ದರು. ಜೊತೆಗೆ ಚಿತ್ರಕಲಾ ಶಿಕ್ಷಣಕ್ಕೂ ಇವರ ಕಾಲದಲ್ಲಿ ವಿಶೇಷ ಮನ್ನಣೆ ದೊರೆತಿದೆ ಎಂದು ತಿಳಿಯಬಹುದು.

ಮೈಸೂರು ಚಿತ್ರಕಲೆ

ಹತ್ತೊಂಭತ್ತನೆಯ ಶತಮಾನದ ಆದಿಯಲ್ಲಿ ಮೈಸೂರು ಮುಮ್ಮಡಿ ರಾಜರ ಒಡೆಯರ ಆಶ್ರಯದಲ್ಲಿ ಮೈಸೂರು ಚಿತ್ರಕಲಾ ಪದ್ಧತಿ ಅಭಿವೃದ್ಧಿ ಹೊಂದಿತು. ಚಿತ್ರಕಲೆ ಅಲ್ಲದೇ ಸಾಹಿತ್ಯ ಮತ್ತು ಸಂಗೀತಕ್ಕೆ ವಿಶೇಷ ಪ್ರೋತ್ಸಾಹ ನೀಡುವ ಮೂಲಕ ವಿಜಯನಗರ ಪತನದ ನಂತರದಲ್ಲಿ ಸ್ವತಂತ್ರಗೊಂಡ ಸಂಸ್ಥಾನದಲ್ಲಿ ಮೈಸೂರು ಸಹ ಒಂದಾಗಿದೆ. "ಮೈಸೂರು ಅರಸರ ವಂಶವೃಕ್ಷವನ್ನು ನಿರೂಪಿಸುವ ಸುಂದರ ಕೃತಿಯಾದ ಸಂತಾನಾಂಬುಜ, ಆನೆ ಕಟ್ಟಿದ ರಥದಲ್ಲಿ ಕುಳಿತು ಜಂಬೂ ಸವಾರಿ, ಹುಲಿಬೇಟೆ, ವಸಂತೋತ್ಸವದ ದೃಶ್ಯ ಮೊದಲಾದ ಚಿತ್ರಗಳಿವೆ. "ಶ್ರೀತತ್ವನಿಧಿ" ಎಂಬ ಗ್ರಂಥದಲ್ಲಿ ಶ್ಲೋಕಗಳಿಗನುಸಾರವಾಗಿ ಪ್ರತಿ ಪುಟದಲ್ಲೂ ಚಿತ್ರಗಳನ್ನು ರಚಿಸಲಾಗಿತ್ತು."[೪೦]

ಮೈಸೂರು ಅರಸರ ಕಾಲದಲ್ಲಿ ಭಿತ್ತಿಚಿತ್ರಗಳು, ಕಿರುರೂಪ ಚಿತ್ರಗಳು, ಹಸ್ತಪ್ರತಿ ಚಿತ್ರಗಳು ರಚನೆಗೊಂಡಿವೆ. ಇವರ ಕಾಲದ ಭಿತ್ತಿಚಿತ್ರಗಳು, ಶ್ರೀರಂಗಪಟ್ಟಣ, ಮೈಸೂರು, ಮೂಡಬಿದ್ರೆ, ಶ್ರವಣಬೆಳಗೊಳಗಳಲ್ಲಿ ಕಂಡುಬರುತ್ತವೆ. ನಂಜುಂಡ ಕವಿಯ "ಋಷಭೇಂದ್ರ ವಿಲಾಸ" ಹಸ್ತಪ್ರತಿಗಳಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಚಿತ್ರಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಶ್ರೀ ತತ್ವನಿಧಿಯಲ್ಲಿ ಸಂಗೀತಕ್ಕೆ ಸಂಬಂಧಿಸಿದಂತೆ 'ರಾಗಮಾಲಾ' ಚಿತ್ರಗಳಿದ್ದು ನಾಯಕ, ನಾಯಕಿಯರ ಹಿನ್ನೆಲೆಯಲ್ಲಿ ಬೇರೆ ಬೇರೆ ರಾಗಗಳಿಗೆ ಸಂಬಂಧಿಸಿದ ಹಲವಾರು ಚಿತ್ರಗಳನ್ನು ರಚಿಸಲಾಗಿದೆ. ಮೈಸೂರು ಅರಸರ ಕಾಲದಲ್ಲಿ ಗಂಜೀಪಾ ಎಂಬ ವಿಶಿಷ್ಟ ಚಿತ್ರಕಲಾ ಪ್ರಕಾರವು ಹೆಚ್ಚು ಬಳಕೆಯಲ್ಲಿತ್ತು.

ಸುರಪುರ ಚಿತ್ರಕಲೆ

ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯದ ಪತನದ ನಂತರದಲ್ಲಿ ಅಸ್ತಿತ್ವದಲ್ಲಿದ್ದ ಸಂಸ್ಥಾನಗಳಲ್ಲಿ ಸುರಪುರ ಸಂಸ್ಥಾನವೂ ಒಂದು. "ರಾಜಾ ರಾಘವ ಪಾಮನಾಯಕ ಅವರಿಂದ ಮೊದಲ್ಗೊಂಡು ಕೊನೆಯವನಾದ ರಾಜಾ ನಾಲ್ವಡಿ ವೆಂಕಟಪ್ಪನಾಯಕರವರೆಗಿನ ಅವಧಿಯಲ್ಲಿ ಸಂಗೀತ, ಸಾಹಿತ್ಯ ಹಾಗೂ ಚಿತ್ರಕಲೆಗಳಿಂದ ಸುರಪುರ ಸಂಸ್ಥಾನವು ಮಹತ್ವಪೂರ್ಣ ಕೇಂದ್ರವೆನಿಸಿಕೊಂಡಿತ್ತು."[೪೧] ಸುರಪುರದ ಚರಿತ್ರೆಯನ್ನು ನೋಡಿದಾಗ ಅಲ್ಲಿನ ಅರಸರು ಪಂಡಿತರಿಗೆ, ಚಿತ್ರಕಲಾವಿದರಿಗೆ, ಸಂಗೀತಗಾರರಿಗೆ ಆಶ್ರಯವನ್ನು ನೀಡುತ್ತಿದ್ದರು ಎಂಬುದಾಗಿ ತಿಳಿಯುತ್ತದೆ.

"ಸುರಪುರ ಆಸ್ಥಾನದ ಕಲಾವಿದರುಗಳಲ್ಲಿ ಬೆನಕಯ್ಯ ಮತ್ತು ಬಾನಯ್ಯ ಎಂಬವರು 'ಚಿತ್ರ ಮತ್ತು ಶಿಲ್ಪಶಾಸ್ತ್ರ ಬಲ್ಲವರಾಗಿದ್ದರಿಂದ ದೇವಾನುದೇವತೆಗಳ, ಋಷಿ-ಮುನಿಗಳ ಮತ್ತು ಮಾನವರ ಚಿತ್ರಗಳನ್ನು ಶಾಸ್ತ್ರಗಳ ಪದ್ಧತಿಯಂತೆ ರಚಿಸಿದ್ದಾರೆ."[೪೨] ಮೂಲತಃ ಆಂಧ್ರದಿಂದ ಬಂದಂತಹ ಗರುಡಾದ್ರಿ ಮನೆತನದವರು ಈ ಪ್ರದೇಶದಲ್ಲಿ ಪ್ರಮುಖವಾಗಿ ಚಿತ್ರರಚನೆ ಮಾಡಿರುವುದರಿಂದ ಸುರಪುರ ಚಿತ್ರಕಲೆಯನ್ನು "ಗರುಡಾದ್ರಿ ಶೈಲಿ" ಎಂಬುದಾಗಿ ಕರೆಯುತ್ತಾರೆ. ಈ ಮನೆತನದಲ್ಲಿ ಚಿತ್ರಕಲೆಯನ್ನು ಪ್ರಮುಖವಾಗಿ ೩ ರೀತಿಯಲ್ಲಿ ಬೆಳೆಸಿದ್ದಾರೆ. ಅವುಗಳೆಂದರೆ ಭಿತ್ತಿ ಚಿತ್ರಗಳು, ಕಿರುರೂಪ ಚಿತ್ರಗಳು, ಹಸ್ತಪ್ರತಿ ಚಿತ್ರಗಳು ಇವು ವಿಶೇಷವಾಗಿ ಸುರಪುರದ ಅರಮನೆಯ ಹತ್ತಿರವಿರುವ ರುದ್ರಸ್ವಾಮಿ ಮಠ ಮತ್ತು ಗೆಜ್ಜೆಸ್ವಾಮಿ ಮಠಗಳಲ್ಲಿ ಕಂಡುಬರುತ್ತದೆ. ಇಲ್ಲಿನ ಚಿತ್ರವಿನ್ಯಾಸ ವಿಜಯನಗರ ಶೈಲಿಯ ಪ್ರಭಾವ ಮತ್ತು ಪ್ರೇರಣೆಯಿಂದಾಗಿವೆ"[೪೩] ಎಂಬುದನ್ನು ತಿಳಿಯುತ್ತದೆ.

"ಸುರಪುರ ಸಂಸ್ಥಾನದ ಅರಸರು ಹೈದ್ರಾಬಾದ್ ನಿಜಾಮರ ಸಾಮಂತರಾಗಿದ್ದು ಅವರೊಂದಿಗೆ ಇದ್ದ ರಾಜಕೀಯ ಸಂಬಂಧದಿಂದಾಗಿ ಸಂಸ್ಥಾನದಲ್ಲಿ ಚಿತ್ರಕಲೆ ಬೆಳೆಯಲು ಕಾರಣವಾಯಿತೆಂದು ಜಗದೀಶ್ ಮಿತ್ತಲ್ ಅವರು ಅಭಿಪ್ರಾಯಪಡುತ್ತಾರೆ".[೪೪]

ಕಾವಿ ಚಿತ್ರಕಲೆ

ಕಾವಿ ಚಿತ್ರಕಲೆ ಒಂದು ವಿಶಿಷ್ಟ ಪ್ರಕಾರದ ಚಿತ್ರಕಲೆ. ಏಕವರ್ಣೀಯ ಸೊಬಗಿನ ಈ ಚಿತ್ರಕಲೆ ಅನೇಕ ವೈಶಿಷ್ಟ್ಯಗಳಿಂದ ಕೂಡಿದ್ದಾಗಿದೆ. "ಕಾವಿ ಕಲೆಗೆ ತನ್ನದೇಯಾದಂತಹ ಇತಿಹಾಸವಿದೆ. ೧೩-೧೪ನೇ ಶತಮಾನದ ಹೊತ್ತಿಗೆ ಗೋವಾ ಮೂಲದ ಕೊಂಕಣಿ ಮತಸ್ಥರಿಂದ ಆರಂಭಗೊಂಡು ಕರ್ನಾಟಕವನ್ನು ಪ್ರವೇಶಿಸಿದೆ. ಗೋವಾದಲ್ಲಿನ ರಾಜಕೀಯ ಪರಿಸ್ಥಿತಿಯಿಂದಾಗಿ ಅಲ್ಲಿನ ಕೊಂಕಣಿ ಮತಸ್ಥರೆಲ್ಲರೂ ಕರ್ನಾಟಕದ ಉತ್ತರ ಭಾಗದ ಕರಾವಳಿಗೆ ಬಂದು ನೆಲೆಸಿದರು. ಇವರು ಹೆಚ್ಚಾಗಿ ದೇವಾನು-ದೇವತೆಗಳ ದೇವಾಲಯಗಳು ಹಾಗೂ ಮಠ-ಮಂದಿರಗಳಲ್ಲಿನ ಭಿತ್ತಿಗಳಲ್ಲಿ ಕಾವಿ ಚಿತ್ರಗಳನ್ನು ರಚಿಸಿರುತ್ತಾರೆ."[೪೫] ಇಂದಿಗೂ ಕರಾವಳಿಯ ಭಾಗದ ಮನೆ, ಅರಮನೆ, ಮಠ ಹಾಗೂ ದೇವಾಲಯಗಳಲ್ಲಿ ಕಾವಿ ಚಿತ್ರಗಳನ್ನು ನಾವು ಕಾಣಬಹುದು.

ಕಿನ್ನಾಳದ ಕಲೆ

ಕೊಪ್ಪಳ ಜಿಲ್ಲೆಯಿಂದ ಸುಮಾರು ೧೦ ಕಿ.ಮೀ. ದೂರದಲ್ಲಿರುವುದು ಒಂದು ಪುಟ್ಟ ಹಳ್ಳಿ ಕಿನ್ನಾಳ. ಇಲ್ಲಿನ ಕಲಾ ಕುಟುಂಬಗಳ ಮನೆತನದ ಹೆಸರು ಚಿತ್ರಗಾರ ಎಂಬುದಾಗಿದೆ. ವಂಶಪರಂಪರೆಯಿಂದ ಬಂದಂತಹ ಕಲೆಗಾರಿಕೆ ಇವರದ್ದಾಗಿದೆ. ದೇವಿ, ದೇವತೆಗಳ ವಿಗ್ರಹಗಳು, ಹಣ್ಣಿನ ತಟ್ಟೆಗಳು, ಗ್ರಾಮದೇವತೆಯ ಮೂರ್ತಿಗಳು, ದ್ವಾರಪಾಲಕರ ಮೂರ್ತಿಗಳನ್ನು, ಪಶುಪಕ್ಷಿ, ಪ್ರಾಣಿಗಳು ಮುಂತಾದವುಗಳ ರಚನೆಗಳಲ್ಲಿ ಈ ಕಲಾವಿದರ ಕೌಶಲ್ಯವನ್ನು ಕಾಣಬಹುದು. ಈ ಕಲಾವಿದರು ವಿಜಯನಗರ ಪತನದ ನಂತರ ಇಲ್ಲಿಗೆ ಬಂದು ನೆಲೆಸಿ ತಮ್ಮ ಬದುಕನ್ನು

ನಡೆಸಿಕೊಂಡು ಹೋಗುತ್ತಿದ್ದಾರೆ. ಈ ಮನೆತನಗಳಲ್ಲಿ ಕಿನ್ನಾಳ ಕಲೆ ಅನೌಪಚಾರಿಕ ಶಿಕ್ಷಣ ಪದ್ಧತಿಯ ಮೂಲಕ ಬೆಳೆದು ಬಂದಿರುವುದನ್ನು ನೋಡುತ್ತೇವೆ. ಒಂದು ಮನೆತನದಲ್ಲಿ ಒಬ್ಬ ವ್ಯಕ್ತಿ ಕಲೆಯನ್ನು ಕಲಿತು, ಕಲೆಯ ರಚನೆಯಲ್ಲಿ ನಿರತರಾಗಿದ್ದರೆ ಆ ಮನೆಯವರು ಅದನ್ನು ನೋಡಿ ಕಲೆಯನ್ನು ರೂಢಿಸಿಕೊಂಡು ತಾವೂ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಕಿನ್ನಾಳದಲ್ಲಿರುವಂತಹ ಅನೇಕ ಮನೆತನಗಳು, ಕುಟುಂಬಗಳು ಈ ಕಲೆಯನ್ನು ವೃತ್ತಿಯಾಗಿಸಿಕೊಂಡು ಇದರಿಂದ ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಈ ಕಲೆಯು ಕಲೆಯು ರಾಷ್ಟ್ರೀಯ ಪ್ರಶಸ್ತಿಗೆ ಪಾತ್ರವಾಗಿದ್ದು ಅಂತಾರಾಷ್ಟ್ರೀಯ ಪ್ರಸಿದ್ಧಿಯನ್ನು ಪಡೆದಿದೆ.

೨.೨. ಮಧ್ಯಕಾಲೀನ ಸಂದರ್ಭದಲ್ಲಿ ಶೈಕ್ಷಣಿಕ ವ್ಯವಸ್ಥೆ

"ಭಾರತಕ್ಕೆ ಬ್ರಿಟಿಷರ ಆಗಮನ ಮತ್ತು ಹಿಂದೂ ಸಾಮ್ರಾಜ್ಯಗಳ ಪತನದ ಅವಧಿಯ ನಡುವಿನ ಸುಮಾರು ಏಳು ಶತಮಾನಗಳ ಅವಧಿಯನ್ನು ಮುಸ್ಲಿಮರ ಆಳ್ವಿಕೆ ಎನ್ನಬಹುದು. ಇದನ್ನು ಭಾರತೀಯ ಇತಿಹಾಸದಲ್ಲಿ ಮಧ್ಯಕಾಲೀನ ಯುಗವೆಂದು ಗುರುತಿಸಲಾಗಿದೆ."[೪೬] ಮುಸ್ಲಿಂ ಅರಸರ ಚಿತ್ರಕಲೆಯು ಉಸೂಪ್‌ಷಹ(ಕ್ರಿ.ಶ. ೧೪೮೯)ನಿಂದ ಅಲಿ ಆದಿಲ್‌ಷಾಹ(ಕ್ರಿ.ಶ. ೧೫೮೦)ರವರೆಗೆ ಬೆಳೆದು ಬಂದಂತಹ ಮೊದಲ ಹಂತವೇ ಬಿಜಾಪುರ ಚಿತ್ರಕಲೆ. ಬಿಜಾಪುರ ಚಿತ್ರಕಲೆ ಇಬ್ರಾಹಿಮ್ ಕಾಲದಲ್ಲಿ ತನ್ನ ಸ್ವತಂತ್ರ ಶೈಲಿಯನ್ನು ಬಳಸಿಕೊಂಡಿದ್ದು ಎರಡನೆಯ ಹಂತವಾದರೆ, ಇವರ ಆಳ್ವಿಕೆಯ ನಂತರದಲ್ಲಿ ಮೊಗಲರು ಮತ್ತು ದಖ್ಖನಿಗಳು ರಾಜಕೀಯವಾಗಿ ಪ್ರಬಲರಾದಂತೆ ಬಿಜಾಪುರದ ಚಿತ್ರಕಲೆಯಲ್ಲಿ ಮೊಘಲರ ಚಿತ್ರಕಲೆಯ ಪ್ರಭಾವವೂ ಕಾಣಿಸಿಕೊಳ್ಳತೊಡಗಿತು. ಇದನ್ನು ಮೂರನೆಯ ಹಂತವೆಂದು ಗುರುತಿಸಬಹುದು"[೪೭]

ನುಜುಮ್-ಉಲ್-ಉಲುಮ್, ಜವಹೀರ್-ಆವ್-ಮು-ಶಿಕತ್-ಇ-ಮುಹ್ಮದಿಯವರು ಚಿತ್ರಕಲೆಯನ್ನು ಪ್ರೋತ್ಸಾಹಿಸಿದರು. ಅವರ ಆಡಳಿತದಲ್ಲಿ ಚಿತ್ರಕಲೆ ಉತ್ತಮ ಬೆಳವಣಿಗೆ ಕಂಡಿತು ಎಂದು ಹೇಳಬಹುದು. ಬಿಜಾಪುರದ ಚಿತ್ರಕಲೆಯ ಒಂದು ಹೊಸ ಅಲೆಯನ್ನು ಪ್ರವೇಶಿಸಬೇಕಾದರೆ ಅದರ ಹೆಸರು ಬರುವುದು ಇಬ್ರಾಹಿಮ್ ಆದಿಲ್‌ಶಾಹನಿಗೆ, ಸುಲ್ತಾನ್ ಒಬ್ಬ ಕಲಾಪೋಷಕನಾಗಿದ್ದನು. ಇವನು ತನ್ನ ಆಸ್ಥಾನಕ್ಕೆ ಹಲವು ದೇಶಗಳ ಕಲಾವಿದರನ್ನು ಆಹ್ವಾನಿಸಿದ್ದರಿಂದ ದೇಶಿ ಕಲಾವಿದರೂ ಬೆಳೆದರು. ಬಿಜಾಪುರ ಚಿತ್ರಕಲೆಯು ದಖ್ಖನಿ ಚಿತ್ರಕಲೆಯಲ್ಲಿ ತನ್ನ ವಿಶೇಷವಾದಂತಹ ಹಲವು ಲಕ್ಷಣಗಳಿಂದ "ಬಿಜಾಪುರ ಶೈಲಿ" ಎಂದು ಗುರುತಿಸಿಕೊಂಡಿತು. ಇವನ ನಂತರದ ಕಾಲ ಮೊಘಲ್ ಚಿತ್ರಕಲೆಯ ಅನುಕರಣೆ ಕಂಡುಬಂದಿತು. ಸಿಕಂದರ್ ಬಿಜಾಪುರದ ಕೊನೆಯ ಸುಲ್ತಾನ ಇವನ ಕಾಲದಲ್ಲಿ ಚಿತ್ರಕಲೆಯು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತು. ಇವನು ತನ್ನ ರಾಜ್ಯಭಾರವನ್ನು ಅಲ್ಪಕಾಲ ನಡೆಸಿದರೂ ಉತ್ತಮವಾದಂತಹ ಕಲಾಕೃತಿಗಳು ರಚನೆಯಾಗಿವೆ.

ಇಬ್ರಾಹಿಮ್ ಆದಿಲ್‌ಷಾಹನಿಗೆ ಸಂಗೀತ ಎಂದರೆ ಬಲು ಪ್ರೀತಿ. ಇವನು ಮೂಲತಃ ಶ್ರೇಷ್ಠ ಸಂಗೀತಗಾರನೂ, ರಾಗ ಸಂಯೋಜಕನೂ ಆಗಿದ್ದನು. ಈ ಕಾರಣದಿಂದ ಇವನ ಅವಧಿಯಲ್ಲಿ 'ರಾಗಮಾಲಿಕೆ' ಚಿತ್ರಕಲೆ ಬೆಳೆಯಲು ಕಾರಣವಾಯಿತು. ಅತ್ಯಂತ ಹಳೆಯದಾದಂತಹ ಬಿಜಾಪುರ ಶೈಲಿಗೆ ಸಂಬಂಧಿಸಿದಂತಹ ರಾಗಮಾಲಾ ಚಿತ್ರಗಳು "ಬೋಲ್ಡೆನ್ ಗ್ರಂಥಾಲಯದ ಬಿಶಪ್‌ತೌಡರ" ಸಂಗ್ರಹಾಲಯದಲ್ಲಿವೆ.

ಬೀದರಿನ ಬರೀದ್‌ಶಾಹಿ ಅರಸರ ಕಾಲದಲ್ಲಿಯೂ ಕಿರುಚಿತ್ರಗಳು, ಹಸ್ತಪ್ರತಿಗಳಾದ ಗುಲಶ್ಹನ್-ಇ-ಇಶ್ಹ್ ಚಿತ್ರಕಲಾ ಹಸ್ತಪ್ರತಿ ಭೋಗಪಾಲ ಹಸ್ತಪ್ರತಿ, ಭಾಗವತ್ ದಶಮಸ್ಕಂದ ಹಸ್ತಪ್ರತಿಗಳಲ್ಲಿ ಚಿತ್ರಕಲೆಯು 'ಖಿಲ್ಲಾಸ್ಕೇಲಿ'ಯದ್ದಾಗಿದೆ. ರಂಗೀನ್ ಮಹಲ್, ತಖ್ತಮಹಲ್ ಮದರಸಾ ಹಾಗೂ ಅಷ್ಟೂರಿನ ಅರಸರ ಸಮಾಧಿಗಳ ಗುಂಬಜ್‌ಗಳಲ್ಲಿ ಭಿತ್ತಿಚಿತ್ರಗಳು ನೋಡಲು ಆಕರ್ಷಕವಾಗಿವೆ.

ಆದರೆ ಬ್ರಿಟಿಷರ ಆಗಮನ ಮತ್ತು ಅವರ ಸಾರ್ವಭೌಮತ್ವ ಅಧಿಕಾರದ ಹಿನ್ನೆಲೆಯಲ್ಲಿ ಪ್ರಾಚೀನ ಶಿಕ್ಷಣ ಪದ್ಧತಿ ಬೆಳೆಯಲಾಗಲಿಲ್ಲ. ಭಾರತದಲ್ಲಿ ಹೆಸರು ಗಳಿಸಿದಂತಹ ಪ್ರಾಚೀನ ಶಿಕ್ಷಣ ಪದ್ಧತಿ ನಾಶವಾಗಿ ನಾಶಕ್ಕೆ ಶ್ರಮಿಸಿದ ಮುಸ್ಲಿಂ ಪದ್ಧತಿಯೂ ನಶಿಸಿ ಒಟ್ಟಾರೆ ಎಲ್ಲಾ ಪದ್ಧತಿಗಳು ನಾಶವಾಗಿ ಆಂಗ್ಲ ಶಿಕ್ಷಣ ಪದ್ಧತಿ ಅಸ್ತಿತ್ವಕ್ಕೆ ಬಂತು.

ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ ಕಂಪನಿ ಶೈಲಿಯ ಭಾವಚಿತ್ರಗಳು ಹಾಗೂ ಭಿತ್ತಿಚಿತ್ರಗಳು, ಗಂಜೀಫಾ ಚಿತ್ರಗಳು ಬೆಳೆದು ಬಂದವೆಂಬುದಾಗಿ ಚಿತ್ರಕಲೆಯ ಇತಿಹಾಸ ತಿಳಿಸುತ್ತದೆ. ಇವರ ಕಾಲದಲ್ಲಿ ರಚನೆಯಾದ ಚಿತ್ರಕಲೆಯನ್ನು ಮೈಸೂರು ಶೈಲಿ ಅಥವಾ ಕಂಪನಿ ಚಿತ್ರಕಲಾ ಶೈಲಿ ಎಂದು ಅಭಿಪ್ರಾಯಪಡುತ್ತಾರೆ. ಹೈದರ್ ಮತ್ತು ಟಿಪ್ಪು ಚಿತ್ರಕಲೆಯನ್ನು ಅಲಕ್ಷಿಸಲಿಲ್ಲ; ಹೈದರ್‌ಗಿಂತ ಟಿಪ್ಪುವಿಗೆ ಚಿತ್ರಕಲೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದನು.

ಶ್ರೀರಂಗಪಟ್ಟಣದಲ್ಲಿರುವ ದರಿಯಾ ದೌಲತ್‌ನ ಭಿತ್ತಿಚಿತ್ರಗಳನ್ನು ಅರಮನೆಯ ಪೂರ್ವ ಹಾಗೂ ಪಶ್ಚಿಮ ದಿಕ್ಕುಗಳ ಗೋಡೆಗಳ ಮೇಲೆ ಕಾಣಬಹುದು. ಈ ಗೋಡೆಯ ಮೇಲಿರುವ ಭಿತ್ತಿಚಿತ್ರಗಳು ಹೆಚ್ಚು ಪ್ರಭಾವದಿಂದ ಕೂಡಿದ್ದಾಗಿವೆ. ಈ ಚಿತ್ರಗಳಲ್ಲಿ ಯುದ್ಧಕ್ಕೆ ಸಂಬಂಧಪಟ್ಟ ದೃಶ್ಯಗಳು, ರಾಜರು-ನವಾಬರು, ಮೈಸೂರು ರಾಜ್ಯದ ಸಾಮಂತರ ಭಾವಚಿತ್ರಗಳು ಇವೆ. ಬೆಂಗಳೂರಿನ ಅರಮನೆಯಲ್ಲಿ ಸುಂದರವಾದ ಭಿತ್ತಿಚಿತ್ರಗಳನ್ನು ಚಿತ್ರಿಸಿರುವುದು ಯಶಸ್ಸು ಟಿಪ್ಪುಗೆ ಸಲ್ಲಬೇಕಾದದ್ದು.

ಭಿತ್ತಿಚಿತ್ರಗಳಲ್ಲಿ, ಬಿಡಿ ಚಿತ್ರಗಳಲ್ಲಿ ಟಿಪ್ಪುವಿನ ಬಹುತೇಕ ಭಾವಚಿತ್ರಗಳು ದೊರೆತಿದ್ದು ಈ ಚಿತ್ರಗಳು ಪಾರ್ಶ್ವನೋಟದಲ್ಲಿವೆ. "ಕೇವಲ ಒಂದೇ ಒಂದು ಚಿತ್ರ ಮಾತ್ರ ಜೊಹನ್ ಝಾಟ್ರಿ ಎಂಬ ವಿದೇಶ ಕಲಾವಿದ ರಚಿಸಿದ ಚಿತ್ರವೊಂದು ಎದುರು ನೋಟದಲ್ಲಿದೆ."[೬೮] ಈ ಹಿನ್ನೆಲೆಯಲ್ಲಿ ಇಲ್ಲಿನ ರಾಜರು ಚಿತ್ರಕಲಾ ಶಿಕ್ಷಣಕ್ಕೆ ವಿಶೇಷವಾದಂತಹ ಪ್ರೋತ್ಸಾಹವನ್ನು ನೀಡುತ್ತಿದ್ದರು ಎಂಬುದು ತಿಳಿಯುತ್ತದೆ.

ಟಿಪ್ಪುವಿನ ಕಾಲದಲ್ಲಿ ಅಲಂಕಾರಿಕ ಬರಹ ಚೆನ್ನಾಗಿ ವಿಕಾಸಗೊಂಡಿತು. ಜೊತೆಗೆ ಅವನ ಕಾಲದಲ್ಲಿ ಐದು ವಿಭಿನ್ನ ಶೈಲಿಗಳು ಚಾಲನೆಯಲ್ಲಿದ್ದವು. “ನಸ್ತಾಲಿಕ, ಶಿಕಸ್ತಾ, ಸಲೂಸ್-ಖತ್-ಎ-ಜುಲ್ವಿ ಮತ್ತು ಹುಲಿಗೆರೆಗಳು ಎಂಬುವು. ಕೊನೆಯದು ಟಿಪ್ಪುವಿಗೆ ತುಂಬಾ ಪ್ರಿಯವಾಗಿತ್ತು. ಟಿಪ್ಪುವಿನ ಕಾಲದಲ್ಲಿ ತಜ್ಞ ನಸ್ತಾಲಿಕ್ ಅಲಂಕಾರಿಕ ಅಕ್ಷರ ಬರಹಗಾರರು ಖಲಿಂದರ್‌ಖಾನ್ ಗುಲಾಂಜೀಲಿಗಿ, ಆಸಲ್‌ಖಾನ್, ಕರಿಮುದ್ದೀನ್ ಮತ್ತು ಸಜ್ನದ್ ಸಾಹೇಬ್”[೪೯] ಮುಂತಾದವರಿದ್ದರು.

೨.೩. ವಸಾಹತು ಕಾಲದ ಶೈಕ್ಷಣಿಕ ವ್ಯವಸ್ಥೆ

ಬ್ರಿಟಿಷರು ಭಾರತಕ್ಕೆ ಬರುವ ಮೊದಲಿಗೆ ಶಿಕ್ಷಣ ಬೆಳವಣಿಗೆಗಳಿಂದ ಈ ಕಾಲಘಟ್ಟವನ್ನು ನೋಡಿದರೆ, ಮೊಗಲರು ಮತ್ತು ಬ್ರಿಟಿಷರು ಒಂದಷ್ಟು ಸಮಯ ಭಾರತದ ಆಡಳಿತದ ಕೊನೆಯಲ್ಲಿ ಒಂದಾಗಿ ಇದ್ದವರು. ಈ ಒಂದು ಕಾಲವನ್ನು ವಸಾಹತುಶಾಹಿ ಆಡಳಿತದ ಆರಂಭ ಎನ್ನಬಹುದು.

ಭಾರತದಲ್ಲಿ ಮೊದಲು ಬೇರು ಬಿಟ್ಟಿದ್ದು ಅನೌಪಚಾರಿಕ ಶಿಕ್ಷಣ. ಈ ವ್ಯವಸ್ಥೆಯಲ್ಲಿ ಶಿಕ್ಷಣದ ಉದ್ದೇಶ, ಧರ್ಮಾಧಾರಿತ ಮತ್ತು ಆಧ್ಯಾತ್ಮಿಕವಾಗಿತ್ತು. ಇನ್ನಷ್ಟು ಉತ್ಪ್ರೇಕ್ಷಿಸಿ ಹೇಳುವುದಾದರೆ ಅದು ಸ್ವಲ್ಪಮಟ್ಟಿಗೆ ಧಾರ್ಮಿಕ ಸಂಪ್ರದಾಯದಿಂದ ಕೂಡಿತ್ತು. ಬ್ರಿಟಿಷರು ಬಂದ ನಂತರ ವ್ಯಾಪಾರವೇ ಅವರ ಮುಖ್ಯ ಉದ್ದೇಶವಾಗಿತ್ತು.

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಚಿತ್ರಕಲಾ ಶಿಕ್ಷಣ ಗುರುಕುಲ ಪದ್ಧತಿಯಲ್ಲಿ ನಡೆಯುತ್ತಿತ್ತು. ಈ ಕುರಿತು ಸಾಹಿತ್ಯ, ಶಾಸನ, ಪುರಾಣ ಗ್ರಂಥಗಳಲ್ಲಿ ಉಲ್ಲೇಖಗಳು ಕಂಡುಬರುತ್ತವೆ. “ಅರವತ್ನಾಲ್ಕು ಕಲೆಗಳ ವಿದ್ಯಾಭ್ಯಾಸದ ಪ್ರಸ್ತಾಪ ಸಂಸ್ಕೃತ - ಕನ್ನಡ ಕಾವ್ಯಗಳಲ್ಲಿ ಕಂಡುಬರುತ್ತದೆ. ಬ್ರಿಟಿಷರು ಭಾರತಕ್ಕೆ ಬಂದ ನಂತರ ಶಿಕ್ಷಣ ಸುಧಾರಣೆಗಾಗಿ ಅನೇಕ ಆಯೋಗಗಳನ್ನು ರಚಿಸಿ ಶೈಕ್ಷಣಿಕ ರಂಗದಲ್ಲಿ ಹಲವಾರು ಯೋಜನೆಗಳನ್ನು ಜಾರಿಗೆ ತಂದರು. ಲಲಿತಕಲೆಗಳಿಗೂ ಸಹ ಅವರು ಪ್ರಾಮುಖ್ಯತೆಯನ್ನು ನೀಡಿ ಭಾರತದಲ್ಲಿ ಕೈಗಾರಿಕೆ ಮತ್ತು ಕರಕುಶಲ ಬೆಳವಣಿಗೆಯ ಹಿನ್ನೆಲೆಯಲ್ಲಿ ನಾಲ್ಕು ದೃಶ್ಯ ಕಲಾಶಾಲೆಗಳನ್ನು ಡಾ. ಹಂಟರ್ ಅವರ ಶಿಫಾರಸ್ಸಿನ ಮೇರೆಗೆ ಪ್ರಾರಂಭಿಸಿದರು. ಹೀಗೆ ಅವರು ದೃಶ್ಯಕಲಾ ಶಿಕ್ಷಣಕ್ಕೆ ನಾಂದಿ ಹಾಡಿದ್ದಾರೆ”.[೫೦]

ವಸಾಹತುಶಾಹಿ ಕಾಲದ ಸಂದರ್ಭದಲ್ಲಿ ಭಾರತದಲ್ಲಿ ಪ್ರಮುಖ ನಾಲ್ಕು ಚಿತ್ರಕಲಾ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾದವು.

* ಮದ್ರಾಸ್ ಕಲಾಶಾಲೆ, * ಕೊಲ್ಕತ್ತಾ ಕಲಾಶಾಲೆ, * ಮುಂಬೈ ಕಲಾಶಾಲೆ, *ಲಾಹೋರ್ ಕಲಾಶಾಲೆ.

*** ಮದ್ರಾಸ್ ಕಲಾಶಾಲೆ**

“ಭಾರತದಲ್ಲಿ ಬ್ರಿಟಿಷ್ ನಿರೂಪಿತವಾದ ಕಲಾಸಂಸ್ಥೆಗಳಲ್ಲಿ ಮದ್ರಾಸ್ ಕಲಾಶಾಲೆಯೂ ಒಂದು. ೧೮೫೦ರಲ್ಲಿ ಬ್ರಿಟಿಷ್ ಸೈನ್ಯದಲ್ಲಿ ಖ್ಯಾತ ಸರ್ಜನ್ ಆಗಿ ವೈದ್ಯಕೀಯ ಸೇವೆ ಸಲ್ಲಿಸಿದ್ದ

ಡಾ. ಅಲೆಗ್ಸಾಂಡರ್ ಹಂಟರ್ ಅವರು ಈ ಖಾಸಗಿ ಶಾಲೆಯನ್ನು ಮೊದಲು ಪ್ರಾರಂಭಿಸಿದರು. ೧೮೫೨ರಲ್ಲಿ ಮದ್ರಾಸ್ ಸರಕಾರವು ಈ ಶಾಲೆಯನ್ನು ತನ್ನ ವಶಕ್ಕೆ ತೆಗೆದುಕೊಂಡು ಅದನ್ನು "ಗವರ್ನ್‌ಮೆಂಟ್ ಸ್ಕೂಲ್ ಆಫ್ ಇಂಡಸ್ಟ್ರೀಯಲ್ ಆರ್ಟ್" ಎಂದು ಮರುನಾಮಕರಣ ಮಾಡಿತು".[೫೧]

ಮದ್ರಾಸ್ ಕಲಾಶಾಲೆಯು ಕ್ರಿ.ಶ. ೧೮೫೦ರ ಏಪ್ರಿಲ್ ತಿಂಗಳಲ್ಲಿ ಆರಂಭವಾಯಿತು. ಆದರೆ ಬ್ರಿಟಿಷ್ ಸರಕಾರವು ಈ ಕಲಾಶಾಲೆಯನ್ನು ಅಧಿಕೃತವಾಗಿ ಸ್ಥಾಪಿಸುವ ಸಂದರ್ಭಕ್ಕಿಂತ ಮುಂಚಿನ ದಿನಗಳಿಂದಲೇ ಈ ಕಲಾಶಾಲೆಯು ಹವ್ಯಾಸಿ ತರಗತಿಯ ಸ್ವರೂಪದಲ್ಲಿ ನಡೆಯುತ್ತಿತ್ತು. ಕಲೆಯ ಬಗ್ಗೆ ಆಸಕ್ತಿ ಇದ್ದ ಬ್ರಿಟಿಷ್ ಅಧಿಕಾರಿಯೊಬ್ಬರು ತಮ್ಮ ಮನೆಯ ಒಂದು ಪ್ರತ್ಯೇಕ ಕೋಣೆಯಲ್ಲಿ ಆಸಕ್ತ ಜನರಿಗೆ ಕಲಾಶಿಕ್ಷಣವನ್ನು ಸಾಯಂಕಾಲ ಸಮಯದಲ್ಲಿ ನೀಡುತ್ತಿದ್ದರು. ಸುಮಾರು ಹದಿನೈದು ವರ್ಷಗಳವರೆಗೆ ಈ ರೀತಿಯ ಹವ್ಯಾಸಿ ತರಗತಿಗಳನ್ನು ಬ್ರಿಟಿಷ್ ಅಧಿಕಾರಿಯೊಬ್ಬ ನಡೆಸಿಕೊಂಡು ಬರುತ್ತಿದ್ದರು. ಮದ್ರಾಸಿನಲ್ಲಿ ಕಲಾಶಾಲೆಯನ್ನು ಆರಂಭಿಸಬೇಕೆಂಬ ಉದ್ದೇಶವು ಬ್ರಿಟಿಷ್ ಸರ್ಕಾರಕ್ಕೆ ಬಂದಾಗ ಅವರು ಹವ್ಯಾಸಿ ತರಗತಿಗಳನ್ನು ಮಾರ್ಪಾಟು ಮಾಡಿ ಅಧಿಕೃತವಾಗಿ ಸರ್ಕಾರಿ ಚಿತ್ರಕಲಾ ಶಾಲೆಯೆಂದು ಘೋಷಿಸಿತು.

ಅನೇಕ ದಿನಗಳವರೆಗೆ ಈ ರೀತಿಯ ವ್ಯವಸ್ಥೆ ಇಲ್ಲಿ ನಡೆದುಕೊಂಡು ಬಂದಿತು. ಮುಂದೆ ಇ.ಬಿ. ಹ್ಯಾವೆಲ್ ಅವರು ಪ್ರಾಚಾರ್ಯರಾಗಿ ಬಂದ ನಂತರ ಈ ಕಲಾಶಾಲೆಯ ಸ್ವರೂಪ ಬದಲಾಯಿತು. ಬ್ರಿಟಿಷ್ ಅಧಿಕಾರಿಯ ಮನೆಯಲ್ಲಿ ನಡೆಯುತ್ತಿದ್ದ ಕಲಾಶಾಲೆಯನ್ನು ಪ್ರತ್ಯೇಕ ಕಟ್ಟಡಕ್ಕೆ ಹ್ಯಾವೆಲ್ ಅವರು ಸ್ಥಳಾಂತರಿಸಿದ್ದರು. ಪ್ರಾರಂಭದ ಹಂತದಲ್ಲಿ ಒಂದು ವರ್ಷದ ಎಲಿಮೆಂಟರಿ ಡ್ರಾಯಿಂಗ್ ಕೋರ್ಸ್ ಎರಡು ವರ್ಷಕ್ಕೆ ವಿಸ್ತರಣೆಗೊಂಡಾಗ ಇಲ್ಲಿಯೂ ಅದನ್ನೇ ಅನುಸರಿಸಲಾಯಿತು. ಈ ಕಲಾ ಶಾಲೆಯಲ್ಲಿ ಆರಂಭಿಕ ಹಂತದಲ್ಲಿ ಚಿತ್ರಕಲೆಯನ್ನು ಕಲಿಯಲು ಬರುತ್ತಿದ್ದ ವಿದ್ಯಾರ್ಥಿಗಳು ಕಲ್ಕತ್ತಾ ಶಾಲೆಯ ವಿದ್ಯಾರ್ಥಿಗಳಿಗಿಂತ ಭಿನ್ನವಾಗಿದ್ದರು. ಈ ಸಂದರ್ಭದಲ್ಲಿ ಮದ್ರಾಸ್ ಪ್ರಾಂತ್ಯವು ಬ್ರಿಟಿಷ್ ಆಡಳಿತದ ಪ್ರಮುಖ ಕೇಂದ್ರಗಳಲ್ಲೊಂದಾಗಿತ್ತು. ಈ ಕಾರಣದಿಂದಾಗಿ ಆ ಪ್ರದೇಶದ ಬ್ರಿಟಿಷ್ ಅಧಿಕಾರಿಗಳು, ಶ್ರೀಮಂತರು, ಜನಸಾಮಾನ್ಯರು ಬ್ರಿಟಿಷ್ ಸೈನ್ಯ ವ್ಯವಸ್ಥೆಯ ಹಲವಾರು ಅಧಿಕಾರಿಗಳು ಈ ಪ್ರದೇಶದಲ್ಲಿ ವಾಸವಾಗಿದ್ದರಿಂದಾಗಿ ಇವರೆಲ್ಲರುಗಳ ಮಕ್ಕಳು ಮದ್ರಾಸ್ ಕಲಾಶಾಲೆಯಲ್ಲಿ ಕಲಾಶಿಕ್ಷಣವನ್ನು ಪಡೆದುಕೊಳ್ಳತೊಡಗಿದರು. ಈ ಬ್ರಿಟಿಷ್ ಅಧಿಕಾರಿಗಳ ಮಕ್ಕಳ ಜೊತೆಗೆ ಕೆಲವು ಭಾರತೀಯ ಪ್ರತಿಷ್ಠಿತ ವ್ಯಕ್ತಿಗಳು ಮಕ್ಕಳೂ ಇಲ್ಲಿ ಕಲಾಶಿಕ್ಷಣವನ್ನು ಪಡೆಯುತ್ತಿದ್ದರು. ವಿಶೇಷವಾಗಿ ಇಲ್ಲಿನ ಕಲಾಶಾಲೆಯ ವಿದ್ಯಾರ್ಥಿಗಳು ಹೂ-ಬಳ್ಳಿಯ ನಕ್ಷೆ, ನಿಸರ್ಗ ಚಿತ್ರಣಗಳ ಬಗ್ಗೆ ಒಲವು ಉಳ್ಳವರಾಗಿದ್ದರು. ಆದರೆ ಚಿತ್ರರಚನೆಯ ಗುಣಮಟ್ಟದ ದೃಷ್ಟಿಯಿಂದ ಕಲ್ಕತ್ತಾ ಕಲಾಶಾಲೆಯ ಗುಣಮಟ್ಟವು ಇಲ್ಲಿ ಪ್ರಾರಂಭಿಕ ಹಂತದಲ್ಲಿ ಕಂಡುಬರುತ್ತಿರಲಿಲ್ಲ.

ಇ.ಬಿ. ಹ್ಯಾವೆಲ್ ಅವರು ಕಲಾಶಾಲೆಯಲ್ಲಿ ಅಲ್ಲಿನ ವಿದ್ಯಾರ್ಥಿಗಳಿಗೆ ಭಾರತೀಯ ಕಲೆಯ ಬಗ್ಗೆ ಹೆಚ್ಚಿನ ಆಸಕ್ತಿ ಉಂಟಾಗಲು ಭಾರತೀಯ ಪುರಾಣಗಳು, ವೇದಗಳು, ಶಿಲ್ಪಶಾಸ್ತ್ರಗಳು, ಉಪನಿಷತ್ತುಗಳ ಮೂಲ ಉದ್ದೇಶವನ್ನು ತಿಳಿಸಿ ಹೇಳಿದರು. ಅಂತಹ ಕ್ರಮಗಳ ಜೊತೆಗೆ ಭಾರತೀಯ ಶಿಲ್ಪ ಮತ್ತು ಚಿತ್ರಕಲೆಗಳ ಕುರಿತು ಲೇಖನ ಮತ್ತು ಪುಸ್ತಕಗಳನ್ನು ಬರೆದರು. ಭಾರತೀಯ ವಾಸ್ತುಶಿಲ್ಪ, ಚಿತ್ರಕಲೆ ಮತ್ತು ಶಿಲ್ಪಕಲೆಗಳನ್ನು ವಿಮರ್ಶಾತ್ಮಕವಾಗಿ ಬರೆದರು. ಹ್ಯಾವೆಲ್ ಅವರ ಇಂತಹ ಕೆಲಸಗಳಿಂದ ಭಾರತೀಯ ಕಲೆಯ ಪುನರುಜ್ಜೀವನಗೊಳ್ಳುವ ನಿಟ್ಟಿನಲ್ಲಿ ಮುನ್ನೆಡೆದುಕೊಂಡು ಹೋಯಿತು. ಭಾರತೀಯ ಕಲೆಯ ಬಗ್ಗೆ ಹ್ಯಾವೆಲರು ಹೊಂದಿದ ಅಪಾರ ಅಭಿಲಾಷೆಗಳನ್ನು ನೋಡಿ, ಬ್ರಿಟಿಷ್ ಸರಕಾರವು ಇವರನ್ನು ಕಲಾಶಾಲೆಯ ಮುಖ್ಯಸ್ಥರ ಹುದ್ದೆಯಿಂದ ತೆಗೆದು ಹಾಕಿತು. ಇದಲ್ಲದೇ ಕಾಯಿಲೆಯ ನೆಪವೊಡ್ಡಿ ಅವರನ್ನು ಇಂಗ್ಲೆಂಡ್ ದೇಶಕ್ಕೆ ತೆರಳಲು ಹೇಳಿದರು. ಇ.ಬಿ. ಹ್ಯಾವೆಲ್ ಅವರು ಅಲ್ಲಿಯೂ ಸಹಿತ ಭಾರತೀಯ ಕಲೆಯ ಬಗ್ಗೆ ಅನೇಕ ಪುಸ್ತಕಗಳನ್ನು ಪ್ರಕಟಿಸಿದರು.

೧೯೨೧ರಲ್ಲಿ ಆ್ಯರುಲ್ ಸ್ಟೇನ್ ಎಂಬುವರು "ದಿ ಥೌಸಂಡ್ ಬುದ್ಧಾಸ್" ಎಂಬ ಗ್ರಂಥವನ್ನು ಬರೆದಿದ್ದಾರೆ. ೧೯೪೧ರಲ್ಲಿ ಸೆವೆರಲ್ ಡ್ರಾಯಿಂಗ್ಸ್‌ನ 'ಅಲ್ಫಂತ್ರ' ಗ್ರಂಥವನ್ನು ಓವೆನ್ ಜಾನ್ಸ್ ಮತ್ತು ಜೂಲೆಸ್ ಗೌರಿ ಎಂಬುವರು ಪ್ರಕಟಮಾಡಿದ್ದಾರೆ.

ಇಲ್ಲಿನ ಅವಿಸ್ಮರಣೀಯ ಛಾಯಾಚಿತ್ರಗಳ ಸಂಗ್ರಹ ಈ ಸಂಸ್ಥೆಯ ಇನ್ನೊಂದು ಮಹತ್ವದ ಕಾರ್ಯವಾಗಿದೆ. ಇಲ್ಲಿ ಸೆರೆಹಿಡಿದ ಛಾಯಾಚಿತ್ರಗಳನ್ನು ಮದ್ರಾಸ್, ಮಹಾಬಲಿಪುರಂ, ಚಿದಂಬರಂ, ನೀಲಗಿರಿ, ತಿರುಪತಿ, ಕಾಂಚಿಪುರಂ, ಮಧುರೈ, ತಂಜಾವೂರು ಮುಂತಾದವುಗಳದ್ದೆಂದು ಉದಾಹರಿಸಬಹುದಾಗಿದೆ. ಕಲಾತ್ಮಕ ಗುಣವನ್ನು ಹೊಂದಿರುವ ಈ ಛಾಯಾಚಿತ್ರಗಳು ಆಗಿನ ಕಾಲದ ರಸ್ತೆ, ಮನೆಗಳು ಮತ್ತು ಐತಿಹಾಸಿಕ ಸ್ಮಾರಕಗಳ ನೈಜ ಚಿತ್ರಣವನ್ನು ಕಣ್ಣಿಗೆ ಕಟ್ಟಿಕೊಡುತ್ತವೆ".[೩೨]

*** ಕಲ್ಕತ್ತಾ ಕಲಾಶಾಲೆ**

ಪುರಾತನ ಕಾಲದಲ್ಲಿ ಚಿತ್ರಕಲೆ, ಶಿಲ್ಪಕಲೆ, ಸಂಗೀತ - ಹೀಗೆ ಇನ್ನು ಹಲವಾರು ಕಲಾಪ್ರಕಾರಗಳು ಗುರುವಿನ ಆಶ್ರಯದಲ್ಲಿ ಕಲಿಯುವ ಪ್ರಕ್ರಿಯೆ ನಡೆಯುತ್ತಿತ್ತು. ನಂತರದ ದಿನಗಳಲ್ಲಿ ಗುರುವನ್ನು ಆಶ್ರಯಿಸಿ ಮನಸ್ಸಿನ ಪರಿವರ್ತನೆಯ ಮೂಲಕ ಕಲಾಶಿಕ್ಷಣವನ್ನು ಆಸಕ್ತರು ಪಡೆದುಕೊಳ್ಳುತ್ತಿದ್ದರು. ಬ್ರಿಟಿಷರು ಬಂದ ನಂತರ ಭಾರತದ ಎಲ್ಲಾ ರಂಗಗಳಲ್ಲೂ ಅನೇಕ ಬದಲಾವಣೆಗಳು ಉಂಟಾದವು. ಅದೇ ರೀತಿ ಶಿಕ್ಷಣ ಕ್ಷೇತ್ರದಲ್ಲಿಯೂ ಕ್ರಾಂತಿಕಾರಕವಾದ ಬದಲಾವಣೆಗಳು ಗೋಚರಿಸಿದವು. ಇದು ಕಲಾಶಿಕ್ಷಣಕ್ಕೂ ಪ್ರವೇಶಿಸಿತು. ಬ್ರಿಟಿಷರು ಭಾರತಕ್ಕೆ ಬರುವುದಕ್ಕೂ ಮೊದಲು ನಮ್ಮಲ್ಲಿ ಚಿತ್ರಕಲೆಯನ್ನು ಕಲಿಸುವುದಕ್ಕೆ ವ್ಯವಸ್ಥಿತವಾದ ಶಾಲೆಗಳಿರಲಿಲ್ಲ. ಆಗಿನ ಕಾಲದಲ್ಲಿ ಚಿತ್ರಕಲೆಯನ್ನು ಕಲಿಯುವುದು ಸಾಮಾಜಿಕವಾಗಿ ಕೀಳರಿಮೆ ಎಂದು

ಭಾವಿಸುತ್ತಿದ್ದರು. ಅದುವರೆಗೂ ಕೇವಲ ಅರಮನೆ, ಮಠ-ಮಂದಿರಗಳಿಗೆ ಸೀಮಿತವಾಗಿದ್ದ ಚಿತ್ರಕಲೆಯು ಬ್ರಿಟಿಷರು ಬಂದ ಮೇಲೆ ಸಾರ್ವತ್ರೀಕರಣವಾಯಿತು. ೧೮೫೪ರಲ್ಲಿ ಆರಂಭವಾದ ಕಲ್ಕತ್ತಾ ಕಲಾಶಾಲೆಯು ಮೊದಲಿಗೆ ಪ್ರತ್ಯೇಕ ಕಟ್ಟಡವಿಲ್ಲದೇ ಕಲ್ಕತ್ತಾದ ಶ್ರೀಮಂತ ವ್ಯಕ್ತಿಯಾಗಿದ್ದ ರಾಜಾ ಪ್ರತಾಪ್‌ಸಿಂಗ್ ಎನ್ನುವವರ ಮನೆಯಲ್ಲಿ ತನ್ನ ಚಟುವಟಿಕೆಗಳನ್ನು ಆರಂಭಿಸಿದ್ದನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ. ಮೊದಲಿಗೆ ಎಲಿಮೆಂಟರಿ ಡ್ರಾಯಿಂಗ್, ಪೇಂಟಿಂಗ್, ಮಾಡಲಿಂಗ್ ವಿಭಾಗಗಳಲ್ಲಿ ಒಂದು ವರ್ಷದ ತರಬೇತಿ ನೀಡಲಾಗುತ್ತಿತ್ತು. ವಿಶೇಷವಾಗಿ ಕೈಗಾರಿಕೆ ಹಿನ್ನೆಲೆಯ ಯಂತ್ರೋಪಕರಣಗಳ ವಿಷಯಗಳನ್ನು ಬೋಧಿಸುವುದರೊಂದಿಗೆ ಯಥಾದರ್ಶನ, ನಿಸರ್ಗಚಿತ್ರಣ, ಪೂರ್ಣಭಾವಚಿತ್ರ, ಇವುಗಳ ಜೊತೆಗೆ ತೈಲವರ್ಣವನ್ನು ಯಾವ ರೀತಿಯಾಗಿ ಉಪಯೋಗಿಸ ಬೇಕೆಂದು ತಿಳಿಸಿಕೊಡುತ್ತಿದ್ದರು. ಇಲ್ಲಿ ವಿಶೇಷವಾಗಿ ಕಮ್ಮಾರ, ಬಡಿಗ, ಅಕ್ಕಸಾಲಿಗ ಸಮುದಾಯ ದವರೇ ಚಿತ್ರಕಲೆಯನ್ನು ಕಲಿಯಲು ಬರುತ್ತಿದ್ದುದ್ದನ್ನು ಗಮನಿಸಬಹುದು. ಬ್ರಿಟಿಷರು ಮುಖ್ಯವಾಗಿ ಕಲಾಶಾಲೆಗಳನ್ನು ಪ್ರಾರಂಭಿಸಿದ ಉದ್ದೇಶ ತಮ್ಮ ಕೈಗಾರಿಕೆ ಹಾಗೂ ವಾಣಿಜ್ಯದ ಉಪಯೋಗದ ದೃಷ್ಟಿಕೋನಗಳಿಂದ ಎನ್ನುವುದು ತಿಳಿದುಬರುತ್ತದೆ.

"೧೮೬೪ರಲ್ಲಿ ಎಚ್.ಎಚ್. ಲೋಕೆಯವರು ಪ್ರಾಚಾರ್ಯರಾಗಿ ಈ ಸಂಸ್ಥೆಗೆ ನೇಮಕವಾದಾಗ ಬಂಗಾಲ ಸರಕಾರವು ಈ ಕಲಾಶಾಲೆಯನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿತು. ಇವರ ಅವಧಿಯಲ್ಲಿ ಪಠ್ಯಕ್ರಮದಲ್ಲಿ ಬದಲಾವಣೆಯನ್ನು ಮಾಡಲಾಯಿತು. ಮತ್ತು ಏಷಿಯಾಟಿಕ್ ಸೊಸೈಟಿಯಲ್ಲಿ ವಿದ್ಯಾರ್ಥಿಗಳ ಕಲಾಕೃತಿಗಳು ಪ್ರದರ್ಶನಗೊಳ್ಳಲು ಪ್ರಮುಖ ಕಾರಣರಾದರು".[೪೨]

ಕಿನ್‌ಸ್ಟನ್‌ನಲ್ಲಿ ಎಚ್.ಎಚ್. ಲೋಕೆಯವರು ಸೇವೆ ಸಲ್ಲಿಸಿ ಅಪಾರವಾದ ಅನುಭವವನ್ನು ಹೊಂದಿದವರಾಗಿದ್ದರು. ಈ ಹಿಂದೆ ಇದ್ದ ಒಂದು ವರ್ಷದ ಎಲಿಮೆಂಟರಿ ತರಬೇತಿಯನ್ನು ಎರಡು ವರ್ಷಕ್ಕೆ ನಿಗದಿಗೊಳಿಸಿದರು. ಡ್ರಾಯಿಂಗ್, ಪೇಂಟಿಂಗ್ ಮತ್ತು ಮಾಡಲಿಂಗ್ ವಿಷಯಗಳ ಜೊತೆಗೆ ಗ್ರಾಫಿಕ್ ಮಾಧ್ಯಮದ ಲಿಥೋಗ್ರಪಿ ಮತ್ತು ಉಡ್‌ಕಟ್ ವಿಷಯಗಳ ಬೋಧನೆಗೆ ಅವಕಾಶ ಮಾಡಿಕೊಟ್ಟರು. ಹತ್ತೊಂಭತ್ತನೇ ಶತಮಾನದ ಕೊನೆಯ ಹೊತ್ತಿಗೆ ಭಾರತದಲ್ಲಿದ್ದ ಪ್ರಮುಖ ನಾಲ್ಕು ಕಲಾಶಾಲೆಗಳು ಸಂದರ್ಭಕ್ಕೆ ಅನುಸಾರವಾಗಿ ತಮ್ಮ ಕಲಾಶಿಕ್ಷಣದ ಕ್ರಮದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಂಡಿದ್ದವು. ಈ ಸಂದರ್ಭದಲ್ಲಿ ಮದ್ರಾಸ್, ಲಾಹೋರ್ ಕಲಾಶಾಲೆಗಳಲ್ಲಿ ಕೈಗಾರಿಕಾ ಶಿಕ್ಷಣ ಪದ್ಧತಿ ಮತ್ತಷ್ಟು ಸುಧಾರಿಸಿಕೊಂಡಿತು. ಅಲ್ಲದೇ ಕಲೆಗೆ ಸಂಬಂಧಿಸಿದಂತೆ ಉದ್ಯೋಗವನ್ನು ಸೃಷ್ಟಿಸುವ ಕಡೆಗೆ ಹೆಚ್ಚಿನ ಗಮನವನ್ನು ಹರಿಸಿದರು. ಈ ಸಂದರ್ಭದಲ್ಲಿ ಕಲಾಶಾಲೆಗಳಲ್ಲಿ ಭಿನ್ನ - ವಿಭಿನ್ನವಾದಂತಹ ನಿಲುವುಗಳನ್ನು ತಾಳಿ ಲಲಿತಕಲೆಗಳಿಗೆ ವಿಶೇಷವಾದ ಪ್ರೋತ್ಸಾಹ, ಪ್ರಾಧ್ಯಾನ್ಯತೆಯನ್ನು ಮತ್ತಷ್ಟು ಹೆಚ್ಚಿಗೆ ನೀಡಲಾಯಿತು. ಈ ಲಲಿತಕಲೆಗಳ ಅಂಶಗಳನ್ನು ರೂಢಿಸಿಕೊಂಡು ಕಲ್ಕತ್ತಾ ಕಲಾಶಾಲೆಯಲ್ಲಿ ಪ್ರತ್ಯೇಕವಾದ ಕಲಾಗ್ಯಾಲರಿಯನ್ನು ಆರಂಭಿಸಿತು. ಅಂದಿನ ಬ್ರಿಟಿಷ್ ಅಧಿಕಾರಿಯಾಗಿದ್ದ ವೈಸ್‌ರಾಯ್ ಅವರ ಸಹಾಯದಿಂದ ಗ್ಯಾಲರಿಯನ್ನು ಸ್ಥಾಪನೆ ಮಾಡಲಾಯಿತು.

ಈ ಬೆಳವಣಿಗೆಯಿಂದ ಕೈಗಾರಿಕಾ ಹಿನ್ನೆಲೆಯಲ್ಲಿ ಕಲಿಕೆಯೆಡೆಗೆ ಗಮನ ಹರಿಸಲಾಯಿತು. ಕಲಾಶಾಲೆಯ ಪಠ್ಯಕ್ರಮದಲ್ಲಿ ವಸ್ತು ಅಲಂಕಾರ ಮಣ್ಣಿನಿಂದ ಮಾಡಿದ ಕೃತಿಗಳನ್ನು ರೂಪಿಸುವುದು, ಮರಗೆತ್ತನೆ ಮುಂತಾದ ಕಲಾಪ್ರಕಾರಗಳ ಮೂಲಕ ಇಲ್ಲಿನ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಲು ಆರಂಭಿಸಿದರು. ಕಲ್ಕತ್ತಾ ಕಲಾಶಾಲೆ ಮತ್ತು ಕಲಾ ಗ್ಯಾಲರಿಯನ್ನು ಇಂಡಿಯನ್ ಮ್ಯೂಜಿಯಂ ಕಡೆಗೆ ವರ್ಗಾಯಿಸಲಾಯಿತು. ಈ ಕಾರಣದಿಂದಾಗಿ ಎರಡು ಕಲಾಗ್ಯಾಲರಿಗಳು ಒಂದೇ ಕಡೆಗಾದವು. ಈ ಹಿನ್ನೆಲೆಯಲ್ಲಿ ಆ ಪ್ರದೇಶದ ಕಲೆಯನ್ನು ವೃದ್ಧಿಗೊಳಿಸಲು ಅನುಕೂಲವಾದಂತಾಯಿತು.

"೧೮೮೭-೮೮ರ ಸುಮಾರಿಗೆ ಈ ಮೊದಲು ಬೋಧಿಸುತ್ತಿದ್ದ ವಿಷಯದೊಂದಿಗೆ ಭಿತ್ತಿಚಿತ್ರ ರಚನೆಯ ಪ್ರತ್ಯೇಕ ತರಗತಿಗಳನ್ನು ಆರಂಭಿಸಿದರು. ಇದರಲ್ಲಿ ಪ್ರಾಚೀನ ಭಾರತೀಯ ಭಿತ್ತಿಚಿತ್ರ ರಚನೆಯ ಕ್ರಮಗಳನ್ನು ಮುಖ್ಯವಾಗಿ ಹೇಳಿಕೊಡಲಾಗುತ್ತಿತ್ತು. ೧೯೦೫ರಲ್ಲಿ ಮೊಟ್ಟಮೊದಲಿಗೆ ಭಾರತೀಯರಾದ ಅವನೀಂದ್ರನಾಥ ಠಾಗೂರ ಅವರು ಉಪಪ್ರಾಚಾರ್ಯರಾಗಿ ನೇಮಕವಾಗಿ ೧೯೧೮ರವರೆಗೆ ಕಾರ್ಯ ನಿರ್ವಹಿಸಿದರು. ಪರ್ಸಿಬ್ರೌನ್ ಅವರು ಆಗ ಪ್ರಾಚಾರ್ಯರಾಗಿದ್ದರು. ೧೯೦೬ರಲ್ಲಿ ಈ ಸಲೋನ್ "ಬಿಚಿತ್ರ ಸ್ಟುಡಿಯೋ" ಆಗಿ ಮಾರ್ಪಟ್ಟಿತು. ಇಲ್ಲಿ ರಚನೆಯಾದ ಕಲಾಕೃತಿಗಳು ಬಂಗಾಲ ಶೈಲಿಯ ಚಿತ್ರಗಳೆಂದು ಬೆಳಕಿಗೆ ಬಂದವು".[೫೪] ಇದೀಗ ಯು.ಜಿ.ಸಿ. ನಿಯಮಾನುಸಾರವಾಗಿ ಕಲಾ ಶಿಕ್ಷಣವು ಪದವಿ, ಸ್ನಾತಕೋತ್ತರ ಪದವಿಗಳನ್ನಾಗಿ ನಡೆಸಲಾಗುತ್ತಿದೆ.

*** ಮುಂಬೈ ಕಲಾಶಾಲೆ**

ಸರ್ ಜೆ.ಜೆ. ಕಲಾಶಾಲೆಯು ಭಾರತದ ಪ್ರತಿಷ್ಠಿತ ಕಲಾಶಾಲೆಯಲ್ಲೊಂದಾಗಿದೆ. ಇಲ್ಲಿ ಕಲಿತಂಥ ಅನೇಕ ಕಲಾವಿದರು ಈ ಜಗತ್ತಿಗೆ ಕಲಾಶಾಲೆಯನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ತುಂಬಾ ಹಳೆಯದಾದ ಈ ಕಲಾಶಾಲೆಯಲ್ಲಿ ಕಲಿಯುವ ಅವಕಾಶಕ್ಕಾಗಿ ಅನೇಕ ಕಲಾವಿದರು ಪ್ರಯತ್ನಿಸಿರುತ್ತಾರೆ. "ಸರ್ ಜೆಮ್‌ಶೇಡ್ ಜೀ ಜೀಜಾಬಾಯಿ ಮಹಾ ಕಲಾ ಪ್ರೇಮಿ ಹಾಗೂ ಮುಂಬೈಯ ದೊಡ್ಡ ಮಹಾದಾನಿಯಾದ ಜೆ.ಜೆ.ಯವರು ೧೮೫೧ರಲ್ಲಿ ಇಂಗ್ಲೆಂಡಿನಲ್ಲಿ ನಡೆದ ಒಂದು ಬೃಹತ್ ಕಲಾ ಪ್ರದರ್ಶನವನ್ನು ವೀಕ್ಷಿಸಿ ಪ್ರಭಾವಿತರಾದರು. ಈಸ್ಟ್ ಇಂಡಿಯಾ ಕಂಪನಿಗೆ ಪತ್ರವೊಂದನ್ನು ಬರೆದು ಕಲಾಶಾಲೆಗಾಗಿ ಸ್ಥಳ ನೀಡಿ ಬ್ರಿಟನ್‌ನಿಂದ ಕಲಾ ಶಿಕ್ಷಕರನ್ನು ಕಳಿಸಲು ಒಪ್ಪಿದರೆ ಆರ್ಥಿಕ ಸಹಾಯವನ್ನು ನೀಡಲಾಗುವುದೆಂದು ತಿಳಿಸಿದರು. ಅವರ ಇಚ್ಛೆಯ ಮೇರೆಗೆ ೧೮೫೭ರಲ್ಲಿ ಸರಕಾರದ ಪರವಾನಗಿ ಪಡೆದು ೧೮೫೭ರಲ್ಲಿ ಸ್ಥಾಪಿಸಲಾಯಿತು."[೫೫]

"೧೯೫೭ರಲ್ಲಿ ಸರ್ ಜೇಮ್‌ಶೇಡ್ ಜಿ ಜೀಜಾಬಾಯಿ ಸ್ಕೂಲ್ ಆಫ್ ಆರ್ಟ್ ಇಂಡಸ್ಟ್ರೀಯಲ್ ಎಂದು ಸರಕಾರದ ಗೆಜೆಟ್‌ನಲ್ಲಿ ಪ್ರಕಟಗೊಂಡಿತು. ಅದೇ ಪ್ರಕಾರ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಪ್ರಾಥಮಿಕ (Elhinstone Institute)ನಲ್ಲಿ Elementary Drawing and Desingh ತರಗತಿಗಳು James payton ಇವರ ನೇತೃತ್ವದಲ್ಲಿ ನಡೆಯುತ್ತಿದ್ದವು".[೫೬] ಈ

ಕಲಾಶಾಲೆಯಲ್ಲಿ ಕಲಿಸುತ್ತಿದ್ದ ವಿಷಯಗಳಾದ ಪೇಂಟಿಂಗ್, ಡ್ರಾಯಿಂಗ್, ಮಾಡಲಿಂಗ್, ಡಿಜೈನ್ ಮತ್ತು ವಾಸ್ತುಶಿಲ್ಪ; ನಂತರದಲ್ಲಿ ಪ್ರಾಥಮಿಕ ಹಂತದ ಯಥಾದರ್ಶನ ಇಂತಹ ಹೊಸ ಹೊಸ ವಿಷಯಗಳನ್ನು ಕಲಿಯಲು ಪ್ರಾರಂಭಿಸಿದರು. ಮೊದಲಿಗೆ ಈ ಕಲಾಶಾಲೆಯನ್ನು ಸರಕಾರಿ ಚಿತ್ರಕಲಾ ಶಾಲೆ ಮುಂಬೈ ಎಂಬುದಾಗಿ ಹೆಸರಿಸಲಾಯಿತು. ಇಲ್ಲಿಯೂ ಸಹಿತ ಬ್ರಿಟಿಷ್ ಅಧಿಕಾರಿಯೇ ಕಲಾ ಶಾಲೆಯ ಮುಖ್ಯಸ್ಥರಾಗಿದ್ದರು.

ಪ್ರಾರಂಭಿಕ ಹಂತದಲ್ಲಿ ಒಂದು ವರ್ಷದ ಎಲಿಮೆಂಟರಿ ಡ್ರಾಯಿಂಗ್‌ನ್ನು ಕಲಿಸುತ್ತಿದ್ದರು. ಹೀಗೆ ಕೆಲಕಾಲದ ನಂತರ ಈ ಕಲಾಶಾಲೆಯ ಸ್ವರೂಪವು ಕಲ್ಕತ್ತಾ ಕಲಾಶಾಲೆಯ ಸಮಾನಾಂತರವಾಗಿ ಬೆಳೆಯತೊಡಗಿತು. ಜೇಮ್‌ಶೇಡ್ ಜೀ ಜೀಜಾಬಾಯಿಯವರು ಕಲಾಪ್ರಿಯರು, ಶ್ರೀಮಂತರು ಹಾಗೂ ಮುಂಬೈನಲ್ಲಿ ಟೆಕ್ಸ್‌ಟೈಲ್ ಉದ್ದಿಮೆಯಲ್ಲಿ ತೊಡಗಿದ್ದರಿಂದ ಮುಂಬೈ ಕಲಾಶಾಲೆಯ ಅಭಿವೃದ್ಧಿಗಾಗಿ ಆ ಕಾಲದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಕೊಡುಗೆಯಾಗಿ ನೀಡಿದರು. ಈ ಕಾರಣದಿಂದಾಗಿ ಮುಂಬೈ ಕಲಾಶಾಲೆಗೆ ಸರ್.ಜೆ.ಜೆ. ಕಲಾಶಾಲೆ ಮುಂಬೈ ಎಂದು ಮರುನಾಮಕರಣ ಮಾಡಿತು. ಹಲವಾರು ಬದಲಾವಣೆಗಳನ್ನು ಕಲಾಶಾಲೆಯಲ್ಲಿ ಮಾಡಲಾಯಿತು. ಜೇಮ್‌ಶೆಡ್ ಜೀ ಜೀಜಾಬಾಯಿಯವರು ಒಂದು ಕೋರಿಕೆಯ ಮೇರೆಗೆ ಮುಂಬೈ ಕಲಾಶಾಲೆಯಲ್ಲಿ ಟೆಕ್ಸ್‌ಟೈಲ್ ಡಿಸೈನ್, ಭಿತ್ತಿಚಿತ್ರರಚನೆ, ಕುಂಭಕಲೆಯ ತರಬೇತಿಯನ್ನು ಆರಂಭಿಸಲಾಯಿತು. ಇವರು ಅನೇಕ ದೇಶಗಳಿಗೆ ಪ್ರವಾಸಕ್ಕಾಗಿ ಹೋದಂತಹ ಸಂದರ್ಭದಲ್ಲಿ ಅಲ್ಲಿನ ಕಲೆಗಳಿಗೆ ಸಂಬಂಧಪಟ್ಟ ಹಾಗೆ, ಕಲಾಶಾಲೆ ಹಾಗೂ ಮ್ಯೂಜಿಯಮ್‌ಗಳಿಗೆ ಭೇಟಿ ನೀಡುತ್ತಿದ್ದರು. ಅಲ್ಲಿನ ವಿದ್ವಾಂಸರೊಂದಿಗೆ ಕಲೆಯ ಬಗ್ಗೆ ಚರ್ಚಿಸಿ ಉತ್ತಮ ಅಂಶಗಳನ್ನು ಅಳವಡಿಸಿಕೊಳ್ಳಲು ಸೂಚನೆಯನ್ನು ನೀಡುತ್ತಿದ್ದರು. ಈ ಕಾರಣದಿಂದಾಗಿ ಮುಂಬೈ ಕಲಾಶಾಲೆಯು ಪ್ರಖ್ಯಾತಿಯನ್ನು ಪಡೆದುಕೊಂಡಿತು.

"೧೯೧೯ರಲ್ಲಿ ಕ್ಯಾಪ್ಟನ್ ಗ್ಲ್ಯಾಡಸನ್ ಸೊಲೋಮನ್‌ರು ಡೈರೆಕ್ಟರ್ ಆಗಿ ಬಂದರು. ಆಗ ತಾನೇ ಮೊದಲ ಮಹಾಯುದ್ಧವಾಗಿದ್ದರಿಂದ ಫ್ರೆಂಚ್ ಪ್ರಭಾವ ಕಲೆಯ ಮೇಲೆ ಆಗಿತ್ತು. ಕಲೆಯ ಕ್ಷೇತ್ರದಲ್ಲಿ ನವಯುಗ ಪ್ರಾರಂಭವಾಯಿತು. ಆದರೆ ಸೊಲೋಮನ್‌ರು ಪಾರಂಪರಿಕ ಅಭ್ಯಾಸಕ್ಕೆ ಬಹಳ ಮಹತ್ವ ನೀಡಿದ್ದರು. ಅಲ್ಲದೆ ನಾಲ್ಕನೆಯ ವರ್ಷದ ತರಗತಿಗಳಿಗೆ ನಗ್ನ ವ್ಯಕ್ತಿಗಳ ಆಕೃತಿಗಳನ್ನು ಚಿತ್ರಿಸುವ ಪದ್ಧತಿಯನ್ನು ಪಠ್ಯದಲ್ಲಿ ಸೇರಿಸಿದರು. ಶ್ರೀ ವಿ.ಎಸ್. ಆಧುರಕರ ಅವರು ಡೈರೆಕ್ಟರ್ ಆಗಿ ನೇಮಕಗೊಂಡ ನಂತರ ಸಾಕಷ್ಟು ಬದಲಾವಣೆಗಳಾದವು. ಆದರೆ ಕಲಾ ಇತಿಹಾಸ ಮತ್ತು ಸೌಂದರ್ಯಶಾಸ್ತ್ರ ವಿಷಯಗಳು ಪಠ್ಯಕ್ರಮದಲ್ಲಿ ಯಾವುದೇ ಬದಲಾವಣೆ ಆಗದಿರುವುದು ತಿಳಿದುಬರುತ್ತದೆ. ಮನುಷ್ಯಾಕೃತಿಗೆ ಪಠ್ಯಕ್ರಮದಲ್ಲಿ ಬಹಳ ಮಹತ್ವ ಕೊಟ್ಟಿದ್ದರು. ಇದಕ್ಕಾಗಿ ಸ್ವತಃ ಸತ್ತ ಮನುಷ್ಯರ ದೇಹಗಳನ್ನು ಕತ್ತರಿಸಿ ಪ್ರತಿಯೊಂದು ಮಾಂಸ-ಖಂಡಗಳ ಆಕಾರಗಳನ್ನು ಮನನ ಮಾಡಿಕೊಳ್ಳಲು ವಾರಕ್ಕೆ ಒಂದು ಅವಧಿ ಜೆ.ಜೆ. ಅಸ್ಪತ್ರೆಗೆ ಹೋಗುತ್ತಿದ್ದರು".[೫೨] ಈ ರೀತಿಯ ಪ್ರಯೋಗಾತ್ಮಕವಾಗಿ ನೀಡುವ ಶಿಕ್ಷಣದಿಂದ ವಿದ್ಯಾರ್ಥಿಗಳಲ್ಲಿ

ಕಲಿಯುವಂತಹ ಆಸಕ್ತಿ ಹೆಚ್ಚಾಗುತ್ತಾ ಬಂದಿದೆ. ದಕ್ಷಿಣ ಭಾರತದಲ್ಲೇ ಈ ಕಲಾಶಾಲೆಯ ಕೊಡುಗೆ ಗಣನೀಯವಾಗಿದೆ.

*** ಲಾಹೋರ್ ಕಲಾಶಾಲೆ**

ಈ ಕಲಾಶಾಲೆಯನ್ನು ಲಾರ್ಡ್ ಮಾಯೋರವರು ೧೮೭೫ರಲ್ಲಿ ಲಾಹೋರ್‌ನಲ್ಲಿ ಸ್ಥಾಪಿಸಿದರು. ಲಾಹೋರ್ ಅಂದಿನ ದಿನಗಳಲ್ಲಿ ಭಾರತದ ಒಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತು. ಆದರೆ ಇಂದಿನ ದಿನಗಳಲ್ಲಿ ಲಾಹೋರ್ ಪಾಕಿಸ್ತಾನದೊಳಗಿದೆ. ಇಂದಿಗೂ ಸಹಿತ ಬ್ರಿಟಿಷರು ಸ್ಥಾಪಿಸಿದ ಕಲಾಶಾಲೆಯನ್ನು ಕಾಣಬಹುದು. ಆದರೆ ಅದರ ಸ್ವರೂಪ ಮಾತ್ರ ಬದಲಾಗಿದೆ. ಈ ಕಲಾಶಾಲೆಯನ್ನು ಬ್ರಿಟಿಷರು "ಮಾಯೋ ಸರಕಾರಿ ಶಾಲೆ" ಎಂಬುದಾಗಿ ನಾಮಕರಣ ಮಾಡಿದರು. ಇದಕ್ಕೆ ಕಾರಣವೇನೆಂದರೆ ಈ ಕಲಾಶಾಲೆಯ ಸ್ಥಾಪನೆಗೆ ಸ್ಥಳವನ್ನು ದಾನ ಮಾಡಿದ 'ಮಯೋ' ಕುಟುಂಬದವರನ್ನು ಸ್ಮರಿಸುವ ನಿಟ್ಟಿನಲ್ಲಿ ಈ ಹೆಸರನ್ನು ಇಡಲಾಯಿತು. ಇಲ್ಲಿಯೂ ಸಹಿತ ಪ್ರಾರಂಭದ ದಿನಗಳಲ್ಲಿ ಒಂದು ವರ್ಷದ ಎಲಿಮೆಂಟರಿ ಡ್ರಾಯಿಂಗ್, ಪೇಂಟಿಂಗ್‌ನ್ನು ಕಲಿಸಲಾಗುತ್ತಿತ್ತು. ಈ ಕಲಾಶಾಲೆಗೆ ಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶ ಪಡೆಯದೇ ಇರುವುದು ಕಂಡುಬರುತ್ತದೆ. ಇದಕ್ಕೆ ಕಾರಣವೆಂದರೆ ಮುಸ್ಲಿಂ ಜನಾಂಗದವರು ಲಾಹೋರ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದರು. ಇವರಿಗೆ ಚಿತ್ರಕಲೆಯ ಬಗೆಗೆ ಅವರಲ್ಲಿದ್ದ ಧಾರ್ಮಿಕ ನಂಬಿಕೆ ಕಾರಣವಾಗಿರಬಹುದಾಗಿದೆ.

ಭಾರತದಲ್ಲಿ ಸ್ಥಾಪನೆಗೊಂಡ ನಾಲ್ಕು ಕಲಾಶಾಲೆಗಳಲ್ಲಿ ಅಂದಿನ ಸಂದರ್ಭದಲ್ಲಿ ಶೈಕ್ಷಣಿಕ ಗುಣಮಟ್ಟದಲ್ಲಿ ಈ ಕಲಾಶಾಲೆಯು ಅತ್ಯಂತ ಕ್ಷೀಣವಾಗಿತ್ತು. ಅಲ್ಲಿ ವಾಸಿಸುತ್ತಿದ್ದ ಕೆಲವೇ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡಲು ಬರುತ್ತಿದ್ದರು. ಮುಖ್ಯವಾಗಿ ಬ್ರಿಟಿಷ್ ಕುಟುಂಬದ ಮತ್ತು ಹಿಂದೂ ಕುಟುಂಬಗಳಲ್ಲಿನ ಮಕ್ಕಳು ಇಲ್ಲಿ ಕಲಾಶಿಕ್ಷಣ ಪಡೆದುಕೊಳ್ಳುತ್ತಿದ್ದರು. ಈ ಕಲಾಶಾಲೆಯ ವಿದ್ಯಾರ್ಥಿಗಳಿಗೆ ಜ್ಯಾಮಿತಿಕ ನಕ್ಷಾ ವಿನ್ಯಾಸ ಮತ್ತು ಗುಡ್ಡ–ಬೆಟ್ಟಗಳನ್ನು ಹೊಂದಿದ್ದ ನಿಸರ್ಗ ಚಿತ್ರಗಳನ್ನು ರಚಿಸುವಲ್ಲಿ ಹೆಚ್ಚಿನ ಆಸಕ್ತಿ ಇತ್ತು.

ಲಾಹೋರ್ ಕಲಾಶಾಲೆಯು ಮೂರು ಹೊಸ ವಿಭಾಗಗಳನ್ನು ಸ್ಥಾಪಿಸಿತು. ಲಲಿತಕಲೆ, ವಿನ್ಯಾಸಕಲೆ, ವಾಸ್ತುಶಿಲ್ಪ - ಈ ವಿಭಾಗಗಳಲ್ಲಿ ಕರಕುಶಲ ವಸ್ತುಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಿದ್ದರು. ಇದರೊಂದಿಗೆ ಪ್ರಸ್ತುತ ಸಂದರ್ಭದಲ್ಲಿ ಪದವಿ ಸ್ನಾತಕೋತ್ತರ ಪದವಿಗಳನ್ನು ಫೈನ್ ಆರ್ಟ್‌ನಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ.

"ಒಟ್ಟಾರೆ ಬ್ರಿಟಿಷರ ಆಡಳಿತ ಭಾರತದಲ್ಲಿ ವೈಜ್ಞಾನಿಕವಾದ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ಕಲಾಶಿಕ್ಷಣವನ್ನು ಪ್ರಾರಂಭಿಸಿದ ಕೀರ್ತಿಗೆ ಅವರು ಭಾಜನರಾಗಿದ್ದಾರೆ. ಅವೈಜ್ಞಾನಿಕವಾಗಿ ಬೆಳೆಯುತ್ತಿದ್ದ ಕಲಾಶಿಕ್ಷಣಕ್ಕೆ ಒಂದು ಶಾಸ್ತ್ರೀಯ ಚೌಕಟ್ಟು ಮತ್ತು ಶಿಸ್ತನ್ನು ಬ್ರಿಟಿಷರು ತಂದುಕೊಟ್ಟರು. ಆದರೆ ಬ್ರಿಟಿಷ್ ಮೂಲದ ಪಠ್ಯಕ್ರಮ ಭಾರತದ ಕಲಾಶಾಲೆಗಳಿಗೆ ಪ್ರವೇಶ ಮಾಡಿತು"[೫೮]

ಹೀಗಾಗಿ ಬ್ರಿಟಿಷ್ ಕಲಾಶಿಕ್ಷಣದ ಪಠ್ಯಕ್ರಮ ಕರ್ನಾಟಕದ ಹಿಂದೆ ಇದ್ದಂತಹ ಪಠ್ಯಕ್ರಮ ಹೆಚ್ಚು ಕಡಿಮೆ ಒಂದೇ ರೀತಿಯಾಗಿರುವುದನ್ನು ನಾವು ನೋಡಿದ್ದೇವೆ.

ಕಲಾಶಿಕ್ಷಣದ ಕುರಿತು ಆಯೋಗಗಳು

ಶಿಕ್ಷಣವನ್ನು ಕುರಿತು ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದು "೧೮೫೪ರಲ್ಲಿನ ವುಡ್ಸ್ ವರದಿ. ಇದು ಶಿಕ್ಷಣ ಕ್ಷೇತ್ರಕ್ಕೆ ಒಂದು ಆಧಾರ ಸ್ತಂಭವಾಗಿತ್ತು. ಈ ವರದಿಯಲ್ಲಿ ಹಲವಾರು ಶಿಫಾರಸ್ಸುಗಳನ್ನು ಮಾಡಿತು. ಈ ವರದಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಗಣನೀಯವಾಗಿ ಬೆಳೆದವು."[೫೯] ಆದರೆ ಚಿತ್ರಕಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯಾವುದೇ ಶಿಫಾರಸ್ಸುಗಳು ಈ ವರದಿಯಲ್ಲಿ ಕಂಡುಬಂದಿಲ್ಲ.

ವೈಸರಾಯ್‌ರ ಕಾರ್ಯನಿರ್ವಾಹಕ ಸಮಿತಿಯ ಸದಸ್ಯನಾಗಿದ್ದ ವಿಲಿಯಂ ಹಂಟರ್ ನೇತೃತ್ವದಲ್ಲಿ ಒಂದು ಆಯೋಗವನ್ನು ನೇಮಿಸಲಾಯಿತು. ಈ ಸಮಿತಿಯ ಉದ್ದೇಶ ಪ್ರಾಥಮಿಕ ಶಿಕ್ಷಣ ಪರಿಸ್ಥಿತಿಯನ್ನು ತನಿಖೆ ಮಾಡುವುದೇ ಆಗಿತ್ತು. ಈ ಆಯೋಗವು ನಮ್ಮ ದೇಶದ ಶಾಲೆಗಳ ಅಭಿವೃದ್ಧಿಪಡಿಸಬೇಕೆಂಬುದು ಮತ್ತು ಸಂದರ್ಭಕ್ಕೆ ತಕ್ಕಂತೆ ಹೊಸ ಹೊಸ ಶಿಕ್ಷಣ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕೆಂದು ಸಲಹೆಯನ್ನು ಮಾಡಿತು. "ಡಾ. ಹಂಟರ್ ಆಯೋಗದ ಶಿಫಾರಸ್ಸಿನ ಮೇರೆಗೆ ನಾಲ್ಕು ಕಲಾಶಾಲೆಗಳು ಪ್ರಾರಂಭಗೊಂಡವು. ೧೮೫೪ರಲ್ಲಿ ಕಲ್ಕತ್ತಾ ಸರಕಾರಿ ಚಿತ್ರಕಲಾ ಶಾಲೆ, ೧೮೫೭ರಲ್ಲಿ ಮದ್ರಾಸ್, ೧೮೫೭ರಲ್ಲಿ ಕಲ್ಕತ್ತಾ ಸರಕಾರಿ ಚಿತ್ರಕಲಾ ಶಾಲೆ, ೧೮೫೭ರಲ್ಲಿ ಮದ್ರಾಸ್, ೧೮೫೭ರಲ್ಲಿ ಮುಂಬೈ ಕಲಾ ಶಾಲೆ. ೧೮೭೮ರಲ್ಲಿ ಲಾಹೋರ್ ಕಲಾ ಶಾಲೆಗಳನ್ನು ಬ್ರಿಟಿಷರು ಆರಂಭಿಸಿದರು. ಭಾರತದಲ್ಲಿ ಕಲಾ ಶಿಕ್ಷಣಕ್ಕೆ ಚಾಲನೆಯನ್ನು ನೀಡಲಾಗಿತ್ತು. ಲಾರ್ಡ್ ಕರ್ಜನ್‌ನು ೧೮೯೮ರಲ್ಲಿ ವೈಸರಾಯ್ ಆಗಿ ಬಂದ ಮೇಲೆ ಶಿಕ್ಷಣದಲ್ಲಿ ಹಲವಾರು ಬದಲಾವಣೆಗಳಾದವು."[೬೦] ಈ ಒಂದು ಘಟ್ಟದಲ್ಲಿ ಭಾರತದಲ್ಲಿ ಕಲಾ ಶಾಲೆಗಳ ಮತ್ತು ಕಲಾಶಿಕ್ಷಣದ ಏಳಿಗೆಗಾಗಿ ಸಹಾಯಧನವನ್ನು ಸಹ ನೀಡಿತು. ಈ ಕಾರಣದಿಂದಾಗಿ ಕಲಾ ಶಿಕ್ಷಣ ಒಂದು ಉತ್ತಮವಾದ ಬುನಾದಿಯೆಂದು ಹೇಳಬಹುದು. ಕಲಾ ಶಿಕ್ಷಣದ ಜೊತೆಗೆ ಲಲಿತ ಕಲೆಗಳಿಗೆ ಸಂಬಂಧಿಸಿದಂತೆ ಸುಧಾರಣೆಗಳು, ಶಿಫಾರಸ್ಸುಗಳು ಸರ್ಕಾರದಿಂದ ಆಗತೊಡಗಿದವು.

"೧೯೦೨ರಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಪಠ್ಯಕ್ರಮವಾಗಿ ಡ್ರಾಯಿಂಗ್, ಭೂಗೋಳ, ಚರಿತ್ರೆ, ಗಾಯನ, ಬೇಸಾಯ ವಿಷಯಗಳನ್ನು ನೀಡುತ್ತಿದ್ದರು. ೧೯೧೩ರಲ್ಲಿ ಗೋಖಲೆಯವರ ಶಿಕ್ಷಣ ಮಸೂದೆ ತಿರಸ್ಕೃತವಾದ ಮೇಲೆ ಮತ್ತೊಂದು ಶಿಕ್ಷಣ ನೀತಿ ಬಂದಿತು. ಈ ಶಿಕ್ಷಣ ನೀತಿಯಲ್ಲಿ ಚಿತ್ರಕಲೆಗೆ ಸಂಬಂಧಿಸಿದಂತೆ ಸ್ವಲ್ಪ ಮಾನ್ಯತೆ ಸಿಕ್ಕಿತು. ನಂತರದಲ್ಲಿ ಎ. ಅಬ್ಬಾಟ್ ಮತ್ತು ಎಸ್.ಎಚ್. ವುಡ್ ಅವರುಗಳು ಶಿಕ್ಷಣ ಪುನರ್ ವ್ಯವಸ್ಥೆಯಲ್ಲಿ ಶಿಕ್ಷಣ ತಜ್ಞರಾದ್ದರಿಂದಾಗಿ ಹಾಗೂ ದೇಶಾದ್ಯಂತ ಸಂಚರಿಸಿ ಒಂದು ವರದಿಯನ್ನು ಸಲ್ಲಿಸಿದರು. ಈ ವರದಿಗೆ ವುಡ್

ಆ್ಯಂಡ್ ಅಬ್ಬಾಟ್ ಎಂದು ಕರೆಯಲಾಯಿತು. ಈ ವರದಿಯಲ್ಲಿ ಶಾಲಾ ಹಂತದಲ್ಲಿ ಕಲೆಗಳು ಕೈಗಾರಿಕೆಗಳು ಬೋಧನೆಯಲ್ಲಿ ಕಲಾಶಿಕ್ಷಣಕ್ಕೆ ಸಂಬಂಧಿಸಿದಂತಹ ಹಾಗೂ ವಿಶೇಷವೆಂದರೆ ಚಿತ್ರಕಲಾ ಶಿಕ್ಷಕರ ತರಬೇತಿಗಳಿಗೆ ಪ್ರೋತ್ಸಾಹ ನೀಡಬೇಕೆಂದು ಶಿಫಾರಸ್ಸು ಮಾಡಿದ್ದು"[೬೧] ಚಿತ್ರಕಲಾ ಕ್ಷೇತ್ರಕ್ಕೆ ಒಂದು ಅನುದಾನವಾಗಿತ್ತು.

"೧೯೩೫ರಿಂದ ೧೯೪೭ರ ಅವಧಿಯಲ್ಲಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಗಾಂಧೀಜಿಯವರ ಮೂಲ ಶಿಕ್ಷಣ ಪದ್ಧತಿಯಲ್ಲಿ ರೂಪಿಸಲ್ಪಟ್ಟ ವಾರ್ದಾ ಯೋಜನೆಯಡಿಯಲ್ಲಿ ಲಲಿತಕಲೆಗಳಿಗೆ ವಿಶೇಷವಾದ ಸ್ಥಾನವನ್ನು ಕಲ್ಪಿಸಿದರು."[೬೨] ಇಲ್ಲಿ ನೂಲುವುದು, ನೇಕಾರಿಕೆ, ಮರಗೆಲಸ, ಬೇಸಾಯ, ವ್ಯಾಯಾಮ ಮುಂತಾದ ಕಲೆಗಳ ಬೆಳವಣಿಗೆಗೆ ಅವಕಾಶವನ್ನು ನೀಡಲಾಯಿತು.

"೧೯೪೪ರಲ್ಲಿ 'ಲಾರ್ಡ್ ಸಾರ್ಜಂಟ್ ಆಯೋಗ'ವು ಪ್ರಾಥಮಿಕ ಮತ್ತು ಪ್ರೌಢ ಶಾಲಾ ಹಂತದಲ್ಲಿ 'ಡ್ರಾಯಿಂಗ್' ವಿಷಯದ ಬೋಧನೆ ಅತ್ಯಾವಶ್ಯಕವೆಂದು ಶಿಫಾರಸ್ಸು ಮಾಡಿತು. ೧೯೪೮ರಲ್ಲಿ ಬಂದ ರಾಧಾಕೃಷ್ಣನ್ ಆಯೋಗವು ಮಾಧ್ಯಮಿಕ ಹಂತದಲ್ಲಿ ನೂತನ ಪದ್ಧತಿಗಳಿಂದ ಬೋಧನೆ ಮತ್ತು ಕಡ್ಡಾಯದ ಲಲಿತಕಲೆ ಮತ್ತು ಶಾರೀರಿಕ ಶಿಕ್ಷಣ ಇರಬೇಕೆಂಬುದನ್ನು ಶಿಫಾರಸ್ಸು ಮಾಡಿತು. ೧೯೫೨ರ ಮಾಧ್ಯಮಿಕ ಶಿಕ್ಷಣ ಆಯೋಗ ಡಾ. ಲಕ್ಷ್ಮಣಕುಮಾರ ಮೊದಲಿಯಾರ್ ವರದಿಯು 'ಶಿಕ್ಷಣ ಹಾಗೂ ರಾಷ್ಟ್ರೀಯ ಉದ್ದೇಶಗಳು' ಇದರ "ಅಡಿಯಲ್ಲಿ ಕಲೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಜ್ಞಾನವನ್ನು ಮಕ್ಕಳಿಗೆ ನೀಡಬೇಕು" ಎಂದು ಶಿಫಾರಸ್ಸು ಮಾಡಿತು. ೧೯೬೪ರ 'ಕೊಠಾರಿ ಶಿಕ್ಷಣ ಆಯೋಗ'ದಲ್ಲಿ ಶಿಕ್ಷಣ ಮತ್ತು ರಾಷ್ಟ್ರೀಯ ಉದ್ದೇಶಗಳು ಎಂಬ ಶೀರ್ಷಿಕೆಯಡಿಯಲ್ಲಿ ಲಲಿತಕಲೆಗಳ ಶಿಕ್ಷಣಕ್ಕೆ ವಿಶೇಷ ಪ್ರೋತ್ಸಾಹ ನೀಡಿದೆ."[೬೩]

"೧೯೬೪ರ ರಾಜೀವ ಗಾಂಧಿಯವರ 'ಹೊಸ ಶಿಕ್ಷಣ ನೀತಿ'ಯೂ ಕಲೆ ಹಾಗೂ ಸೃಜನಾತ್ಮಕ ಅಭಿವ್ಯಕ್ತಿ" ಎಂದು ಶಾಲಾ ಹಂತದಲ್ಲಿ ಚಿತ್ರಕಲಾ ಪಠ್ಯವನ್ನು ತಯಾರಿಸಿದ್ದು ಒಂದು ಒಳ್ಳೆಯ ಬೆಳವಣಿಗೆಯಾಗಿದೆ. ಇದರಲ್ಲಿ ಚಿತ್ರಕಲೆಗೆ ಶೇಕಡ ೧೫ರಷ್ಟು ಸ್ಥಾನವನ್ನು ಕಲ್ಪಿಸಿದೆ. ಈ 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿ'ಯ ಮೂಲಕ ನಿಜವಾಗಿಯೂ ಈ ಹಿಂದೆ ಸಿಗದೇ ಇದ್ದಂತಹ ಪ್ರಾಮುಖ್ಯತೆ ಚಿತ್ರಕಲಾ ಶಿಕ್ಷಣಕ್ಕೆ ಸಿಕ್ಕಿದೆ. ಸಮಾಜ ಉಪಯೋಗಿ ಉತ್ಪಾದನ ಕಾರ್ಯ(ಎಸ್.ಯು.ಪಿ.ಡಬ್ಲ್ಯೂ) ಇದು ಚಿತ್ರಕಲೆಯ ಪೂರಕ ವಿಷಯವೇ ಆಗಿದ್ದು ಇವೆರಡಕ್ಕೂ ಸೇರಿ ಶೇಕಡ ೨೦ರಷ್ಟು ಪಠ್ಯದಲ್ಲಿ ಅವಕಾಶ ದೊರೆತಂತಾಗಿದೆ. ಒಂದನೆಯ ತರಗತಿಯಿಂದ ಎಸ್.ಎಲ್.ಎಲ್.ಸಿ. ಹಂತದವರೆಗೆ ಚಿತ್ರಕಲೆ ಕಡ್ಡಾಯದ ವಿಷಯವನ್ನಾಗಿ ಮಾಡಿದೆ."[೬೪]

ಈ ರೀತಿಯಾಗಿ ಭಾರತ ಶಿಕ್ಷಣ ಆಯೋಗಗಳಲ್ಲಿ ಸ್ವಲ್ಪಮಟ್ಟಿಗೆಯಾದರೂ ಚಿತ್ರಕಲೆಗೆ ಒಂದು ಸ್ಥಾನವನ್ನು ನೀಡಿರುವುದು ಕಂಡುಬರುತ್ತದೆ.

ಯಾವುದೇ ಕ್ಷೇತ್ರಗಳ ಅಭಿವೃದ್ಧಿ ಮತ್ತು ಏಳಿಗೆಗಾಗಿ ವರದಿಗಳು ನೀಡುವ ಆದ್ಯತೆಯನ್ನು ನೀಡುವುದು ಸರ್ಕಾರದ ಕಾರ್ಯವಾಗಿದೆ. ವರದಿಗಳ ಆಧಾರದ ಮೇಲೆ ಕ್ಷೇತ್ರಾಭಿವೃದ್ಧಿಯ

ನಿರ್ಧಾರಕ್ಕೆ ಸಹಕಾರಿಯಾಗಿದೆ. ಬ್ರಿಟಿಷ್ ಸರ್ಕಾರ ತಮ್ಮ ಆಡಳಿತಾವಧಿಯಲ್ಲಿ ಅನೇಕ ಆಯೋಗಗಳನ್ನು ನೇಮಿಸಿ ವರದಿಗಳನ್ನು ಪಡೆದು ಅಭಿವೃದ್ಧಿಗೆ ಶ್ರಮಿಸಿರುವುದು ಗಮನಾರ್ಹ. ಹಾಗೆಯೇ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಹಲವಾರು ಆಯೋಗಗಳನ್ನು ಹಂತ ಹಂತವಾಗಿ ನೇಮಿಸಿ ವರದಿ ಪಡೆದು ಆದ್ಯತೆ ನೀಡಿರುವುದು ಇದರಿಂದ ಮನನವಾಗುತ್ತದೆ. ಶಿಕ್ಷಣದಲ್ಲಿ ಮಕ್ಕಳಿಗೆ ಪಠ್ಯೇತರ ಜ್ಞಾನವನ್ನು ನೀಡುವ ಕಲಾಶಿಕ್ಷಣಕ್ಕೆ ಪ್ರೋತ್ಸಾಹಿಸುವ ಅವಕಾಶವನ್ನು ಆಯೋಗಗಳಲ್ಲಿ ಕಲ್ಪಿಸಲಾಗಿದೆ. ಇದು ಇಂದಿನ ಕಲಾಶಿಕ್ಷಣದ ಬೆಳವಣಿಗೆಗೆ ಸಹಕಾರಿಯಾಗಿದೆ. ಶಿಕ್ಷಣ ದೇಶಾದ್ಯಂತ ಹಲವಾರು ಕಲಾಶಾಲೆಗಳ ಸ್ಥಾಪನೆಯಲ್ಲಿ ಈ ವರದಿಗಳು ಸಹ ಪ್ರಮುಖ ಪಾತ್ರ ವಹಿಸಿವೆ. ಕಲಾಶಿಕ್ಷಣದ ಮಹತ್ವವನ್ನು ಈ ವರದಿಗಳು ಉಲ್ಲೇಖಿಸಿರುವುದು ಗಮನಾರ್ಹ.

ಕೊನೆ ಟಿಪ್ಪಣಿಗಳು

೧. ಎನ್.ಎಸ್. ಗದಗಕರ, ಇಂದಿನ **ಶಿಕ್ಷಣ(ತತ್ವ-ಸಮಸ್ಯೆ-ಪ್ರಯೋಗ)**, ೧೯೯೭, ಪು. ೩.

೨. ಭರತ್‌ಭೂಷಣ್ ಬಿ., **ಶಿಕ್ಷಣದ ಆಧಾರಗಳು**, ೨೦೦೪, ಪು. ೩.

೩. ಜಾನ್ ಜೂಲಿಯಸ್ ನಾರ್‌ವಿಚ್ (ಸಂ), **ಆಕ್ಸ್‌ಫರ್ಡ್ ಇಲ್ಲುಸ್ಟ್ರೇಟೆಡ್ ಎನ್‌ಸೈಕ್ಲೋಪಿಡಿಯಾ ಆಫ್ ದಿ ಆರ್ಟ್ಸ್**, ೧೮೭೯, ಪು. ೮೨.

೪. ಶರಣಪ್ಪ ಕೋಲ್ಕಾರ, **ಶಿಲಾಯುಗದ ಗವಿಚಿತ್ರಗಳು**, ೨೦೧೦, ಪು. ೫.

೫. ಸುಂದರ ಅ., **ಕರ್ನಾಟಕ ಪ್ರಾಗೈತಿಹಾಸದ ಕಲೆ**, ೧೯೯೪, ಪು. ೮೨.

೬. ಎಚ್. ತಿಪ್ಪೇರುದ್ರಸ್ವಾಮಿ, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ೧೯೬೮, ಪು. ೧೬.

೭. ಬಿ.ಪಿ. ಬಾಯಿರಿ, **ಭಾರತೀಯ ಚಿತ್ರಕಲೆ**, ೧೯೭೯, ಪು. ೧೨.

೮. ಎಲ್. ಗಿರಿಜಾರಾಜ್, **ನಮ್ಮ ಶಿಕ್ಷಣ**, ೨೦೧೨, ಪು. ೧೮.

೯. ಬಿ.ಪಿ. ಬಾಯಿರಿ, **ಭಾರತೀಯ ಚಿತ್ರಕಲೆ**, ೧೯೭೯, ಪು. ೮ ಮತ್ತು ೯.

೧೦. ಎನ್. ಮರಿಶಾಮಾಚಾರ್, **ದೃಶ್ಯಕಲಾ**, ೨೦೦೧, ಪು. ೨.

೧೧. ಅದೇ, ಪು. ೨.

೧೨. ಮಹಾಬಲೇಶ್ವರರಾವ್ (ಅನು), **ಭಾರತದಲ್ಲಿ ಶಿಕ್ಷಣ**, ೨೦೧೬, ಪು. ೧೪.

೧೩. ಅದೇ, ಪು. ೧೪.

೧೪. B.N. Goswmy and A.L. Dahman - Dallapiccola(Ed), **An Early Document of Indian Art**, 1976, P. 2.

೧೫. ಡಾ. ಬಿ.ಕೆ. ಹಿರೇಮಠ(ಸಂ), ಡಾ. ಎಸ್.ಸಿ. ಪಾಟೀಲ, **ನಿಜದ ನೆಲೆ**, ಅಭಿನಂದನ ಗ್ರಂಥ ಸತ್ಯಾನಂದ **ಪಾತ್ರೋಟ**, ೨೦೦೩, ಪು. ೩.

೧೬. ಸಿ. ಶಿವರಾಮಮೂರ್ತಿ(ಅನುವಾದ), ಪಿ.ಆರ್. ತಿಪ್ಪೇಸ್ವಾಮಿ, **ಭಾರತೀಯ ಚಿತ್ರಕಲೆ**, ೧೯೯೮, ಪು. ೭.

೧೭. ಅದೇ, ಪು. ೮.

೧೮. ಅ.ಲ. ನರಸಿಂಹನ್, ಎನ್. ಮರಿಶಾಮಾಚಾರ್(ಸಂ), **ಚಿತ್ರಕಲಾ ಪ್ರಪಂಚ**, ೧೯೯೩, ಪು. ೧೧೨.

೧೯. ಸಿ. ಶಿವರಾಮಮೂರ್ತಿ(ಅನುವಾದ) ಪಿ.ಆರ್. **ತಿಪ್ಪೇಸ್ವಾಮಿ ಭಾರತೀಯ ಚಿತ್ರಕಲೆ**, ೧೯೯೮, ಪು. ೯.

೨೦. ಪಾಟೀಲ ಎಸ್.ಸಿ., **ಜನಪದ ಚಿತ್ರಕಲೆ**, ಪು. ೨೩.

೨೧. ಗಿರೀಶ್‌ಕುಮಾರ್ ಎಂ.ಕೆ., **ಕರ್ನಾಟಕದ ಬುಡಕಟ್ಟು ಚಿತ್ರಕಲೆ**, ೨೦೦೨, ಪು. ೩೭.

೨೨. ಶಿವರಾಮ ಕಾರಂತ, **ಭಾರತೀಯ ಚಿತ್ರಕಲೆ**, ೧೯೮೦, ಪು. ೭.

೨೩. ಬಿ.ಪಿ. ಬಾಯರಿ, **ಭಾರತೀಯ ಚಿತ್ರಕಲೆ**, ೧೯೭೯, ಪು. ೨೩.

೨೪. ಎನ್. ಮರಿಶಾಮಾಚಾರ್, **ಸಾಹಿತ್ಯದಲ್ಲಿ ಚಿತ್ರಕಲೆ**, ೧೯೮೯, ಪು. ೩೩.

೨೫. ಉಮೇಶ ಎಸ್., **ಕರ್ನಾಟಕ ಜೈನ ಚಿತ್ರಕಲೆ**, ೨೦೦೭, ಪು. ೧೯.

೨೬. ಎಚ್.ಎನ್. ಚಿತ್ರಗಾರ, **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**, ೨೦೦೫, ಪು. ೪೮.

೨೭. ರೇಣುಕಾ ಮಾರ್ಕಾಂಡೆ, **ಕರ್ನಾಟಕ ವೈಷ್ಣವ ಪರಂಪರೆಯ ಚಿತ್ರಕಲೆ**, ೨೦೧೨, ಪು. ೩೧.

೨೮. ಶಿವರಾಮಮೂರ್ತಿ(ಅನು), ಪಿ.ಆರ್. ತಿಪ್ಪೇಸ್ವಾಮಿ, **ಭಾರತೀಯ ಚಿತ್ರಕಲೆ**, ೧೯೯೮, ಪು. ೩೦.

೨೯. ಅದೇ, ಪು. ೩೩.

೩೦. ಗಿಲ್ಬರ್ಟ್ ಸಿಕ್ವೇರಾ, **ಪ್ರಥಮ ಪಿ.ಯು.ಸಿ. ಇತಿಹಾಸ**, ೨೦೦೪, ಪು. ೨೩೨.

೩೧. ಎ.ಎಸ್. ನಂಜುಂಡಸ್ವಾಮಿ, **ಚಾಲುಕ್ಯ ಚಿತ್ರಕಲೆ**, ೧೯೭೧, ಪು. ೧೦೨.

೩೨. ಸಿ. ಶಿವರಾಮಮೂರ್ತಿ(ಅನು), ಪಿ.ಆರ್. ತಿಪ್ಪೇಸ್ವಾಮಿ, **ಭಾರತೀಯ ಚಿತ್ರಕಲೆ**, ೧೯೯೮, ಪು. ೭೦.

೩೩. ಅದೇ, ಪು. ೫೧.

೩೪. ಬಿ.ಪಿ. ಬಾಯಿರಿ, **ಭಾರತೀಯ ಚಿತ್ರಕಲೆ**, ೧೯೭೯, ಪು. ೫೩.

೩೫. ಶಿವರಾಮ ಕಾರಂತ, **ಭಾರತೀಯ ಚಿತ್ರಕಲೆ**, ೧೯೮೦, ಪು. ೪೪.

೩೬. ಮಲ್ಲಿಕಾರ್ಜುನ ಸಿ. ಬಾಗೋಡಿ, **ಚಿತ್ರಲೇಖ**, ೨೦೦೯, ಪು. ೧.

೩೭. ಎನ್. ಮರಿಶಾಮಾಚಾರ್, **ಕರ್ನಾಟಕದ ಚಿತ್ರಕಲಾ ಪರಂಪರೆ**, ೨೦೧೬, ಪು. ೩೮.

೩೮. ಬಾಯಿರಿ ಬಿ.ಪಿ., **ಭಾರತೀಯ ಚಿತ್ರಕಲೆ**, ೧೯೭೯, ಪು. ೬೫.

೩೯. ಗಿಲ್ಬರ್ಟ್ ಸಿಕ್ವೇರಾ, **ಪ್ರಥಮ ಪಿಯುಸಿ, ಇತಿಹಾಸ**, ೨೦೦೪, ಪು. ೨೩೨.

೪೦. ಬಾಯಿರಿ ಬಿ.ಪಿ., **ಭಾರತೀಯ ಚಿತ್ರಕಲೆ**, ೧೯೭೯, ಪು. ೮೧.

೪೧. ಮಲ್ಲಿಕಾರ್ಜುನ ಸಿ. ಬಾಗೋಡಿ, **ಸುರಪುರ ಚಿತ್ರಕಲೆ**, ೨೦೧೦, ಪು. ೩೦.

೪೨. ಅದೇ, ಪು. ೪೪.

೪೩. ಮಲ್ಲಿಕಾರ್ಜುನ ಸಿ. ಬಾಗೋಡಿ, **ಸುರಪುರ ಚಿತ್ರಕಲೆ**, ೨೦೧೦, ಪು. ೪೪.

೪೪. ಅರುಣಿ ಎಸ್.ಕೆ., **ದಖನಿ ಚಿತ್ರಕಲೆ**, ೨೦೦೧, ಪು. ೪೪, ೧೦೬, ೧೦೭.

೪೫. ಮಲ್ಲಿಕಾರ್ಜುನ ಸಿ. ಬಾಗೋಡಿ, **ಚಿತ್ರಲೇಖ**, ೨೦೦೯, ಪು. ೪೫.

೪೬. ಮಹಾಬಲೇಶ್ವರರಾವ್ (ಅನು), **ಭಾರತದಲ್ಲಿ ಶಿಕ್ಷಣ**, ೨೦೧೬, ಪು. ೪೦.

೪೭. ವಜೀರ್‌ಭಾಷಾ ಮ. ಭಾಗಾಯತ್, **ಕರ್ನಾಟಕ ಮುಸ್ಲಿಮ್ ಅರಸರ ಕಾಲದ ಚಿತ್ರಕಲೆ**, ೨೦೦೪, ಪು. ೫೨.

೪೮. ಆ.ಲ. ನರಸಿಂಹನ್, **ಕರ್ನಾಟಕ ಭಿತ್ತಿಚಿತ್ರ ಪರಂಪರೆ**, ೧೯೯೮, ಪು. ೧೧೬-೧೧೭.

೪೯. ಮೊಹಮ್ಮದ್ ಮೊಹಿವುದ್ದೀನ್, **ಸನ್‌ಸೆಟ್ ಆಟ್ ಶ್ರೀರಂಗಪಟ್ಟಣಮ್**, ಪು. ೧೪೧.

೫೦. ಎಸ್.ಸಿ. ಪಾಟೀಲ, **ದೃಶ್ಯಕಲಾ ಸಂವೇದನೆ**, ೨೦೧೫, ಪು. ೧.

೫೧. ಅದೇ, ಪು. ೨.

139095
ಅಕ್ಷರ ಗ್ರಂಥಾಲಯ
ಕನ್ನಡ ವಿ.ವಿ., ಹಂಪಿ.

೫೨. ಅದೇ, ಪು. ೪ ಮತ್ತು ೫.

೫೩. ಅದೇ, ೨೦೧೫, ಪು. ೬.

೫೪. ಅದೇ, ಪು. ೧೧.

೫೫. John Julius Norwith, **Story of Sir J.J. School of Art-A Hundred Year of its Career**, 1976, P. 3.

೫೬. ಸತೀಶ್‌ಕುಮಾರ್ ಪಿ. ವಲ್ಲೇಪುರೆ, **ಮುಂಬಯಿ ಸರ್. ಜೆ.ಜೆ. ಕಲಾ ಶಾಲೆಯ ಪ್ರಾತಿನಿಧಿಕ ಕರ್ನಾಟಕದ ಕಲಾವಿದರು-ಒಂದು ಅಧ್ಯಯನ**, ೨೦೧೦, ಪು. ೨೬.

೫೭. ಎಸ್.ಸಿ. ಪಾಟೀಲ, **ದೃಶ್ಯಕಲಾ ಸಂವೇದನೆ**, ೨೦೧೫, ಪು. ೧೭.

೫೮. ಅದೇ, ಪು. ೨೨.

೫೯. ಎ.ಎಸ್. ನಂಜುಂಡಸ್ವಾಮಿ, **ಭಾರತೀಯ ಶಿಕ್ಷಣ ಇತಿಹಾಸ**, ಪು. ೫೫.

೬೦. ಎಸ್.ಸಿ. ಪಾಟೀಲ, **ದೃಶ್ಯಕಲಾ ಸಂವೇದನೆ**, ೨೦೧೫, ಪು. ೩೭.

೬೧. ಅದೇ, ಪು. ೪೨.

೬೨. ಎಸ್.ಸಿ. ಪಾಟೀಲ, **ವರ್ಣಸಂಚಯ**, ೨೦೧೧, ಪು. ೪೨.

೬೩. ಎಸ್.ಸಿ. ಪಾಟೀಲ, **ದೃಶ್ಯಕಲಾ ಸಂವೇದನೆ**, ೨೦೧೫, ಪು. ೩೮.

೬೪. ಅದೇ, ಪು. ೩೯.

❖❖❖

ಅಧ್ಯಾಯ : ಮೂರು

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿನ ಶೈಕ್ಷಣಿಕ ವ್ಯವಸ್ಥೆ

೩.೧. ಕರ್ನಾಟಕದಲ್ಲಿ ಕಲಾಶಿಕ್ಷಣದ ಸೌಲಭ್ಯಗಳು
ಚಿತ್ರಕಲಾ ಶಾಲೆಗಳು
ಕಲೆ ಮತ್ತು ಕಲಾಶಿಕ್ಷಣಕ್ಕೆ ಸಂಬಂಧಿಸಿದ ಪತ್ರಿಕೆಗಳು
ಪದವಿಯಲ್ಲಿ ಒಂದು ಐಚ್ಛಿಕ ವಿಷಯವಾಗಿ ಚಿತ್ರಕಲೆಯನ್ನು
ಕಲಿಸುತ್ತಿರುವ ಚಿತ್ರಕಲಾ ವಿದ್ಯಾಲಯಗಳು
ಅಂಚೆ ಮೂಲಕ ಚಿತ್ರಕಲೆ
ದೂರಶಿಕ್ಷಣದ ಮೂಲಕ ನಡೆಯುತ್ತಿದ್ದ ಕಲಾ ಸಂಸ್ಥೆಗಳು

ಅಧ್ಯಾಯ : ಮೂರು

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿನ ಶೈಕ್ಷಣಿಕ ವ್ಯವಸ್ಥೆ

ಕರ್ನಾಟಕದಲ್ಲಿ ವಿಜಯನಗರ ಸಂಸ್ಥಾನದಲ್ಲಿ ವೃದ್ಧಿಯಾದಂತಹ ಸಾಂಪ್ರದಾಯಿಕ ಚಿತ್ರಶೈಲಿಯು ಮುನ್ನಡೆದು ಬಂದಿದೆ. ವಿಜಯನಗರ ಸಾಮ್ರಾಜ್ಯದ ಪತನದ ನಂತರದಲ್ಲಿ ಅರಮನೆಯ ಆಸರೆಯಲ್ಲಿದ್ದಂತಹ ಕಲಾವಿದರೆಲ್ಲಾ ಹಲವಾರು ಕಡೆ ಚದುರಿಹೋದರು.

ಇಲ್ಲಿ ವಿಶೇಷವಾಗಿ ಭಿತ್ತಿಚಿತ್ರಗಳಲ್ಲದೆ ಹಸ್ತಲಿಖಿತ ಪುಸ್ತಕದಲ್ಲಿರುವಂತಹವುಗಳಿಗೆ ಚಿತ್ರಗಳನ್ನು ರಚನೆ ಮಾಡುತ್ತಿದ್ದರು. ಈ ರೀತಿಯಲ್ಲಿ ರಚಿಸಿದಂತಹ ಪುಸ್ತಕಗಳು ಇಲ್ಲಿಯವರೆಗೂ ಹಳೆಯ ಮನೆತನಗಳಲ್ಲಿ ಇದ್ದವು. ಅಂತಹ ಚಿತ್ರಗಳನ್ನು ಒಳಗೊಂಡಿರುವ ಗ್ರಂಥ. "ಶ್ರೀತತ್ವನಿಧಿ ಇದು ಮುಮ್ಮಡಿ ಕೃಷ್ಣರಾಜ ಒಡೆಯರ ಆಶ್ರಯದಲ್ಲಿ ರಚಿತವಾದದ್ದು. ಇದು ಒಂಭತ್ತು ವಿಭಾಗಗಳನ್ನು ಹೊಂದಿದ ದೊಡ್ಡ ಗ್ರಂಥವಾಗಿದ್ದು ಒಂದೊಂದು ವಿಭಾಗವೂ ಒಂದೊಂದು ದೇವತಾ ಪ್ರಪಂಚಕ್ಕೆ ನಿಗದಿಯಾಗಿದೆ. ಶಕ್ತಿನಿಧಿ, ವಿಷ್ಣುನಿಧಿ, ಬ್ರಹ್ಮನಿಧಿ, ಶಿವನಿಧಿ ಮುಂತಾದ ಶೀರ್ಷಿಕೆಗಳು ಆಯಾ ವಿಭಾಗದಲ್ಲಿ ವಿತರಿಸಲಾಗುವ ವಿಷಯದ ಸೂಚನೆ ನೀಡುತ್ತದೆ. ಈ ಗ್ರಂಥವು ೧೦೦೦ ವರ್ಣಚಿತ್ರಗಳನ್ನು, ೪೫೦ ರೇಖಾಚಿತ್ರಗಳನ್ನು ಒಳಗೊಂಡಿದೆ."[೧]

೧೮೬೧ರಲ್ಲಿ ಮೈಸೂರಿನ ಜಗನ್ಮೋಹನ ಅರಮನೆಯನ್ನು ಕಟ್ಟಲು ಪ್ರಾರಂಭಿಸಿದ್ದು ಅದನ್ನು ಚಿತ್ರಶಾಲೆಯಾಗಿ ಮಾರ್ಪಾಟು ಮಾಡಲಾಯಿತು. "ಈ ಬಂಗಲೆಯು ವರ್ಣಚಿತ್ರಗಳಿಗೆ ಸಂಬಂಧಿಸಿದಂತಹ ಭಿತ್ತಿಚಿತ್ರಗಳಿಂದ ಅಲಂಕೃತವಾಗಿದೆ. ಇದರಲ್ಲಿ ಮೈಸೂರು ರಾಜವಂಶಕ್ಕೆ ಸೇರಿದ ವ್ಯಕ್ತಿಗಳು, ಇತರ ಗಣ್ಯರು, ಕೃಷ್ಣರಾಜ, ಹುಲಿ, ಪಶು-ಪಕ್ಷಿಗಳು ಮುಂತಾದವುಗಳನ್ನು ಕಾಣಬಹುದು."[೨] ಅಂದಿನ ಪ್ರಸಿದ್ಧ ಚಿತ್ರಗಾರರಲ್ಲಿ ವೀರಣ್ಣ, ಮಲ್ಲಪ್ಪ, ಬಸವಣ್ಣ ಮೊದಲಾದ ವರಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಕಲೆಯ ಮೇಲೆ ತುಂಬಾ ಪ್ರೀತಿ ಮತ್ತು ಸಾಂಪ್ರದಾಯಿಕ ಚಿತ್ರಕಲೆಗೆ ಒಳ್ಳೆಯ ಪ್ರೋತ್ಸಾಹವನ್ನು ನೀಡುತ್ತಿದ್ದರು. ಇವರ ಕಾಲದಲ್ಲಿ ಕಲಾವಿದರು ಪುರಾಣಗಳಿಗೆ ಸಂಬಂಧಿಸಿದಂತೆ, ಹೊಸ ಶೈಲಿಯಿಂದ ಕೂಡಿದಂತಹ ಜಲ ಮತ್ತು ತೈಲವರ್ಣದಲ್ಲಿ ರಚಿಸುತ್ತಿದ್ದರು. ಆ ಕಾಲದಲ್ಲಿ "ಸುಂದರಯ್ಯ, ಕೊಂಡಪ್ಪ, ಎಲ್ಲಪ್ಪ - ದುರ್ಗದ ವೆಂಕಟಪ್ಪ, ನರಸಿಂಹಯ್ಯ ಮುಂತಾದ ಚಿತ್ರಗಾರರನ್ನು ಕಾಣಬಹುದು.

"ಕಲೆಯಲ್ಲಿ ನಿಜಕ್ಕೂ ಕರ್ನಾಟಕದ್ದೇ ಆದ ಪಂಥ ಇದೆ; ಅತ್ಯಂತ ಪ್ರಾಚೀನವಾದದ್ದು ಮೈಸೂರು ಸಾಂಪ್ರದಾಯಿಕ ಚಿತ್ರಕಲೆ. ತಂಜಾವೂರಿನ ಕಲೆಯಂತೆ ಇದಕ್ಕೂ ರಾಜರ ಕಾಲದಲ್ಲಿ ವಿಶೇಷ ಪ್ರೋತ್ಸಾಹ ದೊರಕಿತು. ಆ ಕಾಲದಲ್ಲಿ ರಚನೆ ಮಾಡಿದಂತಹ ಅನೇಕ ಚಿತ್ರಗಳನ್ನು ಈಗಲೂ ಸಹ ನೋಡಬಹುದು. ಬ್ರಿಟಿಷರು ಆಗಮಿಸಿ ಅವರು ತಮ್ಮ ಆಳ್ವಿಕೆಯೊಂದಿಗೆ ಈ ಕಲೆಯತ್ತ ಗಮನ ಕಡಿಮೆಯಾಗಿ ಇದರ ಬೆಳವಣಿಗೆ ಕುಂಠಿತಗೊಂಡಿತು. ಈ ಹಿನ್ನೆಲೆಯಲ್ಲಿ ಕಲಾವಿದರು ಬಹಳ ಕಡಿಮೆಯಾದರು. ಈ ರೀತಿಯ ಸಾಂಪ್ರದಾಯಿಕ ಕಲೆಯನ್ನು ಉಳಿಸಲು ಚಿತ್ರಕಲಾ ಪರಿಷತ್ತು ಹೊರತಂದಿರುವ ಗ್ರಂಥ ಈ ಮಾತಿಗೆ ಸಾಕ್ಷಿ"[5]ಯಾಗಿದೆ.

ಹದಿನೆಂಟನೆಯ ಶತಮಾನದಲ್ಲಿ ಮೈಸೂರಿಗೆ ಪಾಶ್ಚಾತ್ಯ ಚಿತ್ರಕಲೆಯ ಪ್ರವೇಶವಾಯಿತು. ಇದು ನಮ್ಮ ದೇಶದ ಸಾಂಪ್ರದಾಯಿಕ ಕಲೆಯ ಮೇಲೆ ಪ್ರಭಾವ ಬೀರಿದ ಹಾಗೆ ಕಾಣಬರುತ್ತದೆ. ಏಕೆಂದರೆ ಇಲ್ಲಿರುವಂತಹ ಕಲಾವಿದರು ಚಿತ್ರಗಳಲ್ಲಿ ಕಾಲಕ್ರಮೇಣವಾಗಿ ದೃಷ್ಟಿನಿಷ್ಠೆಯ ವಾತಾವರಣ, ಉದ್ದ, ಅಗಲ ಮುಂತಾದವು ಕಾಣಲಾರಂಭವಾಯಿತು. ಕರ್ನಾಟಕ ಚಿತ್ರಗಾರರು ಪಾಶ್ಚಾತ್ಯ ತೈಲವರ್ಣವನ್ನು ಮಾಧ್ಯಮ ಬಳಸುವುದರಲ್ಲಿಯೂ ಶಿಕ್ಷಣ ಪಡೆದರು. ತಮ್ಮ ಸಾಂಪ್ರದಾಯಿಕ ಶೈಲಿಯಲ್ಲಿಯೂ ಸಹ ಪಾಶ್ಚಾತ್ಯ ಮಾಧ್ಯಮವನ್ನು ಉಪಯೋಗಿಸಲು ಆರಂಭಿಸಿದರು. ಇದೆಲ್ಲ ಆದುದು ಮೈಸೂರಿನಲ್ಲಿ ಕೆಲಕಾಲ ವಾಸವಾಗಿದ್ದ ಪ್ರಸಿದ್ಧ ಚಿತ್ರಕಾರ ರಾಜಾ ರವಿವರ್ಮನಿಂದ ಎಂದರೆ ತಪ್ಪಲ್ಲ. ಚಿತ್ರ ರಚನೆಯ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯು ಪಾಶ್ಚಾತ್ಯ ಚಿತ್ರಶೈಲಿಯ ಪಠ್ಯ ವಿಷಯವಾಗಿ ಸೇರಿಸಿದ ಮೇಲೆ, ಆ ತತ್ವ ಮತ್ತು ಶೈಲಿಯಲ್ಲಿ ತರಬೇತಿ ಪಡೆದ ಕಲಾವಿದರ ಒಂದು ಹೊಸ ಪೀಳಿಗೆ ಮುನ್ನೆಲೆಗೆ ಬಂದಿತು."[6]

ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಬಂದಂತಹ ಕಲಾವಿದರು ಮುಂಬಯಿಯ ಸರ್.ಜೆ.ಜೆ. ಸ್ಕೂಲ್ ಆಫ್ ಆರ್ಟ್ ಕಲಾಶಾಲೆಯಲ್ಲಿ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆದರು. ಇನ್ನು ಆರ್ಥಿಕವಾಗಿ ಮುಂದಿದ್ದ ಕೆಲವು ಜನರು ಪಾಶ್ಚಾತ್ಯ ದೇಶಗಳಲ್ಲಿ ಶಿಕ್ಷಣ ಪಡೆದುಕೊಂಡು ಬಂದಿರುವುದನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಮೈಸೂರು ಕಲೆಯು ೨೦ನೇ ಶತಮಾನದಲ್ಲಿ ಪಾಶ್ಚಾತ್ಯ ಕಲೆಯ ಪ್ರಭಾವಕ್ಕೆ ಒಳಗಾಯಿತು. ಮುಂಬೈ ಕಲಾ ಶಾಲೆಯು ಸಾವಿರಾರು ಚಿತ್ರಕಾರರನ್ನು ಬೆಳಕಿಗೆ ತಂದಿತು. ಅದರಲ್ಲಿ ಕನ್ನಡಿಗರ ಸಂಖ್ಯೆ ಹೆಚ್ಚು; ಹೈದ್ರಾಬಾದ್-ಕರ್ನಾಟಕ. ಹಳೇ ಮೈಸೂರು ಸೀಮೆ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ, ಮುಂಬೈ ಕರ್ನಾಟಕದ ಅನೇಕರು ಕಲಾಶಿಕ್ಷಣವನ್ನು ಪಡೆದುಕೊಂಡಿದ್ದಾರೆ.

'ಸ್ವಾತಂತ್ರ್ಯಪೂರ್ವ ಕರ್ನಾಟಕದಲ್ಲಿ ಚಿತ್ರಕಲೆ ಬೆಳೆದುಬಂದ ಬಗೆಯನ್ನು ಇಲ್ಲಿ ಸೂಕ್ತವಾಗಿ ವಿವರಿಸಲಾಗಿದೆ". ಇದಕ್ಕೆ ಸಂಬಂಧಿಸಿದಂತೆ ಅಂದಿನ ಕಾಲದ "ವಿದೇಶಿಯರು, ಪಾಳೆಯಗಾರರು, ಕಲಾಭಿಮಾನಿಗಳು ಕೊಟ್ಟ ಪ್ರೋತ್ಸಾಹವನ್ನು ಯಾರೂ ಮರೆಯುವಂತಿಲ್ಲ". ಇದಕ್ಕೆ ನಿದರ್ಶನವಾಗಿ ದೇವಾಲಯಗಳಲ್ಲಿ, ಅರಮನೆಗಳಲ್ಲಿ, ವಸ್ತುಸಂಗ್ರಹಾಲಯಗಳಲ್ಲಿ ನೋಡಲು ದೊರಕುವ ಅಪೂರ್ವ ಚಿತ್ರಗಳೇ ಸಾಕ್ಷಿಯಾಗಿವೆ." ಇವುಗಳ ರಕ್ಷಣೆ ನಮ್ಮ ಪಾಲಿನದ್ದಾಗಿದೆ.

ಕರ್ನಾಟಕವೂ ಭಾರತದ ಇತರ ಪ್ರದೇಶಗಳಿಂದ ಭಿನ್ನವೇನೂ ಅಲ್ಲ. ಕರ್ನಾಟಕದಲ್ಲಿ ಬೇರೊಬ್ಬರಿಗೆ ಅಥವಾ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಮನಸ್ಸುಗಳುಳ್ಳ ಜನರೇ ಕನ್ನಡಿಗರು ಕರ್ನಾಟಕ ಕಲಾವಿದರು, ಶಿಲ್ಪಿಗಳು ತಾವು ಬಂದ ಹಿನ್ನೆಲೆ, ಸ್ಥಳ, ಕಲಿತ ಶಾಲೆ ಹಾಗೂ ಕಲಿಸಿದ ಗುರುಗಳ ಮೇಲಿನ ಪ್ರೀತಿ ವಿಶ್ವಾಸವನ್ನು ಉಳಿಸಿಕೊಂಡು ಹೊಸ ಜೀವನ, ಹೊಸ ಕಾಲದ ಅನುಭವಗಳಿಗೆ ಸ್ಪಂದಿಸುತ್ತಾ ಸೃಜಶೀಲವಾಗಿ ಬೆಳೆಯಲು ಪ್ರಯತ್ನಪಟ್ಟಿದ್ದಾರೆ. ಕಲಿಯುವವರು ತಾವು ಜೀವನದಲ್ಲಿ ಕಲಿತಂತಹ ಹಾಗೂ ಪಡೆದಂತಹದ್ದನ್ನು ತಮ್ಮ ಹೊಟ್ಟೆ ಪಾಡಿಗಾಗಿ ವಂಶ ಪರಂಪರೆಯಿಂದ ಬಂದಂತಹ ಕರಕುಶಲ ಕಸುಬಾಗಿ, ಉಪಕಸುಬಾಗಿ ಬಳಸಿಕೊಂಡು ಜೀವನಕ್ಕೆ ಒಂದು ದಾರಿಯನ್ನು ಮಾಡಿಕೊಂಡಿದ್ದಾರೆ. ಇವರು ಕಲೆಯನ್ನು ಬಳಸಿಕೊಂಡರೇ ಹೊರತು ಬೆಳೆಸಲಿಲ್ಲ.

ಕರ್ನಾಟಕದ ಅನೇಕ ಹಿರಿಯ ಕಲಾವಿದರು ರಾಜ್ಯದ ಮತ್ತು ಹೊರರಾಜ್ಯಗಳಲ್ಲಿ ಪ್ರದರ್ಶನಗಳನ್ನು ಮಾಡಿ ಜನಸಾಮಾನ್ಯರು ಮತ್ತು ವಿದ್ಯಾರ್ಥಿಗಳಿಗೆ ಹೆಚ್ಚಿನ ಅರಿವನ್ನು, ಜಾಗೃತಿಯನ್ನು ಮೂಡಿಸುವುದರಲ್ಲಿ ಯಶಸ್ವಿಯಾದರು. ಈ ಹಿನ್ನೆಲೆಯಲ್ಲಿ ಕಲಾ ಸಂಘಟನೆಗಳು ಹುಟ್ಟಿಕೊಂಡವು. ಯುವಕರಿಗೆ ಕಲಾಶಿಕ್ಷಣದ ಮೇಲೆ ಗಾಢವಾದ ಪ್ರೀತಿ ಬೆಳೆದು ಅದನ್ನು ಕಲಿಯಲಿಕ್ಕೆ ಮುಂದಾದರು. ಹೊಸ ವಿದ್ಯಾರ್ಥಿಗಳನ್ನು ಬೆಳೆಸುವಲ್ಲಿ ಹುಬ್ಬಳ್ಳಿ, ಧಾರವಾಡ, ಬೆಂಗಳೂರು, ಕಲಬುರ್ಗಿ, ಗದಗ, ಮೈಸೂರು, ದಾವಣಗೆರೆ ಶಾಲೆಗಳ ಪಾತ್ರ ಪ್ರಮುಖ ವಾದುದ್ದಾಗಿದೆ.

"ಇದರಂತೆಯೇ ಸರ್ಕಾರ ಹಾಗೂ ಸಾರ್ವಜನಿಕ ನೆರವಿನೊಂದಿಗೆ ಆಯಾ ಭಾಗದ ಪ್ರಮುಖ ಕೇಂದ್ರಗಳಾದ ಚಿತ್ರಕಲಾ ಪರಿಷತ್ತು, ಕುವೆಂಪು ಕಲಾ ಸಂಸ್ಥೆ ಮತ್ತು ಗುಲಬರ್ಗಾದ ಐಡಿಯಲ್ ಫೈನ್ ಆರ್ಟ್ ಸಂಸ್ಥೆಗಳು ಮಾಡಿದ ಕಾರ್ಯ ರಾಷ್ಟ್ರಮಟ್ಟದಲ್ಲಿ ಗುರುತಿಸಿ ಕೊಂಡಂತಾಗಿದೆ."[೫] ಸ್ವಾತಂತ್ರ್ಯ ನಂತರದ ಕಾಲದಲ್ಲಿ ಹಲವಾರು ಚಟುವಟಿಕೆಗಳಿಂದ ಜನಪರವಾದ ಹಾಗೂ ಮುಕ್ತವಾದಂತಹ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿಷಯಗಳಿಗೆ ಪತ್ರಿಕೆಗಳು ಹೆಚ್ಚಾಗಿ ಪ್ರೋತ್ಸಾಹ ನೀಡುತ್ತಿದ್ದವು. ಕಾಲ ಕಳೆದಂತೆಲ್ಲಾ ದೃಶ್ಯ ಮಾಧ್ಯಮಕ್ಕೂ ಅವಕಾಶವನ್ನು ನೀಡಿದವು. "ಸಾಹಿತ್ಯ ಪ್ರಕಟಣೆ ಮುಖಪುಟ ವಿನ್ಯಾಸದಲ್ಲಿ ಜನರಿಗೆ ಕೇವಲ ಖುಷಿ ಕೊಡುವ ಬಣ್ಣ, ರೂಪಗಳ ಬದಲಾಗಿ ಉತ್ತಮ ಕಲಾ ಮೌಲ್ಯದ ಚಿತ್ರಗಳನ್ನು ಮುದ್ರಿಸುವ ಆಸಕ್ತಿ, ಅಭಿರುಚಿಗಳು ಬೆಳೆದವು. ಇದಕ್ಕೆ ಕಾರಣ ನಮ್ಮ ಕಲಾವಿದರಾದ ಚಂದ್ರನಾಥ ಆಚಾರ್ಯ, ಸಿ. ಚಂದ್ರಶೇಖರ್, ಶ್ಯಾಮ್‌ಸುಂದರ್ ವಿಜಯ ಬಾಗೋಡಿ, ಬಸವರಾಜ ಮುಸವಳಗಿ, ಕಾಳಿದಾಸ ಪತ್ತಾರ್, ಜಯಕುಮಾರ್, ಮುದ್ರಣ ಕಲೆಯಲ್ಲಿ ಬರೋಡದ - ಶಾಂತಿನಿಕೇತನದ ಗರಡಿಯಲ್ಲಿ ತರಬೇತಿ ಪಡೆದು ಬಂದು ಹೊಸ ಆವಿಷ್ಕಾರಗಳನ್ನು ಕನ್ನಡದ ಕಲಾವಿದರು ಕಲೆಗೆ ನೀಡಿದ್ದಾರೆ."[೬]

೩.೧. ಕರ್ನಾಟಕದಲ್ಲಿ ಕಲಾಶಿಕ್ಷಣದ ಸೌಲಭ್ಯಗಳು

"ರಾಜ್ಯದಲ್ಲಿ ಕಲಾ ಶಿಕ್ಷಣ ನೀಡುತ್ತಿದ್ದ ಸ್ವಾತಂತ್ರ್ಯಪೂರ್ವ ಕಾಲದಲ್ಲಿನ ಸಂಸ್ಥೆಗಳೆಂದರೆ ಅವು ಎರಡೇ ಎರಡು. ಒಂದು ಮೈಸೂರು ನಗರದಲ್ಲಿ ೧೯೧೩ರಲ್ಲಿ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್‌ಟಿಟ್ಯೂಟ್ ಪ್ರಾರಂಭವಾಯಿತು. ಈ ಸಂಸ್ಥೆಯಲ್ಲಿ ಇತರ ಕಲೆಗಳಿಗೆ ಸಂಬಂಧಿಸಿದಂತೆ ಕಲಾ ಕಸಬುಗಳ ಜೊತೆಗೆ ಚಿತ್ರಕಲೆಯನ್ನು ಕಲಿಸಲಾಗುತ್ತಿತ್ತು".[೭] ಈ ಸಂಸ್ಥೆಯ ಇತರ ತಾಂತ್ರಿಕ ವಿದ್ಯೆಗಳ ಜೊತೆಗೆ ಚಿತ್ರಕಲೆ, ಶಿಲ್ಪ ಹೀಗೆ ಹಲವಾರು ರೀತಿಯಲ್ಲಿ ಕಲಾ ಶಿಕ್ಷಣವನ್ನು ನೀಡುತ್ತಿದ್ದರು. ಹೀಗೆಯೇ ಕಲಾ ಶಿಕ್ಷಣವನ್ನು ನೀಡುತ್ತಿರುವ ಇನ್ನೊಂದು ಸಂಸ್ಥೆಯೆಂದರೆ "ದಾವಣಗೆರೆ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಕಲಾಶಾಲೆ. ೧೯೬೪ರಲ್ಲಿ ಸ್ಥಾಪಿತವಾಯಿತು."[೮] ಈ ಕಲಾ ಶಾಲೆಯಲ್ಲಿ ಚಿತ್ರಕಲೆ, ಅನ್ವಯಕ ಕಲೆ ಹೀಗೆ ಎರಡರಲ್ಲೂ ಶಿಕ್ಷಣವನ್ನು ನೀಡಲಾಗುತ್ತಿತ್ತು. ಸದ್ಯ ದಾವಣಗೆರೆ ವಿಶ್ವವಿದ್ಯಾಲಯದ ಆಡಳಿತಕ್ಕೊಳಪಟ್ಟು ಕೆಲಸ ಮಾಡುತ್ತಿದೆ.

ಮೇಲಿನ ಎರಡೂ ಶಿಕ್ಷಣ ಸಂಸ್ಥೆಗಳಲ್ಲದೆ ಲಲಿತಕಲೆ ಮತ್ತು ಕರಕುಶಲ ಕಲೆಯನ್ನು ಹಲವು ಖಾಸಗಿ ಶಿಕ್ಷಣ ಸಂಸ್ಥೆಗಳು ನೀಡುತ್ತಿದ್ದವು. ಅವುಗಳಲ್ಲಿ "೧೯೧೯ರಲ್ಲಿ ನೃತ್ಯ, ಸಂಗೀತ, ಚಿತ್ರಕಲೆಗಳಿಗೆ ಸಂಬಂಧಿಸಿದಂತಹವುಗಳಿಗೆ ಲಲಿತಕಲಾ ಶಿಕ್ಷಣ ಎನ್ನುತ್ತೇವೆ. ಹತ್ತೊಂಬತ್ತನೇ ಶತಮಾನದ ಕೊನೆಯ ಅವಧಿಯಲ್ಲಿ ಔಪಚಾರಿಕ ಶಿಕ್ಷಣದ ಸಲುವಾಗಿ ಇಂತಹ ಗುಣಗ್ರಹಿಗೆ ಲಲಿತಕಲಾ ಶಿಕ್ಷಣದ ಬೋಧನೆಗೆ ವಿಶೇಷತೆಯನ್ನು ನೀಡಲಾಗಿದೆ. ಕರ್ನಾಟಕ ರಾಜ್ಯದ ಶಿಕ್ಷಣದ ಒಂದು ಭಾಗವಾಗಿ ಪ್ರಾಥಮಿಕ ಹಂತದಲ್ಲೇ ಚಿತ್ರಕಲೆಯನ್ನು ಕಲಿಸುವಂತಹ ವ್ಯವಸ್ಥೆ ಈ ರಾಜ್ಯದಲ್ಲಿ ಬೆಳೆದು ಬಂದಿತು."[೯] "೧೮೯೦ರಲ್ಲಿ ಮಾಧ್ಯಮಿಕ ಶಾಲೆಗಳಲ್ಲಿ ಚಿತ್ರಕಲೆಯನ್ನು ವಿಶೇಷವಾಗಿ ಬೆಳಗಾವಿ ಭಾಗದಲ್ಲಿ ಬೋಧನೆ ಮಾಡುತ್ತಿದ್ದರು. ೧೯೧೯-೨೦ರಿಂದ ಸಂಗೀತ ಮತ್ತು ಚಿತ್ರಕಲೆಯು ಶಿಕ್ಷಕರ ತರಬೇತಿ ವಿಷಯಗಳಾಗಿವೆ. ೧೯೧೪-೧೫ರಂದು ಕಡ್ಡಾಯ ವಿಷಯಗಳಾಗಿ ಚಿತ್ರಕಲೆ ಮತ್ತು ಕುಶಲ ಕೆಲಸಕ್ಕೆಂದೇ ಒಬ್ಬ ಪ್ರತ್ಯೇಕ ಅಧಿಕಾರಿಯನ್ನು ನೇಮಿಸಲಾಯಿತು. ಕಾರವಾರ, ಧಾರವಾಡ, ಬೆಳಗಾವಿ, ವಿಜಯಪುರಗಳಲ್ಲಿ ಪ್ರೌಢಶಾಲೆಗಳಿಂದ ಪ್ರತಿ ವರ್ಷ ಫಸ್ಟ್ ಮತ್ತು ಸೆಕೆಂಡ್ ಗ್ರೇಡ್ ಡ್ರಾಯಿಂಗ್ ಪರೀಕ್ಷೆಗಳನ್ನು ಬರೆಯಲು ಮುಂಬೈನ ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಕಲಾ ಶಾಲೆಗೆ ಕಳುಹಿಸುತ್ತಿದ್ದರು(ಇಂಟರ್ ಮಿಡಿಯೇಟ್ ಮತ್ತು ಎಲಿಮೆಟರಿ). ೧೯೩೦-೩೯ರ ನಂತರ ಪ್ರಾಥಮಿಕ ಶಾಲೆಗಳಲ್ಲಿಯೂ ಚಿತ್ರಕಲೆಯ ವಿಷಯವನ್ನು ಅಭ್ಯಾಸ ವಿಷಯವನ್ನಾಗಿ ನಡೆಸುತ್ತಿದ್ದರು. ೧೯೫೦-೫೧ರಲ್ಲಿ ಧಾರವಾಡದಲ್ಲಿ ಖಾಸಗಿ ಆಡಳಿತದ ಒಂದು ಚಿತ್ರಕಲಾ ಶಾಲೆಯನ್ನು ಸ್ಥಾಪನೆ ಮಾಡಿದರು. ಈ ಶಾಲೆಯಲ್ಲಿ ಡ್ರಾಯಿಂಗ್ ಮತ್ತು ಪೇಂಟಿಂಗ್‌ನ ಕೋರ್ಸ್‌ಗಳನ್ನು ನಡೆಸುತ್ತಿದ್ದರು. ಅಭ್ಯರ್ಥಿಗಳನ್ನು ತರಬೇತಿಗೊಳಿಸಲು ಪ್ರಾಥಮಿಕ ಶಿಕ್ಷಣ ಇಲಾಖೆಯವರು ಪರೀಕ್ಷೆಗಳನ್ನು ನಡೆಸುತ್ತಿದ್ದರು. ೧೯೫೬ರ ವೇಳೆಗೆ ಇತರೆಲ್ಲ ವಿಷಯಗಳಷ್ಟೇ ಚಿತ್ರಕಲೆಯೂ ಶಾಲಾ ಬೋಧನೆ ಕಾರ್ಯಕ್ರಮದ ಪ್ರಮುಖ ಅಂಗವಾಯಿತು. ೧೮೭೯ರ ಮುಂಚೆ ಮದ್ರಾಸ್-ಕರ್ನಾಟಕ ಭಾಗದಲ್ಲಿ ಚಿತ್ರಕಲೆ ಅಥವಾ ಪ್ರತಿ

ಕೃತಿ ನಿರ್ಮಾಣ ಕಲೆ(ಮಾಡಲಿಂಗ್) ಮಾಧ್ಯಮಿಕ ಶಾಲಾ ಪರೀಕ್ಷಾ ಪದ್ಧತಿಯಲ್ಲಿ ಗಣಿತ ಮತ್ತು ಚಿತ್ರಕಲೆ ಎರಡೂ ಐಚ್ಛಿಕ ವಿಷಯಗಳಾಗಿದ್ದವು. ಪ್ರಾಥಮಿಕ(ಲೋವರ್ ಸೆಕೆಂಡರಿ) ಶಾಲೆಗಳಲ್ಲಿ ಫ್ರೀ ಹ್ಯಾಂಡ್ ಚಿತ್ರಕಲೆ ಐಚ್ಛಿಕ ವಿಷಯಗಳಲ್ಲೊಂದಾಗಿತ್ತು.[೧೦]

೧೯೦೮-೦೯ರಲ್ಲಿ ಎಸ್.ಎಸ್.ಎಲ್.ಸಿ. ಯೋಜನೆ ಬಂದ ಮೇಲೆ ಹೈಯರ್ ಸೆಕೆಂಡರಿ ತರಗತಿಗಳಲ್ಲಿ ಅದೇ ವಿಷಯವನ್ನು ಬೋಧನೆ ಮಾಡಬೇಕೆಂದು ನಿರ್ಧಾರವಾಯಿತು. ಸರ್ಕಾರಿ ಮಾಧ್ಯಮಿಕ ಮತ್ತು ತರಬೇತಿ ಶಾಲೆಯಲ್ಲಿ (ದಕ್ಷಿಣ ಕನ್ನಡ) ಚಿತ್ರಕಲೆಯನ್ನು ಕಲಿಸಲಾಗುತ್ತಿತ್ತು. ಲಲಿತಕಲೆಗಳ ಶಾಲೆಯನ್ನು ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಎಂಬ ಸಂಸ್ಥೆಯಿಂದ ನಡೆಸುತ್ತಿದ್ದರು. ೧೯೪೮-೪೯ರಿಂದ ಚಿತ್ರಕಲೆಯನ್ನು ಸೇರಿಸಲಾಯಿತು. ೧೯೫೩-೫೪ರಲ್ಲಿ ರಾಜಾಜಿ ಯೋಜನೆಯನ್ನು ಜಾರಿಗೆ ತರಲಾಯಿತು. ಇದರಲ್ಲಿ ಚಿತ್ರಕಲೆ, ಸಂಗೀತ ಮತ್ತು ನೃತ್ಯವನ್ನು ಸೇರಿಸಲಾಯಿತು. ಉಚ್ಚಮಟ್ಟದ ಚಿತ್ರಕಲೆಯನ್ನು ಮಡಿಕೇರಿಯ ಕೆಳಮಾಧ್ಯಮಿಕ ಶಾಲೆಗಳಲ್ಲಿ ಕಲಿಸುತ್ತಿದ್ದರು.''[೧೧]

"ಚಿತ್ರಕಲೆ ಮತ್ತು ವರ್ಣಕಲೆಯನ್ನು ಒಂದು ಐಚ್ಛಿಕ ವಿಷಯವಾಗಿ ೧೯೫೬ರಲ್ಲಿ ಪೊನ್ನಂಪೇಟೆಯಲ್ಲಿ ಕಲಿಸುತ್ತಿದ್ದರು. ಹೈದರಾಬಾದ್-ಕರ್ನಾಟಕ ಪ್ರದೇಶಗಳಲ್ಲಿ ಮೊದಲಿನಿಂದಲೂ ವರ್ಣಕಲೆಗೆ ವಿಶೇಷವಾದ ಪ್ರೋತ್ಸಾಹ ಸಿಕ್ಕಿತ್ತು. ೧೯೩೭ರಲ್ಲಿ ಪ್ರಾಥಮಿಕ ಶಾಲೆಗಳ ಪುನರ್‌ರಚನೆಯಾದಾಗ ಐದನೆಯ ತರಗತಿಗೆ ಚಿತ್ರಕಲೆಯನ್ನು ಸೇರಿಸಲಾಯಿತು. ೧೮೯೫-೧೯೦೧ರ ಮಧ್ಯದಲ್ಲಿ ಮೈಸೂರಿನ ಮಾಧ್ಯಮಿಕ ಶಾಲೆಗಳಲ್ಲಿ ಡ್ರಾಯಿಂಗ್ ಮತ್ತು ಪ್ರತಿಕೃತಿ ಕಲೆಗಳನ್ನು ಕಲಿಸಲಾಗುತ್ತಿತ್ತು. ೧೯೧೫ರಲ್ಲಿ ಪ್ರಾಯೋಗಿಕ ಪಾಠ ಕ್ರಮವನ್ನು ಅಳವಡಿಸಲಾಯಿತು. ವರ್ಣಕಲೆ ಮತ್ತು ಚಿತ್ರಕಲೆಗಳನ್ನು ಒಂದು ಐಚ್ಛಿಕ ವಿಷಯಗಳನ್ನಾಗಿ ಸೇರಿಸುವುದಕ್ಕೆ ೧೯೩೭ರ ಯೋಜನೆ ಜಾರಿಗೆ ತಂದರು. ಮುಂದೆ ಚಿತ್ರಕಲೆಯಲ್ಲಿ ತರಬೇತಿ ಹೊಂದಿರುವವರು ಮಾಧ್ಯಮಿಕ ಶಾಲೆ ಹಾಗೂ ಪ್ರೌಢಶಾಲೆಗಳಲ್ಲಿ ನೇಮಕವಾಗಿರುವುದನ್ನು ಕಾಣಬಹುದು''[೧೨]

"ಮೈಸೂರಿನಲ್ಲಿ ಶ್ರೀ ಚಾಮರಾಜ ಟೆಕ್ನಿಕಲ್ ಇನ್ಸ್‌ಟಿಟ್ಯೂಟ್‌ನಲ್ಲಿ ಚಿತ್ರಕಲೆ, ವರ್ಣಚಿತ್ರ ಮತ್ತು ಪ್ರತಿಕೃತಿ ಚಿತ್ರಕಲೆ ಕಲಿಸಲು ಲಲಿತಕಲಾ ವಿಭಾಗವೊಂದು ಪ್ರಾರಂಭವಾಯಿತು. ೧೯೬೧-೬೭ರಲ್ಲಿ ಚಿತ್ರಕಲಾ ಶಿಕ್ಷಕರಿಗೆ ತರಬೇತಿ ನೀಡುವ ಸಂಸ್ಥೆಯೊಂದು ಕಾರ್ಯಾರಂಭ ಮಾಡಿತು. ಪ್ರಾಥಮಿಕ ಶಿಕ್ಷಕರನ್ನು ಚಿತ್ರಕಲಾ ತರಬೇತಿಗೆಂದು ಕಳುಹಿಸಿ ಅವರೆಲ್ಲರನ್ನು ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಪಾಠ ಹೇಳಲು ಅರ್ಹರಾಗುವಂತೆ ಮಾಡುವುದಕ್ಕಾಗಿ ಬೆಂಗಳೂರಿನಲ್ಲಿ ಚಿತ್ರಕಲಾ ಶಿಕ್ಷಕರಿಗೆ ತರಬೇತಿ ನೀಡುವ ಸಂಸ್ಥೆಯು ಕಾರ್ಯಾರಂಭ ಮಾಡಿತು''[೧೩]

"ಅ.ನ. ಸುಬ್ಬರಾಯರು ಸ್ಥಾಪಿಸಿದ ಕಲಾ ಮಂದಿರ, ಧಾರವಾಡದಲ್ಲಿ ೧೯೩೫ರಲ್ಲಿ ಡಿ.ವಿ. ಹಾಲಭಾವಿಯವರು ಸ್ಥಾಪಿಸಿದ ಕಲಾಶಾಲೆ, ೧೯೪೧ರಲ್ಲಿ ಗದುಗಿನಲ್ಲಿ ಸ್ಥಾಪಿತವಾದ ಶ್ರೀ ವಿಜಯಮಹಾಂತೇಶ ಲಲಿತಕಲಾ ಶಾಲೆ, ಮೈಸೂರಿನಲ್ಲಿ ಸ್ಥಾಪಿತವಾದ ಕಲಾನಿಕೇತನ, ಬೆಂಗಳೂರಿನಲ್ಲಿ ಸ್ಥಾಪಿತವಾದ ಚಿತ್ರಕಲಾ ಮಹಾವಿದ್ಯಾಲಯ, ಚಿತ್ರಕಲಾ ಪರಿಷತ್ತು ಹಾಗೂ

ಕೆನ್ ಸ್ಕೂಲ್ ಆಫ್ ಆರ್ಟ್, ಕಲ್ಬುರ್ಗಿಯ ಐಡಿಯಲ್ ಫೈನ್ ಆರ್ಟ್ಸ್ ಇನ್ಸ್‌ಟಿಟ್ಯೂಟ್. ಬೆಳಗಾವಿಯ ಬೆನಾಸ್ಮಿತ್ ಡಿ.ಟಿ.ಸಿ. ಕಲಾ ಪ್ರಾಧ್ಯಾಪಕರ ಶಾಲೆ. ದಕ್ಷಿಣ ಕನ್ನಡದ ಕಟಪಾಡಿಯಲ್ಲಿರುವ ಚಿತ್ರಕಲಾ ಮಂದಿರ ರೇಖಾಚಿತ್ರ ಹಾಗೂ ಚಿತ್ರಕಲೆ ಶಿಕ್ಷಣದಲ್ಲಿ ನೀಡುತ್ತಿರುವ ಪ್ರಮುಖ ಕಲಾ ಶಿಕ್ಷಣ ಸಂಸ್ಥೆಗಳು. ಕರ್ನಾಟಕ ಸರಕಾರದ ಸೆಕೆಂಡರಿ ಎಜ್ಯುಕೇಶನ್ ಬೋರ್ಡ್ ಮುಖಾಂತರ ಲಲಿತಕಲೆಯ ವಿವಿಧ ಹಂತದ ಪರೀಕ್ಷೆಗಳನ್ನು ೧೯೬೦ನೇ ಇಸವಿಯಲ್ಲಿ ನಡೆಸುತ್ತಿದ್ದರು”[೧೪]

ಇವುಗಳಲ್ಲದೆ ಡಿ.ಎಂ.ಸಿ. ಮತ್ತು ಶಿಲ್ಪಕಲೆಯ ಬಗೆಗೆ ನಾನಾ ದರ್ಜೆಯ ಪರೀಕ್ಷೆಗಳನ್ನು ನಡೆಸುತ್ತಿದ್ದರು. ಇದರಿಂದಾಗಿ ಕಲಾ ಪರೀಕ್ಷೆಗಳಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಕ್ರಮೇಣ ಹೆಚ್ಚಾಗತೊಡಗಿತು. ಪ್ರಾರಂಭದಿಂದಲೇ ಶಿಕ್ಷಣದಲ್ಲಿ ಚಿತ್ರಕಲೆಯ ಬಗ್ಗೆ ಹೆಚ್ಚು ಆಸಕ್ತಿ ಮೂಡಿಸುವ ರೀತಿಯಲ್ಲಿ ಪ್ರಾಥಮಿಕ ಹಾಗೂ ಸೆಕೆಂಡರಿ ಶಾಲೆಗಳಲ್ಲಿ ಚಿತ್ರಕಲೆಯನ್ನು ಅಗತ್ಯ ಪಠ್ಯ ವಿಷಯವಾಗಿ ಸೇರಿಸಲಾಗಿದೆ. ಕರ್ನಾಟಕದ ಹಲವು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಣ ಪಡೆದಂತಹ ಶಿಕ್ಷಕರಿರುವುದನ್ನು ಕಾಣಬಹುದು. ಇವುಗಳೆಲ್ಲ ಮಕ್ಕಳ ಚಿತ್ರಕಲಾ ಸ್ಪರ್ಧೆಗೆ ಸಂಬಂಧಿಸಿದಂತೆ ಅನೇಕ ರೋಟರಿ ಕ್ಲಬ್ ಮತ್ತು ಖಾಸಗಿ ಸಂಸ್ಥೆಗಳು ಅವರ ವತಿಯಿಂದ ಸ್ಪರ್ಧೆಗಳನ್ನು ನಡೆಸಿಕೊಂಡು ಹೋಗುತ್ತಿರುವುದನ್ನು ಕಾಣುತ್ತೇವೆ.

ಕರ್ನಾಟಕ ರಾಜ್ಯದಲ್ಲಿ ಚಿತ್ರಕಲೆಗೆ ಸಂಬಂಧಿಸಿದಂತೆ “೧೯೬೨ರಲ್ಲಿ ಲಲಿತಕಲಾ ಅಕಾಡೆಮಿಯನ್ನು ಸ್ಥಾಪಿಸಿದರು.”[೧೫] ಇದರಿಂದಾಗಿ ಚಿತ್ರಕಲೆಗೆ ಸಂಬಂಧಿಸಿದಂತೆ ಕಲಾವಿದರಿಗೆ, ಪ್ರೋತ್ಸಾಹ, ಸಹಾಯ ನೀಡುವ ಹಾಗೂ ರಾಜ್ಯದ, ಹೊರರಾಜ್ಯಗಳಲ್ಲಿ ಚಿತ್ರಕಲಾ ಪ್ರದರ್ಶನ ಮಾಡಲು ಅಕಾಡೆಮಿಯಿಂದ ಆರ್ಥಿಕ ನೆರವನ್ನು ನೀಡುತ್ತಾ ಬರಲಾಗಿದೆ. ಇದರ ಜೊತೆಗೆ ಕಲಾ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿ, ಕಲಾ ಸಾಧನೆ ಮಾಡಿದಂತಹ ಕಲಾವಿದರಿಗೆ ಗೌರವ ಪ್ರಶಸ್ತಿಯನ್ನು ಮತ್ತು ಹಿರಿಯ ಕಲಾವಿದರಿಗೆ ಮಸಾಶನ ಆಸಕ್ತ ಕಲಾವಿದರಿಗೆ ಆರ್ಥಿಕ ಸಹಾಯ ಹೀಗೆ ಹಲವಾರು ರೀತಿಯ ಆರ್ಥಿಕವಾಗಿ ಸಹಾಯ ಮಾಡುತ್ತಿರುವುದು ಕಲಾವಿದರಿಗೆ ಸಂತಸವೆನಿಸಿದೆ.

ಕಲೆ ಮತ್ತು ಕಲಾಶಿಕ್ಷಣಕ್ಕೆ ಸಂಬಂಧಿಸಿದಂತಹ ಪತ್ರಿಕೆಗಳು

ಮೊದಲು ಕೆಲವು ಪತ್ರಿಕೆ, ನಿಯತಕಾಲಿಕೆಗಳಲ್ಲಿ ಅಪರೂಪಕ್ಕೆ ಕಲಾಶಿಕ್ಷಣದ ಬಗ್ಗೆ ಲೇಖನಗಳು ಬರುತ್ತಿದ್ದವು. ನಂತರದಲ್ಲಿ ಕಲಾಶಿಕ್ಷಣಕ್ಕೆ ಪ್ರತ್ಯೇಕವಾದಂತಹ ಪತ್ರಿಕೆಗಳನ್ನು ಪ್ರಕಟಮಾಡುವ ಆಲೋಚನೆಗಳು ಆಗಿನ ಕಲಾವಿದರಲ್ಲಿ ಮೂಡಿತು. ಮೂವತ್ತರ ದಶಕದಲ್ಲಿ “ಅ.ನ. ಸುಬ್ಬರಾಯ ಅವರ ಸಂಪಾದಕತ್ವದಲ್ಲಿ ಪ್ರಥಮವಾಗಿ ಕಲೆಗಳನ್ನು ಕುರಿತು ‘ಕನ್ನಡ ಮಾಸಪತ್ರಿಕೆ’ಯು ಪ್ರಕಟವಾಯಿತು. ನಾಲ್ಕಾರು ವರ್ಷಗಳು ನಡೆದು ಆ ಪತ್ರಿಕೆ ನಿಂತುಹೋಯಿತು. ಅ.ಲ. ನರಸಿಂಹನ್ ‘ಕಲಾವಿಕಾಸ’ ಎಂಬ ಮಾಸಪತ್ರಿಕೆಯನ್ನು ಹೊರತಂದರು. ಇದು ಸಮಕಾಲೀನ ವಿಚಾರಗಳಿಗೆ ಹೆಚ್ಚಿನ ಮಹತ್ವ ನೀಡಿ ಅನೇಕ ವೈಚಾರಿಕ ಚರ್ಚೆಗಳನ್ನು ಹಾಗೂ ಅಗತ್ಯ ಮಾಹಿತಿ ಮತ್ತು ಲೇಖನಗಳನ್ನು ನೀಡುತ್ತಿದ್ದ ಪತ್ರಿಕೆಯಾಗಿತ್ತು. ಆ ಪತ್ರಿಕೆಯು ಕೂಡ ಕೆಲವೇ

ಕೆಲವು ವರ್ಷಗಳು ನಡೆದು ನಿಂತು ಹೋಯಿತು. ಹತ್ತೊಂಬತ್ತು ನೂರಾ ಎಂಭತ್ತೆಂಟರಲ್ಲಿ 'ಕ್ಯಾನ್ವಾಸ್' ಮಾಸಪತ್ರಿಕೆಯು ಡಾ. ವಿಜಯಾ ಸಂಪಾದಕತ್ವದಲ್ಲಿ ಹೊರಬಂತು. ಈ ಪತ್ರಿಕೆಯಲ್ಲಿ ಸಿನಿಮಾ, ಸಾಹಿತ್ಯ, ಸಂಗೀತ, ಕಲೆಯ ವಿಷಯಗಳನ್ನು ಕುರಿತಾಗಿ ಚರ್ಚಿಸಿದ ಲೇಖನಗಳಿದ್ದವು. ಈ ಪತ್ರಿಕೆಯು ಗಂಭೀರವಾದ ಚರ್ಚೆಗಳಿಗೆ ಅನುವು ಮಾಡಿಕೊಟ್ಟಿತು."[೯೬] ಕಲೆಯ ಕುರಿತು ಅನೇಕ ಬರಹಗಳಿಗೆ, ವಿಶಿಷ್ಟವಾದಂತಹ ಆಲೋಚನೆಗೆ ಅನುವು ಮಾಡಿಕೊಟ್ಟಿತು. ಚಿ.ಸು.ಕೃಷ್ಣಶೆಟ್ಟಿ ಅವರು 'ದೃಶ್ಯಾಕ್ಷರ'ವೆಂಬ ಪತ್ರಿಕೆಯ ಕೆಲವು ಸಂಚಿಕೆಗಳನ್ನು ತಂದು ನಿಲ್ಲಿಸಿದರು. ನಂತರ ಕಲಬುರ್ಗಿಯ ವ್ಹಿ.ಜಿ. ಅಂದಾನಿಯವರು 'ಆರ್ಟ್‌ಗುಲ್' ಎಂಬ ಕಲಾ ಪತ್ರಿಕೆಯನ್ನು ತಂದರು. ಅದು ಮೂರು ಸಂಚಿಕೆಗಳಿಗೆ ನಿಂತುಹೋಯಿತು. ಮಾದ್ವೇಶ್ ಪಾಂಡುರಂಗಿ ಅವರು ಕೊಷನ್ ಅ್ಯಂಡ್ ಡೈಲಾಗ್' ಪತ್ರಿಕೆಯ ಕೆಲವು ಸಂಚಿಕೆಗಳನ್ನು ತಂದು ನಿಲ್ಲಿಸಿದರು. ಡಾ. ಪರಶುರಾಮ ಪಿ., 'ದೃಶ್ಯ ಬೆಳಕು' ಪತ್ರಿಕೆಯನ್ನು ಕಲಬುರ್ಗಿಯಿಂದ ತರುತ್ತಿದ್ದಾರೆ. ಕಲಾವಿದರಿಂದ, ಕಲಾರಸಿಕರಿಂದ, ಕಲಾಪ್ರಿಯರಿಂದ ಉತ್ತಮವಾದಂತಹ ಪ್ರೋತ್ಸಾಹ ಹಾಗೂ ಅದಕ್ಕೆ ತಕ್ಕಂತಹ ಸಹಕಾರ ಸಿಗದ ಕಾರಣದಿಂದಾಗಿ ಕಲೆಗೆ ಸಂಬಂಧಿಸಿದ ಪತ್ರಿಕೆಗಳು ನಿಲ್ಲಲು ಕಾರಣವಾಯಿತು. ಈ ಮೇಲಿನ ಅಂಶಗಳನ್ನು ಗಮನಿಸಿದರೆ ನಮ್ಮ ಕಲಾ ಸಮುದಾಯ, ಮಾಧ್ಯಮದ ಬಗ್ಗೆ ಹಾಗೂ ಅವುಗಳನ್ನು ಸಮಗ್ರವಾಗಿ ಬೆಳೆಸಬೇಕೆಂಬ ನಿಟ್ಟಿನಲ್ಲಿ ಪ್ರೀತಿ, ಕಾಳಜಿ ಕಲೆಗೆ ನೀಡಿಲ್ಲವೆಂಬುದು ಗೊತ್ತಾಗುತ್ತದೆ.

ಚಿತ್ರಶಾಲೆಗಳು

ಮನುಷ್ಯನು ತನ್ನ ಬದುಕಿನಲ್ಲಿ ವಿಶಿಷ್ಟವಾದ ಸ್ಥಾನವನ್ನು ಕಲೆಗಳಿಗೆ ನೀಡಿದ್ದಾನೆ. ಕಲೆಗಳು ಬರಡಾದ ಬಾಳಿಗೆ ಆನಂದವನ್ನು ನೀಡುತ್ತವೆ. ನಮ್ಮ ಕಲಿಕೆಗೆ ಮೂಲ ಬದುಕನ್ನು ಕಲ್ಪನೆಯ ಹೊಸ ನೋಟದಲ್ಲಿ ನೋಡಲು ನಮಗೆ ಕಲಿಸುತ್ತದೆ. ವರ್ತಮಾನದ ಸವಾಲುಗಳನ್ನು ಎದುರಿಸುತ್ತ "ಕಲ್ಪನೆಯ ಹಾರ ಗುದರಿ ಏರಿ" ಭವಿಷ್ಯಕ್ಕೆ ನೆಗೆಯಲು ಉತ್ಪಾದಕ ಕಲೆ ನಮಗೆ ಇಂಬು ನೀಡುತ್ತದೆ".[೯೭]

ಆಧುನಿಕ ಸಂದರ್ಭದ ಶಿಕ್ಷಣ ಬಾಯಿಪಾಠ, ಪುಸ್ತಕ ಮತ್ತು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವುದಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಮಕ್ಕಳಿಗೆ ಕಲಿಕೆಯಲ್ಲಿ ಸಂತಸ ದೊರಕುವುದಿಲ್ಲ. ಜೀವನದ ವೈವಿಧ್ಯಮಯ ನೋಟಗಳು ಸಿಗುವುದಿಲ್ಲ ಹಾಗೂ ಅನುಭವ ಸಮೃದ್ಧಿಯಾಗುವುದಿಲ್ಲ. ಪುಸ್ತಕದಲ್ಲಿರುವ ವಿಷಯಗಳಿಗಿಂತಲೂ ಭಿನ್ನವಾದ ಕಲಾ ಶಿಕ್ಷಣವು ಮಕ್ಕಳ ಪಂಚೇಂದ್ರಿಯಗಳಿಗೆ ಅನುಭವ ನೀಡುತ್ತದೆ. ಮಕ್ಕಳಿಗೆ ಈ ಅನುಭವಗಳು ಪ್ರತ್ಯಕ್ಷವಾದವುಗಳಾಗಿರುತ್ತವೆ ಮತ್ತು ಸ್ವಂತ ಅನುಭವಗಳಾಗಿ ನಮ್ಮ ಕಲೆಗಳು ಯಾಂತ್ರಿಕ ವಿದ್ಯೆಯಿಂದ ಮಕ್ಕಳಿಗೆ ಬಿಡುಗಡೆ ಒದಗಿಸುತ್ತವಲ್ಲದೆ ಅದರೊಳಗಿನ ಪ್ರವೃತ್ತಿ ಹಾಗೂ ಒತ್ತಡಗಳಿಂದಲೂ ಬಿಡುಗಡೆ ಒದಗಿಸುತ್ತವೆ.

ಆಧುನಿಕ ಶಿಕ್ಷಣ ಪದ್ಧತಿಯನ್ನು ಪುನರ್‌ರಚಿಸಬೇಕು. ಮಕ್ಕಳಿಗೆ ಪಾಠದ ಜೊತೆಗೆ ಕಲಾಶಿಕ್ಷಣವನ್ನು ನೀಡಿ ಸಂತೋಷದಿಂದ ಕಲಿಯುವಂತೆ ಮಾಡಬೇಕು. ಅದರ ಜೊತೆಗೆ ವೈವಿಧ್ಯಮಯ ಕಲಾ ಪ್ರಕಾರಗಳನ್ನು ಪರಿಚಯಿಸುವುದರಿಂದ ವಿದ್ಯಾರ್ಥಿಗಳ ಆಸಕ್ತಿ ಕುತೂಹಲ ರಸಪ್ರಜ್ಞೆ ಹಾಗೂ ಕರಕೌಶಲವನ್ನು ಹೆಚ್ಚಿಸಬೇಕು.

ಒಂದು ಶಿಕ್ಷಣ ಸಂಸ್ಥೆಯು ಬೆಳೆಯಬೇಕಾದರೆ ಆ ಸಂಸ್ಥೆಯ ಶಿಕ್ಷಕರ ಪಾತ್ರ ಮಹತ್ವದ್ದಾಗಿರುತ್ತದೆ. ನಾಡಿನ ಪ್ರತಿಯೊಬ್ಬ ಪ್ರಜೆಯನ್ನು ರೂಪಿಸುವ ಶಿಕ್ಷಕ ಆಯಾ ದೇಶದ ಸಂಸ್ಕೃತಿಯ ನಿರ್ಮಾಣದಲ್ಲಿಯೂ ಪ್ರಮುಖ ಪಾತ್ರವಹಿಸುತ್ತಾನೆ. ಅಂತಹ ಮಹತ್ವದ ಸ್ಥಾನವು ಶಿಕ್ಷಕ ಅಥವಾ ಗುರುವಾದವನಿಗೆ ದೈವದತ್ತವಾಗಿ ಬಂದಿರುವ ಕೊಡುಗೆಯಾಗಿದೆ. "ವೇದೋಕ್ತವಾಗಿ 'ಗುರು' ಶಬ್ದ ಅರ್ಥ ತುಂಬಾ ವ್ಯಾಪಕವಾದದ್ದು. "ಗುರು ಬ್ರಹ್ಮ ಗುರು ವಿಷ್ಣು ಗುರುದೇವೋ ಮಹೇಶ್ವರ ಅಜ್ಞಾನವನ್ನು ನಾಶ ಮಾಡುವವನೇ ಗುರು; ಮಕ್ಕಳ ಅಭ್ಯುದಯವೇ ಅವನ ಪೂಜೆ ಎಂಬ ಮಾತು ಉಪನಿಷತ್ತುಗಳಲ್ಲಿ ಕಾಣಬಹುದು. ಗುರುವಾದವನು ಶಿಕ್ಷಕನಾಗಬೇಕೇ ಹೊರತು ಸಂಬಳದ ಉಪಾಧ್ಯಾಯನಾಗಬಾರದು; ವಿಶಿಷ್ಟವಾದ ವ್ಯಕ್ತಿತ್ವವುಳ್ಳ ಶಿಕ್ಷಕನ ಬುದ್ಧಿಶಕ್ತಿ ಒಳ್ಳೆಯ ಮಾತುಗಾರಿಕೆ, ಮಾನಸಿಕ ದೈಹಿಕ ಆರೋಗ್ಯ ಸಂತೋಷ, ಕರುಣೆ, ರಚನಾತ್ಮಕ ಆಲೋಚನೆ, ಸಹಕಾರ, ಮನೋಭಾವನೆ ಹಾಸ್ಯ ಪ್ರವೃತ್ತಿ, ತಾಳ್ಮೆ, ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ ಇವು ಶಿಕ್ಷಕನ ವ್ಯಕ್ತಿತ್ವವನ್ನು ರೂಪಿಸುವ ಗುಣಗಳಾಗಿವೆ. ವಿಷಯಜ್ಞಾನ, ಮಕ್ಕಳ ಬಗೆಗಿನ ವಾತ್ಸಲ್ಯ ಮತ್ತು ತಿಳುವಳಿಕೆ, ದೃಢ ನಿರ್ಧಾರ, ಸದಾ ಕಲಿಸುವ ಹಂಬಲ ಅಥವಾ ಛಲ ಬದಲಾವಣೆಗಳನ್ನು ಗ್ರಹಿಸುವ ಸೂಕ್ಷ್ಮ ಸಂವೇದನೆ ಇವು ಶಿಕ್ಷಕನಿಗೆ ಅವಶ್ಯ. ಸದಾ ಹಸನ್ಮುಖಿಯಾಗಿದ್ದು ಮಕ್ಕಳ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ಮನೋಭಾವ ಇರಬೇಕು".[೧೮] ತಾನೊಬ್ಬ ಆದರ್ಶ ವಿದ್ಯಾರ್ಥಿ ಎಂಬ ಭಾವನೆ ಶಿಕ್ಷಕನಲ್ಲಿರಬೇಕು. ಅಂದಾಗ ಒಳ್ಳೆಯ ಶಿಕ್ಷಕನಾಗಬಲ್ಲ ಹಾಗೂ ಒಳ್ಳೆಯ ಸಂಸ್ಥೆಯನ್ನು ಕಟ್ಟಬಲ್ಲ. ಹೀಗೆ ರೂಪುಗೊಂಡ ಕಲಾಶಿಕ್ಷಣ ಸಂಸ್ಥೆಗಳು ಕರ್ನಾಟಕದಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ಅವುಗಳು ಈ ಕೆಳಗಿನಂತಿವೆ.

ಚಾಮರಾಜೇಂದ್ರ ಚಿತ್ರಶಾಲೆ, ಮೈಸೂರು

ಯದುವಂಶದ ರಾಜರಿಗೆ ಮೈಸೂರು ರಾಜ್ಯವನ್ನಾಳಿದ ಕೀರ್ತಿ ಸಲ್ಲುತ್ತದೆ. ಅಲ್ಲಿನ ಅರಸರರಾದ ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರ ಕಾಲವನ್ನು ಇತಿಹಾಸದಲ್ಲಿ ಸ್ವರ್ಣಯುಗವೆಂದು ಹೇಳುತ್ತಾರೆ.

"ಸಂಗೀತ, ನೃತ್ಯ, ಚಿತ್ರಕಲಾವಿದರನ್ನು ಗೌರವದಿಂದ ಕಾಣುವ ಈ ಹೃದಯವಂತಿಕೆಯುಳ್ಳ ಅರಸರು 'ನೀವು ಕಲಾ ಸಾರ್ವಭೌಮರು' ಎಂದು ಕರೆಯುತ್ತಿದ್ದರು. ಈ ಅರಸರು ಕಲಾವಿದರನ್ನು ಪುರಸ್ಕರಿಸಿ, ಕಲಾಪ್ರತಿಭೆಗಳನ್ನು ಗುರುತಿಸಿ ಅವರ ಕಲಾಕೌಶಲ್ಯದ ವಿಕಾಸಕ್ಕೆ ಅಗತ್ಯವಾದ ನೆರವನ್ನು ನೀಡುತ್ತಿದ್ದರು. ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು. ವಿಜಯನಗರ ಶೈಲಿಯ

ಕವಲಾಗಿ ಅರಳಿದ ಮೈಸೂರು ಚಿತ್ರಶೈಲಿ ಅರಸರಾಗಿ ಬಂದ ಬ್ರಿಟಿಷರ ಪ್ರಭಾವದಿಂದ ಹರಡಿದ ಪಾಶ್ಚಾತ್ಯ ನೈಜ ಚಿತ್ರಕಲಾ ಶೈಲಿಗಳಿಗೆ ಈ ಅರಸರುಗಳು ಸಮಾನವಾದ ಪ್ರೋತ್ಸಾಹವನ್ನು ನೀಡುತ್ತಿದ್ದರು. ಈ ಎರಡು ಶೈಲಿಗಳಲ್ಲಿ ಕಲಾವಿದರು ಆಸಕ್ತಿಯಿಂದ ಕಲಾಕೃತಿಗಳನ್ನು ರಚಿಸುತ್ತಿದ್ದರು. ಅವು ಲೋಕೋತ್ತರ ಕಲಾಕೃತಿಗಳಾಗಿ ಜಗನ್ಮೋಹನ ಚಿತ್ರಶಾಲೆಯಲ್ಲಿ ಶಾಶ್ವತವಾಗಿ ಪ್ರದರ್ಶನಗೊಂಡಿವೆ."[೧೯]

೧೮೩೩ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಉಚಿತ ಶಾಲೆ ಮೈಸೂರಿನಲ್ಲಿ ಪ್ರಾರಂಭವಾಯಿತು. ೧೮೬೧ರಲ್ಲಿ ಜಗನ್ಮೋಹನ ಅರಮನೆಯನ್ನು ಕಟ್ಟಲು ಪ್ರಾರಂಭಿಸಿದರು. ೧೮೭೫ರ ವೇಳೆಗೆ ಅದು ಚಿತ್ರಶಾಲೆಯಾಗಿ ಮಾರ್ಪಟ್ಟಿತು. ಈ ಕಲಾಶಾಲೆಯಲ್ಲಿ ಭಿತ್ತಿಚಿತ್ರಗಳು, ಮುಮ್ಮಡಿಯವರ ವಂಶಾವೃಕ್ಷ, ಮೈಸೂರಿನ ಅರಸರ ವಂಶಾವಳಿಯನ್ನು ತೋರುವಂತಹ ಭಾವಚಿತ್ರಗಳನ್ನು ಚಿತ್ರಿಸಲಾಗಿದೆ.

ಕಲಾ ಮಂದಿರ, ಬೆಂಗಳೂರು

ಶಿಕ್ಷಣದಲ್ಲಿ ಕಲೆಗೆ ಸಿಕ್ಕ ಸ್ಥಾನಮಾನಗಳು ತೃಪ್ತಿಕರವಾಗಿಲ್ಲ. ಆದರೆ ಕಲೆಗೆ ಗೌರವ ಸ್ಥಾನ ದೊರಕಿಸಿಕೊಡುವುದು ಹೇಗೆ? ಆಸಕ್ತರಿಗೆ ವ್ಯವಸ್ಥಿತ ರೂಪದಲ್ಲಿ ಕಲೆಯ ಶಿಕ್ಷಣ ದೊರಕಿಸಿ ಕೊಡುವುದು ಹೇಗೆ? ಎಂಬ ಪ್ರಶ್ನೆ ಅ.ನ. ಸುಬ್ಬರಾವ್ ಅವರಿಗೆ ಕಾಡಿದವು. ಮಾರ್ಗದರ್ಶನಕ್ಕಾಗಿ ಸರ್.ಎಂ. ವಿಶ್ವೇಶ್ವರಯ್ಯ ಅವರ ಬಳಿ ಹೋದರು. "ನಿನ್ನ ಸರ್ಕಾರಿ ಕೆಲಸಕ್ಕೆ ರಾಜಿನಾಮೆ ಕೊಟ್ಟು ಸ್ವತಂತ್ರ ಸಂಸ್ಥೆಯೊಂದನ್ನು ಆರಂಭಿಸು ಎಂದು ಸಲಹೆ ನೀಡಿದರು. ಈ ಸಲಹೆ ಕರ್ನಾಟಕದ ಮೊಟ್ಟಮೊದಲ ಕಲಾಶಾಲೆ ಕಲಾಮಂದಿರಕ್ಕೆ ಬುನಾದಿಯಾಯಿತು".[೨೦]

"ಕಲಾಮಂದಿರ ಕರ್ನಾಟಕದ ಅತ್ಯಂತ ಹಳೆಯ ಕಲಾಶಾಲೆ. ಕಲಾಮಂದಿರವನ್ನು ಕೇವಲ ಕಲಾಶಾಲೆ ಎಂದು ಕರೆಯುವುದು ಔಪಚಾರಿಕವಾದ ಮಾತು. ಕಲೆಯ ವಿವಿಧ ಕ್ಷೇತ್ರಗಳು ಇದರ ಅಡಿಯಲ್ಲಿ ವಿಕಾಸಗೊಂಡಿವೆ. ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಆರಂಭವಾದ ಈ ಸಂಸ್ಥೆ ತನ್ನ ಬೆಳವಣಿಗೆಯಲ್ಲಿ ಅನೇಕ ಏರಿಳಿತಗಳನ್ನು ಕಂಡಿದೆ. ಎಲ್ಲಾ ಪೀಳಿಗೆಯ ಕಲಾವಿದರನ್ನು ಲೇಖಕರನ್ನು ತನ್ನತ್ತ ಆಕರ್ಷಿಸುತ್ತ ಬೆಳೆಯುತ್ತಲಿದೆ. ಕಲಾಮಂದಿರದ ಧ್ಯೇಯ-ಉದ್ದೇಶಗಳು ತುಂಬ ದೊಡ್ಡ ಆದರ್ಶಗಳಿಂದ ಕೂಡಿದ್ದು, ಕಲೆ ಕೇವಲ ಅಭ್ಯಾಸದ ಅಧ್ಯಯನದ ವಿಚಾರ ಮಾತ್ರ ಆಗದೇ ವ್ಯಕ್ತಿಯ ಜೀವನ ಅರ್ಥಪೂರ್ಣವಾಗುವಂತಿತ್ತು.ಆದರ್ಶ ಪ್ರತಿಭೆಯು ಉದ್ಯಮಶೀಲ ವಾಗಬೇಕೆಂಬ ಆಶಯ ಕಲಾಮಂದಿರವನ್ನು ರೂಪಿಸಿದವರ ಮುಖ್ಯ ದೃಷ್ಟಿಯಾಗಿತ್ತು."[೨೧]

ಸರ್.ಎಂ. ವಿಶ್ವೇಶ್ವರಯ್ಯನವರ ಸಲಹೆ ಮೇರೆಗೆ ಅ.ನ. ಸುಬ್ಬರಾವ್ ಅವರಿಗೆ ಸರಕಾರಿ ಕೆಲಸವನ್ನು ಬಿಟ್ಟು ಬಂದು ಕಲಾಶಾಲೆಯನ್ನು ಪ್ರಾರಂಭಿಸುವುದು ಕಷ್ಟದ ಕೆಲಸವಾಗಿತ್ತು. ಅದು ಬೆಂಗಳೂರಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಬೇಕಾದರೆ ಮೊದಲು ಸ್ಥಳ, ಆರ್ಥಿಕ ಬಂಡವಾಳ, ದೃಢಸಂಕಲ್ಪ ಅ.ನ. ಸುಬ್ಬರಾವ್ ಅವರು ಆಲೋಚಿಸಿದರು. ಆಗಿನ ಕಾಲಕ್ಕೆ

ಚಿತ್ರಕಲಾ ಸಂಸ್ಥೆಗಳು ಇಲ್ಲವೆ ವಾಣಿಜ್ಯ ಕಲಾ ಕಾರ್ಯಾಲಯವಾಗಲಿ ಇರಲಿಲ್ಲ. ಕೆಲವು ಉದ್ಯೋಗ ಸಂಸ್ಥೆಗಳ ಕಾರ್ಯ ಮಾಡಿಕೊಟ್ಟು ಕೊಂಚ ಹಣ ಸಂಪಾದಿಸಿದರು. ತಾನು ಅಂದುಕೊಂಡ ಹಾಗೆ ಸ್ವತಂತ್ರ ಸಂಸ್ಥೆಗೆ ಬಂಡವಾಳವೂ ದೊರೆಯಿತು. ಮೊದಲಿಗೆ ಬೆಂಗಳೂರಿನ ಒಳಪೇಟೆಯ ಸುಗ್ರೀವನ ಗುಡಿಯ ಪಕ್ಕದ ಮಳಿಗೆಯನ್ನು ಬಾಡಿಗೆಗೆ ತೆಗೆದುಕೊಂಡರು.

೧೨ ಆಗಸ್ಟ್ ೧೯೧೯ರಲ್ಲಿ ಕಲಾಮಂದಿರ ಆರಂಭವಾಯಿತು. ವಿವಿಧ ಬಗೆಯ ಉದ್ಯೋಗ ಮಳಿಗೆ ಬಣ್ಣ ಬಣ್ಣದ ಬೋರ್ಡ್‌ಗಳು ಬಹುವಿನ್ಯಾಸದ ಕುರ್ಚಿಗಳು, ಬೆಂಚುಗಳು, ಇವುಗಳು ಸಾಮಾನ್ಯ ಜನರ ಗಮನ ಸೆಳೆದವು. ಮುಖ್ಯವಾಗಿ ಗೋಡೆಗೆ ಹಾಕಲಾದ/ಬರೆದು ತಯಾರಿಸಿದ ಬೋರ್ಡುಗಳು ಬೆಂಗಳೂರಿಗೆ ಪರಿಚಯಿಸಿದ್ದು, ಕಲಾಮಂದಿರ ದಿನದಿಂದ ದಿನಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಏರಿಕೆಯಾಯಿತು. ಹೀಗೆ ಕರ್ನಾಟಕದಲ್ಲಿ ಮೊಟ್ಟಮೊದಲ ಕಲಾಶಾಲೆಯಾಗಿ ಅಸ್ತಿತ್ವಕ್ಕೆ ಬಂದಿರುವುದನ್ನು ಗಮನಿಸಬಹುದು. ಅಲ್ಲದೇ ಕಲಾಮಂದಿರದಲ್ಲಿ ವಿದ್ಯಾರ್ಥಿಗಳಿಗೆ ಅನೇಕ ವರ್ಷ ಉಚಿತ ಶಿಕ್ಷಣ ಮತ್ತು ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಿದ್ದು ಕಲಾಮಂದಿರದ ವಿಶೇಷವಾಗಿತ್ತು.

ಅ.ನ.ಸುಬ್ಬರಾಯರು ಗಾಂಧೀಜಿಯವರ ಅನುಯಾಯಿಯಾಗಿದ್ದರು. ಖಾದಿಧಾರರಾಗಿದ್ದರು. ೧೯೩೪ರಲ್ಲಿ ಮಹಾತ್ಮಗಾಂಧಿಯವರು ಕಲಾ ಮಂದಿರಕ್ಕೆ ಭೇಟಿ ನೀಡಿದರು. ಅವರು ಒಂದು ಚರಕ ಹಾಗೂ ಅವರ ಸ್ವಹಸ್ತದಿಂದ ತಯಾರಿಸಿದ ನೇಯ್ದು ಬಟ್ಟೆಗಳು ಸಹ ಪ್ರದರ್ಶನಗೊಂಡಿದ್ದು ಅ.ನ.ಸು. ಅವರಲ್ಲಿ ಹೊಸ ಚೇತನವನ್ನು ಮೂಡಿಸಿತು.

"ಭಾರತೀಯ ಸಾಂಪ್ರದಾಯಿಕ ಕಲೆಯ ಪುನರುಜ್ಜೀವನಕ್ಕಾಗಿ ನಡೆಯುತ್ತಿರುವ ಹಲವು ಪ್ರಯತ್ನಗಳನ್ನು ಜನತೆಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ೧೯೩೦ರಲ್ಲಿ ಕಲಾ ಮಾಸಪತ್ರಿಕೆಯನ್ನು ಆರಂಭಿಸಿದರು. (Regd No.: M-2595, ಮೈಸೂರು ಸರ್ಕಾರದ ಅಪ್ಪಣೆ ಪಡೆದು) ಅನೇಕ ಪಂಡಿತರು, ಕಲಾವಿದರು, ಸಾಹಿತಿಗಳು ಲೇಖನಗಳನ್ನು ಬರೆದು ಶ್ರೀಮಂತ ಗೊಳಿಸಿದರು. ಐದು ವರುಷಗಳ ಕಾಲ ಉನ್ನತ ಮಟ್ಟದಲ್ಲಿ ಪತ್ರಿಕೆಯನ್ನು ನಡೆಸಲಾಯಿತು.

೧೯೩೬ರಲ್ಲಿ ಮುಕ್ತಾಯ ಹೇಳಬೇಕಾಯಿತು. ಈ ಕಲಾ ಪತ್ರಿಕೆಯಲ್ಲಿ ಅ.ನ.ಸು. ಅವರು ಚಿತ್ರಕಲೆ ಸೌಂದರ್ಯಶಾಸ್ತ್ರ ಇತರ ಕಲೆಗಳ ಬಗೆಗಿನ ನಾಟಕದ ಬಹು ಗಂಭೀರವಾದ ಆಲೋಚನೆ ಆಹಾರವಾಗುವಂತೆ ಉಪಯುಕ್ತವಾದ ಲೇಖನಗಳನ್ನು ಬರೆದಿದ್ದಾರೆ".[೨]

೧೯೪೭ರಲ್ಲಿ ಸ್ವಾತಂತ್ರ್ಯ ಬಂದ ನಂತರದಲ್ಲಿ ಸಂಭ್ರಮದ ವಾತಾವರಣ. ಯಾಕೆಂದರೆ ಕಲಾಮಂದಿರ ಪ್ರಾರಂಭವಾಗಿ ೨೫ ವರ್ಷಗಳಾಗಿದ್ದು, ಈ ವರ್ಷದಲ್ಲಿ ಕಲಾಶಿಕ್ಷಣ, ಪ್ರದರ್ಶನ, ಶಿಬಿರ, ಕಲಾ ಮಾಸಪತ್ರಿಕೆ, ನಾಟಕ ಇಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡು ಬಂದವರು ಅ.ನ.ಸು.ರವರು. ಇದೇ ಸಂದರ್ಭದಲ್ಲಿ ಕಲಾಮಂದಿರವನ್ನು ಮೈಸೂರು ಸೊಸೈಟಿ, ರಿಜಿಸ್ಟ್ರೇಷನ್ ಆ್ಯಕ್ಟ್‌ನ ಅನುಗುಣವಾಗಿ ಕಲಾ ಸಂಸ್ಥೆಯಾಗಿ ರಿಜಿಸ್ಟರ್ ಮಾಡಲಾಯಿತು. ಕಲಾ ಮಂದಿರಕ್ಕೆ

೫೦ ವರ್ಷಗಳು ತುಂಬಿದಾಗ ಕಲಾ ಮಂದಿರದಿಂದ "ಸುವರ್ಣ ಮಹೋತ್ಸವ ಸವಿನೆನಪು ಗ್ರಂಥ" ಕಲಾ ನಿವೇದನೆ (೧೯೧೯-೬೯) ಪ್ರಕಟವಾಯಿತು. "ಅ.ನ.ಸು. ಅವರು ೧೯೭೩ರಲ್ಲಿ ದೃಗ್ದರ್ಶನ(Perspective)ದ ಬಗ್ಗೆ ಪುಸ್ತಕವೊಂದನ್ನು ರಚಿಸಿದರು. ಇದು ಕಲಾಮಂದಿರದ ೫೪ನೇ ವಾರ್ಷಿಕೋತ್ಸವದ ಕೊಡುಗೆ. ಇದು ಪಠ್ಯಾವಳಿಯಲ್ಲಿ ಪ್ರಮುಖವಾದ ಪರೀಕ್ಷಾ ವಿಷಯವಾಗಿದೆ"[೨೩]

ದಿ. ಅ.ನ.ಸು. ಅವರ ಶತಮಾನೋತ್ಸವವನ್ನು ೧೯೯೧ರಲ್ಲಿ ಬೆಂಗಳೂರಿನ ಯುವಜನ ಕ್ರೀಡಾ ಭವನದಲ್ಲಿ ಅ.ನ.ಸು. ನೂರು ಕಾರ್ಯಕ್ರಮವನ್ನು ಅಂದಿನ ವಾರ್ತಾ ಸಚಿವರಾದ ವೀರಪ್ಪ ಮೊಯಿಲಿಯವರು ಉದ್ಘಾಟಿಸಿದರು. ಕಲಾಶಿಕ್ಷಣವನ್ನು ನೀಡುತ್ತಿದ್ದ ಕಲಾ ಮಂದಿರಕ್ಕೆ ೭೫ ವರ್ಷ ಪೂರ್ಣಗೊಂಡಾಗ ಅಮೃತ ಮಹೋತ್ಸವ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಕಲಾ ಮಂದಿರ ಪ್ರಾರಂಭವಾದಾಗ ಚಿತ್ರಕಲಾ ಶಿಕ್ಷಣದ ಟ್ರೈನಿಂಗ್ ತರಗತಿಗಳಲ್ಲಿಯೇ ಮದರಾಸು ಸರಕಾರ ನಡೆಸುತ್ತಿದ್ದ ಪರೀಕ್ಷೆಗಳಿಗೆ ತರಬೇತಿ ಕೊಡಬೇಕಿತ್ತು. ಅಲ್ಲಿಂದಲೇ ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್‌ಗಳನ್ನು ನೀಡುತ್ತಿತ್ತು. ೧೯೫೯ರಲ್ಲಿ ಡ್ರಾಯಿಂಗ್ ಡಿಪ್ಲೋಮಾ ತರಗತಿಗಳು ಎಸ್.ಎಸ್.ಎಲ್.ಸಿ. ಪಾಸಾದವರು ಎರಡು ವರ್ಷದ ಚಿತ್ರಕಲಾ ಡಿ.ಎಂ.ಸಿ. ಕೋರ್ಸ್ ಎರಡು ವರ್ಷ ಡಿ.ಎಂ.ಸಿ. ಮೂರು ವರ್ಷಗಳ ಡಿಪ್ಲೋಮಾ ಎ.ಎಂ. ತರಗತಿಗಳನ್ನು ನಡೆಸುತ್ತಿದ್ದು ಬಿ.ಎಫ್.ಎ. ತರಗತಿಗಳು ಈ ಸದ್ಯದಲ್ಲಿ ನಡೆಯುತ್ತಿದೆ. ಕಲಾ ಮಂದಿರ ಕಲಾ ಶಾಲೆಗೆ ೨೦೧೯ಕ್ಕೆ ನೂರು ವರ್ಷ ತುಂಬಿದೆ. ಕರ್ನಾಟಕದಲ್ಲಿ ಶತಮಾನೋತ್ಸವ ಕಾಣುವ ಪ್ರಪ್ರಥಮ ಕಲಾಶಾಲೆ, ಕಲಾಮಂದಿರವಾಗಿದೆ.

ಜೆ.ಎಸ್.ಎಸ್. ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ

ಕರ್ನಾಟಕದ ಕಲಾಶಿಕ್ಷಣ ಸಂಸ್ಥೆಗಳಲ್ಲಿ ಇದೊಂದು ಪ್ರಮುಖ ಸಂಸ್ಥೆಯಾಗಿದೆ. ಧಾರವಾಡದಲ್ಲಿ ಕಲಾಸಂಸ್ಥೆಯನ್ನು ಹುಟ್ಟುಹಾಕಬೇಕೆಂಬ ಅದಮ್ಯ ಉತ್ಸಾಹದಿಂದ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಕಲೆ, ಸಾಹಿತ್ಯ, ಸಂಗೀತ ಮುಂತಾದ ಕ್ಷೇತ್ರಗಳಲ್ಲಿ ಗಮನೀಯ ಸಾಧನೆ ಮಾಡಿದ ಸಾಧಕರ ಕೇಂದ್ರ ಧಾರವಾಡ. ಇಂತಹ ಸಾಂಸ್ಕೃತಿಕ ನಗರಿಯಲ್ಲಿ ಕಲಾಶಾಲೆಯ ಸ್ಥಾಪನೆ ಅಗತ್ಯವಿತ್ತು. ಆದ್ದರಿಂದ ಆರಂಭದಲ್ಲಿ ಕೇವಲ ಇಬ್ಬರು ವಿದ್ಯಾರ್ಥಿಗಳಿಂದ ಆರಂಭಗೊಂಡು ಇಂದು ನೂರಾರು ವಿದ್ಯಾರ್ಥಿಗಳಿಗೆ ಜೀವನ ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ.

ಪ್ರಾರಂಭದಲ್ಲಿ ಈ ಕಲಾಶಾಲೆಗೆ ಸ್ವಂತ ಕಟ್ಟಡವಿರಲಿಲ್ಲ. ಆದರೂ ಶಾಲೆಯನ್ನು ಆರಂಭಿಸಿದರು. ಆರಂಭಿಕ ಮೊದಲನೆ ವರ್ಷ ಹಾಲಭಾವಿ ಶಾಲೆ ಧಾರವಾಡ ಆರ್.ಎಲ್.ಎಸ್. ಶಾಲೆಯ ಕಟ್ಟಡದಲ್ಲಿ ಆರಂಭಗೊಂಡಿತು. ನಂತರದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಕಟ್ಟಡದಲ್ಲಿ ಮೂರು ವರ್ಷಗಳ ಕಾಲ ತರಗತಿಗಳು ನಡೆದವು. ಇದು ಒಂದು ರೀತಿಯಲ್ಲಿ ಅಲೆದಾಟವಾಗಿತ್ತು. ಇದರಿಂದ ಮುಕ್ತಿ ಪಡೆಯಲು ಸ್ವಂತ ಕಟ್ಟಡದ ಅವಶ್ಯಕತೆಯನ್ನು ದಾನಪ್ಪ ಹಾಲಭಾವಿಯವರು

ಮನಗಂಡರು; ತಮ್ಮದೇ ಹಣದಿಂದ ಸ್ವಂತ ಕಟ್ಟಡವನ್ನು ಕೋರ್ಟ್ ಸರ್ಕಲ್‌ನಲ್ಲಿ ನಿರ್ಮಿಸಿದರು. ಈ ಕಟ್ಟಡದ ಉದ್ಘಾಟನೆಗೆಂದು "೧೯೪೦ರಲ್ಲಿ ಅಂದಿನ ಜಿಲ್ಲಾಧಿಕಾರಿಯಾಗಿದ್ದ ಎ.ಎಲ್. ಡಾಯಸ್‌ರವರಿಗೆ ಆಹ್ವಾನ ನೀಡಿದ್ದರು. ಅದರಂತೆ ಕಲೆಕ್ಟರಾಗಿದ್ದ ಎ.ಎಲ್. ಡಾಯಸ್ ಅವರು ಕಲಾ ಕಟ್ಟಡವನ್ನು ಉದ್ಘಾಟಿಸಿದರು. ಈ ಕಲಾಶಾಲೆಯಲ್ಲಿ ಡ್ರಾಯಿಂಗ್ ಗ್ರೇಡ್, ಪೇಂಟಿಂಗ್, ಫೋಟೋಗ್ರಾಫ್, ನೃತ್ಯ, ಸಂಗೀತ ಮೊದಲಾದ ಲಲಿತಕಲಾ ಶಿಕ್ಷಣ ಕೋರ್ಸ್‌ಗಳನ್ನು ಆರಂಭಿಸಿದರು. ೧೯೪೧ರಲ್ಲಿ ಪ್ರಾಥಮಿಕ ಚಿತ್ರಕಲೆ ಹಾಗೂ ಇಂಟರ್ ಮೀಡಿಯಟ್ ಚಿತ್ರಕಲೆ ಎಂಬ ಎರಡು ಹೊಸ ಕೋರ್ಸ್‌ಗಳನ್ನು ಆರಂಭಿಸಿದರು. ಕಲಾಶಾಲೆ ಹುಟ್ಟಿ ಐದು ವರ್ಷ ಗಳಲ್ಲಿಯೇ ಕಲಾಶಾಲೆಗೆ ಬೇಕಾದಂತಹ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಪೂರೈಸಿಕೊಟ್ಟರು."[೨೪]

"೧೯೫೨ರಲ್ಲಿ ಈ ಕಲಾ ಮಂದಿರವು ಡ್ರಾಯಿಂಗ್ ಶಿಕ್ಷಕರ ತರಬೇತಿ ಕೇಂದ್ರವಾಗಿ ಗುರುತಿಸಲ್ಪಟ್ಟು, ಇದುವರೆಗೂ ಅನೇಕ ವಿದ್ಯಾರ್ಥಿಗಳು ಚಿತ್ರ ನಿಪುಣರಾಗಿ ಚಿತ್ರಕಲೆಯ ವಿವಿಧ ರಂಗಗಳಲ್ಲಿ ಪರಿಣಿತರೆನಿಸಿ ಹೊರಬಂದರು. ಶ್ರೀ ಹಾಲಭಾವಿ ಅವರು ಈ ಸಂಸ್ಥೆಯ ಪ್ರಿನ್ಸಿಪಾಲರಾಗಿ ನಲವತ್ತು ವರ್ಷಗಳ ಅಮೋಘ ಸೇವೆಯ ನಂತರ ನಿವೃತ್ತರಾಗಿ ಅವರ ನಿರ್ದೇಶಕರೆಂದು ಗೌರವಿಸಲ್ಪಟ್ಟರು".[೨೫]

ಹಗಲು-ರಾತ್ರಿ, ತನು-ಮನ-ಧನದಿಂದ ದುಡಿದ ಶ್ರೀ ದಾನಪ್ಪ ಹಾಲಭಾವಿಯವರು ಕಲಾ ಶಾಲೆಯನ್ನು ಬೆಳೆಸಿಕೊಂಡು ಬಂದರು. ಶಾಲೆಯು ಮುಂದೆ "೧೯೬೦ರಲ್ಲಿ ಡಾ. ಡಿ.ಸಿ. ಪಾವಟೆ ಅಧ್ಯಕ್ಷತೆಯಲ್ಲಿ ಬೆಳ್ಳಿಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿತು. ಶಾಲೆಗೆ ೫೦ ವರ್ಷಗಳು ತುಂಬಿದಾಗ ೧೯೮೫ರಲ್ಲಿ ಶಾಲೆಯ ಸುವರ್ಣ ಮಹೋತ್ಸವವನ್ನು ಅಷ್ಟೇ ಉತ್ಸಾಹದಿಂದ ಆಚರಿಸಲಾಯಿತು. ಹಾಲಭಾವಿ ಕಲಾಶಾಲೆ ೧೯೯೫ರಲ್ಲಿ ತನ್ನ ವಜ್ರ ಮಹೋತ್ಸವವನ್ನು ಆಚರಿಸಿಕೊಂಡಿತು.[೨೬]

"ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಸಂದರ್ಭಾನುಸಾರ ಪುಸ್ತಕ ಪ್ರಕಾಶನದತ್ತ ಸಾಗಿ ಅತ್ಯಂತ ಮುತುವರ್ಜಿಯಿಂದ ಕೆಲಸ ಮಾಡುತ್ತಾ ಬಂದಿದೆ. ಹಾಲಭಾವಿಯವರಿಗೆ ೬೦ ತುಂಬಿದಾಗ ಅವರ ಅಭಿನಂದನ ಗ್ರಂಥ 'ಅರವತ್ತರ ಒಸಗೆ' ಪ್ರಕಟವಾಗಿದೆ. ಸಂಸ್ಥೆಯ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಸ್ಮರಣ ಸಂಚಿಕೆಯನ್ನು ಹೊರತಂದ ಶ್ರೇಯಸ್ಸು ಈ ಸಂಸ್ಥೆಯದು, ಈ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಡಿ.ವ್ಹಿ. ಹಾಲಭಾವಿಯವರು 'ಆರ್ಟ್‌ಗೀಲ್ಡ್' ಎಂಬ ಕಲೆಯ ಕುರಿತಾದ ಪತ್ರಿಕೆಯನ್ನು ಅವರ ಸಮಕಾಲೀನ ಕಲಾವಿದರ ಕುರಿತು ಬರೆದ 'ಮಾಯ್ ಕಾಂಟೆಂಪರರಿ ಆರ್ಟಿಸ್ಟ್' ಪುಸ್ತಕವನ್ನು 'ನನ್ನ ಸಿಲೋನ ಸಂದರ್ಶನ' ಎಂಬ ಪುಸ್ತಕವನ್ನು ಇವರ ಶಾಲೆಯಿಂದ ಪ್ರಕಟಿಸಿದ್ದಾರೆ. ಹೀಗೆ ವಜ್ರ ಮಹೋತ್ಸವದ ಸ್ಮರಣೆಗಾಗಿ 'ಚಿತ್ರಾಕ್ಷಿ' ಎಂಬ ಸ್ಮರಣ ಸಂಚಿಕೆಯನ್ನು ಕಲಾಭಿಮಾನಿಗಳ ಕೈಗೆ ನೀಡಿದ್ದಾರೆ. ಇದರ

ಜೊತೆಯಲ್ಲಿ ವಿದ್ವತ್‌ಪೂರ್ಣವಾದ ಗ್ರಂಥ "ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು" ಸಂಸ್ಥೆಯ ಹೆಮ್ಮೆಯ ಪ್ರಕಟಣೆಯಾಗಿ ಹೊರಬಂದಿದೆ".[೨೭]

ಪ್ರಾರಂಭವಾದ ಕೋರ್ಸ್‌ಗಳು ಪ್ರಾಥಮಿಕ ಚಿತ್ರಕಲೆ, ಇಂಟರ್ ಮೀಡಿಯಟ್ ಚಿತ್ರಕಲೆ, ಡ್ರಾಯಿಂಗ್ ಶಿಕ್ಷಕರ ತರಬೇತಿ, ಡಿ.ಟಿ.ಸಿ., ಡಿ.ಎಂ.ಸಿ., ಎ.ಎಂ., ಜಿ.ಡಿ. ಆರ್ಟ್ ಕೋರ್ಸ್‌ಗಳು ೨೦೦೧ರಲ್ಲಿ ದೃಶ್ಯಕಲಾ ಮೂಲ ಪ್ರಥಮ ವರ್ಷ, ದ್ವಿತೀಯ ವರ್ಷ ವಿಶೇಷ ಪರಿಣಿತಿ ಅಲ್ಲದೆ ಚಿತ್ರಕಲೆ ಡಿಪ್ಲೋಮಾ ಮೂರು, ನಾಲ್ಕು, ಐದನೆಯ ವರ್ಷದ ತರಗತಿಗಳು ನಡೆಯುತ್ತಿರುವವು. ಹೀಗೆ ಕನ್ನಡ ವಿಶ್ವವಿದ್ಯಾಲಯದ ಅಧೀನದಲ್ಲಿ ಬಿ.ವಿ.ಎ. ಪ್ರಥಮ, ದ್ವಿತೀಯ, ತೃತೀಯ ವರ್ಷದ ಪದವಿಗಳ ಪರೀಕ್ಷೆ ಮತ್ತು ಅಂಕಪಟ್ಟಿಯನ್ನು ನೀಡುವ ವ್ಯವಸ್ಥೆಯನ್ನು ಕಾಣಬಹುದು.

ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಕಲಾಶಾಲೆಯು ಈಗ ಜೆ.ಎಸ್.ಎಸ್. ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವುದನ್ನು ಗಮನಿಸಬಹುದಾಗಿದೆ.

ವಿಜಯ ಕಲಾ ಮಂದಿರ, ಗದಗ

ಟಿ.ಪಿ. ಅಕ್ಕಿಯವರು ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಮುಂಬೈನಲ್ಲಿ ಚಿತ್ರಕಲಾ ಶಿಕ್ಷಣವನ್ನು ಮುಗಿಸಿಕೊಂಡು ಕರ್ನಾಟಕಕ್ಕೆ ಬಂದರು. ಚಿತ್ರಕಲಾ ಶಿಕ್ಷಣದ ಒಳಗಿನ ವಿಷಯಗಳನ್ನು ತಿಳಿದು ಈ ಭಾಗದ ವಿದ್ಯಾರ್ಥಿಗಳಿಗೆ ಚಿತ್ರಕಲಾ ಶಿಕ್ಷಣ ದೊರಕದಿರುವುದನ್ನು ಮನಗಂಡು ಈ ಭಾಗದಲ್ಲಿ ಚಿತ್ರಕಲಾ ಶಿಕ್ಷಣವನ್ನು ಹುಟ್ಟುಹಾಕಬೇಕೆಂಬ ಹಂಬಲ ಇವರದ್ದಾಗಿತ್ತು. ಈ ದೆಸೆಯಿಂದ "ಮುನ್ಸಿಪಲ್ ಹೈಸ್ಕೂಲ್‌ನ ಚಿತ್ರಕಲಾ ಶಿಕ್ಷಕರ ಹುದ್ದೆಯನ್ನು ತ್ಯಜಿಸುವಂತೆ ಮಾಡಿತು. ಅಲ್ಲದೇ ಚಿತ್ರಕಲಾ ಶಿಕ್ಷಣ ಪಡೆಯಲು ದೂರದ ಊರುಗಳಾದ ಮುಂಬೈ, ಮದ್ರಾಸ್‌ಗೆ ತೆರಳಬೇಕಾಗಿ ರುವುದನ್ನು ಅರಿತವರಾದ್ದರಿಂದ ಈ ಸಂಸ್ಥೆಯನ್ನು ಹುಟ್ಟುಹಾಕುವಂತೆ ಪ್ರೇರೇಪಿಸಿತು".[೨೮]

೧೯೪೭ರಲ್ಲಿ ಸ್ವಾತಂತ್ರ್ಯಗೊಂಡ ನಂತರ ಭಾರತ ದೇಶದ ತುಂಬೆಲ್ಲಾ ಸಂತಸದ ವಾತಾವರಣ ಮೂಡಿತು. ಬ್ರಿಟಿಷರ ಸರ್ಕಾರದಿಂದ ಮುಕ್ತವಾದ ಭಾರತೀಯರು ಗರಿಬಿಚ್ಚಿ ಹಾರುವ ಹಕ್ಕಿಗಳಂತಾದರು. ಭಾರತೀಯ ಕಲಾ ಸಂಸ್ಕೃತಿ ಬೆಳಕನ್ನು ಹರಿಸಲೆಂದು ೧೯೪೭ರಲ್ಲಿ ಕಲಾತಪಸ್ವಿ ಟಿ.ಪಿ. ಅಕ್ಕಿಯವರು ವಿಜಯ ಕಲಾ ಮಂದಿರವನ್ನು ಹುಟ್ಟುಹಾಕಿದರು.

ವಿಜಯ ಕಲಾಮಂದಿರದ ಆರಂಭದ ದಿನಗಳಲ್ಲಿ ಇಲ್ಲಿ ಎಲಿಮೆಂಟರಿ ಪೇಟಿಂಗ್ ಎಂಬ ವಿಷಯದ ಮೇಲೆ ಚಿತ್ರಕಲಾ ಶಿಕ್ಷಣವನ್ನು ನೀಡುತ್ತಿದ್ದರು. ನಂತರದಲ್ಲಿ ಜಿ.ಡಿ. ಆರ್ಟ್ ತರಗತಿಗಳನ್ನು ನಡೆಸುತ್ತಿದ್ದರು. ಇಲ್ಲಿ ಕಲಿತಂತಹ ವಿದ್ಯಾರ್ಥಿಗಳು ನಂತರ ಮುಂಬೈಯಲ್ಲಿರುವ ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಪರೀಕ್ಷೆ ಬರೆಯುತ್ತಿದ್ದರು. ಇದು ಸರಕಾರದ ಕಲಾಶಿಕ್ಷಣ ಕೇಂದ್ರವಾದ್ದರಿಂದ ಎಲ್ಲಾ ಪರೀಕ್ಷೆಗಳು ಅಲ್ಲಿಯೇ ನಡೆಯುತ್ತಿದ್ದವು.

೧೯೬೦ರಲ್ಲಿ ಡ್ರಾಯಿಂಗ್ ಶಿಕ್ಷಕರ ತರಬೇತಿ ವರ್ಗಗಳನ್ನು ಹಾಗೂ ಮಣ್ಣಿನ ಪ್ರತಿಮಾ ನಿರ್ಮಾಣದ ವರ್ಗಗಳನ್ನು ತೆರೆದರು. ಜೊತೆಗೆ ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ

ಹಾಗೂ ಪ್ರೌಢ ಶಿಕ್ಷಣ ಪರೀಕ್ಷೆ ಮಂಡಳಿಗಳ ಪರೀಕ್ಷೆ ಕೇಂದ್ರವನ್ನು ವಿಜಯ ಕಲಾ ಮಂದಿರಕ್ಕೆ ಪಡೆದುಕೊಂಡಾಗ ಸ್ಥಳದ ಅಭಾವ ತಲೆದೋರಿತು. ಆಗ ಈ ಕಟ್ಟಡದ ಪಕ್ಕದಲ್ಲಿದ್ದ ಖಾಲಿ ನಿವೇಶನವನ್ನು ಟಿ.ಪಿ. ಅಕ್ಕಿಯವರು ಸ್ವಂತ ಖರ್ಚಿನಿಂದ ಪಡೆದುಕೊಂಡರು. ಈ ಹೊಸ ಕಟ್ಟಡವನ್ನು ಕಟ್ಟಲು ಹಣದ ಕೊರತೆಯೂ ಉಂಟಾಗಿ ಅದನ್ನು ಬೇರೆ ಬೇರೆ ಮೂಲಗಳಿಂದ ಅಂದರೆ ಗದುಗಿನ ನಗರಸಭೆ ಮತ್ತು ಕೇಂದ್ರ ಸರಕಾರದ ಧನಸಹಾಯ ಇವರಿಗೆ ಲಭಿಸಿದವು. ನಂತರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎಫ್.ಎ. ಫೈನ್ ಆರ್ಟ್ ಹಾಗೂ ಬಿ.ಎಫ್.ಎ. ಅಪ್ಲೈಡ್ ಆರ್ಟ್, ಎಂ.ಎಫ್.ಎ. ಸ್ನಾತಕೋತ್ತರ ಪದವಿಯ ತರಗತಿಗಳನ್ನು ನಡೆಸಲಾಗುತ್ತಿದೆ ಮತ್ತು ಕನ್ನಡ ವಿಶ್ವವಿದ್ಯಾಲಯದಿಂದ ದೃಶ್ಯಕಲಾ ಮೂಲ ಪ್ರಥಮ ಹಾಗೂ ದ್ವಿತೀಯ ಮತ್ತು ಬಿ.ವಿ.ಎ. ಪದವಿಗಳನ್ನು ನಡೆಸುತ್ತಿರುವುದನ್ನು ನಾವು ಕಾಣಬಹುದು. ಕನ್ನಡ ವಿಶ್ವವಿದ್ಯಾಲಯದಿಂದ ಬಿ.ವಿ.ಎ. ತರಗತಿಗಳನ್ನು ಪ್ರತ್ಯೇಕವಾದ ಕಟ್ಟಡವನ್ನು ಈ ಮಹಾವಿದ್ಯಾಲಯದವರು ಹೊಂದಿದ್ದಾರೆ.

ಶ್ರೀ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ, ಹುಬ್ಬಳ್ಳಿ

ಹುಬ್ಬಳ್ಳಿಯಲ್ಲಿ ೧೯೫೦ರಲ್ಲಿ 'ಕರ್ನಾಟಕ ಆರ್ಟ್ ಎಜ್ಯುಕೇಶನ್' ಸಂಸ್ಥೆಯನ್ನು ಪ್ರಾರಂಭಿಸಿದರು. ೧೯೫೫ರಲ್ಲಿ ಶ್ರೀ ಎಂ ಮಿಣಜಗಿಯವರು ಈ ಸಂಸ್ಥೆಯ ಅಡಿಯಲ್ಲಿ ಕಲಾಮಂದಿರವನ್ನು ಪ್ರಾರಂಭಿಸಿದರು, ೧೯೬೩ರಲ್ಲಿ ಈ ಕಲಾಮಂದಿರಕ್ಕೆ ಶ್ರೀ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ ಎಂದು ಹೆಸರಿಸಲಾಯಿತು. ಈ ಸಂಸ್ಥೆ ಮುಂಬೈ ಸರ್ಕಾರದ ಮಾನ್ಯತೆ ಪಡೆದಿದ್ದಲ್ಲದೇ ಪ್ರತಿವರ್ಷ ಧನಸಹಾಯವನ್ನು ಕೊಟ್ಟು ಪ್ರೋತ್ಸಾಹಿಸುತ್ತಿತ್ತು. ಚಿತ್ರಕಲೆ, ಶಿಲ್ಪಕಲೆ ಮೊದಲಾದ ಕಲೆಗಳ ಶಿಕ್ಷಣವನ್ನು ಕೊಡುತ್ತಿರುವ ಮಂದಿರವನ್ನು ಒಂದು ಮಹಾವಿದ್ಯಾಲಯವನ್ನಾಗಿ ಈಗ ಪರಿಗಣಿಸಲಾಗಿದೆ.

ಉತ್ತರ ಕರ್ನಾಟಕದಲ್ಲಿ ಶಿಕ್ಷಣ ರಂಗದಲ್ಲಿ ಅಭಿವೃದ್ಧಿಯಾಗುತ್ತಿದೆ. ಲಲಿತಕಲೆಗಳ ಶಿಕ್ಷಣ ಕೊಡುವ ಮಹಾಸಂಸ್ಥೆ ಇನ್ನು ಬರಬೇಕಾಗಿದೆ. ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮುಂದುವರೆಯಬೇಕೆನ್ನುವ ನಾಡಿನ ಲಲಿತಕಲೆಗಳಿಗೂ ಪ್ರೋತ್ಸಾಹ ಅಗತ್ಯ. ಸರಕಾರವೇ ಮುಂದಾಗಿ ಇಂತಹ ಕಾರ್ಯ ಕೈಗೊಳ್ಳಬೇಕು. ಇಲ್ಲವಾದರೆ ಆ ದಿಸೆಯಲ್ಲಿ ಪ್ರಯತ್ನವನ್ನಾರಂಭಿಸಿ ಸಾರ್ವಜನಿಕ ಸಂಸ್ಥೆಗಳಿಗೆ ಉದಾರಹಸ್ತದಿಂದ ಸಹಾಯ ನೀಡಬೇಕು. ಹುಬ್ಬಳ್ಳಿಯಲ್ಲಿ ಸ್ಥಾಪಿಸ ಬೇಕೆಂದಿರುವ ಲಲಿತಕಲಾ ಮಹಾವಿದ್ಯಾಲಯಕ್ಕೆ ನೆರವಾಗಲು ಮೂರು ಸಾವಿರ ಮಠದ ಮಹಾಸ್ವಾಮಿಗಳು ಅಭಯಹಸ್ತ ನೀಡಿರುವರು.

ಆಗಿನ ಮುಖ್ಯಮಂತ್ರಿಗಳಾದ ಶ್ರೀ ಬಿ.ಡಿ ಜತ್ತಿಯವರು ಹುಬ್ಬಳ್ಳಿಗೆ ಬಂದಾಗ ಈ ಕಲಾಶಾಲೆ ಪರಿಸ್ಥಿತಿಯ ಬಗ್ಗೆ ಹೇಳಿದಾಗ ಕಟ್ಟಡಕ್ಕೆ ಜಾಗವನ್ನು ಕೊಡುವುದಲ್ಲದೇ, ಕಾಲೇಜಿನ ಸ್ಥಾಪನೆ ಹಾಗೂ ಇನ್ನೂ ಕೆಲವು ಕಾರ್ಯಗಳಿಗೆ ನೆರವಾಗುವುದು ನಮ್ಮ ಕರ್ತವ್ಯ ಎಂದರು. ಸಾಹಿತ್ಯ, ವಿಜ್ಞಾನ, ವೈದ್ಯಕೀಯ, ವಾಣಿಜ್ಯ ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಕೇಂದ್ರವಾಗಿ ಚಿತ್ರಕಲಾ ವಿದ್ಯಾ ನಗರವನ್ನೇ ಸೃಷ್ಟಿಸುವಂತಹ ಲಲಿತಕಲಾ ಮಹಾವಿದ್ಯಾಲಯದ ಸ್ಥಾಪನೆಯ

ಕಲಾಪೂರ್ಣ ಮುಖ ಮಂಡಲಕ್ಕೆ ಕಸ್ತೂರಿಯ ತಿಲಕವನ್ನಿಟ್ಟಂತಾಗುವುದರಲ್ಲಿ ಸಂದೇಹವಿಲ್ಲವೆಂದು ಹಾರೈಸಿದರು.

ಕರ್ನಾಟಕ ಫೈನ್ ಆರ್ಟ್ ಸೊಸೈಟಿಯವರು ನಡೆಸುತ್ತಿದ್ದ ಈ ಕಲಾಮಂದಿರಕ್ಕೆ ಮುಂದೆ "ಶ್ರೀ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ" ಎಂದು ನಾಮಕರಣ ಮಾಡಲಾಯಿತು. ಇದು ಮೂರು ಸಾವಿರ ಮಠದ ಜಗದ್ಗುರುಗಳ ಸನ್ನಿಧಿಯಲ್ಲಿ ಹಾಗೂ ರಾಜ್ಯ ಸರಕಾರದಿಂದ ಮನ್ನಣೆ ಪಡೆದು ಡಿಪ್ಲೋಮಾ ವರ್ಗಗಳನ್ನು ಪ್ರಾರಂಭಿಸುವ ಸಮಾರಂಭವು ಅಣ್ಣಾರಾವ್ ಗಣಮುಖಿಯವರ ಹಸ್ತದಿಂದ ಮೂರು ಸಾವಿರ ಮಠದಲ್ಲಿ ಜರುಗಿರುವದು ಮತ್ತು ಈ ಸಂಸ್ಥೆಯಿಂದ ಅನೇಕ ವಿದ್ಯಾರ್ಥಿಗಳು ವಿವಿಧ ಹಂತಗಳಲ್ಲಿ ತರಬೇತಿಯನ್ನು ಹೊಂದಿ ಹೊರಬೀಳುತ್ತಿದ್ದಾರೆ. ಪ್ರತಿವರ್ಷಕ್ಕೆ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಾ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಾ ಬಂದಿದ್ದು, ಇದರಿಂದ ಹುಬ್ಬಳ್ಳಿಯಲ್ಲಿ ಮತ್ತು ಆ ಪ್ರದೇಶದಲ್ಲಿ ಚಿತ್ರಕಲೆ ಬೆಳಕಿಗೆ ಬಂದು ಅನೇಕ ಕಲಾವಿದರು ಹೊರಬಂದಿರುವುದು ಗಮನಾರ್ಹವಾಗಿದೆ.

ದಿ ಐಡಿಯಲ್ ಫೈನ್ ಆರ್ಟ್ ಇನ್‌ಸ್ಟಿಟ್ಯೂಟ್, ಕಲಬುರ್ಗಿ

ಕರ್ನಾಟಕದ ಕಲಾಕ್ಷೇತ್ರದಲ್ಲಿ ವಿಶಿಷ್ಟವಾದಂತಹ ಸ್ಥಾನವನ್ನು ಗುಲಬರ್ಗಾ ವಿಭಾಗವು ಹೊಂದಿದೆ. ಇಲ್ಲಿನ ಕಲೆ, ಕಲಾಶಿಕ್ಷಣ ಸಾಂಸ್ಕೃತಿಕವಾಗಿ ಹಲವಾರು ಮಜಲುಗಳಲ್ಲಿ ಕೆಲಸ ನಡೆಯುತ್ತಿರುವುದನ್ನು ಕಾಣಬಹುದು.

"ದಿ ಐಡಿಯಲ್ ಫೈನ್ ಆರ್ಟ್ ಇನ್‌ಸ್ಟಿಟ್ಯೂಟ್‌ನ್ನು ಜೆ.ಎಸ್. ಖಂಡೇರಾವ್ ಅವರು ೧೯೬೩ರಲ್ಲಿ ಪ್ರಾರಂಭಿಸಿದರು. ಈ ಸಂಸ್ಥೆಯು ಹಲವಾರು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಈ ಸಮಾಜಕ್ಕೆ ನೀಡಿದೆ. ಜೆ.ಎಸ್. ಖಂಡೇರಾವ್ ಅವರು ೧೯೬೫ರಲ್ಲಿ ಈ ಸಂಸ್ಥೆಯಲ್ಲಿ ಚಿತ್ರಕಲಾ ವಿಭಾಗವನ್ನು ಪ್ರಾರಂಭಿಸಿದರು. ಆರೇಳು ವರ್ಷಗಳ ನಂತರ ೧೯೭೨ರ ಜೂನ್ ತಿಂಗಳಲ್ಲಿ ಪ್ರೊ. ವಿ.ಜಿ. ಅಂದಾನಿಯವರು ಕಲಾಶಾಲೆಗೆ ಹೊಸ ರೂಪವನ್ನು ನೀಡಿದರು. ಅದರೊಂದಿಗೆ ಡಿಪ್ಲೋಮಾದಿಂದ ಪದವಿಯವರೆಗೂ ಪರಿವರ್ತನೆ ಮಾಡಬೇಕೆಂಬ ಹಂಬಲದಿಂದ ೧೯೮೪ರಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಪದವಿ ಕೊಡುವ ದೃಷ್ಟಿಯಿಂದ "ಕಾಲೇಜ್ ಆಫ್ ವಿಜ್ಯುವಲ್ ಆರ್ಟ್"ನ್ನು ಪ್ರಾರಂಭಿಸಿದರು. ಹೊಸ ತಾಂತ್ರಿಕ, ವೈಜ್ಞಾನಿಕ ವಿಚಾರಗಳ ಮೂಲಕ ಈ ವಿಭಾಗದಲ್ಲಿ ರಾಷ್ಟ್ರಮಟ್ಟದ ಶಿಕ್ಷಣ ನೀಡಬೇಕೆನ್ನುವ ಉದ್ದೇಶದಿಂದ ವಿಶ್ವವಿದ್ಯಾಲಯ ಮಟ್ಟದಲ್ಲಿ ಕಾಲೇಜನ್ನು ಪ್ರಾರಂಭಿಸಿದರು. ಇದಕ್ಕೆ ಗುಲ್ಬರ್ಗಾ ವಿಶ್ವವಿದ್ಯಾಲಯದ ಆಗಿನ ಕುಲಪತಿಗಳಾದ ಡಾ. ಹಾ.ಮಾ. ನಾಯಕ ಅವರು ಕೂಡಾ ಪ್ರೋತ್ಸಾಹವನ್ನು ನೀಡಿದರು".[೨೯] ಚಿತ್ರಕಲಾ ವಿಭಾಗಕ್ಕೆ ಪ್ರೊ. ವಿ.ಜಿ. ಅಂದಾನಿ ಹಾಗೂ ಎಂ.ಬಿ. ಲೋಹರ್ ಅವರನ್ನೊಳಗೊಂಡಂತೆ ಪೇಂಟಿಂಗ್ ವಿಭಾಗವು ಬೆಳೆಯಲು ವಿಶೇಷ ಆಸಕ್ತಿಯನ್ನು ತೋರಿಸಿದರು. ನಂತರದಲ್ಲಿ ಉಪನ್ಯಾಸಕರಾಗಿ ಬಸವರಾಜ ಎಲ್. ಜಾನೆ., ರಾಜಶೇಖರ್ ಎಸ್., ಪೂರ್ಣಿಮಾ ಪಾಟೀಲ,

ಲೋಕಯ್ಯ ಕೆ. ಮಠಪತಿ, ಹಣಮಂತರಾವ್ ಮಂತಟ್ಟಿ ಹೀಗೆ ಅನೇಕ ಉಪನ್ಯಾಸಕರಿಂದಾಗಿ ಈ ಸಂಸ್ಥೆಯು ಉತ್ತಮವಾಗಿ ಮುನ್ನಡೆದುಕೊಂಡು ಬರುತ್ತಿರುವುದನ್ನು ಕಾಣಬಹುದು.

೧೯೯೧ ಜುಲೈನಲ್ಲಿ ಅಪ್ಲೈಡ್, ವಾಣಿಜ್ಯ, ಗ್ರಾಫಿಕ್ಸ್ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಾರಂಭಿಸಲು ಈ ಸಂಸ್ಥೆಗೆ ಮಾನ್ಯತೆ ದೊರೆಯಿತು. ಇದರಿಂದಾಗಿ ಕರ್ನಾಟಕದಲ್ಲಿ ಸ್ನಾತಕೋತ್ತರ ಪದವಿಯನ್ನು ನೀಡುತ್ತಿರುವ ಮೊಟ್ಟಮೊದಲು ಸಂಸ್ಥೆಯೆಂದು ಹೆಸರನ್ನು ಪಡೆದುಕೊಂಡಿದೆ. ಆಗಿನ ಕರ್ನಾಟಕ ಶಿಕ್ಷಣ ಸಚಿವರಾದ ಕೆ.ಎಚ್. ರಂಗನಾಥ ಅವರು ಉದ್ಘಾಟಿಸಿದರು. ಈ ಎಲ್ಲಾ ಬೆಳವಣಿಗೆಗೆ ಕಾರಣರಾದ ಪ್ರೊ. ಅಂದಾನಿಯವರಿಗೆ ಈ ಶ್ರೇಯಸ್ಸು ಸಲ್ಲುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ಬಿ.ಎಫ್.ಎ., ಪದವಿ ಹಾಗೂ ಎಂ.ಎಫ್.ಎ. ಸ್ನಾತಕೋತ್ತರ ಪದವಿಯನ್ನು ಗುಲಬರ್ಗಾ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದು ತರಗತಿಗಳು ನಡೆಯುತ್ತಿದ್ದರೆ ಬಿ.ವಿ.ಎ. ಪದವಿಯನ್ನು ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದು ತರಗತಿಗಳನ್ನು ನಡೆಸುತ್ತಿರುವುದನ್ನು ಕಾಣಬಹುದು.

ಕಲಾನಿಕೇತನ ಸ್ಕೂಲ್ ಆಫ್ ಆರ್ಟ್, ಮೈಸೂರು

ಕಲಾವಿದ ಶ್ರೀ ಎಸ್. ಕಾಳಪ್ಪನವರು ಮೂಲತಃ ಮೈಸೂರಿನವರು, ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಸಂಸ್ಥೆಯಿಂದ ಚಿತ್ರಕಲಾ ಶಿಕ್ಷಣ ಮುಗಿಸಿದರು. ಅಂದಿನ ರಾಜ್ಯಮಟ್ಟದ ಮುಂಚೂಣಿ ಕಲಾವಿದರಲ್ಲಿ ಇವರು ಪ್ರಮುಖರು. ಮೈಸೂರಿನ ಕಲಾವಿದರಿಗೆ ಆ ಘನತೆಯು ಆ ಸಂದರ್ಭದಲ್ಲಿತ್ತು. ಚಿತ್ರಕಲಾ ಕ್ಷೇತ್ರದಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಹಂಬಲ ಛಲ ಹೊಂದಿ ೧೯೫೪ರಲ್ಲಿ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಸಂಸ್ಥೆಯನ್ನು ಪ್ರಾರಂಭಿಸಿದರು. ಅಂದು ೧೯೭೩-೭೪ರಲ್ಲಿ ಕರ್ನಾಟಕ ಸರ್ಕಾರ ಖಾಯಂ ಮಾನ್ಯತೆಯನ್ನು ನೀಡಿತು. ಮೊದಲು ನೂರು ಅಡಿ ರಸ್ತೆಯ ಹಾರ್ಡ್‌ವೀಕ್ ಹೈಸ್ಕೂಲ್‌ನ ವಿಶಾಲವಾದ ಕೊಠಡಿಯಲ್ಲಿ ಆರಂಭವಾಯಿತು.

"ಈ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಸಂಸ್ಥೆಯನ್ನು ಬೆಳೆಸುವ ಮಹಾದಾಸೆ ಹೊಂದಿರುವ ಬಾಬುರಾವ್ ಅವರ ಕನಸಿನಂತೆ ಸ್ವಂತ ಜಾಗ ಮತ್ತು ಕಟ್ಟಡಕ್ಕಾಗಿ ಮೈಸೂರಿನ ನಗರಾಭಿವೃದ್ಧಿ ಪ್ರಾಧಿಕಾರವನ್ನು ಕೋರಲಾಯಿತು. ಸಂಸ್ಥೆಯ ಹಿನ್ನೆಲೆಯನ್ನರಿತ ನಗರಾಭಿವೃದ್ಧಿ ಪ್ರಾಧಿಕಾರವು ೧೯೯೮ರಲ್ಲಿ ಒಂದು ಎಕರೆಯಷ್ಟು ಅಳತೆಯ ಸಿ.ಎ. ೧೫ರ ನಿವೇಶನವನ್ನು ಮೈಸೂರಿನ ವಿಜಯನಗರ ಎರಡನೆಯ ಹಂತದಲ್ಲಿ ನೀಡಿತು. ಇದರಿಂದ ಈ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಗೌರವ ಮತ್ತು ಮನ್ನಣೆಯನ್ನು ಗಳಿಸಿತು".[೩೦]

ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ(೧೯೭೩-೭೪)ಯು ಖಾಯಂ ಮಾನ್ಯತೆ ಪಡೆದ ಅನುದಾನಿತ ಚಿತ್ರಕಲಾ ಶಿಕ್ಷಣ ಒದಗಿಸುವ ಸಂಸ್ಥೆಯಾಗಿದೆ. ಈ ಕಲಾಶಾಲೆಯಲ್ಲಿ ಮೊದಲಿಗೆ ಡಿ.ಟಿ.ಸಿ., ಡಿ.ಎಂ.ಸಿ., ಎ.ಎಂ., ಜಿ.ಡಿ. ಆರ್ಟ್ ಕೋರ್ಸ್‌ಗಳನ್ನು ನಡೆಸುತ್ತಾ

ಬಂದಿದೆ ಹಾಗೂ ಈ ಕಲಾಶಾಲೆ ಈಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರೊಂದಿಗೆ ಸಂಲಗ್ನ ಹೊಂದಿ ಎರಡು ವರ್ಷದ ಕಲಾ ಮೂಲ ಹಾಗೂ ಮೂರು ವರ್ಷದ ಬಿ.ವಿ.ಎ. ಪದವಿ ತರಗತಿಗಳನ್ನು ನಡೆಸುತ್ತಿದೆ.

ವಿಶ್ವವಿದ್ಯಾಲಯದ ಲಲಿತಕಲಾ ಮಹಾವಿದ್ಯಾಲಯ, ದಾವಣಗೆರೆ

೧೯೬೪-೬೫ನೇ ಸಾಲಿನಲ್ಲಿ ಶೈಕ್ಷಣಿಕ ವರ್ಷದಿಂದ ಕರ್ನಾಟಕ ಸರಕಾರವು ಪ್ರಾರಂಭಿಸಿತು. ಈ ಕಲಾಶಾಲೆಯನ್ನು ಬೆಳವಣಿಗೆ ಮಾಡುವ ದೃಷ್ಟಿಯಲ್ಲಿಟ್ಟುಕೊಂಡು ಬ್ರಿಟಿಷರು ಸ್ಥಾಪಿಸಿದ ಸರ್. ಜೆ.ಜೆ.ಕಲಾಶಾಲೆಯ ಮಾದರಿಯಲ್ಲಿ ಬೆಳೆಸಲು ಯೋಚಿಸಿದರು.

ಕಲಾಶಾಲೆಯು ಆರಂಭದ ದಿನಗಳಲ್ಲಿ ಅನೇಕ ತೊಂದರೆಗಳನ್ನು ಅನುಭವಿಸಿತು. ಹೊಸದಾಗಿ ಪ್ರಾರಂಭವಾದಂತಹ ಈ ಚಿತ್ರಕಲಾ ವಿಭಾಗಕ್ಕೆ ಪ್ರಾರಂಭಲ್ಲಿ ವಿದ್ಯಾರ್ಥಿಗಳ ಕೊರತೆ ಎದ್ದು ಕಾಣುತ್ತಿತ್ತು. ಇಲ್ಲಿ ಹೆಚ್ಚಾಗಿ ಬಡತನದ ಹಿನ್ನೆಲೆಯ ಮನೆತನಗಳಿಂದ ಬಂದ ಹಲವಾರು ವಿದ್ಯಾರ್ಥಿ ಆಶ್ರಯವನ್ನು ಕೊಟ್ಟು ಕಲಾಶಿಕ್ಷಣವನ್ನು ನೀಡುತ್ತಿದ್ದರು. ಇಲ್ಲಿ ಕಲಿಯುವಂತಹ ಬಡ ವಿದ್ಯಾರ್ಥಿಗಳಿಗೆ ಕರ್ನಾಟಕ ಸರ್ಕಾರ ಹದಿನೈದು ರೂಪಾಯಿಗಳನ್ನು ಶಿಷ್ಯವೇತನವನ್ನಾಗಿ ನೀಡುತ್ತಿತ್ತು. ಅದೇ ರೀತಿ ದಾವಣಗೆರೆ ನಗರಸಭೆಯ ವತಿಯಿಂದ ಇಪ್ಪತ್ತೈದು ರೂಪಾಯಿಗಳನ್ನು ಶಿಷ್ಯವೇತನವಾಗಿ ನೀಡುತ್ತಿದ್ದರು ಮತ್ತು ಚಿತ್ರಕಲೆಗೆ ಸಂಬಂಧಿಸಿದಂತಹ ಸಾಮಾಗ್ರಿಗಳನ್ನು ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುತ್ತಿದ್ದರು.

'ಮೊದಲು ಅನ್ವಯಿಕ ಕಲೆ ಹಾಗೂ ವರ್ಣಚಿತ್ರಕಲೆಯೆಂಬ ಎರಡು ವಿಭಾಗಗಳನ್ನು ಪ್ರಾರಂಭಿಸಿದರು. ಲಿಥೋಗ್ರಫಿ, ಫೋಟೋಗ್ರಫಿ ಮುಂತಾದ ವಿಷಯಗಳನ್ನು ಕುರಿತಂತೆ ತರಬೇತಿ ನೀಡುತ್ತಿದ್ದರು. ೧೯೯೨ರಲ್ಲಿ ತಾಂತ್ರಿಕ ಇಲಾಖೆಯಿಂದ ಬೇರ್ಪಟ್ಟು ಕುವೆಂಪು ವಿಶ್ವವಿದ್ಯಾಲಯದ ಒಂದು ಘಟಕ ಕಾಲೇಜಾಗಿ ಹಸ್ತಾಂತರಗೊಂಡಿತು. ನಂತರದಲ್ಲಿ ಪದವಿ ತರಗತಿಗಳನ್ನು ತೆಗೆದರು."[೩೧] ಈ ವಿದ್ಯಾಲಯವು ಲಲಿತಕಲಾ ಮಹಾವಿದ್ಯಾಲಯ ರಾಜ್ಯವಲ್ಲದೆ, ರಾಷ್ಟ್ರದಲ್ಲೂ ಹಲವಾರು ಪ್ರಖ್ಯಾತ ಕಲಾವಿದರುಗಳನ್ನು ಬೆಳಸುವಲ್ಲಿ ಪ್ರಮುಖ ಪಾತ್ರವಹಿಸಿದೆ.

ಚಿತ್ರಕಲಾ ಪರಿಷತ್ತು, ಬೆಂಗಳೂರು

"೧೯೬೦ರಲ್ಲಿ ನಲವತ್ತಾರು ಕಲಾವಿದರನ್ನು ಸೇರಿಸಿ ಕಲಾವಿದರಲ್ಲಿ ಸಾಮರಸ್ಯವನ್ನು ಸಾಧಿಸುವ ನಿಟ್ಟಿನಲ್ಲಿ ಶ್ರೀ ನಂಜುಂಡರಾವ್ ನೇತೃತ್ವದಲ್ಲಿ ಮೈಸೂರು ಚಿತ್ರಕಲಾ ಪರಿಷತ್ತು ಜನ್ಮತಾಳಿ ತನ್ಮೂಲಕ ಕಲಾಶಾಲೆಯೊಂದನ್ನು ಸ್ಥಾಪಿಸಿತು."[೩೨] ಈ ಕಲಾಶಾಲೆಯು ಸ್ಥಾಪನೆಯಾದ ನಂತರದಲ್ಲಿ ಹಲವಾರು ಹಿರಿಯ ಕಲಾವಿದರುಗಳು ಸಲಹೆ, ಸಹಾಯ, ಸಹಕಾರಗಳನ್ನು ನೀಡುತ್ತಿದ್ದರು.

"ಕರ್ನಾಟಕ ಸರಕಾರದ ಮತ್ತು ಕೇಂದ್ರ ಲಲಿತಕಲಾ ಅಕಾಡೆಮಿಯ ಗಮನಸೆಳೆಯುವಲ್ಲಿ ಯಶಸ್ವಿಯಾಗಿ ಬೃಹತ್ ಆರ್ಟ್ಸ್ ಕಾಂಪ್ಲೆಕ್ಸ್ ಮತ್ತು ಸ್ವಂತ ಕಟ್ಟಡ ನಿರ್ಮಿಸಲು ದಿ. ದೇವರಾಜ

ಅರಸರು ಮುಖ್ಯಮಂತ್ರಿಗಳಾದ ವೇಳೆಯಲ್ಲಿ ಪ್ರತಿಷ್ಠಿತ ಕುಮಾರಪಾರ್ಕ್ ಜಾಗದಲ್ಲಿ ಸರಕಾರಿ ಜಾಗವನ್ನು ನೀಡಿದರು. ಅದೇ ಭಾಗದಲ್ಲಿ ೧೯೬೪ರಲ್ಲಿ ಚಿತ್ರಕಲಾ ವಿದ್ಯಾಲಯವನ್ನು ಪ್ರಾರಂಭಿಸಿದರು"[೩೩] ಇಂದು ಈ ಕಲಾಶಾಲೆಯು ದೊಡ್ಡ ಹೆಮ್ಮರವಾಗಿ ಬೆಳೆದು ಹಾಗೂ ರಾಜ್ಯದಲ್ಲಿ ಕಲಾಶಿಕ್ಷಣದ ಪದವಿಯನ್ನು ನೀಡುವ ಪ್ರಥಮ ಕಲಾಶಾಲೆ ಇದಾಗಿತ್ತು. ಇಂದು ಸ್ನಾತಕೋತ್ತರ ಮತ್ತು ಉನ್ನತ ಶಿಕ್ಷಣ ವಿಭಾಗದಲ್ಲಿ ಡಾಕ್ಟರೇಟ್ ಪದವಿ ನೀಡುತ್ತಿದ್ದು ಕರ್ನಾಟಕ ಸರಕಾರ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ.

ಕೆನ್ ಕಲಾಶಾಲೆ, ಬೆಂಗಳೂರು

ಮುಂಬೈನಲ್ಲಿ ಕಲಿತು ಬಂದ ಕಲಾವಿದ ಆರ್.ಎಂ. ಹಡಪದವರು ಬೆಂಗಳೂರಿನಲ್ಲಿ ಒಂದು ಕಲಾಶಾಲೆಯನ್ನು ಪ್ರಾರಂಭಿಸಬೇಕೆಂದು ಆಲೋಚಿಸಿ "ಕಲಾ ಗುರುಗಳಾದ ದಂಡಾವತಿಮಠ ಅವರೊಂದಿಗೆ ವಿಷಯವನ್ನು ಪ್ರಸ್ತಾಪಿಸಿದಾಗ ಅವರು ಕಲಾಶಾಲೆಯನ್ನು ಪ್ರಾರಂಭಿಸುವುದು ಸಾಹಸ ಕಷ್ಟದ್ದು"[೩೪] ಎಂಬ ಉತ್ತರವನ್ನು ನೀಡಿದರು. ಈ ಮಾತನ್ನು ಕೇಳಿ ಬೇಸರಪಡದೇ ಶಾಲೆ ಪ್ರಾರಂಭಿಸುವ ಚಿಂತನೆಯನ್ನು ನಡೆಸುತ್ತಿದ್ದರು.

"ಹಡಪದವರಿಗೆ ಶಾಲೆ ಪ್ರಾಂಭಿಸುವುದಕ್ಕಿಂತ ಮುಂಚೆ ಮುಂಬಯಿಗೆ ಹೋಗಬೇಕೆಂಬ ಮನಸ್ಸು ಇತ್ತು. ಅಲ್ಲಿ ವಾಣಿಜ್ಯ ಕಲೆಗೆ ಹೆಚ್ಚಿನ ಬೇಡಿಕೆಯೂ ಇತ್ತು. ಅಲ್ಲಿಯೇ ಉದ್ಯೋಗ ದಲ್ಲಿದ್ದುಕೊಂಡು ಆರಾಮವಾಗಿರುವಂತಹ ಯೋಚನೆಯಲ್ಲಿಯೂ ಇದ್ದರು. ಈ ಸಂದರ್ಭದಲ್ಲಿ ಧಾರವಾಡದ ಹಿಂದಿ ಶಾಲೆಗಳ ಪರಿವೀಕ್ಷಕ ಅಧಿಕಾರಿಗಳಾಗಿದ್ದ ಸಾರಂಗಮಠ ಎಂಬುವರು ಬೆಂಗಳೂರಿನಲ್ಲಿ ಒಂದು ಕೋಣೆಯನ್ನು ಒದಗಿಸಿಕೊಡುತ್ತೇನೆ. ನೀವು ಕಲಾಶಾಲೆಯನ್ನು ಪ್ರಾರಂಭಿಸಬಹುದು ಎಂಬ ಸಲಹೆಯೊಂದಿಗೆ ಹಡಪದವರಿಗೆ ಪ್ರೋತ್ಸಾಹವನ್ನು ನೀಡಿದರು. ಹಡಪದವರು ಯೋಚನೆ ಮಾಡಿ ಬೇರೆಯವರಿಗೆ ಸಲಹೆ ನೀಡುವುದಕ್ಕಿಂತ ತಾವೇ ನಿಂತು ಕಲಾ ಶಾಲೆಯನ್ನು ಪ್ರಾರಂಭಿಸುವುದರಿಂದಾಗಿ ಹೇಳಿದರು. ಕರ್ನಾಟಕ ಕಲಾ ಪರಂಪರೆಯ ಬೆಳವಣಿಗೆಗೆ ನಮ್ಮ ಕೊಡುಗೆಯೂ ಇರುತ್ತದೆ ಎಂಬ ಭಾವನೆ ನನ್ನಲ್ಲಿದ್ದುದರಿಂದ ಶಾಲೆ ಪ್ರಾರಂಭಿಸುವ ಸಾಹಸಕ್ಕೆ ಕೈ ಹಾಕಿದೆ ಎಂದು ಹಡಪದವರು ಹೇಳುತ್ತಾರೆ"[೩೫]

ಕೆನ್ ಕಲಾಶಾಲೆಯು ಮೊದಲಿಗೆ ೧೯೬೭ರಲ್ಲಿ ಪ್ರಾರಂಭವಾಯಿತು. ಎಂ.ವಿ. ಮಿಣಜಗಿಯವರ ಅಧ್ಯಾಪಕರ ಕಲಾ ತರಬೇತಿ ಶಾಲೆ ಅದೇ ವರ್ಷದಲ್ಲಿ ಮುಚ್ಚಲಾಯಿತು. ಮುಂದೇನು ಮಾಡಬೇಕೆಂಬ ಆಲೋಚನೆಯನ್ನು ಮಾಡಿ ಗಾಂಧಿನಗರದಲ್ಲಿನ ಹಿಂದಿ ಶಾಲೆಯ ಮಹಡಿಯ ಮೇಲಿನ ಕೋಣೆಯೊಂದರಲ್ಲಿ ಹಡಪದವರು ಸಮಕಾಲೀನ ಕಲೆಯ ಬಗ್ಗೆ ಕಲಾಸಕ್ತರಿಗೆ ಟ್ಯೂಷನ್ ಮಾದರಿಯಲ್ಲಿ ಹೇಳಿಕೊಡುತ್ತಿದ್ದರು. ಎಸ್.ಎಸ್. ಮುನೋಳಿ, ಪೀಟರ್ ಲೂಯಿಸ್ ಹೀಗೆ ಹಲವಾರು ಕಲಾವಿದರು ಬಂದು ಪ್ರಾತ್ಯಕ್ಷಿಕೆ ಹಾಗೂ ಪಾರದರ್ಶಕ ಚಿತ್ರಗಳನ್ನು ತೋರಿಸುತ್ತಿದ್ದರು.

"ಒಂದು ದಿನ ಹಡಪದವರು ಗಾಂಧಿನಗರದ ತಮ್ಮ ಕೋಣೆಯ ಪಕ್ಕದಲ್ಲೇ ಇದ್ದ ಮುನೋಳಿಯವರು ಕೆಲಸ ಮಾಡುತ್ತಿದ್ದ ಕಛೇರಿಗೆ ಮಧ್ಯಾಹ್ನ ೧೨-೩೦ ಗಂಟೆಗೆ ಹೋಗಿ ನಾನು ಒಂದು ಸ್ವಂತ ಕಲಾಶಾಲೆಯನ್ನು ಪ್ರಾರಂಭಿಸಬೇಕೆಂದು ಮಾಡಿದ್ದೀನಿ ಅದಕ್ಕೆ ಒಂದು ಹೆಸರು ಕೊಡಬೇಕು, ಸಲಹೆ ಕೊಡಿ ಎಂದು ಕೇಳಿದರಂತೆ. ಊಟ ಮಾಡಿಕೊಂಡು ಬಂದು ಯೋಚನೆ ಮಾಡಿದರಂತೆ. ಆವಾಗ ಮುನೋಳಿಯವರು ತಮ್ಮ ಕಛೇರಿಯ ನಿಘಂಟನ್ನು ತೆಗೆದು ತಂದರು. ಮುನೋಳಿಯವರು ೩೦೩ನೇ ಪುಟದಲ್ಲಿ ಬಲಗಡೆ ಭಾಗದಲ್ಲಿ ಬರುವ ಮೊದಲನೆಯ ಶಬ್ದವನ್ನು ಆಯ್ಕೆ ಮಾಡಿಕೋ ಅದೇ ನಿನ್ನ ಸ್ಕೂಲ್‌ನ ಹೆಸರು ಎಂದು ಹಡಪದರಿಗೆ ಹೇಳಿದರು. ಆಗ ೩೦೩ನೇ ಪುಟವನ್ನು ತೆಗೆದಾಗ "Ken" ಎಂಬುದು ಮೊದಲನೇ ಶಬ್ದವಾಗಿತ್ತು. 'Ken'ದ 'ಅರ್ಥ' ಜ್ಞಾನ ಎಂಬುದಾಗಿತ್ತು. ಆಗ ಮುನೋಳಿಯವರು Ken School of Arts ಎಂಬುದು ಶಾಲೆಯ ಹೆಸರು ಎಂದು ಹಡಪದರಿಗೆ ಹೇಳಿದರು"[೨೬]

ಮುನೋಳಿಯವರು ೩೦೩ನೇ ಸಂಖ್ಯೆಯನ್ನೇ ಆಯ್ಕೆ ಮಾಡಿಕೊಳ್ಳಲು ಕಾರಣ "೬" ಅವರ ಅದೃಷ್ಟ ಸಂಖ್ಯೆಯಾಗಿತ್ತು. ಕೆನ್ ಶಾಲೆ ಕಲಾಜ್ಞಾನದ ಹರವನ್ನು ವಿಸ್ತರಿಸುವ ಒಂದು ಸಂಸ್ಥೆಯಾಗಿ ೧೯೬೮ರಲ್ಲಿ ಹಡಪದರಿಂದ ಜನ್ಮತಾಳಿತು. ಇದೊಂದು ಐತಿಹಾಸಿಕ ಮೈಲುಗಲ್ಲಾಯಿತು.

ಹಡಪದರು ಕಲಾಶಾಲೆಯನ್ನು ಪ್ರಾರಂಭಿಸುವಾಗ ಅನೇಕ ಮೂಲಭೂತ ಸಮಸ್ಯೆಗಳು ಎದುರಾದವು. ಶಾಲೆ ನಡೆಸಲು ಒಂದು ಕಟ್ಟಡ ಬೇಕು. ಗಾಂಧಿನಗರದ ಕುರುಬರ ಸಂಘದ ಕಟ್ಟಡದಲ್ಲಿ ಮೊದಲು ಪ್ರಾರಂಭವಾಗಿ ಎರಡು ವರ್ಷದ ನಂತರ ಕಪಾಲಿ ಟಾಕೀಸ್‌ನ ಬಳಿಗೆ, ನಂತರ ಸರ್ಪಂಟೈನ್ ರಸ್ತೆ, ಕುಮಾರಪಾರ್ಕ್‌ಗೆ ಬದಲಾವಣೆಯಾಗಿ ಕಡೆಗೆ ಶೇಷಾದ್ರಿಪುರಂಗೆ ೧೯೭೨ರಲ್ಲಿ ಬಂದು ನೆಲೆಯೂರಿತು. ಆದರೆ ಸ್ವಂತ ಕಟ್ಟಡ ಎಂಬುದು ಇಂದಿಗೂ ಇಲ್ಲದಾಗಿದೆ.

ಹಡಪದರು ಕಲಾ ಚಟುವಟಿಕೆಗಳ ಜೊತೆ ವಿದ್ಯಾರ್ಥಿಗಳು ಇದರ ಜೊತೆಗೆ ಎಲ್ಲಾ ಲಲಿತಕಲೆಗಳ ವಿಷಯಗಳ ಬಗ್ಗೆ ತಿಳಿದುಕೊಳ್ಳಬೇಕು ಎಂಬ ನಿಟ್ಟಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲಿನ ವಿಷಯದ ದಿಗ್ಗಜರ ಸ್ನೇಹವನ್ನು ಗಳಿಸಿಕೊಂಡು ಅವರಿಂದ ಕಲಾಶಾಲೆಯಲ್ಲಿ ಉಪನ್ಯಾಸ, ಚರ್ಚೆ, ವಿಚಾರ-ವಿನಿಮಯ ಜೊತೆಗೆ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರಿಂದ ವಿದ್ಯಾರ್ಥಿಗಳಿಗೆ ಎಲ್ಲಾ ವಿಷಯಗಳು ಮನನವಾಗುತ್ತಿದ್ದವು. ಜೊತೆಗೆ ವಿದ್ಯಾರ್ಥಿಗಳಿಗೆ ಏಕಾಗ್ರತೆಯನ್ನು ಕಾಪಾಡಿಕೊಳ್ಳುವುದು ಹೇಗೆ ಎಂಬುದನ್ನು ಮನನ ಮಾಡಿಕೊಟ್ಟವರು ಕಲಾ ಗುರುಗಳಾದ ಆರ್.ಎಂ. ಹಡಪದ ಅವರು. ಇವರು ದಿವಂಗತರಾದ ಬಳಿಕ ಮಗ ಉಮೇಶ್ ಹಡಪದ ಅವರು ಈ ಕಲಾಶಾಲೆಯ ಪ್ರಾಚಾರ್ಯರಾಗಿ ಚುಕ್ಕಾಣಿ ಹಿಡಿದಿರುವರು. ಸಿ. ಚಂದ್ರಶೇಖರ್, ಶೀಲಾಗೌಡ, ಪ.ಸ. ಕುಮಾರ್, ಮರಿಶಾಮಾಚಾರ್, ಎಚ್.ಎ. ಅನಿಲ್‌ಕುಮಾರ್, ಸುರೇಖಾ, ಜಯಕುಮಾರ, ರಮೇಶ್ಚಂದ್ರ, ಜಿ.ಕೆ. ಶಿವಣ್ಣ, ಡಾ. ಶಿವಾನಂದ ಬಂಟನೂರು,

ಶಾಂತರಾಜ, ಸುಭಾಷ್ ಕಮ್ಮಾರ್ ಮೊದಲಾದ ಪ್ರತಿಭಾವಂತ ಕಲಾವಿದರು, ಕಲಾಬರಹಗಾರರು, ವಿಮರ್ಶಕರು ಈ ಕೆನ್ ಕಲಾಶಾಲೆಯ ವಿದ್ಯಾರ್ಥಿಗಳೆಂಬುದು ಹೆಮ್ಮೆಯ ವಿಚಾರವಾಗಿದೆ.

ಭಾರತೀಯ ಕಲಾಕೇಂದ್ರ ಕಿಲ್ಲಾ, ಧಾರವಾಡ

ಧಾರವಾಡದ ಹಳೆಯ ಕಲಾಶಾಲೆಗಳಲ್ಲಿ ಈ ಶಾಲೆಯು ಒಂದು. ಇದರ ನಿರ್ದೇಶಕರಾಗಿದ್ದ ನಿರಂಜನ ಜಿ. ಬಡಿಗೇರ ಅವರು ಚಿತ್ರಕಲಾ ಶಿಕ್ಷಕರ ಅವಧಿ ಮುಗಿದ ಮೇಲೆ ಸುಮ್ಮನೆ ಕೂಡಲಿಲ್ಲ. ತನ್ನಲ್ಲಿರುವಂತಹ ಚಿತ್ರಕಲಾ ಶಿಕ್ಷಣವನ್ನು ಮುಂದಿನ ಪೀಳಿಗೆಗೆ ತಿಳಿಸಬೇಕು ಎಂಬ ನಿಟ್ಟಿನಲ್ಲಿ ಕಲಾಶಾಲೆಯನ್ನು ಪ್ರಾರಂಭಿಸಬೇಕೆಂದು ಧಾರವಾಡವನ್ನು ಆಯ್ಕೆ ಮಾಡಿಕೊಂಡರು. ಇವರ ಒಂದು ಆಶಯ ತಾನು ಪಡೆದಿರುವ ದೇಶ-ವಿದೇಶಗಳ ಕಲಾ ಜ್ಞಾನದ ಸಂಪತ್ತನ್ನು ಮುಂದಿನ ಪೀಳಿಗೆಗೆ ತಿಳಿಸುವ ಆಸೆಯಿಂದ ೧೯೭೧ರಲ್ಲಿ ಭಾರತೀಯ ಕಲಾ ಕೇಂದ್ರವನ್ನು ಪ್ರಾರಂಭಿಸಿದರು. ಎನ್.ಜಿ. ಬಡಿಗೇರ್ ಅವರು ಚಿತ್ರಕಲಾ ಶಿಕ್ಷಣ ಕೊಡುವಲ್ಲಿ ಮೂವತ್ತು ವರ್ಷದ ಅವರ ಅನುಭವ ಸಾಕಷ್ಟು ನೆರವನ್ನು ಕೊಟ್ಟಿದೆ.

"ಶಾಲೆಯ ಪ್ರಾರಂಭದಲ್ಲಿ ಎಂ.ಆರ್. ಬಾಳಿಕಾಯಿಯವರು ಆ ಶಾಲೆಯ ವಿದ್ಯಾರ್ಥಿಯಾಗಿ ಆರ್ಟ್ ಮಾಸ್ಟರ್ ಪರೀಕ್ಷೆಗೆ ಕುಳಿತು ಪ್ರಥಮ ಸ್ಥಾನವನ್ನು ಗಳಿಸಿ ಈ ಕಲಾ ಕೇಂದ್ರಕ್ಕೆ ಕೀರ್ತಿಯನ್ನು ತಂದರು. ವಿಜ್ಞಾನ ಪದವೀದರರಾದ ಸುರೇಶ್ ಕುಲಕರ್ಣಿಯವರು ಆರ್ಟ್ ಮಾಸ್ಟರ್ ಮುಗಿಸಿ ಅಲ್ಲಿಯೇ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದರು. ನಂತರದಲ್ಲಿ ಶ್ರೀ ಸಿ.ಎಸ್. ಪಾಟೀಲರು, ಕಮ್ಮಾರ ಜೆ.ವಿ. ಅವರ ನಂತರ ಉಮೇಶ್ ಎಸ್. ಹಿರೇಮಠರವರು ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ".[೩೭]

ಶಾಲಾ ಪ್ರಾರಂಭದಲ್ಲಿ ಡಿ.ಟಿ.ಸಿ. ತರಗತಿಗಳನ್ನು ಆರಂಭಿಸಿ, ನಂತರದಲ್ಲಿ ಡಿ.ಎಂ.ಸಿ. ಎ.ಎಂ., ಜಿ.ಡಿ. ತರಗತಿಗಳನ್ನು ನಡೆಸುತ್ತಿದ್ದರು. ೨೦೦೧ರಲ್ಲಿ ಟಿ.ಪಿ. ಇಸ್ಸಾರ್ ವರದಿಯ ಪ್ರಕಾರ ವಿಶೇಷ ಪರಿಣಿತಿ ಚಿತ್ರಕಲೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಬಾಗೂರು ಮಾರ್ಕಂಡೇಯ, ಎಫ್.ವಿ. ಚಿಕ್ಕಮಠ, ಶಿವಾನಂದ ಬಂಟನೂರಂತಹ ಕಲಾವಿದ/ಬರಹಗಾರರು ಈ ಶಾಲೆಯ ವಿದ್ಯಾರ್ಥಿಗಳೆಂಬುದು ಹೆಮ್ಮೆಯ ಸಂಗತಿ.

ಬೆನನ್‌ಸ್ಮಿತ್ ಕಾಲೇಜು ಆಫ್ ಫೈನ್ ಆರ್ಟ್, ಬೆಳಗಾವಿ

ಮಹಾರಾಷ್ಟ್ರ-ಕರ್ನಾಟಕದ ಗಡಿನಾಡೆಂದು ಜನರ ಗಮನಸೆಳೆದ ಬೆಳಗಾವಿ ಚಿತ್ರಕಲಾ ಶಿಕ್ಷಣದ ಕೊರತೆ ಹೊಂದಿರುವುದನ್ನು ಗಮನಿಸಿ ಈ ಭಾಗದಲ್ಲಿ ಪ್ರಪಥಮ ಬಾರಿಗೆ "ಚಿತ್ರಕಲಾ ಶಿಕ್ಷಣದ ತರಬೇತಿ ಶಾಲೆಯನ್ನು ಪ್ರಾರಂಭಿಸಿದ ಕೀರ್ತಿಯು ಮೆಥೋಡಿಸ್ಟ್ ಚರ್ಚ್ ಇನ್ ಇಂಡಿಯಾ ಸಂಸ್ಥೆಯ ಬೆನನ್-ಸ್ಮಿತ್. ಪ್ರೌಢ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಸುಲೋಮನ್ ಚಂದ್ರಸೇನ ಚವ್ಹಾಣರಿಗೆ ಸಲ್ಲುತ್ತದೆ".[೩೮]

೧೯೭೩-೭೪ನೇ ಸಾಲಿನಲ್ಲಿ ಸ್ವಂತ ಕಟ್ಟಡದಲ್ಲಿ ಕರ್ನಾಟಕ ಸರ್ಕಾರದಿಂದ ಮಾನ್ಯತೆಯನ್ನು ಪಡೆದು ಚಿತ್ರಕಲಾ ಶಿಕ್ಷಕ ಹಾಗೂ ವರ್ಣಕಲೆಯಲ್ಲಿ ಡಿಪ್ಲೋಮಾ ತರಗತಿಗಳನ್ನು ಪ್ರಾರಂಭಿಸಲಾಯಿತು. ಸುಲೋಮನ್ ಚಂದ್ರಸೇನ ಚವ್ಹಾಣ ಇವರು ೧೯೭೩ರಿಂದ ೧೯೯೦ರವರೆಗೆ ಪ್ರಾಚಾರ್ಯರಾಗಿ ಸೇವೆಯನ್ನು ಸಲ್ಲಿಸಿ ನಿವೃತ್ತಿ ಹೊಂದಿದ್ದರು. ಈ ಸಂಸ್ಥೆಯಲ್ಲಿ ಡಿ.ಟಿ.ಸಿ. ಡಿ.ಎಂ.ಸಿ., ಎ.ಎಂ. ತರಬೇತಿ ಪಡೆದು ವಿದ್ಯಾರ್ಥಿಗಳು ಜಿಲ್ಲೆ ಮತ್ತು ಗಡಿಭಾಗದ ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳಲ್ಲಿ ಚಿತ್ರಕಲಾ ಕ್ಷೇತ್ರದಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಇನ್ನೂ ಕೆಲವರು ಸ್ವಯಂ ಉದ್ಯೋಗವನ್ನು ಕೈಗೊಂಡು ಹೆಸರುವಾಸಿಯಾಗಿದ್ದಾರೆ. ಕೆಲವರು ವಿದೇಶಗಳಲ್ಲಿ ಔದ್ಯೋಗಿಕ ಹಾಗೂ ಶೈಕ್ಷಣಿಕ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಸ್ಥೆಯಲ್ಲಿ ಮೊದಲಿಗೆ ಪ್ರಾಚಾರ್ಯರಾಗಿ ಬಂದವರು ಡಾ. ಸುಲೋಮನ್, ಸಿ. ಚವ್ಹಾಣ ನಂತರ ಶ್ರೀ ಅನಿಲ್‌ಪ್ರಕಾಶ್ ೧೯೯೨ನೇ ಸಾಲಿನಲ್ಲಿ ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರ ದಕ್ಷ ಹಾಗೂ ಕ್ರಿಯಾಶೀಲತೆಯ ಅವಧಿಯಲ್ಲಿ ಶಾಲೆಯು ಪ್ರಗತಿಯನ್ನು ಕಂಡಿದೆ. ಶೈಕ್ಷಣಿಕ ಗುಣಮಟ್ಟದಲ್ಲಿ ಸುಧಾರಣೆಯನ್ನು ಹಾಗೂ ವಿದ್ಯಾರ್ಥಿಗಳ ಪ್ರಗತಿಯ ಹಿತದೃಷ್ಟಿಯಿಂದ ಶಾಲೆಗೆ ಬೇಕಾಗುವ ಎಲ್ಲಾ ಅವಶ್ಯಕತೆಗಳನ್ನು ಪೂರೈಸುತ್ತಾ ಬಂದಿದ್ದಾರೆ.

ಕಲಾಶಾಲೆಯ ಸರ್ವಾಂಗೀಣ ಬೆಳವಣಿಗೆಗೆ ಪ್ರಾಚಾರ್ಯರು ಹಲವಾರು ಕ್ರಮಗಳನ್ನು ಕೈಗೊಂಡರು. ಇದುವರೆಗೂ ನಡೆಯುತ್ತಿದ್ದ ಐದು ವರ್ಷದ ಎ.ಎಂ., ಜಿ.ಡಿ. ತರಗತಿಗಳ ಜೊತೆಗೆ ಅನ್ವಯಿಕ ಕಲೆಯ ತರಗತಿಗಳನ್ನು ೧೯೯೭ರಲ್ಲಿ ಆರಂಭಿಸಿದರು. ಇದರಿಂದಾಗಿ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಿ ವಿದ್ಯಾರ್ಥಿಗಳಲ್ಲಿ ಹೊಸ ಆಶಾಕಿರಣ ಮೂಡಿದಂತಾಯಿತು. ವಿದ್ಯಾರ್ಥಿಗಳಿಗೆ ಕಲಾ ಶಿಕ್ಷಣದಲ್ಲಾಗುತ್ತಿರುವ ಬದಲಾವಣೆಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಕಾಲಕಾಲಕ್ಕೆ ಕಲಾಶಿಬಿರ, ಕಲಾ ಕಾರ್ಯಾಗಾರ, ಪ್ರದರ್ಶನ, ಪ್ರಾತ್ಯಕ್ಷಿಕೆ, ವಿಚಾರ ಸಂಕಿರಣ ಹಾಗೂ ಗ್ರಾಫಿಕ್ ಶಿಬಿರ, ನಿಸರ್ಗಚಿತ್ರ ರಚನಾ ಶಿಬಿರಗಳು, ಶೈಕ್ಷಣಿಕ ಪ್ರವಾಸ, ಚಿತ್ರಸಂತೆ, ಕಲಾಗ್ಯಾಲರಿಗಳಿಗೆ ಭೇಟಿ ನೀಡುವ ಮೂಲಕ ವಿದ್ಯಾರ್ಥಿಗಳಲ್ಲಿ ಕಲಾ ಜಗತ್ತಿನ ಒಳ-ಹೊರಗುಗಳನ್ನು ತಿಳಿಯಪಡಿಸುವ ಕ್ರಮಗಳನ್ನು ಮಾಡಿದ್ದಾರೆ.

ಹಿರಿಯ ಕಲಾವಿದರಾದ ಡಾ. ಜೆ.ಎಸ್. ಖಂಡೇರಾವ್ ಇನ್ನೂ ಅನೇಕ ಕಲಾವಿದರು ರಚಿಸಿದ ಕಲಾಕೃತಿಗಳು ಈ ಕಾಲೇಜಿನ ಕಲಾ ಗ್ಯಾಲರಿಯಲ್ಲಿ ಸಂಗ್ರಹಗೊಂಡಿವೆ. ಕಾಲೇಜಿನಲ್ಲಿ ನಡೆದ ಕಲಾ ಶಿಬಿರದಲ್ಲಿ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ನಾಡೋಜ ಪಾಟೀಲ ಪುಟ್ಟಪ್ಪನವರು, ಕನ್ನಡ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ ಇನ್ನೂ ಹಲವಾರು ಸಾಹಿತಿಗಳು ಹಾಗೂ ಚಿತ್ರ ಕಲಾವಿದರು, ರಾಜಕಾರಣಿಗಳು ಕಲಾಶಾಲೆಗೆ ಭೇಟಿ ನೀಡಿ ಶಾಲೆಯ ಪ್ರಗತಿ ಹಾಗೂ ಗುಣಮಟ್ಟದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನಂತರದಲ್ಲಿ ಪ್ರಾಚಾರ್ಯರಾಗಿ ಬಂದಂತಹ ಪ್ರಹ್ಲಾದ ಬಾಳಪ್ಪ ಸಾಬಣ್ಣವರ ವಿದ್ಯಾರ್ಥಿಗಳ ಬೌದ್ಧಿಕ ಹಸಿವನ್ನು ನೀಗಿಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ

ಬಂದಿದ್ದಾರೆ. ಪ್ರಸ್ತುತ ಬೆನನ್‌ಸ್ಮಿತ್ ಕಲಾಶಾಲೆಯಲ್ಲಿ ಎರಡು ವರ್ಷಗಳ ಕಲಾ ಮೂಲ ತರಗತಿಗಳು ಮೂರು ವರ್ಷದ ಬಿ.ವಿ.ಎ. ಪದವಿ ತರಗತಿಗಳು ಕನ್ನಡ ವಿಶ್ವವಿದ್ಯಾಲಯ ಮಾನ್ಯತೆಯೊಂದಿಗೆ ನಡೆಯುತ್ತಿವೆ. ಇದರ ಜೊತೆಗೆ ಅನ್ವಯಿಕ ಕಲೆ ಹೀಗೆ ಪ್ರಾರಂಭವಾದಂತಹ ಶಾಲೆ ಹಂತ ಹಂತವಾಗಿ ನಡಿಗೆಯನ್ನು ಪ್ರಾರಂಭಿಸಿ ಕಲಾಶಾಲೆಯು ನಾಡಿಗೆ ವಿಶಿಷ್ಟವಾದ ಕೊಡುಗೆಯನ್ನು ನೀಡುತ್ತಾ ಬಂದಿದೆ.

ಸರಕಾರಿ ಚಿತ್ರಕಲಾ ಮಹಾವಿದ್ಯಾಲಯ, ಧಾರವಾಡ

ಸರಕಾರಿ ಚಿತ್ರಕಲಾ ಮಹಾವಿದ್ಯಾಲಯವು ಡಯಟನ್ ಅಂಗ ಸಂಸ್ಥೆಯಾಗಿದ್ದು, ಮುಂಬೈ ಪ್ರಾಂತವಿದ್ದಾಗ ಶ್ರೀಮಾನ ಕಾರಡಗಿಯವರು ಉನ್ನತ ಚಿತ್ರಕಲಾ ಪರೀಕ್ಷೆಗಳನ್ನು ನಡೆಸುತ್ತಿದ್ದರು. ಗಂಡುಮಕ್ಕಳ ಟ್ರೇನಿಂಗ್ ಕಾಲೇಜಿನ ಉಪನ್ಯಾಸಕರಾಗಿದ್ದ ಶ್ರೀ ಎಂ.ಸಿ. ತೆಂಬದರವರು ಹಾಗೂ ಪ್ರಾಚಾರ್ಯರಾಗಿದ್ದ ಶ್ರೀ ಹ.ಗ. ಜೋಶಿಯವರ ಶ್ರಮದ ಫಲವಾಗಿ ಸರಕಾರಿ ಚಿತ್ರಕಲಾ ಶಾಲೆಯನ್ನು ಪ್ರಾರಂಭಿಸಲಾಯಿತು.[೫೯]

೧೯೭೫ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಅನುಮತಿಯಿಂದ ಐದು ವರ್ಷಗಳ ಡ್ರಾಯಿಂಗ್ ಹಾಗೂ ಪೇಂಟಿಂಗ್ ವರ್ಗಗಳು ಪ್ರಾರಂಭವಾದವು. ಮೊದಲು ಶ್ರೀ ಎಂ.ಆರ್. ಬಾಳೇಕಾಯಿ ಚಿತ್ರಕಲಾ ಶಿಕ್ಷಕರಿಂದ ಪ್ರಾರಂಭಗೊಂಡ ಕಲಾಶಾಲೆ ಆನಂತರ ಬಂದ ಎಲ್ಲಾ ಪ್ರಾಚಾರ್ಯರ ಪ್ರಯತ್ನದಿಂದಾಗಿ ಬೇರೆ ಬೇರೆ ಕಡೆಗಳಿಂದ ಇಂದು ಏಳೆಂಟು ಚಿತ್ರಕಲಾ ಶಿಕ್ಷಕರ ಹುದ್ದೆಗಳನ್ನು ಸ್ಥಳಾಂತರಿಸಿಕೊಂಡು ಅಧ್ಯಾಪಕರ ಕೊರತೆಯನ್ನು ನೀಗಿಸಲಾಗಿತ್ತು. ೧೯೮೧ರಲ್ಲಿ ಚಿತ್ರಕಲಾ ಶಿಕ್ಷಕರ ತರಬೇತಿ(ಡಿ.ಎಂ.ಸಿ.)ಗಳನ್ನು ಪ್ರಾರಂಭ ಮಾಡಲು ಶಿಕ್ಷಣ ಇಲಾಖೆಯು ಆದೇಶ ಮಾಡಿತು. ಆಗಿನಿಂದ ಈ ಮಹಾವಿದ್ಯಾಲಯವು ವಿಶಿಷ್ಟ ಹಾಗೂ ಆಕರ್ಷಕ ವಿದ್ಯಾಸಂಸ್ಥೆಯಾಗಿ ಬೆಳೆದಿದೆ. ಉತ್ತರ ಕರ್ನಾಟಕದ ಕಲಾ ವಿದ್ಯಾರ್ಥಿಗಳಿಗೆ ಕೇಂದ್ರಬಿಂದುವಾಗಿದೆ. ಸಂಸ್ಥೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಹಿಂದಿನ ಜಿಲ್ಲಾಧಿಕಾರಿಗಳಾಗಿದ್ದ ಸನ್ಮಾನ್ಯ ಶ್ರೀ ಸಂಜೀವಕುಮಾರ ಅವರು ಎರಡು ವರ್ಗಗಳ ಕೋಣೆಗಳನ್ನು ಕಲಾ ಗ್ಯಾಲರಿಯನ್ನಾಗಿ ಮಾರ್ಪಡಿಸಿ ಕಲಾ ವಿದ್ಯಾರ್ಥಿಗಳ ಕಲಾವಿದರ ಚಿತ್ರಕಲಾ ಕೃತಿಗಳ ಪ್ರದರ್ಶನಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಕರ್ನಾಟಕ ಮಲೆನಾಡು ಅಭಿವೃದ್ಧಿ ಪ್ರಾಧಿಕಾರದಿಂದ ಒಂದು ವರ್ಗದ ಕೊಠಡಿಯು ನಿರ್ಮಿಸಲ್ಪಟ್ಟಿತು.

೧೯೯೯ರಲ್ಲಿ ಕರ್ನಾಟಕ ಸರಕಾರವು ಈ ಮಹಾವಿದ್ಯಾಲಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ದಿಂದ ಚಿತ್ರಕಲೆ ಪದವಿ ವರ್ಗಗಳನ್ನು ಪ್ರಾರಂಭಿಸಲು ಅನುಮತಿಸಿದಾಗಿನಿಂದ ಬಿ.ಎಫ್.ಎ. ವರ್ಗಗಳು ನಡೆಯುತ್ತಿದ್ದು ಪ್ರತಿ ವರ್ಷವೂ ಅಂತಿಮ ಬಿ.ಎಫ್.ಎ. ಪದವಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ರ‍್ಯಾಂಕ್‌ಗಳು ಬರುತ್ತಿದ್ದು ಸಂಸ್ಥೆಯ ಯಶಸ್ಸಿಗೆ ಕಾರಣವಾಗಿದೆ. ೨೦೦೧ ರಿಂದ ಟಿ.ಪಿ. ಇಸ್ಸಾರ್ ವರದಿಯು ಜಾರಿ ಆದ ನಂತರದಲ್ಲಿ ಸರ್ಕಾರದ ಆದೇಶದಂತೆ

ಪ್ರಥಮ ಮತ್ತು ದ್ವಿತೀಯ ದೃಶ್ಯಕಲಾ ಮೂಲ ತರಗತಿಗಳು ಹಾಗೂ ಮೂರು, ನಾಲ್ಕು ಐದನೆಯ ವರ್ಷದ ವಿಶೇಷ ಪರಿಣತಿ ಡಿಪ್ಲೊಮಾ ತರಗತಿಗಳು ಕನ್ನಡ ವಿಶ್ವವಿದ್ಯಾಲಯದ ಅಡಿಯಲ್ಲಿ ನಡೆಯುತ್ತಿದ್ದವು.

ಕಲಾ ಮಹಾವಿದ್ಯಾಲಯದಲ್ಲಿ ಉತ್ತಮ ಅನುಭವಿಕ ಶಿಕ್ಷಕ ವೃಂದ. ಸಾಕಷ್ಟು ಪಾಠೋಪಕರಣಗಳು ಹಾಗೂ ಪೀಠೋಪಕರಣಗಳು ವರ್ಗದ ಕೊಠಡಿಗಳು ಕಂಪ್ಯೂಟರ್ ಲ್ಯಾಬ್ ಗ್ರಾಫಿಕ್ ರೂಂ ಸುಸಜ್ಜಿತವಾಗಿ ರೂಪಿಸಿದ್ದಾರೆ. ಆರ್ಟ್ ಗ್ಯಾಲರಿ ಸಭಾಂಗಣ ಸಾಕಷ್ಟು ಕಲಾ ಗ್ರಂಥಗಳನ್ನು ಹೊಂದಿದ ಗ್ರಂಥಾಲಯದ ವ್ಯವಸ್ಥೆಯನ್ನು ವಿದ್ಯಾರ್ಥಿಗಳಿಗೆ ಮಾಡಿದ್ದು ತುಂಬಾ ಅನುಕೂಲತೆಗಳನ್ನು ಒದಗಿಸಿಕೊಟ್ಟಿದ್ದಾಗಿದೆ.

ಚಿತ್ರಕಲಾ ಮಹಾವಿದ್ಯಾಲಯದಿಂದ ತರಬೇತಿಗೊಂಡ ವಿದ್ಯಾರ್ಥಿಗಳು ರಾಷ್ಟ್ರೀಯ ಕಲಾವಿದರಾಗಿ ಬೆಳೆದಿದ್ದಾರೆ. ಹಲವರು ಕಲಾ ಮಹಾವಿದ್ಯಾಲಯದ ಉಪನ್ಯಾಸಕರಾಗಿ ಸರಕಾರಿ ಅನುದಾನಿತ ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಕರಾಗಿ ಅಲ್ಲದೆ ಕಂಪ್ಯೂಟರ್ ಗ್ರಾಫಿಕ್ಸ್‌ನಲ್ಲಿಯೂ ಕೂಡಾ ಹೆಸರು ಮಾಡಿದ್ದಾರೆ. ರಾಷ್ಟ್ರಮಟ್ಟದ ನಿಯತಕಾಲಿಕೆ ವಾರಪತ್ರಿಕೆಗಳಲ್ಲಿ ಕಲಾವಿನ್ಯಾಸಕರಾಗಿ ಹೆಸರು ಮಾಡಿದ್ದಾರೆ.

ವಾಣಿ ಚಿತ್ರಕಲಾ ಕಾಲೇಜು, ಚಿಕ್ಕನಾಯಕನಹಳ್ಳಿ

"ಶ್ರೀಯುತ ಸಿ.ಕೆ. ನಾರಾಯಣ ಅವರು ಚಿತ್ರಕಲಾ ಶಿಕ್ಷಣವನ್ನು ಬೆಂಗಳೂರಿನಲ್ಲಿ ಡಿ.ಟಿ.ಸಿ. ಹಾಗೂ ಮುಂಬೈಯಲ್ಲಿ ಎ.ಎಂ. ಮತ್ತು ಜಿ.ಡಿ. ತರಗತಿಗಳನ್ನು ತುಂಬಾ ಕಷ್ಟ-ನಷ್ಟಗಳನ್ನು ಅನುಭವಿಸಿ ಅಭ್ಯಾಸ ಮಾಡಿ ಪಡೆದು ಬಂದಿದ್ದರು. ಹಾಗಾಗಿ ಗ್ರಾಮಾಂತರ ಪ್ರದೇಶದ ಪ್ರತಿಭಾವಂತ ಬಡವಿದ್ಯಾರ್ಥಿಗಳು ದೂರದ ಬೆಂಗಳೂರು ಮತ್ತು ಮುಂಬೈ ನಗರಗಳಿಗೆ ತೆರಳಿ ಚಿತ್ರಕಲೆಯನ್ನು ಅಭ್ಯಾಸ ಮಾಡುವುದು ಕಷ್ಟಸಾಧ್ಯವಾಗಿತ್ತು. ಅಂದಿನ ಕಾಲಕ್ಕೆ ತುಮಕೂರು ಜಿಲ್ಲಾ ಕೇಂದ್ರದಲ್ಲಿಯೂ ಒಂದು ಚಿತ್ರಕಲಾ ಶಾಲೆ ಇರಲಿಲ್ಲ. ಇದನ್ನು ಮನಗಂಡ ಶ್ರೀಯುತ ಸಿ.ಕೆ. ನಾರಾಯಣರವರು ಚಿಕ್ಕನಾಯಕನಹಳ್ಳಿಯಲ್ಲೇ ಒಂದು ಚಿತ್ರಕಲಾ ಶಾಲೆಯನ್ನು ೧೯೭೫ರಲ್ಲಿ ಪ್ರಾರಂಭಿಸಿದರು".[೪೦]

ಪ್ರಾರಂಭದಲ್ಲಿ ಸಿ.ಕೆ. ನಾರಾಯಣ ಅವರು ಪ್ರಾಚಾರ್ಯರಾಗಿ ಶಾಲಾ ನಿರ್ಮಾಣಕರಾಗಿ ಕಾರ್ಯವನ್ನಾರಂಭಿಸಿದರು. ಮೊದಲಿಗೆ ಡಿ.ಟಿ.ಸಿ., ಡಿ.ಎಂ.ಸಿ., ಎ.ಎಂ. ಜಿ.ಡಿ. ತರಗತಿಗಳನ್ನು ಹಂತ ಹಂತವಾಗಿ ನಡೆಸಿಕೊಂಡು ಬಂದರು. ೧.೯.೧೯೮೭ರಲ್ಲಿ ಸಿ.ಕೆ. ಭಾಗ್ಯಶ್ರೀಯವರು ಪ್ರಾಚಾರ್ಯರಾಗಿ ಬಂದರು. ೨೦೦೨-೨೦೦೩ರಲ್ಲಿ ಪ್ರಥಮ ಮತ್ತು ದ್ವಿತೀಯ ತರಗತಿಗಳು ಹಾಗೂ ಪ್ರಥಮ, ದ್ವಿತೀಯ, ಮೂರನೆಯ ವಿಶೇಷ ಪರಿಣಿತಿ ಡಿಪ್ಲೋಮಾ ತರಗತಿಗಳನ್ನು ಆರಂಭಿಸಿದರು. ೨೦೧೫-೨೦೧೬ನೇ ಸಾಲಿನಲ್ಲಿ ಪ್ರಥಮ ವರ್ಷದ ಬಿ.ವಿ.ಎ. ೨೦೧೬-೨೦೧೭ನೇ ಸಾಲಿನಲ್ಲಿ ದ್ವಿತೀಯ ವರ್ಷ ಬಿ.ವಿ.ಎ. ತರಗತಿಗಳು ನಡೆಯುತ್ತಿರುವುದನ್ನು ಗಮನಿಸಬಹುದು. ಕಳೆದ ೪೨ ವರ್ಷಗಳಿಂದ ಈ ನಮ್ಮ ಚಿತ್ರಕಲಾ ಶಾಲೆಯಲ್ಲಿ ನೂರಾರು

ಮಂದಿ ವಿದ್ಯಾರ್ಥಿಗಳು ಚಿತ್ರಕಲೆಯನ್ನು ಅಭ್ಯಾಸ ಮಾಡಿ ಪ್ರತಿಭಾನ್ವಿತರಾಗಿ ಹಲವಾರು ಕ್ಷೇತ್ರಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇದು ಈ ಕಲಾಶಾಲೆಗೆ ಹೆಮ್ಮೆಯ ವಿಷಯವಾಗಿದೆ.

ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ, ಗದಗ

ಗದಗ - ಬೆಟಗೇರಿ ಈ ಭಾಗವೂ ಸಾಂಸ್ಕೃತಿಕವಾಗಿ ಹಿಂದುಳಿದಿದ್ದರೂ ಬಹು ಶ್ರೀಮಂತ ಪ್ರಾಚೀನ ಸಂಸ್ಕೃತಿಯನ್ನು ಹೊಂದಿದೆ. ಆ ದಿನಗಳಲ್ಲಿ ಕೆಲವೇ ಶಿಕ್ಷಣ ಸಂಸ್ಥೆಗಳು ಇದ್ದವು. ಇದನ್ನು ತಿಳಿದ ಆ ಭಾಗದ ಹಿರಿಯ ಕಲಾವಿದರು, ಗಣ್ಯವ್ಯಕ್ತಿಗಳು ಒಟ್ಟಿಗೆ ಸೇರಿ ಬೆಟಗೇರಿಯಲ್ಲಿ ಒಂದು ಚಿತ್ರಕಲಾ ಶಿಕ್ಷಣವನ್ನು ಪ್ರಾರಂಭಿಸಿದರು. ಜಾಡಗೌಡರ್ ತುಕ್ಕಾರವರು ಅಧ್ಯಕ್ಷರಾಗಿ, ಕಲಾವಿದರಾಗಿ, ಕಲಾಶಿಕ್ಷಕರಾಗಿದ್ದರಿಂದ ಹಾಗೂ ಕಲೆಗೆ ಸಂಬಂಧಿಸಿದಂತೆ ಉನ್ನತ ಶಿಕ್ಷಣ ಪಡೆದುಕೊಂಡಿದ್ದರಿಂದ ೧೯೮೦-೮೧ನೇ ಸಾಲಿನಲ್ಲಿ ಕಲಾಶಾಲೆ ಪ್ರಾರಂಭ ಮಾಡುವುದಕ್ಕೆ ಕಾರಣರಾದರು.

ಬೆಟಗೇರಿ ಭಾಗದಲ್ಲಿ ಕಲಾ ವಾತಾವರಣ, ಕಲಾ ಸಂಸ್ಕೃತಿ ನಿರ್ಮಾಣ ಮಾಡಬೇಕೆಂದು ಪ್ರಾರಂಭಿಸಲಾದ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ ಪ್ರಾರಂಭದ ವರ್ಷದಲ್ಲಿ ನಲವತ್ತೈದು ವಿದ್ಯಾರ್ಥಿಗಳ ಪ್ರವೇಶದೊಂದಿಗೆ ಶ್ರೀ ಎಂ.ಆರ್. ಭಗವಾನ್‌ರವರು ಪ್ರಾಚಾರ್ಯರಾಗಿ ನೇಮಕ ಗೊಂಡರು. ಅಂದಿನ ಚಿತ್ರಕಲಾ ಶಿಕ್ಷಕರ ತರಬೇತಿ ತರಗತಿಗಳಾದ ಡಿ.ಟಿ.ಸಿ.(ಡ್ರಾಯಿಂಗ್ ಟೀಚರ್ ಕೋರ್ಸ್), ಮೂರ್ತಿಶಿಲ್ಪ(ಮಾಡೆಲಿಂಗ್) ಡಿಪ್ಲೋಮಾ ತರಗತಿಗಳನ್ನು ನಡೆಸಲಾಗುತ್ತಿತ್ತು. ೧೯೮೧ರಿಂದ ಹೊಸ ಪಠ್ಯಾವಳಿಯು ಸರಕಾರದಿಂದ ಅನುಷ್ಠಾನಕ್ಕೆ ಬಂದು ಒಂದು ವರ್ಷದ ಡಿ.ಟಿ.ಸಿ. ಬದಲಾಗಿ ಎರಡು ವರ್ಷದ ಡಿ.ಎಂ.ಸಿ.(ಡ್ರಾಯಿಂಗ್ ಮಾಸ್ಟರ್ ಸರ್ಟಿಫಿಕೇಟ್) ತರಗತಿಗಳು ಪ್ರಾರಂಭವಾದವು. ಅಲ್ಲಿ ಕಲಾಶಿಕ್ಷಣ ಪಡೆದ ಅನೇಕ ವಿದ್ಯಾರ್ಥಿಗಳು ಇಂದು ಕಲಾಶಿಕ್ಷಕರಾಗಿ ರೂಪುಗೊಂಡಿದ್ದಾರೆ.

೨೦೦೧ರಲ್ಲಿ ಟಿ.ಪಿ. ಇಸ್ಸಾರ್ ವರದಿ ಜಾರಿಗೆ ಬಂದ ಮೇಲೆ ವಿಶೇಷ ಪರಿಣಿತಿ ಪ್ರಾರಂಭವಾಯಿತು. ಈ ಹಂತದಲ್ಲಿ ಕಲಾಶಾಲೆಯನ್ನು ಮುಚ್ಚುವ ಹಂತಕ್ಕೆ ಬಂದಿತು. ಆದರೆ ಸಿಬ್ಬಂದಿ ವರ್ಗ ೨೦೦೬ರಲ್ಲಿ ಕಲಾಶಾಲೆಯನ್ನು ವಿದ್ಯಾದಾನ ಸಮಿತಿಗೆ ಹಸ್ತಾಂತರ ಮಾಡಲಾಯಿತು. ಇದನ್ನು ನಡೆಸಿಕೊಂಡು ಹೋಗಲು ಪ್ರೊ. ಎಸ್.ಪಿ. ಸಂಕನೂರು ಅವರು ಅನುಕೂಲ ಮಾಡಿಕೊಟ್ಟರು. ಇದೀಗ ಬಿವಿಎ ಪ್ರಥಮ, ದ್ವಿತೀಯ, ತೃತೀಯ ಪದವಿ ತರಗತಿಗಳು ನಡೆಯುತ್ತಿರುವುದನ್ನು ಗಮನಿಸಬಹುದು. ಈ ದಿನಗಳಲ್ಲಿ ಉನ್ನತ ಮಟ್ಟದಲ್ಲಿ ಕಲಾಶಿಕ್ಷಣವನ್ನು ನೀಡುತ್ತಿರುವ ಶಾಲೆಯಾಗಿದೆ. ಇಲ್ಲಿರುವಂತಹ ಶಿಕ್ಷಕರೆಲ್ಲರೂ ಉನ್ನತ ಪದವಿಯನ್ನು ಪಡೆದುಕೊಂಡಿದ್ದಾರೆ. ಇದರಿಂದಾಗಿ ಕಲಾಶಾಲೆಯ ಉತ್ತಮವಾಗಿ ನಡೆದುಕೊಂಡು ಹೋಗುತ್ತಿದೆ.

ಶ್ರೀ ಎಂ.ಆರ್. ಬಾಳೇಕಾಯಿ ಆರ್ಟಿಸ್ಟ್ ಡಾ. ವಿಲಸನ್, ಜೆ.ಎಸ್. ಖಂಡೇರಾವ್, ಡಿ.ಎಂ. ಬಡಿಗೇರ್, ಬಾಬುರಾವ್ ನಡೋಣಿ, ಕೆ.ವಿ. ಕುಂದಗೋಳ, ವಾಜಿದ್, ಸಾಜಿದ್

ಪಿ.ಬಿ. ಹರಸೂರು ಇನ್ನೂ ಅನೇಕ ಹಿರಿಯ ಹಾಗೂ ಕಿರಿಯ ಕಲಾವಿದರು ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಗಳನ್ನು ನೀಡಿದ್ದಾರೆ. ಹಿರಿಯ ಕಲಾವಿದರಾದ ನಾಡೋಜ ವಿ.ಟಿ. ಕಾಳೆ, ಚಿ.ಸು. ಕೃಷ್ಣಶೆಟ್ಟಿ ಇವರಿಗೆ ಈ ಕಲಾ ಶಾಲೆಯಿಂದ ಸನ್ಮಾನವನ್ನು ಮಾಡಿದ್ದಾರೆ. ಡಾ. ಲಕ್ಷ್ಮಿದೇವಿ ಗವಾಯಿ, ವಿಠ್ಠಲ ರೆಡ್ಡಿ, ಚುಳುಕಿ, ಪ್ರತಾಪ್ ಬಹುರೂಪಿ, ಸಿ.ಡಿ. ಜಟ್ಟಣ್ಣವರ, ಹೊಸಹಳ್ಳಿ ಮಠ ಇವರೆಲ್ಲ ಸನ್ಮಾನಿತರು. ಅಕಾಡೆಮಿಯಿಂದ ಹಲವು ಬಾರಿ ಕಲಾಶಿಬಿರವನ್ನು ಮಾಡಿದ್ದಾರೆ. ರಾಜ್ಯಮಟ್ಟದ ಕಾಲೇಜು ಸಂಯೋಗದಲ್ಲಿ ಚಿತ್ರ ಕ್ಯಾಂಪ್ ನಡೆದವು. ಶಿಲ್ಪಕಲಾ ಶಿಬಿರಗಳನ್ನು ಅಕಾಡೆಮಿ ಮತ್ತು ವಿದ್ಯಾದಾನ ಶಿಕ್ಷಣ ಸಮಿತಿಯ ವತಿಯಿಂದ ನಡೆಸಿಕೊಟ್ಟಿದ್ದಾರೆ.

ನಿರ್ಮಲ ಚಿತ್ರಕಲಾ ಮಹಾವಿದ್ಯಾಲಯ, ಹಾಸನ

೧೯೮೧ರಲ್ಲಿ ಶ್ರೀ ವೀರೇಗೌಡರು ಹಾಸನದಲ್ಲಿ ನಿರ್ಮಲ ಚಿತ್ರಕಲಾ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು. ಕೆ.ಜಿ ನಂಜೇಗೌಡರು ಆಡಳಿತ ಮಂಡಳಿಯ ಕಾರ್ಯದರ್ಶಿಗಳಾಗಿ ಚಿತ್ರಕಲಾ ಶಾಲೆಯನ್ನು ಬೆಳೆಸಿದರು. ಮೊದಲಿಗೆ ಡಿ.ಎಂ.ಸಿ, ಎ.ಎಂ., ಜಿ.ಡಿ, ತರಗತಿಗಳು ನಂತರದಲ್ಲಿ ವಿಶೇಷ ಪರಿಣಿತಿ ಚಿತ್ರಕಲೆ ಪ್ರಸ್ತುತ ಸಂದರ್ಭದಲ್ಲಿ ಕಲಾಮೂಲ ಪ್ರಥಮ, ದ್ವಿತೀಯ ಹಾಗೂ ಬಿ.ವಿ.ಎ ಪದವಿ ತರಗತಿಗಳನ್ನು ನಡೆಸುತ್ತಿದ್ದಾರೆ. ಪ್ರಾಚಾರ್ಯರಾಗಿ ಆರ್.ಸಿ.ಕಾರದಕಟ್ಟೆಯವರು ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿ ಕಲಿತ ಹಲವಾರು ವಿದ್ಯಾರ್ಥಿಗಳು ಸರಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ, ಇನ್ನೂ ಕೆಲವರು ಕಲಾವಿದರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇಲ್ಲಿಯ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡು ಸಂಸ್ಥೆಗೆ ಹೆಸರು ತಂದಿದ್ದಾರೆ.

ರವೀಂದ್ರ ಕಲಾನಿಕೇತನ, ತುಮಕೂರು

ರವೀಂದ್ರ ಕಲಾನಿಕೇತನವು ೧೯೮೧ರಲ್ಲಿ ಪ್ರಾರಂಭವಾಯಿತು. ಆ ದಿನಗಳಲ್ಲಿ ಹಲವು ಉದ್ದೇಶಗಳನ್ನಿಟ್ಟುಕೊಂಡು ಆರಂಭವಾಯಿತು. ಡಾ. ಜಿ.ಎಸ್. ಮಲ್ಲಿಕಾರ್ಜುನಯ್ಯನವರು ಅವರದೇ ಸಂಸ್ಥೆಯ ಕಟ್ಟಡದಲ್ಲಿ ಅತಿ ಕಡಿಮೆ ಬಾಡಿಗೆಗೆ ವ್ಯವಸ್ಥೆ ಮಾಡಿಕೊಟ್ಟರು. ಈ ಕಲಾ ಶಾಲೆಯ ಸಂಸ್ಥಾಪಕರಾಗಿ ಎಂ. ಬಸಯ್ಯನವರು ಕಾರ್ಯ ನಿರ್ವಹಿಸುತ್ತಿದ್ದರು. ಆ ದಿನಗಳಲ್ಲಿ ಬೋಧಕ ವರ್ಗದವರನ್ನು ನೇಮಿಸುವುದು ಸಂಸ್ಥೆಗೆ ಕಷ್ಟವಾಯಿತು. ೧೯೮೨ರಲ್ಲಿ ಬಾಬುರಾವ್‌ರವರು ಪ್ರಾಚಾರ್ಯರಾದರು. ಪ್ರಾರಂಭದ ದಿನಗಳಲ್ಲಿ ಶಿಕ್ಷಕರ ಚಿತ್ರಕಲಾ ತರಬೇತಿಯನ್ನು ನೀಡುತ್ತಿದ್ದರು. ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದುಕೊಳ್ಳಲಿ ಎಂಬ ಉದ್ದೇಶದಿಂದ ಎರಡು ವರ್ಷದ ಡಿ.ಎಂ.ಸಿ. ಚಿತ್ರಕಲೆಯಲ್ಲಿ ಡಿಪ್ಲೋಮಾ ಶಿಕ್ಷಣ ತರಗತಿಗಳನ್ನು ಪ್ರಾರಂಭಿಸಿದರು. ಇದರ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆಯತೊಡಗಿದರು.

"ಈ ಕಲಾಶಾಲೆಗೆ ತೊಂದರೆಯಷ್ಟೇ ಅಲ್ಲದೆ ಸಂಸ್ಥೆಯೂ ಸಹ ಹಲವಾರು ಸಲ ಸಿಬ್ಬಂದಿಗೆ ಹೆಚ್ಚಿನ ಪ್ರಮಾಣದ ವೇತನ ನೀಡಲಾಗಿದೆ. ಇತ್ತ ಶಾಲೆಯನ್ನು ಮುಚ್ಚಲೂ ಆಗದೆ

ಉಳಿಸಿಕೊಳ್ಳಲೂ ಆಗದೆ ತೊಂದರೆಗೆ ಸಿಲುಕಿ ಆರ್ಥಿಕ ಸಂಕಷ್ಟ ಎದುರಿಸಿತು. ಆದರೂ ಈ ಪರಿಸ್ಥಿತಿ ಬಿಗಾಡಾಯಿಸಿದರೂ ಸಹ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಆರ್ಥಿಕ ಹೊರೆ ಹಾಕದೆ ಡಿಪ್ಲೋಮಾ ಡ್ರಾಯಿಂಗ್ ಮತ್ತು ಪೇಂಟಿಂಗ್ ತರಗತಿಗಳು ತೆರೆದರು. ಐದು ವರ್ಷದ ಡಿಪ್ಲೋಮಾ ಹಾಗೂ ಆರ್ಟ್ ಮಾಸ್ಟರ್ ಶಿಕ್ಷಣ ನೀಡುವ ಶಾಲೆಯಾಗಿ ಪರಿಣಮಿಸಿತು".[೪೧]

ಸರ್ಕಾರದಿಂದ ೧೯೮೮ರಲ್ಲಿ ಅನುದಾನಕ್ಕೊಳಪಟ್ಟಿತು. ೧೯೮೬ರಿಂದ ಶಾಲೆಯ ಸಿಬ್ಬಂದಿಗೆ ದೊರೆಯಬೇಕಾದ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ದೊರಕಿಸಿಕೊಟ್ಟಿತು. ಇದಕ್ಕೆ ಕಾರಣಕರ್ತರಾದ ಚಿತ್ರಕಲಾ ವಿಷಯಗಳ ಹಿರಿಯ ಸಹಾಯಕ, ನಿರ್ದೇಶಕ ಎನ್. ರಾಮಯ್ಯನವರು.

"ಚಿತ್ರಕಲೆಯಲ್ಲಿ ಪದವಿ ಶಿಕ್ಷಣವನ್ನು ಈ ಜಿಲ್ಲೆಗೆ ನೀಡಲು ರವೀಂದ್ರ ಕಾಲೇಜ್ ಆಫ್ ಫೈನ್ ಆರ್ಟ್ ಚಿತ್ರಕಲಾ ಮಹಾವಿದ್ಯಾಲಯವನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ಸಂಯೋಜನೆ ಪಡೆದು ೧೯೯೩ರಲ್ಲಿ ಈ ಸಂಸ್ಥೆ ಪ್ರಾರಂಭವಾಯಿತು. ಎಸ್.ಎಸ್.ಎಲ್.ಸಿ. ನಂತರದ ೨ ವರ್ಷದ ಫೌಂಡೇಶನ್ ತರಗತಿ ಮತ್ತು ೩ ವರ್ಷದ ವಿಶೇಷ ಪದವಿ ಶಿಕ್ಷಣವನ್ನು ಚಿತ್ರಕಲೆ, ಅನ್ವಯಿಕ ಕಲೆ ಮತ್ತು ಗ್ರಾಫಿಕ್ ವಿಷಯಗಳಲ್ಲಿ ಆರಂಭವಾಯಿತು. ಶ್ರೀಮತಿ ಶಶಿಕಲಾರವರು ಇದರ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದರು. ಈ ಶಾಲೆಗೆ ವಿಶ್ವವಿದ್ಯಾಲಯ, ಮಾನವ ಸಂಪನ್ಮೂಲ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆಯಿಂದ ಅನುದಾನದ ಅವಶ್ಯಕತೆ ಹಿಂದೆಯೂ ಇತ್ತು ಈಗಲೂ ಇದೆ"[೪೨] ಎಂಬುದು ಸಂಸ್ಥೆಯ ಮುಖ್ಯಸ್ಥರ ಅನಿಸಿಕೆಯಾಗಿದೆ.

ರವೀಂದ್ರ ಕಲಾನಿಕೇತನ ಶಾಲೆಯು ಸರ್ಕಾರದ ಮೂಲಕ ಕೆಲವು ಮೂಲಭೂತ ಸವಲತ್ತುಗಳನ್ನು ಪಡೆದಿದೆ. ಸುಮಾರು ೪೦ ಲಕ್ಷ ರೂಪಾಯಿಗಳ ನಿವೇಶನ ಮತ್ತು ೫೫ ಲಕ್ಷ ರೂ.ಗಳ ಭವ್ಯವಾದ ಆರ್ಟ್ ಗ್ಯಾಲರಿ, ಗ್ರಾಫಿಕ್, ಕಂಪ್ಯೂಟರ್, ಸೆರಿಗ್ರಫಿ ಸ್ಟುಡಿಯೋ, ಗ್ರಂಥಾಲಯ, ತರಗತಿ ಕೋಣೆಗಳು ವ್ಯವಸ್ಥೆಯನ್ನು ಮಾಡಿಕೊಟ್ಟಂತಹ ಈ ಸಂಸ್ಥೆಯ ಸಂಸ್ಥಾಪಕರಾದಂತಹ ಶ್ರೀಯುತ ಎಂ. ಬಸವಯ್ಯನವರ ಸೇವೆಯನ್ನು ಮರೆಯಲಾಗುವುದಿಲ್ಲ.

ಸಿದ್ಧೇಶ್ವರ ಕಲಾ ಮಂದಿರ, ಬಿಜಾಪುರ

ಗುಮ್ಮಟಗಳ ನಗರವಾದ "ಬಿಜಾಪುರ ನಗರದಲ್ಲಿ ಸ್ಥಳೀಯ ಕಲಾವಿದರಿಗೆ ಹಾಗೂ ಚಿತ್ರಕಲೆಯನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಗದಗ, ಗುಲಬರ್ಗಾ, ಬೆಳಗಾವಿ ಮೊದಲಾದ ದೂರದ ಊರುಗಳಿಗೆ ಹೋಗಬೇಕಾಗಿತ್ತು. ಇದನ್ನರಿತ ಬಿ.ಎಲ್.ಡಿ.ಇ. ಸಂಸ್ಥೆ ವಿಜಾಪುರ ಜಿಲ್ಲೆಯ ಪ್ರಪ್ರಥಮವಾಗಿ ಚಿತ್ರಕಲಾ ಶಿಕ್ಷಕರ ತರಬೇತಿ(ಡಿ.ಟಿ.ಸಿ.) ವರ್ಗ ಪ್ರಾರಂಭ ಮಾಡಲು ಮುಂದಾಗಿ "ಶ್ರೀ ಸಿದ್ಧೇಶ್ವರ ಕಲಾ ಮಂದಿರ"[೪೩] ಎಂಬ ಹೆಸರನ್ನು ನಾಮಕರಣ ಮಾಡಿದರು.

೧೯೮೧-೮೨ರಲ್ಲಿ ಪ್ರಾಚಾರ್ಯರಾದ ಸಿ.ಎಸ್. ಪಾಟೀಲರವರ ಮುಂದಾಳತ್ವ ಹಾಗೂ ಉಪನ್ಯಾಸಕರಾದ ಪಿ.ಎಸ್. ಕಡೇಮನಿ ಹಾಗೂ ಕಾರಣಕರ್ತರಾದ ಶ್ರೀ ಎಸ್.ಬಿ. ಚೆಂಟ್ಟಿಗಿ

ಹಾಗೂ ಸಿ.ಬಿ. ಕಾಚಾಪೂರ ಇವರು ಕ್ರಿಯಾತ್ಮಕ ಚಟುವಟಿಕೆಯೊಂದಿಗೆ ಚಿತ್ರಕಲಾ ವಿದ್ಯಾಲಯ ಪ್ರಾರಂಭವಾಯಿತು. ಮೊದಲಿಗೆ ಟಿ.ಡಿ.ಸಿ. (ಡ್ರಾಯಿಂಗ್ ಟೀಚರ್ ಕೋರ್ಸ್) ನಂತರದಲ್ಲಿ ಡಿ.ಎಂ..ಸಿ ಎರಡು ವರ್ಷ ಜಿ.ಡಿ. ಇವೆಲ್ಲವುಗಳು ಪ್ರಾರಂಭಗೊಂಡವು. ಇವುಗಳ ನಂತರ ಎಸ್.ಎಸ್.ಬಿ. ಸ್ಕೂಲ್‌ನ ಶ್ರೀ ಎಂ.ಎಸ್. ಜತ್ತಿ ವಿದ್ಯಾದರ ಸಾಲಿ ಇವರೆಲ್ಲರ ಸಹಕಾರದಿಂದ ಪ್ರಥಮ, ದ್ವಿತೀಯ ಡಿ.ಎಂ.ಸಿ. ತರಗತಿಗಳು ಪ್ರಾರಂಭವಾದವು. ಬಿ.ವಿ. ಹಿರೇಮಠ ಉಪನ್ಯಾಸಕರ ನೇಮಕಗೊಂಡು ಕಾಲೇಜಿನ ಉನ್ನತಿಗಾಗಿ ಹಾಗೂ ಪ್ರಾಚಾರ್ಯರಾದ ಶ್ರೀ ಸಿ.ಬಿ. ಕಾಚಪೂರ ಅವರ ಪ್ರಯತ್ನ ಫಲವಾಗಿ ಸಂಸ್ಥೆಯು ಬೆಳವಣಿಗೆಯನ್ನು ಕಂಡಿತು. ಸಾಕಷ್ಟು ಚಿತ್ರಕಲಾ ಪ್ರದರ್ಶನಗಳು, ನ್ಯಾಷನಲ್ ಕ್ಯಾಂಪ್, ಅಕಾಡೆಮಿ ಕ್ಯಾಂಪ್‌ಗಳಂತಹ ಕಾರ್ಯಕ್ರಮಗಳು ಜರುಗಿವೆ. ಜೊತೆ ಜೊತೆಗೆ ಹಳೆಯ ಕಟ್ಟಡದಲ್ಲಿ ವಿದ್ಯಾಲಯವು ೧೯೮೬ ಅವಧಿಯಲ್ಲಿ ಸರಕಾರದ ಅನುದಾನ ಹಾಗೂ ಸಂಸ್ಥೆಯ ಅನುದಾನ ಇವೆರಡರ ಸಹಯೋಗದೊಂದಿಗೆ ಪ್ರಾಚಾರ್ಯ ಹಾಗೂ ಸಿಬ್ಬಂದಿ ವರ್ಗದ ಪ್ರಯತ್ನವಾಗಿ ಈ ಬೃಹದಾಕಾರವಾದ ಕಟ್ಟಡವು ನಿರ್ಮಾಣವಾಯಿತು. ಇಲ್ಲಿ ವಿಶಾಲವಾದಂತಹ ಕಲಾಗ್ಯಾಲರಿ ಇದ್ದು, ಖ್ಯಾತ ಕಲಾವಿದರುಗಳ ಪ್ರಾತ್ಯಕ್ಷಿಕೆಗಳು ನಡೆಯುವುದನ್ನು ಕಾಣಬಹುದು.

"೨೦೦೧-೦೨ನೇ ಸಾಲಿನಲ್ಲಿ ಹೊಸ ಅಭ್ಯಾಸ ಪತ್ರಿಕೆ ರಾಜ್ಯ ಸರಕಾರದಿಂದ ಹೊರಬಂದು ಡಿ.ಎಂ.ಸಿ. ಬದಲಾಗಿ ಫೌಂಡೇಶನ್ ಪ್ರಥಮ ಮತ್ತು ದ್ವಿತೀಯ, ಮೂರು, ನಾಲ್ಕು, ಐದನೆಯ ವರ್ಷದ ಪೇಂಟಿಂಗ್ ಡಿಪ್ಲೊಮಾ ವರ್ಗಗಳು ಪ್ರಾರಂಭವಾದವು"** ನಂತರದಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಬಿ.ವಿ.ಎ. ಪದವಿ ತರಗತಿಗಳು ಪ್ರಸ್ತುತ ಸಂದರ್ಭದಲ್ಲಿ ನಡೆಯುತ್ತಿವೆ.

ಚಾಮರಾಜೇಂದ್ರ ಸರಕಾರಿ ದೃಶ್ಯಕಲಾ ಕಾಲೇಜು, ಮೈಸೂರು

೧೯೧೩ರಲ್ಲಿ ಚಾಮರಾಜ ಒಡೆಯರಿಂದ ಸ್ಥಾಪಿತವಾದ ಚಾಮರಾಜೇಂದ್ರ ತಾಂತ್ರಿ ಸಂಸ್ಥೆ ಹಲವು ಕಲಾ ಪ್ರಕಾರಗಳಿಗೆ ಮತ್ತು ಕಲಾವಿದರಿಗೆ ಆಶ್ರಯ ನೀಡುತ್ತಿತ್ತು. ೧೯೮೧ರಲ್ಲಿ ಲಲಿತಕಲೆಗಳನ್ನು ಇದರಿಂದ ಬೇರ್ಪಡಿಸಿ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ(ಕಾವಾ) ಸ್ಥಾಪಿಸಲಾಯಿತು. ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯನ್ನು ವಿಶ್ವವಿದ್ಯಾಲಯದ ಸ್ಥಾನಮಾನವುಳ್ಳ ಒಂದು ಸ್ವಾಯುತ್ತ ಸಂಸ್ಥೆಯನ್ನಾಗಿ ಮಾಡುವ ಉದ್ದೇಶದಿಂದ ಸ್ಥಾಪಿಸಿ, ೧೯೮೨ರಿಂದ ಶೈಕ್ಷಣಿಕ ಕಾರ್ಯಾರಂಭ ಪ್ರಾರಂಭಿಸಿತ್ತು. ಕರ್ನಾಟಕದಲ್ಲಿ ಶ್ರೇಷ್ಠ ಮಟ್ಟದ ಬರೋಡಾ, ಶಾಂತಿನಿಕೇತನ ಮತ್ತು ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್ ಮಾದರಿಯಲ್ಲಿ ಸ್ಥಾಪಿಸುವ ಉದ್ದೇಶ ಹೊಂದಿ ಪ್ರೊ. ರೋರಿಕ್ ನೇತೃತ್ವದಲ್ಲಿ ಕೆ.ಕೆ. ಹೆಬ್ಬಾರ್ ಮತ್ತು ಪ್ರಮುಖ ಸದಸ್ಯರ ಸಮಿತಿಯನ್ನು ೧೯೭೧ರಲ್ಲಿ ರಚಿಸಲಾಯಿತು. ಕಲಾ ಶಿಕ್ಷಣದ ಸಾಧಕ-ಬಾಧಕಗಳನ್ನು ಈ ಸಮಿತಿಯೂ ಅಧ್ಯಯನ ಮಾಡಿ ಸಂಸ್ಥೆಯ ಸ್ಥಾಪನೆಗೆ ಪೂರಕವಾಗಿ ರೋರಿಕ್ ಸಮಿತಿಯೂ ೧೯೭೬ರಲ್ಲಿ ತನ್ನ ವರದಿ ಸರ್ಕಾರಕ್ಕೆ ಸಲ್ಲಿಸಿತು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದ ಶ್ರೀಯುತ ಕೆ.ಕೆ. ಹೆಬ್ಬಾರ್ ಮತ್ತು ಕರ್ನಾಟಕದ ಕೆಲವು ಪ್ರಮುಖ ಕಲಾವಿದರ

ಸಲಹೆಯಂತೆ ಜೆ.ಜೆ. ಕಲಾಶಾಲೆಯಲ್ಲಿ ವ್ಯಾಸಂಗ ಮಾಡಿರುವಂತಹ ಶ್ರೀ ವಿ.ಎಂ. ಸೋಲಾಪುರಕರ್ ಅವರನ್ನು ಪ್ರಥಮ ಡೀನ್ ಆಗಿ ಆಯ್ಕೆ ಮಾಡಲಾಯಿತು. ಇವರು ೧೯೩೧ರಲ್ಲಿ ವಿಜಾಪುರದ ಮುದ್ದೇಬಿಹಾಳದಲ್ಲಿ ಜನಿಸಿದವರು. ಇವರು ಕಾವಾದಲ್ಲಿ ೧೯೮೨ರಿಂದ ೧೯೮೮ರವರೆಗೆ ಕಾರ್ಯ ನಿರ್ವಹಿಸಿದರು.

ಇವರು ಸಂಸ್ಥೆಗೆ ಉತ್ತಮ ತಳಪಾಯವನ್ನು ಹಾಕುವ ಮುನ್ನ ಮೂರು ಪ್ರಮುಖ ಕಲಾ ಸಂಸ್ಥೆಗಳಾದ ಜೆ.ಜೆ. ಕಲಾಶಾಲೆ, ಎಂ.ಎಸ್. ಬರೋಡ ಮತ್ತು ಶಾಂತಿನಿಕೇತನ ಇವುಗಳ ಕಲಿಕೆಯ ಸಾರವನ್ನು ತಿಳಿದುಕೊಂಡು ನಂತರ ಈ ಅಂಶಗಳನ್ನು ಉಪಯೋಗಿಸಿ ಕಾವಾ ಸಂಸ್ಥೆಯನ್ನು ಕಾರ್ಯರೂಪಕ್ಕೆ ತಂದರು. ಈ ಮೂರು ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಿದ ಪರಿಣಿತರನ್ನು ಕಾವಾ ಸಂಸ್ಥೆ ಅಧ್ಯಾಪಕರನ್ನಾಗಿ ಬರಮಾಡಿಕೊಂಡಿತು.

ಕಾವಾ ಸಂಸ್ಥೆಯಲ್ಲಿ ವ್ಯಾಸಂಗ ಮಾಡಲಿಚ್ಛಿಸುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ಕಾವಾ ಸಂಸ್ಥೆಯ ನಡೆಸುವಂತಹ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಎಂಬುದು ನಿಯಮ. ಕಾವಾ ಸಂಸ್ಥೆಯು ಮೈಸೂರು ವಿಶ್ವವಿದ್ಯಾಲಯದಿಂದ ಶಾಶ್ವತ ಸಂಯೋಜನೆಯನ್ನು ಹೊಂದಿರುತ್ತದೆ ಹಾಗೂ ೨೦೦೬ರಲ್ಲಿ ನ್ಯಾಕ್ ಸಂಸ್ಥೆಯಿಂದ ಬಿ+ ಮಾನ್ಯತೆಯನ್ನು ಪಡೆಯುವಲ್ಲಿ ಯಶಸ್ವಿಯಾಗಿರುತ್ತದೆ.

ಸಂಸ್ಥೆಯಲ್ಲಿ ಪ್ರವೇಶವನ್ನು ಪಡೆದಂತಹ ವಿದ್ಯಾರ್ಥಿಗಳು ಪ್ರಥಮವಾಗಿ ಎರಡು ವರ್ಷಗಳ ಮೂಲ ತರಗತಿಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ನಂತರ ಮೂಲ ತರಗತಿಯಲ್ಲಿ ಉತ್ತೀರ್ಣರಾದಂತಹ ವಿದ್ಯಾರ್ಥಿಗಳು ತಮ್ಮ ಅಭಿರುಚಿಗೆ ತಕ್ಕಂತೆ ಪ್ರಥಮ ಬಿ.ಎಫ್.ಎ. ಪ್ರವೇಶಕ್ಕಾಗಿ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್‌ಕಲೆ, ಅನ್ವಯ ಕಲೆ, ಛಾಯಾಚಿತ್ರ ಮತ್ತು ಛಾಯಾ ಪತ್ರಿಕೋದ್ಯಮ ಮತ್ತು ಕಲಾ ಇತಿಹಾಸ ವಿಭಾಗಗಳಿಗೆ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ. ವಿದ್ಯಾರ್ಥಿಗಳು ಸಲ್ಲಿಸಿರುವ ಅರ್ಜಿಗಳನ್ನು ನಿಯಮಾನುಸಾರ ವಿಂಗಡಿಸಿ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುತ್ತದೆ. ಪ್ರತಿ ವಿಭಾಗಗಳಿಗೆ ನಿಗದಿಪಡಿಸಿರುವಂತೆ ಆಯಾ ವಿಭಾಗಗಳಿಗೆ ಪ್ರವೇಶ ನೀಡಲಾಗುತ್ತದೆ. ವಿಷಯ ಕುರಿತಂತೆ ವಿವರಣಾ ಪತ್ರದಲ್ಲಿ ಮುದ್ರಿಸಿರುವಂತೆ ಪರೀಕ್ಷಾ ವಿಧಾನವು ಮೈಸೂರು ವಿಶ್ವವಿದ್ಯಾನಿಲಯದ ಅನುಸಾರವಿರುತ್ತದೆ. ಪ್ರಥಮ ಮೂಲ ತರಗತಿಯ ವಾರ್ಷಿಕ ಪರೀಕ್ಷೆಯನ್ನು ಕಾವಾ ಸಂಸ್ಥೆಯು ನಡೆಸುತ್ತದೆ. ಉಳಿದಂತೆ ದ್ವಿತೀಯ ಮೂಲ ತರಗತಿಯಿಂದ ಅಂತಿಮ ಬಿ.ಎಫ್.ಎ.ವರೆಗಿನ ವಾರ್ಷಿಕ ಪರೀಕ್ಷೆಗಳನ್ನು ಮೈಸೂರು ವಿಶ್ವವಿದ್ಯಾನಿಲಯವು ನಡೆಸುತ್ತದೆ ಹಾಗೂ ಯಶಸ್ವಿಯಾಗಿರುವ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರವನ್ನು ಪ್ರಧಾನ ಮಾಡುತ್ತದೆ.

ಯೋಗೇಶ್ ಚಿತ್ರಕಲಾ ಮಹಾವಿದ್ಯಾಲಯ, ಬೀದರ್

ಯೋಗೇಶ್ ಚಿತ್ರಕಲಾ ಮಹಾವಿದ್ಯಾಲಯವು ಚನ್ನಾರ್ಟ್ಸ್ ಶಿಕ್ಷಣ ಸಂಸ್ಥೆ(ರಿ), ಧಾರವಾಡ ಇವರ ಸಂಸ್ಥೆಯ ಅಡಿಯಲ್ಲಿ ಪ್ರಾರಂಭವಾಯಿತು. ಈ ಸಂಸ್ಥೆಯ ಕಾರ್ಯದರ್ಶಿ, ಸಂಸ್ಥಾಪಕರು

ಆದಂತಹ ದಿ. ಶ್ರೀ ಸಿ.ಎಸ್. ಮಠದ ಇವರು ಪ್ರಾಚಾರ್ಯರಾಗಿ ತಮ್ಮ ಸೇವೆಯನ್ನು ಪ್ರಾರಂಭಿಸಿದರು. ಮೂಲತಃ ಧಾರವಾಡದ ಭಾರತೀಯ ಕಲಾ ಕೇಂದ್ರದಲ್ಲಿ ಶಿಕ್ಷಣವನ್ನು ಪಡೆಯುವುದಲ್ಲದೆ ಉಪನ್ಯಾಸಕರಾಗಿ ಕೂಡಾ ಸೇವೆ ಸಲ್ಲಿಸಿದರು. ನಂತರದ ದಿನಗಳಲ್ಲಿ ಬೀದರ್‌ಗೆ ಆಗಮಿಸಿ ಕೇಂದ್ರಿಯ ವಿದ್ಯಾಲಯ ಹಾಗೂ ವಾಯು ಸೇನಾ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಾರೆ. ಜೊತೆಗೆ ಬೀದರ್‌ನಲ್ಲಿ ಚಿತ್ರಕಲಾ ಆಸಕ್ತಿ ಬೆಳೆಸುವ ಮತ್ತು ೧೯೮೨ರಲ್ಲಿ ಸ್ಥಳೀಯ ಕೆಲವು ಹಿರಿಯ ಸಮಾನ ವಯಸ್ಕರ ಜೊತೆಗೂಡಿ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು.

ಪ್ರಾರಂಭದಲ್ಲಿ ಡಿ.ಎಂ.ಸಿ. ಪ್ರಥಮ ನಂತರ ದ್ವಿತೀಯ, ಕಲಾಮೂಲ ಪ್ರಥಮ, ದ್ವಿತೀಯ ಮತ್ತು ಮೂರು, ನಾಲ್ಕು, ಐದನೆಯ ವರ್ಷ ಜಿ.ಡಿ. ಆರನೆಯ ವರ್ಷದ ಎ.ಎಂ. ತರಗತಿಗಳು ಪ್ರಾರಂಭವಾದವು. ೧೯೯೯ರಲ್ಲಿ ಸ್ಥಾಪಕರಾದ ಸಿ.ಎಸ್. ಮಠದ ಅವರು ನಿಧನರಾದ ನಂತರ ಎಂ.ಡಿ. ಷರೀಫ್ ಅವರು ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಹಂತದಲ್ಲಿ ಪ್ರಥಮ, ದ್ವಿತೀಯ ಫೌಂಡೇಶನ್ ತರಗತಿಗಳು, ಮೂರು, ನಾಲ್ಕು, ಐದನೆಯ ವರ್ಷದ ವಿಶೇಷ ಪರಿಣಿತಿ ತರಗತಿಗಳು ನಂತರದಲ್ಲಿ ಬಿ.ವಿ.ಎ. ಪದವಿ ತರಗತಿಗಳನ್ನು ಕ.ವಿ.ವಿ.ಯಿಂದ ನಡೆಸುತ್ತಾ ಬಂದಿದ್ದಾರೆ.

ಇದರ ಜೊತೆಗೆ "ಸ್ನಾತಕೋತ್ತರ ಕೇಂದ್ರವನ್ನು ಬೀದರ್ ಜಿಲ್ಲೆಗೆ ಪ್ರಪ್ರಥಮವಾಗಿ ೨೦೧೪ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಅದನ್ನು ಪರಿಶೀಲಿಸಿ ವಿಶ್ವವಿದ್ಯಾಲಯವು ಜಿಲ್ಲೆಯ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರಿಯಾಗಿದೆ ಎಂದು ಪರಿಶೀಲಿಸಿ ೨೦೧೫ರಿಂದ ಪ್ರಥಮ ವರ್ಷ ಪ್ರಾರಂಭಿಸುವಂತೆ ಆದೇಶಿಸಿ ನಾನ್ ಸೆಮಿಸ್ಟರ್ ಪದ್ಧತಿಯ ಶಿಕ್ಷಣವನ್ನು ನೀಡುವಂತೆ ಆದೇಶವನ್ನು ನೀಡಿದರು"[೪೫] ಈ ಆದೇಶದ ಮೇರೆಗೆ ಇಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ನೀಡುತ್ತಿದ್ದಾರೆ. ಈಗಾಗಲೇ ಎರಡು ಗುಂಪಿನ ವಿದ್ಯಾರ್ಥಿಗಳು ಹೊರಬಂದಿದ್ದಾರೆ.

ಚಿತ್ರಕಲಾ ಮಹಾವಿದ್ಯಾಲಯ, ಹೂವಿನ ಹಿಪ್ಪರಗಿ

೧೯೮೨-೮೩ನೇ ಸಾಲಿನಲ್ಲಿ ಪ್ರೌಢಶಾಲಾ ಶಿಕ್ಷಕರಾಗಿದ್ದ ದಿ. ಎಸ್.ಎಚ್. ವಗ್ಗರ ಇವರು ಮಹಾದಾಸೆಯ ಫಲವಾಗಿ ಗ್ರಾಮೀಣ ಪ್ರದೇಶವಾದ ಹೂವಿನ ಹಿಪ್ಪರಗಿ ಗ್ರಾಮದಲ್ಲಿ ಚಿತ್ರಕಲಾ ಮಹಾವಿದ್ಯಾಲಯ ಜನ್ಮ ತಾಳಿತು.

"ಬಿಜಾಪುರ ನಗರದಿಂದ ದೂರವಿರುವ ವಿದ್ಯಾರ್ಥಿಗಳಿಗೆ ಈ ಕಲಾ ಶಾಲೆಯು ಹೆಚ್ಚಿನ ಅನುಕೂಲವನ್ನು ಒದಗಿಸಿಕೊಟ್ಟಿತು. ಕಲಾಶಾಲೆಯನ್ನು ಸ್ಥಾಪಿಸಿದ ಎಸ್.ಎಚ್. ವಗ್ಗರವರು ಅದರ ಸಂಸ್ಥಾಪಕರು ಪ್ರಾಚಾರ್ಯರಾಗಿ ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಸೇವೆ ಸಲ್ಲಿಸಿದರು".[೪೬]

ಪ್ರಾರಂಭದಲ್ಲಿ ಡಿ.ಎಂ.ಸಿ. ಪ್ರಥಮ ಮತ್ತು ದ್ವಿತೀಯ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್ ವರ್ಗಗಳ ಪ್ರಾರಂಭ ತದನಂತರ ೧೯೯೧-೯೨ರಲ್ಲಿ ೩ನೇ ವರ್ಷದ ಡ್ರಾಯಿಂಗ್

ಮತ್ತು ಪೇಂಟಿಂಗ್ ವರ್ಗ ಪ್ರಾರಂಭಗೊಂಡಿತು. ಕ್ರಮವಾಗಿ ಆರ್ಟ್ ಮಾಸ್ಟರ್ ಪದವಿಯವರೆಗೂ ಕಲೆಯ ಪ್ರಸಾರ ಸಾಂಗವಾಗಿ ನಡೆದುಕೊಂಡು ಬಂದವು. ಎಸ್.ಎಚ್. ವಗ್ಗರವರ ನಂತರ ಎಸ್.ಎಸ್. ಬಿರಾದಾರ ಅವರ ಸಾರಥ್ಯದಲ್ಲಿ ವಿದ್ಯಾ ಪ್ರಸರಣ ನಡೆದು ಬರುತ್ತಿದೆ.

ಶ್ರೀ ಎಸ್.ಎಸ್. ಬಿರಾದಾರ ಪ್ರಾಚಾರ್ಯರ ಪ್ರಯತ್ನದಿಂದ ಗ್ರಾಮಾಂತರದಲ್ಲಿ ಕಲಾ ಶಿಕ್ಷಣ ಪ್ರಭಾವಗೊಂಡು ಅನೇಕ ಪ್ರತಿಭೆಗಳು ಹೊರಬಂದವು. ಜೊತೆ ಜೊತೆಗೆ ಸ್ವಂತ ಕಟ್ಟಡ ಹೊಂದಿದ ವಿದ್ಯಾಲಯವು ೧೯೯೧ರ ಅವಧಿಯಲ್ಲಿ ಸರಕಾರಿ ಅನುದಾನ ಪಡೆದುಕೊಂಡಿತು. ಹಾಗೆ ಸದ್ಯ ಈ ಕಲಾಶಾಲೆಯಲ್ಲಿ ಎರಡು ವರ್ಷದ ಕಲಾ ಮೂಲ ತರಗತಿ ಹಾಗೂ ಮೂರು ವರ್ಷಗಳ ವಿಶೇಷ ಪರಿಣಿತಿ ತರಗತಿಗಳು ಹಾಗೂ ಕನ್ನಡ ವಿಶ್ವವಿದ್ಯಾಲಯದಿಂದ ಬಿ.ವಿ.ಎ. ಪದವಿಯನ್ನು ನಡೆಸುತ್ತಿದ್ದಾರೆ.

ಶ್ರೀ ಮುರುಘೇಂದ್ರ ಲಲಿತಕಲಾ ಮಹಾವಿದ್ಯಾಲಯ, ಅಥಣಿ

ಭವ್ಯನಾಡು ಕಟ್ಟುವ ಹೃದಯದಲ್ಲಿ ಸುಂದರವಾದ ಕನಸುಗಳು ಸಾಕಾರಗೊಳ್ಳಬೇಕು. ಸಾಧನೆಯು ಅಮೋಘ ಶೃಂಗ ಮುಟ್ಟುವುದಕ್ಕೆ ಸಾಧ್ಯವಾಗಬೇಕು. ಸ್ವತಂತ್ರ ಭಾರತದ ಕಲ್ಪನೆಗೆ ಪ್ರೇರಕ ಎನಿಸಿದ ಶಿಕ್ಷಕನಿಗೆ ಆಂದೋಲನವನ್ನು ಹುಟ್ಟುಹಾಕಿ ಚಿತ್ರಕಲಾ ಸಂಸ್ಕೃತಿ ಎತ್ತಿ ಬೆಳೆಸಬೇಕು. ಅಥಣಿಯ ಗಡಿ ನಗರದ ಇತಿಹಾಸದಲ್ಲಿಯೇ ಹೊಸ ಯುಗಗಳನ್ನು ನಿರ್ಮಿಸಿ ನಾಡಿನ ಉನ್ನತಿಗಾಗಿ ಶ್ರಮಿಸಬೇಕು. ಹೊಸ ಆಯಾಮಗಳನ್ನು ನಡೆಸಬೇಕು. ಕಲಾವಂತ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಅಥಣಿಯು ಪುಣ್ಯಕ್ಷೇತ್ರ ಶ್ರೀ ಶಿವಯೋಗಿಗಳು ನೆಲೆಸಿದಂತಹ ತಪೋಭೂಮಿ. ಸ್ವತಂತ್ರ ಯೋಧರ ಉದಾರದಾನಿಗಳ ನಾಡು ಅಥಣಿಯಾಗಿದೆ.

ಅಥಣಿ ವ್ಯಾಪಾರ ಕೇಂದ್ರವಾಗಿದೆ. ಇಲ್ಲಿಯ ಅನೇಕ ಜನರು ಶಿಕ್ಷಣ ಕ್ಷೇತ್ರದಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ರಾಜ್ಯದಿಂದ ರಾಜ್ಯಕ್ಕೆ ಮತ್ತು ಹೊರಗೆ ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಮಾಡಿದವರಿದ್ದಾರೆ. ಇಲ್ಲಿ ಶಿಕ್ಷಣ ತಜ್ಞರು, ಸಂಗೀತಗಾರರು, ಸಾಹಿತಿಗಳು, ಕವಿಗಳು, ಅದರಲ್ಲಿಯೂ ಚಿತ್ರಕಲಾವಿದರಲ್ಲಿ ರಾಷ್ಟ್ರೀಯ - ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ, ಅಥಣಿಯಲ್ಲಿಯೇ ಹುಟ್ಟಿ ಬೆಳೆದ ಮಹಾನ್‌ಚೇತನ್ ಶ್ರೀ ಎಂ.ಎ. ಚೆಟ್ಟಿಯವರು ಸಹ ಒಬ್ಬರಾಗಿದ್ದಾರೆ. ಚಿತ್ರಕಲಾ ಅಧ್ಯಯನಕ್ಕಾಗಿ ಅಥಣಿಯ ರೂವಾರಿಗಳಾದ ಶಿಕ್ಷಣ ಪ್ರೇಮಿಗಳು ಆದ ಜಂಗಮರ ಮನೆತನದಲ್ಲಿ ಜನಿಸಿದ ಶ್ರೀಯುತರಾದ ವಸ್ತ್ರದವರು. ೧೯೮೪ರಲ್ಲಿ ಅನುದಾನ ಪಡೆದು ಸ್ವಂತ ಕಟ್ಟಡದಲ್ಲಿ ಶಿಕ್ಷಣ ಸಂಸ್ಥೆ(ರಿ) ಅಥಣಿ ಇವರು ಶ್ರೀ ಮುರುಘೇಂದ್ರ ಲಲಿತಕಲಾ ಮಂದಿರವನ್ನು ಪ್ರಾರಂಭಿಸಿದರು. "ಶ್ರೀ ಮುರುಘೇಂದ್ರ ಲಲಿತಕಲಾ ಮಹಾವಿದ್ಯಾಲಯದ ಹೊಸ ಕಟ್ಟಡ ಉದ್ಘಾಟನೆಗೊಂಡಾಗ ಶ್ರೀ ವ್ಹಿ.ಜಿ. ತೆಲಸಂಗ ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರಾದ ಶ್ರೀ ಎ.ಬಿ. ದೇಶಪಾಂಡೆ ಇವರಿಂದ ಉದ್ಘಾಟನೆಗೊಳಿಸಲಾಯಿತು. ಆಡಳಿತ ಮಂಡಳಿಯ ಉದಾರ ಧನಸಹಾಯದಿಂದ ಕಟ್ಟಡದ ಇನ್ನುಳಿದ ಕೆಲಸವನ್ನು ಪೂರ್ಣಗೊಳಿಸಲಾಯಿತು. ಈ ಕಟ್ಟಡದಲ್ಲಿ ಚಿತ್ರಕಲಾ ಗ್ರಂಥಾಲಯ ವ್ಯವಸ್ಥೆಯನ್ನು ಹೊಂದಿದ್ದು ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಸೌಲಭ್ಯವನ್ನು ಕೂಡ ಒದಗಿಸಲಾಗಿದೆ".[೪೬]

“ಪ್ರಾರಂಭದಲ್ಲಿ ಸುಮಾರು ೧೨೦ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದುಕೊಂಡು ಪ್ರತಿವರ್ಷವೂ ೯೦ರಿಂದ ೧೦೦ ವಿದ್ಯಾರ್ಥಿಗಳಿಗೆ ತರಗತಿಗಳನ್ನು ನಡೆಸಲಾಗುತ್ತದೆ. ಮೊದಲು ಡಿ.ಎಂ.ಸಿ. ಪ್ರಥಮ ವರ್ಷ, ದ್ವಿತೀಯ ವರ್ಷ, ಮೂರು ವರ್ಷದ ಡಿಪ್ಲೋಮಾ, ಜಿ.ಡಿ. ಹೀಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ನಡೆಸುತ್ತಿದ್ದರು. ನಂತರ ೨೦೦೧ರಲ್ಲಿ ಟಿ.ಪಿ. ಇಸ್ಸಾರ್ ವರದಿ ಜಾರಿಯಾದ ಮೇಲೆ ಕನ್ನಡ ವಿಶ್ವವಿದ್ಯಾಲಯದೊಂದಿಗೆ ಸಂಲಗ್ನ ಹೊಂದಿ ಕಲಾಮೂಲ ಪ್ರಥಮ, ದ್ವಿತೀಯ ಹಾಗೂ ಮೂರು, ನಾಲ್ಕು, ಐದನೇ ವರ್ಷದ ವಿಶೇಷ ಪರಿಣಿತಿ ಚಿತ್ರಕಲೆ ಡಿಪ್ಲೋಮಾ ಹೀಗೆ ಬದಲಾವಣೆ ಹೊಂದುತ್ತಾ ಈ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲಾ ಶಿಕ್ಷಣವನ್ನು ಪಡೆದುಕೊಂಡವರು ದೇಶ-ವಿದೇಶಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ”.[೪೮]

ಈ ಕಲಾ ಶಾಲೆಯಲ್ಲಿ ಪ್ರತಿ ವರ್ಷ ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಚಿತ್ರಕಲೆ ಸ್ಪರ್ಧೆ ನಡೆಸಲಾಗುತ್ತದೆ. ಇದರಿಂದ ಚಿತ್ರಕಲಾ ಶಿಕ್ಷಣಕ್ಕೆ ಒಳ್ಳೆಯ ಪ್ರೋತ್ಸಾಹ ನೀಡುತ್ತಿರುವುದನ್ನು ಗಮನಿಸಬಹುದು. ಇಂತಹ ಕೆಲಸವು ಪಠ್ಯೇತರ ಚಟುವಟಿಕೆಗಳಾಗಿ ಕಲೆಗೆ ಪ್ರೋತ್ಸಾಹಿಸುವ ಕೆಲಸವಾಗಿದೆ.

ಮಹೇಶ ಚಿತ್ರಕಲಾ ಮಹಾವಿದ್ಯಾಲಯ, ಜಮಖಂಡಿ

ಪರಮಪೂಜ್ಯರಾದಂತಹ ಬಸಪ್ಪ ಅಜ್ಜನವರ ಪೂಜೆಯ ಆಶೀರ್ವಾದದೊಂದಿಗೆ ೧೯೮೩–೮೪ನೇ ಸಾಲಿನಲ್ಲಿ ಮಹೇಶ ಚಿತ್ರಕಲಾ ಮಹಾವಿದ್ಯಾಲಯ ಪ್ರಾರಂಭವಾಯಿತು. ಇಲ್ಲಿ ಪ್ರಾರಂಭದಲ್ಲಿ ಡಿ.ಎಂ.ಸಿ ಪ್ರಥಮ, ದ್ವಿತೀಯ, ಮೂರು, ನಾಲ್ಕು ಮತ್ತು ಐದನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್, ಎ.ಎಂ., ಜಿ.ಡಿ ತರಗತಿಗಳನ್ನು ನಡೆಸಲಾಗುತ್ತಿತ್ತು. ಮುಂದೆ ವಿಶೇಷ ಪರಿಣಿತಿ ಚಿತ್ರಕಲೆ ಡಿಪ್ಲೋಮಾ ತರಗತಿಗಳನ್ನು ನಡೆಸಲಾಗುತ್ತಿತ್ತು. “೧೯೯೪–೯೫ನೇ ಸಾಲಿನಲ್ಲಿ ಅಲ್ಲಿನ ಹಿರಿಯರು ಕಲಾವಿದರು ಸೇರಿ ವಿದ್ಯಾರ್ಥಿಗಳ ದೃಷ್ಟಿಯಿಂದ ಸರ್ಕಾರದ ಆದೇಶದೊಂದಿಗೆ ಜಮಖಂಡಿ ನಗರಕ್ಕೆ ಸ್ಥಳಾಂತರವಾಯಿತು.”[೪೯] ಪ್ರಸ್ತುತ ಸಂದರ್ಭದಲ್ಲಿ ಬಿ.ವಿ.ಎ ತರಗತಿಗಳನ್ನು ನಡೆಸುತ್ತಿದ್ದಾರೆ. ಇಲ್ಲಿ ಅಧ್ಯಯನವನ್ನು ಮಾಡಿದ ಅನೇಕ ವಿದ್ಯಾರ್ಥಿಗಳು ಕಲಾವಿದರಾಗಿ, ಕಲಾಶಿಕ್ಷಕರಾಗಿ ಅಲ್ಲದೇ ಅನೇಕ ಸರಕಾರಿ, ಅರೆಸರಕಾರಿ ಮತ್ತು ಸಂಘ–ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಶ್ರೀ ವಿವೇಕಾನಂದ ಕಲಾಮಂದಿರ, ರಾಯಭಾಗ

೧೯೮೪ರಲ್ಲಿ ಅನುದಾನ ಪಡೆದ ಮತ್ತು ಸ್ವಂತ ಕಟ್ಟಡದಲ್ಲಿ ಆಗಿನ ಸಂಸ್ಥೆಯ ಚೇರ್ಮನ್‌ರಾದ ಶ್ರೀ ವಿವೇಕರಾವ್ ಪಾಟೀಲರವರು ಈ ಕಲಾಶಾಲೆಯನ್ನು ಸ್ಥಾಪಿಸಿದರು. ನಂತರ ಅವರ ತಂದೆಯವರಾದ ಸನ್ಮಾನ್ಯ ದಿ. ಶ್ರೀ ವಸಂತರಾವ್ ಪಾಟೀಲ ಅವರು ಸಂಸ್ಥೆಯ ಅಧ್ಯಕ್ಷರಾಗಿ ಮುಂದುವರೆದು ಈ ಕಲಾ ಮಂದಿರದ ಅಭಿವೃದ್ಧಿಗೆ ಎಲ್ಲಾ ಸಹಕಾರ ನೀಡಿರುತ್ತಾರೆ. ಪ್ರಸ್ತುತ

ಅವರ ಕಿರಿಯ ಮಗನಾದ ಸನ್ಮಾನ್ಯ ಅಮರಸಿಂಹ ಪಾಟೀಲ ಅವರು ಸಂಸ್ಥೆಯ ಚೇರಮನ್ನರಾಗಿ ಇದನ್ನು ಮತ್ತಷ್ಟು ಅಭಿವೃದ್ಧಿಪಡಿಸಿರುವುದು ಕಂಡುಬರುತ್ತದೆ. ಒಟ್ಟಾರೆ ಉತ್ತಮ ಆಡಳಿತ ಕ್ರಿಯಾಶೀಲ ಸಿಬ್ಬಂದಿಯಿಂದ ಗಡಿ ಗ್ರಾಮೀಣ ಭಾಗದಲ್ಲಿದ್ದರೂ ಕಲಾ ವಾತಾವರಣ ರೂಪಿಸಿ ರುವುದನ್ನು ಕಾಣಬಹುದು.

೧೯೮೪ರಲ್ಲಿ ಡಿ.ಎಂ.ಸಿ. ಪ್ರಥಮ ವರ್ಗಕ್ಕೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಇಲಾಖೆಯಿಂದ ಅನುಮತಿ ಪಡೆದು ಮುಂದುವರೆದು ಎ.ಎಂ., ಜಿ.ಡಿ.ಯವರೆಗೂ ಸಂಪೂರ್ಣವಾಗಿ ಕಲಾ ಮಹಾವಿದ್ಯಾಲಯವಾಗಿ ಪರಿವರ್ತನೆಗೊಂಡಿತು. ಇದು ಗ್ರಾಮೀಣ ಕರ್ನಾಟಕ-ಮಹಾರಾಷ್ಟ್ರದ ಗಡಿಭಾಗದಲ್ಲಿದ್ದು ಇಲ್ಲಿ ಸುಮಾರು ಶೇ. ೮೦ರಷ್ಟು ಎಸ್.ಸಿ., ಎಸ್.ಟಿ., ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದು ಕಂಡುಬರುತ್ತದೆ. ಅಲ್ಲದೇ ಬಡ ಕೃಷಿ ಕಾರ್ಮಿಕ ಮಕ್ಕಳೇ ವ್ಯಾಸಂಗ ಮಾಡುತ್ತಿದ್ದಾರೆ. ಆದರೂ ಪ್ರಾಚಾರ್ಯರ ಹಾಗೂ ಉಪನ್ಯಾಸಕರ ಪ್ರಯತ್ನ ಹಾಗೂ ಅವರ ಪ್ರತಿಭೆಗಳಿಂದ ೧೯೮೮ರಿಂದ ಇಲ್ಲಿಯವರೆಗೆ ಶೇ. ೧೦೦ರಷ್ಟು ಫಲಿತಾಂಶ ಈ ಕಲಾ ಮಹಾವಿದ್ಯಾಲಯದ್ದಾಗಿದೆ. ವರ್ಷದಿಂದ ವರ್ಷಕ್ಕೆ ಇಂದು ಸ್ವಂತ ಎರಡು ಕಟ್ಟಡಗಳನ್ನು ಹೊಂದಿ ಅಭಿವೃದ್ಧಿಯನ್ನು ಹೊಂದಿರುತ್ತದೆ. ರಾಜ್ಯಕ್ಕೆ ಎರಡು ಬಾರಿ ಪ್ರಥಮ ರ‍್ಯಾಂಕ್ ಗಳಿಸಿರುವುದು ಈ ಸಂಸ್ಥೆಯ ಹೆಮ್ಮೆಯ ಸಂಗತಿಯಾಗಿದೆ. ಎಲ್ಲಾ ಅಂಶಗಳನ್ನು ಗಮನಿಸಿ ಇಲಾಖೆಯಿಂದ ೧೯೯೨ರಿಂದ ಈ ಸಂಸ್ಥೆಯ ಖಾಯಂ ಮಾನ್ಯತೆಯನ್ನು ಪಡೆದ ಗಡಿಭಾಗದ ಸಂಸ್ಥೆಯಾಗಿದೆ.

ಕರ್ನಾಟಕ ಲಲಿತಕಲಾ ಮಹಾವಿದ್ಯಾಲಯ, ಗೋಕಾಕ

ಬೆಳಗಾವಿ ಜಿಲ್ಲೆಯ ಗೋಕಾಕದಿಂದ ಸುಮಾರು ೫ ಕಿ.ಮೀ. ಅಂತರದಲ್ಲಿ ಘಟಪ್ರಭಾ ಎಂಬ ನದಿಯಿದೆ. ಇದು ಹರಿದು ಸುಮಾರು ೧೦೦ ಅಡಿ ಆಳದವರೆಗೆ ಧುಮುಕಿ ಹರಿಯುವ ಆ ಜಲಪಾತದ ಸುಂದರ ರಮಣೀಯ ದೃಶ್ಯ ಎಂಥವರನ್ನೂ ನಿಲ್ಲಿಸಿ ಬೆರಗಾಗುವಂತೆ ಮಾಡುತ್ತದೆ. ಇದು ಗೋಕಾಕ ವಾಯುವ್ಯ ದಿಕ್ಕಿನಲ್ಲಿರುವ ಎರಡು ಮಸೀದಿಗಳಿದ್ದು ಒಂದು ಜೈನ ಬಸದಿ ಗಂಜೀಖಾನೆಯ ಇಮಾರತುವಿರುತ್ತದೆ. ಈ ಊರಿನ ಸುತ್ತಲೂ ಗೋಡೆ ಇದ್ದು ದಕ್ಷಿಣ ಪಶ್ಚಿಮಕ್ಕೂ ಯಾದವಾಡ ಸುಣ್ಣ ಗೋಕಾಕ ಬಣ್ಣ ಎಂಬ ನಾಣ್ಣುಡಿಯಂತೆ ಇಲ್ಲಿ ಮರದ ಎಲ್ಲಾ ಫಲಗಳನ್ನು ತಯಾರಿಸುವ ಜೀನಗಾರ ಮನೆತನವಿದ್ದು, ಇವರ ಕಲೆ ಪ್ರಸಿದ್ಧಿಯನ್ನು ಪಡೆದಿರುತ್ತದೆ.

ಗೋಕಾಕವು ವ್ಯಾಪಾರ ಕೇಂದ್ರವಲ್ಲದೆ ಇಲ್ಲಿ ಅನೇಕ ಶಿಕ್ಷಣ ತಜ್ಞರು ಸಂಗೀತಗಾರರು, ಸಾಹಿತಿಗಳು, ಕವಿಗಳು, ಕಲಾವಿದರುಗಳು ಹೆಸರುವಾಸಿಯಾಗಿದ್ದಾರೆ. ಸಿದ್ಧಯ್ಯ ಪುರಾಣಿಕ ಡಾ. ಡಿ.ಸಿ. ಪಾವಟೆ, ಕುಲಗೋಡ ತಿಮ್ಮಣ್ಣರ "ಶ್ರೀ ಕೃಷ್ಣ ಪಾರಿಜಾತ" ಬೈಲಾಟ ಪ್ರಸಿದ್ಧಿಯನ್ನು ಪಡೆದಿದೆ. ಇಂತಹ ಪರಿಸರದಲ್ಲಿ ಡಾ. ಅಂಬೇಡ್ಕರ್ ಸ್ಮಾರಕ ಸಮಿತಿ ಟ್ರಸ್ಟ್-ಗೋಕಾಕ ಈ

ಸಂಸ್ಥೆಯಲ್ಲಿ ಚಿತ್ರಕಲಾ ಅಧ್ಯಯನಕ್ಕಾಗಿ ಅನುಕೂಲ ಮಾಡಿಕೊಟ್ಟಿದೆ. ಸಂಸ್ಥಾಪಕರಾದ ಶ್ರೀ ಎಸ್.ಎನ್. ಬಡಗಾಂವಿಯವರು ಅನುದಾನ ಪಡೆದ ಬಾಡಿಗೆ ಕಟ್ಟಡದಲ್ಲಿ ೧೯೮೬-೮೭ನೇ ಸಾಲಿನಲ್ಲಿ ಹುಟ್ಟುಹಾಕಿದ್ದಾರೆ. ಪ್ರಾರಂಭದಲ್ಲಿ (೧೯೮೬-೮೭) ಸುಮಾರು ೧೦೫ ವಿದ್ಯಾರ್ಥಿಗಳ ಪ್ರವೇಶದಿಂದ ಪ್ರಾರಂಭವಾದ ಈ ಕಲಾಶಾಲೆಯೂ ಇಲ್ಲಿಯವರೆಗೆ ಸುಮಾರು ೯೦ರಿಂದ ೧೦೦ ವಿದ್ಯಾರ್ಥಿಗಳಿಂದ ತರಗತಿಗಳನ್ನು ನಡೆಸಲಾಗಿರುತ್ತದೆ.

೧೯೮೭ರಲ್ಲಿ ಡಿ.ಎಂ.ಸಿ. ಪ್ರಥಮ ಹಾಗೂ ದ್ವಿತೀಯ ವರ್ಷದ ತರಗತಿಗಳಿದ್ದು ನಂತರ ಮೂರು ಮತ್ತು ನಾಲ್ಕನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್ ಡಿಪ್ಲೋಮಾ ಮುಗಿದ ಮೇಲೆ ಆರ್ಟ್ ಮಾಸ್ಟರ್ ಪದವಿ, ೬ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್(ಜಿ.ಡಿ)ವರೆಗೂ ಇರುತ್ತದೆ. ೨೦೦೧ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಸಂಲಗ್ನ ಹೊಂದಿ ಕಲಾಮೂಲ ಪ್ರಥಮ, ದ್ವಿತೀಯ ತರಗತಿಗಳು ಮುಗಿದ ನಂತರ ಮೂರು, ನಾಲ್ಕು, ಐದನೆಯ ವರ್ಷದ ವಿಶೇಷ ಪರಿಣಿತಿ ಚಿತ್ರಕಲೆ ಡಿಪ್ಲೋಮಾ ತರಗತಿಗಳು ಪ್ರಾರಂಭಗೊಂಡಿವೆ. ನಂತರದಲ್ಲಿ ದೃಶ್ಯಕಲಾ ಮೂಲ ಪ್ರಥಮ, ದ್ವಿತೀಯ ವರ್ಷ ವಿ.ವ್ಹಿ.ಎ. ಪದವಿ ಪ್ರಥಮ, ದ್ವಿತೀಯ, ಮೂರು ತರಗತಿಗಳನ್ನಾಗಿ ನಡೆಸಲಾಗುತ್ತಿದೆ.

ಗುರು ಕಲಾಮಂದಿರ, ರಾಯಚೂರು

"ಈ ಮಹಾವಿದ್ಯಾಲಯವು ೧೯೮೭ರಲ್ಲಿ ಸಾಂಸ್ಕೃತಿಕ ಸೇವಾ ಸಮಿತಿಯು ಕಲಾಮಂದಿರವನ್ನು ಸ್ಥಾಪಿಸಿದರು. ಉತ್ತಮ ಆಡಳಿತ ಮತ್ತು ಸಿಬ್ಬಂದಿ ವರ್ಗವಿದ್ದು ಇಲ್ಲಿನ ಪ್ರತಿಭಾನ್ವಿತ ವಿದ್ಯಾರ್ಥಿಗಳು ರಾಜ್ಯಮಟ್ಟದ ಕಲಾ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವುದು ಸಂತಸದ ಸಂಗತಿಯಾಗಿದೆ."[೫೦] ಮೊದಲಿಗೆ ಡಿ.ಎಂ.ಸಿ., ಎ.ಎಂ.ಜಿ.ಡಿ. ನಂತರದಲ್ಲಿ ಕಲಾಮೂಲ ಮೊದಲನೆಯ ಹಾಗೂ ಎರಡನೆಯ ವಿಶೇಷ ಪರಿಣಿತಿಯ ಮೂರು, ನಾಲ್ಕು, ಐದನೆಯ ತರಗತಿಗಳು ನಡೆಯುತ್ತಿದ್ದು ಪ್ರಸ್ತುತ ಚಂದ್ರಶೇಖರ್ ಅವರು ಪ್ರಾಚಾರ್ಯರಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

ಚಿತ್ರಕಲಾ ಮಹಾವಿದ್ಯಾಲಯ, ರಟ್ಟೀಹಳ್ಳಿ

೧೯೯೦-೯೧ರಲ್ಲಿ ಈ ಕಲಾ ಶಾಲೆಯ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಅನೇಕ ವಿದ್ಯಾರ್ಥಿಗಳು ಇಲ್ಲಿ ಬಂದು ಕಲಾ ಶಿಕ್ಷಣವನ್ನು ಪಡೆದುಕೊಂಡಿದ್ದಾರೆ. ಅಂದು ಜಿ.ಎಲ್. ಕಮ್ಮಾರರು ಪ್ರಾಚಾರ್ಯರಾಗಿದ್ದರು. ನಂತರ ಜಿ.ಎಸ್. ಅರ್ಕಚಾರಿಯವರು ಪ್ರಾಚಾರ್ಯರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಸಂಸ್ಥೆಯನ್ನು ಕಟ್ಟಿದ ಹಾಗೂ ಆ ಸಂಸ್ಥೆಯ ಸಂಸ್ಥಾಪಕರಾದಂತಹ ಎನ್.ಎಂ. ನಂದಿಹಳ್ಳಿ ಯವರೊಂದಿಗೆ ಈ ಶಾಲೆಯ ಬಗ್ಗೆ ಚರ್ಚಿಸಿದಾಗ "ಸುತ್ತಮುತ್ತಲಿನ ಪ್ರದೇಶದಲ್ಲಿ ಯಾವುದೇ ಕಲಾ ಶಾಲೆಗಳು ಇಲ್ಲದೇ ಇರುವ ಕಾರಣ ಈ ಒಂದು ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಸಂಸ್ಥೆಯನ್ನು ಕಟ್ಟಿದ್ದೆವು ಎಂದು ಹೇಳುತ್ತಾರೆ."[೫೧] ಪ್ರಾರಂಭದ

ಹಂತದಲ್ಲಿ ಡಿ.ಎಂ.ಸಿ. ೨೦೦೧ರಲ್ಲಿ ಪ್ರಾರಂಭವಾದ ವಿಶೇಷ ಪರಿಣಿತಿ ತರಗತಿಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಸದ್ಯದ ಪರಿಸ್ಥಿತಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದುದರಿಂದ ಪದವಿಯನ್ನು ನಡೆಸಲಾಗುತ್ತಿಲ್ಲ.

ವೈಜಯಂತಿ ಚಿತ್ರಕಲಾ ಮಹಾವಿದ್ಯಾಲಯ, ಮೈಸೂರು

ಮೈಸೂರಿನ ಕಲೆ ಮತ್ತು ಸೌಂದರ್ಯವನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗಲು ಒಂದು ಕಲಾಶಾಲೆಯನ್ನು ಪ್ರಾರಂಭ ಮಾಡಬೇಕೆಂಬುದನ್ನು ತೀರ್ಮಾನಿಸಿದ ವೈಜಯಂತಿಯವರು. ಕೆಲವು ವಿದ್ವಾಂಸರೊಂದಿಗೆ ಅವರ ಮಾರ್ಗದರ್ಶನದಂತೆ ೧೯೯೧ರಲ್ಲಿ ವೈಜಯಂತಿ ಚಿತ್ರಕಲಾ ಮಹಾವಿದ್ಯಾಲಯವನ್ನು ಸ್ಥಾಪಿಸಿದರು. ಈ ಕಲಾಶಾಲೆಯ ಪ್ರಾಚಾರ್ಯರಾಗಿದ್ದ ಶ್ರೀ ಬಸವಣ್ಣ ಆಚಾರ್‌ರವರು ಹತ್ತು ವರ್ಷ ಸಂಬಳವಿಲ್ಲದೆ ಪ್ರಾಚಾರ್ಯ ವೃತ್ತಿಯನ್ನು ನಡೆಸಿಕೊಂಡು ಬಂದಿದ್ದರು. ಇದಕ್ಕೆ ಕಾರಣ(ಹೈಸ್ಕೂಲ್ ಚಿತ್ರಕಲಾ ಶಿಕ್ಷಕರಾಗಿ ನಿವೃತ್ತಿಯಾಗಿದ್ದರು.) ೨೦೦೧ರಲ್ಲಿ ರೋಟರಿ ಸಂಸ್ಥೆಯಲ್ಲಿ ಚಿತ್ರಕಲಾ ಶಿಕ್ಷಕರಿಗಾಗಿ ಕಾರ್ಯ ಮಾಡುತ್ತಿದ್ದರು. ನಿವೃತ್ತಿಯಾದ ನಂತರ ಸಿರವಾಡ ಅವರು ಪ್ರಾಚಾರ್ಯರಾಗಿ ನೇಮಕಗೊಂಡರು. ೨೦೦೪ರಲ್ಲಿ ಸಿರವಾಡ ಹುದ್ದೆಯನ್ನು ಬಿಟ್ಟರು. ನಂತರದಲ್ಲಿ ಕೃಷ್ಣಮೂರ್ತಿ ಎಚ್. ಇಲ್ಲಿಯವರೆಗೂ ಪ್ರಾಚಾರ್ಯರಾಗಿ ಕಾರ್ಯವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಮೊದಲಿಗೆ ಡಿ.ಎಂ.ಸಿ., ಎ.ಎಂ., ಜಿ.ಡಿ. ನಂತರದಲ್ಲಿ ದೃಶ್ಯಕಲಾ ಮೂಲ ಪ್ರಥಮ, ದ್ವಿತೀಯ ಹಾಗೂ ವಿಶೇಷ ಪರಿಣಿತಿ, ಮೂರು ವರ್ಷ ಡಿಪ್ಲೋಮಾ, ಈಗ ಬಿ.ವಿ.ಎ. ಪದವಿಯ ತರಗತಿಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಲಲಿತಕಲಾ ಮಹಾವಿದ್ಯಾಲಯ, ಚಿಕ್ಕೋಡಿ

ಈ ಸಂಸ್ಥೆ ೧೯೯೦-೯೧ರಲ್ಲಿ ಆರಂಭವಾಯಿತು. ಇದು ಚೆನ್ನಮ್ಮ ಮಹಿಳಾ ವಿದ್ಯಾ ಸಂಸ್ಥೆಯ ಅಧೀನದಲ್ಲಿದೆ. ಈ ಸಂಸ್ಥೆಯ ಅಧ್ಯಕ್ಷರಾದ ವಿ.ಎಸ್. ಹಂಜಿಯವರ ನೇತೃತ್ವದಲ್ಲಿ ಕಲಾಶಾಲೆ ಕಾರ್ಯನಿರ್ವಹಿಸುತ್ತಿತ್ತು. ಹೀರಾ ಪೂಜಾರ ಎಂಬುವರು ೧೯೯೦-೯೨ರಲ್ಲಿ ಪ್ರಾಚಾರ್ಯರಾಗಿ ೨೦೦೬ರವರೆಗೂ ಸೇವೆಯಲ್ಲಿದ್ದರು. ಈ ಸಂಸ್ಥೆಯು ಡಿ.ಎಂ.ಸಿ., ಎ.ಎಂ., ಜಿ.ಡಿ., ಕೋರ್ಸ್‌ಗಳನ್ನು ಪರಿಚಯ ಮಾಡಿತು. ಇದನ್ನು ತಿಳಿದು ಬಹಳಷ್ಟು ವಿದ್ಯಾರ್ಥಿಗಳು ಪ್ರವೇಶ ಪಡೆದರು. ಟಿ.ಪಿ. ಇಸ್ಸಾರ್ ವರದಿಯು ಪರಿಚಯಿಸಿದ ಅಥವಾ ಶಿಫಾರಸ್ಸು ಮಾಡಿದ ಕಲಾಮೂಲ ಪ್ರಥಮ, ದ್ವಿತೀಯ, ಮೂರು, ನಾಲ್ಕು, ಐದನೆಯ ವರ್ಷದ ವಿಶೇಷ ಪರಿಣಿತ ಚಿತ್ರಕಲಾ ಡಿಪ್ಲೊಮಾವನ್ನು ಈ ಸಂಸ್ಥೆ ಅಳವಡಿಸಿಕೊಂಡು ಶಿಕ್ಷಣ ನೀಡುತ್ತಿದೆ. ೨೦೦೭-೦೮ರಲ್ಲಿ ಚಂದ್ರಕಾಂತ ಲೋಹರ್ ಮತ್ತು ೨೦೦೯ರಲ್ಲಿ ಶ್ರೀಶೈಲ ಗವಾಯಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರು. ೨೦೧೨ರಲ್ಲಿ ಎಸ್.ಎಸ್. ಪೂಜಾರ ಪ್ರಾಚಾರ್ಯರಾಗಿ ಇಂದಿಗೂ ಸೇವೆಯಲ್ಲಿದ್ದಾರೆ. ಇವರುಗಳ ಮಾರ್ಗದರ್ಶನದಲ್ಲಿ ಕಲಾ ಚಟುವಟಿಕೆಗಳು ಉತ್ತಮವಾಗಿ ಪ್ರಗತಿಯಲ್ಲಿವೆ ಎಂಬುದಾಗಿ ಕಂಡುಬರುತ್ತಿವೆ.

ರವೀಂದ್ರ ಚಿತ್ರಕಲಾನಿಕೇತನ, ರೋಣ

"ಈ ಚಿತ್ರಕಲಾ ಶಾಲೆಯು ೧೯೯೧-೯೨ನೇ ಸಾಲಿನಲ್ಲಿ ಈ ಭಾಗದಲ್ಲಿ ಚಿತ್ರಕಲೆಯನ್ನು ಬೆಳೆಸಬೇಕು ಎಂಬ ನಿಟ್ಟಿನಲ್ಲಿ ಶ್ರೀ ಮಡಿವಾಳ ಮಾಚಿದೇವ ವಿದ್ಯಾಸಂಸ್ಥೆಯನ್ನು ತಾಲೂಕು ಸ್ಥಳವಾದಂತಹ ರೋಣದಲ್ಲಿ ಆರಂಭಿಸಿದರು. ಈ ಕಲಾಶಾಲೆಯನ್ನು ಶ್ರೀ ಬಾಬುರಾವ್ ಅವರು ಪ್ರಾರಂಭಿಸಿ ಕಲಾಶಾಲೆಯನ್ನು ಉತ್ತಮವಾಗಿ ನಡೆಸಿಕೊಂಡು ಹೋಗುತ್ತಿದ್ದರು. ಕೆಲವು ವರ್ಷಗಳ ನಂತರದಲ್ಲಿ ಶ್ರೀ ಶಾಂತವೀರ ಸಂಸ್ಥೆಯ ಆಶ್ರಯದಲ್ಲಿ ಶ್ರೀ ಸಾಲಿಮನಿಯವರ ನಿರ್ದೇಶನದಲ್ಲಿ ನಡೆಯುತ್ತಿರುವುದನ್ನು ಕಾಣಬಹುದು."[೨೨] ಈ ಸಂಸ್ಥೆಯ ಮೊದಲಿಗೆ ಡಿ.ಎಂ.ಸಿ., ಎರಡು ಮತ್ತು ಮೂರನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್, ಎ.ಎಂ., ಜಿ.ಡಿ. ಹಾಗೂ ಟಿ.ಪಿ. ಇಸ್ಸಾರ್ ವರದಿಯು ಶಿಫಾರಸ್ಸು ಮಾಡಿದ ದೃಶ್ಯಕಲಾ ಮೂಲ ಪ್ರಥಮ, ದ್ವಿತೀಯ ಹಾಗೂ ಮೂರು, ನಾಲ್ಕು, ಐದನೇ ವರ್ಷದ ವಿಶೇಷ ಪರಿಣಿತ ಚಿತ್ರಕಲೆ ಡಿಪ್ಲೊಮಾ ತರಗತಿಗಳು ಪ್ರಸ್ತುತವಾಗಿ ನಡೆಯುತ್ತಿರುವುದನ್ನು ಕಾಣಬಹುದು.

ನಾಗನೂರು ಡಾ. ಶಿವಬಸವಸ್ವಾಮಿ ಲಲಿತಕಲಾ ಮಹಾವಿದ್ಯಾಲಯ, ಬೆಳಗಾವಿ

ಶ್ರೀ ಸಿದ್ಧೇಶ್ವರ ಶಿಕ್ಷಣ ಸಂಸ್ಥೆ ರಾಯಭಾಗ ವತಿಯಿಂದ ೧೯೯೧–೯೨ನೇ ಸಾಲಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಎಚ್. ಹೊಸಮನಿ ಅವರು ಈ ಕಲಾಶಾಲೆಯನ್ನು ಸ್ಥಾಪಿಸಿದರು. ಈ ಕಲಾಶಾಲೆಯಲ್ಲಿ ಪ್ರಥಮ, ದ್ವಿತಿಯ ವರ್ಷದ ಡಿ.ಎಂ.ಸಿ, ಎ.ಎಂ. ಜಿ.ಡಿ ಡಿಪ್ಲೋಮಾ ತರಗತಿಗಳನ್ನು ೧೯೯೭ರವರೆಗೂ ಈ ಸಂಸ್ಥೆಯು ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ. ೧೯೯೭ರಲ್ಲಿ ಹಲವಾರು ಕಾರಣಗಳಿಂದ ಈ ಕಲಾಶಾಲೆಯು ಮುಚ್ಚಲ್ಪಟ್ಟಿತು. ೨೦೧೭ರ ಏಪ್ರಿಲ್‌ನಲ್ಲಿ ಶ್ರೀ ಸಿದ್ಧೇಶ್ವರ ಶಿಕ್ಷಣ ಸಂಸ್ಥೆಯಿಂದ ಬೆಳಗಾವಿಯ ಶಿಕಾಯಿನ ಎಜ್ಯುಕೇಶನ್ ಸೊಸಾಯಿಟಿಯ ಕಡೆಗೆ ವರ್ಗಾವಣೆಯನ್ನು ಮಾಡಿಕೊಂಡು ಈ ಕಲಾ ಶಾಲೆಯನ್ನು ಶ್ರೀ ಅನಿಲ್ ಪ್ರಕಾಶ ಅವರು ಪುನರ್ ಆರಂಭಿಸಿದರು.

ಪ್ರಸ್ತುತ ಸಂದರ್ಭದಲ್ಲಿ ಕಲಾಮೂಲ ಮೊದಲ ಮತ್ತು ಎರಡನೇ ವರ್ಷದ ತರಗತಿಗತಿಗಳನ್ನು ಹಾಗೂ ಬಿ.ವಿ.ಎ ಮತ್ತು ಅನ್ವಯಿಕ ಕಲೆಗೆ ಸಂಬಂಧಿಸಿದಂತಹ ತರಗತಿಗಳನ್ನು ಪ್ರಾರಂಭಿಸಿದ್ದಾರೆ. ಪ್ರಸ್ತುತ ವರ್ಷದಲ್ಲಿ ಸುಮಾರು ೨೨ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಪ್ರಾಚಾರ್ಯರಾಗಿ ಅರೋನ ಅನಿಲ್ ಪ್ರಕಾಶ ಅವರು ಕಾರ್ಯನಿರ್ವಹಿಸುತ್ತಿದ್ದಾರೆ.

ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಲಕಲ್

ಇಲಕಲ್ಲಿನ ವಿಜಯ ಚಿತ್ರಕಲಾ ಮಹಾವಿದ್ಯಾಲಯವು ಇಂದು ತನ್ನ ಕಾರ್ಯ ಸಾಧನೆಯಿಂದಾಗಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಯಶಸ್ವಿಗೆ ಬಸವರಾಜ ಗವಿಮಠರ ಹೋರಾಟ ಮತ್ತು ವಿದ್ಯಾರ್ಥಿಗಳ ಸಹಕಾರ ಶಕ್ತಿಯೇ ಕಾರಣವಾಗಿದೆ. ಸಾಧನೆಯ ಮೆಟ್ಟಿಲುಗಳನ್ನು ಏರುತ್ತಿರುವ ಇಂದಿನ ಈ ಸಂಸ್ಥೆಯ ಮುಖ್ಯಸ್ಥರು ಹಾಗೂ ವಿದ್ಯಾರ್ಥಿಗಳ ಅಪಾರ ಶ್ರಮವಿದೆ.

ಗವಿಮಠರು ಸ್ವತಂತ್ರವಾಗಿ ಶಿಕ್ಷಣ ಸಂಸ್ಥೆ(ಕಲಾಶಾಲೆ)ಯನ್ನು ಸ್ಥಾಪನೆ ಮಾಡಬೇಕೆಂದು ಇಲಕಲ್‌ಗೆ ಬಂದು ನೆಲೆಸಿ ಲಾಲ್‌ಬಹದ್ದೂರಶಾಸ್ತ್ರಿ ಯುವಕ ಸಂಘದ ಕಟ್ಟಡದಲ್ಲಿ ಕಲಾಶಾಲೆಯನ್ನು ೧೨-೦೮-೧೯೭೨ರಂದು ಮಹಾಂತ ಸ್ವಾಮಿಗಳು ಇಲಕಲ್ ಇವರು ಕಲಾಶಾಲೆಯನ್ನು ಉದ್ಘಾಟಿಸಿ ಚಾಲನೆ ನೀಡಿದರು. ೧೫ ವಿದ್ಯಾರ್ಥಿಗಳಿಂದ ಮೊದಲು ಪ್ರಾರಂಭಗೊಂಡು ಇಂದು ಹಲವಾರು ವಿದ್ಯಾರ್ಥಿಗಳು ಕಲಿತು ಚಿತ್ರಕಲಾವಿದರಾಗಿ ನಾಡಿನಾದ್ಯಂತ ಸೇವೆ ಸಲ್ಲಿಸುತ್ತಿದ್ದಾರೆ.

ಕಲಾಶಾಲೆಯ ಆರಂಭದಲ್ಲಿ ಡಿ.ಎಂ.ಸಿ. ಪ್ರಥಮ ದ್ವಿತೀಯ ಕೋರ್ಸ್‌ಗಳು ನಡೆಯುತ್ತಿದ್ದವು. ನಂತರ ಎ.ಎಂ., ಜಿ.ಡಿ. ಕೋರ್ಸ್‌ಗಳನ್ನು ಆರಂಭಿಸಲಾಯಿತು. ೨೦೦೧ರವರೆಗೆ ಇದೇ ರೀತಿಯ ಕೋರ್ಸ್‌ಗಳು ಜಾರಿಯಲ್ಲಿದ್ದವು. ನಂತರದಲ್ಲಿ ಸರಕಾರದ ಟಿ.ಪಿ. ಇಸ್ಸಾರ್ ವರದಿ ಜಾರಿಯಾದ ಮೇಲೆ ಫೌಂಡೇಶನ್ ಪ್ರಥಮ, ದ್ವಿತೀಯ ಕೋರ್ಸ್‌ಗಳು ಮತ್ತು ಡಿಪ್ಲೋಮಾ ಪೇಂಟಿಂಗ್ ತರಗತಿಗಳನ್ನು ನಡೆಸಲಾಗುತ್ತಿತ್ತು. ನಂತರ ಕನ್ನಡ ವಿಶ್ವವಿದ್ಯಾಲಯ ಈ ವಿಭಾಗವನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಬಿ.ವಿ.ಎ. ಎಂಬ ಮೂರು ವರ್ಷದ ಕೋರ್ಸ್‌ನ್ನು ಆರಂಭಿಸಿತು. ಫೌಂಡೇಶನ್ ಆದ ನಂತರ ಬಿ.ವಿ.ಎ. ಪದವಿ ಮುಗಿಸಿದ ವಿದ್ಯಾರ್ಥಿಗಳು ಪದವಿ ಆಧಾರದ ಮೇಲೆ ನಡೆಯುವ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಅರ್ಹರಿರುತ್ತಾರೆ.

"೨೦೧೧-೧೨ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರಿನಿಂದ ಎಂ.ಎಫ್.ಎ. (Master of Fine Art) ಎಂಬ ಸ್ನಾತಕೋತ್ತರ ವಿಭಾಗವನ್ನು ಇದೇ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ತೆರೆಯಲಾಯಿತು. ಎಂ.ಎಫ್.ಎ.ಯ ಮೊದಲನೆಯ ಬ್ಯಾಚ್‌ನಲ್ಲೇ ೨೧೮ ವಿದ್ಯಾರ್ಥಿಗಳು ಕಲಿತು ಉತ್ತೀರ್ಣರಾಗಿದ್ದಾರೆ. ಎರಡನೆಯ ಬ್ಯಾಚ್‌ನಲ್ಲಿ ಸುಮಾರು ೧೫೦ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರೆ, ಎಂ.ಎಫ್.ಎ.ಗೆ ಪ್ರವೇಶ ಪಡೆಯಲು ಎ.ಎಂ./ಜಿ.ಡಿ/ಬಿ.ವಿ.ಎ./ಬಿ.ಎಫ್.ಎ. ಪದವಿ ಪೂರೈಸಿರುವುದು ಅವಶ್ಯಕ."[೫೩]

ಪ್ರಸ್ತುತ ಕಲಾಶಾಲೆಯಲ್ಲಿ ವಿದ್ಯಾರ್ಥಿಗಳು ಪ್ರತಿ ವರ್ಷವೂ ಭಿನ್ನ ಭಿನ್ನ ವಸ್ತುಗಳಿಂದ ಗಣೇಶಮೂರ್ತಿಯನ್ನು ತಯಾರಿಸುವುದು. ಕಮ್ಮಟ, ಕವಿತೆಗಳಿಗೆ ಕಲೆಯ ಜೀವ ತುಂಬುವ ಕಾರ್ಯಕ್ರಮ, ಚಿತ್ರಕಲೆ ಕುರಿತಾದ ಕವಿಗೋಷ್ಠಿ ಇಂತಹ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದ್ದಾರೆ. ಇಂದು ನಾಡಿನಲ್ಲಿ ಗುರುತಿಸಿಕೊಂಡಿರುವ ಕಲಾಶಾಲೆಯಾಗಿದೆ.

ಶಿವಯೋಗೀಶ್ವರ ಲಲಿತಕಲಾ ಮಹಾವಿದ್ಯಾಲಯ, ಬೈಲಹೊಂಗಲ

ಶಿವಯೋಗೀಶ್ವರ ಲಲಿತಕಲಾ ಮಹಾವಿದ್ಯಾಲಯವು ಶ್ರೀ ಶಿವಾನಂದ ಭಾರತಿ ಶಿಕ್ಷಣ ಸಂಸ್ಥೆ(ಇಂಚಲ) ಇವರ ಅಡಿಯಲ್ಲಿ ೧೯೭೨ರಲ್ಲಿ ಸ್ಥಾಪನೆಯಾಯಿತು. ಈ ಪ್ರದೇಶದ ಶೈಕ್ಷಣಿಕ ಅಭಿವೃದ್ಧಿಗಾಗಿ ಈ ಸಂಸ್ಥೆಯ ಸೇವೆ ಶ್ಲಾಘನೀಯವಾದದ್ದು.

ಸಾಮಾಜಿಕವಾಗಿ ಪ್ರಾಚೀನ ಕಾಲದಿಂದಲೂ ಇಲ್ಲಿ ಸಾಂಸ್ಕೃತಿಕ ನೆಲೆಯು ಸಮೃದ್ಧವಾಗಿದೆ. ಇದರ ಇನ್ನಷ್ಟು ಅಭಿವೃದ್ಧಿಗಾಗಿ ಶ್ರೀ ಶಿವಾನಂದ ಭಾರತಿ ಸ್ವಾಮಿಗಳು ಇಲ್ಲಿ ಕಲಾಶಾಲೆಯನ್ನು

ಆರಂಭಿಸಿದರು. ಮೊದಲಿಗೆ ಪ್ರಾಚಾರ್ಯರಾದಂತಹ ಭೀಮಪ್ಪ, ರಾಮಪ್ಪ, ಮಹಾದೇವಪ್ಪ ಪತ್ತಾರ ಇದ್ದರು. ಈ ವಿದ್ಯಾಲಯದಲ್ಲಿ ಕಲಾಮೂಲ ತರಗತಿಗಳು ಎ.ಎಂ., ಜಿ.ಡಿ. ತರಗತಿಗಳನ್ನು ನಡೆಸಲಾಗುತ್ತಿತ್ತು. ಆ ಸಂದರ್ಭದಲ್ಲಿ ಈ ಕಲಾಶಾಲೆಯಲ್ಲಿ ೪೦ ರಿಂದ ೪೫ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆಯುತ್ತಿದ್ದರು. ನಂತರದಲ್ಲಿ ಕಲಾ ಮೂಲ ತರಗತಿಗಳು ಹಾಗೂ ವಿಶೇಷ ಪರಿಣಿತ ಡಿಪ್ಲೊಮಾ ಚಿತ್ರಕಲೆ ಮೂರು, ನಾಲ್ಕು, ಐದನೆಯ ವರ್ಷದ ತರಗತಿಗಳು ಪ್ರಾರಂಭವಾದವು. ಪ್ರಸ್ತುತ ಸಂದರ್ಭದಲ್ಲಿ ಇದೇ ಕೋರ್ಸ್‌ಗಳು ನಡೆಸುತ್ತಿದ್ದು ಕಲಾಶಾಲೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಕರ್ನಾಟಕ ಗಡಿನಾಡು ಚಿತ್ರಕಲಾ ಮಹಾವಿದ್ಯಾಲಯ, ನಿಪ್ಪಾಣಿ

ಈ ಕಲಾಶಾಲೆಯು ಅನುದಾನಿತ ಶಾಲೆಯಾಗಿದ್ದು ೧೯೯೧-೯೨ನೇ ಸಾಲಿನಲ್ಲಿ ಬಾಡಿಗೆ ಕಟ್ಟಡದಲ್ಲಿ ಶ್ರೀಯುತ ಬಿ.ಆರ್. ಪಾಟೀಲ, ಡಾ. ನೇರಳಿ, ಎಂ.ಎಲ್.ಎ. ಸುಭಾಷ್‌ಜೋಷಿ ಇವರನ್ನೊಳಗೊಂಡು ಪ್ರಾರಂಭವಾಯಿತು. ಸಂಸ್ಥಾಪಕ ಪ್ರಾಚಾರ್ಯರಾಗಿ ಶ್ರೀ ಎ.ಬಿ. ರಜಪೂತ ಅವರ ಪ್ರಯತ್ನ ಮತ್ತು ಆಡಳಿತ ಮಂಡಳಿಯ ಪ್ರಯತ್ನದಿಂದ ಕರ್ನಾಟಕ-ಮಹಾರಾಷ್ಟ್ರದ ಗಡಿಭಾಗದಲ್ಲಿ ಕಲೆಯ ಪ್ರಸಾರಕ್ಕೋಸ್ಕರ ಒಂದು ಕಲಾಶಾಲೆ ಇರಲಿ ಎಂಬ ನಿಟ್ಟಿನಲ್ಲಿ ಕರ್ನಾಟಕ ಗಡಿನಾಡು ಚಿತ್ರಕಲಾ ಮಹಾವಿದ್ಯಾಲಯವು ಆರಂಭವಾಯಿತು.

೧೯೯೨-೯೩ನೇ ಸಾಲಿನಲ್ಲಿ ಎ.ಬಿ. ರಜಪೂತ ಅವರು ಪ್ರಾಚಾರ್ಯರಾಗಿದ್ದಾಗ ಡಿ.ಎಂ.ಸಿ. ಪ್ರಥಮ, ದ್ವಿತೀಯ ತರಗತಿಗಳು ಪ್ರಾರಂಭವಾದವು. ನಂತರದಲ್ಲಿ ಸದಾನಂದ ಇಂಗಳೆಯವರು ಪ್ರಾಚಾರ್ಯರಾಗಿ ಕಾರ್ಯ ಪ್ರಾರಂಭಿಸಿದರು. ೧೯೯೫-೯೬ರ ತನಕ ತಮ್ಮ ಸೇವೆಯನ್ನು ಈ ಕಲಾಶಾಲೆಗೆ ನೀಡಿದರು. ೧೯೯೭-೯೮ರಲ್ಲಿ ಗಿರೀಶ್ ಆದಣ್ಣನ್ನವರ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರು. ೧೯೯೯ರಿಂದ ೨೦೦೩ ತನಕ ದಾದಾ ಸಾಹೇಬ್ ಆಗರ್ಸರ್ ಅವರು ಪ್ರಾಚಾರ್ಯ ರಾಗಿ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಪ್ರೌಢಶಾಲಾ ಶಿಕ್ಷಣ ಇಲಾಖೆಯು ಕಲಾಮೂಲ ಪ್ರಥಮ, ಕಲಾ ಮೂಲ ದ್ವಿತೀಯ ಹಾಗೂ ವಿಶೇಷ ಪರಿಣಿತ ಮೂರು, ನಾಲ್ಕು, ಐದನೆಯ ವರ್ಷದ ಚಿತ್ರಕಲಾ ಡಿಪ್ಲೋಮಾವನ್ನು ಟಿ.ಪಿ. ಇಸ್ಸಾರ್ ವರದಿಯ ಪ್ರಕಾರ ನಡೆಸಲಾಗುತ್ತಿದೆ. ಎಸ್.ಎಸ್. ಪೂಜಾರಿಯವರು ೨೦೦೩ರಿಂದ ೨೦೦೬ರವರೆಗೆ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರು. ಬಾಹುಬಲಿಯವರು ೨೦೦೭ರಿಂದ ಇಲ್ಲಿಯವರೆಗೂ ತಮ್ಮ ಕಲಾ ಶಾಲೆಯಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಹಾಗೂ ಕಲೆಗೆ, ಕಲಾ ವಿದ್ಯಾರ್ಥಿಗಳಿಗೂ ಉತ್ತಮ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ.

ಗುರುಪಾದಪ್ಪ ಚಿತ್ರಕಲಾ ಮಹಾವಿದ್ಯಾಲಯ, ಮುದ್ದೇಬಿಹಾಳ

ಚಿತ್ರಕಲಾ ಮಹಾವಿದ್ಯಾಲಯವು ೧೯೯೧-೯೨ನೇ ಸಾಲಿನಲ್ಲಿ ಎಸ್.ಜಿ. ಬಿರಾದಾರ, ಬಿ.ಜೆ. ಬಿರಾದಾರ ಇವರ ತಂದೆಯವರ ಸ್ಮರಣಾರ್ಥಕವಾಗಿ ಶ್ರೀ ಘನಮಠೇಶ್ವರ ಗ್ರಾಮೀಣ ವಿವಿಧೋದ್ದೇಶದ ಶೈಕ್ಷಣಿಕ ಸಂಸ್ಥೆ ಮುದ್ದೇಬಿಹಾಳ ಇದರ ಅಡಿಯಲ್ಲಿ ಪ್ರಾರಂಭಿಸಿದರು.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಕಲಾ ಶಿಕ್ಷಣ ನೀಡುವ ಸಲುವಾಗಿ ಕಲಾಶಾಲೆಯನ್ನು ಸ್ಥಾಪಿಸಿದರು. ೧೯೯೭-೯೮ನೇ ಸಾಲಿನಲ್ಲಿ ಶ್ರೀ ಎಂ.ಆಯ್. ಬೆನಕಟ್ಟಿಯವರು ಪ್ರಾಚಾರ್ಯರಾಗಿದ್ದಾಗ ಚಿತ್ರಕಲಾ ಶಾಲೆಯನ್ನು ಪ್ರಗತಿಯ ಪಥದತ್ತ ಕೊಂಡೊಯ್ದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ. ೨೦೦೮ರಲ್ಲಿ ಎಸ್.ಎಸ್. ಛಲವಾದಿಯವರು ಈ ಕಾಲೇಜಿನ ಪ್ರಾಚಾರ್ಯರಾಗಿ ನೇಮಕಗೊಂಡರು. ಕಲಾಶಾಲೆ ಪ್ರಾರಂಭದಲ್ಲಿ ಡಿ.ಎಂ.ಸಿ. ಡ್ರಾಯಿಂಗ್ ಅಂಡ್ ಪೇಂಟಿಂಗ್, ಆರ್ಟ್ ಮಾಸ್ಟರ್ ಪದವಿಗಳು ಪ್ರಾರಂಭವಾದವು. ನಂತರ ದೃಶ್ಯಕಲಾ ಮೂಲ ಪ್ರಥಮ, ದ್ವಿತೀಯ ಹಾಗೂ ಮೂರು, ನಾಲ್ಕು, ಐದನೆಯ ವರ್ಷದ ವಿಶೇಷ ಪರಿಣಿತಿ ಡಿಪ್ಲೋಮಾ ಚಿತ್ರಕಲೆಯನ್ನು ಈ ಕಲಾ ಶಾಲೆಯಲ್ಲಿ ನಡೆಸಿಕೊಂಡು ಬಂದಿದ್ದಾರೆ.

ರಾಜಾ ರವಿವರ್ಮ ಚಿತ್ರಕಲಾ ಮಹಾವಿದ್ಯಾಲಯ, ಬಸವನ ಬಾಗೇವಾಡಿ

ಈ ಕಲಾಶಾಲೆಯನ್ನು ೧೯೯೨ರಲ್ಲಿ ಶ್ರೀ ರಾಮಕೃಷ್ಣ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಸ್ಥಾಪಿಸಿದರು. ನಮ್ಮ ರಾಜ್ಯದಲ್ಲಿಯೇ ವಿಶೇಷವಾಗಿ ಹಾಗೂ ಮಾದರಿಯ ಚಿತ್ರಕಲಾ ಮಹಾವಿದ್ಯಾಲಯವನ್ನಾಗಿ ಮಾಡಲು ಕಲಾವಿದರಾದ ಶ್ರೀ ಆರ್.ಆರ್. ಸಿದ್ಧಾಪೂರ ಇವರು ಶ್ರಮಪಟ್ಟರು. ಪ್ರಾರಂಭದಲ್ಲಿ ಡಿ.ಎಂ.ಸಿ. ಪ್ರಥಮ ನಂತರ ಆರ್ಟ್ ಮಾಸ್ಟರ್ ಡಿಪ್ಲೋಮಾ, ಜಿ.ಡಿ. ತರಗತಿಗಳು ಹಾಗೂ ಫೌಂಡೇಶನ್ ಪ್ರಥಮ, ದ್ವಿತೀಯ, ವರ್ಷ, ವಿಶೇಷ ಪರಿಣಿತಿ ಮೂರು ವರ್ಷದ ತರಗತಿಗಳು. ನಂತರದಲ್ಲಿ ಬಿ.ವಿ.ಎ. ಪದವಿಯನ್ನು ನಡೆಸುತ್ತಿದ್ದಾರೆ. ಸದ್ಯದಲ್ಲಿ ಬಸವರಾಜ ಡಿ. ಹೆಗ್ಡಾಳರವರು ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ನೂತನ ಲಲಿತಕಲಾ ಮಹಾವಿದ್ಯಾಲಯ, ಲಿಂಗಸೂರು

ಲಿಂಗಸೂರಿನಲ್ಲಿರುವ ವಿದ್ಯಾರ್ಥಿಗಳು ಚಿತ್ರಕಲಾ ಶಿಕ್ಷಣ ಪಡೆಯುವುದಕ್ಕೆ ಸಿಂಧನೂರಿಗೆ ಇಲ್ಲವೇ ರಾಯಚೂರಿಗೆ ಹೋಗಬೇಕಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಇಲ್ಲಿನ ವಿದ್ಯಾರ್ಥಿಗಳಿಗೆ ಕಲಾಶಿಕ್ಷಣ ಪಡೆಯಲು ಅನುಕೂಲವಾಗಲೆನ್ನುವ ನಿಟ್ಟಿನಲ್ಲಿ "ನೂತನ ಎಜ್ಯುಕೇಶನ್ ಟ್ರಸ್ಟ್(ರಿ)" ರಾಯಚೂರು ಇದರ ಅಡಿಯಲ್ಲಿ "೧೯೯೨-೯೩ನೇ ಸಾಲಿನಲ್ಲಿ ಈ ಕಲಾಶಾಲೆಯನ್ನು ಸ್ಥಾಪಿಸಿದರು. ಮೊದಲಿಗೆ ಇಲ್ಲಿ ಡಿ.ಟಿ.ಸಿ., ಡಿ.ಎಂ.ಸಿ., ಎ.ಎಂ., ಜಿ.ಡಿ. ತರಗತಿಗಳು ನಡೆಯುತ್ತಿದ್ದವು. ನಂತರದಲ್ಲಿ ಟಿ.ಪಿ. ಇಸ್ಸಾರ್ ವರದಿಯ ಶಿಫಾರಸ್ಸಿನ ಮೇರೆಗೆ ದೃಶ್ಯಕಲಾ ಮೂಲ ಪ್ರಥಮ, ದ್ವಿತೀಯ ಹಾಗೂ ಮೂರನೇ, ನಾಲ್ಕು ಮತ್ತು ಐದನೇ ವರ್ಷದ ವಿಶೇಷ ಪರಿಣಿತ ಚಿತ್ರಕಲೆ ಡಿಪ್ಲೊಮಾ ತರಗತಿಗಳನ್ನು ನಡೆಸಿಕೊಂಡು ಬರುತ್ತಿದ್ದರು. ನಂತರದಲ್ಲಿ ಬಿ.ವಿ.ಎ., ತರಗತಿಗಳು ಪ್ರಾರಂಭಿಸಿರುವುದು ಆ ಭಾಗದ ವಿದ್ಯಾರ್ಥಿಗಳಿಗೆ ಪದವಿಯನ್ನು ಪಡೆಯಲು ಅನುಕೂಲಕರವಾದ ವಾತಾವರಣವನ್ನು ಈ ಕಲಾಶಾಲೆಯು ಸೃಷ್ಟಿಸಿದಂತಾಗಿದೆ."[೨೪] ಪ್ರಸ್ತುತವಾಗಿ ಸಂಗಮೇಶ ಎಸ್. ಚರ್ಕಿಯವರು ಪ್ರಾಚಾರ್ಯರಾಗಿ ತಮ್ಮ ಕಾರ್ಯಗಳನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯ, ತುಮಕೂರು

ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯವು ತುಮಕೂರಿನಲ್ಲಿ ೧೯೯೩ರಲ್ಲಿ ಪ್ರಾರಂಭವಾಯಿತು. ಡಯಟ್ ಕಾಲೇಜನೊಂದಿಗೆ ಸಂಲಗ್ನ ಹೊಂದಿದ್ದು ಶ್ರೀ ಕೊಟಪ್ಪನವರು ನಿಯೋಜಿತ ಪ್ರಾಚಾರ್ಯರಾಗಿದ್ದರು. ಪ್ರಾರಂಭದಲ್ಲಿ ಡಿ.ಎಂ.ಸಿ., ಪ್ರಥಮ, ದ್ವಿತೀಯ, ನಂತರದಲ್ಲಿ ಎ.ಎಂ.ಜಿ.ಡಿ. ತರಗತಿ ಪ್ರಾರಂಭಗೊಂಡವು. ೨೦೦೧ರಲ್ಲಿ ಕಲಾಮೂಲ ಪ್ರಥಮ ಹಾಗೂ ದ್ವಿತೀಯ ತರಗತಿಗಳು ಮೂರನೆಯ, ನಾಲ್ಕನೆಯ ವರ್ಷದ ವಿಶೇಷ ಪರಿಣಿತಿ ತರಗತಿಗಳು ಪ್ರಾರಂಭವಾಗಿ ನಡೆಯುತ್ತಿದ್ದವು. ೨೦೦೯-೨೦೧೦ನೇ ಸಾಲಿನಿಂದ ಸುಧಾಕುಮಾರಿ ಎಚ್. ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯದ ಪ್ರಭಾರಿ ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ೨೦೧೩ರಲ್ಲಿ ತುಮಕೂರು ವಿಶ್ವವಿದ್ಯಾಲಯದಿಂದ ಬಿ.ಎಫ್.ಎ. ತರಗತಿಗಳು ನಡೆಸಿಕೊಂಡು ಉತ್ತಮ ರೀತಿಯ ಫಲಿತಾಂಶ ಪಡೆದು ರಾಜ್ಯದ ಕೆಲವೆಡೆ ಶಿಕ್ಷಕರಾಗಿ ಇನ್ನೂ ಹಲವಾರು ವಿದ್ಯಾರ್ಥಿಗಳು ಉದ್ಯಮಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ನೂತನ ಲಲಿತಕಲಾ ಮಹಾವಿದ್ಯಾಲಯ, ಸಿಂಧನೂರು

ಸುವರ್ಣ ಕರ್ನಾಟಕದಲ್ಲಿ ವಿಶೇಷವಾಗಿ ಹೈದ್ರಾಬಾದ್ ಕರ್ನಾಟಕ ಶೈಕ್ಷಣಿಕವಾಗಿ ಹಿಂದುಳಿದಿದೆ. ಆದರೂ ಈ ಪ್ರದೇಶದ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕು ಭತ್ತದ ಖಣಜವೆಂದು ಪ್ರತೀತಿಯನ್ನು ಪಡೆದ ತಾಲ್ಲೂಕಾಗಿದ್ದೂ ಇಲ್ಲಿ ಅಲ್ಪಸಂಖ್ಯಾತ ಮತ್ತು ಹಿಂದುಳಿದ ಬಡಮಕ್ಕಳ ಜೀವನೋಪಾಯದ ಭರದಲ್ಲಿ ಮತ್ತು ಕಲೋಪಾಸನೆಯನ್ನು ನಿರಂತರವಾಗಿ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಕಲೆ ಮತ್ತು ಸಂಸ್ಕೃತಿಗಳ ತವರೂರಾಗಿದೆ. ಜೊತೆಗೆ ಅನೇಕ ಕಲಾ ಸಮುದಾಯಗಳನ್ನು ಬೆಳೆಸಿಕೊಂಡು ಬಂದ ಪ್ರದೇಶವಾಗಿದೆ. ಅವುಗಳಲ್ಲಿ ವಿಶೇಷವಾಗಿ ಡೊಳ್ಳು ಕುಣಿತ ಮತ್ತು ಜಾನಪದ ಹಾಡುಗಾರರು, ಸಾಹಿತಿಗಳು, ಶಿಲ್ಪಕಲಾವಿದರು, ಹಗಲು ವೇಷಗಾರರು. ಹೀಗೆ ವಿವಿಧತೆಯಲ್ಲಿ ಅವಿನಾಭಾವ ಸಂಬಂಧದೊಂದಿಗೆ ಈ ತಾಲೂಕು ತನ್ನದೇಯಾದ ಗೌರವವನ್ನು, ಕೀರ್ತಿಯನ್ನು ಹೆಚ್ಚಿಸಿಕೊಂಡಿದೆ. ಇಂತಹ ಕಲಾವಿದರ ಜೊತೆಯಲ್ಲಿಯೇ ಚಿತ್ರಕಲಾವಿದರನ್ನು, ಅವರುಗಳ ಆಸಕ್ತಿಗಳನ್ನು ಬೆಳೆಸುವ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿದೆ. ಸಾಂಪ್ರದಾಯಿಕ ಮತ್ತು ಅಕಾಡೆಮಿಕ್ ಶೈಲಿಯಲ್ಲಿ ಬೆಳೆಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಗಾಧ ಕನಸುಗಳೊಂದಿಗೆ ಸಿಂಧನೂರು, ಲಿಂಗಸೂರು, ರಾಯಚೂರು ನಗರಗಳಲ್ಲಿ ಹುಟ್ಟಿಕೊಂಡಿರುವ ಸಂಸ್ಥೆಗಳು, ನೂತನ ಲಲಿತ ಕಲಾ ಮಹಾವಿದ್ಯಾಲಯ ಸಿಂಧನೂರು ಎಂಬ ಶಿರೋನಾಮೆಯೊಂದಿಗೆ ೧೯೯೨-೯೩ ಮತ್ತು ೧೯೯೩-೯೪ನೇ ಸಾಲಿನಲ್ಲಿ ಅನುದಾನ ರಹಿತ ಒಂದು ಚಿಕ್ಕ ಬಾಡಿಗೆ ಕಟ್ಟಡದಲ್ಲಿ ಸುಮಾರು ಮೂವತ್ತೈದು ವಿದ್ಯಾರ್ಥಿಗಳಿಂದ ಡಿ.ಎಂ.ಸಿ. ಪ್ರಥಮ ವರ್ಷ ಶಿಕ್ಷಣವನ್ನು ಪ್ರಾರಂಭಿಸಲಾಯಿತು. ಈ ಸಂಸ್ಥೆಯನ್ನು ರಾಯಚೂರಿನ ಖಾಸಗಿ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಎಂ.ಆರ್. ಮಾಳಿಯವರು

ಚಿತ್ರಕಲಾ ಶಿಕ್ಷಣವನ್ನು ಪೂರೈಸಿಕೊಂಡಿರುವ ಕೆಲವು ನಿರುದ್ಯೋಗಿ ಯುವಕರಿಗೆ ಉದ್ಯೋಗದ ಜೊತೆ ವಿದ್ಯಾರ್ಥಿಗಳಿಗೆ ಹೊಸ ಭರವಸೆ ಹಾಗೂ ಆಶಾಗೋಪುರಗಳಿಗೆ ಪೋಷಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ.

"ಮೊದಲಿಗೆ ಶ್ರೀ ದಿವಂಗತ ಎಸ್.ವಿ. ಆಸೆಗೌಡ್ರು ಪ್ರಾರಂಭದಲ್ಲಿ ಒಂದು ವರ್ಷದವರೆಗೆ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರು. ನಂತರ ಅವರಿಗೆ ಅದೇ ಊರಿನ ಖಾಸಗಿ ಸಂಸ್ಥೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಉದ್ಯೋಗ ದೊರೆಯಿತು. ಆ ದಿನಗಳಲ್ಲಿ ಈ ಭಾಗದಲ್ಲಿ ಚಿತ್ರಕಲಾ ಶಿಕ್ಷಣವನ್ನು ಪಡೆದವರ ಸಂಖ್ಯೆ ತುಂಬಾ ವಿರಳ ಮತ್ತು ಯಾರು ಸಹ ಇರಲಿಲ್ಲ. ಈ ಭಾಗದಲ್ಲಿ ಚಿತ್ರಕಲಾ ಶಿಕ್ಷಣವನ್ನು ಪಡೆಯಬೇಕಾದವರು ಗುಲಬರ್ಗಾಕ್ಕೆ ಹೋಗಬೇಕಾದ ಅನಿವಾರ್ಯತೆಗಳಿದ್ದವು. ಆ ಕಾರಣದಿಂದಾಗಿ ಶ್ರೀ ಎಂ.ಆರ್. ಮಾಳಿಯವರು ತಮ್ಮ ಅಥಣಿ ಭಾಗದಲ್ಲಿ ಚಿತ್ರಕಲಾ ಶಿಕ್ಷಣವನ್ನು ಪಡೆದ ತಮ್ಮ ಸಂಬಂಧಿಕರಾದ ಶ್ರೀ ಸದಾಶಿವ ಸಂ. ಹಳ್ಳದಮಳ ಅಥಣಿ ಇವರನ್ನು ಪೂರ್ಣಕಾಲಿಕ ಪ್ರಾಚಾರ್ಯರಾಗಿ ಸೇವೆಗೆ ನೇಮಿಸಿದರು. ಇವರೂ ಸಹ ತಮ್ಮ ವೈಯಕ್ತಿಕ ಕಾರಣದಿಂದಾಗಿ ೧೯೯೯ರ ಸಾಲಿನಲ್ಲಿ ಉದ್ಯೋಗವನ್ನು ತೊರೆದರು. ನಂತರ ರಾಯಚೂರು ನಗರದ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸರಾಗಿದ್ದ ಶ್ರೀ ವಿರೇಶ ಹಿರೇಮಠ ಅವರನ್ನು ಗೌರವ ಪ್ರಾಚಾರ್ಯರನ್ನಾಗಿ ನೇಮಿಸಲಾಯಿತು. ನಂತರ ಮೋಹನ್ ಜಿ. ಹಂಪಿಯವರು ೨೦೦೨ರವರೆಗೆ ಕಾರ್ಯ ನಿರ್ವಹಿಸಿದರು. ನಂತರದಲ್ಲಿ ಶ್ರೀ ಎಂ.ಆರ್. ಮಾಳಿಯವರು ಮತ್ತು ಶ್ರೀ ಸದಾಶಿವ ಸಂ. ಹಳ್ಳದಮಳ ಅಥಣಿ ಇವರ ಪ್ರೀತಿಯ ಶಿಷ್ಯರಾಗಿದ್ದ ಅದೇ ಕಾಲೇಜಿನಲ್ಲಿ ಎ.ಎಂ. ಜಿಡಿ ಡಿಪ್ಲೊಮಾ ಚಿತ್ರಕಲಾ ಶಿಕ್ಷಣವನ್ನು ಪಡೆದಿದ್ದ ಶ್ರೀ ರಮೇಶ ಸಜ್ಜನ್‌ರವರನ್ನು ಕಲಾ ಮಹಾವಿದ್ಯಾಲಯದ ಪ್ರಾಂಶುಪಾಲರನ್ನಾಗಿ ನೇಮಿಸಲಾಯಿತು."[೫೫] ಅಂದಿನಿಂದ ಅವರೇ ಪ್ರಾಚಾರ್ಯರಾಗಿ ಆ ಭಾಗದ ಕಲಾಸಕ್ತ ಮಕ್ಕಳಿಗೆ ಚಿತ್ರಕಲಾ ಶಿಕ್ಷಣವನ್ನು ವಿಸ್ತರಿಸುತ್ತಾ ಸಾಗುತ್ತಿರುವುದನ್ನು ಕಾಣಬಹುದು.

ಪ್ರಾರಂಭದಲ್ಲಿ ಅಂದರೆ ೨೦೦೦ನೇ ಸಾಲಿನಲ್ಲಿ ಟಿ.ಪಿ. ಇಸ್ಸಾರ್‌ರವರ ಹೊಸ ಪಠ್ಯಕ್ರಮ ಪ್ರಾರಂಭಿಸಿದರು. ಎರಡು ವರ್ಷದ ಫೌಂಡೇಶನ್ ಕೋರ್ಸ್‌ಗಳು ನಂತರದಲ್ಲಿ ಮೂರು ವರ್ಷದ ವಿಶೇಷ ಪರಿಣಿತಿ ಚಿತ್ರಕಲೆ ಡಿಪ್ಲೊಮಾ ಕೋರ್ಸ್‌ಗಳನ್ನು ಪ್ರಾರಂಭಿಸಲಾಯಿತು. ೨೦೧೫-೨೦೧೬ನೇ ಸಾಲಿನಿಂದ ಬಿ.ವಿ.ಎ. ಚಿತ್ರಕಲೆ ಹಾಗೂ ಅನ್ವಯಿಕ ಕಲೆ ಶಿಲ್ಪಕಲೆ ಕೋರ್ಸ್‌ಗಳನ್ನು ಪ್ರಾರಂಭಿಸಲಾಯಿತು. ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಮತ್ತು ಸಿನಿಮಾ ಹಾಗೂ ಇತರೆ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಈ ಸಂಸ್ಥೆಯ ಹೆಗ್ಗಳಿಕೆಗೆ ಕಾರಣವೆನ್ನುತ್ತಾರೆ ಪ್ರಾಚಾರ್ಯರಾದ ರಮೇಶ್ ಸಜ್ಜನ್‌ರವರು.

ಸೃಜನ ಲಲಿತಕಲಾ ಮಹಾವಿದ್ಯಾಲಯ, ಧಾರವಾಡ

ಸೃಜನ ಲಲಿತಕಲಾ ಮಹಾವಿದ್ಯಾಲಯವು ೧೯೯೨-೯೩ನೇ ಸಾಲಿನಲ್ಲಿ ಅನುದಾನ ರಹಿತವಾಗಿ ಪ್ರಾರಂಭವಾಗಿ ನಡೆದುಕೊಂಡು ಬರುತ್ತಿದೆ. ಮೊದಲಿಗೆ ಆರ್. ಧರಣೆಪ್ಪಾ, ಎಫ್.ವಿ. ಚಿಕ್ಕಮಠ

ಹಾಗೂ ಶಿವಾನಂದ ಎಚ್. ಬಂಟನೂರು ಎಂಬುವವರಿಂದ ಪ್ರಾರಂಭವಾಯಿತು. ಮೊದಲಿಗೆ ಧರಣೆಪ್ಪ ಅವರು ನಂತರ ಎಫ್.ವಿ. ಚಿಕ್ಕಮಠರವರು ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ಈ ಕಲಾ ಶಾಲೆಯು ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿದ್ದೂ ತನ್ನದೇಯಾದಂತಹ ಪಠ್ಯಕ್ರಮ ಮತ್ತು ಪರೀಕ್ಷಾ ಪದ್ಧತಿಗಳನ್ನು ಅಳವಡಿಸಿಕೊಂಡಿದೆ.

ಅನುದಾನರಹಿತವಾಗಿದ್ದರಿಂದ ಮೂಲಭೂತ ಸೌಕರ್ಯಗಳನ್ನು ಪೂರ್ಣಪ್ರಮಾಣದಲ್ಲಿ ಒದಗಿಸಲು ಸಾಧ್ಯವಾಗಿಲ್ಲ. ಈ ಕಲಾಶಾಲೆ ಪ್ರಾರಂಭದಿಂದಲೂ ಕೂಡ ಬಿ.ಎಫ್.ಎ. ಪದವಿಯನ್ನು ಮಾತ್ರ ನೀಡುತ್ತಿದೆ. ವರ್ಷಕ್ಕೆ ಒಂದರಂತೆ ಕಲಾಶಿಬಿರ. ಕಲಾ ಪ್ರಾತ್ಯಕ್ಷಿಕೆ ಕಲಾಪ್ರದರ್ಶನ ನಡೆಸುತ್ತಾ ಬಂದಿರುತ್ತದೆ. ಧರಣೆಪ್ಪ ಅವರು ದೈವಾಧೀನರಾಗಿದ್ದಾರೆ.

ಬ್ಲೂ ಸ್ಟಾರ್ ಚಿತ್ರಕಲಾ ಮಹಾವಿದ್ಯಾಲಯ, ಯಾದಗಿರಿ

ಬ್ಲೂ ಸ್ಟಾರ್ ಚಿತ್ರಕಲಾ ಮಹಾವಿದ್ಯಾಲಯವು ೧೯೯೩ರಲ್ಲಿ ಆರಂಭವಾಯಿತು. ಟಿ.ಎಂ. ಬಾವಿದೊಡ್ಡಿಯವರು ಈ ಕಲಾಶಾಲೆಯ ಅಧ್ಯಕ್ಷರು. ಇವರು ಗುಲಬರ್ಗಾದ ಸಂತ ಕಬೀರ್‌ದಾಸ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಶಾಲೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಪ್ರಾರಂಭದಲ್ಲಿ ಡಿ.ಎಂ.ಸಿ., ಎ.ಎಂ. ತರಗತಿಗಳು ನಡೆಯುತ್ತಿದ್ದವು. ನಂತರದಲ್ಲಿ ಕಲಾಮೂಲ ಪ್ರಥಮ, ದ್ವಿತೀಯ ಹಾಗೂ ವಿಶೇಷ ಪರಿಣಿತ ಚಿತ್ರಕಲೆ ಡಿಪ್ಲೋಮಾ ತರಗತಿಗಳು ನಡೆಯುತ್ತಿರುವುದನ್ನು ಕಾಣಬಹುದು. ಕಲಾಶಾಲೆ ಮೊದಲು ಪ್ರಾರಂಭವಾದಾಗ ವೀರಶೈವ ಕಲ್ಯಾಣ ಮಂಟಪದ ಹತ್ತಿರ ಇತ್ತು. ಪ್ರಸ್ತುತ ರೈಲ್ವೆ ಸ್ಟೇಷನ್ ಹತ್ತಿರ ವಿದ್ಯಾ ಕಾಂಪ್ಲೆಕ್ಸ್ ಹಿಂದುಗಡೆ ಇದೆ. ಇಲ್ಲಿ ಕಲಿತಂತಹ ವಿದ್ಯಾರ್ಥಿಗಳು ಶಿಕ್ಷಕರಾಗಿ ಮತ್ತು ಖಾಸಗಿ ಕಂಪನಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈಗಲೂ ಕೆಲವು ವಿದ್ಯಾರ್ಥಿಗಳು ಕಲಾಶಿಕ್ಷಣವನ್ನು ಪಡೆಯುತ್ತಿದ್ದಾರೆ.

ಸಿದ್ದಾರ್ಥ ಲಲಿತಕಲಾ ಮಹಾವಿದ್ಯಾಲಯ, ಗೋಕಾಕ

ದಿ ಕರ್ನಾಟಕ ರೂರಲ್ ಎಜ್ಯುಕೇಶನ್ ಸೊಸೈಟಿ(ರಿ), ಹಿಡಿಕಲ್ ಡ್ಯಾಂ ಇದರ ಆಶ್ರಯದಲ್ಲಿ ೧೯೯೩-೯೪ನೇ ಸಾಲಿನಲ್ಲಿ ಗೋಕಾಕ ನಗರದಲ್ಲಿ ೨೫ ಜೂನ್ ೧೯೯೩ರಂದು ಕರ್ನಾಟಕ ಸರಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕೃತ ಅನುಮತಿ ಹಾಗೂ ಮಾನ್ಯತೆಯೊಂದಿಗೆ ಆರಂಭಗೊಂಡಿತು. ಇದು ಅನುದಾನ ರಹಿತವಾಗಿ ಒಂದು ಬಾಡಿಗೆ ಕಟ್ಟಡದಲ್ಲಿ ಡಿ.ಎಂ.ಸಿ. ಪ್ರಥಮ ವರ್ಷದ ಕಲಾಶಿಕ್ಷಣವನ್ನು ತರಗತಿಯೊಂದಿಗೆ ಪ್ರಾರಂಭಿಸಲಾಯಿತು. ಆರಂಭದಲ್ಲಿ ಬಸವರಾಜ ಕೆ.ಎಚ್. ಎಂಬುವವರು ಪ್ರಾಚಾರ್ಯರಾಗಿ ಎರಡು ವರ್ಷ ಸೇವೆ ಸಲ್ಲಿಸಿದರು. ನಂತರದಲ್ಲಿ ೨೦೦೦ನೇ ಇಸ್ವಿಯವರೆಗೂ ಎ.ಬಿ. ನಾವ್ಹಿ ಎಂಬುವವರು ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರು. ನಂತರದಲ್ಲಿ ಜಯಾನಂದ ಮಾದರ್ ಪ್ರಾಚಾರ್ಯರಾದ ಮೇಲೆ ಟಿ.ಪಿ. ಇಸ್ಸಾರ್ ಅವರ ಹೊಸ ಪಠ್ಯಕ್ರಮ ಪ್ರಾರಂಭಿಸಿದರು. ಎರಡು ವರ್ಷದ ಫೌಂಡೇಶನ್ ಕೋರ್ಸ್‌ಗಳು ನಂತರದಲ್ಲಿ ಮೂರು ವರ್ಷದ ವಿಶೇಷ ಪರಿಣಿತಿ ಡಿಪ್ಲೊಮಾ ಕೋರ್ಸ್‌ಗಳನ್ನು

ಪ್ರಾರಂಭಿಸಲಾಯಿತು. ಪ್ರಾಚಾರ್ಯರು ವಿದ್ಯಾಲಯದ ಕಾರ್ಯ ಚಟುವಟಿಕೆಯನ್ನು ಹಾಗೂ ಪಠ್ಯವಿಷಯಗಳನ್ನು ಚುರುಕುಗೊಳಿಸುವುದರೊಂದಿಗೆ ಪ್ರತಿ ವರ್ಷದ ಫಲಿತಾಂಶ ಉತ್ತಮಗೊಳಿಸುವಲ್ಲಿ ಶ್ರಮಿಸುತ್ತಿದ್ದಾರೆ.

ಹಂಪಿ ಲಲಿತಕಲಾ ಮಹಾವಿದ್ಯಾಲಯ, ಹೊಸಪೇಟೆ

ಈ ಕಲಾಶಾಲೆಯನ್ನು ೧೯೯೩-೯೪ನೇ ಸಾಲಿನಲ್ಲಿ ಸ್ಥಾಪನೆ ಮಾಡಲಾಗಿದೆ. ದಿ. ರಾಮಪ್ಪ ಇವರು ಗದುಗಿನ ವಿಜಯ ಕಲಾಮಂದಿರದಲ್ಲಿ ಎ.ಎಂ. ಜಿ.ಡಿ. ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಬಂದು ಹೊಸಪೇಟೆ ೨೭ನೇ ವಾರ್ಡ್‌ನ ಚಪ್ಪರದಹಳ್ಳಿಯ ಒಂದು ನಿವಾಸದಲ್ಲಿ ಮೊಟ್ಟಮೊದಲಿಗೆ ತರಗತಿಗಳನ್ನು ಪ್ರಾರಂಭಿಸಿದರು. ಕೆಲವು ದಿನಗಳ ನಂತರ ಅಲ್ಲಿನ ಜನಗಳ ಸಮಸ್ಯೆಗಳಿಂದ ಶಾನ್‌ಭಾಗ ಸರ್ಕಲ್ ಹತ್ತಿರಕ್ಕೆ ವರ್ಗಾಯಿಸಿಕೊಂಡು ಖಾಸಗಿ ಕಟ್ಟಡದಲ್ಲಿ ಐದನೇ ವರ್ಷದ ಚಿತ್ರಕಲೆ ತರಗತಿಗಳನ್ನು ಪ್ರಾರಂಭಿಸಲಾಯಿತು. ೨೦೦೬ಲ್ಲಿ ಎಸ್. ನೀಲಪ್ಪನವರನ್ನು ಉಪನ್ಯಾಸಕರಾಗಿ ಆ ಕಲಾಶಾಲೆಯಲ್ಲಿ ಸೇರಿಕೊಂಡರು. ಪ್ರಸ್ತುತ ಸಂದರ್ಭದಲ್ಲಿ ಭಾಷಾ ಸಾಹೇಬರು ಪ್ರಾಚಾರ್ಯರಾಗಿದ್ದಾರೆ.

ಪ್ರಸ್ತುತ ಕಲಾಮೂಲ ಪ್ರಥಮ, ಕಲಾಮೂಲ ದ್ವಿತೀಯ ಹಾಗೂ ಮೂರನೇ, ನಾಲ್ಕನೇ, ಐದನೇ ವರ್ಷ ವಿಶೇಷ ಪರಿಣಿತಿಯ ತರಗತಿಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಇಲಕಲ್ ವಜ್ರಪ್ಪ ಚಿತ್ರಕಲಾ ಮಹಾವಿದ್ಯಾಲಯ, ಹೊಸದುರ್ಗ

"ಈ ಮಹಾವಿದ್ಯಾಲಯವು ೧೯೯೩-೯೪ನೇ ಸಾಲಿನಲ್ಲಿ ಪ್ರಾರಂಭವಾಯಿತು. ಸುಮತಿ ಕುಮಾರ್ ಅವರ ಖಾಸಗಿ ಒಡೆತನದಲ್ಲಿ ನಡೆಸಿಕೊಂಡು ಹೋಗುತ್ತಿದ್ದರು."[೫೬] ಮೊದಲು ಡಿ.ಎಂ.ಸಿ., ಎ.ಎಂ., ಜಿ.ಡಿ., ನಂತರದಲ್ಲಿ ವಿಶೇಷ ಪರಿಣಿತಿ ಚಿತ್ರಕಲೆಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಪ್ರಾರಂಭದಲ್ಲಿ ಚಂದ್ರಪ್ಪ ಎಂಬುವವರು ಪ್ರಾಚಾರ್ಯರಾಗಿದ್ದರು. ಸದ್ಯ ತ್ಯಾಗರಾಜ್ ಅವರು ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಭವಾನಿ ಲಲಿತಕಲಾ ಮಹಾವಿದ್ಯಾಲಯ, ಬಳ್ಳಾರಿ

ಭವಾನಿ ಲಲಿತಕಲಾ ಮಹಾವಿದ್ಯಾಲಯ ೧೯೯೩-೯೪ನೇ ಸಾಲಿನಲ್ಲಿ ಆರ್.ಎಲ್. ಜಾದವ ಪ್ರಾರಂಭಿಸಿದರು. ಈ ಪ್ರದೇಶದಲ್ಲಿ ವಿದ್ಯಾರ್ಥಿಗಳು ಕಲಿಯಲು ಯಾವುದೇ ಕಲಾಶಾಲೆಗಳು ಇರಲಿಲ್ಲ. ಕಲೆಯನ್ನು ಕಲಿಯಬೇಕೆಂದು ಇಷ್ಟಪಟ್ಟಂತಹ ವಿದ್ಯಾರ್ಥಿಗಳು ದೂರದ ಊರಾದ ಗದಗಿಗೆ ಹೋಗಬೇಕಾಗಿತ್ತು. "ಇಂತಹ ಸಮಸ್ಯೆಯನ್ನು ಮನಗಂಡು ಜಾದವ್‌ರವರ ಮನೆದೇವರಾದ ಭವಾನಿ ಹೆಸರಿನಲ್ಲಿ ಲಲಿತಕಲಾ ಮಹಾವಿದ್ಯಾಲಯವನ್ನು ಹುಟ್ಟುಹಾಕಿದರು".[೫೭] ಮೊದಲಿಗೆ ಡಿ.ಎಂ.ಸಿ. ಎ.ಎಂ.ಜಿ.ಡಿ. ತರಗತಿಗಳನ್ನು ನಡೆಸುತ್ತಿದ್ದರು. ಈ ಕೋರ್ಸ್‌ಗಳನ್ನು ಮಾಡಿದಂತಹ ವಿದ್ಯಾರ್ಥಿಗಳಿಗೆ ಕೆಲಸವೂ ಸಿಗುತ್ತಿತ್ತು. ಆದರೆ ೨೦೦೧ರಲ್ಲಿ ಟಿ.ಪಿ. ಇಸ್ಸಾರ್ ವರದಿ ಜಾರಿಗೆ ಆದ ಮೇಲೆ ದೃಶ್ಯಕಲಾ ಮೂಲ ಪ್ರಥಮ, ದ್ವಿತೀಯ ಹಾಗೂ ಮೂರು, ನಾಲ್ಕು, ಐದನೆಯ

ವಿಶೇಷ ಪರಿಣತಿ ಚಿತ್ರಕಲೆ ಡಿಪ್ಲೋಮಾ ತರಗತಿಗಳನ್ನು ನಡೆಸುವಂತೆ ಸರ್ಕಾರ ಆದೇಶಿಸಿತು. ಈ ಆದೇಶದಂತೆ ಈ ಕಲಾ ಶಾಲೆಯಲ್ಲಿ ಇಂದಿಗೂ ಕೂಡ ತರಗತಿಗಳನ್ನು ನಡೆಸಿಕೊಂಡು ಹೋಗುತ್ತಿರುವುದನ್ನು ಗಮನಿಸಬಹುದು.

ವ್ಯಕ್ತಿಗಳಲ್ಲಿಯೂ ಸಹ ಪೂರಕ, ಪ್ರೇರಕ ಸಮವಾದ ವ್ಯಕ್ತಿತ್ವವಿಲ್ಲದಿದ್ದರೂ, ದಿಟ್ಟವಾದಂತಹ ತನ್ನ ಸ್ವಂತ ಶಕ್ತಿಯಿಂದ ತಮ್ಮಲ್ಲಿರುವಂತಹ ಹೊಸ ಹೊಸ ಅಂಶಗಳನ್ನು ಮೆರೆದ ಹಲವಾರು ಅನೇಕ ಕಲಾವಿದರು ಇಂತಹ ಪ್ರದೇಶದಲ್ಲಿ ಕಾಣಿಸುತ್ತಾರೆ. ಇವರೊಂದಿಗೆ ಸರಿಸಮಾನರಾಗಿ ನಿಲ್ಲಬಲ್ಲ ಕಲಾವಿದ ಆರ್.ಎಲ್. ಜಾಧವರವರು.

ವೀರಭದ್ರೇಶ್ವರ ಚಿತ್ರಕಲಾ ಮಹಾವಿದ್ಯಾಲಯ, ಹುಮನಾಬಾದ್

ವೀರಭದ್ರೇಶ್ವರ ಚಿತ್ರಕಲಾ ಮಹಾವಿದ್ಯಾಲಯವನ್ನು ೧೯೯೩-೯೪ನೇ ಸಾಲಿನಲ್ಲಿ ಕರ್ನಾಟಕ ಫೈನ್ ಆರ್ಟ್ ಪರಿಷತ್ತು(ರಿ) ಗಡವಂತಿ ಸಂಸ್ಥೆ ಅಡಿಯಲ್ಲಿ ಪ್ರಾರಂಭವಾಗಿದೆ. ಈ ಸಂಸ್ಥೆಯ ಕಾರ್ಯದರ್ಶಿಯಾದ ಗುಂಡಪ್ಪಾ, ಟಿ. ದೊಡ್ಡಮನಿಯವರು ಈ ಪ್ರದೇಶದ ವಿದ್ಯಾರ್ಥಿಗಳಿಗೆ ಚಿತ್ರಕಲೆ ವಿದ್ಯಾಭ್ಯಾಸವನ್ನು ಮುಟ್ಟಿಸುವ ನಿಟ್ಟಿನಲ್ಲಿ ಕಲಾಶಾಲೆಯನ್ನು ಮುನ್ನಡೆಸುತ್ತಿರುವರು.

ಕಲಾಶಾಲೆಯಲ್ಲಿ ಪ್ರಥಮವಾಗಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವತಿಯಿಂದ ಡಿ.ಎಂ.ಸಿ. ತರಗತಿಗಳು ಪ್ರಾರಂಭವಾದವು. ನಂತರ ಡ್ರಾಯಿಂಗ್ ಮತ್ತು ಪೇಂಟಿಂಗ್ ಮೂರು ವರ್ಷಗಳ ಚಿತ್ರಕಲೆ ಶಿಕ್ಷಣ ನೀಡುತ್ತಿತ್ತು ಹಾಗೂ ಎರಡು ವರ್ಷದ ಕಲಾಮೂಲ ತರಗತಿ ಮತ್ತು ಮೂರು ವರ್ಷಗಳ ವಿಶೇಷ ಪರಿಣಿತಿ ತರಗತಿಗಳು ನಡೆಯುತ್ತಿದ್ದವು. ಅದಲ್ಲದೆ ೨೦೦೯-೧೦ನೇ ಸಾಲಿನಲ್ಲಿ ಚಿತ್ರಕಲಾ ಶಿಕ್ಷಕರ ತರಬೇತಿಯಾದ ಎ.ಟಿ.ಸಿ. ತರಗತಿಗಳು ನಡೆದು ಸದ್ಯ ತರಬೇತಿ ಕೋರ್ಸ್‌ನ್ನು ನಿಲ್ಲಿಸಲಾಗಿದೆ. ನಂತರ ಕನ್ನಡ ವಿಶ್ವವಿದ್ಯಾಲಯದಿಂದ ಮೂರು ವರ್ಷಗಳ ಬಿ.ವಿ.ಎ. ಪದವಿಯನ್ನು ನೀಡುತ್ತಿದೆ.

ಇಲ್ಲಿನ ಪ್ರಾಚಾರ್ಯರಾಗಿ ಶ್ರೀ ವ್ಹಿ.ಎನ್. ಜಾದವ ಅವರು ಕಲಾಶಾಲೆಯನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಕಲಾಶಾಲೆಯಲ್ಲಿ ಉತ್ತಮ ಗ್ಯಾಲರಿಯ ಸೌಲಭ್ಯವಿದೆ.

ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯ, ಬಸವಕಲ್ಯಾಣ

ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯ, ಬಸವಕಲ್ಯಾಣದಲ್ಲಿ ಜೂನ್ ೨೦, ೧೯೯೪ರಲ್ಲಿ ಪ್ರಾರಂಭವಾಯಿತು. ಅಂದಿನ ಶಾಸಕರಾದ ಶ್ರೀ ಬಸವರಾಜ ಪಾಟೀಲ ಅಟ್ಟೂರ ಅವರು ಚಿತ್ರಕಲಾ ಕಾಲೇಜಿನ ನಗರದ ಕೆ.ಎಚ್.ಬಿ. ಕಾಲೋನಿಯಲ್ಲಿ ಉದ್ಘಾಟಿಸಿದರು.

೧೯೯೩-೯೪ನೇ ಸಾಲಿನ ಪ್ರಾರಂಭದಲ್ಲಿ ಪ್ರಭುಲಿಂಗಯ್ಯ ಬಿ. ಟೆಂಕಸಾಲಿಮಠ ಅವರು ಈ ಕಲಾಶಾಲೆಯ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದರು. ಪ್ರಾರಂಭದಲ್ಲಿ ಎರಡು ವರ್ಷದ ಚಿತ್ರಕಲಾ ಶಿಕ್ಷಕರ ಶಿಕ್ಷಣ ತರಬೇತಿ ಡಿ.ಎಂ.ಸಿ. ಹಾಗೂ ಡಿಪ್ಲೋಮಾ ೩ನೇ ವರ್ಷದ ಚಿತ್ರಕಲೆ ಹಾಗೂ ೪ನೇ ವರ್ಷದ ಡಿಪ್ಲೋಮಾ ಮತ್ತು ೫ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್

ತರಗತಿಗಳು ಪ್ರಾರಂಭವಾದವು. ನಂತರದಲ್ಲಿ ಕಲಾಮೂಲ ಪ್ರಥಮ, ದ್ವಿತೀಯ, ಮೂರು ವರ್ಷದ ವಿಶೇಷ ಪರಿಣಿತಿ ತರಗತಿಗಳು ಪ್ರಸ್ತುತ ನಡೆಸುತ್ತಿರುವುದು ಕಂಡುಬರುತ್ತದೆ.

ಡಾ. ಎಸ್.ಎಮ್. ಪಂಡಿತ ಚಿತ್ರಕಲಾ ಮಹಾವಿದ್ಯಾಲಯ, ಬೀದರ

೧೯೯೪-೯೫ನೇ ಸಾಲಿನಲ್ಲಿ ಈ ಕಲಾಶಾಲೆಯ ಅಧ್ಯಕ್ಷರು ಹಾಗೂ ಪ್ರಾಚಾರ್ಯರಾದಂತಹ ಶ್ರೀ ಚಂದ್ರಶೇಖರ್ ಚಕ್ಕಿಯವರು ಚಿತ್ರಕಲಾ ಮಹಾವಿದ್ಯಾಲಯವನ್ನು ಸ್ಥಾಪಿಸಿದರು.

ಪ್ರಾರಂಭದಲ್ಲಿ ಡಿ.ಎಂ.ಸಿ. ಎರಡು ವರ್ಷದ ತರಗತಿಗಳು ನಡೆಯುತ್ತಿದ್ದವು. ಶ್ರೀ ಚಂದ್ರಶೇಖರ ಚಕ್ಕಿಯವರ ನಂತರ ಪ್ರಾಚಾರ್ಯರಾಗಿ ರೇವಣ್ಣಸಿದ್ಧಪ್ಪ ದೊಳೆಯವರು ಕಲಾಶಾಲೆಯನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದರು. ನಂತರದಲ್ಲಿ ಮೂರು, ನಾಲ್ಕು ಹಾಗೂ ಐದನೆಯ ವರ್ಷದ ಡಿಪ್ಲೋಮಾ ತರಗತಿಗಳು ನಡೆಯುತ್ತಿದ್ದವು. ನಂತರದಲ್ಲಿ ಕಲಾಮೂಲ ಪ್ರಥಮ, ದ್ವಿತೀಯ ಹಾಗೂ ವಿಶೇಷ ಪರಿಣಿತಿ ಮೂರು ವರ್ಷದ ತರಗತಿಗಳನ್ನು ನಡೆಸಲಾಗುತ್ತಿದೆ. ೨೦೦೮ರಲ್ಲಿ ರೇವಣ್ಣಸಿದ್ಧಪ್ಪ ದೊಳೆಯವರು ನಿಧನರಾದ ನಂತರ ಎಸ್. ಮೇತ್ರಿ, ಸುಮತಿ ಪ್ರಸ್ತುತ ಪ್ರವೀಣ ಗುತ್ತೆಯವರು ಕಲಾಶಾಲೆಯ ಪ್ರಾಚಾರ್ಯರಾಗಿ ಕಾರ್ಯವನ್ನು ಮುನ್ನೆಡೆಸಿಕೊಂಡು ಹೋಗುತ್ತಿದ್ದಾರೆ.

ದಿ ಆರ್ಟ್ ಇಂಟಿಗ್ರೇಶನ್ ಚಿತ್ರಕಲಾ ಮಹಾವಿದ್ಯಾಲಯ, ಕಲಬುರ್ಗಿ

೧೯೯೫ರಂದು ಈ ಕಲಾಶಾಲೆಯನ್ನು ಶ್ರೀ ನೀಲಮ್ಮ ಬೆಳಮಗಿ ಮತ್ತು ಎಂ.ಎಸ್. ಬೆಳಮಗಿ ಇಬ್ಬರೂ ಕೂಡಿ ಪ್ರಾರಂಭಿಸಿದರು. ಪ್ರಾರಂಭದಲ್ಲಿ ಇಪ್ಪತ್ತೈದು ವಿದ್ಯಾರ್ಥಿಗಳಿಂದ ನಡೆದು ಬಂದಿತು. ಸುಮಾರು ೧೨ ವರ್ಷಗಳ ಕಾಲ ಬಾಡಿಗೆ ಕಟ್ಟಡದಲ್ಲಿತ್ತು. ಕಲಾ ಶಾಲೆಯ ಸ್ಥಾಪನೆಗೆ ಕಾರಣವೇನೆಂದರೆ ಗುಲ್ಬರ್ಗಾದಲ್ಲಿ ಅಂದಾನಿಯವರ ಕಾಲೇಜು ಒಂದೇ ಇತ್ತು. ಆ ಕಾರಣ ಕಲಾ ಪ್ರೋತ್ಸಾಹಕ್ಕೆ ಮತ್ತೊಂದು ಕಾಲೇಜಿನ ಅವಶ್ಯಕತೆ ಇದ್ದುದರಿಂದ ಪ್ರಾರಂಭಿಸಿದೆವು ಎನ್ನುತ್ತಾರೆ. ಪ್ರಾರಂಭದಲ್ಲಿ ಡಿ.ಎಂ.ಸಿ. ಡಿಪ್ಲೋಮಾ ಕೋರ್ಸ್‌ಗಳು ಸುಮಾರು ೨೦೦೦ ಇಸ್ವಿಯ ತನಕ ನಡೆಸುತ್ತಾ ಬಂದಿದ್ದೇವೆ. ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ಪರೀಕ್ಷೆ ನಡೆಸಲಾಗುತ್ತಿತ್ತು. ತದನಂತರ ಕಲಾಮೂಲ ಪ್ರಥಮ ಮತ್ತು ದ್ವಿತೀಯ ವಿಶೇಷ ಪರಿಣಿತಿ ಡಿಪ್ಲೋಮಾ ಮೂರನೆಯ ವರ್ಷದ ನಾಲ್ಕು, ಐದನೆಯ ವರ್ಷದ ಡಿಪ್ಲೋಮಾ ಕೋರ್ಸ್‌ಗಳು ೨೦೧೨ರ ತನಕ ನಡೆದುಕೊಂಡು ಬಂದವು. ನಂತರದಲ್ಲಿ ದೃಶ್ಯಕಲಾ ಪ್ರಥಮ, ದ್ವಿತೀಯ ಹಾಗೂ ಬಿ.ವಿ.ಎ. ಪದವಿಯನ್ನು ನಡೆಸಲಾಗುತ್ತಿದೆ.

ಕನ್ನಡ ವಿಶ್ವವಿದ್ಯಾಲಯ ಹಂಪಿ, ಶಿಲ್ಪ ಮತ್ತು ವರ್ಣಚಿತ್ರಕಲಾ, ವಿಭಾಗ ಬಾದಾಮಿ ಬನಶಂಕರಿ

೧೯೯೬ರ ಸಾಲಿನಲ್ಲಿ ಗುರುಕುಲ ಮಾದರಿಯ ಶಿಲ್ಪಕಲಾ ಶಿಕ್ಷಣವನ್ನು ಮಾನ್ಯ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ ಅವರು ಜಕಣ ಮಂಟಪದಲ್ಲಿ ಉದ್ಘಾಟನೆಯನ್ನು ಮಾಡಿದರು. ೧೯೯೯ ನವ್ಹಂಬರ್‌ನಲ್ಲಿ ಮಾನ್ಯ ಕುಲಪತಿಗಳಾಗದ ಡಾ. ಎಂ. ಎಂ. ಕಲಬುರ್ಗಿ ಅವರು

ಬದಾಮಿ ಬನಶಂಕರಿಯಲ್ಲಿ ಇರುವಂತಹ ಪ್ರವಾಸೋದ್ಯಮ ಕಟ್ಟಡವನ್ನು ಬಾಡಿಗೆ ಪಡೆದು ಡಿಪ್ಲೊಮಾ ತರಗತಿಗಳನ್ನು ಪ್ರಾರಂಭಿಸಿದರು. ನಂತರದಲ್ಲಿ ಕಲಾಮೂಲ ತರಗತಿ, ಬಿ.ಎಫ್.ಎ, ತರಗತಿಗಳನ್ನು ನಡೆಸುತ್ತಿದ್ದರು. ೨೦೦೧ರಿಂದ ವರ್ಣಚಿತ್ರಕಲೆ ಹಾಗೂ ಶಿಲ್ಪಕಲೆಯ ಬಿ.ವಿ.ಎ. ತರಗತಿಗಳನ್ನು ಆರಂಭಿಸಲಾಯಿತು. ಡಾ. ಎಸ್.ಸಿ.ಪಾಟೀಲರು ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ೨೦೦೪-೦೫ನೇ ಸಾಲಿನಲ್ಲಿ ಎ.ಟಿ.ಸಿ (ಪ್ರಾಥಮಿಕ ಶಾಲಾ ಚಿತ್ರಕಲಾ ಶಿಕ್ಷಕರ ತರಬೇತಿ)ಯನ್ನು ಪ್ರಾರಂಭಿಸಿದರು. ಸುಮಾರು ಆರು ಬ್ಯಾಚುಗಳ ನಂತರದಲ್ಲಿ ಈ ತರಬೇತಿ ಕೋರ್ಸ್‌ನ್ನು ಸ್ಥಗಿತಗೊಳಿಸಲಾಯಿತು. ನಂತರದಲ್ಲಿ ಮುಖ್ಯಸ್ಥರಾಗಿ, ಆಡಳಿತಾತ್ಮಕವಾಗಿ ಕಾರ್ಯವನ್ನು ನಿರ್ವಹಿಸಿದ ಡಾ. ಕಲವೀರ ಮನ್ವಾಚಾರ್ ಅವರು ಡಾ. ಕೆ ರವೀಂದ್ರನಾಥ, ಡಾ. ಹೆಬ್ಬಾಲೆ ಕೆ ನಾಗೇಶ್, ಡಾ ಹನುಮಣ್ಣ ನಾಯಕ ದೊರೆ, ಪ್ರಸ್ತುತ ಸಂದರ್ಭದಲ್ಲಿ ಡಾ. ಅಶೋಕ ಕುಮಾರ ರಂಜೇರೆ ಅವರು ಆಡಳಿತಾತ್ಮಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಡಾ. ಕೃಷ್ಣಕಟ್ಟಿಯವರು ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಇಲ್ಲಿ ಕಲಾಮೂಲ ತರಗತಿಗಳು ಹಾಗೂ ಬಿ.ವಿ.ಎ ಚಿತ್ರಕಲೆ/ಶಿಲ್ಪಕಲೆ ಪದವಿ ತರಗತಿಗಳು ನಡೆಯುತ್ತವೆ. ಇಲ್ಲಿ ಡಾ. ಯಾದಪ್ಪ ಪರದೇಶಿ, ಡಾ. ಶಿವಾನಂದ ಬಂಟನೂರು ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಎನ್.ಎಂ. ಅಂಗಡಿ, ಯಾದಪ್ಪ ಪರದೇಶಿಯವರು ಕಲಿಸುತ್ತಿದ್ದಾರೆ. ಡಾ. ಪಲದಿನ್ನಿ, ಕಂಚಗಾರ ಅವರು ಕಲಿಸುತ್ತಿದ್ದಾರೆ.

ಇಲ್ಲಿ ಅಧ್ಯಯನ ಮಾಡಿದ ಹಲವಾರು ವಿದ್ಯಾರ್ಥಿಗಳು ಕಲಾವಿದರಾಗಿ, ಕಲಾ ಶಿಕ್ಷಕರಾಗಿ, ಕಲಾ ಸಾಹಿತಿಗಳಾಗಿ ಅಲ್ಲದೇ ಪಿ.ಎಚ್.ಡಿ ಪದವೀಧರರಾಗಿ ಅನೇಕ ರಾಜ್ಯಗಳ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಭುವನೇಶ್ವರಿ ಲಲಿತಕಲಾ ಮಹಾವಿದ್ಯಾಲಯ, ಹೂವಿನಹಡಗಲಿ

"ಬಳ್ಳಾರಿ ಜಿಲ್ಲೆಯಲ್ಲಿ ಯಾವುದೇ ಚಿತ್ರಕಲಾ ಮಹಾವಿದ್ಯಾಲಯಗಳಿರಲಿಲ್ಲ. ಚಿತ್ರಕಲಾ ವ್ಯಾಸಂಗ ಮಾಡಲು ಗದುಗಿಗೆ ಹೋಗಬೇಕಾಗಿತ್ತು. ಬಳ್ಳಾರಿ ಜಿಲ್ಲೆಯಲ್ಲಿ ಹಲವು ತಾಲೂಕುಗಳಲ್ಲಿ ಹಾಗೂ ಮುಂದುವರೆದ ಜಿಲ್ಲೆಯಾಗಿದ್ದರೂ ಅಲ್ಲಿ ಯಾವುದೇ ಕಲಾಶಾಲೆ ಇರಲಿಲ್ಲ. ಈ ನಿಟ್ಟಿನಲ್ಲಿ ಶ್ರೀ ಜಿ.ಬಿ. ವೀರಾಚಾರಿಯವರಿಂದ ೧೯೯೫-೯೬ರಲ್ಲಿ ಪ್ರಾರಂಭವಾಯಿತು. ಈ ಕಲಾಶಾಲೆ ಶ್ರೀ ಶ್ರೀ ಶ್ರೀ ನಂದಿಲಿಂಗಸ್ವಾಮಿಗಳ ಅಮೃತಹಸ್ತದಿಂದ ಉದ್ಘಾಟನೆಯಾಯಿತು. ಇದಕ್ಕೆ ಪ್ರೇರಣೆ ನೀಡಿದವರು ಬಿ. ಹಂಸನಂದಾಚಾರ್ಯ; ಇವರು ಕಲಾವಿದರಾದ್ದರಿಂದ ಕಲಾಶಾಲೆಯನ್ನು ಪ್ರಾರಂಭಿಸಲು ಪ್ರೋತ್ಸಾಹ ನೀಡಿದರು".[೫೮]

ಪ್ರಥಮ ಬಾರಿಗೆ ಒಂದು ಬಾಡಿಗೆಯ ಕಟ್ಟಡದಲ್ಲಿ ನಲವತ್ತು ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದರು. ಪ್ರಾರಂಭದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಇಲಾಖೆ ಕಲಾಶಾಲೆಯನ್ನು ನಡೆಸಲಿಕ್ಕೆ ಅನುಮತಿ ಕೊಟ್ಟಿತು. "೧೯೯೫-೯೬ನೇ ಸಾಲಿನಲ್ಲಿ "ಶಾಶ್ವತ ಅನುದಾನ ರಹಿತ ಎಂಬ

ಮುಚ್ಚಳಿಕೆ ಬರೆಸಿಕೊಂಡರು(Paramanetty Non Granted) ಅಂದು ಆ ತರಹದ ನಿಯಮವಿತ್ತು. ಶಾಶ್ವತ ಅನುದಾನ ಕೊಡುವುದಿಲ್ಲ ಎಂದಾಗ ಈ ಕಲಾಶಾಲೆಯ ಸ್ಥಾಪಕರು ಮುಚ್ಚಳಿಕೆಯನ್ನು ಸರಕಾರಕ್ಕೆ ಬರೆದುಕೊಟ್ಟರು"೫೫ ಈ ಕಲಾಶಾಲೆಯನ್ನು ಉಳಿಸಬೇಕು. ಇಲ್ಲಿ ಕಲಾಶಿಕ್ಷಣ ಬೆಳೆಯಲಿಲ್ಲ, ಕಲಿಯುವಂತಹ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಮೊದಲಿಗೆ ಡಿ.ಎಂ.ಸಿ. ಪ್ರಥಮ, ದ್ವಿತೀಯ, ತೃತೀಯ ಕೋರ್ಸ್ ನಂತರ ಎ.ಎಂ. ತರಗತಿಗಳು ನಡೆಯುತ್ತಿದ್ದವು. ಆದರೆ ೨೦೦೧ರಲ್ಲಿ ಹೊಸ ಪಠ್ಯಕ್ರಮ ಟಿ.ಪಿ. ಇಸ್ಸಾರ್ ವರದಿಯು ಜಾರಿಗೆ ತಂದರು. ಡಿ.ಎಂ.ಸಿ. ಆರ್ಟ್ ಮಾಸ್ಟರ್ ಫೌಂಡೇಶನ್ ಡಿಪ್ಲೋಮಾ ವಿಶೇಷ ಪರಿಣಿತಿ, ಎ.ಇಡಿ, ಎ.ಟಿ.ಸಿ. ತರಗತಿಗಳನ್ನು ನಡೆಸಲು ಸರಕಾರ ಆದೇಶ ಮಾಡಿತು. ಅದರ ಜೊತೆಗೆ ಕರ್ನಾಟಕದ ಕಲಾಶಾಲೆಗಳಲ್ಲಿ ಕಡ್ಡಾಯವಾಗಿ ಈ ಟಿ.ಪಿ. ಇಸ್ಸಾರ್ ವರದಿಯಲ್ಲಿ ಜಾರಿಯಾದ ಪಠ್ಯಕ್ರಮವನ್ನು ನಡೆಸಬೇಕೆಂದು ಆದೇಶ ಹೊರಡಿಸಿತು. ಇದು ರಾಜ್ಯಪಾಲರಿಂದ ಅಧಿಕೃತಗೊಂಡಿದೆ ಎಂಬುವುದು ಇವರ ಹೇಳಿಕೆಯಾಗಿದೆ.

ಕನ್ನಡ ವಿಶ್ವವಿದ್ಯಾಲಯ, ಹಂಪಿ, ದೃಶ್ಯಕಲಾ ವಿಭಾಗ

೧೯೯೨ರಲ್ಲಿ ಹಂಪಿಯ ವಿರೂಪಾಕ್ಷ ದೇವಾಲಯದ ಎದುರು ಇರುವ ಪುರಾತತ್ವ ಇಲಾಖೆಯ ವಸ್ತುಸಂಗ್ರಹಾಲಯದ ಬಸವ ಮಂಟಪದ ಕಟ್ಟಡದಲ್ಲಿ ಕಾರ್ಯನಿರ್ವಹಿಸಿತು. ನಂತರ ವಿಶ್ವವಿದ್ಯಾಲಯಕ್ಕೆ ಏಳು ನೂರು ಎಕರೆ ಜಮೀನು ಮಂಜೂರು ಮಾಡಿಸಿಕೊಂಡು ಕಮಲಾಪುರ-ಪಾಪಿನಾಯಕನಹಳ್ಳಿ ರಸ್ತೆ ಮಧ್ಯೆದಲ್ಲಿ ಕಟ್ಟಡವನ್ನು ನಿರ್ಮಾಣ ಮಾಡಿಕೊಂಡರು.

೧೯೯೪ ಆಗಸ್ಟ್ ತಿಂಗಳಲ್ಲಿ ವಿದ್ಯಾರಣ್ಯ ಹೆಸರಿನೊಂದಿಗೆ ತನ್ನದಾಗಿಸಿಕೊಡು ವಿಶ್ವವಿದ್ಯಾಲಯ ಸ್ಥಾಪನೆಗೊಂಡಿತು. ಈ ವಿಶ್ವವಿದ್ಯಾಲಯವು ಕನ್ನಡ ಸಂಸ್ಕೃತಿಗೆ ಹೊಸ ಆಯಾಮವನ್ನು ನೀಡುತ್ತಿದೆ. ಡಾ. ಚಂದ್ರಶೇಖರ ಕಂಬಾರರು ಅವರಲ್ಲಿ ಅಡಗಿದ್ದ ಸೃಜನಾತ್ಮಕತೆ ವಿಚಾರಗಳು ಇರುವುದರಿಂದ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾಗಿ ನೇಮಕಗೊಂಡರು.

ವಿಶ್ವವಿದ್ಯಾಲಯ ಪ್ರವೇಶದ ಎಡಭಾಗದಲ್ಲಿ ಕಾಣುವುದೇ ಕಾಯಕ ಮನೆ. ಸ್ವಲ್ಪ ಮುಂದೆ ಎದುರಿನ ಎತ್ತರದ ಮೆಟ್ಟಿಲುಗಳು ಮೇಲೆ ನಿಂತು ನೋಡುಗರನ್ನು ಸ್ವಾಗತಿಸುವ ಕಟ್ಟಡವೇ ಅಕ್ಷರ ಗ್ರಂಥಾಲಯ. ಅದರ ಕೆಳಭಾಗದ ಮಹಡಿಯಲ್ಲಿ ಹಂಪಿಯ ಐತಿಹಾಸಿಕ ಅವಶೇಷಗಳು. ಅನೇಕ ಶಿಲ್ಪಗಳು, ವೀರಗಲ್ಲುಗಳು ಎಲ್ಲವನ್ನು ಸುವ್ಯವಸ್ಥಿತವಾಗಿ ಜೋಡಿಸಿದ್ದಾರೆ.

ಗಿರಿಸೀಮೆಯಲ್ಲಿ ದೃಶ್ಯಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯದ ವಿದ್ಯಾರಣ್ಯ ಆವರಣದಲ್ಲಿರುವ ಗಿರಿಸೀಮೆಯ ಮೂರು ಕೋಣೆಗಳಿರುವ ಕಟ್ಟಡದಲ್ಲಿ ದೃಶ್ಯಕಲಾ ವಿಭಾಗದಡಿಯಲ್ಲಿ ಎಂ.ವಿ.ಎ. (ಚಿತ್ರಕಲೆ) ಸ್ನಾತಕೋತ್ತರ ಪದವಿ ತರಗತಿಗಳು ಆರಂಭಗೊಂಡವು. ಆಗ ಎಚ್.ಜೆ. ಲಕ್ಕಪ್ಪಗೌಡರು ಕುಲಪತಿಗಳಾಗಿದ್ದರು.

ಡಾ. ಕೆ.ವಿ. ನಾರಾಯಣ ಅವರು ಕುಲಸಚಿವರಾಗಿದ್ದರು. ದಾವಣಗೆರೆಯ ಹಿರಿಯ ಕಲಾವಿದರಾದ ವಿ.ಬಿ. ಹಿರೇಗೌಡ ಅವರು ಆರಂಭದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ, ಶಿವಾನಂದ ಬಂಟನೂರ ಅವರು ಸಹಾಯಕ ಪ್ರಾಧ್ಯಾಪಕರಾಗಿ(ತಾತ್ಕಾಲಿಕ) ಕೆಲಸ ಆರಂಭಿಸಿದರು. ಡಾ. ಎಸ್.ಸಿ. ಪಾಟೀಲರು ಬಾದಾಮಿಯಿಂದ ಬಂದು ಪಾಠ ಮಾಡುತ್ತಿದ್ದರು. ಎರಡ್ಮೂರು ವರ್ಷಗಳ ಬಳಿಕ ವಿಭಾಗವನ್ನು ಭುವನವಿಜಯ ಕಟ್ಟಡಕ್ಕೆ ವರ್ಗಾಯಿಸಲಾಯಿತು.

ಭುವನ ವಿಜಯದಲ್ಲಿ ದೃಶ್ಯಕಲಾ ವಿಭಾಗ

ದೃಶ್ಯಕಲಾ ವಿಭಾಗದಲ್ಲಿ ಎಂ.ವಿ.ಎ. ಪ್ರಥಮ ಹಾಗೂ ದ್ವಿತೀಯ ತರಗತಿಗಳು ಭುವನ ವಿಜಯದ ಒಂದು ಪಾರ್ಶ್ವದ ಆವರಣದಲ್ಲಿ ನಡೆಯುತ್ತಿದ್ದವು. ಇದಕ್ಕೆ ಸಂಬಂಧಿಸಿದಂತೆ ಪಾಠ ಬೋಧನೆ, ಪ್ರಾಯೋಗಿಕ ಪರೀಕ್ಷೆಗಳು ನಡೆಯುತ್ತಿದ್ದವು. ದೃಶ್ಯಕಲಾ ವಿಭಾಗದ ಬಿ.ವಿ.ಇಡಿ. ಚಿತ್ರಕಲೆ ತರಬೇತಿ ತರಗತಿಗಳು ಆರಂಭವಾದವು. ಎರಡು ವರ್ಷಗಳು ನಡೆದು ನಂತರದಲ್ಲಿ ತರಬೇತಿಯನ್ನು ವೃಂದ ಮತ್ತು ನೇಮಕಾತಿ ಸೇರಿಸುವವರೆಗೆ ನಡೆಸಬಾರದೆಂದು ಕೋರ್ಸ್‌ನ್ನು ಸ್ಥಗಿತಗೊಳಿಸಲಾಯಿತು.

ದೃಶ್ಯಕಲಾ ವಿಭಾಗದ ನೂತನ ಕಟ್ಟಡ ನಿರ್ಮಾಣವಾಗಿದ್ದು ಇದನ್ನು ವಿಶ್ವವಿದ್ಯಾಲಯದ ಪಶ್ಚಿಮದ 'ಬಿ' ಗೇಟ್ ಬಳಿ ಭವ್ಯ ಆಕರ್ಷಕ ಗಾಳಿ ಬೆಳಕಿನ ವ್ಯವಸ್ಥೆಯೊಂದಿಗೆ ವಿಶಾಲ ಕೋಣೆಗಳು ಶಾಶ್ವತ ಗ್ಯಾಲರಿ ವ್ಯವಸ್ಥೆಯನ್ನು ಹೊಂದಿದೆ. ಲಲಿತಕಲಾ ನಿಕಾಯದಲ್ಲಿ ನೃತ್ಯವಿಭಾಗ, ವಾಸ್ತುಶಿಲ್ಪ ವಿಭಾಗ, ಶಿಲ್ಪಶಾಸ್ತ್ರ ವಿಭಾಗ, ಪ್ರತಿಮಾಶಾಸ್ತ್ರ ವಿಭಾಗ ಹೀಗೆ ಹಲವು ವಿಭಾಗಗಳು ಕಾರ್ಯನಿರತವಾಗಿವೆ.

ಎಂ.ವಿ.ಎ. ಪ್ರಥಮ, ದ್ವಿತೀಯ ಮತ್ತು ಎಂ.ಫಿಲ್., ಪಿಎಚ್.ಡಿ., ಡಿಲಿಟ್ ಪದವಿಗಳು ನಡೆಯುತ್ತಿವೆ. ಪ್ರಾರಂಭವಾದಾಗ ಮುಖ್ಯಸ್ಥರಾಗಿ ಶ್ರೀ ಜಯಕುಮಾರ. ನಂತರದಲ್ಲಿ ಡಾ. ಹಿ.ಚಿ. ಬೋರಲಿಂಗಯ್ಯ, ಡಾ. ವಿಠ್ಠಲರಾವ್ ಗಾಯಕವಾಡ, ಡಾ. ಎಸ್.ಸಿ. ಪಾಟೀಲ, ಡಾ. ಕೆ. ರವೀಂದ್ರನಾಥ, ಡಾ. ಹೆಬ್ಬಾಲೆ ಕೆ. ನಾಗೇಶ್, ಡಾ. ಹನುಮಣ್ಣ ನಾಯಕ ದೊರೆ ಕೆಲಸ ನಿರ್ವಹಿಸಿದ್ದಾರೆ. ಪ್ರಸ್ತುತ ಮುಖ್ಯಸ್ಥರಾಗಿ ಡಾ. ಅಶೋಕಕುಮಾರ ರಂಜೇರೆಯವರು ಕಾರ್ಯನಿರ್ವಹಿಸುತ್ತಿರುವರು.

ಈ ದೃಶ್ಯಕಲಾ ವಿಭಾಗದಲ್ಲಿ ಹಿರಿಯ ಹಾಗೂ ಕಲಾಕ್ಷೇತ್ರದಲ್ಲಿ ಹೆಸರು ಮಾಡಿರುವಂತಹ ವಿದ್ವಾಂಸರನ್ನು ಕರೆಸಿ ಪ್ರಾತ್ಯಕ್ಷಿಕೆ ಹಾಗೂ ವಿಶೇಷ ಉಪನ್ಯಾಸಗಳನ್ನು ನೀಡುತ್ತಾರೆ. ಅಲ್ಲದೇ ಕಲಾಶಿಬಿರ, ವಿಚಾರಸಂಕಿರಣ, ಕಲಾಪ್ರದರ್ಶನಗಳನ್ನು ವಿಭಾಗದಲ್ಲಿ ಹಾಗೂ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಸಲಾಗುತ್ತದೆ.

ಪ್ರಸ್ತುತ ಡಾ. ಡಿ. ಪಾಂಡುರಂಗ ಬಾಬು ಅವರು ಡೀನ್‌ರಾಗಿ, ಡಾ. ಮೋಹನ್‌ರಾವ್ ಬಿ. ಪಂಚಾಳ ಅವರು ಮುಖ್ಯಸ್ಥರಾಗಿ ಹಾಗೂ ಡಾ. ಶಿವಾನಂದ ಹೆಚ್. ಬಂಟನೂರು, ಸಹಾಯಕ ಪ್ರಾಧ್ಯಾಪಕರು (ತಾತ್ಕಾಲಿಕ), ಸಹಾಯಕ ಪ್ರಾಧ್ಯಾಪಕರು, ಡಾ. ಕೃಷ್ಣೇಗೌಡ

ಹೆಚ್.ಎನ್., ಸಹಾಯಕ ಪ್ರಾಧ್ಯಾಪಕರು (ತಾತ್ಕಾಲಿಕ) ಇವರೆಲ್ಲ ದೃಶ್ಯಕಲಾ ವಿಭಾಗದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಪೂಜ್ಯ ಚನ್ನಬಸವ ಪಟ್ಟದ್ದೇವರು ಚಿತ್ರಕಲಾ ಮಹಾವಿದ್ಯಾಲಯ, ಭಾಲ್ಕಿ

ಈ ವಿದ್ಯಾಲಯವು "೧೯೯೪ - ೯೫ರಲ್ಲಿ ಜೂನ್ ತಿಂಗಳಲ್ಲಿ ಪ್ರಾರಂಭವಾಯಿತು. ಮೊದಲಿಗೆ ಡಿ.ಎಂ.ಸಿ. ಪ್ರಥಮ, ದ್ವಿತೀಯ ಹೀಗೆ ವರ್ಷದಿಂದ ವರ್ಷಕ್ಕೆ ಹಂತ ಹಂತವಾಗಿ ಬೆಳೆದು ಆರ್ಟ್ ಮಾಸ್ಟರ್ ಜಿ.ಡಿ. ಆರ್ಟ್‌ವರೆಗೂ ಬೆಳೆದು ಸಾವಿರಾರು ವಿದ್ಯಾರ್ಥಿಗಳು ಈ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸವನ್ನು ಮಾಡಿದ್ದಾರೆ."[೬೦] ಈ ಮಹಾವಿದ್ಯಾಲಯ ಪ್ರಸ್ತುತ ಸಂದರ್ಭದಲ್ಲಿ ಫೌಂಡೇಶನ್ ಪ್ರಥಮ, ದ್ವಿತೀಯ ಹಾಗೂ ಮೂರು ವರ್ಷಗಳ ವಿಶೇಷ ಪರಿಣಿತಿಯ ತರಗತಿಗಳನ್ನು ನಡೆಸುತ್ತಿದ್ದಾರೆ. ಪ್ರಸ್ತುತ ರೋಹಿತ ಪುಲೆಯವರು ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ರವಿವರ್ಮ ಚಿತ್ರಕಲಾ ಶಾಲೆ, ಮೈಸೂರು

೧೯೯೬-೯೭ನೇ ಸಾಲಿನಲ್ಲಿ ಈ ಕಲಾಶಾಲೆಯನ್ನು ಕಲಾವಿದರಾದ ಮುತ್ತಪ್ಪನವರು ಪ್ರಾರಂಭಿಸಿದರು. ೧೯೯೭-೯೮ರಲ್ಲಿ ಅವರು ನಿಧನರಾದರು. ನಂತರದಲ್ಲಿ ಉಮಾದೇವಿ ಕೆ.ಎಸ್. ಪ್ರಾಚಾರ್ಯರಾಗಿ ೨೦೧೩ರವರೆಗೆ ಕಾರ್ಯವನ್ನು ಮಾಡಿದರು. ಪ್ರಸ್ತುತ ೨೦೧೩-೧೪ರಿಂದ ಇಲ್ಲಿಯವರೆಗೂ ಶ್ರೀ ಶಿವಕುಮಾರ ಕೆಸರಮಡು ಅವರು ಪ್ರಾಚಾರ್ಯರಾಗಿ ಮುನ್ನಡಿಸಿಕೊಂಡು ಬರುತ್ತಿದ್ದಾರೆ.

ಡಿ.ಎಂ.ಸಿ., ಎಂ.ಎಂ. ಜಿ.ಡಿ. ಡಿಪ್ಲೋಮಾ ೨೦೦೮-೦೯ರಲ್ಲಿ ಬಿ.ವಿ.ಎ. ಪೇಟಿಂಗ್ ಕನ್ನಡ ವಿಶ್ವವಿದ್ಯಾಲಯದಿಂದ ಪದವಿ ನಡೆಸುತ್ತಿದ್ದಾರೆ. ೨೦೧೪-೧೫ನೇ ಸಾಲಿನಲ್ಲಿ ಅಪ್ಲೈಡ್ ಆರ್ಟ್, ಶಿಲ್ಪಕಲೆ ತರಗತಿಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ದಿ. ನ್ಯಾಚುರಲ್ ಫೈನ್ ಆರ್ಟ್ ಕಾಲೇಜು, ಬೀದರ

ದಿ ನ್ಯಾಚುರಲ್ ಫೈನ್ ಆರ್ಟ್ ಕಾಲೇಜ್ ೧೯೯೮ರಲ್ಲಿ ಕಲ್ಯಾಣ ಕರ್ನಾಟಕ ವಿದ್ಯಾವರ್ಧಕ ಟ್ರಸ್ಟ್(ರಿ) ಸಂಸ್ಥೆಯ ಅಡಿಯಲ್ಲಿ ಪ್ರಾರಂಭವಾಯಿತು.

ಮೊದಲಿಗೆ ಸೂರ್ಯಕಾಂತ ದುಬುಲಗುಂಡಿಯವರು ಕಲಾಶಾಲೆಯ ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ೨೦೧೦-೧೧ರಲ್ಲಿ ಅಲ್ ಹನೀಫಾ ಚಾರಿಟೇಬಲ್ ಟ್ರಸ್ಟ್(ರಿ) ಅವರು ಕಲಾಶಾಲೆಯನ್ನು ನಡೆಸಿಕೊಂಡು ಹೋಗುತ್ತಿದ್ದರು. ೨೦೧೦-೧೧ರಿಂದ ಶ್ರೀ ಸಂದೀಪ ಸಜ್ಜ ಅವರು ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ಪ್ರಾರಂಭದಲ್ಲಿ ಡಿ.ಎಂ.ಸಿ. ಪ್ರಥಮ, ದ್ವಿತೀಯ ವರ್ಷದ ತರಗತಿಗಳು ಪ್ರಾರಂಭವಾದವು. ನಂತರದಲ್ಲಿ ಕಲಾ ಮೂಲ, ಪ್ರಥಮ, ದ್ವಿತೀಯ ಹಾಗೂ ವಿಶೇಷ ಪರಿಣಿತಿ, ಚಿತ್ರಕಲೆ ನಂತರದಲ್ಲಿ ೨೦೧೫-೧೬ರಲ್ಲಿ ಬಿ.ವಿ.ಎ., ಪ್ರಥಮ, ದ್ವಿತೀಯ, ತೃತೀಯ ವರ್ಷದ ಪದವಿ ತರಗತಿಗಳನ್ನು ನಡೆಸುತ್ತಿದ್ದಾರೆ.

ಮಹಾದೇವಪ್ಪ ಹಿರೇನೂರು ಕಾಲೇಜ್ ಆಫ್ ವಿಜ್ಯುವಲ್ ಆರ್ಟ್, ಯಾದಗಿರಿ

ಯಾದಗಿರಿಯ ಲಕ್ಷ್ಮೀ ನಗರದಲ್ಲಿ ೨೦೦೨-೦೩ನೇ ಸಾಲಿನಲ್ಲಿ ಈ ಕಲಾ ಶಾಲೆಯು ಪ್ರಾರಂಭವಾಯಿತು. "ಕಲಾಶಾಲೆಯನ್ನು ನಡೆಸಿಕೊಂಡು ಹೊರಟಿರುವವರು ಅಧ್ಯಕ್ಷರಾದ ಜಿ.ಎಂ. ಹೀರೇನೂರುರವರು. ನವಅರುಣೋದಯ ಶಿಕ್ಷಣ ಸಂಸ್ಥೆಯ ಮುಖಾಂತರ ಯಾದಗಿರಿ ಭಾಗದ ಕಲಾಭಿವೃದ್ಧಿಗೆ ಶ್ರಮಿಸಲು ಮುಂದಾಗಿದ್ದಾರೆ. ಪ್ರಾಂಶುಪಾಲರಾಗಿ ರಾಕೇಶ್ ಹಿರೇನೂರು ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ಪೇಂಟಿಂಗ್ ಅಪ್ಲೈಡ್ ಆರ್ಟ್, ಮ್ಯೂರಲ್, ಪೋಟೋಗ್ರಫಿ ಮತ್ತು ಶಿಲ್ಪಕಲೆ ಈ ಪ್ರಕಾರದ ಬ್ಯಾಚುರಲ್ ಪದವಿಯ ತರಗತಿಗಳನ್ನು ನಡೆಯುತ್ತಿರುವುದನ್ನು ಗಮನಿಸಬಹುದು. ಕಲಾಶಾಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಲಾ ಚಟುವಟಿಕೆಗಳು ನಡೆಯುವುದನ್ನು ಕಾಣಬಹುದು."[೬೧]

ಬೆಂಗಳೂರು ವಿಶ್ವವಿದ್ಯಾಲಯ, ದೃಶ್ಯಕಲಾ ವಿಭಾಗ

೨೦೦೪ನೇ ಸಾಲಿನಲ್ಲಿ ಅಲ್ಲಿನ ಕುಲಪತಿಗಳಾದಂತಹ ಎಂ.ಎಸ್. ತಿಮ್ಮಪ್ಪನವರು ಈ ವಿಭಾಗವನ್ನು ಪ್ರಾರಂಭಿಸಿದರು. ಮೊದಲು ಬಿ.ವಿ.ಎ, ಬಿ.ಎಫ್.ಎ, ಎಂ.ವಿ.ಎ ಪದವಿ, ಸ್ನಾತಕೊತ್ತರ ಪದವಿಗಳು ಹಾಗೂ ಡಿಪ್ಲೊಮಾ ತರಗತಿಗಳನ್ನು ನಡೆಸುತ್ತಿದ್ದು, ಜಯಕುಮಾರ ಜಿ. ಅವರು ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿ ಕಲಿತ ವಿದ್ಯಾರ್ಥಿಗಳು ಖಾಸಗಿ, ಸರಕಾರಿ, ಸಂಘ–ಸಂಸ್ಥೆಗಳಲ್ಲಿ ಕಲಾವಿದರಾಗಿ, ಕಲಾ ಶಿಕ್ಷಕರಾಗಿ ಅಲ್ಲದೇ ವೈಯಕ್ತಿಕ ಕೌಶಲ್ಯದಿಂದ ಸ್ವಯಂ ಉದ್ಯೋಗಿಗಳಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಭಾರತರತ್ನ ಡಾ. ಎಂ.ಎಸ್. ಸುಬ್ಬಲಕ್ಷ್ಮೀ ಲಲಿತಕಲಾ ವಿಭಾಗ, ತುಮಕೂರು ವಿಶ್ವವಿದ್ಯಾಲಯ

ಆಧುನಿಕ ಜಾಗತೀಕರಣ ಇಲ್ಲಿನ ಶಿಕ್ಷಣ ವ್ಯವಸ್ಥೆಗೆ ಸರಿಹೊಂದುವಂತೆ ದೃಶ್ಯಕಲಾ ಶಿಕ್ಷಣವನ್ನು ಅಳವಡಿಸುವುದು ತುಂಬಾ ಅವಶ್ಯಕವಾಗಿದೆ. ದೃಶ್ಯಕಲಾ ವಿಭಾಗವು ೨೦೦೫ರಲ್ಲಿ ಅಸ್ತಿತ್ವಕ್ಕೆ ಬಂದಿತ್ತು. ಇದರಿಂದ ಈ ವಿಭಾಗವು ವಿಶ್ವವಿದ್ಯಾಲಯದಲ್ಲಿ ಪ್ರಮುಖವಾದಂತಹ ಉನ್ನತ ಶಿಕ್ಷಣ ಕೇಂದ್ರವಾಗಿ ಬೆಳೆಯಲು ಪ್ರಾರಂಭವಾಯಿತು.

"ದೃಶ್ಯಕಲಾ ವಿಭಾಗ ಮೊದಲು ಕ್ಯಾತ್ಸಂದ್ರದ ಹತ್ತಿರ ಕೃಷ್ಣಾ ಕಾಲೇಜಿನ ಬಟ್ಟವಾಡಿಯಲ್ಲಿ ಎರಡು ತಿಂಗಳುಗಳ ಕಾಲ ನಡೆದು ನಂತರ ದೃಶ್ಯಕಲಾ ವಿಭಾಗವು ತುಮಕೂರು ವಿಶ್ವವಿದ್ಯಾಲಯದ ಆವರಣದಲ್ಲಿ ೨೦೦೬ರಂದು ಪ್ರಾರಂಭವಾಯಿತು. ಪ್ರಥಮವಾಗಿ ೨೦೦೭ರಲ್ಲಿ ಕಲಾಮೂಲ ತರಗತಿಗಳು ಆರಂಭಗೊಂಡವು. ಈ ತರಗತಿಗಳು ಕರ್ನಾಟಕ ಸರಕಾರದ ಮಾನ್ಯತೆಯನ್ನು ಪಡೆದುಕೊಂಡು ೨೦೦೭ ಜೂನ್ ತಿಂಗಳಲ್ಲಿ ಪೇಂಟಿಂಗ್ ಮತ್ತು ಅನ್ವಯಿಕ ಕಲೆ ತರಗತಿಗಳು ಪ್ರಾರಂಭವಾದವು."[೬೨] ಪ್ರಾರಂಭದ ದಿನಗಳಲ್ಲಿ ಕಲಾ ಶಾಲೆಯನ್ನು ನಡೆಸುವುದು ತುಂಬಾ ಕಷ್ಟದ ಕೆಲಸವಾಗಿತ್ತು. ಅದರಲ್ಲಿ ವಿದ್ಯಾರ್ಥಿಗಳ ಸಂಖ್ಯೆ ತುಂಬಾ ಕಡಿಮೆ. ನಂತರದಲ್ಲಿ ಹಳ್ಳಿಯಿಂದ ಹೆಚ್ಚಿನ ವಿದ್ಯಾರ್ಥಿಗಳು ಚಿತ್ರಕಲಾ ಶಿಕ್ಷಣದಲ್ಲಿ ಹೆಚ್ಚು ಅಸಕ್ತಿವಹಿಸಿ ಅಧ್ಯಯನ

ಮಾಡಲು ಬಂದರು. ಪ್ರತೀ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಾ ಹೋದಂತೆಲ್ಲಾ ಸಂಸ್ಥೆಯವರು ಹೆಚ್ಚಿನ ವಿದ್ಯಾರ್ಥಿಗಳಿಗೆ ಚಿತ್ರಕಲಾ ಶಿಕ್ಷಣವನ್ನು ಪಡೆಯಲು ಅವಕಾಶ ನೀಡುತ್ತಿದ್ದರು. ೨೦೦೭ರಲ್ಲಿ ನೂತನ ಪಠ್ಯಾವಳಿಯನ್ನು ಸರ್ಕಾರದಿಂದ ಬಿ.ಎಫ್.ಎ ಪದವಿ ತರಗತಿಗಳು ಆರಂಭವಾದವು. ಇಲ್ಲಿ ಶಿಕ್ಷಣವನ್ನು ಪಡೆದವರು ಹಲವಾರು ಭಾಗಗಳಲ್ಲಿ ಶಿಕ್ಷಕರಾಗಿ, ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ದೃಶ್ಯಕಲಾ ವಿಭಾಗ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ

೨೦೧೧-೧೨ನೇ ಸಾಲಿನಲ್ಲಿ ದೃಶ್ಯಕಲಾ ವಿಭಾಗ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಪ್ರಾರಂಭವಾಯಿತು. ಅಂದಿನ ಮಾನ್ಯ ಕುಲಪತಿಗಳಾದ ಈ.ಟಿ. ಪುಟ್ಟಯ್ಯನವರು ದೃಶ್ಯಕಲಾ ವಿಭಾಗವನ್ನು ಪ್ರಾರಂಭಿಸಿದರು. ವಿಭಾಗವು ಕನ್ನಡ ಅಧ್ಯಯನ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿದೆ. ಇದರ ಕಾರ್ಯವನ್ನು ಆರಂಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರು ಹಾಗೂ ಡೀನರು ಆದ ಪ್ರೊ. ವೀರಣ್ಣ ದಂಡೆಯವರು ನಿರ್ವಹಿಸಿಕೊಂಡು ಹೋಗುತ್ತಿದ್ದರು.

ಮುಂದೆ ವಿಭಾಗ ಸ್ವತಂತ್ರವಾದ ಮೇಲೆ ಸಂಸ್ಥಾಪಕರಾಗಿ ಪ್ರೊ. ಪಿ.ಕೆ. ಖಂಡೋಬಾ ಅವರು ನೇಮಕಗೊಂಡರು. ಮೂರು ವರ್ಷದ ಅವಧಿಯ ನಂತರ ಹಿಂದಿ ವಿಭಾಗದ ಮುಖ್ಯಸ್ಥರಾದ ಶ್ರೀ ಪರಿಮಳ ಅಂಬೇಕರ್ ಅವರು ಇದರ ಸಂಯೋಜಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಾರಂಭದಲ್ಲಿ ಎಂ.ವಿ.ಎ., ನಂತರ ಪಿಎಚ್.ಡಿ. ತರಗತಿಗಳು ಪ್ರಾರಂಭವಾದವು.

ಸ್ನಾತಕೋತ್ತರ ದೃಶ್ಯಕಲಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೦೧೭ ಸೆಪ್ಟೆಂಬರ್‌ನಲ್ಲಿ ಸ್ನಾತಕೋತ್ತರ ಪದವಿಯ ಕೇಂದ್ರಗಳು ಆ ಪ್ರದೇಶದಲ್ಲಿಲ್ಲದ ಕಾರಣ ಆ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ನಿಟ್ಟಿನಲ್ಲಿ ಹಾಗೂ ಸ್ನಾತಕೋತ್ತರ ಪದವಿಯನ್ನು ಬಯಸುವಂತಹ ವಿದ್ಯಾರ್ಥಿಗಳು ಗದಗಿಗೆ ಬಂದು ವಿದ್ಯಾಭ್ಯಾಸವನ್ನು ಪಡೆಯುವಂತಹ ಪರಿಸ್ಥಿತಿ ಇತ್ತು. ಈ ಕಾರಣದಿಂದಾಗಿ ಧಾರವಾಡ ವಿಶ್ವವಿದ್ಯಾಲಯವು ಸ್ನಾತಕೋತ್ತರ ದೃಶ್ಯಕಲಾ ವಿಭಾಗವನ್ನು ಪ್ರಾರಂಭಿಸಿತು.

"ಪ್ರಸ್ತುತ ಸಂಯೋಜನಾಧಿಕಾರಿಗಳಾದಂತಹ ಪ್ರೊ. ಎಂ.ಎನ್. ಜೋಷಿಯವರು ಆಡಳಿತಾತ್ಮಕವಾಗಿ ಕೆಲಸವನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ".[೬೩] ಇಲ್ಲಿ ಮೊದಲಿಗೆ ಎಂ.ಎಫ್.ಎ. ತರಗತಿಗಳು ನಡೆಯುತ್ತಿದ್ದವು. ಪ್ರಸ್ತುತ ಸಂದರ್ಭದಲ್ಲಿ ಎಂ.ವಿ.ಎ. ತರಗತಿಗಳನ್ನು ನಡೆಸುತ್ತಿರುವುದನ್ನು ಕಾಣಬಹುದು.

ದೃಶ್ಯಕಲಾ ವಿಭಾಗ, ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ

ಗೋಟಗೋಡಿ ಭಾಗದ ಕಲಾಸಕ್ತರು, ಹಿರಿಯ ಕಲಾವಿದರು ಎಲ್ಲರೂ ಸೇರಿ ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ದೃಶ್ಯಕಲಾ ವಿಭಾಗ ಇರುವುದರಿಂದ ಜಾನಪದ ವಿಶ್ವವಿದ್ಯಾಲಯದಲ್ಲಿಯೂ ಕೂಡ ದೃಶ್ಯಕಲಾ ವಿಭಾಗವನ್ನು ಸ್ಥಾಪಿಸಬೇಕೆಂದು ಪತ್ರದ ಮೂಲಕ ಕುಲಪತಿಯವರಿಗೆ

ಮನವಿಯನ್ನು ಸಲ್ಲಿಸಿದರು. ಕುಲಪತಿಯವರು ದೃಶ್ಯಕಲಾ ವಿಭಾಗವನ್ನು ಪ್ರಾರಂಭಿಸಬೇಕು ಎಂಬ ನಿಟ್ಟಿನಲ್ಲಿ ಹೋರಾಟ ನಡೆಯಿತು. "೨೦೧೮ರಲ್ಲಿ ಡಿ.ಬಿ. ನಾಯಕ ಅವರು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ದೃಶ್ಯಕಲಾ ವಿಭಾಗದಲ್ಲಿ ಮೊದಲಿಗೆ ಎಂ.ವಿ.ಎ. ಚಿತ್ರಕಲೆ ಸ್ನಾತಕೋತ್ತರ ಪದವಿಯನ್ನು ಪ್ರಾರಂಭಿಸಿದರು. ಪ್ರಸ್ತುತ ಸಂದರ್ಭದಲ್ಲಿ ದೃಶ್ಯಕಲಾ ವಿಭಾಗದ ಹೆಚ್ಚಿನ ಜವಾಬ್ದಾರಿಯನ್ನು ಡಾ. ರವಿ ನಾಯಕ ಅವರು ವಹಿಸಿಕೊಂಡಿದ್ದಾರೆ".[೬೪]

೩.೨. ಪದವಿಯಲ್ಲಿ ಒಂದು ಐಚ್ಛಿಕ ವಿಷಯವಾಗಿ ಚಿತ್ರಕಲೆಯನ್ನು ಕಲಿಸುತ್ತಿರುವ ಚಿತ್ರಕಲಾ ವಿಭಾಗಗಳು

* ನೂತನ ಪದವಿ ಮಹಾವಿದ್ಯಾಲಯ, ಚಿತ್ರಕಲಾ ವಿಭಾಗ, ಕಲಬುರಗಿ.
* ಗೋದೂತಾಯಿ ದೊಡ್ಡಪ್ಪ ಅಪ್ಪ, ಕಲಾ ಹಾಗೂ ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ಕಲಬುರಗಿ.
* ಶರಣಬಸವೇಶ್ವರ ಕಲಾಮಹಾವಿದ್ಯಾಲಯ, ಸ್ನಾತಕ ಪದವಿ ಲಲಿತಕಲಾ ಕೇಂದ್ರ, ಚಿತ್ರಕಲಾ ವಿಭಾಗ, ಕಲಬುರಗಿ.

ನೂತನ ಪದವಿ ಮಹಾವಿದ್ಯಾಲಯ, ಚಿತ್ರಕಲಾ ವಿಭಾಗ, ಕಲಬುರ್ಗಿ

೧೯೦೭ರಲ್ಲಿ ಬಾಲಗಂಗಾಧರ ತಿಲಕ್ ಅವರ ಪ್ರೇರಣೆಯಿಂದ ಈ ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ಇದಕ್ಕೆ ಸ್ಫೂರ್ತಿ ನೀಡಿದವರು ವಿಠಲ್‌ರಾವ್ ದೇವಳಗಾಂವಕರ್. ೧೯೨೦ರಲ್ಲಿ ಶಂಕರಾವ್ ಆಳಂದಕರ ಅವರು ಕಲಾಶಾಲೆಯನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದರು. ಪ್ರಭಾವಿ ಕಲಾವಿದರಾದ ಎಸ್.ಎಂ. ಪಂಡಿತ ಅವರು ಇಲ್ಲಿಯೇ ವಿದ್ಯಾಭ್ಯಾಸವನ್ನು ಮಾಡಿದರು. ಅನಂತರದಲ್ಲಿ ಹಲವಾರು ಕಾರಣಗಳಿಂದ ಕಲಾಶಾಲೆ ಮುಚ್ಚಲ್ಪಟ್ಟಿತು. ೧೯೬೭ರಲ್ಲಿ ಬಾಹುಸಾಹೇಬ, ದೇವುಲಗಾಂವಕರ್, ಜಗನ್ನಾಥರಾವ್, ಚಂಡರರೆ ಅನಂತರಾವ್ ದೇಶಮುಖ ಇವರ ಪ್ರೇರಣೆಯಿಂದ ಕಲಾಶಾಲೆಯು ಆರಂಭವಾಯಿತು. ಇದರ ಮುಖ್ಯಸ್ಥರಾಗಿ ನಾಗರತ್ನಸಾಹು ಎಂಬುವವರು ಕೆಲಸ ಮಾಡಿದರು. ನಂತರದಲ್ಲಿ ಅಂದರೆ ೧೯೯೯ರಿಂದ ಜಿತೇಂದ್ರ ಕೊಥಳಿಕರ ಅವರು ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ೧೯೯೬ರಲ್ಲಿ ಪದವಿಯಲ್ಲಿ ಒಂದು ವಿಷಯವಾಗಿ ಚಿತ್ರಕಲೆಯನ್ನು ಪ್ರಾರಂಭಿಸಿದರು. ಈಗಲೂ ಇದೇ ರೀತಿಯಾಗಿ ನಡೆದುಕೊಂಡು ಹೋಗುತ್ತಿದೆ.

ಗೋದೂತಾಯಿ ದೊಡ್ಡಪ್ಪ ಅಪ್ಪ, ಕಲಾ ಹಾಗೂ ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ಕಲಬುರ್ಗಿ

ಗೋದೂತಾಯಿ ಮಹಿಳಾ ಪದವಿಪೂರ್ವ ಮಹಾವಿದ್ಯಾಲಯವು ೧೯೭೧ರಲ್ಲಿ ಕಮರ್ಷಿಯಲ್ ಆರ್ಟ್‌ನೊಂದಿಗೆ ಪ್ರಾರಂಭವಾಯಿತು. ೧೯೭೪ರಲ್ಲಿ ಬಿ.ಎ. ಪದವಿಯಲ್ಲಿ ಒಂದು ಐಚ್ಛಿಕ ವಿಷಯವಾಗಿ ಚಿತ್ರಕಲೆ ಮತ್ತು ಸಂಗೀತವನ್ನು ಅಳವಡಿಸಲಾಯಿತು. ಅಲ್ಲಿ ಮುಖ್ಯಸ್ಥರಾಗಿ ಶ್ರೀ ಎ.ಎಸ್. ಪಾಟೀಲರು ಕಾರ್ಯನಿರ್ವಹಿಸುತ್ತಿದ್ದರು. ೧೯೯೮ರಿಂದ ಶ್ರೀಮತಿ ಶಾಂತಲಾ ಬ. ಅಪ್ಪ ಅವರು ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿಕೊಂಡು ಹೋಗುತ್ತಿದ್ದಾರೆ.

ಇಲ್ಲಿ ಶಿಕ್ಷಣವನ್ನು ಪಡೆದವರು ಶಿಕ್ಷಕರು ಹಾಗೂ ಮಹಾವಿದ್ಯಾಲಯಗಳಲ್ಲಿ ಅಧ್ಯಾಪಕರು ಆಗಿದ್ದಾರೆ. ಕೆಲವರು ಫ್ರಿಲೈನ್ಸ್ ಆರ್ಟಿಸ್ಟ್ ಆಗಿ ಕೆಲಸ ಮಾಡುತ್ತಿದ್ದಾರೆ. ಕಲಾಕೃತಿಗಳ ಪ್ರದರ್ಶನಗಳನ್ನು ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ನಡೆಸಲಾಗುತ್ತಿದೆ. ಕಲಾವಿದರಿಂದ ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಶರಣಬಸವೇಶ್ವರ ಕಲಾ ಮಹಾವಿದ್ಯಾಲಯ, ಲಲಿತಕಲಾ ಕೇಂದ್ರ, ಕಲಬುರ್ಗಿ

ಶರಣಬಸವೇಶ್ವರ ಕಲಾ ಮಹಾವಿದ್ಯಾಲಯವು ೧೯೭೧ರಲ್ಲಿ ಪ್ರಾರಂಭವಾಯಿತು. ಕರ್ನಾಟಕದಲ್ಲಿ ಲಲಿತಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಮೊಟ್ಟಮೊದಲಿಗೆ ಆರಂಭಿಸಿದ ಕೀರ್ತಿ ಈ ವಿಭಾಗಕ್ಕಿದೆ. ಹಿರಿಯ ಕಲಾವಿದರಾದಂತಹ ಜೆ.ಎಸ್. ಖಂಡೇರಾವ್ ಅವರು ಚಿತ್ರಕಲಾ ವಿಭಾಗಕ್ಕೆ ನಿರ್ದೇಶಕರಾಗಿ ಅನೇಕ ವರ್ಷಗಳು ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ೧೯೮೦ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದೊಂದಿಗೆ ಸಂಯೋಗ ಹೊಂದಿತು. ಮೂರು ಐಚ್ಛಿಕ ವಿಷಯಗಳಾದ ಪೇಂಟಿಂಗ್, ಮ್ಯೂಜಿಕ್ ಮತ್ತು ಇತಿಹಾಸ ಎಂ.ಎ. ತರಗತಿಗಳನ್ನು ಮಾಡಲು ೧೯೮೩ರಲ್ಲಿ ನಾಗರಾಜ್ ಆಜ್ಞಾಪನೆಯ ಅನುಗುಣವಾಗಿ ಶರಣಬಸವೇಶ್ವರ ಕಲಾ ಕಾಲೇಜಿಗೆ ಸ್ನಾತಕೋತ್ತರ ಶಿಕ್ಷಣವು ನೀಡುವುದಕ್ಕೆ ಒಪ್ಪಿಗೆಯನ್ನು ಸೂಚಿಸಿದರು. ಶ್ರೀ ಜೆ.ಎಸ್. ಖಂಡೇರಾವ್ ಅವರು ೧೯೮೮ರ ತನಕ ಕಾರ್ಯನಿರ್ವಹಿಸುತ್ತಿದ್ದರು. ೨೦೦೦ರಲ್ಲಿ ಎ.ಎಸ್. ಪಾಟೀಲರು ನಿವೃತ್ತಿಯಾದರು. ಈ ಸಂಸ್ಥೆಯಿಂದ ನಡೆಯುತ್ತಿರುವಂತಹ ಎರಡು ಕಾಲೇಜುಗಳಲ್ಲಿನ ವಿದ್ಯಾರ್ಥಿ ಗಳಿಗೆ ಹಾಗೂ ಈ ಸಂಸ್ಥೆಗೆ ಯು.ಜಿ.ಸಿ.ಯಿಂದ ನೆರವು ಸಿಗುತ್ತಿದೆ.

ಆಚಾರ್ಯ ಚಿತ್ರಕಲಾ ಭವನ, ಅಂಚೆ ಮೂಲಕ ಚಿತ್ರಕಲಾ ಶಿಕ್ಷಣ

ಉಪನ್ಯಾಸದ ಪ್ರಕ್ರಿಯೆಯಲ್ಲಿ ಮಾತ್ರ ಕಲಿಯಬಹುದಾದ ಅನೇಕ ವಿಷಯಗಳನ್ನು ಅಂದರೆ ಮಾತನಾಡುವಷ್ಟೇ ಸುಲಭವಾಗಿ ಬರೆಯುವುದಕ್ಕೆ ಮತ್ತು ಓದುವುದಕ್ಕೆ ಹಾಗೂ ಭಾಷಾ ಬೋಧನೆಗೆ ಮೂಲಾಧಾರವಾದ ಅನೇಕ ವಿಷಯಗಳನ್ನು ಅಂಚೆಯ ಮೂಲಕ ಪರಿಣಾಮ ಕಾರಿಯಾಗಿ ಕಲಿಸಬಹುದಾಗಿದೆ. "ಪ್ರಾಯೋಗಿಕ ಪ್ರದರ್ಶನ ಮತ್ತು ಮೇಲ್ವಿಚಾರಕರ ಅಗತ್ಯವಿರುವ ಎಲ್ಲಾ ಪ್ರಯೋಗ ಶಾಲೆಯ ಮೂಲಕ ಬೋಧಿಸಬಹುದು. ಆದರೆ ಪ್ರಾಯೋಗಿಕ ಕೆಲಸಕ್ಕಾಗಿ ಅಲ್ಪಾವಧಿ ನಿವಾಸಿ ಶಿಕ್ಷಣ ಶಿಬಿರಗಳು ತಾಂತ್ರಿಕ ವಿಷಯಗಳಲ್ಲಿ ಅಂಚೆ ಬೋಧನೆಯು ಹೆಚ್ಚುತ್ತಿರುವ ಉಪಯೋಗವನ್ನು ಸೂಚಿಸುತ್ತದೆ."[೬]

ಚಿತ್ರಕಲಾ ಕಲಾವಿದರು ಅಲ್ಲಲ್ಲಿ ಕಲಾಪ್ರದರ್ಶನವನ್ನು ಮಾಡುತ್ತಿದ್ದರು. ಅಲ್ಲಿ ಬಂದು ನೋಡಿದಂತಹ ಹಲವಾರು ಜನರಿಗೆ ತಮಗೆ ಚಿತ್ರಕಲೆಯಲ್ಲಿ ಆಸಕ್ತಿಯಿದ್ದರೂ ಅದನ್ನು ಒಂದು ಕ್ರಮವಾಗಿ ಕಲಿಯುವಂತಹ ಅವಕಾಶವಿಲ್ಲವೆಂಬ ಮಾತು ಆಚಾರ್ಯರ ಗಮನಕ್ಕೆ ಬರುತ್ತದೆ. ಇದನ್ನು ಮನಗಂಡು ಆಲೋಚಿಸಿ ಅಂಚೆ ಮೂಲಕ ಕಲಾಶಿಕ್ಷಣವನ್ನು ನೀಡಬೇಕೆಂಬ ವಿಚಾರ ಹೊಳೆಯಿತು. ಈ ಹಿನ್ನೆಲೆಯಲ್ಲಿ ಆಲೋಚನೆ ಮಾಡಿದರು. "ಜನಸಾಮಾನ್ಯರಿಗೆ ಸುಲಭ

ರೀತಿಯಲ್ಲಿ ಕಲೆಯನ್ನು ಕಲಿಯಲು ಮತ್ತು ಸಾರ್ವತ್ರಿಕವಾಗಿ ಕಲೆಯ ಜ್ಞಾನ ಪ್ರಸಾರಕ್ಕೆ ಅಂಚೆ ಮೂಲಕ ಕಲಾಶಿಕ್ಷಣವೇ ಒಂದು ಒಳ್ಳೆಯ ಮಾರ್ಗವೆಂದು ತಿಳಿದು ಇವರು ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ ಹಲವಾರು ದಿನಗಳ ದೀರ್ಘಾವಧಿಯ ಫಲದಿಂದ ೧೯೬೯ ಫೆಬ್ರವರಿ ೭ರಂದು ಆಚಾರ್ಯ ಚಿತ್ರಕಲಾ ಭವನ ಮತ್ತು ಎಸಿಬಿ ಅಂಚೆ ಶಿಕ್ಷಣವನ್ನು ಆರಂಭಿಸಿದರು."[೬೬]

ದೂರಶಿಕ್ಷಣದ ಮೂಲಕ ನಡೆಸುತ್ತಿದ್ದ ಕಲಾಸಂಸ್ಥೆಗಳು

ಶ್ರೀ ಅಲ್ಲಮಪ್ರಭು ಲಲಿತಕಲಾ ಅಕಾಡೆಮಿ ಮೈಸೂರು, ಸ್ಥಾನಿಕ ದೂರಶಿಕ್ಷಣದ ಲಲಿತಕಲಾ ಪದವಿಗಳ ಕೇಂದ್ರ

"ಶ್ರೀ ಅಲ್ಲಮಪ್ರಭು ಲಲಿತಕಲಾ ಅಕಾಡೆಮಿಯು ಉಪಾಧ್ಯ ಕಲಾ ಪ್ರತಿಷ್ಠಾನ(ರಿ), ಮೈಸೂರು ಇದರ ಆಶ್ರಯದಲ್ಲಿ ನಡೆಸುತ್ತಿರುವ ಒಂದು ಪ್ರತಿಷ್ಠಿತ ಲಲಿತಕಲಾ ಸಂಸ್ಥೆ. ಉಪಾಧ್ಯ ಕಲಾ ಪ್ರತಿಷ್ಠಾನವು ಕರ್ನಾಟಕ ಸರಕಾರ ಸಂಘಗಳ ನೋಂದಣಿ ಕಾಯ್ದೆಯ ಅನ್ವಯ ನೋಂದಾಯಿಸಲ್ಪಟ್ಟಿದೆ. ಉಪಾಧ್ಯ ಕಲಾ ಪ್ರತಿಷ್ಠಾನವು ಉತ್ತಮ ಕಲಾ ಪ್ರೇಮಿಗಳನ್ನು ಒಳಗೊಂಡ ಲಲಿತಕಲಾ ಚಟುವಟಿಕೆಗಳ ವಿವಿಧೋದ್ದೇಶ ಹೊಂದಿದ ಕಲಾ ಪೋಷಣೆಯ ಕೇಂದ್ರವಾಗಿದೆ. ಉಪಾಧ್ಯ ಕಲಾ ಪ್ರತಿಷ್ಠಾನ ಸಂಸ್ಥೆಯ ಆಡಳಿತ ಮಂಡಳಿಯು ಕಾನೂನುಬದ್ಧವಾದ ಅರ್ಹತೆಗಳನ್ನು ಹೊಂದಿ ಕಲಾಶಿಕ್ಷಣವನ್ನು ಅನೇಕರಿಗೆ ನೀಡುತ್ತಿದೆ."[೬೭]

ಕರ್ನಾಟಕದಲ್ಲಿ ಅನೇಕ ಆಸಕ್ತರು ಕಲೆಯನ್ನು ಅಭ್ಯಸಿಸಲು ಆಸಕ್ತಿ ಇದ್ದರೂ ಉನ್ನತ ಕಲಾ ಶಿಕ್ಷಣದಿಂದ ವಂಚಿತರಾಗಿರುವುದನ್ನು ಕಾಣಬಹುದು. ಇಂತಹ ಕಲಾವಿದರಿಗೆ ಉನ್ನತ ಶಿಕ್ಷಣವನ್ನು ನೀಡಬೇಕೆಂದು ಅರಿತು ಉಪಾಧ್ಯ ಕಲಾ ಪ್ರತಿಷ್ಠಾನವು ಉನ್ನತ ಶಿಕ್ಷಣವನ್ನು ನಡೆಸಲು ಮುಂದಾಗಿದೆ. ದೂರ ಶಿಕ್ಷಣದಲ್ಲಿ ಲಲಿತಕಲೆಗಳನ್ನು ಬೋಧಿಸಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ "ಸ್ಥಾನಿಕ ದೂರಶಿಕ್ಷಣ" ಪದ್ಧತಿಯನ್ನು ಆವಿಷ್ಕರಿಸಿದೆ. ಇದು ಒಂದು ಆಧುನಿಕ ಯುಗದಲ್ಲಿ ಹೊಸದಾದಂತಹ ಶಿಕ್ಷಣದ ವಿಧಾನವಾಗಿದೆ. ಸ್ಥಾನಿಕ ಶಿಕ್ಷಣದ ಪದ್ಧತಿಯನ್ನು ಲಲಿತಕಲಾ ಶಿಕ್ಷಣದಲ್ಲಿ ನೀಡುವಂತಹ ಪ್ರಪಂಚದಲ್ಲಿ ಪ್ರಥಮವಾದ ಸಂಸ್ಥೆ ಇದಾಗಿದೆ. "ದೂರಶಿಕ್ಷಣದ ಮೂಲಕ ಕಲಾಶಿಕ್ಷಣವನ್ನು ನೀಡಲು ಸ್ಥಾನಿಕ ಶಿಕ್ಷಣವೆಂಬ ಹೊಸ ಬೋಧನಾ ಪದ್ಧತಿಯು ಆವಿಷ್ಕರಿಸಲಾಗಿದೆ. ಸ್ಥಾನಿಕ ದೂರಶಿಕ್ಷಣವು, ದೂರಶಿಕ್ಷಣದ ಒಂದು ವಿಶೇಷ ಪ್ರಕಾರವಾಗಿದೆ, ಇದು ಕಲೆಗಳ ಶಿಕ್ಷಣಕ್ಕೆ ಮಾತ್ರ ಅನ್ವಯವಾಗಿದೆ. ಉಪಾಧ್ಯ ಕಲಾ ಪ್ರತಿಷ್ಠಾನದ ಮೂಲಕ ಸ್ಥಾನಿಕ ಕಲಾಶಿಕ್ಷಣವು ಈ ವಿಧಾನದಲ್ಲಿ ನೀಡುತ್ತಿದೆ. ವಿದ್ಯಾರ್ಥಿಯು ತನ್ನ ಸ್ಥಾನಿಕ ಶಿಕ್ಷಕರಿಂದ ಪಾಠ ಪ್ರವಚನಗಳನ್ನು ಪರಸ್ಪರ ವಿಶ್ವಾಸ ಹಾಗೂ ನೇರವಾದ ಶಿಕ್ಷಣ ಪದ್ಧತಿಯಲ್ಲಿ ಪಡೆಯುವನು" ಈ ಕಾರಣದಿಂದಾಗಿ ಇದು ಒಂದು ರೀತಿಯಲ್ಲಿ ಸಾಂಪ್ರದಾಯಕ ಶಿಕ್ಷಣವೇ ಆಗಿದೆ. ಇಲ್ಲಿ ಕಲಿಯುವಂತಹ ಕಲಾ ವಿದ್ಯಾರ್ಥಿಗಳು ತಾನು ಶಿಕ್ಷಣ ಪಡೆದಿದ್ದಕ್ಕೆ ಸ್ಥಾನಿಕ

ಗುರುಗಳಿಂದ ಹಾಜರಾತಿ ಪ್ರಮಾಣ ಪತ್ರವನ್ನು ಪಡೆದು ಉಪಾಧ್ಯ ಕಲಾ ಪ್ರತಿಷ್ಠಾನ ಸಂಸ್ಥೆಗೆ ಸಲ್ಲಿಸಬೇಕಾಗುತ್ತದೆ.

ಇಂತಹ ವಿದ್ಯಾರ್ಥಿಗಳಿಗೆ ಉನ್ನತ ಕಲಾಶಿಕ್ಷಣವನ್ನು ಪಡೆಯಲು ಸ್ಥಾನಿಕ ದೂರ ಶಿಕ್ಷಣದ ಮೂಲಕ ಶಿಕ್ಷಣವನ್ನು ಪಡೆಯಲು ಅವಕಾಶವಿರುತ್ತಿತ್ತು. ಒಂದು ಶೈಕ್ಷಣಿಕ ವರ್ಷದ ಅವಧಿಯಲ್ಲಿ ೧೫ ದಿನಗಳ ಕಾಲ ತರಗತಿಗಳಿಗೆ ಹಾಜರಾಗಿ, ಅವರಿಂದ ಹಾಜರಾತಿ ಪ್ರಮಾಣ ಪತ್ರವನ್ನು ತರಬೇಕಾಗುತ್ತದೆ. ನಂತರ ಸ್ನಾತಕೋತ್ತರ ಪದವಿಯ ಪರೀಕ್ಷೆಯನ್ನು ಬರೆಯಲು ಅವಕಾಶ ನೀಡುತ್ತಾರೆ. ಇಲ್ಲಿ ನೀಡುವಂತಹ ಶಿಕ್ಷಣವನ್ನು ಕರ್ನಾಟಕದ ಹಲವಾರು ಜನರು ನೋಡಿ ತಾವು ಸಹ ದೂರ ಶಿಕ್ಷಣದ ಮೂಲಕ ಶಿಕ್ಷಣವನ್ನು ನೀಡುವಂತಹ ಕಾರ್ಯವನ್ನು ಮಾಡಿದರು. ಅಂತಹವರಲ್ಲಿ ಇಳಕಲ್‌ನ ಡಾ. ಬಸಯ್ಯ ಗವಿಮಠ, ಮೈಸೂರಿನ ಡಿ.ಎಂ.ಎಸ್. ಮಹಾಸಂಸ್ಥಾನ, ಶ್ರೀ ಬಾಬುರಾವ್ ಅವರ ಹುಬ್ಬಳ್ಳಿಯ ಡಾ. ಶಂಕರಪ್ಪ ಕುಂದಗೋಳ, ಶ್ರೀ ಜಿ.ಡಿ ಜಟ್ಟಣ್ಣ ಅವರು ಬೆಂಗಳೂರಿನಲ್ಲಿ ಶಿವಾನಂದ ಬಿ. ಹಾಗೂ ಕನ್ನಡ ವಿಶ್ವವಿದ್ಯಾಲಯ ಸಹಾಯಕ ಪ್ರಾಧ್ಯಾಪಕರಾದ ಡಾ. ಮೋಹನರಾವ್ ಬಿ. ಪಂಚಾಳ ಅವರು ಉನ್ನತ ಕಲಾ ಶಿಕ್ಷಣವನ್ನು ದೂರ ಶಿಕ್ಷಣದ ಮೂಲಕ ನೀಡುತ್ತಿದ್ದರು. ಆದರೆ ೨೦೧೨ನೇ ಸಾಲಿನಲ್ಲಿ ದೂರ ಶಿಕ್ಷಣದ ಮೂಲಕ ನೀಡುವಂತಹ ಚಿತ್ರಕಲಾ ಶಿಕ್ಷಣವನ್ನು ನಡೆಸಲು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಅವಕಾಶ ನೀಡಲಿಲ್ಲ. ಪ್ರಸ್ತುತ ಸಂದರ್ಭದಲ್ಲಿ ದೂರಶಿಕ್ಷಣದ ಮೂಲಕ ನೀಡುತ್ತಿದ್ದ ಎಲ್ಲ ಕಲಾ ಶಿಕ್ಷಣ ಸಂಸ್ಥೆಗಳು ಸ್ಥಗಿತಗೊಂಡಿವೆ.

ಕೊನೆ ಟಿಪ್ಪಣಿಗಳು

೧. ಸೂರ್ಯನಾಥ ಯು. ಕಾಮತ್ (ಮು.ಸಂ.), **ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ-ಮೂರು**, ೧೯೮೬, ಪು. ೪೦೮.

೨. ಸೂರ್ಯನಾಥ ಯು. ಕಾಮತ್ (ಮು.ಸಂ.), **ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ-ಮೂರು**, ೧೯೮೬, ಪು. ೪೦೯.

೩. ಆ.ಲ. ನರಸಿಂಹನ್, ಎನ್ ಮರಿಶಾಮಾಚಾರ್, **ಚಿತ್ರಕಲಾ ಪ್ರಪಂಚ**, ೧೯೯೩, ಪು. ೫೨೬.

೪. ಸೂರ್ಯನಾಥ ಯು. ಕಾಮತ್ (ಮು.ಸಂ.), **ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ-ಮೂರು**, ೧೯೮೬, ಪು. ೪೦೯.

೫. ಆ.ಲ. ನರಸಿಂಹನ್, ಎನ್. ಮರಿಶಾಮಾಚಾರ್ (ಸಂ), **ಚಿತ್ರಕಲಾ ಪ್ರಪಂಚ**, ೧೯೯೩, ಪುಟ ೫೩೯.

೬. ಆ.ಲ. ನರಸಿಂಹನ್, ಎನ್. ಮರಿಶಾಮಾಚಾರ್ (ಸಂ), **ಚಿತ್ರಕಲಾ ಪ್ರಪಂಚ**, ೧೯೯೩, ಪು. ೫೪೦.

೭. ಸೂರ್ಯನಾಥ ಯು. ಕಾಮತ್ (ಮು.ಸಂ.), **ಕರ್ನಾಟಕ ರಾಜ್ಯ ಸರ್ಕಾರ, ಭಾಗ–ಮೂರು,** ೧೯೮೬, ಪು. ೪೧೦.

೮. ಸೂರ್ಯನಾಥ ಯು. ಕಾಮತ್ (ಮು.ಸಂ.), **ಕರ್ನಾಟಕ ರಾಜ್ಯ ಸರ್ಕಾರ, ಭಾಗ–ಮೂರು,** ೧೯೮೬, ಪು. ೪೧೦.

೯. ಸೂರ್ಯನಾಥ ಯು. ಕಾಮತ್ (ಮು.ಸಂ.), **ಕರ್ನಾಟಕ ರಾಜ್ಯ ಸರ್ಕಾರ, ಭಾಗ–ಮೂರು,** ೧೯೮೬, ಪು. ೪೫೫.

೧೦. ಸೂರ್ಯನಾಥ ಯು. ಕಾಮತ್ (ಮು.ಸಂ.), **ಕರ್ನಾಟಕ ರಾಜ್ಯ ಸರ್ಕಾರ, ಭಾಗ–ಮೂರು,** ೧೯೮೬, ಪು. ೪೫೫.

೧೧. ಸೂರ್ಯನಾಥ ಯು. ಕಾಮತ್ (ಮು.ಸಂ.), **ಕರ್ನಾಟಕ ರಾಜ್ಯ ಸರ್ಕಾರ, ಭಾಗ–ಮೂರು,** ೧೯೮೬, ಪು. ೪೫೫.

೧೨. ಸೂರ್ಯನಾಥ ಯು. ಕಾಮತ್ (ಮು.ಸಂ.), **ಕರ್ನಾಟಕ ರಾಜ್ಯ ಸರ್ಕಾರ, ಭಾಗ–ಮೂರು,** ೧೯೮೬, ಪು. ೪೫೫.

೧೩. ಸೂರ್ಯನಾಥ ಯು. ಕಾಮತ್ (ಮು.ಸಂ.), **ಕರ್ನಾಟಕ ರಾಜ್ಯ ಸರ್ಕಾರ, ಭಾಗ–ಮೂರು,** ೧೯೮೬, ಪು. ೪೫೫.

೧೪. ಸೂರ್ಯನಾಥ ಯು. ಕಾಮತ್ (ಮು.ಸಂ.), **ಕರ್ನಾಟಕ ರಾಜ್ಯ ಸರ್ಕಾರ, ಭಾಗ–ಮೂರು,** ೧೯೮೬, ಪು. ೪೧೧.

೧೫ ಸೂರ್ಯನಾಥ ಯು. ಕಾಮತ್ (ಮು.ಸಂ.), **ಕರ್ನಾಟಕ ರಾಜ್ಯ ಸರ್ಕಾರ, ಭಾಗ–ಮೂರು,** ೧೯೮೬, ಪು. ೪೧೧.

೧೬. ಸೂರ್ಯನಾಥ ಯು. ಕಾಮತ್, ಕೃಷ್ಣಯ್ಯ ಎಂ.ಎಚ್., (ಸಂ.), **ಬೆಂಗಳೂರು ದರ್ಶನ, ಸಂಪುಟ ೨,** ೨೦೦೫, ಪು. ೨೨೬.

೧೭. ಮಹಾಬಲೇಶ್ವರ ರಾವ್, **ರಾಷ್ಟ್ರೀಯ ಶಿಕ್ಷಣ ನೀತಿ,** ೧೯೯೮, ಪು. ೩೬.

೧೮. ಬಂಡಿ ಪಿ.ಬಿ., **ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ,** ೨೦೦೭, ಪು. ೩೮.

೧೯. ಪರಶುರಾಮ ಬಿ. (ಲೇಖನ), **ಜಯಚಾಮರಾಜೇಂದ್ರ ಚಿತ್ರಕಲಾ ಶಾಲೆ,** ೨೦೧೫, ಪು. ೨೦.

೨೦. ಪ್ರಕಾಶ್ ಎ.ಎಂ., **ಬೆಂಗಳೂರು ಕಲಾಮಂದಿರ ಒಂದು ಐತಿಹಾಸಿಕ ಅಧ್ಯಯನ,** ೨೦೧೦, ಪು. ೯.

೨೧. ಶ್ರೀ ನಾಗರಾಜ ಕಿ.ರಂ., (ಸಂ) **ಕಲಾಮಂದಿರ(೭೫) ಅಮೃತ ಮಹೋತ್ಸವ ಸ್ಮರಣ ಸಂಚಿಕೆ, ಚೈತನ್ಯಶೀಲ ಕಲಾಮೂಲ ಮಂದಿರ,** ೧೯೯೪, ಪು. ೧.

೨೨. ಪ್ರಕಾಶ ಎಂ.ಪಿ., **ಬೆಂಗಳೂರು ಕಲಾಮಂದಿರ ಒಂದು ಐತಿಹಾಸಿಕ ಅಧ್ಯಯನ,** ೨೦೧೦, ಪು. ೪೩.

೨೩. ಪ್ರಕಾಶ ಎಂ.ಪಿ., **ಬೆಂಗಳೂರು ಕಲಾಮಂದಿರ ಒಂದು ಐತಿಹಾಸಿಕ ಅಧ್ಯಯನ,** ೨೦೧೦, ಪು. ೪೪.

೨೪. ದಮಯಂತಿ ನರೆಗಲ್ಲ, **ಕಲಾತಪಸ್ವಿ ಡಿ.ವ್ಹಿ. ಹಾಲಬಾವಿ ಜೀವನ ಚರಿತ್ರೆ,** ೨೦೧೫, ಪು. ೫೪.

೨೫. ಶ್ರೀ ಎನ್ಕೆ ಕುಲಕರ್ಣಿ, **ಚಿತ್ರಾಕ್ಷಿ ವಜ್ರಮಹೋತ್ಸವ ಸ್ಮರಣ ಸಂಚಿಕೆ(ಲೇಖನ),** ೧೯೯೫, ಪು. ೭.

೨೬. ದಮಯಂತಿ ನರೆಗಲ್ಲ, **ಕಲಾತಪಸ್ವಿ ಡಿ.ವ್ಹಿ. ಹಾಲಬಾವಿ ಜೀವನ ಚರಿತ್ರೆ,** ೨೦೧೫, ಪು. ೬೪.

೨೭. **ಚಿತ್ರಾಕ್ಷಿ ವಜ್ರಮಹೋತ್ಸವ ಸ್ಮರಣ ಸಂಚಿಕೆ,** ಪ್ರಧಾನ ಸಂಪಾದಕರ ಮಾತು.

೨೮. ವಿಲ್ಸನ್ ಎಸ್. ಸೋನಫರ್, ಡಾ. ಮೋಹನರಾವ್ ಬಿ. ಪಂಚಾಳ (ಸಂ), **ನೆನಪಿನ ಸಂಚಿಕೆ ವಜ್ರವಿಜಯ,** ೨೦೦೮, ಪು. ೧.

೨೯. ರಾಜಶೇಖರ್ ಎಸ್., ಪ್ರಾಚಾರ್ಯರು ಸಂದರ್ಶನದಲ್ಲಿ ಸಿಕ್ಕ ಮಾಹಿತಿ.

೩೦. ಜಗದೀಶ ಬಿ.ಕೆ., **ಶ್ರೀ ಕಲಾನಿಕೇತನ್ ಸ್ಕೂಲ್ ಆಫ್ ಆರ್ಟ್(ರಿ)(ಲೇಖನ),** ೨೦೧೩.

೩೧. ಸಂತೋಷ್‌ಕುಮಾರ್ ಕುಲಕರ್ಣಿ, **ದಾವಣಗೆರೆ ಚಿತ್ರಕಲೆ,** ೨೦೦೮, ಪು. ೫೪.

೩೨. ರಾಯಕರ ಆರ್.ಜಿ., **ಶ್ರೀ ನಂಜುಂಡರಾವ್(ಲೇಖನ),** ೨೦೦೦, ಪು. ೧೦೪.

೩೩. ಅದೇ, ಪು. ೧೦೪.

೩೪. ಭೈರೇಗೌಡ ಎಂ. (ಸಂ), **ಆರ್ಕಾವತಿ,** ಪು. ೫೨೧.

೩೫. ಸಿದ್ಧಲಿಂಗಸ್ವಾಮಿ ಹಿರೇಮಠ, **ಕಲಾವಿದ ಆರ್.ಎಂ. ಹಡಪದ ಒಂದು ಅಧ್ಯಯನ,** ೨೦೦೩, ಪುಟ ೫೯.

೩೬. ಅದೇ, ಪು. ೬೦.

೩೭. ಸುರೇಶ ವೆಂ. ಕುಲಕರ್ಣಿ, ಮಧುದೇಸಾಯಿ (ಸಂ), **ಚಿತ್ರ ಶಾಲ್ಮಲಾ,** ೨೦೦೭, ಪು. ೪೬.

೩೮. ಅನಿಲ ಪ್ರಕಾಶ್ ಎಸ್., **ಬೆನನ್-ಸ್ಮಿತ್ ಚಿತ್ರಕಲಾ ಮಹಾವಿದ್ಯಾಲಯದ ಬೆಳವಣಿಗೆಯ ಹೆಜ್ಜೆ ಗುರುತುಗಳು,** ೨೦೦೯, ಪು. ೧೯.

೩೯. ಕುರಿಯವರೊಂದಿಗೆ ಸಂದರ್ಶನದಲ್ಲಿ ಸಿಕ್ಕ ಮಾಹಿತಿ.

೪೦. ಗಿರೀಶ್ ಉಪನ್ಯಾಸಕರು. ಸಂದರ್ಶನದಲ್ಲಿ ಸಿಕ್ಕಿ ಮಾಹಿತಿ.

೪೧. ಪೂರ್ಣಿಮಾ, **ಕಲಾಕ್ಷೇತ್ರಕ್ಕೆ ರವೀಂದ್ರ ಕಲಾನಿಕೇತನ ಕೊಡುಗೆ,** ಪು. ೨೧.

೪೨. ಅದೇ, ಪು. ೨೨.

೪೩. ಸಾವಿತ್ರಿ ಎಸ್. ಟೆಂಕಲಿ, **ದೃಶ್ಯಕಲಾ ಕ್ಷೇತ್ರಕ್ಕೆ ಶ್ರೀ ಸಿದ್ಧೇಶ್ವರ ಕಲಾಮಂದಿರದ ಕೊಡುಗೆ,** ೨೦೧೩, ಪು. ೧೯.

೪೪. ಗಿರಿಜಾ ಎಸ್. ಬಿರಾದಾರ, **ವಿಜಾಪುರ ಜಿಲ್ಲೆಯ ಚಿತ್ರಕಲೆ,** ೨೦೦೮, ಪು. ೬೯.

೪೫. ಯೋಗೇಶ್ ಚ. ಮಠದ, ಪ್ರಾಚಾರ್ಯರು ಇವರೊಂದಿಗೆ ಸಂದರ್ಶನದಲ್ಲಿ ಸಿಕ್ಕ ಮಾಹಿತಿ.

೪೬. ಗಿರಿಜಾ ಎಸ್. ಬಿರಾದಾರ, **ವಿಜಾಪುರ ಜಿಲ್ಲೆಯ ಚಿತ್ರಕಲೆ,** ೨೦೦೮, ಪು. ೬೮.

೪೭. ಪದ್ಮಾಕರ ಬಿ., ಕುಲಕರ್ಣಿ, **ಅಥಣಿಯ ಶ್ರೀ ಮುರುಘೇಂದ್ರ ಲಲಿತಕಲಾ ಮಹಾವಿದ್ಯಾಲಯ ನಡೆದು ಬಂದ ದಾರಿ,** ಪು. ೫.

೪೮. ಶ್ರೀ ಎಸ್.ಎಸ್. ಗೊರಜನಾಳ, ಪ್ರಾಚಾರ್ಯರು, ಸಂದರ್ಶನದಲ್ಲಿ ಸಿಕ್ಕ ಮಾಹಿತಿ.

೪೯. ರಾಥೋಡ್ ಕೆ.ಬಿ., **ಮಹೇಶ್ ಚಿತ್ರಕಲಾ ಮಹಾವಿದ್ಯಾಲಯ,** ಜಮಖಂಡಿ, ೨೦೧೦, ಪು. ೨೧ ಮತ್ತು ೨೨.

೫೦. ಖಂಡೋಬಾ ಪಿ.ಕೆ., ಎಸ್.ಸಿ. ಪಾಟೀಲ(ಸಂ), **ಹೈದ್ರಾಬಾದ್ ಕರ್ನಾಟಕ ಸಾಂಸ್ಕೃತಿಕ: ವಿಷಯಕೋಶ ಲಲಿತ ಕಲೆಗಳ ಸಂಪುಟ,** ೨೦೧೨, ಪು. ೬೩.

೫೧. ನಂದಿಹಳ್ಳಿ ಎನ್.ಎಂ., ಸಂದರ್ಶನದಲ್ಲಿ ಸಿಕ್ಕ ಮಾಹಿತಿ.

೫೨. ಲಮಾಣಿ ಬಿ.ಎಲ್., **ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ,** ೨೦೧೩, ಪು. ೨೪೫.

೫೩. ಸಿದ್ಧರಾಮ ಬೂಗರಿ, ಸಿತಮಾ ವಜ್ಜಲ, **ಬಂಗಾರದ ಬಣ್ಣ** (ಜನ್ಮ ಸುವರ್ಣ ಮಹೋತ್ಸವ ಅಭಿನಂದನಾ ಗ್ರಂಥ), ೨೦೧೪, ಪು. ೧೬೬.

೫೪. ಬಸವನಗೌಡ ಎಸ್. ಪಾಟೀಲ್, ಸಂದರ್ಶನದಲ್ಲಿ ಸಿಕ್ಕ ಮಾಹಿತಿ.

೫೫. ರಮೇಶ್ ಸಜ್ಜನ್‌ರೊಂದಿಗೆ ಸಂದರ್ಶನದಲ್ಲಿ ಸಿಕ್ಕ ಮಾಹಿತಿ.

೫೬. ಯೋಗೇಶ್ ಎಚ್., **ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ,** ೨೦೦೮, ಪು. ೭೬.

೫೭. ಕೃಷ್ಣವೇಣಿ, **ಬಳ್ಳಾರಿ ಜಿಲ್ಲೆಯ ಚಿತ್ರಕಲೆ,** ೨೦೧೨, ಪು. ३೦೮.

೫೮. ವೀರಾಚಾರಿಯೊಂದಿಗೆ ಸಂದರ್ಶನದಲ್ಲಿ ಸಿಕ್ಕಿ ಮಾಹಿತಿ.

೫೯. ಅದೇ.

೬೦. ವೈಶಾಲಿಬಾಯಿ ಬಿ. ಕಾಂಬಳೆ, **ಬೀದರ್ ಜಿಲ್ಲೆಯ ಚಿತ್ರಕಲೆ,** ೨೦೧೨, ಪು. ೧೦೧.

೬೧. ಬಸವರಾಜ, **ಯಾದಗಿರಿಯ ಜಿಲ್ಲೆಯ ಚಿತ್ರಕಲೆ,** ೨೦೧೩, ಪು. ೧೩-೧೪.

೬೨. ರವಿಕುಮಾರ್ ಎಚ್.ಎಸ್., **ತುಮಕೂರು ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದ ಕೊಡುಗೆ,** ೨೦೧೫, ಪು. ೨೫-೨೬

೬೩. ಶಶಿಕಲಾ ನಂದನಗೌಡ, ಸಂದರ್ಶನದಲ್ಲಿ ಸಿಕ್ಕ ಮಾಹಿತಿ.

೬೪. ದೇವೇಂದ್ರಪ್ಪ ಹೂಡಾ, ಸಂದರ್ಶನದಲ್ಲಿ ಸಿಕ್ಕ ಮಾಹಿತಿ.

೬೫. ರೀನೆ ಎಫ್. ಎರ್ಡೋಸ್, **ಅಂಚೆ ಮೂಲಕ ಶಿಕ್ಷಣ**, ೧೯೮೨, ಪು. ೨೩.

೬೬. ಚಿ.ಸು. ಕೃಷ್ಣಶೆಟ್ಟಿ, **ಎಂ.ಟಿ.ವಿ. ಆಚಾರ್ಯ**, ಪು. ೧೯-೨೦.

೬೭. ಉಪಾಧ್ಯ ಡಿ.ಎ, **ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ, ಮೈಸೂರು**, ೨೦೧೦, ಪು. ೧೧.

ಅಧ್ಯಾಯ : ನಾಲ್ಕು

ದೃಶ್ಯಕಲಾ ಶಿಕ್ಷಣ ಸಮಸ್ಯೆಗಳು

೪.೧. ಪ್ರಾಥಮಿಕ ಮತ್ತು ಪ್ರೌಢಶಾಲಾ ಚಿತ್ರಕಲಾ ಶಿಕ್ಷಣ

ಚಿತ್ರಕಲಾ ವಿದ್ಯಾರ್ಥಿಗಳ ಸಮಸ್ಯೆಗಳು

೪.೨. ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ ಶೈಕ್ಷಣಿಕ ಸಮಸ್ಯೆಗಳು

ಚಿತ್ರಕಲಾ ಡಿಪ್ಲೊಮಾ ವಿದ್ಯಾರ್ಥಿಗಳ ಸಮಸ್ಯೆಗಳು

ಚಿತ್ರಕಲಾ ಪದವಿ ವಿದ್ಯಾರ್ಥಿಗಳ ಸಮಸ್ಯೆಗಳು

ಚಿತ್ರಕಲಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಮಸ್ಯೆಗಳು

ಎಂ.ಫಿಲ್ ಮತ್ತು ಪಿಎಚ್.ಡಿ. ಪದವಿ ಪಡೆದ ವಿದ್ಯಾರ್ಥಿಗಳ ಸಮಸ್ಯೆಗಳು

ಅಧ್ಯಾಯ : ನಾಲ್ಕು

ದೃಶ್ಯಕಲಾ ಶಿಕ್ಷಣದ ಸಮಸ್ಯೆಗಳು

ದೃಶ್ಯಕಲಾ ಶಿಕ್ಷಣದಲ್ಲಿ ಅನೇಕ ಸಮಸ್ಯೆಗಳನ್ನು ಕಾಣುತ್ತೇವೆ. ಈ ಸಮಸ್ಯೆಗಳು ಅಷ್ಟೇನೂ ಶಾಶ್ವತವಾದಂಥವುಗಳಲ್ಲ. ಪರಿಹಾರ ಸೂಕ್ತವಾಗಿ ರೂಪುಗೊಳ್ಳುತ್ತಿಲ್ಲ. "ಈ ಶಿಕ್ಷಣ ವ್ಯವಸ್ಥೆಯು ತ್ರಿವಿಕ್ರಮನ ವ್ಯಾಪ್ತಿಯ ವ್ಯವಸ್ಥೆ. ಈ ವ್ಯವಸ್ಥೆಯು ಸವಾಲುಗಳ ಬೆನ್ನುಹತ್ತಿ ಹೊರಡುವುದೆಂದರೆ ಬೇತಾಳವನ್ನು ಹೊತ್ತ ವಿಕ್ರಮನು ಒಂದನ್ನು ಹಿಡಿಯುತ್ತಿದ್ದಂತೆಯೇ ಅದರ ಜಾಡು ಹಿಡಿದು ಪ್ರಯತ್ನಿಸುತ್ತಲೇ ಇರಬೇಕಾಗುತ್ತದೆ. ಅಂತಹ ಜಾಡಿನ ಒಂದು ಪ್ರಯತ್ನವಿದು"[೧] ಎಂದರೆ ಅತಿಶಯೋಕ್ತಿಯಲ್ಲ.

ಚಿತ್ರಕಲಾ ಶಿಕ್ಷಣದಲ್ಲಿ ಕಂಡುಬರುವಂತಹ ಹಲವು ಬಗೆಯ ಕುಂದುಕೊರತೆಗಳ ಬಗ್ಗೆ ಅಧ್ಯಯನಗಳು ಅಷ್ಟಾಗಿ ನಡೆಯುತ್ತಿಲ್ಲ. ಇದಕ್ಕೆ ಕಾರಣವೇನು? ಮತ್ತು ಇದರ ನಿವಾರಣೆ ಯಾವ ರೀತಿ? ಎಂಬ ಹಲವು ಪ್ರಶ್ನೆಗಳು ಎದುರಾಗುತ್ತಿವೆ. "ಶಿಕ್ಷಣ ತಜ್ಞರು, ಶಿಕ್ಷಣ ನೀತಿ ನಿರೂಪಣೆ ಮಾಡುವರು, ಭಾರತದಲ್ಲಿ ಇರಲಿ ಅಥವಾ ಬೇರೆ ಎಲ್ಲಿಯಾದರೂ ಇರಲಿ, ಕೇಂದ್ರ, ರಾಜ್ಯ ಸರ್ಕಾರಗಳಾದರೂ ಆಗಿರಲಿ, ಸಾಮಾನ್ಯ ಮನಸ್ಸಿನಿಂದ ಯೋಚನೆ ಮಾಡುವುದಾದರೆ ಒಂದು ಅಂಶ ಸ್ಪಷ್ಟವಾಗಿ ಗೋಚರವಾಗುತ್ತದೆ. ಶಿಕ್ಷಣ ಕ್ಷೇತ್ರಕ್ಕೆ ಇಂದು ಗ್ರಹಣ ಹಿಡಿದಂತಾಗಿದೆ. ರಸಗ್ರಹಣ ಎನ್ನುವ ಹಾಗೆ ಒಂದು ರೀತಿಯ ಹಣದ ಗ್ರಹಣದ ರೂಪ ತಾಳಿದೆ. ವಂತಿಕೆ, ಶುಲ್ಕ, ಮನೆಪಾಠ, ಸಂಬಳ ಇತ್ಯಾದಿ ಎಲ್ಲೋ ಕೆಲವರು ಮೌಲ್ಯ ಅರಿತು ನಡೆದುಕೊಳ್ಳುತ್ತಿರುವವರನ್ನು ಬಿಟ್ಟರೆ ಎಲ್ಲರಿಗೂ ಈ ಗ್ರಹಣ ಹಿಡಿದಿದೆ"[೨] ಎಂದರೆ ಈ ಸಮಸ್ಯೆಯ ಆಳ ಎಷ್ಟೆಂದು ಅರಿಯಬಹುದು.

ಸಮಾಜ ಮತ್ತು ಸರ್ಕಾರಗಳು ಭಾರತದ ಸಮಾನತೆಯ ಆದರ್ಶಗಳನ್ನಾಗಿಸಿಕೊಂಡಿದ್ದು, ಇದನ್ನು ಸಾಧಿಸಲು ರೂಪಿಸಿಕೊಂಡಿರುವ ಶಿಕ್ಷಣ ಸರಿಯಾದ ವ್ಯವಸ್ಥೆಯಲ್ಲಿ ಇಲ್ಲದಂತಾಗಿದೆ. ಜನತೆಯ ಆಧಾರ ಸ್ತಂಭಗಳಾಗಿರುವಂತಹ "ನಮ್ಮ ಹಕ್ಕು, ಅವಕಾಶ, ವಿಕೇಂದ್ರೀಕರಣ ವ್ಯಕ್ತಿ ಸ್ವಾತಂತ್ರ್ಯ ಇನ್ನಿತರ ಅವಕಾಶ ವಂಚಿತರಿಗೆ ನೀಡುವ ಸೌಲಭ್ಯಗಳು ಮತ್ತು ಇತರೆ ನೆರಳಿನಲ್ಲಿಯೇ ಅಸಮಾನತೆ ರಕ್ತ ಬೀಜಾಸುರನ ಅವತಾರ ತಾಳಿರುವುದು ನಮ್ಮ ವ್ಯವಸ್ಥೆಯಲ್ಲಿನ ಒಂದು ವಿಪರ್ಯಾಸವಾಗಿದೆ. ಈ ಅಸಮಾನತೆಯಲ್ಲಿ ಶಿಕ್ಷಣದ ವ್ಯವಸ್ಥೆಯು ವಿವಿಧ ಹಂತ ಪ್ರಕ್ರಿಯೆ,

ಸ್ವರೂಪ, ಸಂಪನ್ಮೂಲಗಳಲ್ಲಿ ಆಡಳಿತ ಮತ್ತು ನಿರ್ವಹಣೆಯ ಹಂಚಿಕೆಯಲ್ಲಿ ತನ್ನ ವಿಕಾರ ಮುಖಗಳನ್ನು ಚಾಚಿದೆ."[೩]

ಪ್ರಸ್ತುತ ಸಂದರ್ಭದಲ್ಲಿ ಕಲಾಶಿಕ್ಷಣದ ಬಗ್ಗೆ ಜನತೆಯಲ್ಲಿ ಆಸಕ್ತಿ, ಗೌರವಗಳು ಕಡಿಮೆಯಾಗಿರುವುದನ್ನು ನಾವು ಕಾಣಬಹುದು. ಕಲಾಶಿಕ್ಷಣವು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವುದೇ ಹೊರತಾಗಿ ಕಲಾವಿದರನ್ನು ತಯಾರಿಸುವುದಕ್ಕಾಗಿ ಅಲ್ಲ. "ಶಿಕ್ಷಣದ ಎಲ್ಲಾ ಹಂತಗಳಲ್ಲಿಯೂ ಕಲಾಶಿಕ್ಷಣದ ಸಮಸ್ಯೆಗಳು ಕೇವಲ ಕಲಾವಿದರಿಗೆ, ಕಲಾಶಿಕ್ಷಕರಿಗೆ ಮಾತ್ರ ಸಂಬಂಧಪಟ್ಟುದಲ್ಲ. ಅವು ನಾಡಿನ ಜನತೆಯೆಲ್ಲಕ್ಕೂ ಸಂಬಂಧಪಟ್ಟದ್ದಾಗಿದೆ"[೪] ಕಲಾಶಿಕ್ಷಣವು ಸಾರ್ವತ್ರಿಕ ಮತ್ತು ಕಡ್ಡಾಯ ಶಿಕ್ಷಣವಾಗಬೇಕು. ಪ್ರತಿಯೊಬ್ಬ ವ್ಯಕ್ತಿಯು ಸತತವಾಗಿ ಪ್ರಯತ್ನಿಸಬೇಕಾಗಿದೆ. ಸೌಂದರ್ಯ, ಸಂಸ್ಕಾರ, ಕಲಾಪ್ರಜ್ಞೆಯನ್ನು ವಾತಾವರಣವನ್ನು ಪ್ರತಿಯೊಬ್ಬರಲ್ಲಿ ನಿರ್ಮಿಸಬೇಕು. ಕಲಾಶಿಕ್ಷಣದ ಏಳಿಗೆಗಾಗಿ ಹತ್ತು ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದದ್ದು ಅತ್ಯಾವಶ್ಯಕವಾದುದಾಗಿದೆ.

ಆಧುನಿಕ ಶಿಕ್ಷಣವು ಜನರಿಗೆ ಮುಟ್ಟುವ ಬಗೆ, ಪ್ರಮಾಣ ಮತ್ತು ಆ ವಿಷಯದಿಂದ ಕಲಿತಂತಹ ವಿಶೇಷ ಅಂಶಗಳನ್ನು ಕುರಿತಂತೆ ಅನೇಕ ಪ್ರಶ್ನೆಗಳು ಹಾಗೂ ಶಿಕ್ಷಣತಜ್ಞರ ಮುಂದೆ ನಿಂತ ಉತ್ತರಕ್ಕಾಗಿ ಕಾಯುವ ಪರಿಸ್ಥಿತಿ ನಮಗೆ ಉಂಟಾಗುತ್ತದೆ. ಇಂದು ನಮ್ಮಲ್ಲಿ ನಡೆಯುತ್ತಿರುವುದು ಮೂಲದಿಂದ ಬಂದಂತಹ ಬ್ರಿಟಿಷ್ ಮಾದರಿಯ ಶಿಕ್ಷಣ. ಅವರು ಆಡಳಿತಕ್ಕೆ ಪೂರಕವಾದಂತಹ ಶಿಕ್ಷಣವನ್ನು ಹುಟ್ಟುಹಾಕಿದರು. ಆದರೆ ಅವರು ದೇಶವನ್ನು ಬಿಟ್ಟು ಹೋಗಿ ಹಲವಾರು ವರ್ಷಗಳು ಕಳೆದರೂ ನಾವು ಅವರು ಬಿಟ್ಟು ಹೋದಂತಹ ಶಿಕ್ಷಣವನ್ನು ಪಡೆಯುತ್ತಿದ್ದೇವೆ.

"ಇಂದಿನ ಮನುಷ್ಯನ ಜೀವನಕ್ಕೂ ಶಾಲೆ, ಕಾಲೇಜುಗಳಲ್ಲಿ ನಮ್ಮ ವಿದ್ಯಾರ್ಥಿಗಳು ಪಡೆಯುತ್ತಿರುವ ಶಿಕ್ಷಣಕ್ಕೂ ಒಂದಕ್ಕೊಂದು ಸಂಬಂಧವಿಲ್ಲದಂತಾಗಿದೆ. ವಿದ್ಯಾರ್ಥಿಗಳು ಅವರ ವಿದ್ಯಾಭ್ಯಾಸ ಮುಗಿದ ನಂತರದಲ್ಲಿ ಸ್ವತಂತ್ರ, ಸ್ವಾವಲಂಬನೆ, ಸ್ವಾಭಿಮಾನ ಪೂರ್ವಕವೂ ಆದ ಬದುಕನ್ನು ರೂಢಿಸಿಕೊಳ್ಳಲು ನೆರವಾಗುವಂತಹ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕೊಡುತ್ತಿಲ್ಲ"[೫] ಎಂಬುದು ವಿಷಾದದ ಸಂಗತಿಯಾಗಿದೆ. ಯಾವುದೇ ಶಿಕ್ಷಣದ ಉದ್ದೇಶ ಪರಿಪೂರ್ಣ ವ್ಯಕ್ತಿ ವಿಕಸನ ಮಾಡುವುದಾಗಿದೆ. ಕೇವಲ ಅಂಕ ಪಡೆಯುವುದಕ್ಕೆ ಮತ್ತು ಉದ್ಯೋಗ ಪಡೆಯುವುದಕ್ಕಾಗಿ ಅಲ್ಲ. ತನ್ನತನದ ಜೊತೆಗೆ ಸ್ವಯಂ ನಿರ್ಧಾರಗಳನ್ನು ತೆಗೆದುಕೊಳ್ಳಬಲ್ಲ ಪ್ರಕ್ರಿಯೇ ಶಿಕ್ಷಣದ್ದಾಗಿದೆ.

"ಇಂದಿನ ಶಿಕ್ಷಣ ಸೈದ್ಧಾಂತಿಕವಾದದ್ದು, ಪ್ರಾಯೋಗಿಕ ಅಂಶಗಳು ಇದರಲ್ಲಿ ಕಡಿಮೆ ಎಂಬುದು ಒಂದು ವಾದವಾದರೆ ಇದರೊಂದಿಗೆ ನಮ್ಮ ಈಗಿನ ಪಠ್ಯಕ್ರಮದಲ್ಲೂ ಬೋಧನಾ ಕ್ರಮದಲ್ಲೂ ಶೈಕ್ಷಣಿಕ ಸವಲತ್ತುಗಳು ಏಕರೂಪ ಇಲ್ಲದೆ ಇರುವುದನ್ನು ನಾವು ನೋಡಬಹುದು. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ನಗರ ಪ್ರದೇಶ, ಗ್ರಾಮೀಣ ಪ್ರದೇಶ, ಶ್ರೀಮಂತ - ಬಡವ, ವಿದ್ಯಾವಂತ, ಪೋಷಕ - ಅವಿದ್ಯಾವಂತ ಪೋಷಕ, ಸಾರ್ವಜನಿಕ ಶಿಕ್ಷಣ ಸಂಸ್ಥೆ - ಖಾಸಗಿ

ಶಿಕ್ಷಣ ಸಂಸ್ಥೆ, ಅನುದಾನಿತ ಶಿಕ್ಷಣ ಸಂಸ್ಥೆ, ಅನುದಾನ ರಹಿತ ಶಿಕ್ಷಣ ಸಂಸ್ಥೆ" ಇತ್ಯಾದಿ ಇವೆಲ್ಲವೂ ಅಸಮಾನಾಂತರ ಸ್ಥಿತಿಗಳಾಗಿದ್ದು ಶಿಕ್ಷಣ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿವೆ.

೪.೧. ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣ ಮತ್ತು ಚಿತ್ರಕಲಾ ವಿದ್ಯಾರ್ಥಿಗಳ ಸಮಸ್ಯೆಗಳು

ಪ್ರಾಥಮಿಕ ಹಾಗೂ ಮಾಧ್ಯಮಿಕ ಕಲಾಶಿಕ್ಷಣ

ಭಾರತದ ಚಿತ್ರಕಲೆಯ ಚರಿತ್ರೆಗೆ/ಚಿತ್ರಕಲಾ ಶಿಕ್ಷಣ ಕ್ಷೇತ್ರಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ಕರ್ನಾಟಕ ನೀಡಿದೆ. ಇಂತಹ ರಾಜ್ಯದಲ್ಲಿ ನಮ್ಮ ಚಿತ್ರಕಲಾ ಕ್ಷೇತ್ರದಲ್ಲಿ ಒಳ್ಳೆಯ ಸುಧಾರಣೆಗಳು ಆಗದೇ ಇರುವುದು ವಿಷಾದನೀಯವಾಗಿದೆ.

ವಿದ್ಯಾಭ್ಯಾಸದಲ್ಲಿ ಕಲೆಯ ಗುರಿಯನ್ನು ಅದರಲ್ಲಿ ಅಭಿರುಚಿಯನ್ನು ಉಂಟುಮಾಡುವುದಲ್ಲದೆ ರಸಜ್ಞಾನವನ್ನು ಮತ್ತು ಕಲೆಯಲ್ಲಿ ಅಡಗಿರುವಂತಹ ಸೊಬಗನ್ನು ತಿಳಿಯುವುದನ್ನು ಬೆಳೆಸುವುದು, ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಅಡಗಿರುವಂತಹ ಸೃಜನಾತ್ಮಕ ಶಕ್ತಿಯನ್ನು ವೃದ್ಧಿಗೊಳಿಸುವುದು ಮತ್ತು ವ್ಯಕ್ತಿತ್ವವನ್ನು ಪೂರ್ಣಗೊಳಿಸುವುದು.

ಕರ್ನಾಟಕದ ಶಾಲೆಗಳಲ್ಲಿ ನೀಡುತ್ತಿರುವಂತಹ ಚಿತ್ರಕಲಾ ಶಿಕ್ಷಣವು ಒಬ್ಬ ಜವಾಬ್ದಾರಿ ಉತ್ತಮ ನಾಗರಿಕನನ್ನಾಗಿ ಮಾಡಲು ಮತ್ತು ಕಲೆಯ ಅಭಿರುಚಿಯನ್ನು, ಕಲೆಯನ್ನು ಮೆಚ್ಚುವಂತೆ ಮಾಡುವುದು ಮುಖ್ಯವಾಗಿದೆ.

ಚಿತ್ರಕಲಾ ಕಲಿಕೆಯಿಂದ ಮಕ್ಕಳಲ್ಲಿ ಮನಸ್ಸಿನ ಸೂಕ್ಷ್ಮ ಹಾಗೂ ಕಲ್ಪನಾಶಕ್ತಿ ವೃದ್ಧಿಗೊಳಿಸುತ್ತದೆ ಮತ್ತು ಮಕ್ಕಳ ಮೆದುಳನ್ನು ಚುರುಕಾಗಿ ಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ ಹಾಗೂ ಸೌಂದರ್ಯ ಪ್ರಜ್ಞೆ ಸೃಜನಾತ್ಮಕ ಗುಣಗಳನ್ನು ಬೆಳೆಸುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ರಾಜ್ಯದ ಪ್ರಾಥಮಿಕ ಶಾಲೆಯಲ್ಲಿ ಕಲಿಸುತ್ತಿರುವಂತಹ ಪಠ್ಯಕ್ರಮದಲ್ಲಿ (ಸಿಲೆಬಸ್) ಸಾಕಷ್ಟು ಸಮಯವನ್ನು ಕೊಟ್ಟು ಚಿತ್ರಕಲಾ ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಕರ್ನಾಟಕದಲ್ಲಿರುವಂತಹ ನೂರಾರು ಪ್ರಾಥಮಿಕ ಶಾಲೆಗಳಲ್ಲಿಯೂ ಕೂಡ ತರಬೇತಿ ಪಡೆದಂತಹ ಶಿಕ್ಷಕರು ಇಲ್ಲದಿರುವುದನ್ನು ಕಾಣಬಹುದು. ಇಲ್ಲಿ ಇರುವಂತಹ ಶಿಕ್ಷಕರುಗಳು ಎಸ್.ಎಸ್.ಎಲ್.ಸಿ. ಶಿಕ್ಷಣ ಮುಗಿದ ಮೇಲೆ ಎರಡು ವರ್ಷ ಫೌಂಡೇಶನ್ ಕೋರ್ಸ್ ಅಥವಾ ಕಲಾಮೂಲ ತರಗತಿಗಳನ್ನು ಮುಗಿಸಿ, ನಂತರದಲ್ಲಿ ಎರಡು ವರ್ಷದ ಡಿ.ಎಂ.ಸಿ.ಯನ್ನು ಪಡೆದುಕೊಂಡಿದ್ದರೆ ಶಿಕ್ಷಕರ ವೃತ್ತಿಗೆ ಅರ್ಹರಾಗುತ್ತಿದ್ದರು. ಇವರಿಗೆ ಯಾವುದೇ ರೀತಿಯ ತರಬೇತಿಯನ್ನು ನೀಡುತ್ತಿರಲಿಲ್ಲ. ಹದಿನೈದು - ಇಪ್ಪತ್ತು ಶಾಲೆಗಳಿಗೆ ಒಬ್ಬ ಚಿತ್ರಕಲಾ ಶಿಕ್ಷಕನಿರುವುದನ್ನು ಕಾಣಬಹುದು. ಈ ಕಾರಣದಿಂದಾಗಿ ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಪಾಠಗಳನ್ನು ನಿರ್ಲಕ್ಷಿಸಲ್ಪಡುತ್ತಿದೆ ಎಂದರೆ ತಪ್ಪಾಗಲಾರದು.

ಪ್ರಾಥಮಿಕ ಶಾಲೆಗಳಲ್ಲಿ ಚಿತ್ರಕಲೆಯ ಅಂಶವು ಒಳಗೊಂಡಿದ್ದರೆ ಮಕ್ಕಳಿಗೆ ಬಣ್ಣ, ಗೀಚುವಿಕೆಯಿಂದ ಆಸಕ್ತಿ ಹೆಚ್ಚುತ್ತದೆ. ಇದರಿಂದಾಗಿ ಇವರ ರಚನಾ ಕೌಶಲ್ಯಕ್ಕೆ ಭದ್ರ ಬುನಾದಿ ಹಾಕಬಹುದು. ಮಕ್ಕಳು ತಮ್ಮ ಮನಸ್ಸಿನೊಳಗಿರುವಂತಹ ಭಾವನೆಗಳನ್ನು ವ್ಯಕ್ತಪಡಿಸಲು ಇರುವ ಒಂದು ಉಪಾಯವೆಂದರೆ ಚಿತ್ರಕಲೆ: ಚಿತ್ರಕಲೆಯನ್ನು ಒಂದು ಮಗುವಿಗೆ ರಚಿಸಲು ಹೇಳಿದರೆ ಅವರಿಗೆ ಪೆನ್ಸಿಲ್ ಮತ್ತು ಪೇಪರ್ ಕೊಟ್ಟರೆ ಸಾಕು. ಗೀಚಲು ಪ್ರಾರಂಭಿಸುತ್ತವೆ. “ಚಿತ್ರಗಳನ್ನು ರಚನೆ ಮಾಡುವುದಕ್ಕೆ ಆ ಚಿತ್ರಗಳಿಗೆ ಬಣ್ಣ ಹಚ್ಚುವುದಕ್ಕೆ ತನಗೆ ಇಷ್ಟ ಬಂದ ರೀತಿ ಕಲ್ಪನಾಶಕ್ತಿ, ವ್ಯಕ್ತಿತ್ವ ಮತ್ತು ಅನುಭವಗಳನ್ನು ಧಾರಾಳವಾಗಿ ಬಳಸಿ ಅವರು ಬಿಡಿಸಿದ ಒಂದು ಆಕಾರಕ್ಕೂ ಬಣ್ಣಕ್ಕೂ ಸಂಬಂಧ ಕಲ್ಪಿಸಲು ಮಗುವಿಗೆ ಸರಿಯಾದ ಅವಕಾಶವನ್ನು ನೀಡ ಬೇಕಾಗುತ್ತದೆ. ಈ ರೀತಿಯ ಕೆಲಸಗಳು ಮಕ್ಕಳ ಮನಸ್ಸಿನಲ್ಲಿರುವ ಗೊಂದಲ ಉದ್ದೇಶಗಳು ಹರಿದುಹೋಗಲು ಸಹಾಯಕವಾಗಬಲ್ಲವು. ಮಕ್ಕಳಿಗೆ ಕಲಾಶಿಕ್ಷಣದೊಳಗೆ ಮಾಡುವಂತಹ ಅನ್ವೇಷಣೆಗಳು ಅವರ ಪಾಲಿಗೆ ರೋಮಾಂಚನಕಾರಿ ಹಾಗೂ ಸಾರ್ಥಕವೆನಿಸುತ್ತದೆ”[೭]

ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ಚಿತ್ರಕಲೆಗೆ ಸಂಬಂಧಿಸಿದಂತೆ ಅವರಿಗೆ ಅವಶ್ಯಕವಾದಂತಹ ಸಾಮಗ್ರಿಗಳನ್ನು ಕೊಟ್ಟು ಅವರಿಗೆ ಇಷ್ಟ ಬಂದ ಹಾಗೆ ಚಿತ್ರ ರಚನೆ ಮಾಡಲು ಅಥವಾ ಗೀಚುವಂತಹ ಸಂಪೂರ್ಣವಾದ ಸ್ವತಂತ್ರವನ್ನು ನೀಡಬೇಕು. ಅವರು ಬರೆದಂತಹ ಅಥವಾ ಗೀಚಿದಂತಹ ಚಿತ್ರಗಳಲ್ಲಿ ಅವರದೇ ಆದಂತಹ ಅರ್ಥವಿರುತ್ತದೆ ಮತ್ತು ನೋಡಲು ಆಕರ್ಷಕ ವಾಗಿರುತ್ತವೆ. ಇಂತಹ ಚಿತ್ರಗಳನ್ನು ಬಿಡಿಸಿದ ಮಕ್ಕಳಿಂದ ಆ ಚಿತ್ರಗಳ ಬಗ್ಗೆ ವಿವರಣೆಯನ್ನು ಕೇಳಬೇಕು. ಅವರು ಬಿಡಿಸಿದ ಅಥವಾ ಗೀಚುವುದರಿಂದ ಮಕ್ಕಳಲ್ಲಿರುವಂತಹ ಕಲ್ಪನಾಶಕ್ತಿ ಹೆಚ್ಚುತ್ತದೆ.

ಚಿತ್ರಕಲಾ ಶಿಕ್ಷಣದ ಬಗ್ಗೆ ಹೇಳಬೇಕಾದರೆ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಚಿತ್ರಕಲೆ ಕಲಿಸುವಂತಹ ಒಂದು ಪದ್ಧತಿಯ ಕಡೆಗೆ ಸಾಮಾನ್ಯವಾಗಿ ಗಮನ ಸೆಳೆಯುತ್ತದೆ. ಚಿತ್ರಕಲಾ ಶಿಕ್ಷಕ ಸರ್ಕಾರಿ ಮತ್ತು ಖಾಸಗಿ ಕಲಾಶಾಲೆಗಳಲ್ಲಿ ಕಾರ್ಯ ಮಾಡುತ್ತಿರುವುದನ್ನು ನಾವು ನೋಡುತ್ತೇವೆ. ಕರ್ನಾಟಕದ ಪ್ರಾಥಮಿಕ ಶಾಲೆಗಳಲ್ಲಿ (ಸರ್ಕಾರಿ ಶಾಲೆ, ಖಾಸಗಿ ಶಾಲೆ), ಚಿತ್ರಕಲಾ ಶಿಕ್ಷಕರು ಕಡಿಮೆ ಇರುವುದನ್ನು ನೋಡುತ್ತೇವೆ. ಅದರಲ್ಲೂ ಕಡ್ಡಾಯವಾಗಿ ಮೊರಾರ್ಜಿ ವಸತಿ ಶಾಲೆಗಳು, ನವೋದಯ ಶಾಲೆಗಳು, ಕಿತ್ತೂರು ಚೆನ್ನಮ್ಮ ವಸತಿ ಶಾಲೆಗಳಲ್ಲಿ ಕಡ್ಡಾಯವಾಗಿ ಚಿತ್ರಕಲಾ ಶಿಕ್ಷಕರನ್ನು ನೇಮಿಸಿಕೊಳ್ಳುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವೊಂದು ಖಾಸಗಿ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರನ್ನು ನೇಮಿಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಅವರ ಪ್ರತಿಭೆಯನ್ನು ತೋರಿಸಲು ಪ್ರತಿಭಾ ಕಾರಂಜಿ ಎಂಬ ಕಾರ್ಯಕ್ರಮಗಳು ಹಮ್ಮಿಕೊಳ್ಳುತ್ತಿದ್ದಾರೆ. ಅದರಲ್ಲಿ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಿರುತ್ತಾರೆ. ಕೆಲವೊಂದು ಸಂಘ-ಸಂಸ್ಥೆಗಳು ಚಿತ್ರಕಲೆಗೆ ಸಂಬಂಧಿಸಿದ ವಿಶೇಷ ಪ್ರೋತ್ಸಾಹ ನೀಡುತ್ತಾ ಬಂದಿವೆ. ಇದರಿಂದಾಗಿ

ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆಯನ್ನು ಹೊರಹಾಕಲು ಇದು ಉತ್ತಮ ವೇದಿಕೆಯಾಗಿದೆ. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಅನೇಕ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಚಿತ್ರಕಲೆ ಸ್ಪರ್ಧೆಯಲ್ಲಿ ಭಾಗವಹಿಸುವುದನ್ನು ಕಾಣುತ್ತೇವೆ.

ಪ್ರೌಢಶಾಲಾ ಚಿತ್ರಕಲಾ ಶಿಕ್ಷಣದ ಬಗ್ಗೆ ಹೇಳಬೇಕಾದರೆ; ಇಲ್ಲಿಯೂ ಸಹಿತ ಸರಕಾರಿ ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರು ಕಡಿಮೆ. ಆದರೆ ಖಾಸಗಿ ಪ್ರೌಢಶಾಲೆಗಳಲ್ಲಿ ಕಡ್ಡಾಯವಾಗಿ ಆರ್ಟ್ಸ್ ಮತ್ತು ಕ್ರಾಫ್ಟ್ ಶಿಕ್ಷಕರನ್ನು ನೇಮಿಸಿಕೊಳ್ಳುವುದು ಸಾಮಾನ್ಯವಾಗಿ ನೋಡುತ್ತೇವೆ. ಇಲ್ಲಿಯೂ ಸಹ ತರಗತಿಯ ವೇಳಾಪಟ್ಟಿಯಲ್ಲಿ ಇರುವಂತೆ ತರಗತಿಗಳನ್ನು ನಡೆಸಿಕೊಂಡು ಹೋಗುತ್ತಿರುತ್ತಾರೆ. ಆದರೆ ಚಿತ್ರಕಲಾ ವಿಷಯಕ್ಕೆ ಬಂದಾಗ ಕೆಲವು ಪ್ರೌಢ ಶಾಲೆಯ ಇನ್ನುಳಿದ ವಿಷಯಕ್ಕೆ ಸಂಬಂಧಿಸಿದಂತಹ ಶಿಕ್ಷಕರು ಚಿತ್ರಕಲೆ ವಿಷಯ ಇರುವ ವೇಳೆಯಲ್ಲಿ ನನ್ನ ವಿಷಯವಾದ ಗಣಿತವನ್ನು ಬೋಧನೆ ಮಾಡಬೇಕು. ಚಿತ್ರಕಲೆಯೇನು ಪರೀಕ್ಷೆಗೆ ಇದೆಯೇ? ಎಂದು ಆ ವೇಳೆಯನ್ನು ಅವರೇ ಸೀಮಿತಪಡಿಸಿಕೊಂಡರೆ ಚಿತ್ರಕಲೆಯ ಕುರಿತು ವಿದ್ಯಾರ್ಥಿಗಳು ತಿಳಿದುಕೊಳ್ಳುವುದಾದರೂ ಹೇಗೆ? ಎಲ್ಲಿ? ಕೆಲವು ಚಿತ್ರಕಲಾ ಶಿಕ್ಷಕರುಗಳು ಕಲೆಯೇ ನನ್ನ ಬದುಕೆಂದು ತಿಳಿದು ಪ್ರಾಮಾಣಿಕತೆಯಿಂದ ತಮ್ಮ ಸೇವೆಯಲ್ಲಿ ತೊಡಗಿರುತ್ತಾರೆ. ಆದರೆ ಮಕ್ಕಳಲ್ಲಿ ಕಲೆಯ ಬಗ್ಗೆ ಅಭಿರುಚಿ ಮೂಡಿಸಲು ಸಾಧ್ಯವಾಗುವುದಿಲ್ಲ!

ಚಿತ್ರಕಲೆಯನ್ನು ಕಲಿಯಲು ಇಚ್ಛಿಸುವಂತಹ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಲಾ ಬೋಧನಾ ಕ್ರಿಯೆಯಲ್ಲಿ ಪ್ರಾಮಾಣಿಕ ಕಲಾಸೇವೆಯಲ್ಲಿ ತೊಡಗಿರುತ್ತಾರೆ. ಇದಲ್ಲದೆ ವಿದ್ಯಾರ್ಥಿಗಳಿಗೆ ಲೋಯರ್ ಮತ್ತು ಹೈಯರ್ ಗ್ರೇಡ್ ಚಿತ್ರಕಲಾ ಶಿಕ್ಷಣ ಪರೀಕ್ಷೆಗಳನ್ನು ನಡೆಸಿ ಅಲ್ಲಿ ಎಷ್ಟೋ ಮಂದಿಯು ಉತ್ತೀರ್ಣರಾಗಿರುವುದನ್ನು ಕಾಣಬಹುದು. ಕಲಾ ಬೋಧನೆಯಲ್ಲಿ ಕಲೆಯೇ ನನ್ನ ಬದುಕೆಂದು ಪ್ರಾಮಾಣಿಕವಾಗಿ ಕೆಲವರು ಸೇವೆಯಲ್ಲಿ ತೊಡಗಿಕೊಂಡಿರುತ್ತಾರೆ. ಪ್ರೌಢಶಾಲೆಯಲ್ಲಿ ಅನೇಕ ಪ್ರತಿಭೆಗಳನ್ನು ನೋಡುತ್ತೇವೆ/ನೋಡಿರುತ್ತೇವೆ. ಇವರುಗಳಿಗೂ ಸಹ ಚಿತ್ರಕಲಾ ಸ್ಪರ್ಧೆಗಳನ್ನು ಏರ್ಪಡಿಸಿ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನವನ್ನು ನೀಡಲಾಗುವುದು. ಇವರಿಗೆ ತಮ್ಮ ಪ್ರತಿಭೆಯನ್ನು ತೋರಿಸಲು ಹಲವಾರು ರೀತಿಯ ದಾರಿಗಳು ಇರುವುದನ್ನು ನಾವು ಕಾಣಬಹುದು.

ಪ್ರೌಢಶಾಲಾ ಶಿಕ್ಷಣದ ನಂತರ ಪಡೆಯುವಂತಹ ಪದವಿ ಪೂರ್ವ, ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣವನ್ನು ಸಾಮಾನ್ಯವಾಗಿ ನಾವು ಉನ್ನತ ಶಿಕ್ಷಣವೆಂದು ಹೇಳಬಹುದು. "ಆದರೆ ಕರ್ನಾಟಕ ಸರ್ಕಾರದ ದೃಷ್ಟಿಯಲ್ಲಿ ಮಾತ್ರ ಕೆಲವು ವರ್ಷಗಳಿಂದೀಚೆಗೆ ಉನ್ನತ ಶಿಕ್ಷಣವೆಂದರೆ ಪದವಿಪೂರ್ವ ಶಿಕ್ಷಣ ಅದರಲ್ಲೂ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಮಾತ್ರ ಉನ್ನತ ಶಿಕ್ಷಣವೆನ್ನುವಂತಹ 'ಹುಸಿಸತ್ಯ'ವನ್ನು ಸಮಾಜದ ಜನರು ಹಾಗೂ ಮೇಲ್ವರ್ಗದ ಜನಗಳಲ್ಲಿ ಪೂರ್ವಯೋಜಿತ ರೀತಿಯಲ್ಲಿ ಬಿತ್ತಲಾಗಿದೆ. ಕರ್ನಾಟಕ ಸರ್ಕಾರವು ಎಂಜಿನಿಯರ್ ಮತ್ತು ವೈದ್ಯಕೀಯ ಕಾಲೇಜುಗಳಿಗೆ ಅನುಮತಿ ನೀಡುತ್ತದೆ. ಇಲ್ಲಿ ಲಕ್ಷಗಟ್ಟಲೆ

ಹಣವನ್ನು ಸುರಿಯುವುದಕ್ಕೆ ಸಾಧ್ಯವಿದ್ದರೆ ಒಬ್ಬ ಸಾಧಾರಣ ಮಟ್ಟದ ವಿದ್ಯಾರ್ಥಿಯೂ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣಕ್ಕೆ ಅರ್ಹನಾಗುತ್ತಾನೆ. ಇಲ್ಲಿ ವ್ಯಾಸಂಗ ಮಾಡುವಂತಹ ವಿದ್ಯಾರ್ಥಿಗಳು ಸಚಿವರು ಅಥವಾ ಅವರ ಸಂಬಂಧಿಕರುಗಳು, ಶಾಸಕರುಗಳು ಈ ಹಂಚಿಕೆಯಲ್ಲಿ ಪಾಲುದಾರರು ಎಂಬುದು ಇಂದಿನ ಸಮಾಜಕ್ಕೆ ಗೊತ್ತಿರುವಂತಹ ವಿಷಯವಾಗಿದೆ."[೮] ಇದಕ್ಕೆ ಸಂಬಂಧಿಸಿದಂತೆ ಕಾನೂನು ಸಹ ಇಂತಹ ವ್ಯವಸ್ಥೆಯ ಕಪಿಮುಷ್ಠಿಯಲ್ಲಿದ್ದು ವಿಶ್ವವಿದ್ಯಾಲಯಗಳು ಹಾಗೂ ಶಿಕ್ಷಣ ಪಡೆದವರು ಉನ್ನತ ಶಿಕ್ಷಣದ ಮೇಲಾಗುತ್ತಿರುವ ಅಪಮಾನಗಳನ್ನು ನೋಡಿಯೂ ನೋಡದಂತಿದ್ದಾರೆ ಅಥವಾ ಇವರು ಅದರ ಭಾಗವಾಗಿದ್ದಾರೆ.

ಮಾಧ್ಯಮಿಕ ಶಾಲಾ ಪಠ್ಯ ವಿಷಯಗಳಲ್ಲಿ ಚಿತ್ರಕಲೆಗೆ ಸಾಕಷ್ಟು ತರಗತಿಗಳು ಇರುವುದಿಲ್ಲ. ಈ ಹಿಂದೆ ಚಿತ್ರಕಲೆಗೆಂದು ಕೆಲವು ತರಗತಿಗಳು ಮೀಸಲಿರುತ್ತಿದ್ದವು. ಆದರೆ ಪ್ರಸ್ತುತ ಸಂದರ್ಭದಲ್ಲಿ ಚಿತ್ರಕಲೆಯನ್ನು ವಿಲೀನಗೊಳಿಸಿದ್ದರಿಂದ ಸಾಮಾನ್ಯವಾಗಿ ಚಿತ್ರಕಲಾ ವಿಷಯವನ್ನು ನಿರ್ಲಕ್ಷಿಸಲ್ಪಟ್ಟಿದೆ. ಈ ರೀತಿಯಾದ ಅಭ್ಯಾಸವು ಒಂದು ಕ್ರಮವಾಗಿ ಅಥವಾ ನಿಯಮಾನುಸಾರವಾಗಿ ನಡೆಯುವುದು ವಿರಳವೆನ್ನಬಹುದು. ರಾಜ್ಯದಲ್ಲಿರುವಂತಹ ಅನೇಕ ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರೇ ಇರುವುದಿಲ್ಲ. ಶಾಲೆಯಲ್ಲಿ ಎಲ್ಲಾ ವಿಷಯಗಳಿರುವಂತೆ ಚಿತ್ರಕಲೆಗೆ ನಮ್ಮ ಕರ್ನಾಟಕ ಸರ್ಕಾರ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿಲ್ಲದಿರುವುದು ಕಂಡುಬರುತ್ತದೆ. ಬೇರೆ ಬೇರೆ ದೇಶಗಳಿಗೆ ಅಥವಾ ನೆರೆಹೊರೆಯ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಕಲಾಶಿಕ್ಷಣ ಕುಂಠಿತವಾಗಿದೆ.

ಪ್ರಾಥಮಿಕ–ಪ್ರೌಢಶಾಲೆಯ ವಿದ್ಯಾರ್ಥಿಗಳ ಸಮಸ್ಯೆಗಳು

ತರಗತಿಯ ಸಮಸ್ಯೆಗಳು ನಾವು ಶಾಲೆಯಲ್ಲಿರುವಾಗ ಕಾಣುವಂತಹವು. ಶಿಕ್ಷಕನು ಮಾಡುವಂತಹ ಬೋಧನೆ ಕೆಲಸವನ್ನು ಅಡ್ಡಿಗೊಳಿಸಿ ಮತ್ತು ಆಕರ್ಷಿಸಿ ಈ ಸಮಸ್ಯೆಗಳು ಮನುಷ್ಯನ ತಲೆಚಿಟ್ಟು ಮಾಡುವಂತೆ ಮಾಡುತ್ತವೆ. ತರಗತಿಯಲ್ಲಿರುವಂತಹ ಇನ್ನಿತರ ವಿದ್ಯಾರ್ಥಿಗಳ ಕಲಿಕೆಗೆ ಅಡ್ಡಿಪಡಿಸುವುದಲ್ಲದೆ ಕುಂಠಿತಗೊಳಿಸುತ್ತವೆ.

ಅನಾಸಕ್ತಿ ವಿದ್ಯಾರ್ಥಿಗಳಿಗೆ ಕಲಿಯುವಂತಹ ಆಸಕ್ತಿ ಹೆಚ್ಚಿರಬೇಕಾಗುತ್ತದೆ. ಎಲ್ಲಾ ವಿದ್ಯಾರ್ಥಿಗಳಿಗೂ ಒಂದೊಂದು ವಿಷಯದ ಬಗ್ಗೆ ಆಸಕ್ತಿ ಕಡಿಮೆ ಇರುತ್ತದೆ. ಕೆಲವೊಂದು ಶಾಲೆಗಳಲ್ಲಿ ಶಿಕ್ಷಕರುಗಳು ವಿದ್ಯಾರ್ಥಿಗಳಿಗೆ "ಏನ್ ಕಲಿತಿರೋ ಆ ಬಣ್ಣ ಹಚ್ಚೋದು" ಅಂತ ಗೇಲಿ ಮಾಡುವುದನ್ನು ನಾವು ನೋಡುತ್ತೇವೆ. ಇದರಿಂದ ಮಕ್ಕಳ ಮುದ್ದು ಮನಸ್ಸಿನ ಮೇಲೆ ಅವು ಕೆಟ್ಟ ಪರಿಣಾಮ ಬೀರುತ್ತವೆ.

ಶಿಕ್ಷಕರ ನಿರ್ಲಕ್ಷ್ಯ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ಒಂದು ಪಾಠವನ್ನು ಬೋಧಿಸುವಾಗ ಕಾಯ, ವಾಚಾ, ಮನಸಾ ಪ್ರಯತ್ನಪಟ್ಟರೆ ಮಾತ್ರ ಅದು ವಿದ್ಯಾರ್ಥಿಗಳಿಗೆ ಮುಟ್ಟುತ್ತದೆ. ಇದರಂತೆ ಕಲಿಸುವಂತಹ ಶಿಕ್ಷಕನು ವಿದ್ಯಾರ್ಥಿಗಳಿಗೆ ಬೇಕಾಬಿಟ್ಟಿ ಕಲಿಸಿದರೆ ವಿದ್ಯಾರ್ಥಿಗಳೇನು ಕಲಿಯುತ್ತಾರೆ? ಕೆಲವೊಂದು ಶಿಕ್ಷಕರಿಗೆ ಚಿತ್ರಕಲೆಯಲ್ಲಿ ಅಂಕಪಟ್ಟಿಗಳನ್ನು

ಪಡೆದಿದ್ದರೂ ಸಹ ಅವನ ಕೈಯಲ್ಲಿ ಕೆಲಸವಿಲ್ಲವೆಂದರೆ ವಿದ್ಯಾರ್ಥಿಗಳಿಗೆ ಏನು ಹೇಳಿಕೊಡುತ್ತಾನೆ. ಈ ರೀತಿಯಾಗಿ ಅನೇಕ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಅನುಭವಿಸುತ್ತಿದ್ದಾರೆ.

ಯಾವುದೇ ಒಂದು ವಿಷಯವನ್ನು ಕಲಿಯಬೇಕಾದರೆ ಅದರ ಹಿನ್ನೆಲೆ ಅಲ್ಲಿನ ಪರಿಸರ ಉತ್ತಮವಾಗಿರಬೇಕಾಗುತ್ತದೆ. ಇದರಿಂದ ಆ ವಾತಾವರಣ ಶಿಕ್ಷಣದ ಮೇಲೂ ಪ್ರಭಾವ ಬೀರುತ್ತದೆ. ಶಾಲೆಯ ಕಾರಣಗಳು ಮಕ್ಕಳಲ್ಲಿ ಸಮಸ್ಯೆಗಳುಂಟಾಗಲು ಶಾಲೆಯ ಸನ್ನಿವೇಶಗಳೂ ಸಹ ಕಾರಣವಾಗಿರುತ್ತವೆ. ಇವುಗಳಲ್ಲಿ ಅತಿಮುಖ್ಯವಾದ ಕಾರಣಗಳು ಉಪಾಧ್ಯಾಯರಲ್ಲಿ ವೃತ್ತಿಯ ಬಗ್ಗೆ ನಿರ್ಲಕ್ಷ್ಯ ಮನೋಭಾವ, ಉದಾಸೀನ, ಅಸಮರ್ಪಕ ಆಡಳಿತ ವ್ಯವಸ್ಥೆ, ಅಸಮರ್ಥ ನಾಯಕತ್ವ, ಶಿಕ್ಷಕರ ಸರ್ವಾಧಿಕಾರತ್ವ, ಹಿರಿಯ ಅಧಿಕಾರಿಗಳ ಬಗ್ಗೆ ಅವಿಧೇಯತೆ, ಅನಾಸಕ್ತಿ, ವಿದ್ಯಾರ್ಥಿಗಳ ಅತಿಯಾದ ಸಂಖ್ಯೆ, ಅಸಮರ್ಪಕ ಪಠ್ಯವಸ್ತು, ಶಿಕ್ಷಣ ಮತ್ತು ಪರೀಕ್ಷಾ ವ್ಯವಸ್ಥೆಯಲ್ಲಿ ನ್ಯೂನತೆಗಳು, ಅಸಮರ್ಪಕ ಗ್ರಂಥಾಲಯ ಮತ್ತು ಪ್ರಯೋಗಾಲಯ, ಊಟ ಮತ್ತು ವಸತಿಯ ಅನಾನುಕೂಲ ಈ ರೀತಿಯ ಕಾರಣಗಳು ಶಾಲೆಗಳಲ್ಲಿ ಎದುರಾಗುತ್ತಿರುತ್ತವೆ.

ವೈಯಕ್ತಿಕವಾಗಿ ಚಿತ್ರರಚನೆ ಮಾಡಲು ಬಿಡಬೇಕು. ಪ್ರಾಥಮಿಕ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಣವನ್ನು ಕಲಿಸುವಾಗ ಚಿತ್ರಕಲಾ ಶಿಕ್ಷಕರು ಒಂದು ವಿಷಯವನ್ನು ತೆಗೆದುಕೊಂಡು ಆ ವಿಷಯದ ರೂಪುರೇಷೆಗಳ ಬಗ್ಗೆ ಮಾಹಿತಿಯನ್ನು ನೀಡಿ ಚಿತ್ರ ಬಿಡಿಸುವಂತೆ ಹೇಳಬೇಕಾಗುತ್ತದೆ. ಶಿಕ್ಷಕರು ಹೇಳಿದ ಮೇಲೆ ವಿದ್ಯಾರ್ಥಿಗಳಿಗೆ ಆ ಚಿತ್ರದ ಬಗ್ಗೆ ಸ್ವತಂತ್ರವನ್ನ ನೀಡಬೇಕು. ಈ ಶಾಲೆಗಳಲ್ಲಿ ಶಿಕ್ಷಕರು ಕರಿಹಲಗೆಯ ಮೇಲೆ ಬಿಡಿಸಿದಂತೆ ಬಿಡಿಸಬೇಕು ಎಂದು ಹೇಳುತ್ತಾರೆ. ಇದರಿಂದ ಅವರಿಗೆ ಮನಸ್ಸಿನ ಭಾವನೆಗಳನ್ನು ಹಿಡಿದಿಟ್ಟುಕೊಳ್ಳುವಂತಾಗುತ್ತದೆ.

ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕೆಲವೊಂದು ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಿಲ್ಲದಿದ್ದರೂ ಕೂಡ ವಿಜ್ಞಾನ ವಿಷಯವನ್ನು ಬೋಧಿಸುವಂತಹ ಶಿಕ್ಷಕರು ಚಿತ್ರಕಲಾ ವಿಷಯವನ್ನು ಬೋಧಿಸುತ್ತಾರೆ. ಇದರಿಂದಾಗಿ ಚಿತ್ರಕಲಾ ಶಿಕ್ಷಕರನ್ನು ಅಂತಹ ಶಾಲೆಗಳಲ್ಲಿ ನೇಮಿಸಿಕೊಳ್ಳದೇ ಇರುವುದನ್ನು ಪ್ರಸ್ತುತ ಸಂದರ್ಭದಲ್ಲಿ ಕಾಣಬಹುದು.

ಚಿತ್ರಕಲೆಗೆ ಸಂಬಂಧಿಸಿದಂತೆ ಬಣ್ಣ, ಕುಂಚ, ಹಾಳೆ ಇತ್ಯಾದಿ ಸಾಮಗ್ರಿಗಳು ತುಟ್ಟಿಯಾಗಿರುತ್ತವೆ. ಹಾಗಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮಕ್ಕಳಿಗೆ ಚಿತ್ರಕಲೆಗೆ ಸಂಬಂಧಿಸಿದಂತಹ ಸಾಮಗ್ರಿಗಳನ್ನು ತೆಗೆದುಕೊಳ್ಳಲಿಕ್ಕೆ ಕಷ್ಟಕರವಾಗುತ್ತಿದೆ. ಕೆಲವೊಂದು ವಿದ್ಯಾರ್ಥಿಗಳಿಗೆ ಅನುಕೂಲತೆ ಗಳಿದ್ದರೂ ಇನ್ನೂ ಕೆಲವೊಂದು ವಿದ್ಯಾರ್ಥಿಗಳಿಗೆ ಅನಾನುಕೂಲವೆನಿಸುತ್ತದೆ. ಈ ನಿಟ್ಟಿನಲ್ಲಿ ಚಿತ್ರಕಲಾ ಶಿಕ್ಷಣ ಪಡೆಯುವುದು ತುಂಬಾ ಕಷ್ಟಕರವಾಗಿದೆ.

ಚಿತ್ರಕಲಾ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಪೋಷಕರು ಅವರಿಗೆ ಪ್ರೋತ್ಸಾಹವನ್ನು ನೀಡುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಈ ವಿಷಯದ ಮೇಲೆ ಅತಿಯಾದಂತಹ ಆಸಕ್ತಿ ಇದ್ದರೂ ಸಾಮಗ್ರಿಗಳಿಲ್ಲದ ಕಾರಣ ಅವರ ಆಸೆ ನಿರಾಶೆಯಾಗುವುದನ್ನು ಕಾಣುತ್ತೇವೆ. ಇನ್ನೂ

ಕೆಲವು ಪೋಷಕರು ಪರೀಕ್ಷೆಗೆ ಇಲ್ಲದ ಈ ವಿಷಯವನ್ನು ಏಕೆ ಕಲಿಯುತ್ತೀರಿ? ಮತ್ತೆ ಯಾವಾಗಲಾದರೂ ಚಿತ್ರ ಬಿಡಿಸುವೆಯಂತೆ ಈಗ ಬೇರೆ ವಿಷಯದ ಕಡೆ ಗಮನಕೊಡು ಎಂದೂ ಮಕ್ಕಳಿಗೆ ಗದರಿಸಿ ಹೇಳುವುದನ್ನು ಕಾಣುತ್ತೇವೆ. ಕೆಲವು ಪೋಷಕರು ಮಾತ್ರ ಉತ್ತಮವಾದಂತಹ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ.

ಚಿತ್ರಕಲಾ ಶಿಕ್ಷಕರು ಹೈಯರ್ ಮತ್ತು ಲೋಯರ್ ಚಿತ್ರಕಲಾ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡದೆ ಇರುವುದು:- ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಅಲ್ಲಿನ ಚಿತ್ರಕಲಾ ಶಿಕ್ಷಕರು ವಿದ್ಯಾರ್ಥಿಗಳಿಗೆ ಹೈಯರ್ ಮತ್ತು ಲೋಯರ್ ಪರೀಕ್ಷೆಗೆ ಹಾಜರಾಗುವಂತೆ ಹೇಳಬೇಕು. ಕೆಲವೊಂದು ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರೇ ಇರುವುದಿಲ್ಲ. ಅಂತಹ ಶಾಲೆಗಳಲ್ಲಿ ವಿದ್ಯಾರ್ಥಿಗಳು ಚಿತ್ರಕಲಾ ವಿಷಯವನ್ನು ಹೇಗಾದರೂ ಕಲಿಯಲು ಸಾಧ್ಯ. ಕೆಲವೊಂದು ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರು ಶಾಲೆಯಲ್ಲಿ ಇದ್ದು ಆ ವಿಷಯದ ಬಗ್ಗೆ ಅಂದರೆ ಹೈಯರ್ ಮತ್ತು ಲೋಯರ್ ಗ್ರೇಡ್ ಚಿತ್ರಕಲಾ ವಿಷಯದ ಬಗ್ಗೆ ಮಾಹಿತಿಯನ್ನು ಸಹ ನೀಡುವುದಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಇಂತಹ ಸೌಲಭ್ಯಗಳು ದೊರೆಯುತ್ತಿಲ್ಲ.

ಹೈಯರ್-ಲೋಯರ್ ಪರೀಕ್ಷೆ ಪ್ರಮಾಣ ಪತ್ರಗಳಿಂದ ಆಗುವಂತಹ ಸಮಸ್ಯೆ:– ಪ್ರೌಢಶಾಲೆಯಲ್ಲಿ ಓದುತ್ತಿರುವಂತಹ ವಿದ್ಯಾರ್ಥಿಗಳಿಗೆ ಚಿತ್ರಕಲೆಗೆ ಸಂಬಂಧಿಸಿದಂತೆ ಹೈಯರ್-ಲೋಯರ್ ಗ್ರೇಡ್ ಪರೀಕ್ಷೆಗಳನ್ನು ಬರೆಯಲು ಅವಕಾಶವಿರುತ್ತದೆ. ಆದರೆ ಅದರಿಂದ ಏನು ಉಪಯೋಗ? ಎಲ್ಲಿ ಉಪಯೋಗವಾಗುತ್ತದೆ? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಹೈಯರ್- ಲೋಯರ್ ಗ್ರೇಡ್ ಚಿತ್ರಕಲಾ ಪರೀಕ್ಷೆಯನ್ನು ಪಾಸು ಮಾಡಿದಂತಹ ಎಷ್ಟೋ ವಿದ್ಯಾರ್ಥಿಗಳಿದ್ದಾರೆ. ಇದರಿಂದಾಗಿ ಏನೇನೂ ಪ್ರಯೋಜನಗಳಿಲ್ಲದಂತಾಗಿದೆ. ಪರಿಸ್ಥಿತಿ ಹೀಗಿರುವಾಗ ಈ ತರಹದ ಪರೀಕ್ಷೆಗಳನ್ನು ಏಕೆ ತಾನೇ ಸರ್ಕಾರ ನಡೆಸುತ್ತದೆ. ಇದರಿಂದ ವಿದ್ಯಾರ್ಥಿಗಳಿಗೇನೂ ಲಾಭವಿಲ್ಲ ದಂತಾಗಿದೆ. ಸರ್ಕಾರ ಇದರ ಬಗ್ಗೆ ಕ್ರಮ ಕೈಗೊಂಡು ಹೈಯರ್ - ಲೋಯರ್ ಚಿತ್ರಕಲಾ ಶಿಕ್ಷಣವನ್ನು ಪಡೆದವರಿಗಾಗಿ ಏನಾದರೂ ಅವಕಾಶಗಳನ್ನು ಒದಗಿಸಿದರೆ ವಿದ್ಯಾರ್ಥಿಗಳಿಗೆ ಅನುಕೂಲ.

ಚಿತ್ರಕಲಾ ಸ್ಪರ್ಧೆಗಳಿಗೆ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಕಳುಹಿಸದೇ ಇರುವುದು:- ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ವಿಷಯಕ್ಕೆ ಸಂಬಂಧಿಸಿದಂತೆ ಕೆಲವೊಂದು ವಿದ್ಯಾರ್ಥಿಗಳು ವಿಷಯವನ್ನು ಹೆಚ್ಚಾಗಿ ತಿಳಿದುಕೊಂಡಿರುತ್ತಾರೆ. ಚಿತ್ರಕಲಾ ಸ್ಪರ್ಧೆ ನಡೆಯುವಂತಹ ಸಮಯದಲ್ಲಿ ಪ್ರಾಥಮಿಕ ಅಥವಾ ಪ್ರೌಢಶಾಲೆಯಾಗಿರಬಹುದು. ಇಲ್ಲಿ ಕೆಲವೊಂದು ಶಿಕ್ಷಕರ ಮಕ್ಕಳು ಕಲಿಯುತ್ತಿರುತ್ತಾರೆ. ಚಿತ್ರಕಲಾ ಸ್ಪರ್ಧೆಗೆ ಆಯ್ಕೆಯ ಸಮಯದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಕಡೆಗಣನೆ ಮಾಡಿ, ಆ ಶಾಲೆಯ ಚಿತ್ರಕಲಾ ವಿಷಯದಲ್ಲಿ ಅಷ್ಟು ಗೊತ್ತಿಲ್ಲದಿದ್ದರೂ ಕೂಡ ಶಿಕ್ಷಕರ ಮಕ್ಕಳನ್ನು ಆಯ್ಕೆ ಮಾಡಿ ಚಿತ್ರಕಲಾ ಸ್ಪರ್ಧೆಗೆ ಕಳುಹಿಸುವುದನ್ನು ನೋಡುತ್ತೇವೆ. ಇದರಿಂದಾಗಿ ಪ್ರತಿಭಾನ್ವಿತ ವಿದ್ಯಾರ್ಥಿಗಳು ಅವಕಾಶದಿಂದ ವಂಚಿತರಾಗುತ್ತಾರೆ.

ಶಿಕ್ಷಣದ ಪ್ರಮುಖವಾದ ಗುರಿ, ಉದ್ದೇಶಗಳ ಸಾಧನೆಯ ಹಾದಿಯಲ್ಲಿ ಅತಿ ಮುಖ್ಯವಾದವರೆಂದರೆ ಪಾಲಕರು, ಪೋಷಕರು, ವಿದ್ಯಾರ್ಥಿ ಮತ್ತು ಶಿಕ್ಷಕ, ಶಿಕ್ಷಕರು, ಅವರಿಗೆ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಶೈಕ್ಷಣಿಕತೆಗೆ ಸಂಬಂಧಿಸಿದಂತೆ ಪ್ರಕ್ರಿಯೆಯಲ್ಲಿ ಉತ್ತಮ ಕಾರ್ಯನಿರ್ವಹಿಸುವಂತೆ ಅವರ ಕೈಯಲ್ಲಿ ವಿದ್ಯಾರ್ಥಿಗಳ ಸಂಪೂರ್ಣವಾದಂತಹ ಬೆಳವಣಿಗೆಯನ್ನು ಕಾಣಬಹುದು. ಈ ರೀತಿಯ ಬೆಳವಣಿಗೆ ಕಾಣಬೇಕಾದರೆ ಯಾವುದೇ ವಿಷಯವಾಗಲಿ ಆ ವಿಷಯಕ್ಕೆ ಸಂಬಂಧಿಸಿದ ಶಿಕ್ಷಕನ ಪಾತ್ರ ಮುಖ್ಯವಾಗಿರುತ್ತದೆ. ಶಿಕ್ಷಕರು ವಿದ್ಯಾರ್ಥಿಗೆ ಕಲಿಸಬೇಕಾದರೆ ಶಿಕ್ಷಕನು ಅವರ ವಿಷಯದ ಜೊತೆಗೆ ಮತ್ತಿತರ ವಿಷಯಗಳ ಬಗ್ಗೆ ತಿಳುವಳಿಕೆಯನ್ನು ಹೊಂದಿರುವುದು ಅಗತ್ಯವಾದಂತಹ ಅಂಶವಾಗಿದೆ. "ಒಬ್ಬ ಉತ್ತಮ ಶಿಕ್ಷಕನು ನಿರ್ಮಲ ಮನಸ್ಸು, ಶುದ್ಧವಾದ ಆಲೋಚನೆ, ವಿಚಾರಗಳು, ಗಂಭೀರ ಸ್ವಭಾವ, ಬಾಹ್ಯ ಚಹರೆ, ಆಶಾವಾದಿ, ಅಪಾರ ಪಾಂಡಿತ್ಯ ಇತ್ಯಾದಿ ಗುಣಗಳನ್ನು ಹೊಂದಿರಬೇಕೆಂದು ತಜ್ಞರಾದ ಎಫ್.ಎಲ್. ಕ್ಲಾಪ್ ಅವರ ಅಭಿಪ್ರಾಯವಾಗಿದೆ".[೯] ಇಂತಹ ಗುಣಗಳನ್ನು ಕಲಾ ಶಿಕ್ಷಕರಲ್ಲಿ ಕಾಣುವುದು ಅಪರೂಪ.

ಚಿತ್ರಕಲಾ ಶಿಕ್ಷಕರ ಸಮಸ್ಯೆಗಳು

"ಪ್ರಸ್ತುತ ಶೈಕ್ಷಣಿಕ ವಾತಾವರಣದಲ್ಲಿ ಅನೇಕ ತರಹದ ಸಮಸ್ಯೆಗಳನ್ನು ಚಿತ್ರಕಲಾ ಶಿಕ್ಷಕರು ಎದುರಿಸುತ್ತಿದ್ದಾರೆ. ಅದರಲ್ಲಿ ಮುಖ್ಯವಾದಂತಹವು -

ಶೈಕ್ಷಣಿಕ ಸಮಸ್ಯೆಗಳು

ಆಡಳಿತಾತ್ಮಕ ಸಮಸ್ಯೆಗಳು

ವ್ಯಕ್ತಿಗತ ಸಮಸ್ಯೆಗಳು"[೧೦]

ಶೈಕ್ಷಣಿಕ ಸಮಸ್ಯೆಗಳು

ಚಿತ್ರಕಲಾ ಕ್ಷೇತ್ರದಲ್ಲಿ ಒಂದು ನಿರ್ದಿಷ್ಟವಾದಂತಹ ಪಠ್ಯಪುಸ್ತಕ ಇಲ್ಲದಿರುವುದನ್ನು ನೋಡುತ್ತೇವೆ. ಸಾಮಾನ್ಯ ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ತರಗತಿಗಳಲ್ಲಿ ಅಂದರೆ ಪ್ರಾಥಮಿಕ, ಪ್ರೌಢ, ಪದವಿ, ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಅವುಗಳಿಗೆ ಸಂಬಂಧಿಸಿದಂತಹ ಹಲವಾರು ಪುಸ್ತಕಗಳನ್ನು ಹೊರತಂದಿರುವುದರಿಂದ ಓದುವಂತಹ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಆದರೆ ಚಿತ್ರಕಲಾ ಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಮಕ್ಕಳಿಗೆ ನಿರ್ದಿಷ್ಟವಾದಂತಹ ಕಡ್ಡಾಯವಾದಂತಹ ಚಿತ್ರಕಲಾ ವಿಷಯ ಕುರಿತಂತೆ ಒಂದು ಚಿಕ್ಕ ಪುಸ್ತಕಗಳು ಬರದೇ ಇರುವುದು ಚಿತ್ರಕಲಾ ಕ್ಷೇತ್ರಕ್ಕೆ ಒಂದು ದೊಡ್ಡ ಸಮಸ್ಯೆಯಾಗಿದೆ.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಇರುವುದನ್ನು ಕಾಣುತ್ತೇವೆ. ಇದರಿಂದ ಚಿತ್ರಕಲಾ ಶಿಕ್ಷಕನು ಅವರು ಕೊಟ್ಟಂತಹ ನಲವತ್ತೈದು ನಿಮಿಷಗಳಲ್ಲಿ ಒಂದು ಚಿತ್ರದ ಕುರಿತು ಹೇಳಬಹುದಷ್ಟೇ. ಆದರೆ ಪ್ರಾಯೋಗಿಕವಾದಂತಹ ವಿಷಯವಾಗಿರುವುದರಿಂದಾಗಿ

ಎಲ್ಲರನ್ನು ಗಮನಿಸಲು ಆಗುವುದಿಲ್ಲ. ವಿದ್ಯಾರ್ಥಿಗಳಿಗೆ ಆ ಚಿತ್ರದ ಬಗ್ಗೆ ಮಾಹಿತಿಯನ್ನು ಸಂಪೂರ್ಣವಾಗಿ ಕೊಡಲು ಸಾಧ್ಯವಾಗುವುದಿಲ್ಲ.

ಎಲ್ಲಾ ಭಾಷೆಗಳ ಶಿಕ್ಷಕರುಗಳಿಗೆ ವರ್ಷಕ್ಕೆ ಒಂದರಂತೆ ಹಲವಾರು ತರಬೇತಿಗಳಿರುವುದನ್ನು ಕಾಣಬಹುದು. ಆದರೆ ಚಿತ್ರಕಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ತರಬೇತಿಯನ್ನು ನೀಡುವುದು ವಿರಳ. ಈ ಹಿನ್ನೆಲೆಯಲ್ಲಿ ಚಿತ್ರಕಲಾ ಶಿಕ್ಷಕರಿಗೆ ಉತ್ತಮವಾದ ರೀತಿಯಲ್ಲಿ ತರಬೇತಿಗಳನ್ನು ನೀಡಿದ್ದರೆ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆ. ಚಿತ್ರಕಲಾ ಶಿಕ್ಷಕರು ತರಬೇತಿಯಿಂದ ವಂಚಿತರಾಗಿದ್ದಾರೆ. ಇದರಿಂದ ಅವರ ಉನ್ನತಿಯೂ ಸಾಧ್ಯವಾಗಿಲ್ಲ.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಪ್ರತ್ಯೇಕವಾದಂತಹ ಕೊಠಡಿಗಳು ಇರುವುದು ಬಹಳ ಕಡಿಮೆ. ಎರಡು ಇಲ್ಲವೇ ಮೂರು - ತರಗತಿಗಳ ವಿದ್ಯಾರ್ಥಿಗಳನ್ನು ಒಂದೇ ಕೊಠಡಿಯಲ್ಲಿ ಕುರಿಸಿದರೆ ಶಿಕ್ಷಕರು ಯಾವ ತರಗತಿಗೆ ಪಾಠ ಹೇಳಬೇಕು. ಯಾವ ತರಗತಿಗೆ ಯಾವ ವಿಷಯವನ್ನು ಹೇಳಬೇಕೆನ್ನುವ ಗೊಂದಲ ಸೃಷ್ಟಿಯಾಗುತ್ತದೆ.

ಚಿತ್ರಕಲಾ ಶಿಕ್ಷಕರ ಆಡಳಿತಾತ್ಮಕ ಸಮಸ್ಯೆಗಳು

ತೃಪ್ತಿಕರವಲ್ಲದ ಶಿಕ್ಷಕರ ವೇತನ, ಸೇವಾ ನೀತಿ ನಿಯಮಗಳು ಇದರಲ್ಲಿ ಮುಖ್ಯ ಸಮಸ್ಯೆಗಳಾಗಿವೆ. ಚಿತ್ರಕಲಾ ಶಿಕ್ಷಕರುಗಳನ್ನು ತಮ್ಮ ಶಾಲೆಯಲ್ಲಿ ಸತತವಾಗಿ ದುಡಿಸಿಕೊಂಡು ಚಿತ್ರಕಲೆಯ ಜೊತೆಗೆ ಇನ್ನಿತರ ಕೆಲಸಗಳನ್ನು ನಿರ್ವಹಿಸಿಕೊಂಡು ಅವರಿಗೆ ಆ ಕೆಲಸಕ್ಕೆ ತಕ್ಕಂತಹ ವೇತನವನ್ನು ನೀಡಿದರೆ ಸೂಕ್ತ. ಆದರೆ ಚಿತ್ರಕಲಾ ಶಿಕ್ಷಕರಿಗೆ ವೇತನ ಕಡಿಮೆ ನೀಡುವುದನ್ನು ನಾವು ನೋಡಬಹುದು. ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಖಾಸಗಿ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರನ್ನು ಪೂರ್ಣಕಾಲಿಕವಾಗಿ ನೇಮಿಸುತ್ತಿಲ್ಲ. ಕೆಲವು ಶಾಲೆಗಳಲ್ಲಿ ವಾರದಲ್ಲಿ ಮೂರು ದಿನ ಮಾತ್ರ ಅವರನ್ನು ಸೇವೆಗೆ ಕರೆದುಕೊಳ್ಳುತ್ತಾರೆ. ಇದರಿಂದ ಇವರು ನೀಡುವ ಕಡಿಮೆ ವೇತನವನ್ನು ತೆಗೆದುಕೊಂಡು ಬದುಕಬೇಕಾಗುವುದು. ಅದೇ ರೀತಿ ಸರ್ಕಾರದ ಕಡೆಯಿಂದ ಹಲವಾರು ನೀತಿ ನಿಯಮಗಳನ್ನು ಹೊರತರುತ್ತಾರೆ. ಇದನ್ನು ಶಿಕ್ಷಕರು ನಿಯಮ ಬದ್ಧವಾಗಿ ಪಾಲಿಸಬೇಕಾಗುತ್ತದೆ.

ಚಿತ್ರಕಲಾ ವಿಷಯವನ್ನು ಕಡ್ಡಾಯವಾಗಿ ಕಲಿಕಾ ಮತ್ತು ಪರೀಕ್ಷಾ ವಿಷಯ ಮಾಡದಿರುವಿಕೆ ಚಿತ್ರಕಲಾ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಪ್ರೌಢಶಾಲಾ ಉಳಿದ ಎಲ್ಲಾ ವಿಷಯಗಳಂತೆ ಚಿತ್ರಕಲಾ ವಿಷಯವನ್ನು ಸಹಿತ ಕಡ್ಡಾಯವಾಗಿ ಮಾಡಬೇಕು. ಇದರಿಂದ ಚಿತ್ರಕಲಾ ಶಿಕ್ಷಕರಿಗೆ ಅವರ ಜವಾಬ್ದಾರಿ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೂ ಸಹ ಉತ್ತಮ ರೀತಿಯಲ್ಲಿ ಬೋಧನೆಯನ್ನು ಮಾಡುತ್ತಾರೆ. ನಂತರ ಎಲ್ಲಾ ವಿಷಯಗಳಂತೆ ಚಿತ್ರಕಲಾ ವಿಷಯವನ್ನು ಸಹ ಪರೀಕ್ಷಾ ವಿಷಯವನ್ನಾಗಿ ಮಾಡದಿರುವುದು. ಶಿಕ್ಷಕರಿಗೆ ಬೋಧನೆ ಮಾಡುವುದಕ್ಕೂ ಅವರಿಗೆ ಸಮಾಧಾನವಿರುವುದಿಲ್ಲ. ಈ ರೀತಿಯಾದಂತಹ ತೊಂದರೆಗಳು ಎದುರಿಸುತ್ತಿದ್ದಾರೆ.

ಚಿತ್ರಕಲಾ ಶಿಕ್ಷಕರಿಗೆ ಕೆಲಸದ ವೇಳೆಯಲ್ಲಿ ಆಡಳಿತ ಮಂಡಳಿಯವರು ಅನಗತ್ಯವಾದಂತಹ ಕೆಲಸಗಳನ್ನು ಹೇಳುವುದು, ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಸುವುದು. ಶಾಲೆಯ ಆಡಳಿತಾತ್ಮಕ ಕೆಲಸವನ್ನು ಹೇಳುವುದು, ಚಿತ್ರಕಲಾ ವಿಷಯವನ್ನು ಬೋಧನೆ ಮಾಡಲು ಪ್ರಾರಂಭಿಸಿದಾಗ ಬೇರೆ ವಿಷಯಕ್ಕೆ ಸಂಬಂಧಿಸಿದಂತೆ ಶಿಕ್ಷಕರುಗಳಿಗೆ ಆ ತರಗತಿಯನ್ನು ಬಿಟ್ಟು ಕೊಡು ಎಂದು ಹೇಳುವುದು. ಈ ರೀತಿಯಾದ ಅನಗತ್ಯವಾದ ತೊಂದರೆಗಳನ್ನು ಶಾಸಗಿ ಆಡಳಿತ ಮಂಡಳಿಯವರು ಮತ್ತು ಮುಖ್ಯಸ್ಥರು ಚಿತ್ರಕಲಾ ಶಿಕ್ಷಕರಿಗೆ ಕೊಡುವುದನ್ನು ನೋಡುತ್ತೇವೆ. ಈ ರೀತಿಯ ವಾತಾವರಣದಿಂದಾಗಿ ಆಸಕ್ತಿ ಇರುವ ವಿದ್ಯಾರ್ಥಿಗಳಲ್ಲಿ ಮತ್ತು ಪೋಷಕರಲ್ಲಿ ಚಿತ್ರಕಲೆಗೆ ಇರುವ ಮೌಲ್ಯ ಶೂನ್ಯವಾದಂತಾಗುತ್ತದೆ.

ಸಂಸ್ಥೆಯ ಮುಖ್ಯಸ್ಥರು ಕಲಾಶಿಕ್ಷಕರಿಗೆ ತೋರುವಂತಹ ತಾರತಮ್ಯ ಧೋರಣೆ ಚಿತ್ರಕಲಾ ಶಿಕ್ಷಕರು ತಮ್ಮ ಕೆಲಸವನ್ನು ತಾವು ಮಾಡಿಕೊಂಡು ಹೋಗುತ್ತಿದ್ದರೂ ಕೂಡ ಇತರೆ ಭಾಷಾ ವಿಷಯದ ಶಿಕ್ಷಕರುಗಳಿಗೆ ನೀಡುವಂತಹ ಮನ್ನಣೆಯನ್ನು ಚಿತ್ರಕಲಾ ಶಿಕ್ಷಕರಿಗೆ ನೀಡದೆ ಇರುವುದು. ಚಿತ್ರಕಲಾ ವಿಷಯ ಪರೀಕ್ಷೆಗೆ ಇಲ್ಲ ಎಂಬ ಕಾರಣದಿಂದ ಆ ಚಿತ್ರಕಲಾ ಶಿಕ್ಷಕರು ಏನನ್ನು ಕಲಿಸುತ್ತಾರೆ? ಅದರ ಉಪಯೋಗವೇನು? ಸುಮ್ಮನೆ ಬಂದು ಗೆರೆಗಳನ್ನು ಹಾಕಿ ಹೋಗುತ್ತಾರೆ. ಈ ರೀತಿಯಾಗಿ ಅವಹೇಳನ ಮಾಡುವಂತಹ ಪ್ರಸಂಗಗಳು ಸಾಮಾನ್ಯವಾಗಿ ನೋಡುತ್ತೇವೆ.

ಶಿಕ್ಷಕರ ವೈಯಕ್ತಿಕ ಸಮಸ್ಯೆಗಳು

ಶಿಕ್ಷಕರ ಮನೆಯಿಂದ ಶಾಲೆಯು ಸಮೀಪದಲ್ಲಿರಬೇಕು. ಕೆಲವೊಂದು ಗ್ರಾಮೀಣ ಪ್ರದೇಶಗಳಲ್ಲಿ ಬಸ್ಸಿನ ಸೌಕರ್ಯ ಮತ್ತು ಅಲ್ಲಿಯೇ ವಸತಿಯನ್ನು ಮಾಡಲು ಮನೆಯ ಸೌಕರ್ಯಗಳು ಇಲ್ಲದೆ ಇರುವಂತಹ ಸಂದರ್ಭದಲ್ಲಿ ಆ ಶಿಕ್ಷಕರು ಶಾಲೆಗೆ ಹೋಗುವುದಾದರೂ ಹೇಗೆ, ಇದರಿಂದ ಅನೇಕ ಶಿಕ್ಷಕರು ಸರಿಯಾದ ಸಮಯಕ್ಕೆ ಶಾಲೆಗೆ ಹೋಗದಿರುವುದನ್ನು ಕಾಣುತ್ತೇವೆ.

ಚಿತ್ರಕಲೆಗೆ ಸಂಬಂಧಿಸಿದಂತೆ ಪರಿಕರಗಳು ಸಾಮಾನ್ಯವಾಗಿ ಹಳ್ಳಿಯಲ್ಲಿ ಸಿಗುವುದಿಲ್ಲ. ಇಲ್ಲಿ ಯಾವುದೇ ಕಲಿಸುವಿಕೆಗೆ ಸಂಬಂಧಿಸಿದಂತೆ ಅದು ಚಿತ್ರಕಲಾ ವಿಷಯಕ್ಕೆ ಸಂಬಂಧಿಸಿದಂತಹ ಸಾಮಗ್ರಿಗಳೇ ಇಲ್ಲವೆಂದಾಗ ಶಿಕ್ಷಕರು ವಿದ್ಯಾರ್ಥಿಗಳಿಗೆ ಕಲಿಸುವುದಾದರೂ ಹೇಗೆ ಮತ್ತು ಏನೆಂಬುದು ತಿಳಿಯುವುದಿಲ್ಲ.

ಇಚ್ಛಾಶಕ್ತಿಯ ಕೊರತೆ ಹಾಗೂ ವೃತ್ತಿಯ ಬಗ್ಗೆ ಕೀಳರಿಮೆ:- ಯಾವುದೇ ವಿಷಯದ ಶಿಕ್ಷಕರಾಗಲಿ ಮೊದಲು ವಿದ್ಯಾರ್ಥಿಗಳಿಗೆ ಕಲಿಸುವಂತಹ ಇಚ್ಛಾಶಕ್ತಿ ಇರಬೇಕು. ಬೋಧನೆ ಮಾಡುವಂತಹ ಸಮಯದಲ್ಲಿ ಮತ್ಯಾವುದೇ ರೀತಿ ಆಲೋಚನೆಗಳನ್ನು ಮಾಡದೇ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅವರು ತಮ್ಮ ಶಕ್ತಿಯನ್ನು ಮೀರಿ ಕಲಿಸಬೇಕಾಗುವುದು. ತಾವು ಮಾಡುವಂತಹ ಕೆಲಸದ ಬಗ್ಗೆ ನಿರ್ಲಕ್ಷ್ಯತನ ಮಾಡಬಾರದು. ಈ ರೀತಿಯಾಗಿ ಬೋಧನೆ ಮಾಡಿದರೆ ಶಿಕ್ಷಕರು ಮಾಡುವಂತಹ ಅಥವಾ ಹೇಳುವಂತಹ ವಿಷಯ ವಿದ್ಯಾರ್ಥಿಗಳಿಗೂ ತಲುಪಿ ಸಾರ್ಥಕವೆನಿಸುತ್ತದೆ.

ಹೆಚ್ಚಿನ ಶೈಕ್ಷಣಿಕ ಜ್ಞಾನದ ಕೊರತೆ ಶಿಕ್ಷಕರಲ್ಲಿ ಕಂಡುಬರುತ್ತದೆ. ತಮ್ಮ ಚಿತ್ರಕಲಾ ವಿಷಯವನ್ನು ಹೇಳುವುದಕ್ಕೆ ಮಾತ್ರ ಸೀಮಿತವಾಗಿರದೇ ಆಧುನಿಕ ಸಂದರ್ಭದಲ್ಲಿ ಕಲೆಗೆ ಸಂಬಂಧಿಸಿದ ಇನ್ನೂ ಹಲವಾರು ವಿಷಯಗಳ ಬಗ್ಗೆ ಅರಿತಿರಬೇಕಾಗಿರುತ್ತದೆ. ಇಂತಹ ವಿಷಯಗಳನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿದಾಗ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಾಹಿತಿ ತಿಳಿಯುತ್ತದೆ.

ನಗರ ಪ್ರದೇಶದ ಶಾಲೆಗಳಲ್ಲಿ ಅತಿಯಾದ ಕೆಲಸದೊತ್ತಡ ಮತ್ತು ಬೇಸರ:- ಒಂದು ಶಾಲೆಯೆಂದರೆ ಅದರ ವಾತಾವರಣ ನಿಶ್ಯಬ್ದದಿಂದ ಕೂಡಿರಬೇಕಾಗುತ್ತದೆ. ನಗರ ಪ್ರದೇಶದಲ್ಲಿ ಇಂತಹ ವಾತಾವರಣವಿರುವುದು ಕಡಿಮೆ. ಇಲ್ಲಿನ ಶಿಕ್ಷಕರಿಗೆ ಶಾಲೆಯಾಗಲಿ, ಆಡಳಿತ ವಿಷಯಕ್ಕೆ ಸಂಬಂಧಿಸಿದ್ದಾಗಲಿ ಅಥವಾ ವಿದ್ಯಾರ್ಥಿಗಳಿಗೆ ಸಂಬಂಧಿಸಿದ್ದಂತಾಗಲಿ ಹಲವಾರು ರೀತಿಯ ಕೆಲಸಗಳನ್ನು ಶಿಕ್ಷಕರು ಮಾಡಬೇಕಾಗುತ್ತದೆ. ಈ ರೀತಿಯಾದ ಹಲವಾರು ತೊಂದರೆಗಳಿದ್ದರೆ ಮನಸ್ಸಿಗೆ ಬೇಸರವಾಗಿ ವೃತ್ತಿಯ ಬಗ್ಗೆ ಅವರಿಗೆ ಗೌರವ ಭಾವನೆ ಹೊರಟು ಹೋಗಿ ಜಿಗುಪ್ಸೆ ಮೂಡುತ್ತದೆ.

೪.೨. ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿಯ ಶೈಕ್ಷಣಿಕ ಸಮಸ್ಯೆಗಳು

"ನಮ್ಮ ವಿಶ್ವವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳೆಂದು ಮತ್ತೆ ಮತ್ತೆ ಹೇಳಲಾಗುತ್ತಿದೆ. ಆದರೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ ೧೯೭೬ರ ಪ್ರಕಾರ ಯಾವುದೇ ಒಂದು ಕಾಲೇಜನ್ನು ಪ್ರಾರಂಭಿಸುವ ಅಥವಾ ಅದಕ್ಕೆ ಮಾನ್ಯತೆ ನೀಡುವ ಹಕ್ಕು ಅಂತಿಮವಾಗಿ ಸರ್ಕಾರಕ್ಕೆ ಸೇರಿದೆ. ವಿಶ್ವವಿದ್ಯಾಲಯಗಳು ಕೇಳದೆಯೇ ಸರ್ಕಾರ ಕಾಲೇಜುಗಳಿಗೆ ಅನುಮತಿ ನೀಡಿರುವುದನ್ನು ಕಾಣುತ್ತೇವೆ. ನಮ್ಮ ವಿಶ್ವವಿದ್ಯಾಲಯಗಳು ಇದರ ವಿರುದ್ಧ ಸೊಲ್ಲೆತ್ತುವ ಗೋಜಿಗೆ ಹೋಗಿಲ್ಲದಿರುವುದು ವಿಪರ್ಯಾಸದ ಸಂಗತಿಯಾಗಿದೆ."[೧೧]

ಇಂದು ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಮುಗಿಸಿಕೊಂಡು ಉದ್ಯೋಗ ಹುಡುಕುವ ಕಾಲವಲ್ಲ. ಇಂದು ವಿಶ್ವವಿದ್ಯಾಲಯದಲ್ಲಿ ನೀಡುವಂತಹ ಶಿಕ್ಷಣಕ್ಕೆ ಹೆಚ್ಚು ಬೇಡಿಕೆ ಇರುವುದನ್ನು ನಾವು ನೋಡುತ್ತೇವೆ. ಎರಡೆರಡು ಪದವಿಗಳನ್ನು, ಸ್ನಾತಕೋತ್ತರ ಪದವಿಗಳನ್ನು ಹಾಗೂ ಡಾಕ್ಟರೇಟ್ ಪದವಿಗಳನ್ನು ಪಡೆದುಕೊಂಡು ಕೆಲಸಕ್ಕಾಗಿ ಅಲೆದಾಡುವುದನ್ನು ನೋಡುತ್ತೇವೆ.

ವಿಶ್ವವಿದ್ಯಾಲಯ ಮತ್ತು ಅದರ ಅಡಿಯಲ್ಲಿ ನಡೆಯುತ್ತಿರುವಂತಹ ಅನೇಕ ಕಾಲೇಜುಗಳಲ್ಲಿ ಪ್ರತಿವರ್ಷಕ್ಕೆ ನೂರಾರು ಜನ ಪದವಿ ಪಡೆದುಕೊಂಡು ಹೊರಹೋಗುತ್ತಿದ್ದಾರೆ. ಇವರಲ್ಲಿ ಬೆರಳೆಣಿಕೆಯಷ್ಟು ಜನರಿಗೆ ಸರಕಾರಿ ನೌಕರಿ ಸಿಕ್ಕಿದರೆ ಇನ್ನುಳಿದಂತೆ ನಿರುದ್ಯೋಗಿ ವಿದ್ಯಾವಂತರೆಂಬ ಹೆಸರನ್ನು ಕರೆಸಿಕೊಂಡು ತಮ್ಮ ಬದುಕನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದಾರೆ. ಖಾಲಿ ಯಾಗುವಂತಹ ಹುದ್ದೆಗಳು ಮತ್ತು ಹೊಸದಾಗಿ ಸೃಷ್ಟಿಯಾಗಲಿರುವಂತಹ ಉದ್ಯೋಗಗಳ ಬಗ್ಗೆ ದೃಷ್ಟಿಕೋನ ನಮ್ಮಲ್ಲಿಲ್ಲ.

ಪ್ರಸ್ತುತ ಸಂದರ್ಭದಲ್ಲಿ ಉನ್ನತ ಶಿಕ್ಷಣವನ್ನು ನೋಡುವಂತಹ ನೋಟ ಇಂದು ಕಷ್ಟ ಸಾಧ್ಯವಾಗಿದೆ. ಶತಮಾನಗಳಿಂದ ನಮ್ಮ ಸಮಾಜದಲ್ಲಿ ಹಲವು ವರ್ಗಗಳು ಶಿಕ್ಷಣಕ್ಕೆ ಸಂಬಂಧಿಸಿದ ಅವಕಾಶಗಳನ್ನು ಬಳಸಿಕೊಂಡಿಲ್ಲವಾದರೂ ಆ ವರ್ಗಗಳ ಜನರಲ್ಲಿ ನವ್ಯತೆಯನ್ನು ಮೂಡಿಸುತ್ತದೆ. ಸಾಮಾಜಿಕವಾಗಿ ಎಲ್ಲಾ ರೀತಿಯಲ್ಲೂ ಮೇಲೇರಬೇಕೆಂಬ ಹಂಬಲ ಸಹಜವಾಗಿ ಎಲ್ಲರಲ್ಲಿಯೂ ಮೂಡುತ್ತಿದೆ. ಈ ರೀತಿಯಾಗಿ ಉನ್ನತ ಶಿಕ್ಷಣಕ್ಕೆ ವಿಶೇಷವಾದಂತಹ ಬೇಡಿಕೆ ಇದೆ.

ಉನ್ನತ ಶಿಕ್ಷಣದ ಗುರಿಗಳ ಬಗ್ಗೆ ಹೇಳುವುದಾದರೆ:- ಎರಡು ರೀತಿಯಾದಂತಹ ಅಭಿಪ್ರಾಯಗಳು ಮೂಡಿರುವುದನ್ನು ಕಾಣಬಹುದು. ಒಂದು ಪದವಿಯನ್ನು ಪಡೆದರೆ ಕೆಲಸ ಸಿಗುತ್ತದೆಂದು, ಮತ್ತೊಂದು ಪದವಿಯಿಂದ ಜ್ಞಾನ, ಪಾಂಡಿತ್ಯ ಮೋಹ ಇಲ್ಲಿ ಮುಖ್ಯವಾದುದ್ದಾಗಿದೆ. ಈ ಮೇಲಿನ ಎರಡೂ ಅಂಶಗಳಿಂದಲೂ ಸಹ ನಮ್ಮ ಉನ್ನತ ಶಿಕ್ಷಣ ಕ್ಷೇತ್ರ ತನ್ನ ಜವಾಬ್ದಾರಿಯನ್ನು ಕಳೆದುಕೊಂಡಿದೆ. ನಾವು ಪಡೆದುಕೊಂಡಂತಹ ಈ ಪದವಿ ಶಿಕ್ಷಣ ನಮ್ಮ ಯುವ ಜನಾಂಗದವರನ್ನು ಕನಿಷ್ಠ ಗುಮಾಸ್ತಗಿರಿಗೂ ಸಜ್ಜುಗೊಳಿಸುವುದಿಲ್ಲ. ಅವರು ಪಡೆದುಕೊಂಡಿರುವಂತಹ ಅಥವಾ ಕಲಿತಿರುವಂತಹ ವಿದ್ಯೆ ಅವರಲ್ಲಿ ಸ್ವಾವಲಂಬಿತ್ವವನ್ನು ಬೆಳೆಸುವುದಿಲ್ಲ. ಉದ್ಯೋಗವನ್ನು ಒದಗಿಸುವುದಿಲ್ಲ. ಜೀವನ ನಿರ್ವಹಣೆಯ ಶ್ರೇಷ್ಠ ಕ್ರಮವನ್ನೂ ಬೆಳೆಸುವುದಿಲ್ಲ. ಈ ರೀತಿಯಲ್ಲಿ ಅನೇಕ ಪದವೀಧರರು ಇದ್ದರೂ ಒಂದು ಸಮಾಜವು ಏನನ್ನು ತಾನೇ ನಿರೀಕ್ಷಿಸಲು ಸಾಧ್ಯ.

ವಿಶ್ವವಿದ್ಯಾಲಯದ ಮಟ್ಟದಲ್ಲಿ ಸಾಮಾನ್ಯರಿಗೆ, ಕಡುಬಡವರಿಗೆ ಕಡಿಮೆ ಶುಲ್ಕದಲ್ಲಿ ಓದಲು ಅವಕಾಶಗಳು ಸಿಗುತ್ತವೆ. ಈ ಕಾರಣದಿಂದಾಗಿ ಮಧ್ಯಮ ಹಾಗೂ ಕೆಳಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವು ದೊರಕಿದಂತಾಗಿದೆ. ಆದರೆ ಉಳಿದೆಲ್ಲ ಪದವಿಗಳನ್ನು ಹೋಲಿಸಿಕೊಂಡರೆ ವಿಶ್ವವಿದ್ಯಾಲಯಗಳಲ್ಲಿ ದೃಶ್ಯಕಲಾ ಪದವಿಗಳು ಹಾಗೂ ಸ್ನಾತಕೋತ್ತರ ಪದವಿಗಳನ್ನು ಪಡೆದುಕೊಳ್ಳುವವರ ಸಂಖ್ಯೆ ವಿರಳ. ಯಾಕೆಂದರೆ ನಮ್ಮ ಕ್ಷೇತ್ರದಲ್ಲಿ ಮಾರ್ಗದರ್ಶಕರ ಕೊರತೆಯಿಂದಾಗಿ ಕರ್ನಾಟಕದಲ್ಲಿ ಅನೇಕ ಕಲಾವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಯನ್ನು ಪಡೆದುಕೊಳ್ಳುವಂತಹ ಆಸೆಯನ್ನಿಟ್ಟುಕೊಂಡಿದ್ದರೂ ವಂಚಿತರಾಗಿದ್ದಾರೆ.

ನಮ್ಮ ರಾಜ್ಯದಲ್ಲಿ ಕಲಾಶಿಕ್ಷಣ ಮುಂದುವರೆಯಬೇಕು, ಬೆಳವಣಿಗೆ ಆಗಬೇಕಾದರೆ ಈ ಕೆಳಗಿನ ಸೂಚನೆಗಳನ್ನು ನೆರವೇರಿಸಬೇಕಾಗುತ್ತದೆ. ರಾಜ್ಯದ ಕಲಾ ಶಿಕ್ಷಣದಲ್ಲಿ ಚಿತ್ರಕಲೆಯನ್ನು ಸರ್ವತೋಮುಖವಾಗಿ ನಡೆಯಬೇಕಾದರೆ ಕಲಾಶಿಕ್ಷಣ ಮತ್ತು ಚಿತ್ರಕಲೆಯ ಬಗ್ಗೆ ಆಸಕ್ತಿ ಇರುವಂತಹ ಸಾಧಕ ವ್ಯಕ್ತಿಯನ್ನು ಜವಾಬ್ದಾರಿಯುತ ಸ್ಥಾನಗಳಲ್ಲಿ ನೇಮಿಸುವುದು.

ರಾಜ್ಯದಲ್ಲಿ ನಡೆಯುವಂತಹ ಕಲಾಪರೀಕ್ಷೆ ಮತ್ತು ಉಚ್ಚ ಕಲಾ ಪರೀಕ್ಷೆಗಳ ಮೌಲ್ಯ ಮಾಪನವನ್ನು ಮಾಡಲು ಯೋಗ್ಯರಾದ, ದಕ್ಷ ಆಡಳಿತ ನಿರ್ವಹಿಸುವಂತಹ, ಪರಿಣಿತರಾದ ಪರೀಕ್ಷಕರನ್ನು ಆರಿಸಲು ಕಲಾತಜ್ಞರ ಸಮಿತಿಯನ್ನು ನೇಮಿಸುವಂತೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ಸರಕಾರವು ಆದೇಶ ನೀಡುವುದು ಇವೆಲ್ಲ ಆಗಬೇಕಿದೆ.

ಚಿತ್ರಕಲಾ ಡಿಪ್ಲೊಮಾ ವಿದ್ಯಾರ್ಥಿಗಳ ಸಮಸ್ಯೆಗಳು

ಈ ಕೋರ್ಸ್‌ನ್ನು ಎಸ್.ಎಸ್.ಎಲ್.ಸಿ. ಮುಗಿದ ಮೇಲೆ ಎರಡು ವರ್ಷ ಫೌಂಡೇಶನ್ ಹಾಗೂ ಮೂರು ವರ್ಷ ಡಿಪ್ಲೊಮಾ ತರಗತಿಗಳು ೨೦೦೧ರಿಂದ ಜಾರಿಗೆ ತಂದಿತು. ಕಡ್ಡಾಯವಾಗಿ ಹೊಸ ಪಠ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕೆಂದು ಸರ್ಕಾರ ಆದೇಶ ಮಾಡಿತು. ಈ ರೀತಿ ಸರ್ಕಾರ ಆದೇಶಿಸಿದರೂ ಕೂಡ ಎಸ್.ಎಸ್.ಎಲ್.ಸಿ. ಆದ ನಂತರ ಐದು ವರ್ಷದ ಚಿತ್ರಕಲೆಯನ್ನು ಕಲಿತರೂ ಪದವಿಯೆಂದು ಪರಿಗಣಿಸಲಾಗುತ್ತಿಲ್ಲ. ಮತ್ತೊಂದು ಕಡೆ ವೃಂದ ಮತ್ತು ನೇಮಕಾತಿಯೊಳಗೆ ಸೇರಿಸದೇ ಇರುವ ಕಾರಣದಿಂದಾಗಿ ಈ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಅಲ್ಲದೆ ಸರ್ಕಾರವು ಕೆಲವು ವರ್ಷಗಳ ನಂತರದಲ್ಲೀ ಈ ಕೋರ್ಸ್‌ನ್ನು ಬದಲಾಯಿಸಿತು. ಆದರೆ ಇಲ್ಲಿ ಕಲಿತಂತಹ ಅನೇಕ ವಿದ್ಯಾರ್ಥಿಗಳ ಭವಿಷ್ಯವೇನು? ವಿದ್ಯಾರ್ಥಿಗಳು ತಮ್ಮ ಅಳಲನ್ನು ಯಾರಿಗೆ ಹೇಳುವುದು? ಪ್ರಾಥಮಿಕ ಅಥವಾ ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರ ಹುದ್ದೆಗೆ ಕೇಳುವಂತಹ ವಿದ್ಯಾರ್ಹತೆ ಡಿ.ಎಂ.ಸಿ., ಎ.ಎಂ., ಜಿ.ಡಿ., ಈ ಕೋರ್ಸ್‌ಗಳನ್ನು ಮಾಡಿದರೆ ಮಾತ್ರ ಅವಕಾಶ ಕೊಡುವುದಾಗಿ ಹೇಳುತ್ತಾರೆ.

ಡಿಪ್ಲೊಮಾ ಚಿತ್ರಕಲೆ ಮುಗಿಸಲು ವಿಶ್ವವಿದ್ಯಾಲಯದಿಂದ ಕಿರುಪ್ರಬಂಧ ರಚನೆ ಮಾಡಲು ಹೇಳುತ್ತಾರೆ. ಆದರೆ ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಬಹಳ ಸಮಸ್ಯೆಗಳನ್ನು ಎದುರಿಸ ಬೇಕಾಗುತ್ತದೆ. ಸಾಮಾನ್ಯವಾಗಿ ರಾಜ್ಯದಲ್ಲಿರುವ ಕೆಲವೊಂದು ನಗರ ಪ್ರದೇಶದ ಕಲಾಶಾಲೆಗಳನ್ನು ಬಿಟ್ಟು ಉಳಿದೆಲ್ಲ ಕಲಾಶಾಲೆಗಳಿಗೆ ಬರುತ್ತಿರುವವರು ಸಾಮಾನ್ಯವಾಗಿ ಬಡ ಕುಟುಂಬದ ವಿದ್ಯಾರ್ಥಿಗಳು. ಇವರಿಗೆ ಆರ್ಥಿಕ ತೊಂದರೆಗಳು ಹೆಚ್ಚು, ಈ ನಿಟ್ಟಿನಲ್ಲಿ ಅವರು ಪ್ರಾಯೋಗಿಕವಾಗಿ ಕಲಾಕೃತಿಗಳನ್ನು ರಚನೆ ಮಾಡಲು ಬಣ್ಣ, ಕುಂಚ, ಪೇಪರ್, ಕ್ಯಾನ್ವಾಸ್‌ಗಳನ್ನು ತೆಗೆದುಕೊಂಡು ಕಲಾಕೃತಿ ರಚನೆ ಮಾಡಲು ಆರ್ಥಿಕ ಸಂಕಷ್ಟ ಎದುರಿಸುತ್ತಿರುತ್ತಾರೆ. ಅಂದ ಮೇಲೆ ಕಿರುಪ್ರಬಂಧ ರಚನೆ ಮಾಡಲು ವಿಷಯದ ಆಯ್ಕೆ ಅದಕ್ಕೆ ಬೇಕಾಗುವಂತಹ ಪೂರಕ ಉಪಕರಣಗಳಾದ ಕ್ಯಾಮರಾ ಸಲಕರಣೆಗಳನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಸಮಸ್ಯೆಯಾಗುತ್ತಿರುವಾಗ ಪ್ರಬಂಧ ರಚನೆ ಸಂದರ್ಭದಲ್ಲಿ, ಪ್ರಬಂಧ ರಚನೆಯ ಹಂತಗಳ ಬಗ್ಗೆ ಮೊದಲೇ ವಿದ್ಯಾರ್ಥಿಗಳಿಗೆ ತಿಳಿಸಬೇಕಾಗುತ್ತದೆ. ಆದರೆ ಇಂತಹ ಕೆಲಸ ಯಾವ ಕಲಾಶಾಲೆಯಲ್ಲಿಯೂ ಕಲಿಸುತ್ತಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ತಾನೇ ಪ್ರಬಂಧ ರಚನೆಯನ್ನು ಹೇಗೆ ಮಾಡುತ್ತಾರೆ? ಎಂಬ ಹಲವು ಪ್ರಶ್ನೆಗಳು ಉದ್ಭವವಾಗುತ್ತವೆ.

ಕಲಾ ಶಾಲೆಯ ಉಪನ್ಯಾಸಕರುಗಳ ಒಳಜಗಳಗಳಿಂದ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಕೊಡುವುದರಲ್ಲಿ ವಿದ್ಯಾರ್ಥಿಗಳಿಗೆ ಪೆಟ್ಟು ಬೀಳುತ್ತಿರುವುದನ್ನು ಕಾಣಬಹುದು ಮತ್ತು ವಿದ್ಯಾರ್ಥಿಗಳು, ಉಪನ್ಯಾಸಕರು ಹೇಳಿದಂತಹ ಕೆಲಸಗಳನ್ನು ಮಾಡಬೇಕಾಗುತ್ತದೆ. ಒಂದುವೇಳೆ ಅವರು ಹೇಳಿದ ಕೆಲಸವನ್ನು ಮಾಡದೇ ಇದ್ದರೆ ಆಂತರಿಕ ಅಂಕಗಳನ್ನು ಕಡಿಮೆ ಮಾಡುವಂತಹ ಕೀಳುಮಟ್ಟದ ಉಪನ್ಯಾಸಕರೂ ಇರುವುದನ್ನು ಕಾಣುತ್ತೇವೆ.

ಪ್ರಸ್ತುತ ಸಂದರ್ಭದಲ್ಲಿ ಈ ವಿಶೇಷ ಪರಿಣಿತ ಡಿಪ್ಲೋಮಾ ಚಿತ್ರಕಲೆಯ ಕೋರ್ಸ್‌ನ್ನು ಹಂತ ಹಂತವಾಗಿ ೨೦೦೯ರಿಂದಲೇ ಬದಲಾವಣೆ ಮಾಡಿಕೊಳ್ಳಲು ಸರ್ಕಾರವೇ ಹೇಳಿರುತ್ತದೆ. ಆದರೆ ಕರ್ನಾಟಕದ ಹಲವು ಚಿತ್ರಕಲಾ ಕಾಲೇಜುಗಳಲ್ಲಿ ಇಂದಿಗೂ ಸಹ ಅದೇ ಕೋರ್ಸ್‌ಗಳನ್ನು ನಡೆಸುತ್ತಿರುವುದನ್ನು ಕಾಣುತ್ತೇವೆ.

ಫೌಂಡೇಶನ್ ಎರಡು ವರ್ಷ ಮತ್ತು ವಿಶೇಷ ಪರಿಣಿತಿ ಮೂರು ವರ್ಷ ಒಟ್ಟು ಐದು ವರ್ಷ ಶಿಕ್ಷಣವನ್ನು ಪಡೆದರೂ ಸಹ ಉನ್ನತ ಶಿಕ್ಷಣವನ್ನು ಪಡೆಯಲು ಈ ವಿದ್ಯಾರ್ಥಿಗಳಿಗೆ ಅವಕಾಶವಿಲ್ಲದಿರುವುದು ಹಾಗೂ ಒಂದು ವರ್ಷದ ಬಿ.ವಿ.ಎ. ಬ್ರಿಡ್ಜ್ ಕೋರ್ಸ್ ಪಡೆದುಕೊಂಡ ಮೇಲೆ ಉನ್ನತ ಶಿಕ್ಷಣವನ್ನು ಪಡೆಯಲು ಅವಕಾಶವಿರುತ್ತದೆ. ಆದರೆ ಒಟ್ಟು ಆರು ವರ್ಷಗಳು ಕಲಿತರೂ ಈ ವಿದ್ಯಾರ್ಥಿಗಳಿಗೆ ಪದವಿ ಎಂದು ಪರಿಗಣಿಸುವುದಿಲ್ಲ. ಆದರೆ ಫೌಂಡೇಶನ್ ಎರಡು ಹಾಗೂ ಬಿ.ವಿ.ಎ. ಮೂರು ವರ್ಷ ಒಟ್ಟು ಐದು ವರ್ಷಗಳಾದರೆ ಪದವಿಯೆಂದು ಪ್ರಮಾಣ ಪತ್ರವನ್ನು ನೀಡುತ್ತಿದ್ದಾರೆ. ಇದರಿಂದಾಗಿ ವಿಶೇಷ ಪರಿಣಿತಿ ಡಿಪ್ಲೊಮಾ ಈ ಶಿಕ್ಷಣವನ್ನು ಕಲಿತವರಿಗೆ ಉಪಯೋಗವಿಲ್ಲದಂತಾಗಿದೆ.

ಚಿತ್ರಕಲಾ ಪದವಿ ವಿದ್ಯಾರ್ಥಿಗಳ ಸಮಸ್ಯೆಗಳು

ಸೆಮಿಸ್ಟರ್ ಪದ್ಧತಿಯಿಂದ ತರಗತಿಗಳು ನಡೆಯುವುದರಿಂದ ಚಿತ್ರಕಲಾ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಿದೆ: ಚಿತ್ರಕಲೆಗೆ ಹೆಚ್ಚಿನ ಸಮಯ ಬೇಕಾಗುತ್ತದೆ. ಸೆಮಿಸ್ಟರ್ ಪದ್ಧತಿಯಿಂದ ಭಾಷಾ ವಿಷಯಗಳಿಗೆ ಸಂಬಂಧಿಸಿದಂತಹ ವಿಷಯಗಳಿಗೆ ಸರಿ. ಆದರೆ ಸೆಮಿಸ್ಟರ್ ಪದ್ಧತಿ ಪ್ರಾರಂಭವಾಗುವುದರಿಂದ ವಿದ್ಯಾರ್ಥಿಗಳ ದಾಖಲಾತಿಗೆ ಸಂಬಂಧಪಟ್ಟ ಹಾಗೆ ಪ್ರವೇಶ ಪರೀಕ್ಷೆ, ಫಲಿತಾಂಶದ ಬಗ್ಗೆ ತಿಳಿಯಲು ಸುಮಾರು ಒಂದು ತಿಂಗಳು ಕಾಲ ಸಮಯ ಹೋಗುತ್ತದೆ. ನಂತರ ಶಾಲೆ ಪ್ರಾರಂಭವಾಗುವುದಕ್ಕೆ ಐದರಿಂದ ಹತ್ತು ದಿನಗಳ ಕಾಲ ಸಮಯ ಹೋಗುತ್ತದೆ. ಇದಾದ ನಂತರದ ಸರ್ಕಾರದ ರಜೆಗಳು ಇವೆಲ್ಲ ಮುಗಿಯುವುದರೊಳಗೆ ಆರು ತಿಂಗಳು ಕಳೆಯುತ್ತದೆ. ವಿದ್ಯಾರ್ಥಿಗಳು ಕಲಾಕೃತಿ ರಚನೆ ಮಾಡುವುದು ಯಾವಾಗ? ಉಪನ್ಯಾಸಕರು ಬೋಧನೆ ಮಾಡುವುದು ಯಾವಾಗ? ಪಾಠಗಳನ್ನು ಹೀಗೊ ಹಾಗೋ ಕಷ್ಟಪಟ್ಟು ಬೋಧಿಸಿ ನಿಗದಿತ ಸಮಯದೊಳಗೆ ಮುಗಿಸುತ್ತಾರೆ. ವಿದ್ಯಾರ್ಥಿಗಳು ಅದನ್ನು ಓದುವುದು ಯಾವಾಗ? ಅಷ್ಟರೊಳಗೆ ಫೈಲ್ ಚೆಕ್ ಬರುತ್ತದೆ. ಆಗ ವಿದ್ಯಾರ್ಥಿಗಳು ಕಲಾಕೃತಿ ರಚನೆ ಮಾಡುವುದೋ ಇಲ್ಲವೆ ಕಲಾ ಇತಿಹಾಸವನ್ನು ಓದಿಕೊಳ್ಳುವುದೋ ಈ ರೀತಿಯಾಗಿ ಅನೇಕ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಅನುಭವಿಸಬೇಕಾಗುತ್ತದೆ.

ಚಿತ್ರಕಲಾ ಕಾಲೇಜುಗಳಲ್ಲಿ ಶಿಕ್ಷಣವನ್ನು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಯಾಗುತ್ತಿರುವುದು: ಚಿತ್ರಕಲಾ ಶಿಕ್ಷಣವನ್ನು ಪಡೆದಂತಹ ಅನೇಕ ವಿದ್ಯಾರ್ಥಿಗಳು ನಿರುದ್ಯೋಗಿ ಗಳಾಗಿರುವುದನ್ನು ನಾವು ನೋಡುತ್ತೇವೆ. ಸರ್ಕಾರವಂತೂ ಚಿತ್ರಕಲಾ ವಿದ್ಯಾರ್ಥಿಗಳ ಬಗ್ಗೆ ಚಿಂತೆ ಮಾಡುವುದಿಲ್ಲ. ಮೊರಾರ್ಜಿ ಮತ್ತು ಕಿತ್ತೂರು ರಾಣಿ ವಸತಿ ಶಾಲೆಗಳಲ್ಲಿ ಚಿತ್ರಕಲಾ

ಶಿಕ್ಷಕರ ಹುದ್ದೆಗಳನ್ನು ಆಹ್ವಾನಿಸಿದರೂ ಸಹ ಅಂತಿಮವಾದ ಆಯ್ಕೆ ಪಟ್ಟಿಯನ್ನು ಬಿಟ್ಟಿಲ್ಲ. ಇದರಿಂದಾಗಿ ಇವನ್ನೆಲ್ಲವನ್ನು ಗಮನಿಸುತ್ತಿರುವಂತಹ ವಿದ್ಯಾರ್ಥಿಗಳು ಮತ್ತು ಪೋಷಕರು ಚಿತ್ರಕಲಾ ಕಾಲೇಜುಗಳಿಗೆ ಸೇರಿಸುವುದೇ ಬೇಡವೆಂದು ದಾಖಲು ಮಾಡಿಸುವುದಿಲ್ಲ. ಇದರಿಂದ ಸಾಮಾನ್ಯವಾಗಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿರುವುದನ್ನು ಗಮನಿಸ ಬಹುದು.

ಕಲೆಯ ಅಭಿವೃದ್ಧಿಗಾಗಿ ನಗರ ಪ್ರದೇಶಗಳಿಗೆ ಸೀಮಿತವಾದ ಚಟುವಟಿಕೆಗಳು ನಡೆಯುತ್ತವೆ. ಗ್ರಾಮೀಣ ಭಾಗಗಳಲ್ಲಿ ಇಂತಹ ಬೆಳವಣಿಗೆಗಳು ಸಾಧ್ಯವಿಲ್ಲ ಮತ್ತು ಅಲ್ಲಿನ ವಾತಾವರಣ ಪೂರಕವಾಗಿ ಇರುವುದಿಲ್ಲ. ನೈಜವಾಗಿ ಪ್ರತಿಭೆ ಇದ್ದರೂ ಕೂಡ ಅವಕಾಶಗಳಿಲ್ಲದೇ ಬೆಳಕಿಗೆ ಬರಲು ಸಾಧ್ಯವಾಗದೇ ವಿದ್ಯಾರ್ಥಿಗಳು ವಂಚಿತರಾಗುತ್ತಿದ್ದಾರೆ.

ಉನ್ನತ ಶಿಕ್ಷಣವನ್ನು ಪಡೆಯುತ್ತಿರುವಂತಹ ವಿದ್ಯಾರ್ಥಿಗಳಿಗೆ ಉಪನ್ಯಾಸಕರು ತಮ್ಮ ಹಿಡಿತದಲ್ಲಿ ವಿದ್ಯಾರ್ಥಿಗಳಿರಲಿ ಎಂಬ ದೃಷ್ಟಿಕೋನದಿಂದ ಆಂತರಿಕ ಅಂಕಗಳನ್ನು ಮುಂದಿಟ್ಟು ಕೊಂಡು ವಿದ್ಯಾರ್ಥಿಗಳೊಂದಿಗೆ ಮಾತಾನಾಡುತ್ತಾರೆ. ಶಿಕ್ಷಕರು ತಮ್ಮ ಮಾತು ಕೇಳಲಿಲ್ಲವೆಂದರೆ ಅಂಕಗಳನ್ನು ಕಡಿತ ಮಾಡುತ್ತೇವೆ ಎಂಬ ಒತ್ತಡವನ್ನು ವಿದ್ಯಾರ್ಥಿಯ ಮೇಲೆ ಹಾಕುತ್ತಾರೆ. ಈ ರೀತಿಯ ಸಮಸ್ಯೆಗಳನ್ನು ಮುಖ್ಯಸ್ಥರ ಗಮನಕ್ಕೂ ತರದೇ ಮೇಲಿನ ಅಧಿಕಾರಿಗಳಿಗೆ ತಿಳಿಸದೇ ವಿದ್ಯಾರ್ಥಿಗಳು ಹಲವು ಸಮಸ್ಯೆಗಳಿಂದ ಬಳಲುತ್ತಿದ್ದಾರೆ.

ವಿದ್ಯಾರ್ಥಿಗಳಿಗೆ ಚಿತ್ರಕಲಾ ಪದವಿಯನ್ನು ಮುಗಿಸಿಕೊಂಡರೆ ಶಿಕ್ಷಕರ ನೇಮಕವಾಗುತ್ತದೆ ಎಂಬ ಒಲವಿನಿಂದ ಕಲಾ ಕಾಲೇಜುಗಳ ಸಂಸ್ಥಾಪಕರು, ಮುಖ್ಯಸ್ಥರು, ಉಪನ್ಯಾಸಕರುಗಳೂ ಕಾಲೇಜಿಗೆ ಬಂದ ವಿದ್ಯಾರ್ಥಿಗೆ ಚಿತ್ರಕಲೆ ಕಲಿಯುವುದರಿಂದ ಏನೇನು ಉಪಯೋಗವಿದೆ ಎಂದರೆ ನಿಜವಾದಂತಹ ಮಾಹಿತಿಯನ್ನು ನೀಡಬೇಕಾಗುತ್ತದೆ. ಆದರೆ ಆ ವಿದ್ಯಾರ್ಥಿಗಳಿಗೆ ತಪ್ಪು ಮಾಹಿತಿಯನ್ನು ನೀಡಿ, ವಿದ್ಯಾರ್ಥಿಗಳನ್ನು ನೋಂದಣಿ ಮಾಡಿಸುತ್ತಾರೆ. ಹೀಗೆ ಅವರು ಕಾಲೇಜನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ತಪ್ಪು ಮಾಹಿತಿ ಹೇಳಿ ವಿದ್ಯಾರ್ಥಿಗಳನ್ನು ಹಳ್ಳಕ್ಕೆ ಬೀಳುವಂತೆ ಮಾಡುತ್ತಾರೆ.

ವಿದ್ಯಾರ್ಥಿಯ ಅರ್ಹತೆಯ ಬಗ್ಗೆ ಮನವರಿಕೆ ಮಾಡಿಕೊಂಡು ಪ್ರೋತ್ಸಾಹಿಸಬೇಕು:- ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸಾಧ್ಯವಾದಷ್ಟು ಸ್ಪಂದಿಸಬೇಕು ಮತ್ತು ಅನುಕೂಲಕರವಾದಂತಹ ವಾತಾವರಣವನ್ನು ನಿರ್ಮಿಸಬೇಕು.

ಪ್ರಾಯೋಗಿಕ ಮನಸ್ಸಿನ ವಿದ್ಯಾರ್ಥಿಗಳಿಗೆ ಅವಕಾಶಗಳಿಂದ ವಂಚನೆಯಾಗದಂತೆ ಮ್ಯೂರಲ್, ಛಾಯಾಚಿತ್ರ, ಟೆರ್ರಾಕೊಟಾ, ಮುದ್ರಣ ಕಲೆ ಪ್ರದರ್ಶನಗಳ ಬಗ್ಗೆ ಪರಿಚಯ ಮಾಡಿಸಬೇಕು.

ರಾಷ್ಟ್ರ - ಅಂತಾರಾಷ್ಟ್ರೀಯ ಮಟ್ಟದ ಶಿಷ್ಯವೇತನಗಳಿಗೆ ಅವಕಾಶ ನೀಡಬೇಕು ಅಥವಾ ಪರಿಚಯಿಸಬೇಕು. ಶಿಷ್ಯವೇತನಗಳನ್ನು ಪಡೆಯಲು ಹಾಗೂ ವಿದ್ಯಾರ್ಥಿಗಳಿಗೆ ಕಲಾಪ್ರದರ್ಶನ, ಕಲಾ ಪ್ರಾತ್ಯಕ್ಷಿಕೆ, ಕಾರ್ಯಾಗಾರಗಳನ್ನು ಪರಿಚಯಿಸಬೇಕು.

ಕಂಪ್ಯೂಟರ್ ಮತ್ತು ಆಧುನಿಕ ತಾಂತ್ರಿಕ ವಿಧಾನಗಳ ಅರಿವು ಮೂಡಿಸಬೇಕು. ಕಲಾ ವಿಮರ್ಶಕರಿಂದ ಜ್ಞಾನ ವಿಶಾಲದಾಯಕವಾಗಿರಬೇಕು. ಸಮಕಾಲೀನ ವಿಚಾರಗಳ ತಿಳುವಳಿಕೆ ನೀಡಬೇಕು. ಬದುಕಿಗೆ ಆಧಾರವಾಗುವ ಶಿಕ್ಷಣ ಪದ್ಧತಿಗಳಿಗೆ ಸಹಕಾರ, ಪ್ರೋತ್ಸಾಹ ಹಾಗೂ ಶಿಕ್ಷಣವನ್ನು ನೀಡುವ ಸಂಸ್ಥೆಯಲ್ಲಿ ಆರ್ಥಿಕ ಸಮಸ್ಯೆಗಳು ಮತ್ತು ಅದರ ಪ್ರೋತ್ಸಾಹಕರ ಕೊರತೆ ಇಲ್ಲಿ ಇಲ್ಲಿರುವಂತಹ ಬದುಕಿನ ಅನಿವಾರ್ಯಗಳೊಂದಿಗೆ ಬೇರೆ ಬೇರೆ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳು ಮುಂದಾಗಿರುತ್ತಾರೆ.

ವಿದ್ಯಾರ್ಥಿಗಳಿಗನುಸಾರವಾಗಿ ಕಲಾಶಾಲೆಗಳಿಲ್ಲದಿರುವುದು. ಸೂಕ್ತವಾದಂತಹ ಪ್ರಮಾಣದಲ್ಲಿ ಶಿಕ್ಷಕರಿಲ್ಲದಿರುವುದು. ಗಣನೀಯ ಪ್ರಮಾಣದಲ್ಲಿ ಶಿಕ್ಷಕರ ಗೈರು ಹಾಜರಿಗಳು ಸಮರ್ಥವಲ್ಲದ ಬೋಧನೆಯ ಸಮಸ್ಯೆ. ಉಪನ್ಯಾಸಕ - ವಿದ್ಯಾರ್ಥಿಗಳ ನಡುವೆ ಅನುಪಾತದಲ್ಲಿ ಹಲವೆಡೆ ಏರುಪೇರು ಕಂಡುಬರುತ್ತದೆ. ವಿದ್ಯಾರ್ಥಿಗಳಿಗೆ ಸರಿಯಾಗಿ ಪಠ್ಯಬೋಧನೆ ಮಾಡದಿರುವುದು. ಪ್ರಾಯೋಗಿಕ ವಿಷಯದ ಬಗ್ಗೆ ಮಾಹಿತಿಯನ್ನು ಕೇಳಿದರೂ ಉಪನ್ಯಾಸಕರೂ ತಿಳಿಸದೆ ಇರುವುದು. ಉಪನ್ಯಾಸಕರಿಗೆ ಕೆಲವೊಂದು ವಿದ್ಯಾರ್ಥಿಗಳಿಗೆ ಹೇಳುವಂತಹ ವಿಷಯಗಳ (ಸಿದ್ಧಾಂತ ಪತ್ರಿಕೆಯಾಗಿರಬಹುದು ಇಲ್ಲವೇ ಪ್ರಾಯೋಗಿಕ ವಿಷಯವಿರಬಹುದು) ಬಗೆಗೆ ಸಂಪೂರ್ಣ ವಾದಂತಹ ಮಾಹಿತಿಯು ಗೊತ್ತಿಲ್ಲದಿರುವುದರಿಂದ ಆ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ಅಪೂರ್ಣ ವಿಷಯವನ್ನು ತಿಳಿಸುವುದರಿಂದ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುತ್ತದೆ.

ಆಂತರಿಕ ಅಂಕಗಳನ್ನು ನೀಡುವಾಗ ವಿದ್ಯಾರ್ಥಿಗಳು ಬರೆದಂತಹ ಅಥವಾ ಪ್ರಾಯೋಗಿಕವಾದ ವಿಷಯಕ್ಕೆ ಸಂಬಂಧಿಸಿದಂತಹ ಅಂಕಗಳನ್ನು ವಿದ್ಯಾರ್ಥಿ ಬರದಿರುವ ಅಥವಾ ರಚಿಸಿರುವುದಕ್ಕೆ ತಕ್ಕಂತೆ ಅಂಕಗಳನ್ನು ನೀಡಬೇಕಾಗುತ್ತದೆ. ಆದರೆ ಕೆಲವೊಂದು ಉಪನ್ಯಾಸಕರುಗಳು ಪರಿಚಯ ವಿರುವಂತಹವರಿಗೆ ಆಂತರಿಕ ಅಂಕಗಳನ್ನು ಹೆಚ್ಚು ನೀಡುವುದು. ಹಾಜರಾತಿಯನ್ನು ಹೆಚ್ಚು ನೀಡುವುದು. ಇದರಿಂದ ಹಾಜರಾತಿ ಇರುವಂತಹ ಹಾಗೂ ಪ್ರಾಯೋಗಿಕ ವಿಷಯಗಳನ್ನು ಚೆನ್ನಾಗಿ ಮಾಡಿರುವ ವಿದ್ಯಾರ್ಥಿಗೂ ಆಂತರಿಕ ಅಂಕಗಳನ್ನು ಕಡಿಮೆ ನೀಡುವುದರಿಂದ ಆ ವಿದ್ಯಾರ್ಥಿಗಳು ತೊಂದರೆಯನ್ನು ಅನುಭವಿಸುತ್ತಿರುವುದನ್ನು ನಾವು ಪ್ರಸ್ತುತ ಸಂದರ್ಭದಲ್ಲಿ ಕಾಣುತ್ತೇವೆ.

ಪದವಿಗಾಗಿ ಕಿರುಪ್ರಬಂಧ ರಚನೆ: ನಮ್ಮ ಚಿತ್ರಕಲಾ ಕಾಲೇಜುಗಳಲ್ಲಿ ಪದವಿಯನ್ನು ಪಡೆಯುತ್ತಿರುವ ವಿದ್ಯಾರ್ಥಿಗಳು ಹೆಚ್ಚಾಗಿ ಪ್ರಾಯೋಗಿಕವಾದಂತಹ ವಿಷಯಗಳನ್ನು ಕುರಿತು ಅಧ್ಯಯನ ಮಾಡುತ್ತಿರುತ್ತಾರೆ. ಆದರೆ ಸಿದ್ಧಾಂತ ಪತ್ರಿಕೆಯ ವಿಷಯವನ್ನು ಕರ್ನಾಟಕದ ಹಲವಾರು ಕಾಲೇಜುಗಳಲ್ಲಿ ಬೋಧಿಸುವುದಿಲ್ಲ. ವಿದ್ಯಾರ್ಥಿಗಳೇ ಅದರ ಬಗ್ಗೆ ಮಾಹಿತಿಯನ್ನು ಕಲೆಹಾಕಿಕೊಂಡು ಪರೀಕ್ಷೆಗಳನ್ನು ಎದುರಿಸುತ್ತಿರುವುದನ್ನು ನಾವು ನೋಡುತ್ತೇವೆ. ಆದರೆ ಪದವಿ ಯನ್ನು ಪಡೆಯಲು ಒಂದು ಕಿರುಪ್ರಬಂಧವನ್ನು ರಚಿಸಬೇಕಾಗುತ್ತದೆ. ಈ ಕಿರುಪ್ರಬಂಧವನ್ನು

ರಚನೆ ಮಾಡಬೇಕಾದರೆ ಹಲವಾರು ಪುಸ್ತಕಗಳನ್ನು ಓದಬೇಕಾಗುತ್ತದೆ. ಪರೀಕ್ಷೆಗೆ ಓದದ ಹುಡುಗರು ಹಲವಾರು ಪುಸ್ತಕಗಳನ್ನು ಓದಿ ಒಂದು ಕಿರು ಪ್ರಬಂಧವನ್ನು ರಚನೆ ಮಾಡುವುದಾದರೂ ಹೇಗೆ? ಕೆಲವೊಂದು ಶಾಲೆಗಳಲ್ಲಿ ಕಿರುಪ್ರಬಂಧದ ಬಗ್ಗೆ ಹೆಚ್ಚು ಅಲ್ಲಿನ ಶಿಕ್ಷಕರಿಗೂ ಗೊತ್ತಿರುವುದಿಲ್ಲ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಇದು ದೊಡ್ಡ ಸಮಸ್ಯೆಯಾಗಿದೆ. ಕೆಲವರು ವಿದ್ಯಾರ್ಥಿಗಳ ಬಳಿ ಹಣ ಪಡೆದು ಹಿಂದಿನ ವರ್ಷದಲ್ಲಿ ಸಲ್ಲಿಸಿದ ಪ್ರಬಂಧಗಳನ್ನು ಮುಖಪುಟ, ಶೀರ್ಷಿಕೆ ಬದಲಾಯಿಸಿ ಅಧ್ಯಾಪಕರೇ ವಿದ್ಯಾರ್ಥಿಗಳಿಗೆ ಸಿದ್ಧಪಡಿಸಿಕೊಡುತ್ತಾರೆ. ಈ ಮಟ್ಟಕ್ಕೆ ದೃಶ್ಯಕಲಾ ಕ್ಷೇತ್ರ ಹೋಗಿದೆ.

ಕನ್ನಡ ಪ್ರಭ, ಮಂಗಳವಾರ, ದಿನಾಂಕ ೧೦-೦೧-೨೦೧೨

ಬಿ.ವಿ.ಎ. ಪದವೀಧರರ ಆಯ್ಕೆಗೆ ತೀರ್ಮಾನ

"ಚಿತ್ರಕಲಾ ಶಿಕ್ಷಕರ ನೇಮಕಾತಿಯಲ್ಲಿ ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್(ಬಿವಿಎ) ಕೋರ್ಸ್ ಕುರಿತು ಉದ್ಭವವಾಗಿದ್ದ ಗೊಂದಲಕ್ಕೆ ಅಂತಿಮ ತೆರೆ ಬೀಳಲಿದೆ.

ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರ ನೇಮಕಾತಿ ಸಂದರ್ಭದಲ್ಲಿ ಬಿವಿಎ ಕೋರ್ಸ್ ಮಾಡಿದವರನ್ನು ಪರಿಗಣಿಸುವುದಾಗಿ ಶಿಕ್ಷಕರ ನೇಮಕಾತಿ ವಿಭಾಗದ ಪರಿಶೀಲನಾಧಿಕಾರಿಗಳು ಮೌಖಿಕವಾಗಿ ಒಪ್ಪಿದ್ದಾರೆ. ಅಲ್ಲದೆ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿ ಚಿತ್ರಕಲೆ ಮತ್ತು ಸಂಗೀತ ವಿಭಾಗದ ಶಿಕ್ಷಕರ ನೇಮಕಾತಿಯನ್ನು ಅಂತಿಮ ಹಂತದಲ್ಲಿ ಕೈಗೊಳ್ಳಲಾಗುವುದು. ಈ ಸಂದರ್ಭದಲ್ಲಿ ಬಿವಿಎ ಕೋರ್ಸ್ ಪಡೆದವರನ್ನು ಪರಿಗಣಿಸಲಾಗುವುದು ಎಂದು ಅವರು ಸ್ಪಷ್ಟ ಭರವಸೆ ನೀಡಿದ್ದಾರೆ.

ಚಿತ್ರಕಲಾ ಶಿಕ್ಷಕರ ನೇಮಕಾತಿಯಲ್ಲಿ ಬಿವಿಎ ಪದವೀಧರರನ್ನು ಪರಿಗಣಿಸದಿರುವ ಬಗ್ಗೆ ಸೋಮವಾರ ಕನ್ನಡಪ್ರಭ ವರದಿ ಪ್ರಕಟಿಸುತ್ತಿದ್ದಂತೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳು, ಆಪ್ತ ಸಹಾಯಕರು ಕೋರ್ಸ್ ಕುರಿತು ಸಂಪೂರ್ಣ ದಾಖಲೆಗಳೊಂದಿಗೆ ಶಿಕ್ಷಕರ ನೇಮಕಾತಿ ವಿಭಾಗದ ಪರಿಶೀಲನಾಧಿಕಾರಿ ಗಂಗನಗೌಡರ್ ಅವರನ್ನು ಭೇಟಿ ಮಾಡಿ ವಿವರಣೆ ನೀಡಿದರು.

ಇದನ್ನು ಪರಿಗಣಿಸಿದ ಪರಿಶೀಲನಾಧಿಕಾರಿಗಳು ಕೋರ್ಸ್ ಕುರಿತಂತೆ ಹಲವು ಗೊಂದಲ ಗಳಿದ್ದುದರಿಂದ ಬಿವಿಎ ಪದವೀಧರರನ್ನು ನೇಮಕಾತಿ ಸಂದರ್ಭದಲ್ಲಿ ಪರಿಗಣಿಸಲಾಗುವುದಿಲ್ಲ ಎಂದು ಹೇಳಲಾಗಿತ್ತು. ಇದೀಗ ಕೋರ್ಸ್ ಕುರಿತ ಗೊಂದಲ ಬಗೆಹರಿದಿದೆ. ಮುಂದೆ ನೇಮಕಾತಿ ಸಂದರ್ಭದಲ್ಲಿ ಇದನ್ನು ಗಣನೆಗೆ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಲ್ಲದೆ ಬಿವಿಎ ಪದವೀಧರರನ್ನು ಪರಿಗಣಿಸುವ ಬಗ್ಗೆ ಮೌಖಿಕವಾಗಿ ಸೂಚನೆಯನ್ನು ನೀಡಿದ್ದಾರೆ. ಏನಿದು ವಿವಾದ? ಹಲವು ವರ್ಷಗಳಿಂದ ರಾಜ್ಯದ ವಿಶ್ವವಿದ್ಯಾಲಯಗಳ ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್(ಬಿಎಫ್ಎ) ಎಂಬ ಮೂರು ವರ್ಷದ ಪದವಿ ನಡೆಸುತ್ತಿದ್ದವು. ಆದರೆ ೨೦೦೧ರಲ್ಲಿ ಯುಜಿಸಿ ಬಿಎಫ್ಎ ಪದವಿಗೆ ಬಿವಿಎ ಅಂದರೆ, ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್ಸ್

ಎಂದು ನಾಮಕರಣ ಮಾಡಿ ಹೊಸ ಸಿಲಬಸ್ ಯುಜಿಸಿ ಶಿಫಾರಸ್ಸನ್ನು ಆದೇಶವೆಂದು ಪರಿಗಣಿಸಿದ ಹಂಪಿ ವಿಶ್ವವಿದ್ಯಾಲಯ ಬಿಎಫ್ಎ ಕೋರ್ಸ್‌ನ್ನು ಬಿವಿಎ ಕೋರ್ಸ್ ಎಂದು ಮಾರ್ಪಡಿಸಿ ಹೊಸ ಸಿಲೆಬಸ್‌ನೊಂದಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಿತು.

ಆದರೆ ಇದೀಗ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ ಚಿತ್ರಕಲಾ ಶಿಕ್ಷಕರನ್ನು ನೇಮಕ ಮಾಡುವಾಗ ಬಿವಿಎ ಕೋರ್ಸ್‌ಗೆ ಮಾನ್ಯತೆ ಇಲ್ಲ ಎಂದು ಪದವೀಧರರ ನೇಮಕಾತಿಗೆ ಆಯ್ಕೆ ಮಂಡಳಿ ನಿರಾಕರಿಸಿತು. ಈ ಕುರಿತಂತೆ ಸೋಮವಾರ ಕನ್ನಡ ಪ್ರಭದಲ್ಲಿ ವರದಿ ಪ್ರಕಟವಾಗುತ್ತಿದ್ದಂತೆ ಹಂಪಿ ವಿಶ್ವವಿದ್ಯಾಲಯದ ಅಧಿಕಾರಿಗಳು ಎಚ್ಚೆತ್ತು ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ. ಅದರಂತೆ ಬಿವಿಎ ಪದವೀಧರರನ್ನು ನೇಮಿಸಿಕೊಳ್ಳಲು ಆಯ್ಕೆ ಮಂಡಳಿ ತೀರ್ಮಾನಿಸಿದೆ. ಇಷ್ಟೆಲ್ಲಾ ಆದರೂ ಕೂಡ ಬಿವಿಎ ಪದವೀಧರರನ್ನು ಆಯ್ಕೆ ಪ್ರಕ್ರಿಯೆಯಲ್ಲಿ ಪರಿಗಣಿಸದೇ ಇರುವಂತಹ ಸಂಗತಿ ಹೊರಬಿದ್ದಿದೆ."[೧]

ಪದವಿಯಲ್ಲಿ ಚಿತ್ರಕಲೆಯನ್ನು ಒಂದು ಐಚ್ಚಿಕ ವಿಷಯವಾಗಿ ಕಲಿಸುತ್ತಿರುವ ಚಿತ್ರಕಲಾ ವಿಭಾಗಗಳಲ್ಲಿನ ಸಮಸ್ಯೆಗಳು

ಇಲ್ಲಿ ವಿದ್ಯಾರ್ಥಿಗಳು ಕಲಾಕೃತಿ ರಚನೆ ಮಾಡಲು ಮತ್ತು ಚಿತ್ರಕಲೆಯ ಬಗ್ಗೆ ಅನೇಕ ವಿಷಯಗಳನ್ನು ತಿಳಿದುಕೊಳ್ಳಲು ಸಮಯಾಭಾವ ಇರುತ್ತದೆ. ಚಿತ್ರಕಲಾ ಶಾಲೆಗಳಲ್ಲಿ ಬೆಳಿಗ್ಗೆಯಿಂದ ಸಂಜೆಯ ತನಕ ನಿರಂತರವಾಗಿ ಕಲಾಕೃತಿಯಲ್ಲಿ ತೊಡಗಿದ್ದರೂ ಸಹ ಅವರಿಗೆ ಸಮಯಾಭಾವ ವಿರುತ್ತದೆ. ಆದರೆ ಅಲ್ಲಿನ ಚಿತ್ರಕಲಾ ವರ್ಗದಲ್ಲಿ ಒಂದು ದಿನಕ್ಕೆ ಎರಡು ಗಂಟೆಗಳ ಕಾಲ ಚಿತ್ರಕಲೆ ಕಲೆಯಲು ಅವಕಾಶ ಇರುತ್ತದೆ. ಈ ರೀತಿಯಾಗಿರುವಾಗ ಉಪನ್ಯಾಸಕರು ಯಾವ ಸಮಯದಲ್ಲಿ ಬೋಧನೆ ಮಾಡಬೇಕು? ವಿದ್ಯಾರ್ಥಿಗಳು ಯಾವ ಸಮಯದಲ್ಲಿ ಕಲಾಕೃತಿಗಳನ್ನು ರಚನೆ ಮಾಡಬೇಕು ಎಂಬ ಹತ್ತು ಹಲವು ಸಮಸ್ಯೆಗಳು ಕಾಡುತ್ತವೆ.

ಇಂತಹ ತರಗತಿಯಲ್ಲಿ ಉಪನ್ಯಾಸಕರು ಬೋಧಿಸುವಂತಹ ಪದ್ಧತಿಯಿಂದ ಸಮಯದ ಅಭಾವದ ಕಾರಣ ವಿದ್ಯಾರ್ಥಿಗಳಿಗೆ ಎಷ್ಟೇ ಕಲಿಸಿದರೂ ಅವರಿಗೆ ಸಮಾಧಾನ ಇರುವುದಿಲ್ಲ. ಅನುದಾನಿತ ವಿದ್ಯಾಲಯವಾದರೂ ಇಲ್ಲಿ ಒಬ್ಬರೇ ಶಿಕ್ಷಕರು ಖಾಯಂ ಆಗಿ ಸೇವೆ ಸಲ್ಲಿಸುತ್ತಿರುವುದನ್ನು ಕಾಣಬಹುದು. ಚಿತ್ರಕಲಾ ಶಿಕ್ಷಣವನ್ನು ಬೋಧಿಸುವಂತಹ ಅತಿಥಿ ಉಪನ್ಯಾಸಕರಿಗೆ ಹೆಚ್ಚು ಸಮಯವನ್ನು ನೀಡಲು ಆಗುತ್ತಿಲ್ಲ ಮತ್ತು ಚಿತ್ರಕಲೆಗೆ ಸಂಬಂಧಿಸಿದಂತೆ ಎಲ್ಲ ಸಾಮಗ್ರಿಗಳು ಇದ್ದರೂ ಕೂಡ ಇಲ್ಲಿ ಚಿತ್ರಕಲಾ ಬೋಧನೆಗೆ ಸಮಯಾವಕಾಶದ ಕೊರತೆ ಎದ್ದು ಕಾಣುತ್ತದೆ.

ಚಿತ್ರಕಲೆಯ ಬಗ್ಗೆ ಹೆಚ್ಚಿನ ಆಸಕ್ತಿ ಮತ್ತು ಜ್ಞಾನವನ್ನು ಪಡೆಯಲು ಇಚ್ಛಿಸುವವರು

ಹಲವು ಜನರಿಗೆ ಚಿತ್ರಕಲೆಯ ಬಗ್ಗೆ ಒಲವು ಮತ್ತು ಆಸಕ್ತಿಗಳು ಇದ್ದು ಚಿತ್ರಕಲೆಯನ್ನು ಕಲಿಯಲು ಇಚ್ಚಿಸುತ್ತಾರೆ. ಇನ್ನೂ ಕೆಲವರು ಈ ಚಿತ್ರಕಲೆಯನ್ನು ಕಲಿಯುವುದರಿಂದಾಗಿ ಹೆಚ್ಚಿನ ಜ್ಞಾನ ಮತ್ತು ನೆನಪಿನ ಶಕ್ತಿ ಹೆಚ್ಚಾಗುತ್ತದೆ. ಇದರಿಂದ ಅನೇಕರು ಕಲಿಯಲು ಆಸಕ್ತಿಯನ್ನು ವ್ಯಕ್ತಪಡಿಸುತ್ತಾರೆ.

ಚಿತ್ರಕಲಾ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಮಸ್ಯೆಗಳು

"ದೃಶ್ಯಕಲಾ ಕಾಲೇಜುಗಳಲ್ಲಿ ಡಿಪ್ಲೊಮಾ ಓದಿ, ಒಂದು ವರ್ಷ ಬ್ರಿಡ್ಜ್ ಕೋರ್ಸ್ ಮಾಡಿಕೊಂಡಿರುವಂತಹ ವಿದ್ಯಾರ್ಥಿಗಳು ಮತ್ತು ಸಾಮಾನ್ಯ ಪದವಿ(ಬಿ.ಎ)ಯಲ್ಲಿ ಚಿತ್ರಕಲೆಯನ್ನು ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಿದಂತಹ ವಿದ್ಯಾರ್ಥಿಗಳಿಗೆ ಬರೋಡ, ಶಾಂತಿನಿಕೇತನ, ಜೆ.ಜೆ. ಸ್ಕೂಲ್ ಆಫ್ ಆರ್ಟ್, ದೆಹಲಿಯ ಕಾಲೇಜ್ ಆಫ್ ವಿಜ್ಯುವಲ್ ಆರ್ಟ್, ಬೆಂಗಳೂರು ವಿಶ್ವವಿದ್ಯಾಲಯದ ದೃಶ್ಯಕಲಾ ಅಧ್ಯಯನ ವಿಭಾಗ, ಬೆಂಗಳೂರಿನ ಚಿತ್ರಕಲಾ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯದ ಕಾವಾ ಕಾಲೇಜು, ದಾವಣಗೆರೆ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಗಳಲ್ಲಿ ಪ್ರವೇಶವನ್ನು ನೀಡುತ್ತಿಲ್ಲ."[೧೩] ದೃಶ್ಯಕಲೆಯಲ್ಲಿ ಉನ್ನತ ಶಿಕ್ಷಣ ಪಡೆಯಬೇಕೆಂಬ ಆಸೆ ಹೊಂದಿದ ಅನೇಕ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ.

ಡಿಪ್ಲೊಮಾವನ್ನು ಮುಗಿಸಿ ಒಂದು ವರ್ಷದ ಬ್ರಿಡ್ಜ್ ಕೋರ್ಸ್‌ನ್ನು ಮುಗಿಸಿದಂತಹ ವಿದ್ಯಾರ್ಥಿಗಳ ಅಂಕಗಳನ್ನು ಹಾಗೂ ಬಿವಿಎ/ಬಿಎಫ್‌ಎ ಪದವಿ ಪಡೆದಂತಹ ವಿದ್ಯಾರ್ಥಿಗಳ ಅಂಕಗಳನ್ನು ಸ್ನಾತಕೋತ್ತರ ಪದವಿಯ ಪ್ರವೇಶ ಪರೀಕ್ಷೆಯನ್ನು ನಡೆಸುವಾಗ ಪ್ರವೇಶ ಪರೀಕ್ಷೆಯ ಅಂಕಗಳನ್ನು ಡಿಪ್ಲೊಮಾ/ಬ್ರಿಡ್ಜ್ ಕೋರ್ಸ್ ಮಾಡಿದ ಮತ್ತು ಬಿವಿಎ/ಬಿಎಫ್‌ಎ ಪದವಿಯಲ್ಲಿ ಪಡೆದ ಅಂಕಗಳನ್ನು ಯಾವ ರೀತಿ ಎಂ.ವಿ.ಎ. ಸ್ನಾತಕೋತ್ತರ ಪ್ರವೇಶಕ್ಕೆ ಪರಿಗಣಿಸುತ್ತಾರೆ.

ಬಿಎಫ್‌ಎ ಚಿತ್ರಕಲೆಯನ್ನು ಮುಗಿಸಿ ಎಂ.ಎ. ಡ್ರಾಯಿಂಗ್ ಅಂಡ್ ಪೇಂಟಿಂಗ್ ಮಾಡಿಕೊಂಡಿರುವಂತಹ ಅನೇಕರಿದ್ದಾರೆ. ಆದರೆ ಚಿತ್ರಕಲೆಯನ್ನು ಒಂದು ಐಚ್ಛಿಕ ವಿಷಯವನ್ನಾಗಿ ಕಲಿತಂಥವರಿಗೆ ಉನ್ನತ ಶಿಕ್ಷಣವನ್ನು ಪಡೆಯಲು ಅವಕಾಶ ನೀಡಿದರೆ ಆಂತರಿಕ ವಿದ್ಯಾರ್ಥಿಗಳಿಗೆ ಮೋಸ ಮಾಡಿದಂತಾಗುತ್ತದೆ.

ಕರ್ನಾಟಕದಲ್ಲಿ ನಡೆಯುತ್ತಿರುವ ಬೇರೆ ಬೇರೆ ಸ್ನಾತಕೋತ್ತರ ಪಠ್ಯಕ್ರಮಗಳ ಬಗ್ಗೆ ನೋಡಿದರೆ ಒಂದು ವಿಶ್ವವಿದ್ಯಾಲಯವು ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಿದರೆ ಮತ್ತೊಂದು ವಿಶ್ವವಿದ್ಯಾಲಯವು ನಾನ್ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಿಕೊಂಡಿರುವುದನ್ನು ನೋಡುತ್ತೇವೆ. ಇದರಿಂದಾಗಿ ನಮ್ಮ ರಾಜ್ಯದಲ್ಲಿರುವಂತಹ ವಿಶ್ವವಿದ್ಯಾಲಯಗಳಲ್ಲಿ ಏಕರೂಪ ಪಠ್ಯಕ್ರಮವಾಗಬೇಕೆಂದರೆ ಅದು ಹೇಗೆ ಸಾಧ್ಯ? ಎಂಬುವುದನ್ನು ನಾನು ಕ್ಷೇತ್ರಕಾರ್ಯ ಹೋದದಂತಹ ಸಂದರ್ಭದಲ್ಲಿ ತಿಳಿದುಕೊಳ್ಳಲಾಯಿತು.

ಎಂ.ಫಿಲ್. ಮತ್ತು ಪಿಎಚ್.ಡಿ. ಪದವಿ ಪಡೆದ ವಿದ್ಯಾರ್ಥಿಗಳ ಸಮಸ್ಯೆಗಳು

ಉನ್ನತ ಶಿಕ್ಷಣವನ್ನು ಪಡೆದುಕೊಳ್ಳಲು ವಿದ್ಯಾರ್ಥಿಗಳು ಸಾಕಷ್ಟು ಕಷ್ಟಪಟ್ಟು ವಿಶ್ವವಿದ್ಯಾಲಯಗಳಿಗೆ ಕಲಿಯಲು ಬರುತ್ತಾರೆ. ಆದರೆ ಪದವಿ, ಸ್ನಾತಕ ಪದವಿಯನ್ನು ಪಡೆದಂತಹ ವಿದ್ಯಾರ್ಥಿಗಳು ಸ್ನಾತಕೋತ್ತರ ಶಿಕ್ಷಣವನ್ನು ಕಲಿಯಲು ಇಚ್ಛಿಸುತ್ತಾರೆ. ಆದರೆ ನಮ್ಮ ಕ್ಷೇತ್ರದಲ್ಲಿ ಎಂ.ಫಿಲ್., ಪಿಎಚ್.ಡಿ. ಪದವಿಗಳನ್ನು ಪಡೆಯಲು ಅಪೇಕ್ಷೆಯಿರುವ ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದರೂ

ಸಹ ಮಾರ್ಗದರ್ಶಕರ ಕೊರತೆಯಿಂದಾಗಿ ಹಲವಾರು ವಿದ್ಯಾರ್ಥಿಗಳ ಕನಸು ಕನಸಾಗಿಯೇ ಉಳಿಯುತ್ತಿರುವುದನ್ನು ಪ್ರಸ್ತುತ ಸಂದರ್ಭದಲ್ಲಿ ಕಾಣಬಹುದು. ಅದೇ ರೀತಿಯಾಗಿ ಉನ್ನತ ಶಿಕ್ಷಣವನ್ನು ಪಡೆದಂತಹ ಹಲವಾರು ಜನರು ದೃಶ್ಯಕಲಾ ಕ್ಷೇತ್ರದಲ್ಲಿದ್ದರೂ ಕೂಡ ಚಿತ್ರಕಲಾ ಶಾಲೆಗಳಲ್ಲಿ ಉಪನ್ಯಾಸಕರ ಕೊರತೆಯಿದ್ದರೂ ಕೂಡ ಸರಕಾರಗಳು ಸರಿಯಾದ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುತ್ತಿಲ್ಲ. ಇದರಿಂದ ಅನೇಕ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿಗಳಾದಂತಹ ಎಂ.ಫಿಲ್., ಪಿಎಚ್.ಡಿ. ಪದವಿಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

ಇತರೆ ಸಮಸ್ಯೆಗಳು

೧೯೮೦ರಲ್ಲಿ ಡಿ.ಎಂ.ಸಿ., ಎ.ಎಂ., ಜಿ.ಡಿ. ತರಗತಿಗಳು ನಡೆಯುತ್ತಿದ್ದವು. ಈ ಪದವಿಗಳನ್ನು ಕಲಿತ ಅನೇಕ ಚಿತ್ರಕಲಾ ವಿದ್ಯಾರ್ಥಿಗಳಿಗೆ ಉದ್ಯೋಗವಕಾಶಗಳು ಸಿಕ್ಕಿವೆ. ನಂತರದಲ್ಲಿ ಆರಂಭ ವಾದಂತಹ ಕೋರ್ಸ್‌ಗಳನ್ನು ಕಲಿತಂತಹ ವಿದ್ಯಾರ್ಥಿಗಳು ಈ ರೀತಿಯ ಸೌಲಭ್ಯದಿಂದ ವಂಚಿತರಾಗಿದ್ದಾರೆ.

ಎ.ಟಿ.ಸಿ., ಎ.ಇಡಿ ತರಬೇತಿ ಕೋರ್ಸ್‌ಗಳು ಪ್ರಾರಂಭವಾಗಿ ಕೆಲವು ವರ್ಷಗಳ ನಂತರ ಸ್ಥಗಿತಗೊಂಡಿವೆ. ಟಿ.ಪಿ. ಇಸ್ಸಾರ್ ವರದಿಯಲ್ಲಿ ಫೌಂಡೇಶನ್ ಅಥವಾ ಕಲಾಮೂಲ ತರಗತಿಗಳು ಮುಗಿಸಿದ ನಂತರ ಎ.ಟಿ.ಸಿ.(ಆರ್ಟ್ ಟೀಚರ್ ಕೋರ್ಸ್) ಎಂಬ ತರಬೇತಿಯನ್ನು ಪಡೆದು ಕೊಂಡರೆ ಪ್ರಾಥಮಿಕ ಶಾಲೆಗಳಿಗೆ ಚಿತ್ರಕಲಾ ವಿಷಯ ಕಲಿಸಲಿಕ್ಕೆ ಅರ್ಹರಾಗುತ್ತಾರೆ ಮತ್ತು ಮೂರು ವರ್ಷಗಳ ವಿಶೇಷ ಪರಿಣಿತಿ ಡಿಪ್ಲೋಮಾ ನಂತರದಲ್ಲಿ ಎ.ಇಡಿ(ಆರ್ಟ್ ಎಜ್ಯುಕೇಶನ್) ತರಗತಿ ಕೋರ್ಸ್‌ನ್ನು ಮುಗಿಸಿಕೊಂಡವರು ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕರಾಗಲು ಅರ್ಹ ರಾಗುತ್ತಾರೆಂದು ಟಿ.ಪಿ. ಇಸ್ಸಾರ್ ವರದಿಯಲ್ಲಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ತರಬೇತಿಯನ್ನು ಪಡೆದ ವಿದ್ಯಾರ್ಥಿಗಳು ತರಬೇತಿ ಕೋರ್ಸ್‌ಗಳನ್ನು ಪಡೆದು ಅವರು ನೀಡಿರುವಂತಹ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಹಿಡಿದುಕೊಂಡು ಕೆಲಸಕ್ಕಾಗಿ ಅಲೆದಾಡಿದರೂ ಆ ಪ್ರಮಾಣ ಪತ್ರಗಳಿಗೆ ಬೇಡಿಕೆ ಇಲ್ಲದಂತಾಗಿದೆ.

ವಿಶೇಷ ಪರಿಣಿತಿ ಮೂರು, ನಾಲ್ಕು ಹಾಗೂ ಐದನೇ ವರ್ಷದ ಡಿಪ್ಲೊಮಾ ತರಗತಿಗಳನ್ನು ಟಿ.ಪಿ. ಇಸ್ಸಾರ್ ವರದಿಯಲ್ಲಿ ಕರ್ನಾಟಕದಲ್ಲಿರುವಂತಹ ಎಲ್ಲಾ ಚಿತ್ರಕಲಾ ಕಾಲೇಜುಗಳಿಗೂ ಕಡ್ಡಾಯವಾಗಿ ಈ ಪಠ್ಯಕ್ರಮವನ್ನು ಅನುಸರಿಸಬೇಕೆಂದು ಆದೇಶವನ್ನು ಮಾಡಿತ್ತು. ಆದರೆ ಕರ್ನಾಟಕದ ಎಲ್ಲಾ ಚಿತ್ರಕಲಾ ಕಾಲೇಜುಗಳಲ್ಲಿಯೂ ಸಹಿತ ಸರ್ಕಾರ ಆದೇಶ ಮಾಡಿದರೂ ಅದನ್ನು ಅನುಷ್ಠಾನಕ್ಕೆ ತರಲಿಲ್ಲ. ಅಂತಹ ಕಾಲೇಜುಗಳ ಮೇಲೆ ಯಾವ ರೀತಿಯಾದ ಕ್ರಮವನ್ನೂ ಸರ್ಕಾರ ತೆಗೆದುಕೊಂಡಿಲ್ಲ. ಈ ಟಿ.ಪಿ. ಇಸ್ಸಾರ್ ವರದಿಯಲ್ಲಿರುವಂತಹ ಕೋರ್ಸ್‌ಗಳು ವೃಂದ ಮತ್ತು ನೇಮಕಾತಿಗೆ ಸೇರಿಸಿಲ್ಲವೆಂದು ಕರ್ನಾಟಕದ ಕೆಲವು ಕಲಾಶಾಲೆಗಳು ಈ ಪಠ್ಯಕ್ರಮವನ್ನು ಅನುಸರಿಸಿಲ್ಲ.

ಕನ್ನಡ ವಿಶ್ವವಿದ್ಯಾಲಯಕ್ಕೆ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು ಚಿತ್ರಕಲಾ ಶಿಕ್ಷಣದ ಪರೀಕ್ಷಾ ಪದ್ಧತಿಯನ್ನು ಹಸ್ತಾಂತರಿಸಿ ಕೋರ್ಸ್‌ಗಳನ್ನು ಮಾತ್ರ ನಡೆಸುತ್ತಿತ್ತು. ಅಂದರೆ ವಿಶೇಷ ಪರಿಣಿತಿ ಡಿಪ್ಲೋಮಾ ಚಿತ್ರಕಲೆ ಮತ್ತು ಎ.ಟಿ.ಸಿ. ನಂತರದಲ್ಲಿ ಎ.ಇಡಿ ಬದಲಾಗಿ ಬಿ.ವಿ.ಇಡಿ.ಯನ್ನು ವಿಶ್ವವಿದ್ಯಾಲಯ ಸರ್ಕಾರದ ಅನುಮತಿಯನ್ನು ಪಡೆದು ನಡೆಸುತ್ತಿತ್ತು. ಆದರೆ ವಿದ್ಯಾರ್ಥಿಗಳ ದೃಷ್ಟಿಕೋನದಿಂದಾಗಿ ವೃಂದ ಮತ್ತು ನೇಮಕಾತಿಯೊಳಗೆ ಸೇರಿಸದೇ ಇದ್ದುದ್ದರಿಂದ, ಕರ್ನಾಟಕದ ಅನೇಕ ವಿದ್ಯಾರ್ಥಿಗಳಿಗೆ ಎ.ಟಿ.ಸಿ, ಬಿ.ವಿ.ಇಡಿ. ಕೋರ್ಸ್‌ಗಳನ್ನು ಕಲಿತು ಉಪಯೋಗವಿಲ್ಲ ದಂತಾಗಿದೆ. ಬಿ.ವಿ.ಇಡಿ ತರಬೇತಿ ಕೋರ್ಸ್‌ಗಳನ್ನು ಮಾಡಬೇಕಾಗಿದ್ದರೆ ವಿದ್ಯಾರ್ಹತೆ ಬಿ.ವಿ.ಎ./ ಬಿ.ಎಫ್.ಎ. ಅಥವಾ ವಿಶೇಷ ಪರಿಣಿತಿ ಮುಗಿಸಿದಂತಹ ವಿದ್ಯಾರ್ಥಿಗಳಾಗಿದ್ದಲ್ಲಿ ಒಂದು ವರ್ಷದ ಬಿ.ವಿ.ಎ ಪದವಿಯ(ಬ್ರಿಡ್ಜ್ ಕೋರ್ಸ್)ನ್ನು ಮುಗಿಸಿಕೊಂಡರೆ ಬಿ.ವಿ.ಇಡಿಯನ್ನು ಕಲಿಯಲು ಅರ್ಹರಾಗುತ್ತಿದ್ದರು.

ಚಿತ್ರಕಲಾ ಶಿಕ್ಷಕರ ಹುದ್ದೆಗೆ ಖಾಲಿ ಇದ್ದಂತಹ ಅಥವಾ ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಅವರು ಕೇಳುವಂತಹ ವಿದ್ಯಾರ್ಹತೆ ಡಿ.ಎಂ.ಸಿ., ಎ.ಎಂ., ಜಿ.ಡಿ. ಆರ್ಟ್ ಈ ಕೋರ್ಸ್‌ಗಳನ್ನು ಮುಗಿಸಿದವರಿಗೆ ಅವಕಾಶವಿತ್ತು. ಎ.ಟಿ.ಸಿ. ಮತ್ತು ಬಿ.ವಿ.ಇಡಿ ಕೋರ್ಸ್‌ಗಳನ್ನು ಮುಗಿಸಿದವರು ಕೆಲಸಕ್ಕೆ ಅರ್ಜಿ ಹಾಕಿದರೆ ಈ ಅರ್ಹತೆ ಅಥವಾ ಕೋರ್ಸ್‌ಗಳನ್ನು ಪರಿಗಣಿಸುತ್ತಿಲ್ಲ.

ಎ.ಟಿ.ಸಿ., ಎ.ಇಡಿ/ಬಿ.ವಿ.ಇಡಿ ತರಬೇತಿ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಪಠ್ಯಪುಸ್ತಕಗಳಿಲ್ಲ ದಿರುವುದು ಕೂಡ ಒಂದು ದೊಡ್ಡ ಸಮಸ್ಯೆಯಾಗಿದೆ. ಈ ಕೋರ್ಸ್‌ಗಳನ್ನು ಕಲಿಯಲು ಇಚ್ಛಿಸಿದಂತಹ ವಿದ್ಯಾರ್ಥಿಗಳು ಯಾವ ಪುಸ್ತಕಗಳನ್ನು ಓದಿ ಪರೀಕ್ಷೆಗೆ ಸಿದ್ಧರಾಗುವುದು? ಉಪನ್ಯಾಸಕರೂ ಯಾವ ಪುಸ್ತಕಗಳನ್ನು ಓದಿ ವಿದ್ಯಾರ್ಥಿಗಳಿಗೆ ತಿಳಿಸುವುದು? ಒಂದು ನಿರ್ದಿಷ್ಟವಾದ ಪುಸ್ತಕ ಪಠ್ಯಕ್ರಮಗಳಿಲ್ಲವಾದಲ್ಲಿ ಈ ತರಬೇತಿ ಕೋರ್ಸ್‌ಗಳನ್ನು ಕಲಿತಂತಹ ವಿದ್ಯಾರ್ಥಿಗಳ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಯಾವ ರೀತಿಯಲ್ಲಿ ಬೋಧನೆ ಮಾಡುತ್ತಾರೆ ಎಂಬಂತೆ ಹಲವಾರು ಪ್ರಶ್ನೆಗಳು ಉದ್ಭವವಾಗುತ್ತವೆ.

ಎ.ಟಿ.ಸಿ. ಮತ್ತು ಎ.ಇಡಿ/ಬಿ.ವಿ.ಇಡಿ ತರಬೇತಿ ಕೋರ್ಸ್‌ಗಳನ್ನು ಕಲಿತಂತಹ ವಿದ್ಯಾರ್ಥಿಗಳು ಒಂದು ವರ್ಷದ ಅವಧಿ ಮತ್ತು ಹಣಕಾಸನ್ನು ಕಳೆದುಕೊಂಡಿದ್ದಾರೆ. ಸಾಮಾನ್ಯವಾಗಿ ಚಿತ್ರಕಲಾ ಶಿಕ್ಷಣವನ್ನು ಪಡೆಯಲು ಬರುವಂತಹವರು ಶೇಕಡ ೫೯ರಷ್ಟು ಬಡವಿದ್ಯಾರ್ಥಿಗಳು ಗ್ರಾಮೀಣ ಭಾಗದ ವಿದ್ಯಾರ್ಥಿಗಳು. ಚಿತ್ರಕಲಾ ಶಿಕ್ಷಣವನ್ನು ಪಡೆಯುತ್ತಾರೆ. ಇಂಥ ವಿದ್ಯಾರ್ಥಿಗಳು ಸಾಲ ಮಾಡಿ ತಮ್ಮ ಶಿಕ್ಷಣವನ್ನು ಮುಗಿಸಿಕೊಂಡರೂ ಅವರಿಗೆ ಅದರಿಂದ ಯಾವುದೇ ರೀತಿಯ ಉಪಯೋಗವಿಲ್ಲದಿರುವುದನ್ನು ನೋಡುತ್ತೇವೆ.

ಪ್ರಸ್ತುತ ಸಂದರ್ಭದಲ್ಲಿ ಚಿತ್ರಕಲಾ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಪಿ.ಯು.ಸಿ. ಅರ್ಹತೆಯನ್ನು ಹೊಂದಿದರೆ ಮಾತ್ರ ಪ್ರವೇಶಕ್ಕೆ ಅನುವು ಮಾಡಿಕೊಡುತ್ತಿದ್ದಾರೆ. ಇದು ಯು.ಜಿ.ಸಿ. ನಿಯಮವಾಗಿದೆ.

ಇದರಿಂದಾಗಿ ಕಲಾಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಬೆರಳೆಣಿಕೆಯಷ್ಟು ಆಗಿರುವುದನ್ನು ಕಾಣಬಹುದು. ಹಿಂದೆ ಎಸ್.ಎಸ್.ಎಲ್.ಸಿ. ಆದ ಮೇಲೆ ಪ್ರವೇಶಕ್ಕೆ ಅನುವು ಇತ್ತು. ಇದರಿಂದ ಪ್ರತಿಯೊಂದು ಕಲಾಶಾಲೆಯಲ್ಲಿಯೂ ಸಹ ವಿದ್ಯಾರ್ಥಿಗಳ ದಾಖಲು ಸಂಖ್ಯೆ ಪ್ರತಿ ತರಗತಿಗೆ ಹದಿನೈದರಿಂದ ಇಪ್ಪತ್ತೈದರ ತನಕ ಪ್ರವೇಶವನ್ನು ವಿದ್ಯಾರ್ಥಿಗಳು ಪಡೆಯುತ್ತಿದ್ದರು. ಯು.ಜಿ.ಸಿ. ನಿಯಮಾನುಸಾರವಾಗಿ ಬಿ.ವಿ.ಎ. ಪದವಿಯನ್ನು ನಾಲ್ಕು ವರ್ಷ ಕಾಲ (ಅಂದರೆ ಎಂಟು ಸೆಮಿಟ್ಟರ್) ನಡೆಸಬೇಕೆಂಬುದಿದೆ. ಆದರೆ ಕರ್ನಾಟಕದಲ್ಲಿ ಕೆಲವೊಂದು ಕಲಾಶಾಲೆಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಕಲಾಶಾಲೆಗಳಲ್ಲಿ ಬಿ.ವಿ.ಎ. ಪದವಿಯನ್ನು ಮೂರು ವರ್ಷ ಅಥವಾ ಆರು ಸೆಮಿಸ್ಟರ್‌ಗಳಲ್ಲಿ ಮುಗಿಸುತ್ತಿದ್ದರು. ಇದರಿಂದಾಗಿ ಪ್ರಸ್ತುತ ಸಂದರ್ಭದಲ್ಲಿ ಮೂರು ಮತ್ತು ನಾಲ್ಕು ವರ್ಷದ ಬಿ.ವಿ.ಎ. ಪದವಿ ಕೋರ್ಸ್‌ನ್ನು ವಿದ್ಯಾರ್ಥಿಗಳು ಕಲಿಯ ಬೇಕಾಗಿದೆ. ಇದರಿಂದಾಗಿ ಅವರ ಸ್ಥಿತಿಯು ಚಿಂತಾಜನಕವಾಗಿದೆ. ಈ ಕುರಿತು ನಾವು ಕರ್ನಾಟಕ ಸರ್ಕಾರವು ರೂಪಿಸಿದ ಪಠ್ಯಕ್ರಮವನ್ನು ಅನುಸರಿಸಬೇಕೋ ಅಥವಾ ಯು.ಜಿ.ಸಿ. ನಿಯಮಾನುಸಾರವಾಗಿ ಪಠ್ಯಕ್ರಮವನ್ನು ಅನುಸರಿಸಬೇಕೋ ಎಂಬುದು ಗೊಂದಲವುಂಟಾಗಿದೆ.

ಕಲಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ಮಾಸಿಕ ಭತ್ಯೆಗಳ ಸಮಸ್ಯೆ

ಚಿತ್ರಕಲಾ ಶಾಲೆಯಲ್ಲಿನ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ವಿಷಯಗಳು ಹೆಚ್ಚಾಗಿ ಇರುವುದ ರಿಂದಾಗಿ ಅವರಿಗೆ ಶಿಷ್ಯವೇತನ ಇಲ್ಲವೆ ಮಾಸಿಕ ಭತ್ಯೆ ನೀಡಿದರೆ ಉಪಯೋಗವಾಗುತ್ತದೆ. ಪ್ರಾಯೋಗಿಕ ವಿಷಯಗಳಿಗೆ ಸಂಬಂಧಿಸಿದಂತೆ ಉಪಕರಣಗಳನ್ನು ಕೊಳ್ಳಲು ಮತ್ತು ಚಿತ್ರಕಲೆಯನ್ನು ಕಲಿಯುತ್ತಿರುವ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವುದರಿಂದ ಸಹಾಯಕವಾಗುತ್ತದೆ. ಆದರೆ ಈ ಯಾವ ಸೌಲಭ್ಯಗಳು ವಿದ್ಯಾರ್ಥಿಗಳಿಗೆ ಇಲ್ಲದಂತಾಗಿದೆ.

ಕಲಾ ವಿದ್ಯಾರ್ಥಿಗಳಿಗೆ ಕಲಾ ಪ್ರವಾಸ, ಕಲಾ ಶಿಬಿರ, ಪ್ರಾತ್ಯಕ್ಷಿಕೆಗಳ ಸಹಾಯಧನದ ಸಮಸ್ಯೆ

ಈ ರೀತಿಯ ಸಮಸ್ಯೆಗಳು ವಿದ್ಯಾರ್ಥಿಗಳಿಗೆ ಎದುರಾಗುತ್ತಿರುವುದನ್ನು ಕಾಣಬಹುದು. ಆದರೆ ಅಕಾಡೆಮಿಯಿಂದ ಈ ಸೌಲಭ್ಯ ವಿದ್ಯಾರ್ಥಿಗಳಿಗೆ ದೊರೆಯುತ್ತಿದೆ. ಆದರೆ ಕೆಲವೊಂದು ವಿದ್ಯಾರ್ಥಿಗಳಿಗೆ ಈ ಅವಕಾಶಗಳು ದೊರೆಯುತ್ತಿಲ್ಲ. ಅಂದಮಾತ್ರಕ್ಕೆ ಅವರು ಕಲಾಕೃತಿಗಳನ್ನು ಚೆನ್ನಾಗಿ ಮಾಡಿಲ್ಲವೆಂದಲ್ಲ. ಅಕಾಡೆಮಿಗಳಲ್ಲೂ ಸಹ ಪರಿಚಯವಿರುವವರಿಗೆ ಅಕಾಡೆಮಿ ಸದಸ್ಯರಿಗೆ ಪರಿಚಯವಿರುವವರಿಗೆ, ಅಧ್ಯಕ್ಷರ ಜೊತೆ ಒಡನಾಟವಿರುವವರಿಗೆ ಈ ಸೌಲಭ್ಯಗಳು ದೊರೆಯುತ್ತಿವೆ. ಅಲ್ಲಿಗೂ ಸಹ ಸರ್ಕಾರವು ಒಂದು ಬಾರಿ ಆಯ್ಕೆಯಾದಂತಹ ವಿದ್ಯಾರ್ಥಿಗೆ ಮುಂದಿನ ಮೂರು ವರ್ಷದವರೆಗೂ ಅರ್ಜಿ ಸಲ್ಲಿಸುವುದಕ್ಕೆ ಅವಕಾಶವಿಲ್ಲವೆಂದು ಆದೇಶದಲ್ಲಿದ್ದರೂ ಕೂಡ ಈ ವರ್ಷ ಆಯ್ಕೆಯಾದವರು ಮುಂದಿನ ವರ್ಷ ಮತ್ತೆ ಅರ್ಜಿ ಹಾಕಿ ಆಯ್ಕೆ ಯಾಗಿರುವುದನ್ನು ನಾವು ಗಮನಿಸಬಹುದು. ಈ ರೀತಿಯಾದ ಅವಕಾಶಗಳು ಪದೇ ಪದೇ

ಸಿಕ್ಕಂಥವರಿಗೆ ಸಿಕ್ಕರೆ ಯಾರಿಗೂ ಪರಿಚಯವಿಲ್ಲದ ವಿದ್ಯಾರ್ಥಿಗೆ ಈ ರೀತಿಯ ಸೌಲಭ್ಯಗಳು ಸಿಗುವುದು ಯಾವಾಗ? ಎಂಬುದು ಗೊತ್ತಾಗದಂತಾಗಿದೆ.

ಕಲಾವಿದರ ಕಲಾಕೃತಿಗಳ ಮಾರುಕಟ್ಟೆಯ ಸಮಸ್ಯೆ

ಕರ್ನಾಟಕದ ಕಲಾಶಾಲೆಗಳಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಒಂದು ವರ್ಷಕ್ಕೆ ನೂರಾರು ವಿದ್ಯಾರ್ಥಿಗಳು ಹೊರಬರುತ್ತಿದ್ದಾರೆ. ಈ ರೀತಿ ಹೊರ ಬಂದವರು ಶಿಕ್ಷಕರಾಗಿ ಕಮರ್ಷಿಯಲ್ ವರ್ಕ್ಸ್ ಮತ್ತೆ ಹಲವು ಕೆಲಸಗಳಲ್ಲಿ ಭಾಗವಹಿಸಿಕೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಇನ್ನೂ ಕೆಲವರು ಕಲಾಕೃತಿಯನ್ನು ರಚಿಸಿಕೊಂಡು ಕಲಾಕೃತಿಗಳನ್ನೇ ತನ್ನ ಜೀವನ ಅಂದು ಕೊಂಡವರಿಗೆ ಪ್ರಪಂಚದಲ್ಲಿ ಅವರು ರಚಿಸಿದ ಕಲಾಕೃತಿಗಳಿಗೆ ಒಂದು ಉತ್ತಮವಾದ ಮಾರುಕಟ್ಟೆಯಿಲ್ಲದಂತಾಗಿದೆ. ಇದರಿಂದ ಕಲಾಕೃತಿಗಳನ್ನು ನಂಬಿಕೊಂಡಿರುವ ಕಲಾವಿದರ ಪಾಡಾದರೂ ಏನು? ಎಂಬುದನ್ನು ಕಲಾವಿದರಿಗೆ ತಿಳಿಸುವಂತಾಗಬೇಕಾಗಿದೆ.

ದೃಶ್ಯಕಲಾ ಶಿಕ್ಷಣದ ಶೈಕ್ಷಣಿಕ ಸಮಸ್ಯೆಗಳು

ಕಲಾಶಾಲೆಗಳಲ್ಲಿ ಸಾಮರ್ಥ್ಯ ಮತ್ತು ತರಬೇತಿ ಹೊಂದಿದ ಶಿಕ್ಷಕರ ಕೊರತೆ

ಕರ್ನಾಟಕದ ಅನೇಕ ಕಲಾಶಾಲೆಗಳಲ್ಲಿ ಇಂತಹ ಶಿಕ್ಷಕರು ಅಥವಾ ಉಪನ್ಯಾಸಕರು ಇಲ್ಲದಿರುವುದನ್ನು ನೋಡುತ್ತೇವೆ. ಪ್ರಸ್ತುತ ಸಂದರ್ಭದಲ್ಲಿ ಬೋಧನೆಯನ್ನು ಮಾಡುತ್ತಿರುವಂತಹ ಅನೇಕರ ಸಾಮರ್ಥ್ಯ ಮತ್ತು ತರಬೇತಿಯನ್ನು ಹೊಂದಿದವರಿಲ್ಲ. ಅಂದರೆ ಉದಾ:- ಡಿ.ಇಡಿಯನ್ನು ಉತ್ತೀರ್ಣ ಮಾಡಿಕೊಂಡು ಅವರು ಶಿಕ್ಷಕರ ಉದ್ಯೋಗ ಬಂದು ಅಲ್ಲಿ ಕೆಲವು ದಿನಗಳ ಕಾಲ ತರಬೇತಿಯನ್ನು ನೀಡುತ್ತಾರೆ. ಆದರೆ ಚಿತ್ರಕಲೆಯಲ್ಲಿ ಹೆಚ್ಚು ಪ್ರಾಯೋಗಿಕ ವಿಷಯವಿದ್ದರೂ ಸಹ ವಿಷಯದ ಅರಿವಿನ ಸಾಮರ್ಥ್ಯ ಮತ್ತು ತರಬೇತಿ ಕಡ್ಡಾಯವಾಗಿದ್ದರೆ ಭವಿಷ್ಯದ ವಿದ್ಯಾರ್ಥಿಗಳಿಗೆ ಉತ್ತಮವಾದ ಶಿಕ್ಷಣವನ್ನು ನೀಡಬಹುದಾಗಿದೆ.

ಪರೀಕ್ಷಾ ಪದ್ಧತಿಯನ್ನು ಬಿಗಿಗೊಳಿಸುವುದು

ಕರ್ನಾಟಕದ ಚಿತ್ರಕಲಾ ಶಾಲೆಗಳಲ್ಲಿ ಬೋಧನೆ ಪದ್ಧತಿಯ ಬಗ್ಗೆ ಹೇಳಬೇಕೆಂದರೆ ಪ್ರಾಯೋಗಿಕ ವಿಷಯವನ್ನು ಹೊರತುಪಡಿಸಿ ಇನ್ನುಳಿದ ವಿಷಯಗಳಾದ ಕನ್ನಡ, ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳಿಗೆ ಸಂಬಂಧಿಸಿದಂತೆ ವಿಷಯಗಳಲ್ಲಿ ಪರಿಣಾಮಕಾರಿಯಾಗಿ ಬೋಧನೆ ಮಾಡುವುದು ವಿರಳ. ಶೈಕ್ಷಣಿಕ ವರ್ಷದ ಕೊನೆಯ ಎರಡು ತಿಂಗಳುಗಳಲ್ಲಿ ಮಾತ್ರ ಕರ್ನಾಟಕದ ಅನೇಕ ಚಿತ್ರಕಲಾ ಶಾಲೆಗಳಲ್ಲಿ ಬೋಧನೆ ಮಾಡುವುದನ್ನು ಕಾಣಬಹುದು. ಇದರಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಯಾಕೆಂದರೆ ವರ್ಷಾನುಗಟ್ಟಲೇ ಮಾಡಿದ ಪಾಠಗಳನ್ನು ಓದಿಕೊಂಡು ಬರೆಯುವುದೇ ಕಷ್ಟವಾಗುತ್ತದೆ. ಕಡೆಯ ಎರಡು ತಿಂಗಳು ಬೋಧಿಸುವಂತಹ ಪಾಠಗಳನ್ನು ವಿದ್ಯಾರ್ಥಿಗಳು ತಿಳಿದುಕೊಂಡು ಮತ್ತೆ ಅವುಗಳನ್ನು ಓದಿ ಪರೀಕ್ಷೆಯನ್ನು ಹೇಗೆ ಎದುರಿಸುತ್ತಾರೆಂಬ ಹಲವಾರು ರೀತಿಯ ತೊಂದರೆಗಳನ್ನು ವಿದ್ಯಾರ್ಥಿಗಳು ಅನುಭವಿಸುತ್ತಿರುವುದನ್ನು ಕಾಣುತ್ತೇವೆ.

ಪಠ್ಯ ಬೋಧನೆಯಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸದೇ ಇರುವುದು

ಕರ್ನಾಟಕದಲ್ಲಿರುವ ಅನೇಕ ಕಲಾ ಶಾಲೆಗಳಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ ಮಾಡುವುದು ಕಡಿಮೆ. ಯಾಕೆಂದರೆ ಸರಿಯಾದ ಹಣಕಾಸಿನ ವ್ಯವಸ್ಥೆ ಸಂಸ್ಥಾಪಕರೊಂದಿಗಿರುವ ಸಮಸ್ಯೆಯಿಂದಾಗಿ ಕಷ್ಟಸಾಧ್ಯ. ಇಂದಿನ ಸಂದರ್ಭದಲ್ಲಿ ಕಲಾ ಚಟುವಟಿಕೆಗಳು ಪ್ರಪಂಚದ ಮೂಲೆ ಮೂಲೆಯಲ್ಲೂ ನಡೆಯುತ್ತಿರುವುದನ್ನು ಗಮನಿಸಬಹುದು. ಇಂತಹ ವಿಷಯಗಳನ್ನು ಕಲಾಶಾಲೆಯ ಅಥವಾ ಕಲಾ ವಿದ್ಯಾರ್ಥಿಗಳು ಎಲ್ಲರೂ ನೋಡಿಕೊಳ್ಳಬೇಕಾದ ಸಂಗತಿ. ಏಕೆಂದರೆ ಇಂದಿನ ಜಾಗತಿಕ ಮಟ್ಟದಲ್ಲಿ ಅದರಲ್ಲೂ ನಮ್ಮ ದೃಶ್ಯಕಲಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತಂತ್ರಜ್ಞಾನದ ಬಳಕೆ ಹೆಚ್ಚಿರುವುದರಿಂದ ಇಂದು ಕಡ್ಡಾಯವಾಗಿ ಎಲ್ಲಾ ವಿದ್ಯಾರ್ಥಿಗಳು ಇದರ ಜ್ಞಾನ ಪಡೆಯುವುದು ಅಗತ್ಯವಾಗಿದೆ. ಈ ಕಾರಣದಿಂದಾಗಿ ಇಂದಿನ ಸಂದರ್ಭದಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸದೇ ಇರುವುದು ವಿದ್ಯಾರ್ಥಿಗಳಿಗೆ ಬಾರಿ ಹಿನ್ನಡೆಯಾಗುವುದು. ಅವರು ಇಂತಹ ಅನೇಕ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಎದುರಿಸುತ್ತಿರುವುದನ್ನು ನೋಡುತ್ತೇವೆ ಹಾಗೂ ಆಧುನಿಕ ತಂತ್ರಜ್ಞಾನಕ್ಕೆ ಶಿಕ್ಷಕರು ಕೂಡ ಅಧ್ಯಯನದಲ್ಲಿ ನಿರತರಾಗಿರಬೇಕಾಗಿರುವುದೇ ಕ್ಷೇತ್ರದ ದೊಡ್ಡ ಕೊರತೆಯಾಗಿದೆ.

ಪ್ರಾಯೋಗಿಕತ್ವದ ಕೊರತೆ

ಕರ್ನಾಟಕದ ಕಲಾಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ನುರಿತ ಶಿಕ್ಷಕರಿಂದ ಅಥವಾ ಹಿರಿಯ ಕಲಾವಿದರಿಂದ ಪ್ರಾಯೋಗಿಕವಾಗಿ ಕಲಾಕೃತಿಗಳನ್ನು ಯಾವ ರೀತಿ ರಚನೆ ಮಾಡಬೇಕು ಎಂಬುದನ್ನು ಹೇಳಿಕೊಡುವುದಿಲ್ಲ. ಕಲಾ ವಿದ್ಯಾರ್ಥಿಗಳಿಗೆ ಮುಖ್ಯವಾಗಿ ಪ್ರಾಯೋಗಿಕವಾದಂತಹ ವಿಷಯಗಳು ಹೆಚ್ಚಾಗಿರುವುದರಿಂದ ಇವರಿಗೆ ಮೊದಲು ಕ್ಯಾನ್ವಾಸ್ ಹಿಡಿಯುವುದರಿಂದ ಹಿಡಿದು ಬಣ್ಣ ಲೇಪಿಸುವ ಹಂತ ಹಂತವಾದ ವಿಧಾನಗಳನ್ನು ವಿದ್ಯಾರ್ಥಿಗಳಿಗೆ ತಿಳಿಹೇಳಬೇಕಾಗುವುದು. ಇಂತಹ ನಿಟ್ಟಿನಲ್ಲಿ ಕರ್ನಾಟಕದ ಕೆಲವು ಕಲಾ ಕಾಲೇಜುಗಳ ಉಪನ್ಯಾಸಕರಿಗೆ ಇವುಗಳ ಬಗ್ಗೆ ಅರಿವಿಲ್ಲದಿರುವುದು ಸಂಶೋಧನೆಯಿಂದ ತಿಳಿದುಬಂದಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಕಲಾಶಿಕ್ಷಣ ಪಡೆಯುವಲ್ಲಿ ದೊಡ್ಡ ಸಮಸ್ಯೆಯಾಗಿದೆ.

ಖಾಸಗಿ ಅನುದಾನರಹಿತ ಶಾಲೆಗಳಿಗೆ ಅನುದಾನದ ಸಮಸ್ಯೆ

ಕೆಲವು ಕಲಾಶಾಲೆಗಳು ಪ್ರಾರಂಭವಾಗಿ ಇಪ್ಪತ್ತೈದು ವರ್ಷಗಳಾಗಿದ್ದರೂ ಕೂಡ ಅನುದಾನ ವನ್ನು ಸರ್ಕಾರ ನೀಡಿರುವುದಿಲ್ಲ. ಕಲಾಶಾಲೆಯ ಸಂಸ್ಥಾಪಕರು ಕಲಾಶಾಲೆಯನ್ನು ಹೇಗೆ ತಾನೇ ಮುನ್ನಡೆಸುತ್ತಾನೆ? ಕೆಲವೊಂದು ಕಾಲೇಜುಗಳು ಸ್ವಂತ ಕಟ್ಟಡವಿಲ್ಲದೆ ಬಾಡಿಗೆ ಕಟ್ಟಡದಲ್ಲಿರುವುದನ್ನು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ. ಇಂತಹ ಪರಿಸ್ಥಿತಿಯಲ್ಲಿ ಸಂಸ್ಥಾಪಕರು, ವಿದ್ಯಾರ್ಥಿಗಳು ತುಂಬುವಂತಹ ಶುಲ್ಕದಿಂದ ಶಾಲೆಯ ಆಡಳಿತ ನಡೆಸಬೇಕೆ? ಕಟ್ಟಡಕ್ಕೆ ಬಾಡಿಗೆ ನೀಡಬೇಕೆ? ಅಥವಾ ಶಿಕ್ಷಕರಿಗೆ ವೇತನವನ್ನು ಕೊಡಬೇಕೆ? ಎಂಬ ಹಲವಾರು ಪ್ರಶ್ನೆಗಳು ಏಳುತ್ತವೆ! ಪ್ರಸ್ತುತ ಸಂದರ್ಭದಲ್ಲಿ ಕಲಾಶಾಲೆಗಳು ಒಂದೊಂದಾಗಿ ಮುಚ್ಚುತ್ತಿರುವುದನ್ನು ಗಮನಿಸಬಹುದು.

ಪ್ರಾಚಾರ್ಯರಿಗೆ ಮುಂಬಡ್ತಿ ಇಲ್ಲದಿರುವುದು

ಕಲಾಶಾಲೆಗಳ ಪ್ರಾಚಾರ್ಯರಿಗಾಗಲಿ, ಉಪನ್ಯಾಸಕರಿಗಾಗಲಿ ಮುಂಬಡ್ತಿ ಇಲ್ಲದಿರುವುದನ್ನು ಚಿತ್ರಕಲಾ ಶಾಲೆಗಳಲ್ಲಿ ಕಾಣಬಹುದು. ಆದರೆ ಕಲಾಶಾಲೆಗಳನ್ನು ಬಿಟ್ಟು ಉಳಿದೆಲ್ಲಾ ಪ್ರಾಚಾರ್ಯರು, ಉಪನ್ಯಾಸಕರಿಗೆ ಮುಂಬಡ್ತಿ ನೀಡಿರುವುದನ್ನು ಗಮನಿಸಬಹುದು. ಆದರೆ ಚಿತ್ರಕಲಾಶಾಲೆಗಳಲ್ಲಿ ಈ ರೀತಿಯ ವ್ಯವಸ್ಥೆ ಇಲ್ಲದಂತಾಗಿದೆ.

ಸರ್ಕಾರಿ ನೇಮಕಾತಿ

ಪ್ರಾಥಮಿಕ, ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರನ್ನು ಕಡ್ಡಾಯವಾಗಿ ನೇಮಿಸಿಕೊಳ್ಳಬೇಕೆನ್ನುವುದು ಸರ್ಕಾರದ ಆದೇಶ. ಆದರೆ ಸರ್ಕಾರಿ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರ ನೇಮಕಾತಿ ಆಗಿರುವುದು ಕಡಿಮೆ. ಆದರೆ ಬಹುತೇಕ ಖಾಸಗಿ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರನ್ನು ನೇಮಿಸಿಕೊಂಡಿರುವುದನ್ನು ಕಾಣುತ್ತೇವೆ. ಆದರೆ ಚಿತ್ರಕಲಾ ಶಾಲೆಗಳಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವಂತಹ ಶಿಕ್ಷಕರು ನಿವೃತ್ತಿ ಹೊಂದಿದ್ದರೂ ಸಹ ಅವರ ಆ ಜಾಗಕ್ಕೆ ಮತ್ತೊಬ್ಬ ಶಿಕ್ಷಕರ ನೇಮಕಾತಿಯನ್ನು ಮಾಡಲು ಸರ್ಕಾರದ ಅನುಮತಿ ಇಲ್ಲ. ಇದರಿಂದಾಗಿ ಕೆಲವು ಕಲಾಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದರೂ ಶಿಕ್ಷಕರ ಸಂಖ್ಯೆ ಕಡಿಮೆ ಇರುವುದನ್ನು ಕಾಣಬಹುದು. ಇದರಿಂದ ವಿದ್ಯಾರ್ಥಿಗಳು ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ.

ಏಕರೂಪ ಪಠ್ಯಕ್ರಮಗಳಿಲ್ಲದಿರುವುದು

ಕರ್ನಾಟಕದಲ್ಲಿ ಚಿತ್ರಕಲಾ ಕಾಲೇಜುಗಳಲ್ಲಿ ಏಕರೂಪದ ಪಠ್ಯಕ್ರಮವಿಲ್ಲದಂತಾಗಿದೆ. ಕರ್ನಾಟಕದಲ್ಲಿರುವ ವಿಶ್ವವಿದ್ಯಾಲಯಗಳ ಅಡಿಯಲ್ಲಿ ನಡೆಯುತ್ತಿರುವ ಕಲಾಶಿಕ್ಷಣ ಒಂದೇ ರೀತಿಯಾಗಿರಬೇಕು. ಆದರೆ ಒಂದೊಂದು ವಿಶ್ವವಿದ್ಯಾಲಯದಲ್ಲೂ ಒಂದೊಂದು ರೀತಿಯ ಪಠ್ಯಕ್ರಮವನ್ನು ನೋಡಬಹುದು. ವಿಶ್ವವಿದ್ಯಾಲಯಗಳಿಗೂ ಅಲ್ಪಸ್ವಲ್ಪ ಬದಲಾವಣೆಯನ್ನು ಮಾಡಲು ಅವಕಾಶವಿರುತ್ತದೆ. ಇದರಿಂದ ಕೆಲವು ಅಂಶಗಳನ್ನು ಮಾತ್ರ ಬದಲಾಯಿಸಿರುತ್ತಾರೆ. ಆದರೆ ಬೇರೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಂದರೆ ವಿಜ್ಞಾನ, ಸಮಾಜ, ಕಲಾ ವಿಷಯಗಳನ್ನು ತೆಗೆದು ಕೊಂಡರೂ ಕರ್ನಾಟಕದಲ್ಲಿ ಯಾವ ವಿಶ್ವವಿದ್ಯಾಲಯದಲ್ಲಾಗಲಿ ಒಂದೇ ರೀತಿಯಾದ ಪಠ್ಯಕ್ರಮವನ್ನು ನಾವು ನೋಡುತ್ತೇವೆ. ಅಂಕಗಳಲ್ಲಿಯೂ ಸಹ ಒಂದೇ ರೀತಿಯಾಗಿರುತ್ತದೆ. ಆದರೆ ಚಿತ್ರಕಲಾ ಕ್ಷೇತ್ರಕ್ಕೆ ಬಂದಂತಹ ಸಂದರ್ಭದಲ್ಲಿ ಪಠ್ಯಕ್ರಮಗಳಲ್ಲಿ, ಅಂಕಪಟ್ಟಿಗಳಲ್ಲಿ ಏಕರೂಪತೆಯಿಲ್ಲದೇ ಇರುವುದನ್ನು ಕಾಣುತ್ತೇವೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ, ಉಪನ್ಯಾಸಕರಿಗೆ ಹಲವಾರು ಸಮಸ್ಯೆಗಳು ಎದುರಾಗಿರುವುದನ್ನು ಕಾಣುತ್ತೇವೆ. ಇದರಿಂದ ವೃಂದ ಮತ್ತು ನೇಮಕಾತಿಯಲ್ಲಿ ಹಲವಾರು ಗೊಂದಲಗಳಾಗಿ ಸುಮಾರು ೪೫೦ಕ್ಕೂ ಅಧಿಕ ಕೆ.ಪಿ.ಎಸ್.ಸಿ. ಚಿತ್ರಕಲಾ ಶಿಕ್ಷಕರ ನೇಮಕಾತಿಯಲ್ಲಿ ಕೋರ್ಟ್ ಮೆಟ್ಟಲೇರಿ ಉದ್ಯೋಗದಿಂದ ವಂಚಿತರಾಗಿದ್ದಾರೆ.

ಬೇರೆ ಬೇರೆ ಭಾಷೆಗಳಲ್ಲಿ ಅವರ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಪಠ್ಯ ಗ್ರಂಥಗಳನ್ನು ನೋಡಬಹುದು. ಆದರೆ ನಮ್ಮ ಕಲಾ ಶಿಕ್ಷಣ ನಿರ್ದಿಷ್ಟವಾದಂತಹ ಪಠ್ಯಕ್ರಮಗಳಿಲ್ಲದೆ ಇರುವುದನ್ನು

ಕಾಣುತ್ತೇವೆ. ಇದರಿಂದಾಗಿ ಉಪನ್ಯಾಸಕರು, ವಿದ್ಯಾರ್ಥಿಗಳು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಕಲಾ ಸಾಹಿತಿಗಳನ್ನು ಸರಿಯಾಗಿ ಉಪಯೋಗಿಸಿಕೊಂಡಿಲ್ಲ

ಕಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿ ಬರವಣಿಗೆಯನ್ನು ಮಾಡುವವರು, ಮಾಡುತ್ತಿರುವವರು ಅನೇಕರಿದ್ದಾರೆ. ಆದರೆ ಅವರೆಲ್ಲರನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ಇದರಿಂದ ನೊಂದ ಕಲಾ ಸಾಹಿತಿಗಳು ಈ ವಿಷಯದ ಬಗ್ಗೆ ಬೇಸರವನ್ನು ವ್ಯಕ್ತಪಡಿಸುವುದನ್ನು ನಾವು ಕಾಣುತ್ತೇವೆ.

ಪ್ರಸ್ತುತ ಸಂದರ್ಭ ಯಾವ ಕಲಾ ಸಾಹಿತಿ, ವಿಮರ್ಶಕ ಬರಹಗಾರರು ಇದ್ದಾರೋ ಅವರೆಲ್ಲರೂ ಕೂಡ ಅನೇಕ ಪುಸ್ತಕಗಳನ್ನು ಬರೆದಿದ್ದರೂ ಆರ್ಥಿಕ ಕಾರಣಗಳಿಂದ ಅದನ್ನು ಪ್ರಕಟಣೆ ಮಾಡಿದೇ ಇರುವುದನ್ನು ನಾವು ಕಾಣುತ್ತೇವೆ. ಕೆಲವೊಂದು ಅಕಾಡೆಮಿಗಳು ಪುಸ್ತಕ ಮುದ್ರಣಕ್ಕೆ ಧನಸಹಾಯವನ್ನು ಒದಗಿಸುತ್ತವೆ. ಕೆಲವು ಇಲಾಖೆಯಲ್ಲಿ ಪರಿಚಯವಿರುವವರಿಗೆ ಮತ್ತು ಉನ್ನತ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಿಸುವವರಿಗೆ ಇಂತಹ ಅವಕಾಶಗಳು ಸಿಗುತ್ತಿರುವುದನ್ನು ಸಾಮಾನ್ಯವಾಗಿ ನೋಡಬಹುದು. ಕೆಲವೊಂದು ಕಲಾಸಕ್ತರು, ಪುಸ್ತಕ ಪ್ರಕಟಣೆಗೆ ಆರ್ಥಿಕ ನೆರವು ಕೇಳಿದರೂ ಕೂಡ ಅವರು ಅವರೊಂದಿಗೆ ಹೊಂದಾಣಿಕೆ ಸರಿಯಿಲ್ಲದಿದ್ದರೆ ಆ ಪುಸ್ತಕ ಎಷ್ಟು ಅದ್ಭುತವಾಗಿ ಬರೆದಿದ್ದರೂ ಅದಕ್ಕೆ ಧನಸಹಾಯ ಅಥವಾ ಆರ್ಥಿಕ ನೆರವು ಸಿಗದೇ ಇರುವುದನ್ನು ಪ್ರಸ್ತುತ ಸಂದರ್ಭದಲ್ಲಿ ನೋಡುತ್ತೇವೆ. ಕೆಲವು ವಿಶ್ವವಿದ್ಯಾಲಯಗಳು ಕಲಾ ಪುಸ್ತಕ ಪ್ರಕಟಣೆಗೆ ಆಸಕ್ತಿ ತೋರದೇ ಇರುವುದು ಒಂದು ದೊಡ್ಡ ದುರಂತ. ಕಾರಣ ಕಲಾವಿದರು, ಕಲಾಸಾಹಿತಿಗಳು ಏನು ಬರೆಯುತ್ತಾರೆ ಎಂಬ ತಪ್ಪು ತಿಳಿವಳಿಕೆಯಿಂದ ಅಥವಾ ಅಸಡ್ಡೆಯಿಂದ ನೋಡುವುದನ್ನು ಕಾಣುತ್ತೇವೆ.

ಕಲಾ ವಿದ್ಯಾರ್ಥಿಗಳಿಗೆ ಓದುವ ಹವ್ಯಾಸ ಬೆಳೆಸಿಲ್ಲ

ಕಲಾಶಾಲೆಗಳಲ್ಲಿ ಹೆಚ್ಚು ಪ್ರಾಯೋಗಿಕವಾದಂತಹ ವಿಷಯಗಳು ಇರುವುದರಿಂದ ವಿದ್ಯಾರ್ಥಿಗಳು ಹೆಚ್ಚು ತನ್ನ ಕಲಾಕೃತಿಗಳ ರಚನೆಯಲ್ಲಿ ತೊಡಗಿರುತ್ತಾರೆ. ನಾವು ಮಾಡುತ್ತಿರುವ ಕೋರ್ಸ್‌ನಲ್ಲಿ ಕಲಾ ಇತಿಹಾಸ, ಕಲಾತತ್ವ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಕೆಲವೇ ವಿಷಯಗಳಿರುತ್ತವೆ. ಇದಕ್ಕೆ ಸಂಬಂಧಿಸಿದಂತೆ ಅಂದರೆ ಈ ವಿಷಯಗಳನ್ನು ಹೇಳುವಂತಹ ಅಥವಾ ಒಂದೊಂದು ವಿಷಯದಲ್ಲಿ ಪರಿಣಿತಿಯನ್ನು ಪಡೆದವರು ಕರ್ನಾಟಕದಲ್ಲಿ ವಿರಳ. ಆದ್ದರಿಂದ ಸಿದ್ಧಾಂತ ಪತ್ರಿಕೆಯ ಅರ್ಥ ಮತ್ತು ಮಹತ್ವ ಗೊತ್ತಿರುವವರು ಆ ವಿದ್ಯಾರ್ಥಿಗಳಿಗೆ ಹಲವು ಪಸ್ತಕಗಳನ್ನು ಓದಲು ಪ್ರೇರೇಪಿಸುವರು. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಬೆಳೆಯುತ್ತಿತ್ತು. ಆದರೆ ಪ್ರತಿದಿನ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಕೂಡ ಪ್ರಾಯೋಗಿಕವಾದ ವಿಷಯದಲ್ಲಿ ತೊಡಗಿರುತ್ತಾರೆ. ಈ ವಿಷಯದ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಸಮಯದಲ್ಲಿ ಓದಲು

ಪ್ರಯತ್ನಿಸುತ್ತಾರೆ. ಆ ಸಂದರ್ಭದಲ್ಲಿ ಅವರು ಓದಿದಂತಹ ಅಂಶಗಳು ಅವರಲ್ಲಿ ಉಳಿಯುವುದಿಲ್ಲ. ಇಂತಹ ಕಾರಣದಿಂದ ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸವು ಇರಬೇಕು. ಇಲ್ಲದಿದ್ದರೆ ಕೆಲವೊಂದು ವಿಚಾರಗಳನ್ನು ತಿಳಿದುಕೊಳ್ಳಲು ತೊಂದರೆಗಳಾಗುತ್ತವೆ.

ಕಲಾ ಗ್ರಂಥಗಳ ಪ್ರಕಾಶನದ ವ್ಯವಸ್ಥೆ ಇಲ್ಲ

ಕಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದಂತಹ ಪ್ರಕಾಶನಗಳಿಲ್ಲದಿರುವುದು ನಮ್ಮ ಚಿತ್ರಕಲಾ ಶಿಕ್ಷಣಕ್ಕೆ ಅಥವಾ ಕರ್ನಾಟಕ ಕಲಾಶಾಲೆಗಳಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಆ ವಿಷಯಕ್ಕೆ ಮತ್ತು ಕಲೆಯ ಬಗ್ಗೆ ತಿಳಿದುಕೊಂಡಿರುವವರು ಈ ಕಲಾ ಗ್ರಂಥಗಳ ಪ್ರಕಾಶನ ಅಥವಾ ಪ್ರಕಾಶಕರಾಗಬೇಕಾದ ಅಗತ್ಯವಿದೆ.

ತೌಲನಿಕ ಅಧ್ಯಯನಗಳಿಲ್ಲ

ಚಿತ್ರಕಲೆಗೆ ಸಂಬಂಧಿಸಿದಂತಹ ಅಧ್ಯಯನದಲ್ಲಿ ಸಮಕಾಲೀನವಾದಂತಹ ಅಥವಾ ಒಂದೇ ರೀತಿಯ ರೂಪರೇಷೆಗಳನ್ನು ಹೊಂದಿದ ಇಲ್ಲವೇ ಒಂದೇ ರೀತಿಯ ಮಾಧ್ಯಮವನ್ನು ಬಳಸಿಕೊಂಡು ರಚನೆಗೊಂಡ ಎರಡು ಕಲಾ ಪ್ರಕಾರಗಳನ್ನು ಕುರಿತು ಅಧ್ಯಯನಗಳು ನಮ್ಮ ಕ್ಷೇತ್ರದಲ್ಲಿ ನಡೆದಿಲ್ಲ. ಈ ಅಧ್ಯಯನದಲ್ಲಿ ಆಯ್ದುಕೊಂಡಂತಹ ಕಲಾ ಪ್ರಕಾರಗಳಿಗೆ ಸಂಬಂಧಿಸಿದಂತೆ ಅವುಗಳ ಮಧ್ಯದಲ್ಲಿರುವಂತಹ ವ್ಯತ್ಯಾಸಗಳು, ಹೊಂದಾಣಿಕೆಗಳು, ಸಹ ಸಂಬಂಧಗಳು ಹಾಗೂ ಭಿನ್ನತೆ ಮತ್ತು ಸಾಮ್ಯತೆಗೆ ಸಂಬಂಧಿಸಿದಂತಹ ಕಾರಣಗಳು ಕಂಡುಬರುತ್ತವೆ. ಈ ರೀತಿಯ ಅಧ್ಯಯನಗಳು ದೃಶ್ಯಕಲಾ ಶಿಕ್ಷಣ ಕ್ಷೇತ್ರದಲ್ಲಿ ನಡೆಯದೇ ಇರುವುದನ್ನು ಕಾಣಬಹುದು.

ಆರ್ಟ್ ನಿಯತಕಾಲಿಕೆಗಳು

ಕರ್ನಾಟಕದ ಅನೇಕ ಚಿತ್ರಕಲಾ ಕಾಲೇಜುಗಳಲ್ಲಿ ಆರ್ಟ್ ನಿಯತಕಾಲಿಕೆಗಳನ್ನು ತರಿಸುವುದೇ ಇಲ್ಲ, ಇದರಿಂದಾಗಿ ಇಲ್ಲಿ ಕಲಿಯುವಂತಹ ವಿದ್ಯಾರ್ಥಿಗಳಿಗೆ ನಾನಾ ಭಾಗಗಳಲ್ಲಿ ನಡೆಯುವಂತ ಕಲಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಾಹಿತಿಯೇ ಇರುವುದಿಲ್ಲ. ಕಾರಣ ಇಂತಹ ನಿಯತಕಾಲಿಕೆಗಳನ್ನು ಕಾಲಾ ಕಾಲೇಜುಗಳಿಗೆ ತರಿಸಿಕೊಂಡರೆ ವಿದ್ಯಾರ್ಥಿಗಳಿಗೆ ಕಲೆಯ ಕುರಿತು ಮಾಹಿತಿಯನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ.

ಶಾಸ್ತ್ರ ವಿಷಯಗಳಿಗೆ ಹೆಚ್ಚಿನ ಒತ್ತು ನೀಡದಿರುವುದು

ಪದವಿ ಶಿಕ್ಷಣವು ಮತ್ತು ಸ್ನಾತಕೋತ್ತರ ಪದವಿ ಶಿಕ್ಷಣವು ಜ್ಞಾನ ಪ್ರಧಾನವಾಗಿರುವುದರಿಂದ ಇಲ್ಲಿ ಪ್ರಾಯೋಗಿಕ ವಿಷಯಗಳಿಗಿಂತ ಶಾಸ್ತ್ರ ವಿಷಯಗಳಿಗೆ ಹೆಚ್ಚು ಒತ್ತು ಮತ್ತು ಒಲವು ಬೇಕಾಗುತ್ತದೆ. ಡಿಪ್ಲೋಮಾ ಶಿಕ್ಷಣದಲ್ಲಾದರೆ ಅವು ಕೌಶಲ್ಯ ಪ್ರಧಾನವಾಗಿರುವುದರಿಂದ ಶಾಸ್ತ್ರ ವಿಷಯಗಳಿಗೆ ಹೆಚ್ಚು ಒತ್ತು ನೀಡಿರುವುದಿಲ್ಲ. ಹಾಗಾಗಿ ಶಾಸ್ತ್ರ ವಿಷಯಗಳಿಗೆ ಹೆಚ್ಚಿನ ಒತ್ತು ನೀಡಬೇಕಾದ ಅಗತ್ಯವಿದೆ.

ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಪ್ರಜ್ಞೆ ಮತ್ತು ಅಧ್ಯಯನಶೀಲತೆಯ ಕೊರತೆ

ಕಲಾ ವಿದ್ಯಾರ್ಥಿಗಳಿಗೆ ಕಲಾಕೃತಿಯಲ್ಲಿ ಆಸಕ್ತಿಯಿರುವಂತೆ ಇತರ ವಿಷಯಗಳಲ್ಲೂ ಆಸಕ್ತಿ ಇರಬೇಕಾಗುತ್ತದೆ. ಇದರಿಂದಾಗಿ ಸೃಜನಾತ್ಮಕವಾದ ಹೊಸ ಹೊಸ ವಿಚಾರಗಳು ಹೊರಬರುತ್ತವೆ. ವಿದ್ಯಾರ್ಥಿಗಳು ಅಧ್ಯಯನದಲ್ಲಿ ತೊಡಗುವುದು ಕಡಿಮೆ. ಯಾಕೆಂದರೆ ಪ್ರಾಯೋಗಿಕವಾದಂತಹ ವಿಷಯಗಳು ಹೆಚ್ಚು ಇರುವುದರಿಂದ ಓದುವ ಹವ್ಯಾಸ ಕಡಿಮೆಯಾಗಿರುತ್ತದೆ. ಅದು ಸಹಜವೂ ಕೂಡ ಹೌದು.

ಚಿತ್ರಕಲಾ ಉಪನ್ಯಾಸ: ಚಿತ್ರಕಲೆಯು ಸೃಜನಶೀಲತೆಗೆ ಸಂಬಂಧಿಸಿದಂತೆ ಪ್ರಾಯೋಗಿಕವಾದ ವಿಷಯ ಹೆಚ್ಚು ಇರುವುದನ್ನು ನಾವು ಕಾಣಬಹುದು. ಎಲ್ಲವನ್ನು ಪ್ರಾಯೋಗಿಕವಾಗಿ ಹೇಳಲು ಸಾಧ್ಯವಿಲ್ಲ. ಕಲಾ ಶಿಕ್ಷಣಕ್ಕೆ, ಇತಿಹಾಸಕ್ಕೆ ಸಂಬಂಧಿಸಿದಂತಹ ವಿಷಯಗಳನ್ನು ಉಪನ್ಯಾಸಕರೂ ಬೋಧಿಸುತ್ತಾರೆ. ಆದರೂ ಸಹ ನುರಿತ ಮತ್ತು ಅನುಭವವಿರುವಂತಹ ಚಿತ್ರಕಲಾ ವಿದ್ವಾಂಸರು, ವಿಮರ್ಶಕರು, ಹಿರಿಯ ಕಲಾವಿದರನ್ನು ಆಹ್ವಾನಿಸಿ ಅವರಿಂದ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿದರೆ ವಿದ್ಯಾರ್ಥಿಗಳಿಗೆ ಅನೇಕ ವಿಷಯಗಳನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಇಂತಹ ಸಂಪ್ರದಾಯವೂ ಕೂಡ ಕೆಲವೊಂದು ಕಲಾಶಾಲೆಗಳನ್ನು ಬಿಟ್ಟರೆ ಉಳಿದ ಎಲ್ಲಾ ಕಾಲೇಜುಗಳಲ್ಲಿ ಇಂತಹ ಸಮಸ್ಯೆ ಎದ್ದು ಕಾಣುತ್ತದೆ.

ಪ್ರಾತ್ಯಕ್ಷಿಕೆ: ಚಿತ್ರಕಲೆಯಲ್ಲಿ ಅತ್ಯಂತ ಪ್ರಧಾನವಾದದ್ದು ಪ್ರಾತ್ಯಕ್ಷಿಕೆ. ಒಬ್ಬ ಅನುಭವಿ ಕಲಾವಿದ ಅಥವಾ ಶಿಕ್ಷಕ, ಉಪನ್ಯಾಸಕ ತನ್ನ ಕಲಾಕೃತಿಯಲ್ಲಿ ಒಂದು ನಿರ್ದಿಷ್ಟ ಸಮಯದಲ್ಲಿ ಬಳಸುವಂತಹ ತಂತ್ರ-ಶೈಲಿಗಳ ಬಗ್ಗೆ ವಿದ್ಯಾರ್ಥಿಗಳ ಅಥವಾ ಒಂದು ಗುಂಪಿನ ಮುಂದೆ ನಿಂತು ಹಂತ ಹಂತವಾಗಿ ಬಿಡಿಸುತ್ತ(ಕೆಲವರು ವಿವರ ಹೇಳಿಕೊಂಡು) ಹೋಗುತ್ತಾರೆ. ಇದರಿಂದಾಗಿ ವಿದ್ಯಾರ್ಥಿಗಳು ಅನೇಕ ಅಂಶಗಳನ್ನು ಕಲಿಯುತ್ತಾರೆ. ಉದಾ:- ಅವರು ಬಳಸುವಂತಹ ಕುಂಚ, ಬಣ್ಣ ಲೇಪಿಸುವಂಥ ತಂತ್ರ. ಅವರು ಒಂದು ಸಾರಿ ಲೇಪನದ ನಂತರ ಮತ್ತೊಂದು ಲೇಪನಕ್ಕೆ ಬಿಡುವ ಅಂತರ ಇವುಗಳನ್ನೊಳಗೊಂಡಂತೆ ಒಟ್ಟಾರೆ ಕ್ಯಾನ್ವಾಸ್‌ನ್ನು ಬಳಸುವಂತಹ ವಿಧಾನದ ಬಗ್ಗೆ ವಿದ್ಯಾರ್ಥಿಗಳು ತಿಳಿದುಕೊಳ್ಳುತ್ತಾರೆ.

ಪ್ರಾತ್ಯಕ್ಷಿಕೆ ಎಂಬುದು ಚಿತ್ರಕಲೆಯ ವಿಷಯಕ್ಕೆ ಹೆಚ್ಚು ಪರಿಣಾಮಕಾರಿಯಾಗಿದೆ. ಇದರಿಂದಾಗಿ ಚಿತ್ರಕಲಾ ವಿದ್ಯಾರ್ಥಿ, ಯುವ ಕಲಾವಿದರಿಗೆ ಅನುಭವಸ್ಥರು ಮಾಡುವಂತಹ ಪ್ರಾತ್ಯಕ್ಷಿಕೆಯಿಂದ ನೋಡಿ ಕಲಿಯುವಂತಹದ್ದು. ಒಂದು ಕಲಾಕೃತಿಯನ್ನು ರಚನೆ ಹೇಗೆ ಮಾಡಬೇಕು? ಯಾವ ರೀತಿ ಮಾಡಬೇಕು? ಎಂಬುದನ್ನು ಹೇಳುವುದಕ್ಕಿಂತ ಒಂದು ಕಲಾಕೃತಿಯನ್ನು ಪ್ರತ್ಯಕ್ಷವಾಗಿ ರಚನೆ ಮಾಡಿ ತೋರಿಸಿದರೆ ವಿದ್ಯಾರ್ಥಿಗಳಿಗೆ ಮನದಟ್ಟಾಗುತ್ತದೆ. ಚಿತ್ರಕಲಾ ಶಾಲೆಯ ವಿಶೇಷ ಸಂದರ್ಭದಲ್ಲಿ, ಯಾರಾದರೂ ಹಿರಿಯ ಕಲಾವಿದರು ಚಿತ್ರಕಲಾ ಶಾಲೆಗೆ ಬಂದಂತಹ ಸಮಯದಲ್ಲಿ. ಕಲಾಶಿಬಿರಗಳಲ್ಲಿ, ಕಲಾಮೇಳ, ಕಲಾ ಪ್ರದರ್ಶನಗಳಲ್ಲಿ ಉತ್ಸವಗಳಲ್ಲಿ ಪ್ರಾತ್ಯಕ್ಷಿಕೆಗಳನ್ನು ನಡೆಸುತ್ತಾರೆ.

ಒಬ್ಬ ಕಲಾವಿದನು ಒಂದು ಪ್ರಾತ್ಯಕ್ಷಿಕೆಯನ್ನು ನೀಡಲು ಬಂದರೆ ಅಲ್ಲಿ ಪ್ರಾತ್ಯಕ್ಷಿಕೆಗೆ ಬೇಕಾಗುವಂತಹ ಎಲ್ಲಾ ಸಾಮಗ್ರಿಗಳನ್ನು ಅವರು ಪ್ರಾತ್ಯಕ್ಷಿಕೆ ಕೊಡಲು ಬರುವ ಮುನ್ನ ತಯಾರಿಸಬೇಕು ಮತ್ತು ಅವರು ವೈಯಕ್ತಿಕವಾಗಿ ಬಳಸುವಂತಹ ವಿಶಿಷ್ಟವಾದಂತಹ ಕುಂಚ, ವಿಶೇಷ ಬಣ್ಣಗಳನ್ನು ಅವರಿಗೆ ಅಗತ್ಯವಾದಂತಹ ಸಾಮಗ್ರಿಗಳನ್ನು ಜೊತೆಯಲ್ಲಿಯೇ ಇಟ್ಟುಕೊಳ್ಳಬೇಕಾಗುತ್ತದೆ. ನಂತರದಲ್ಲಿ ಪ್ರಾತ್ಯಕ್ಷಿಕೆ ಪ್ರಾರಂಭಿಸುವುದನ್ನು ಎಲ್ಲಾ ಕಾಲೇಜುಗಳಲ್ಲಿ ವಿಶೇಷವಾಗಿ ಗಮನಿಸಲಾಗಿದೆ.

ಕರ್ನಾಟಕದ ಹಲವು ಚಿತ್ರಕಲಾ ಶಾಲೆಗಳಲ್ಲಿ ಹಿರಿಯ ಹಾಗೂ ಅನುಭವಿ ಕಲಾವಿದರನ್ನು ಕರೆಸುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಕೆಲವು ತಂತ್ರ, ಶೈಲಿಗಳ ಬಗ್ಗೆ ಕಲಿಯಲು ಅವಕಾಶವಿಲ್ಲದಂತಾಗಿದೆ.

ಚಿತ್ರಕಲಾ ಪ್ರದರ್ಶನ: ವಿದ್ಯಾರ್ಥಿಗಳು ರಚಿಸಿದಂತಹ ಚಿತ್ರಗಳು ಕಲಾಶಾಲೆಗಳಲ್ಲಿ ವಾರ, ತಿಂಗಳು, ಆರು ತಿಂಗಳಿಗೊಮ್ಮೆ ಸಾಮಾನ್ಯವಾಗಿ ಚಿತ್ರಕಲಾ ಪ್ರದರ್ಶನಗಳನ್ನು ಮಾಡುತ್ತಾರೆ. ಹೀಗೆ ಮಾಡುವುದರಿಂದಾಗಿ ವಿದ್ಯಾರ್ಥಿಗಳಿಗೆ ಉತ್ತಮ ಪ್ರೋತ್ಸಾಹವನ್ನು ನೀಡಿದಂತಾಗುತ್ತದೆ. ಇದರಿಂದ ಅವರ ಕಲಾಶಾಲೆಗೆ ಒಳ್ಳೆಯ ಹೆಸರು ಬರುತ್ತದೆ. ಕೆಲವೊಮ್ಮೆ ಪ್ರದರ್ಶನಗಳನ್ನು ಕಲಾವಿದರ ಅಗತ್ಯಕ್ಕೆ ಅನುಗುಣವಾಗಿ ಅವರಿಗೆ ಸಮಯವಿದ್ದಾಗ ಮಾತ್ರ ಮಾಡಿಕೊಳ್ಳಬಹುದು. ಚಿತ್ರಕಲಾ ಪ್ರದರ್ಶನವನ್ನು ಏಕವ್ಯಕ್ತಿ ಅಥವಾ ಗುಂಪು ಮಾಡಿಕೊಂಡು ಕಲಾ ಪ್ರದರ್ಶನ ಏರ್ಪಡಿಸಬಹುದು. ಕೆಲವೊಂದು ಸಮಯದಲ್ಲಿ ಅಕಾಡೆಮಿಗಳು ಸಂಘ-ಸಂಸ್ಥೆಗಳವರು ಏರ್ಪಡಿಸುವರು. ಇಂತಹ ಅವಕಾಶಗಳು ಕೆಲವು ವಿದ್ಯಾರ್ಥಿಗಳಿಗೆ ಮಾತ್ರ ಸಿಗುತ್ತದೆ. ಹಲವರಿಗೆ ಇಂದಿಗೂ ಸಹ ಧನಸಹಾಯ ಸಿಗದೇ ಇರುವುದನ್ನು ಕಾಣುತ್ತೇವೆ.

ಚಿತ್ರಕಲಾ ಸ್ಪರ್ಧೆ: ಚಿತ್ರಕಲಾ ಶಾಲೆಗಳಲ್ಲಿ ಕೆಲವೊಂದು ಬಿಟ್ಟರೆ ಇನ್ನುಳಿದ ಶಾಲೆಗಳಲ್ಲಿ ಚಿತ್ರಕಲಾ ಸ್ಪರ್ಧೆಗಳನ್ನು ನಡೆಸುತ್ತಾರೆ. ಅಲ್ಲಿ ಒಂದು ನಿರ್ದಿಷ್ಟವಾದಂತಹ ವಿಷಯವನ್ನು ಕೊಟ್ಟು, ಅದಕ್ಕೆ ಅವಧಿ ನಿಗದಿ ಮಾಡಿರುತ್ತಾರೆ. ಅದರಲ್ಲಿ ವಿದ್ಯಾರ್ಥಿಗಳು ಅವರದೇ ಆದ ತಂತ್ರಗಾರಿಕೆ ಮತ್ತು ಕೌಶಲ್ಯವನ್ನು ವ್ಯಕ್ತಪಡಿಸಬಹುದು. ಸ್ಪರ್ಧೆಗಳು ಹಲವು ರೀತಿಯಲ್ಲಿದ್ದು ಸಾವಿರಾರು ಸ್ಥಳದಿಂದ ಕಲಾಕೃತಿ ರಚನೆ ಮಾಡಿ ಸ್ಪರ್ಧೆಗೆ ಕಳುಹಿಸುವುದು. ಸ್ಥಳದಲ್ಲೇ ಚಿತ್ರ ಬಿಡಿಸಿ ಅಲ್ಲಿಯೇ ಅಂತಿಮವಾಗಿ ಆಯ್ಕೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡುವುದು. ಈ ರೀತಿಯಾಗಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿದರೆ ಅವರು ಉತ್ತಮ ಕಲಾವಿದರಾಗುತ್ತಾರೆ ಮತ್ತು ಕಲೆಯಲ್ಲಿ ತಜ್ಞತೆ ಪಡೆದುಕೊಳ್ಳುತ್ತಾರೆ. ಈ ರೀತಿ ಕಲಾ ಶಾಲೆಗಳಲ್ಲಿ (ಕೆಲವವನ್ನು ಹೊರತುಪಡಿಸಿ) ಮಾಡುವುದು ಅಪರೂಪವಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವೇ ಇಲ್ಲದಂತಾಗಿದೆ. ದೃಶ್ಯಕಲಾ ಶಿಕ್ಷಣವನ್ನು ಅರ್ಧಕ್ಕೇ ನಿಲ್ಲಿಸುವುದನ್ನೂ ಕಾಣಬಹುದು.

ಕಲಾ ಸ್ಪರ್ಧೆ: ಚಿತ್ರಕಲೆಗೆ ಸಂಬಂಧಿಸಿದಂತೆ ಚಿತ್ರಕಲಾ ಶಾಲೆಯವರಾಗಿರಬಹುದು ಕೆಲವು ಸಂಘ-ಸಂಸ್ಥೆಗಳಾಗಿರಬಹುದು - ಚಿತ್ರಕಲೆಯ ಕುರಿತಾಗಿ ಕಲಾ ಸ್ಪರ್ಧೆಗಳನ್ನು ಏರ್ಪಡಿಸಬೇಕು.

ಚಿತ್ರಕಲಾ ಶಿಕ್ಷಣ, ಚಿತ್ರಕಲಾ ಇತಿಹಾಸ, ಕಲಾಶೈಲಿ, ಸಾಧನೆ ಮಾಡಿದಂತಹ ಕಲಾವಿದರುಗಳ ಪರಿಚಯ, ಪ್ರಸಿದ್ಧ ಕಲಾಕೃತಿಗಳು. ಶಿಲ್ಪ ಕಲಾಕೃತಿಗಳ ಬಗ್ಗೆ ಹಲವಾರು ಪ್ರಶ್ನೆಗಳನ್ನು ಸಿದ್ಧಪಡಿಸಿ ಸ್ಪರ್ಧೆಯನ್ನು ಆಯೋಜಿಸಬೇಕಾಗುತ್ತದೆ. ಈ ಕಾರಣಗಳಿಂದ ವಿದ್ಯಾರ್ಥಿಗಳು ಚಿತ್ರಕಲಾ ಶಿಕ್ಷಣದ ಮೇಲೆ ವಿಶೇಷವಾದಂತಹ ಅಭಿರುಚಿ ಹೊಂದಿರುತ್ತಾರೆ. ಈ ರೀತಿಯ ಕಲೆಗೆ ಸಂಬಂಧಿಸಿದಂತಹ ಕಾರ್ಯಕ್ರಮಗಳನ್ನು ಯಾವುದೇ ಕಲಾಶಾಲೆಗಳಲ್ಲಿ ಮಾಡಿಲ್ಲ, ಮಾಡುವುದಿಲ್ಲ. ಇದರಿಂದ ವಿದ್ಯಾರ್ಥಿಯ ಸೃಜನಶೀಲತೆ ಹೇಗೆ ಹುಟ್ಟುತ್ತದೆಂಬ ಬಗೆಗೆ ಹಲವಾರು ಪ್ರಶ್ನೆಗಳು ಹುಟ್ಟುತ್ತವೆ. ಇದರ ಜೊತೆಗೆ ವಿದ್ಯಾರ್ಥಿಗಳಲ್ಲಿ ಸ್ಪರ್ಧಾ ಮನೋಭಾವ, ಸ್ವತಃ ಕಲಿಕೆಗೆ ಉತ್ತಮವಾದ ಆಲೋಚನಾಶಕ್ತಿ, ಉತ್ತಮವಾದ ಗುಣ-ಸ್ವಭಾವಗಳು ಬೆಳೆಸಿದಂತಾಗುವುದು. ಈ ರೀತಿಯ ಎಲ್ಲಾ ಅಂಶಗಳಿಂದ ವಿದ್ಯಾರ್ಥಿಗೆ ವಂಚನೆಯಾಗುತ್ತಿರುವುದನ್ನು ನಾವು ಕಲಾಶಾಲೆಗಳಲ್ಲಿ ನೋಡುತ್ತೇವೆ.

ಬೋಧನೆ ಮಾಡುವ ಶಿಕ್ಷಕರ ಸಮಸ್ಯೆ: ಕರ್ನಾಟಕದ ಕೆಲವು ಕಲಾಶಾಲೆಗಳಲ್ಲಿ ಬೋಧನೆ ಮಾಡುವ ಶಿಕ್ಷಕರು ಇಲ್ಲದಿರುವುದನ್ನು ಕಾಣುತ್ತೇವೆ. ಯಾಕೆಂದರೆ ಅನುದಾನ ಮತ್ತು ಅನುದಾನ ರಹಿತವಾದಂತಹ ಕೆಲವು ಕಲಾಶಾಲೆಗಳಲ್ಲಿ ಬೋಧನೆ ಮಾಡುವಂತಹ ಶಿಕ್ಷಕರ ಕೊರತೆ ಇರುತ್ತದೆ. ಇಲ್ಲಿ ಬೋಧನೆ ಮಾಡುವ ಶಿಕ್ಷಕರಿಗೆ ಸರಿಯಾದ ರೀತಿಯಲ್ಲಿ ಸಂಬಳ ನೀಡದಿರುವುದು ಇದಕ್ಕೆ ಕಾರಣ ಮತ್ತು ಭಾಷಾ ವಿಷಯಗಳಿಗೆ ಸಂಬಂಧಿಸಿದಂತೆ ಅಂದರೆ ಕನ್ನಡ ಮತ್ತು ಇಂಗ್ಲೀಷ್ ಎರಡು ವಿಷಯಗಳನ್ನು ಕುರಿತು ಬೋಧಿಸುವಂತಹ ಶಿಕ್ಷಕರನ್ನು ಸಂಸ್ಥಾಪಕರು ಬರಮಾಡಿಕೊಳ್ಳುವುದಿಲ್ಲ. ಇದರಿಂದಾಗಿ ಸಂಸ್ಥಾಪಕರು ಅನೇಕ ರೀತಿಯಲ್ಲಿ ಸಮಸ್ಯೆಗಳನ್ನು ಎದುರಿಸಬೇಕಾಗುವುದು.

ಪ್ರಚಾರ ಸಮಸ್ಯೆ: ತರಗತಿಗಳು ಪ್ರಾರಂಭವಾಗುವುದಕ್ಕೂ ಮುನ್ನ ಜಾಹೀರಾತುಗಳು, ಅದಕ್ಕೆ ಪೂರಕವಾದಂತೆ ಕಲಾಶಾಲೆಯ ಬಗ್ಗೆ ಪ್ರಚಾರ ಮಾಡಬೇಕಾಗುತ್ತದೆ. ಈ ಶಿಕ್ಷಣ ಪಡೆಯುವುದರಿಂದ ಆಗುವಂತಹ ಉಪಯೋಗಗಳ ಬಗ್ಗೆ ತಿಳಿಸಬೇಕಾಗುತ್ತದೆ. ಕಲಾಶಾಲೆಯ ಸಂಸ್ಥಾಪಕರು ಈ ರೀತಿಯ ಕೆಲಸಗಳನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಪ್ರಸ್ತುತ ಸಂದರ್ಭದಲ್ಲಿ ಕಲಾಶಾಲೆಗಳು ಮುಚ್ಚುವ ಹಂತಕ್ಕೆ ತಲುಪುತ್ತವೆ.

ಪ್ರಾಥಮಿಕ ಹಂತದಿಂದ ಪ್ರೌಢ ಶಿಕ್ಷಣದವರೆಗೂ ಕಲಾಶಿಕ್ಷಣ ಕಲಿಸುವ ವ್ಯವಸ್ಥೆ ಕರ್ನಾಟಕದ ಕೆಲವೊಂದು ಶಾಲೆಗಳಲ್ಲಿಲ್ಲ.

ಪ್ರಸ್ತುತ ಸಂದರ್ಭದಲ್ಲಿ ಕರ್ನಾಟಕದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಹಂತದವರೆಗೂ ಪ್ರತಿ ತರಗತಿಗೂ ಚಿತ್ರಕಲಾ ಶಿಕ್ಷಕರನ್ನು ನೇಮಿಸಿಕೊಳ್ಳದಿರುವುದನ್ನು ನೋಡಬಹುದು. ಸರಕಾರಿ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರ ಸಂಖ್ಯೆ ಬೆರಳಣಿಕೆಯಷ್ಟು ಇದೆ. ಇರುವಂತಹ ಶಿಕ್ಷಕರು ಅಲ್ಲಿಯ ಶಾಲೆಯಲ್ಲಿ ಸರಿಯಾದಂತಹ ವ್ಯವಸ್ಥೆಯು ಇಲ್ಲದಿರುವುದು. ಉದಾ:- ಚಿತ್ರಕಲೆಯ ಬೋಧನಾ ಉಪಕರಣಗಳು ಕೆಲವೊಂದು ಶಾಲೆಗಳಲ್ಲಿ ಚಿತ್ರಕಲಾ ಕಲಿಸಲು ನಿಗಧಿಯಾದ

ತರಗತಿಯನ್ನು ಗಣಿತ ಇಲ್ಲವೇ ವಿಜ್ಞಾನದ ತರಗತಿಗಳಿಗೆ ಬಿಟ್ಟು ಕೊಡುವಂತೆ ಹೇಳುವುದು. ಈ ರೀತಿಯಾದ ಸಮಸ್ಯೆಗಳನ್ನು ಮುಖ್ಯ ಶಿಕ್ಷಕರುಗಳು ಚಿತ್ರಕಲಾ ಶಿಕ್ಷಕರ ಮೇಲೆ ಹೇರುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಚಿತ್ರಕಲಾ ಶಿಕ್ಷಕನಿಗೆ ಶಾಲೆಯ ಟೇಬಲ್ ವರ್ಕ್ಸ್‌ನ್ನು ನೀಡುತ್ತಾರೆ. ಇದರಿಂದ ನಿಜವಾಗಿ ಚಿತ್ರಕಲೆಯನ್ನು ಮಕ್ಕಳಿಗೆ ಕಲಿಸಬೇಕೆಂದು ಬಂದ ಶಿಕ್ಷಕರ ಮನಸ್ಥಿತಿ ಹೇಗಿರುತ್ತದೆಂಬುದನ್ನು ಯೋಚಿಸಬೇಕು. ಈಗಾಗಲೇ ನೇಮಕವಾಗಿರುವಂತಹ ನೂರಾರು ಚಿತ್ರಕಲಾ ಶಿಕ್ಷಕರಲ್ಲಿ ಕೆಲವರಿಗೆ ಚಿತ್ರ ತೆಗೆಯಲು ಬರದೇ ಇರುವವರ ಸಂಖ್ಯೆಯನ್ನು ನಾವು ಗಮನಿಸಬಹುದು. ಶಿಕ್ಷಕರಿಗೆ ಯಾವ ವಿಷಯವನ್ನು ಯಾವ ರೀತಿ ಬೋಧಿಸಬೇಕೆಂಬುದು ಅರಿಯದಿದ್ದರೆ ವಿದ್ಯಾರ್ಥಿಗಳಿಗೆ ಚಿತ್ರ ಅಥವಾ ಚಿತ್ರಕಲಾ ಶಿಕ್ಷಣ ಬಗ್ಗೆ ಹೇಗೆ ಹೇಳುತ್ತಾನೆ? ಎಂಬುದು ದೊಡ್ಡ ಸಮಸ್ಯೆಯಾಗಿದೆ.

ಮೆಡಿಕಲ್, ಇಂಜಿನಿಯರ್ ಶಿಕ್ಷಣಕ್ಕೆ ಕೊಟ್ಟಷ್ಟು ಮಹತ್ವ ಚಿತ್ರಕಲಾ ಶಿಕ್ಷಣಕ್ಕೆ ಕೊಡುತ್ತಿಲ್ಲ.

ಪ್ರಸ್ತುತ ಸಂದರ್ಭದಲ್ಲಿ ಯಾವ ವಿದ್ಯಾರ್ಥಿಯ ತಂದೆ-ತಾಯಿಯಾಗಲಿ ತಮ್ಮ ಮಕ್ಕಳು ಮೆಡಿಕಲ್ ಇಂಜಿನಿಯರ್ ಓದಬೇಕೆಂದು ಬಯಸುತ್ತಾರೆ. ಕಾರಣ ಇಲ್ಲಿ ನೀಡುವಂತಹ ಶಿಕ್ಷಣದಿಂದ ಒಂದಲ್ಲ ಒಂದು ರೀತಿಯಾದ ಉದ್ಯೋಗಕ್ಕೆ ಸೇರಿಕೊಳ್ಳಬಹುದು. ಇದ್ದರೂ ಆರ್ಥಿಕವಾಗಿ ಹೆಚ್ಚು ಲಾಭದಾಯಕವಾಗುತ್ತದೆ. ಮೇಲಿನ ಕೋರ್ಸ್‌ಗಳನ್ನು ನಡೆಸುವವರಿಗೆ ವಿದ್ಯಾರ್ಥಿಗಳು ಅವರಿಗೆ ಬೇಕಾಗುವಷ್ಟು ಹಣವನ್ನು ಡೋನೇಷನ್ ರೂಪವಾಗಿ ನೀಡುತ್ತಾರೆ.

ಈ ಹಿನ್ನೆಲೆಯಲ್ಲಿ ಇವುಗಳಿಗೆ ಬೇಡಿಕೆ ಹೆಚ್ಚು. ಆದರೆ ಚಿತ್ರಕಲಾ ಶಿಕ್ಷಣವನ್ನು ಕಲಿಸಲಿಕ್ಕೆ ತಮ್ಮ ಮಕ್ಕಳನ್ನು ಕಳುಹಿಸುವುದು ಅಪರೂಪ. ಅವುಗಳಿಂದಾಗುವ ಲಾಭದಾಯಕವಾದಂತಹ ಅಂಶಗಳು ನಮ್ಮ ಚಿತ್ರಕಲಾ ಶಿಕ್ಷಣದಲ್ಲಿ ಇಲ್ಲ. ಮೆಡಿಕಲ್, ಇಂಜಿನಿಯರಿಂಗ್ ಶಿಕ್ಷಣಕ್ಕೆ ಮಹತ್ವ ಕೊಟ್ಟಹಾಗೆ ಚಿತ್ರಕಲಾ ಶಿಕ್ಷಣಕ್ಕೆ ಸರ್ಕಾರ ಹೆಚ್ಚು ಮಹತ್ವ ಕೊಟ್ಟಿಲ್ಲ.

ಚಿತ್ರಕಲಾ ಶಿಕ್ಷಣವನ್ನು ಪಡೆಯುವುದಕ್ಕೆ ಬರುವಂತಹ ಶೇಕಡ ೯೫ರಷ್ಟು ವಿದ್ಯಾರ್ಥಿಗಳು ಹಳ್ಳಿಗಾಡಿನ ಬಡ ವಿದ್ಯಾರ್ಥಿಗಳು

ಉನ್ನತ ಶಿಕ್ಷಣವನ್ನು ಕಲಿಯಬೇಕೆನ್ನುವುದು ಹಳ್ಳಿಗಾಡಿನ ಅಥವಾ ಬಡ ವಿದ್ಯಾರ್ಥಿಗಳ ಆಸೆಯಾಗಿರುತ್ತದೆ. ಆದರೆ ಉನ್ನತ ಶಿಕ್ಷಣದಲ್ಲಿ ಮೆಡಿಕಲ್, ಇಂಜಿನಿಯರಿಂಗ್‌ನಂತಹ ಕೋರ್ಸ್‌ಗಳಿಗೆ ಹೋಗುವುದಕ್ಕೆ ಡೋನೇಷನ್ ಹಾವಳಿಯಿಂದಾಗಿ ಇವರ ಆಸೆಗೆ ಎಳ್ಳು ನೀರು ಬಿಟ್ಟಂತಾಗಿದೆ". ಕೆಲವೊಂದು ಹಳ್ಳಿಯಲ್ಲಿನ ವಾತಾವರಣದಲ್ಲಿ ಬೆಳೆದು ಆರ್ಥಿಕವಾಗಿ ಪ್ರಬಲರಾಗಿದ್ದರೆ ಅವರು ನಗರಗಳಿಗೆ ಹೋಗಿ ಅಲ್ಲಿ ಶಿಕ್ಷಣ ಪಡೆಯುವುದನ್ನು ಬಿಟ್ಟರೆ ಇನ್ನುಳಿದಂತೆ ಎಲ್ಲಾ ಬಡ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ಕಲಾಶಾಲೆಗಳನ್ನು ಅವಲಂಬಿಸಿಕೊಂಡಿರುತ್ತಾರೆ. ಆದರೆ ನಗರಗಳಲ್ಲಿ ಕಲಿತಂತಹ ಕಲಾ ವಿದ್ಯಾರ್ಥಿಗಳಿಗೆ ನಗರದಲ್ಲಿ ಅನೇಕ ಅವಕಾಶಗಳು ದೊರೆಯುತ್ತವೆ. ಅವರು ಜೀವನವನ್ನು ಸುಖಕರವಾಗಿ ನಡೆಸಿಕೊಂಡು ಹೋಗುತ್ತಾರೆ. ಆದರೆ ಹಳ್ಳಿಯಲ್ಲಿ

ಅಥವಾ ಗ್ರಾಮೀಣ ಪ್ರದೇಶಗಳಲ್ಲಿ ಕಲಾ ವಿದ್ಯಾಭ್ಯಾಸವನ್ನು ಪಡೆದವರು ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ.

ಚಿತ್ರಕಲೆ ಒಂದು ಅಂಗ ಎಂದು ತಿಳಿದುಕೊಳ್ಳಲು ಸರ್ಕಾರವಾಗಲಿ, ಸಮಾಜವಾಗಲಿ ಪ್ರಯತ್ನಿಸಲಿಲ್ಲ.

ಶಿಕ್ಷಣ ಕ್ಷೇತ್ರದಲ್ಲಿ ಹೆಜ್ಜೆ ಹೆಜ್ಜೆಗೂ ಉಪಯೋಗ ಎಂಬ ಪದಕ್ಕೆ ಅರ್ಥ ಕೊಡುವುದು ಚಿತ್ರಕಲಾ ಶಿಕ್ಷಣ. ಹುಟ್ಟಿದ ಮಕ್ಕಳಿಂದ ಹಿಡಿದು ಸಾಯುವವರೆಗೂ ಚಿತ್ರಕಲಾ ಶಿಕ್ಷಣವಿಲ್ಲ ಎಂದರೆ ತಪ್ಪಲ್ಲ. ಚಿಕ್ಕ ಮಕ್ಕಗಳಿಗೆ ಪಠ್ಯಪುಸ್ತಕಗಳಲ್ಲಿ ಚಿತ್ರಗಳಿರಬೇಕು. ಚಿಕ್ಕಮಕ್ಕಳಿಗೆ ಬಲು ಇಷ್ಟವಾದಂತಹ ವಿಷಯ ಚಿತ್ರಕಲೆ, ಚಿತ್ರಕಲೆ ಪಠ್ಯಕ್ರಮದಲ್ಲಿರುವುದರಿಂದಲೇ ಹಲವಾರು ವಿದ್ಯಾರ್ಥಿಗಳು ಶಿಕ್ಷಣವನ್ನು ಕಲಿಯಲು ಸ್ವ-ಇಚ್ಛೆಯಿಂದ ಬರುತ್ತಾರೆ. ಹಾಗೆಯೇ ಚಿತ್ರಕಲೆ ವಿಷಯವಿದ್ದರೂ ಅವರಲ್ಲಿರುವಂತಹ ಭಾಷಾ ವಿಷಯಗಳಿಗೆ ಸಹಾಯಕವಾಗುತ್ತದೆ. ಚಿತ್ರಕಲೆ ಕಲಿಯುವುದರಿಂದ ಚಿತ್ರಗಳ ಅಗಲ, ಉದ್ದ, ಎತ್ತರದ ಬಗ್ಗೆ ತಿಳಿಯುತ್ತದೆ. ಉದಾ:- ಸಮಾಜ ವಿಜ್ಞಾನದಲ್ಲಿ ಬರುವಂತಹ ಚಿತ್ರಗಳನ್ನು ತೆಗೆಯಲು ಒಂದು ಉಪಾಯ ಸಿಗುತ್ತದೆ. ಹೀಗೆ ಎಲ್ಲ ರೀತಿಯಲ್ಲಿಯೂ ನೆರವಾಗುವಂತಹ ಕಲಾಶಿಕ್ಷಣ ಸಮಾಜದ ಒಂದು ಅಂಗವಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ಸ್ವಲ್ಪಮಟ್ಟಿಗಾದರೂ ಸಮಾಜವಾಗಲಿ, ಸರ್ಕಾರವಾಗಲಿ ತಿಳಿಯಬೇಕು. ಇದನ್ನು ಶಿಕ್ಷಣದ ಒಂದು ಭಾಗವಾಗಿ ಪಠ್ಯಕ್ರಮದಲ್ಲಿ ಸೇರಿಸಿ ಇದಕ್ಕೆ ಪ್ರತ್ಯೇಕವಾದಂತಹ ಅಂಕಗಳಿದ್ದು ಶಿಕ್ಷಣವನ್ನು ಕ್ರಮವಾಗಿ ನಡೆಸಿದರೆ ಇದಕ್ಕೆ ಒಂದು ಬೆಲೆ ಬರುವುದು.

ಕಲಾಶಿಕ್ಷಣ ಬೆಳವಣಿಗೆಯಾಗಬೇಕಾದರೆ ಮೂಲತಃ ಕಲಾಗ್ಯಾಲರಿಗಳು ಪ್ರತಿಯೊಂದು ಜಿಲ್ಲಾ ಮಟ್ಟದಲ್ಲಿ ಆಗಬೇಕು

ಜನಸಾಮಾನ್ಯರಿಗೂ ಚಿತ್ರಕಲಾ ಶಿಕ್ಷಣ ತಿಳಿಯಬೇಕಾದರೆ ಅದರ ಬಗ್ಗೆ ಮಾಹಿತಿಯನ್ನು ನೀಡಬೇಕು. ಸಾಮಾನ್ಯವಾಗಿ ಎಲ್ಲರಿಗೂ ಚಿತ್ರಕಲಾ ಶಿಕ್ಷಣದ ಬಗ್ಗೆ ತಿಳಿಯಬೇಕಾದರೆ ಪ್ರತಿಯೊಂದು ಜಿಲ್ಲೆಗೆ ಒಂದರಂತೆ ಕಲಾಗ್ಯಾಲರಿಗಳನ್ನು ಸ್ಥಾಪಿಸಬೇಕು. ಈ ರೀತಿಯಾಗಿ ಕಲಾಗ್ಯಾಲರಿಗಳ ಪ್ರದರ್ಶನಗಳನ್ನು ಏರ್ಪಡಿಸಿದಾಗ ಆ ಭಾಗದ ಜನರು ಬಂದು ವೀಕ್ಷಿಸಿ ಅದರ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುತ್ತಾರೆ. ಇದರಿಂದ ನಮ್ಮ ಭಾಗದ ಕಲಾವಿದರಾಗುವ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ. ಆನಂತರದಲ್ಲಿ ಜನಸಾಮಾನ್ಯರಿಗೂ ಇದರ ಬಗ್ಗೆ ವಿವರವಾಗಿ ತಿಳಿಸಿದರೆ, ಮುಂದಿನ ದಿನಗಳಲ್ಲಿ ತಮ್ಮ ತಮ್ಮ ಮಕ್ಕಳಿಗೆ ಕಲಾ ಶಿಕ್ಷಣವನ್ನು ಕಲಿಸುತ್ತಾರೆ ಎಂಬ ಮಾತು ಸುಳ್ಳಲ್ಲ. ಈ ಕಾರಣದಿಂದಾಗಿ ಜಿಲ್ಲೆಗೊಂದು ಕಲಾಗ್ಯಾಲರಿಯು ಅವಶ್ಯಕವಾಗಿ ಬೇಕಾಗುತ್ತದೆ ಎಂಬುದನ್ನು ಅಧ್ಯಯನದಿಂದ ತಿಳಿಯಬಹುದು.

ಚಿತ್ರಕಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಪುಸ್ತಕಗಳು ಸಾಕಷ್ಟು ಪ್ರಮಾಣದಲ್ಲಿ ಬಂದಿಲ್ಲ.

ಚಿತ್ರಕಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಮ್ಮ ನಾಡಿನಲ್ಲಿ ಅನೇಕ ವಿದ್ವಾಂಸರು, ಹಿರಿಯ ಕಲಾವಿದರು, ಸಾಹಿತಿಗಳು ಹಲವು ಜನರು ಕಲಾಕ್ಷೇತ್ರದಲ್ಲಿ ಹೆಸರು ಮಾಡಿರುವುದನ್ನು ಕಾಣುತ್ತೇವೆ.

ಆದರೆ ಕಲಾಶಿಕ್ಷಣದ ಬಗ್ಗೆ ಅಲ್ಲೊಂದು ಇಲ್ಲೊಂದು ಲೇಖನಗಳು, ಪ್ರಾಥಮಿಕ ಚಿತ್ರಕಲಾ ಶಿಕ್ಷಣದ ಬಗ್ಗೆ ಬಂದ ಒಂದು ಪುಸ್ತಕವನ್ನು ಬಿಟ್ಟರೆ ಬೆರಳೆಣಿಕೆಯಷ್ಟು ಪುಸ್ತಕಗಳು ಬಂದಿರುವುದನ್ನು ನೋಡುತ್ತೇವೆ. ಆದರೆ ಇಂಗ್ಲೀಷ್‌ನಲ್ಲಿ ಅನೇಕ ಚಿತ್ರಕಲಾ ಶಿಕ್ಷಣಕ್ಕೆ ಸಂಬಂಧಿಸಿದ ಪುಸ್ತಕಗಳು ಇವೆಯಾದರೂ ಕನ್ನಡಕ್ಕೆ ಹೆಚ್ಚು ಅನುವಾದವಾಗಿಲ್ಲ. ನಮ್ಮಲ್ಲಿಯೇ ಅನೇಕರು ಬರೆಯುವವರು ಇರುವುದರಿಂದ ಕಲಾಶಿಕ್ಷಣದ ಕುರಿತು ಪಠ್ಯಪುಸ್ತಕಗಳಿಗೆ ಹಾಗೂ ಪಠ್ಯಕ್ರಮಕ್ಕೆ ಪೂರಕವಾಗಿ ಬರಬೇಕಾಗಿವೆ. ಈ ಹಿನ್ನೆಲೆಯಲ್ಲಿ ನಮ್ಮ ಕರ್ನಾಟಕದಲ್ಲಿರುವ ಕಲಾಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ ಮತ್ತು ಕಲಾಶಿಕ್ಷಣದ ಬಗೆಗೆ ಬರುವಂತಹ ಹಲವಾರು ಪುಸ್ತಕಗಳನ್ನು ಓದಿ ಕಲಾ ವಿದ್ಯಾರ್ಥಿಗಳು ಮತ್ತು ಹೊರಗಿನವರು ಕಲೆಯ ಬಗ್ಗೆ ಹೆಚ್ಚಿನ ಜ್ಞಾನವನ್ನು ಪಡೆದುಕೊಳ್ಳುತ್ತಾರೆ.

ಸರ್ಕಾರಿ ಶಾಲೆಗಳಲ್ಲಿ ಅನುದಾನ ಪಡೆದುಕೊಂಡರೂ ಸಹಿತ ಇಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಕೆಲವೊಂದು ಶಿಕ್ಷಕರು ವೇತನ ಪಡೆದುಕೊಳ್ಳುವುದಕ್ಕೆ ಅರ್ಹರಾಗಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಕರ್ನಾಟಕ ಕೆಲವು ಅನುದಾನಿತ ಮತ್ತು ಅನುದಾನರಹಿತ ಕಲಾಶಾಲೆಗಳಲ್ಲಿ ಪ್ರಾಚಾರ್ಯ ಅಥವಾ ಉಪನ್ಯಾಸಕರು ವೇತನಕ್ಕೆ ಮಾತ್ರ ಸೀಮಿತರಾಗಿದ್ದಾರೆ. ಇವರು ಯಾವುದೇ ರೀತಿಯ ಕಾರ್ಯಚಟುವಟಿಕೆಗಳಲ್ಲಿ ತೊಡಗದೆ ಇರುವುದರಿಂದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತದೆ.

ಪ್ರದರ್ಶನ ನೀಡುವ ಸ್ಥಳಗಳ ಕೊರತೆ: ಕಲಾ ವಿದ್ಯಾರ್ಥಿಗಳು ರಚಿಸಿದಂತಹ ಕಲಾಕೃತಿಗಳನ್ನು ಕಲಾ ಶಾಲೆಗಳಲ್ಲಿ ತಿಂಗಳಿಗೊಂದು ಸಾರಿ ಪ್ರದರ್ಶನವನ್ನು ಏರ್ಪಡಿಸಬೇಕಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ರಚಿಸಿದಂತಹ ಕಲಾಕೃತಿಗಳ ತಂತ್ರ, ಶೈಲಿಗಳ ಬಗ್ಗೆ ಹಾಗೂ ಅವರಲ್ಲಿರುವಂತಹ ಸೃಜನಾತ್ಮಕ ಭಾವನೆಗಳ ಬಗ್ಗೆ ಅರಿವು ಮೂಡುತ್ತದೆ. ಆದರೆ ಕೆಲವೊಂದು ಕಲಾಶಾಲೆಗಳಲ್ಲಿ ಸಂಸ್ಥಾಪಕರು ತರಗತಿಗಳಿಗಷ್ಟೆ ಕೊಠಡಿಗಳನ್ನು ಕಟ್ಟಿಸಿ ಇನ್ನುಳಿದಂತೆ ಪ್ರದರ್ಶನಕ್ಕೆ ಸ್ಥಳವಿಲ್ಲದಂತೆ ಮಾಡಿದರೆ ಅವರು ಪ್ರದರ್ಶನಗಳನ್ನು ಹೇಗೆ ಮಾಡುವುದು? ಈ ನಿಟ್ಟಿನಲ್ಲಿ ಸಂಸ್ಥಾಪಕರು ಒಂದು ಕಲಾಶಾಲೆಯನ್ನು ಕಟ್ಟುವಾಗ ಅದರ ರೂಪುರೇಷೆಗಳನ್ನು ಮೊದಲೇ ತಯಾರಿಸಿಕೊಳ್ಳಬೇಕಾಗುತ್ತದೆ. ಇದು ಪ್ರಸ್ತುತ ಕಲಾಶಾಲೆಗಳ ಸಂಸ್ಥಾಪಕರ ಸಮಸ್ಯೆಯಾಗಿದೆ.

ವಿದ್ಯಾರ್ಥಿಗಳ ಸರಾಸರಿ ಸಂಖ್ಯೆಯಲ್ಲಿ ಕಡಿಮೆ ಕಂಡುಬರುವುದು: ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿದರೆ ಅವರು ಸರಿಯಾಗಿ ತರಗತಿಗೆ ಹಾಜರಾಗಿ ತಮ್ಮ ತಮ್ಮ ಕೆಲಸಗಳನ್ನು ನಡೆಸಿಕೊಂಡು ಹೋಗುತ್ತಾರೆ. ಇಲ್ಲದಿದ್ದರೆ ತರಗತಿಯ ಹಾಜರಾತಿ ಸಂಖ್ಯೆಯಲ್ಲಿ ಕಡಿಮೆಯಾಗುತ್ತದೆ. ಸಂಸ್ಥಾಪಕರು ಸರಿಯಾದ ರೀತಿಯಲ್ಲಿ ಸೌಕರ್ಯ ಕಲ್ಪಿಸದೇ ಇರುವುದೇ ಇದಕ್ಕೆ ಕಾರಣವಾಗಿದೆ.

ಹಿರಿಯ ಕಲಾವಿದರನ್ನು ಕಲಾಶಾಲೆಗೆ ಆಹ್ವಾನಿಸಲು ಅನುಮತಿ ನೀಡದಿರುವುದು: ಕಲಾ ವಿದ್ಯಾರ್ಥಿಗಳಿಗೆ ಮುಖ್ಯವಾಗಿ ಬೇಕಾಗಿರುವುದು ಹಿರಿಯರ ಮಾರ್ಗದರ್ಶನ. ಪ್ರಾಚಾರ್ಯರು ವಿದ್ಯಾರ್ಥಿಗಳ ದೃಷ್ಟಿಕೋನದಿಂದ ಪ್ರಾತ್ಯಕ್ಷಿಕೆಯನ್ನು ನೀಡಲು ಹಿರಿಯರನ್ನು ಆಹ್ವಾನಿಸುತ್ತೇವೆ ಎಂದರೆ ಸಂಸ್ಥಾಪಕರು ಇದಕ್ಕೆ ಬೆಂಬಲ ನೀಡದಿರುವುದು. ಇಲ್ಲವೆ ಹಣಕಾಸಿನ ಅಭಾವ ವಿರುವುದೆಂದು ತಿಳಿಸುವುದು. ಈ ರೀತಿಯ ಕಾರಣಗಳನ್ನು ಸಂಸ್ಥಾಪಕರು ಹೇಳುವುದನ್ನು ನೋಡುತ್ತೇವೆ. ಆದರೆ ಅವರಿಗೆ ಯಾವುದೇ ರೀತಿಯ ಅನುದಾನಗಳು ಬರದೇ ಇರುವುದು ಇದಕ್ಕೆ ಮೂಲ ಕಾರಣವಾಗಿದೆ.

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ಬೆಂಗಳೂರು-೧

ಸಂಖ್ಯೆ: ಚಿತ್ರಕಲೆ೧/ಚಿಕಶಾ-ನಿಕದಾವಿ-೨೨/೨೦೦೨-೦೩ ದಿನಾಂಕ ೨೯-೦೧-೨೦೦೩

ವಿಷಯ:- ಚಿತ್ರಕಲಾ ಶಾಲೆಗಳಲ್ಲಿ ನಿಗದಿತ ಸಂಖ್ಯೆಗೆ ಕನಿಷ್ಠ ದಾಖಲಾತಿಯ ಬಗ್ಗೆ ವಿನಾಯಿತಿ ನೀಡುವ ಬಗ್ಗೆ

ಉಲ್ಲೇಖ:- ಚಿತ್ರಕಲಾ ಶಾಲೆಗಳ ಮನವಿಗಳು

***

"ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚಿತ್ರಕಲಾ ಶಾಲೆಗಳಲ್ಲಿ ಪ್ರಥಮ ವರ್ಷದ ಫೌಂಡೇಶನ್ ತರಗತಿಗಳಿಗೆ ನೂತನ ಪಠ್ಯಾವಳಿಯಲ್ಲಿ ನಿಗದಿತ ಸಂಖ್ಯೆಯ ದಾಖಲೆಯನ್ನು ನಿಗದಿಪಡಿಸಲಾಗಿದ್ದು, ಅದರಂತೆ ದಾಖಲಾತಿ ಹೊಂದಿ ಅವರುಗಳಲ್ಲಿ ಪ್ರಥಮ ವರ್ಷದ ಫೌಂಡೇಶನ್ ತರಗತಿಯ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳು ದ್ವಿತೀಯ ವರ್ಷದ ತರಗತಿಗೆ ಬರುತ್ತಾರೆ. ಅಂತಹ ಸಂದರ್ಭದಲ್ಲಿ ನಿಗದಿತ ಕನಿಷ್ಠ ದಾಖಲಾತಿಯು ಸಾಧ್ಯವಾಗುವುದಿಲ್ಲ. ಅಂತಹ ಪ್ರಕರಣಗಳಿಗೆ ವಿನಾಯಿತಿಯನ್ನು ನೀಡುವಂತೆ ಕೋರಿ ಅನೇಕ ಮನವಿಗಳು ಬಂದಿದ್ದು, ಸದರಿ ಮನವಿಗಳನ್ನು ಪರಿಶೀಲಿಸಿ, ಮೊದಲನೇ ವರ್ಷದಲ್ಲಿ ಕನಿಷ್ಠ ದಾಖಲಾತಿಗೆ ವಿನಾಯ್ತಿಯನ್ನು ನೀಡಿದ್ದು, ಸದರಿ ವಿನಾಯಿತಿಯು ದ್ವಿತೀಯ ವರ್ಷಕ್ಕೂ ಅನ್ವಯಿಸುತ್ತದೆ. ಅದಕ್ಕೆ ಮತ್ತೊಮ್ಮೆ ವಿನಾಯಿತಿಯನ್ನು ಪಡೆಯುವ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಪ್ರಥಮ ವರ್ಷದಲ್ಲಿ ನಿಗದಿತ ಸಂಖ್ಯೆಯನ್ನು ಕಾಯ್ದಿರಿಸಿಕೊಳ್ಳುವಂತೆ ತಿಳಿಸಿ ದ್ವಿತೀಯ ವರ್ಷಕ್ಕೆ ಕನಿಷ್ಠ ದಾಖಲಾತಿಗೆ ವಿನಾಯಿತಿಯನ್ನು ನೀಡಲಾಗಿದೆ."[೧೯]

ಶಾಲಾ ದಾಖಲಾತಿಯ ಸಮಯದಲ್ಲಿ ಇಷ್ಟೇ ವಿದ್ಯಾರ್ಥಿಗಳಿದ್ದರೆ ಮಾತ್ರ ತರಗತಿಯನ್ನು ಪ್ರಾರಂಭಿಸುವುದಕ್ಕೆ ಅನುಮತಿಯನ್ನು ನೀಡುತ್ತಾರೆ. ಆದರೆ ಕರ್ನಾಟಕದಲ್ಲಿನ ಕಲಾಶಾಲೆಗಳಲ್ಲಿ ಪ್ರಸ್ತುತ ಸಂದರ್ಭದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದ್ದು, ಕೆಲವೊಂದು ಶಾಲೆಗಳಲ್ಲಿ ಶಿಕ್ಷಕರೇ ವಿದ್ಯಾರ್ಥಿಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿ ಇರುವುದನ್ನು ಕಾಣಬಹುದು. ಆದರೆ

ಪರೀಕ್ಷೆಗೆ ಮಾತ್ರ ಹಲವಾರು ವಿದ್ಯಾರ್ಥಿಗಳು ಹಾಜರಾಗುವುದರಿಂದ ಆಂತರಿಕ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿರುವುದನ್ನು ಕಾಣಬಹುದು.

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ಬೆಂಗಳೂರು-೧

ಸಂಖ್ಯೆ: ಚಿತ್ರಕಲೆ೧ಕ.ಕ.ಶಾ.ಕಾ.ವಿ.ವೇ.ಪ೨/೨೦೦೩-೦೪ ದಿನಾಂಕ ೨೯-೦೫-೨೦೦೩

ವಿಷಯ:- ಕರ್ನಾಟಕ ರಾಜ್ಯದ ಚಿತ್ರಕಲಾ ಶಾಲೆಗಳ ಕಾರ್ಯಾವಧಿಯ ಏಕರೂಪದ ವೇಳಾಪಟ್ಟಿ

ಉಲ್ಲೇಖ:- ಸರ್ಕಾರಿ ಆದೇಶ ಸಂಖ್ಯೆ: ಇಡಿ ೩೭ ಎಂಪಿಎನ್ ೯೯, ದಿನಾಂಕ ೨೦-೦೬-೨೦೦೧

***

"ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿನ ಚಿತ್ರಕಲಾ ಶಾಲೆಗಳು ಒಂದು ನಿಖರವಾದ ವೇಳಾಪಟ್ಟಿಯನ್ನು ಪಾಲಿಸದೇ ತಮ್ಮ ತಮ್ಮ ಇಚ್ಛೆಗನುಸಾರವಾಗಿ ಕಾರ್ಯ ನಿರ್ವಹಿಸುತ್ತಿರುವ ವಿಷಯವು ಇಲಾಖೆಯ ಗಮನಕ್ಕೆ ಬಂದಿದ್ದು ಉಲ್ಲೇಖದ ನೂತನ ಪಠ್ಯಾವಳಿಯನುಸಾರ ಸರ್ಕಾರಿ ಆದೇಶದ ಅನುಬಂಧ(೧೧೧)ರಲ್ಲಿ ನಮೂದಿಸಿರುವ ದಿನಾಂಕಗಳಿಗನುಗುಣವಾಗಿ ಏಕರೂಪದ ವೇಳಾಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ. ಇನ್ನು ಮುಂದೆ ಪ್ರತಿ ವರ್ಷ ಮುಂದಿನ ಆದೇಶ ನೀಡುವವರಿಗೆ ಸದರಿ ವೇಳಾಪಟ್ಟಿಯನ್ನು ತಪ್ಪದೇ ಪಾಲಿಸಲು ತಿಳಿಸಿದೆ. ತಪ್ಪಿದಲ್ಲಿ ಸಂಬಂಧಿಸಿದ ಚಿತ್ರಕಲಾ ಶಾಲೆಯ ಮಾನ್ಯತೆ ಮತ್ತು ಅನುಮತಿಯನ್ನು ರದ್ದುಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು."[೧೫]

ಸರ್ಕಾರವು ಏಕರೂಪದ ವೇಳಾಪಟ್ಟಿಯನ್ನು ಪಾಲಿಸಿ ಎಂದು ಕಲಾಶಾಲೆಗಳಿಗೆ ಆದೇಶವನ್ನು ನೀಡಿದರೂ ಈ ಒಂದು ಸರ್ಕಾರದ ಆದೇಶವನ್ನು ಕೆಲವು ಕಲಾಶಾಲೆಗಳು ಪಾಲಿಸದೇ ಇರುವುದನ್ನು ಕಾಣಬಹುದು.

ಟಿ.ಪಿ. ಇಸ್ಸಾರ್ ವರದಿ ಶಿಫಾರಸ್ಸಿನ ಮೇರೆಗೆ ಕಲಾಶಿಕ್ಷಣ ಕ್ಷೇತ್ರದಲ್ಲಾದ ಬದಲಾವಣೆಗಳು: ಟಿ.ಪಿ. ಇಸ್ಸಾರ್ ಸಮಿತಿಯಲ್ಲಿ ಸಲ್ಲಿಸಿರುವ ಪಠ್ಯಕ್ರಮದಲ್ಲಿ ಸಾಕಷ್ಟು ಬದಲಾವಣೆಗಳನ್ನು ಹೊಂದಿದೆ. ಇವುಗಳು ಈಗಾಗಲೇ ಇರುವ ಪಠ್ಯಕ್ರಮದಲ್ಲಿ ಇರದಂತಹ ವಿಷಯಗಳನ್ನು ಹೊಂದಿದೆ ಎಂದು ಕರ್ನಾಟಕ ಚಿತ್ರಕಲಾ ಶಿಕ್ಷಣ ಪಠ್ಯಕ್ರಮ ೨೦೦೧ರಲ್ಲಿ ನಿಯಮಾವಳಿಗಳು ತಿಳಿಸುತ್ತವೆ.

ಹಳೇ ಪಠ್ಯಕ್ರಮವನ್ನು ರದ್ದುಗೊಳಿಸಿ ಹೊಸ ಪಠ್ಯಕ್ರಮದಿಂದ ಅದರೊಳಗಿರುವಂತಹ ಅಂಶಗಳನ್ನು ಗಮನಿಸಿದಾಗ ಅದು ರಾಷ್ಟ್ರಮಟ್ಟದ ಪಠ್ಯಕ್ರಮಕ್ಕೆ ಅನುಕೂಲತೆ ಇತ್ತು. ಆದರೆ ಇಲಾಖೆ ಅಧಿಕಾರಿಗಳೇ ಉನ್ನತ ವಿಚಾರಗಳ ಬಗ್ಗೆ ಗೊತ್ತಿಲ್ಲದ ಕಾರಣ ಮತ್ತು ಪಠ್ಯಕ್ರಮವನ್ನು

ಹೆಚ್ಚಾಗಿ ಅವರ ಆಡಳಿತದ ಗೊಂದಲದಿಂದಾಗಿ ಕಲಾಶಿಕ್ಷಣ ಹಿನ್ನಡೆಯಾಯಿತು. ಕಾರಣ ಅದಕ್ಕೆ ತತ್ಸಮವಾಗಿರುವಂತಹ ಶಿಕ್ಷಕರ ತರಬೇತಿಗಳನ್ನು ಎಲ್ಲಾ ಕಲಾಶಾಲೆಗಳಿಗೆ ನೀಡದೇ ಇರುವುದು. ತಮಗೆ ಬೇಕಾಗಿರುವ ಕರ್ನಾಟಕದ ವಿಭಾಗಕ್ಕೆ ಒಂದರಂತೆ ತರಬೇತಿ ತರಗತಿಗಳನ್ನು ನಡೆಸಬೇಕೆನ್ನುವ ಕಾರಣದಿಂದ ಕರ್ನಾಟಕದ ಎಲ್ಲಾ ಶಾಲೆಗಳಿಗೆ ಅನುಮತಿ ನೀಡಿರಲಿಲ್ಲ.

"ಕಲಾಶಿಕ್ಷಣದಲ್ಲಿ ಶಿಕ್ಷಕರ ತರಬೇತಿಯು ಅವಶ್ಯಕವೆಂದು ಸಮಿತಿಯು ತೀರ್ಮಾನಕ್ಕೆ ಬಂದು ಈ ಕೆಳಗಿನ ಎರಡು ಹಂತಗಳು ಸೂಕ್ತವೆಂದು ಭಾವಿಸಲಾಗಿದೆ. ೧. ಪ್ರಾಥಮಿಕ ಶಾಲೆಯ ಕಲಾಶಿಕ್ಷಕರುಗಳಿಗೆ ಎರಡು ವರ್ಷಗಳ ಪ್ರಾಥಮಿಕ ಶಿಕ್ಷಣದ ನಂತರ ಕಲಾಶಿಕ್ಷಕರ ತರಬೇತಿ. ೨. ಐದು ವರ್ಷದ ಡಿಪ್ಲೋಮಾ ಮುಗಿದ ನಂತರ ಕಲಾಶಿಕ್ಷಣದ ಡಿಪ್ಲೋಮಾ ತರಬೇತಿ, ಕಲಾಶಿಕ್ಷಣದಲ್ಲಿ ಶಿಕ್ಷಕರ ತರಬೇತಿ ಕಾರ್ಯಕ್ರಮಗಳು, ವಲಯಕ್ಕೆ ಒಂದು ಶಾಲೆಯಲ್ಲಿ ಪ್ರಾರಂಭ ಮಾಡಬೇಕು ಎಂದು ಸಮಿತಿಯು ಬಲವಾಗಿ ನಂಬಿದೆ. ಇದು ಖಾಯಂ ಆಗಿ ಕಾರ್ಯನಿರ್ವಹಿಸುವಂತಿರಬೇಕು. "ಸ್ನಾತಕೋತ್ತರ ಪದವಿ ಅಥವಾ ಸ್ನಾತಕೋತ್ತರದ ಡಿಪ್ಲೋಮಾ ಪದವಿ ಪಡೆದಿರುವವರನ್ನು ಮಾತ್ರವೇ ಕಲಾಶಿಕ್ಷಕರುಗಳನ್ನಾಗಿ ನೇಮಿಸಬೇಕೆಂದು ಸಹ ಸಮಿತಿಯು ತೀರ್ಮಾನವನ್ನು ಕೈಗೊಂಡಿತು. ಈ ಸಮಿತಿಯ ವರದಿಯನ್ನು ಸಿದ್ಧಪಡಿಸಲು ಸಹಾಯ ನೀಡಿದ ಸದಸ್ಯರುಗಳಿಗೆ ವಂದನೆಗಳು" ಎಂದು ಟಿ.ಪಿ. ಇಸ್ಸಾರ್ ವರದಿಯ ಉಪಸಮಿತಿ ಅಧ್ಯಕ್ಷರುಗಳಾದ ಎಸ್.ಜಿ. ವಾಸುದೇವ್ ಮೇಲಿನ ಅಂಶಗಳನ್ನು ಹೇಳಿದ್ದಾರೆ.

ಟಿ.ಪಿ. ಇಸ್ಸಾರ್ ವರದಿ ಜಾರಿಯಾದ ಮೇಲೆ ಸರ್ಕಾರ ಆದೇಶ ನೀಡಿದರೂ ಕೂಡ ಪಠ್ಯಕ್ರಮವನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲಿಲ್ಲ. ಈ ವರದಿಯಲ್ಲಿ ಜಾರಿಯಲ್ಲಿ ಇರುವಂತಹ ಕೋರ್ಸ್‌ಗಳನ್ನು ಎಲ್ಲಾ ಶಾಲೆಗಳು ಪ್ರಾರಂಭಿಸದೇ ಇರುವುದು. ಪ್ರಸ್ತುತ ಸಮಯದಲ್ಲಿ ಈ ಕೋರ್ಸ್‌ಗೆ ಮಾನ್ಯತೆ ಇಲ್ಲವಾಗಿರುವುದು ಹಾಗೂ ಟಿ.ಪಿ. ಇಸ್ಸಾರ್ ವರದಿಯನ್ನು ಸಮಿತಿ ರಚನೆ ಮಾಡುವಾಗ ಕೊನೆಯಲ್ಲಿ ಈ ಕೋರ್ಸ್‌ಗಳನ್ನು ಕಲಿತಂತಹ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ವೃಂದ ಮತ್ತು ನೇಮಕಾತಿಯೊಳಗೆ ಸೇರಿಸಬೇಕಾಗಿತ್ತು. ಆದರೆ ಆ ಸಮಿತಿಯು ಅದರ ಬಗ್ಗೆ ಯೋಚನೆ ಮಾಡಿಲ್ಲ.

ಯಾವುದೇ ಒಂದು ವರದಿ ಅಥವಾ ಹೊಸ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಬೇಕಾದರೆ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಇಲ್ಲಿ ಎರಡು ವರ್ಷ ಫೌಂಡೇಶನ್ ಕೋರ್ಸ್ ಹಾಗೂ ಮೂರು ವರ್ಷ ವಿಶೇಷ ಪರಿಣಿತಿಯನ್ನು ಮುಗಿಸಿದರೂ ಕೂಡ ಈ ಕೋರ್ಸ್‌ಗಳನ್ನು ಕಲಿತಂತಹ ಸಾವಿರಾರು ವಿದ್ಯಾರ್ಥಿಗಳ ಸ್ಥಿತಿ ಅತಂತ್ರವಾಗಿದೆ. ಬೇರೆ ವಿಷಯದಲ್ಲಿ ಪಿಯುಸಿ ಎರಡು ವರ್ಷ ಹಾಗೂ ಬಿ.ಎ. ಮೂರು ವರ್ಷ ಮುಗಿಸಿದರೆ ಒಂದು ಪದವಿಯೆಂದು ಪ್ರಮಾಣ ಪತ್ರವನ್ನು ನೀಡುತ್ತಾರೆ. ಆದರೆ ಇಲ್ಲಿ ಐದು ವರ್ಷ ವಿದ್ಯಾಭ್ಯಾಸ ಮಾಡಿದರೂ ಕೂಡ ಪದವಿಗೆ ತತ್ಸಮವೆಂದು ಪ್ರಮಾಣ ಪತ್ರವನ್ನು ನೀಡುತ್ತಿಲ್ಲ.

ಸರ್ಕಾರವು ಕಡ್ಡಾಯವಾಗಿ ಈ ಕೋರ್ಸ್‌ಗಳನ್ನು ನಡೆಸಲು ಅವಕಾಶ ನೀಡಿದರೂ ಕೂಡ ಇಲ್ಲಿ ಕಲಿತಂತಹ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಕೇಳುವವರು ಯಾರೂ ಇಲ್ಲವಾಗಿದ್ದಾರೆ. ಇಲ್ಲಿ ವಿದ್ಯಾರ್ಥಿಗಳು ಬೀದಿಪಾಲಾಗುವಂತಹ ಸ್ಥಿತಿ ಒದಗಿಬಂದಿದೆ.

ಟಿ.ಪಿ. ಇಸ್ಸಾರ್ ವರದಿಯ ಬಗ್ಗೆ ಕೆಲವು ವಿದ್ವಾಂಸರ ಅನಿಸಿಕೆಗಳು

ಪ್ರೊ. ಅಂದಾನಿ ಎ.ಜ.:- ದಿ ಐಡಿಯಲ್ ಕಾಲೇಜ್ ಆಫ್ ಫೈನ್ ಆರ್ಟ್, ಕಲಬುರ್ಗಿ, ಟಿ.ಪಿ. ಇಸ್ಸಾರ್ ಅವರ ವರದಿಯು ಚೆನ್ನಾಗಿದ್ದು, ಅದರಲ್ಲಿ ಕೆಲವರನ್ನು ಕಲಾಶಿಕ್ಷಣಕ್ಕೆ ಸಂಬಂಧಪಟ್ಟಿಲ್ಲದ ವ್ಯಕ್ತಿಗಳಿಂದ ಕಾರುಬಾರು ನಡೆಸಿ, ಟಿ.ಪಿ. ಇಸ್ಸಾರ್ ಅವರ ವರದಿ ಕಲಾಕ್ಷೇತ್ರಕ್ಕೆ ಕಲಾಶಾಲೆಗಳಿಗೆ ಪ್ರಗತಿಯಾಗದೆ ಹಾಗೆಯೇ ಮುಂದುವರೆದವು. ಕೆಲವೊಂದು ವಿಷಯದಲ್ಲಿ ಚೆನ್ನಾಗಿ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕಲಾಶಾಲೆಗಳ ಶಿಸ್ತಿನಿಂದ ಒಂದು ವ್ಯವಸ್ಥಿತವಾಗಿ ಪೀಠೋಪಕರಣಗಳ ಮೂಲಕ ಗ್ರಂಥಾಲಯ, ಮೂಲಸೌಕರ್ಯಗಳಿಂದ ಕೂಡಿರಬೇಕೆಂದು ವಿಶೇಷವಾದ ಸಮಿತಿಯ ಮೂಲಕ ವರದಿ ಜಾರಿಗೆ ತರಲಾಯಿತು. ಆದರೆ ಕೆಲವು ಕಲಾಶಾಲೆಯವರ ವರ್ತನೆಯಿಂದ ವರದಿ ವಿಫಲಗೊಂಡಿದೆ ಎಂದು ವಿವರಿಸುತ್ತಾರೆ.

ಎ.ಎಂ. ಪ್ರಕಾಶ್, ಪ್ರಾಚಾರ್ಯರು, ಕಲಾಮಂದಿರ, ಬೆಂಗಳೂರು

ಟಿ.ಪಿ. ಇಸ್ಸಾರ್ ವರದಿ ಜಾರಿಯಿಂದ ಚಿತ್ರಕಲಾ ಕ್ಷೇತ್ರದಲ್ಲಿ ಗೊಂದಲಗಳಾಯಿತು. ಪಠ್ಯಾವಳಿ ಬದಲಾವಣೆಯ ಉದ್ದೇಶ ಸರಿಯಿತ್ತು. ಆದರೆ ಅದರ ದಾರಿ ಸ್ಪಷ್ಟವಾಗಿರದೇ ಎಲ್ಲರಲ್ಲೂ ಗೊಂದಲವಾಯಿತು. ಈ ಸಮಿತಿಯಲ್ಲಿ ನಿರ್ಧರಿಸಿ ಜಾರಿಗೆ ತಂದ ವಿಶೇಷ ಪರಿಣಿತಿ(ಚಿತ್ರಕಲೆ) ಕೋರ್ಸ್‌ಗಳು ಡಿಪ್ಲೋಮಾ ಸೇರದೆ ಪದವಿಯೂ ಆಗದೇ ತ್ರಿಶಂಕು ಸ್ಥಿತಿಯ ಕೋರ್ಸ್‌ಗಳಾಯಿತು.

ಆರ್.ಎಲ್. ಜಾಧವ, ಪ್ರಾಚಾರ್ಯರು, ಭವಾನಿ ಲಲಿತಕಲಾ ಮಹಾವಿದ್ಯಾಲಯ, ಬಳ್ಳಾರಿ

ಟಿ.ಪಿ. ಇಸ್ಸಾರ್ ವರದಿ ಬಂದ ಮೇಲೆ ಚಿತ್ರಕಲಾ ವಿದ್ಯಾರ್ಥಿಗಳ ಭವಿಷ್ಯ ಗಂಭೀರವಾದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ವಿದ್ಯಾರ್ಥಿಗಳಿಗೆ ಕೆಲಸವಿಲ್ಲ. ವರದಿಯಲ್ಲಿ ತಿಳಿಸಿದಂತೆ ಎ.ಟಿ.ಸಿ., ಬಿವಿಇಡಿ ಕೋರ್ಸ್‌ಗಳನ್ನು ನಡೆಸುತ್ತಿದ್ದ ಹಿನ್ನೆಲೆಯಲ್ಲಿ ತುಂಬಾ ತೊಂದರೆಯನ್ನು ಎದುರಿಸುತ್ತಿದೆ. ಎರಡು ವರ್ಷ ಫೌಂಡೇಶನ್ ಕೋರ್ಸ್ ಮುಗಿಸಿದ ನಂತರ ಎ.ಟಿ.ಸಿ. ಕೋರ್ಸ್ ಐದು ವರ್ಷದ ವಿಶೇಷ ಪರಿಣಿತಿಯನ್ನು ಮುಗಿಸಿದ ನಂತರ ಬಿಇಡಿ ಕೋರ್ಸ್‌ನ್ನು ಕೊಟ್ಟು ಸಿ ಆ್ಯಂಡ್ ಆರ್ ರೂಲ್‌ನಲ್ಲಿ ಬದಲಾವಣೆಯಾಗಲಿ ಅಥವಾ ಡಿ.ಎಂ.ಸಿ.ಗೆ ಸರಿಸಾಟಿ ಎಟಿಸಿ ಎಂದು ಎಎಂ. ಸರಿಸಮಾನ ಎಇಡಿ ಎಂದು ಸರಕಾರದಿಂದ ಆದೇಶ ಮಾಡಿಸಬೇಕಿತ್ತು. ಆದರೆ ಇದರ ಬಗ್ಗೆ ಒಬ್ಬರೂ ತಲೆಕೆಡಿಸಿಕೊಂಡಿಲ್ಲ.

ಯೂಸೆಫ್ ಆಲಿ ಖಸಾಸಿ, ಪ್ರೌಢ ಶಾಲಾ, ಚಿತ್ರಕಲಾ ಶಿಕ್ಷಕರು, ಹುಬ್ಬಳ್ಳಿ

ಟಿ.ಪಿ. ಇಸ್ಸಾರ್ ವರದಿಯಿಂದ ಕಲಾಶಿಕ್ಷಣಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಏಳಿಗೆಯೇನೂ ಆಗಿಲ್ಲ. ಬದಲಾವಣೆಗಳು ಆಗಿಲ್ಲ ಎಂದು ಹೇಳಿದರು.

ಬಿ.ಎಂ. ಪಾಟೀಲ, ಉಪನ್ಯಾಸಕರು. ಜೆ.ಎಸ್.ಎಸ್. ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ

ಟಿ.ಪಿ. ಇಸ್ಸಾರ್ ವರದಿ ಜಾರಿಯಾದ ಮೇಲೆ ನಮ್ಮ ಕಲಾಶಿಕ್ಷಣ ಪಠ್ಯಕ್ರಮ ಬದಲಾವಣೆ ಹೊಂದಿದರೂ ಕಲಾಶಾಲೆ ಮತ್ತು ಕಲಾಶಿಕ್ಷಣಕ್ಕೆ ಅಪಾಯವೇ ಹೆಚ್ಚಾಗಿ ಆಗಿದೆ. ಚಿತ್ರಕಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು ನಿಂತುಹೋಯಿತು. ಈ ವರದಿಯಲ್ಲಿ ಎ.ಟಿ.ಸಿ. ಮತ್ತು ಎ.ಇಡಿ ತರಬೇತಿ ಕೋರ್ಸ್‌ಗಳು ಪ್ರಾರಂಭವಾಗಿ ನಿಂತು ಹೋದವು. Crader and Regrtment(C&R)ಗಳಿಗೆ ಈ ಕೋರ್ಸ್‌ಗಳನ್ನು ಸೇರಿಸಲಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ನಿರುದ್ಯೋಗಿಗಳಾಗಿ ಅವರ ಸಂಖ್ಯೆ ಬೆಳೆಯುತ್ತ ಬಂದಿದೆ. ಈ ಕುರಿತು ಕೆಲವರು ಹದಿನಾಲ್ಕು ವರ್ಷಗಳಿಂದ ಹಲವಾರು ಸಾರಿ ಹೋರಾಟಗಳನ್ನು ನಡೆಸಿದರೂ ಕೂಡ ಉತ್ತರ ಮಾತ್ರ ಶೂನ್ಯವಾಗಿದೆ. ಈಗ ಕಲಾಶಾಲೆಗಳನ್ನು ನಡೆಸುವುದು ಕಷ್ಟವಾಗಿದೆ. ವಿದ್ಯಾರ್ಥಿಗಳ ದೃಷ್ಟಿ ಯಿಂದಲಾದರೂ ಎ.ಟಿ.ಸಿ. ಮತ್ತು ಬಿ.ವಿ.ಇಡಿ ಕೋರ್ಸ್‌ಗಳನ್ನು ಡಿ.ಎಂ.ಸಿ. ಮತ್ತು ಎ.ಎಂ.ಗೆ ತತ್ಸಮಾನವೆಂದು ಪರಿಗಣಿಸಬೇಕಾದದ್ದು ಅವಶ್ಯಕವೆನಿಸುತ್ತದೆ. ಇದರ ಪ್ರಯತ್ನಕ್ಕೆ ಯಾರೂ ಭಾಗಿಯಾಗುತ್ತಿಲ್ಲ.

ಕರ್ನಾಟಕ ಸರ್ಕಾರದ ನಡಾವಳಿಗಳು

"**ವಿಷಯ:-** ಚಿತ್ರಕಲಾ ಶಿಕ್ಷಣದ ಪರಿಷ್ಕೃತ ಪಠ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ

೧. ಸರ್ಕಾರದ ಆದೇಶದ ಸಂಖ್ಯೆ: ಇಡಿ.೬.೮.ಎಂಪಿಎಸ್ ೯೬/ದಿನಾಂಕ ೨-೧-೯೯೨

೨. ಶ್ರೀ ಟಿ.ಪಿ. ಇಸ್ಸಾರ್, ಅಧ್ಯಕ್ಷರು, ಚಿತ್ರಕಲಾ ವಿಶೇಷ ತಜ್ಞರ ಸಮಿತಿ ಇವರ ಪತ್ರ ದಿನಾಂಕ ೨೧-೧೦-೯೯೭.

೩. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಪತ್ರ ಸಂಖ್ಯೆ: ಚಿತ್ರಕಲೆ೨/ ಉ.ಚಿ.ಶಿ.ಪ.ಪ.ಅ.ಪ್ರಾ.ಶಿ.ಪ್ರೌ.ಶಿ.೯೭-೯೮, ದಿನಾಂಕ ೨೪-೧೧-೯೯೭.

೪. ನಿರ್ದೇಶಕರು, ಪ್ರೌಢ ಶಿಕ್ಷಣ ಇವರ ಪತ್ರ ಸಂಖ್ಯೆ: ಚಿತ್ರಕಲಾ೧(೨) ಬಿ.ಕ.ಗಾ.ಪ್ರಾಂ ಸಭೆ ೧೨೮/೯೯-೨೦೦೦, ದಿನಾಂಕ ೨೦-೧೧-೨೦೦೦.

ಪ್ರಸ್ತಾವನೆ:-

ಮೇಲೆ (೧)ರಲ್ಲಿ ಓದಲಾಗಿರುವ ದಿನಾಂಕ ೨-೧-೯೯೭ರ ಸರ್ಕಾರದ ಆದೇಶದಲ್ಲಿ, ರಾಜ್ಯದಲ್ಲಿರುವ ಚಿತ್ರಕಲಾ ಶಾಲೆಗಳ ಗುಣಮಟ್ಟವನ್ನು ಕಾಪಾಡಿಕೊಂಡು ಬರಲು ಹಾಗೂ ಕಲಾ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಸಮಗ್ರ ಅಧ್ಯಯನ ನಡೆಸಿ, ಸೂಕ್ತ ಸಲಹೆ ಸೂಚನೆಗಳನ್ನು ನೀಡಲು ಶ್ರೀ ಟಿ.ಪಿ. ಇಸ್ಸಾರ್ ಇವರ ಅಧ್ಯಕ್ಷತೆಯಲ್ಲಿ ವಿಶೇಷ ತಜ್ಞರ ಸಮಿತಿಯನ್ನು ರಚಿಸಲಾಗಿತ್ತು.

ಸದರಿ ವಿಶೇಷ ತಜ್ಞರ ಸಮಿತಿಯು ದೀರ್ಘವಾಗಿ ಕಲಾ ಶಿಕ್ಷಣದ ಪಠ್ಯ ಕ್ರಮವನ್ನು ಅಧ್ಯಯನ ಮಾಡಿ, ರಾಷ್ಟ್ರದ ಇತರೆ ಭಾಗಗಳಲ್ಲಿ ಪ್ರಸ್ತುತವಿರುವ ಕಲಾ ಶಿಕ್ಷಣ ಪಠ್ಯಕ್ರಮವನ್ನು ಅನುಲಕ್ಷಿಸಿ ನೂತನ ಪಠ್ಯಕ್ರಮವನ್ನು ಸಿದ್ಧಪಡಿಸಿದೆ. ಈ ಪಠ್ಯಕ್ರಮವು, ರಾಜ್ಯದ ಚಿತ್ರಕಲಾ ಶಿಕ್ಷಣದ ಉತ್ತಮ ಕಲಾ ವಿವರವನ್ನು ಹಾಗೂ ಉತ್ತಮ ಕಲಾ ಶಿಕ್ಷಣವನ್ನು ತರಬೇತುಗೊಳಿಸುವ ದಿಶೆಯಲ್ಲಿ ಸೂಕ್ತವಾಗಿ ಸ್ಪಂದಿಸಲು ಶಕ್ತರಾಗುವಂತೆ ಮಾಡಿ, ಸ್ವಯಂಉದ್ಯೋಗಕ್ಕೆ ಅವಕಾಶ ಮಾಡಿಕೊಡುತ್ತದೆ ಎಂದು ಮೇಲೆ(೨)ರಲ್ಲಿ ಓದಲಾದ ದಿನಾಂಕ ೨೧-೧೦-೧೯೯೭ರ ಪತ್ರದಲ್ಲಿ ಚಿತ್ರಕಲಾ ತಜ್ಞರ ಸಮಿತಿಯ ಅಧ್ಯಕ್ಷರು ಶಿಫಾರಸ್ಸು ಮಾಡಿರುತ್ತಾರೆ.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು (೩)ರಲ್ಲಿ ಓದಲಾದ ದಿನಾಂಕ ೨೪-೧೧-೧೯೯೭ರ ಪತ್ರದಲ್ಲಿ ವಿಶೇಷ ತಜ್ಞರ ಸಮಿತಿಯು ಸಲ್ಲಿಸಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿದ ನಂತರ ಪರಿಷ್ಕೃತ ಪಠ್ಯಕ್ರಮ ಇಂದಿನ ಅಗತ್ಯಗಳಿಗೆ ಸೂಕ್ತವಾಗಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಅಲ್ಲದೆ (೪)ರಲ್ಲಿ ಓದಲಾದ ದಿನಾಂಕ ೨೦-೧೧-೨೦೦೦ರ ಪತ್ರದಲ್ಲಿ ಪರಿಷ್ಕೃತ ಪಠ್ಯಕ್ರಮದ ಅನುಮೋದನೆ ಕೋರಿರುತ್ತಾರೆ. ಸದರಿ ಪಠ್ಯ ಕ್ರಮವನ್ನು ಅನುಮೋದಿಸಲು ದಿನಾಂಕ ೧೫-೦೩-೨೦೦೧ರಂದು ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ.೩೭ ಎಂಪಿ.ಎಸ್. ೯೯

ಬೆಂಗಳೂರು ದಿನಾಂಕ ೨೦ನೇ ಜೂನ್ ೨೦೦೧

ಸರ್ಕಾರವು ಶ್ರೀ ಟಿ.ಪಿ. ಇಸ್ಸಾರ್ ವಿಶೇಷ ತಜ್ಞರ ಸಮಿತಿಯ ವರದಿಯನ್ನು ಕೂಲಂಕಶವಾಗಿ ಪರಿಶೀಲಿಸಿದ ನಂತರ, ರಾಜ್ಯದಲ್ಲಿನ ಚಿತ್ರಕಲಾ ಶಾಲೆಗಳ ಗುಣಮಟ್ಟ ಹೆಚ್ಚಿಸಲು ಪೂರಕವಾಗಿರುವ ಕಲಾ ಶಿಕ್ಷಣದ ಬಗ್ಗೆ ವಿಶೇಷ ತಜ್ಞರ ಸಮಿತಿ ರಚಿಸಿರುವ ಪಠ್ಯ ಕ್ರಮವನ್ನು ಪಾಲಿಸಲು ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ. ಇದನ್ನು ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಜಾರಿಗೆ ತರುವುದು."[೬]

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ,

ಬೆಂಗಳೂರು-೧

ಸಂಖ್ಯೆ: ಚಿತ್ರಕಲೆ೧(೨)ಸಮಿತಿ.ರಚನೆ-೧/ಇತರೆ೧೫/೯೬-೯೭-ದಾವೆಲ/೨೦೦೧-೨೦೦೨

ದಿನಾಂಕ ೩೧-೧೦-೨೦೦೧

"**ವಿಷಯ:-** ಚಿತ್ರಕಲಾ ಶಿಕ್ಷಣದ ಪರಿಷ್ಕೃತ ಪಠ್ಯಕ್ರಮಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುವ ಬಗ್ಗೆ

ಉಲ್ಲೇಖ:- ೧. ಸರ್ಕಾರದ ಆದೇಶದ ಸಂಖ್ಯೆ: ಇಡಿ೩೭/ಎಂಪಿಎಸ್೯೯/ ದಿನಾಂಕ ೨೦-೦೬-೨೦೦೧

೨. ಆಯುಕ್ತರ ಜ್ಞಾಪನದ ಸಮಸಂಖ್ಯೆಯ ದಿನಾಂಕ ೨೭-೦೬-೨೦೦೧ ಹಾಗೂ ದಿನಾಂಕ ೨೫-೦೭-೨೦೦೧.

೩. ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ ದಿನಾಂಕ ೧೮-೧೦-೨೦೦೧

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ಎಲ್ಲಾ ಚಿತ್ರಕಲಾ ಶಾಲೆಗಳಿಗೆ ಮಾನ್ಯ ಶ್ರೀ ಟಿ.ಪಿ. ಇಸ್ಸಾರ್ ಸಮಿತಿಯ ವಿಶೇಷ ತಜ್ಞರು ರಚಿಸಿದ್ದ ನೂತನ ಪಠ್ಯಕ್ರಮಗಳನ್ನು ಉಲ್ಲೇಖ(೧) (೨)ರಲ್ಲಿ ತೋರಿಸಿರುವಂತೆ ಪ್ರಸಕ್ತ ಸಾಲಿನಿಂದಲೇ ಕಾರ್ಯರೂಪಕ್ಕೆ ತರುವಂತೆ ಆದೇಶಿಸಲಾಗಿತ್ತು. ಆದರೆ ಹಲವು ಚಿತ್ರಕಲಾ ಶಾಲೆಗಳವರು ನೂತನ ಪಠ್ಯಕ್ರಮವನ್ನು ಅನುಷ್ಠಾನ ಗೊಳಿಸುವ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆಯನ್ನು ದಾಖಲಿಸಿ ತಾತ್ಕಾಲಿಕ ತಡೆಯಾಜ್ಞೆಯನ್ನು ತಂದು ರಾಜ್ಯದಲ್ಲಿನ ಚಿತ್ರಕಲಾ ಶಾಲೆಗಳಲ್ಲಿ ಗೊಂದಲ ವನ್ನೇರ್ಪಡಿಸಿದ್ದು, ಉಲ್ಲೇಖ(೩)ರ ಸದರಿ ದಾವೆಯನ್ನು ನ್ಯಾಯಾಲಯವು ದಿನಾಂಕ ೧೮-೧೦-೨೦೦೧ ತಿರಸ್ಕರಿಸಿ ಸರ್ಕಾರ ಆದೇಶವನ್ನು ಎತ್ತಿಹಿಡಿದಿರುವುದರಿಂದ ರಾಜ್ಯದಲ್ಲಿನ ಎಲ್ಲಾ ಚಿತ್ರಕಲಾ ಶಾಲೆಗಳವರು ಮತ್ತು ಇತರ ಅಧೀನ ಅಧಿಕಾರಿಗಳು ಉಲ್ಲೇಖ(೧) (೨)ರ ಆದೇಶವನ್ನು ಕಡ್ಡಾಯವಾಗಿ ಪಾಲಿಸಲು ಆದೇಶಿಸಲಾಗಿದೆ."[೧೭]

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿನ ಚಿತ್ರಕಲಾ ಶಿಕ್ಷಣ ಪದ್ಧತಿಯಿಂದ ಕಲಾಕ್ಷೇತ್ರಕ್ಕೆ ಅನುಕೂಲ ಮತ್ತು ಅನಾನುಕೂಲತೆಗಳು

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುತ್ತಿರುವ ಪರೀಕ್ಷೆಗಳು, ಶಿಕ್ಷಣ ಪದ್ಧತಿಗಳು, ಆಯಾ ತರಗತಿಗಳ ಪಠ್ಯಕ್ರಮ ಇತ್ತೀಚೆಗೆ ಸುಧಾರಿತ ಕ್ರಮದಲ್ಲಿ ಮೂಡಿಬರುತ್ತಿವೆ. ಚಿತ್ರಕಲೆ ಸೃಜನಾತ್ಮಕವಾದುದು. ಆದ್ದರಿಂದ ಇಂತಹ ದೃಷ್ಟಿಕೋನದಿಂದ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಶಾಲಾಹಂತದ ಬೌದ್ಧಿಕ ಮಟ್ಟವನ್ನು ಲಕ್ಷ್ಯದಲ್ಲಿರಿಸಿಕೊಂಡಿದೆ. ಐದರಿಂದ ಹತ್ತನೆಯ ತರಗತಿಯ ಮಕ್ಕಳಿಗಾಗಿಯೇ ವಿಶಿಷ್ಟವಾದ ಪಠ್ಯಕ್ರಮದ ಅಭ್ಯಾಸ ಪತ್ರಿಕೆ ರಚಿಸಿದೆ. ರಾಜ್ಯದಾದ್ಯಂತ ಉಚಿತವಾಗಿ ಪಠ್ಯಕ್ರಮವನ್ನು ವಿದ್ಯಾರ್ಥಿಗಳಿಗೆ, ಅಧ್ಯಾಪಕರುಗಳಿಗೆ, ಶಿಕ್ಷಕರುಗಳಿಗೆ ವಿತರಿಸಿದೆ. ಇದು ಬಹು ಪ್ರಶಂಸನೀಯ ಕಾರ್ಯವಾಗಿದೆ. ಈ ಮೊದಲು ಚಿತ್ರಕಲಾ ವಿಷಯಕ್ಕೆ ಬೋಧನೆಗೆ ನಿರ್ದಿಷ್ಟವಾದ ಪಠ್ಯಕ್ರಮ ಇರಲಿಲ್ಲ ಹಾಗೂ ಇತ್ತೀಚೆಗೆ ಚಿತ್ರಕಲೆಯನ್ನು ಐದರಿಂದ ಒಂಭತ್ತನೆಯ ತರಗತಿಯವರೆಗೆ ಪರೀಕ್ಷಾ ವಿಷಯವನ್ನಾಗಿಸಿದೆ ಮತ್ತು ಕಡ್ಡಾಯ ವಿಷಯಗಳನ್ನು "ಎ" ವಿಭಾಗವೆಂದು ಚಿತ್ರಕಲೆ, ಹಸ್ತಕೌಶಲ್ಯ, ಸಂಗೀತ, ತೋಟಗಾರಿಕೆ ಇತ್ಯಾದಿಗಳನ್ನು "ಬಿ" ವಿಭಾಗವೆಂದು ವರ್ಗೀಕರಿಸಲಾಗಿದೆ. ಇದರಿಂದ ವಿದ್ಯಾರ್ಥಿ ಗಳಿಗೆ ಚಿತ್ರಕಲಾ ವಿಷಯವನ್ನು ಆಸಕ್ತಿಯಿಂದ ಕಲಿಯಲು ಸಹಕಾರಿಯಾಗುತ್ತಿದೆ. ಅದರಂತೆ ಮಾಧ್ಯಮಿಕ ಶಾಲೆಗಳಲ್ಲಿ ಪ್ರತಿ ವಿದ್ಯಾರ್ಥಿಯ ಶುಲ್ಕದಲ್ಲಿ ತಲಾ ಹತ್ತು ರೂಪಾಯಿಯಂತೆ

ಚಿತ್ರಕಲಾ ವಿಷಯಕ್ಕೆಂದು ಸರಕಾರ ನಿಯಮ ಮಾಡಿದೆ. ಇದರಿಂದ ಶಾಲೆಯಲ್ಲಿಯ ಚಿತ್ರಕಲಾ ಶಿಕ್ಷಕರಿಗೆ ಕಲೆಗೆ ಸಂಬಂಧಪಟ್ಟ ವಸ್ತು ಖರೀದಿಸಿ ಚಿತ್ರಕಲಾ ಆಸಕ್ತ ವಿದ್ಯಾರ್ಥಿಗಳಿಗೆ ಅವರ ಪರಿಕರಗಳನ್ನು ಒದಗಿಸಲು ಉತ್ತಮ ಸಹಕಾರಿಯಾಗಿದೆ.

ಶಾಲಾ ಹಂತದಲ್ಲಿ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ವಿದ್ಯಾರ್ಥಿಗಳಿಗೆ ಪ್ರತಿಭಾ ಕಾರಂಜಿಯೆಂಬ ಉತ್ತಮ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮವನ್ನು ಪ್ರತಿವರ್ಷ ನಡೆಸುತ್ತಿದೆ. ಇದರಿಂದ ಶಾಲಾಮಟ್ಟದ ವಿದ್ಯಾರ್ಥಿ ಶಾಲಾ ಹಂತದಿಂದ ರಾಜ್ಯಮಟ್ಟದವರೆಗೂ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ ತನ್ನ ಪ್ರತಿಭೆಯನ್ನು ತೋರಿಸಲು ಒಂದು ಅವಕಾಶ ಕೊಟ್ಟಂತಾಗಿದೆ. ಈ ದೃಷ್ಟಿಯಿಂದ ಚಿತ್ರಕಲಾ ಶಿಕ್ಷಣವನ್ನು ವಿದ್ಯಾರ್ಥಿಗಳು ತಮ್ಮಲ್ಲಿರುವಂತಹ ಪ್ರತಿಭೆಯನ್ನು ಅನಾವರಣಗೊಳಿಸುತ್ತಾರೆ. ಚಿತ್ರಕಲಾ ಶಿಕ್ಷಣ ೧೯೧೯ರಿಂದಲೇ ಪ್ರಾರಂಭವಾಗಿದೆ. ಮೊದಮೊದಲಿಗೆ ಕಲಾಶಿಕ್ಷಣ ತನ್ನ ದಾರಿಯನ್ನು ಕಂಡುಕೊಳ್ಳುವಲ್ಲಿ ಸಮಯ ಕಳೆದಿದೆ. ಸ್ವಾತಂತ್ರ್ಯ ಬಂದ ನಂತರದಲ್ಲಿ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಅಡಿಯಲ್ಲಿ ತನ್ನ ಬೇರುಗಳನ್ನು ಕಂಡುಕೊಂಡಿದೆ. ಕಾಲಕ್ರಮೇಣ ಕಲಾಶಿಕ್ಷಣದ ವ್ಯಾಪ್ತಿ ದೊಡ್ಡದಾದ ಸಂದರ್ಭದಲ್ಲಿ ಇಂದಿನ ಯುವ ಜನಾಂಗದ ದೃಷ್ಟಿಕೋನದಲ್ಲಿ ತಾಂತ್ರಿಕತೆಯ ಬೆಳವಣಿಗೆ ಜಗತ್ತಿನಲ್ಲಿ ಕವಲೊಡೆದು ಕಲೆ ಅರಳತೊಡಗಿದೆ.

ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯಲ್ಲಿ ಇದ್ದಷ್ಟು ವರ್ಷ ಚಿತ್ರಕಲಾ ಶಿಕ್ಷಣ ಪದ್ಧತಿಯಿಂದ ವಿದ್ಯಾರ್ಥಿಗಳಿಗೆ, ಕಲಾಕ್ಷೇತ್ರಕ್ಕೆ ಅನುಕೂಲವೇ ಹೆಚ್ಚಾಗಿತ್ತು. ಕಾರಣ ಚಿತ್ರಕಲಾ ಶಿಕ್ಷಣ ಪದ್ಧತಿಯಿಂದ ವಿದ್ಯಾರ್ಥಿಗಳಿಗೆ ಸರಕಾರಿ ಕೆಲಸದ ಅನುಕೂಲತೆ ಇತ್ತು. ಶಿಕ್ಷಣ ಪದ್ಧತಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಅನ್ವಯವಾಗುವಂತೆ ರಚಿಸಲಾಗಿತ್ತು. ಇದರಿಂದ ಪ್ರತಿವರ್ಷ ಸಾಕಷ್ಟು ಸಂಖ್ಯೆಯಲ್ಲಿ ಕಲಾಶಾಲೆಗಳಲ್ಲಿ ಪ್ರವೇಶ ಪಡೆಯುತ್ತಿದ್ದರು. ಸರಕಾರಿ ಕೆಲಸಕ್ಕೂ ಸೇರಿದವರು ಹೆಚ್ಚು. ವಿದ್ಯಾರ್ಥಿಗಳಿಗೆ ಚಿತ್ರಕಲಾ ಶಿಕ್ಷಣ ಪಡೆಯುವಂತೆ ಪೋಷಕರು ಪ್ರೋತ್ಸಾಹಿಸುತ್ತಿದ್ದರು. ಆ ವೇಳೆಯಲ್ಲಿ ಸಂಪೂರ್ಣ ಕೋರ್ಸ್‌ಗಳು ಅಲ್ಲದೆ ಆ ಇಲಾಖೆ ವತಿಯಿಂದಲೇ ಪರೀಕ್ಷೆ ಮತ್ತು ಆಡಳಿತ ಎರಡೂ ಇದ್ದುದರಿಂದ ಯಾವುದೇ ರೀತಿಯಾಗಿ ತೊಂದರೆ ಮತ್ತು ಗೊಂದಲ ಗಳಿರಲಿಲ್ಲ. ಈ ಹಿಂದೆ ಡಿ.ಎಂ.ಸಿ. ಹಾಗೂ ಎ.ಎಂ.ಜಿ.ಡಿ. ಆರ್ಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳ ಪ್ರಾರಂಭದಲ್ಲಿ ಶಿಕ್ಷಣ ಪಡೆದವರಿಗೆ ಸರ್ಕಾರ ಸಾಕಷ್ಟು ಅನುಕೂಲಕರ ವಾತಾವರಣ ದಿಂದ ಸರ್ಕಾರಿ ಚಿತ್ರಕಲಾ ಶಿಕ್ಷಕರಾಗಲು ಹಾಗೂ ಅನೇಕರಿಗೆ ಖಾಸಗಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಲು ಸಹಕಾರಿಯಾಗಿತ್ತು.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ಕಲಾ ಪರೀಕ್ಷೆಗಳನ್ನು ಉತ್ತಮವಾಗಿ ನಡೆಸಿಕೊಂಡು ಬಂದಿರುತ್ತಾರೆ. ಪ್ರತಿ ಕಲಾಶಾಲೆಗಳಿಂದ ಉಪನ್ಯಾಸಕರನ್ನು ಕರೆಸಿ ಮೌಲ್ಯಮಾಪನ ಮಾಡಿಸುತ್ತಿದ್ದರು. ಅದು ಅತ್ಯುತ್ತಮ ಸಂಪ್ರದಾಯವಾಗಿತ್ತು. ಆಗಾಗ ಚರ್ಚೆಗಳು ಸಹ ನಡೆದು ಕೆಲವು ಕಲಾಶಾಲೆಯವರು ಅದರಿಂದ ಅನುಕೂಲತೆಗಳನ್ನು ಪಡೆದುಕೊಂಡಿದ್ದಾರೆ. ಪರೀಕ್ಷೆಗಳಲ್ಲಿ

ಬದಲಾವಣೆಗಳನ್ನು ತಂದುಕೊಂಡಿದ್ದಾರೆ. ಕೆಲವರು ಪುಸ್ತಕ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಪ್ರಗತಿ ಸಾಧಿಸಿದ್ದಾರೆ.

ಎಸ್.ಎಸ್.ಎಲ್.ಸಿ. ನಂತರದ ಐದು ವರ್ಷಗಳ ಈ ವಿದ್ಯಾಭ್ಯಾಸ ಪ್ರೌಢ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಇರುವುದು ಸೂಕ್ತವಲ್ಲ. ಈ ಹಿಂದೆ ಅದು ಅನಿವಾರ್ಯ ಕಾರಣಗಳಿಂದ ಸರಿ ಅನಿಸಿತು. ಅದರಿಂದ ಸಾಕಷ್ಟು ಉಪಯೋಗ ಕೂಡ ಆಯಿತು. ಆದರೆ ಈಗ ಚಿತ್ರಕಲಾ ಶಿಕ್ಷಣದ ವ್ಯಾಪ್ತಿ ವಿಶ್ವಕ್ಕೆ ಸರಿಸಾಟಿಯಾಗಿರಬೇಕು. ಗುಣಮಟ್ಟ ಕಾಪಾಡಬೇಕು. ಎಸ್.ಎಸ್.ಎಲ್.ಸಿ. ನಂತರದ ಕೋರ್ಸ್ ಆದ್ದರಿಂದ ಪ್ರೌಢ ಶಿಕ್ಷಣ ಮಂಡಳಿಯಲ್ಲಿ ಇರಬಾರದಿತ್ತು. ಕಾಲೇಜು ಶಿಕ್ಷಣವಾಗಿದ್ದರೂ ಪ್ರೌಢ ಶಿಕ್ಷಣ ಮಂಡಳಿಯಲ್ಲಿದ್ದು ಅದರಿಂದ ಪಡೆಯುವ ಪ್ರಮಾಣ ಪತ್ರ ಅಥವಾ ಅಂಕಪಟ್ಟಿಗಳು ಪ್ರಾಥಮಿಕ ಮತ್ತು ಪ್ರೌಢ ಶಾಲೆಗೆ ಸೀಮಿತವಾಗಿದ್ದವು. ಬೇರೆ ರಾಜ್ಯಗಳಿಗೆ ಹೆಚ್ಚಿನ ಶಿಕ್ಷಣ ಪಡೆಯಲು ಹೋಗುವ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆದಾಯಕ ವಾಗಿತ್ತು. ಇಲ್ಲಿ ಐದು ವರ್ಷ ಚಿತ್ರಕಲಾ ಶಿಕ್ಷಣ ಪಡೆದರೂ ಪದವಿಗೆ ಮಾನ್ಯತೆ ಇರಲಿಲ್ಲ. ಚಿತ್ರಕಲಾ ಶಿಕ್ಷಣವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಆಗುತ್ತಿರಲಿಲ್ಲ. ಚಿತ್ರಕಲಾ ಬೋಧನೆಯಲ್ಲಿ ಯಾಂತ್ರಿಕತೆ ಇತ್ತು. ಆದರೆ ವಿದ್ಯಾರ್ಥಿಗಳಿಗೆ ಚಿತ್ರರಚನೆಯಲ್ಲಿ ಹೆಚ್ಚಿನ ಸ್ವಾತಂತ್ರ್ಯವಿರಲಿಲ್ಲ.

ಚಿತ್ರಕಲಾ ಕ್ಷೇತ್ರದ ಬಗ್ಗೆ ಸರ್ಟಿಫಿಕೇಟ್ ಮುದ್ರಣ ಮಾಡಿಸದೇ ಇಲಾಖೆಯ ಹೆಸರಿನಿಂದಲೇ ಮುಂದುವರೆಸಿದರು. ಈ ಬಗ್ಗೆ ಕಲಾ ಶಿಕ್ಷಣದ ಪ್ರಗತಿಯಾಗದೆ ರಾಜ್ಯಕ್ಕೆ ಮಾತ್ರ ಸೀಮಿತವಾಗಿತ್ತು. ಹೊರರಾಜ್ಯಗಳಲ್ಲಿ ಮಾನ್ಯತೆ ಇರಲಿಲ್ಲ. ಕಾರಣ ವಿದ್ಯಾರ್ಥಿಗಳಿಗೆ ಹಾಗೂ ಕಲಾಶಾಲೆಯವರು ತೊಂದರೆಯನ್ನು ಅನುಭವಿಸಿದ್ದಾರೆ.

ಎ.ಎಂ., ಜಿ.ಡಿ. ಮುಕ್ತಾಯಗೊಂಡು ಬಿ.ವಿ.ಎ. ಪದವಿ ಶಿಕ್ಷಣವನ್ನು ಪ್ರಾರಂಭಿಸಿದರು. ಮುಂಚೆ Skill Develop ಆಗುತ್ತಿತ್ತು. ಈಗ ಆಗುತ್ತಿಲ್ಲ. ಹಿಂದೆ ಹೊರಗಿನವರು ಬಂದು ಆಂತರಿಕ ಅಂಶಗಳನ್ನು ನೀಡುತ್ತಿದ್ದರು. ಆದ್ದರಿಂದ ವಿದ್ಯಾರ್ಥಿಗಳಿಗೆ ಹಾಗೂ ಉಪನ್ಯಾಸಕರಿಗೆ ಜಯ ಇರುತ್ತಿತ್ತು. ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದರು. ವಿದ್ಯಾರ್ಥಿಗಳಲ್ಲಿನ ಕೌಶಲ್ಯತೆ ಉತ್ತಮ ರೀತಿಯಲ್ಲಿ ಆಗುತ್ತಿತ್ತು. ಈಗಿರುವ ಪಠ್ಯಕ್ರಮದಲ್ಲಿ ವಿದ್ಯಾರ್ಥಿಗಳ ಬುದ್ಧಿಶಕ್ತಿಯಲ್ಲಿ ಸೃಜನಶೀಲತೆಯಲ್ಲಿ ಹೆಚ್ಚು ಒತ್ತು ನೀಡಿರುವುದು ಕಡಿಮೆ. ತಾಂತ್ರಿಕತೆಯಲ್ಲಿ ಮೊಬೈಲ್, ಕಂಪ್ಯೂಟರ್, ಇಂಟರ್‌ನೆಟ್ ಬಳಕೆಯಿಂದ ಉತ್ತಮ ಶಿಕ್ಷಣ ಪಡೆಯದೇ ಶಿಕ್ಷಣದಲ್ಲಿ ಕೌಶಲ್ಯತೆ ಕುಂಠಿತಗೊಳ್ಳುತ್ತಿದೆ.

ಉನ್ನತ ಶಿಕ್ಷಣಕ್ಕೆ ಬಂದ ನಂತರ ಒಂದು ವಿಶ್ವವಿದ್ಯಾಲಯದ ಅಡಿಯಲ್ಲಿ ಚಿತ್ರಕಲಾ ಶಿಕ್ಷಣವನ್ನು ಪರೀಕ್ಷಾ ಪತ್ಯಾವಳಿ ಮಾಡುತ್ತಾ ಬಂದಿದೆ. ಕೆಲವೊಂದು ಆಡಳಿತಾತ್ಮಕ ಕೆಲಸಗಳನ್ನು ವೇತನ ಮತ್ತು ಇತರೆ ಕೆಲವು ವಿಷಯಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆ ನೋಡಿಕೊಳ್ಳುತ್ತಿದೆ. ಆದರೆ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಜೊತೆಗೆ ವಿದ್ಯಾರ್ಥಿ ಶಿಕ್ಷಣದ ನಂತರದಲ್ಲಿ ಸಿಗಬೇಕಾದ ಸರಕಾರಿ ಸೇವೆಗಳು ಸಿಗುವುದಿಲ್ಲ. ಇಲ್ಲಿಯವರೆಗೂ ಪ್ರಯತ್ನಿಸದೇ ಇರುವುದು ವಿಪರ್ಯಾಸದ

ಸಂಗತಿಯೂ ಹೌದು. ಆದರೆ ಕಲಾ ಶ್ರೀಮಂತಿಕೆಯಲ್ಲಾಗಲಿ ಅಥವಾ ಕಲಾ ಪ್ರೇರಣೆಗಾಗಲಿ ಆಗಿನ ವಿದ್ಯಾಭ್ಯಾಸದ ಪದ್ಧತಿ ತುಂಬಾ ಶ್ರೀಮಂತವಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಮಂಡಳಿಯ ಅಂಕಪಟ್ಟಿ ಹಾಗೂ ವಿಶ್ವವಿದ್ಯಾಲಯದ ಪ್ರಮಾಣ ಪತ್ರಗಳಿಂದ ನೇಮಕಾತಿಗಾಗಿ ತೊಂದರೆಯಾಗುತ್ತಿದೆ. ಇದರ ಬಗ್ಗೆ ಶಿಕ್ಷಣ ಇಲಾಖೆಗೆ ಸರಿಯಾದ ಮಾರ್ಗದರ್ಶನ ಮಾಡುವವರ ಕೊರತೆ ಹೆಚ್ಚಾಗಿ ಕಂಡುಬರುತ್ತಿದೆ.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಅಧೀನದಲ್ಲಿದ್ದಾಗ ಮತ್ತು ಹಳೆಯ ಪಠ್ಯ ಪ್ರಸಾರಗೊಳ್ಳುವಾಗ ಸರಕಾರ ಅಧೀನ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಸರಕಾರಿ ಮತ್ತು ಅರೆ ಸರಕಾರಿ ಶಿಕ್ಷಣ ಇಲಾಖೆಯಲ್ಲಿ ನೇಮಕಾತಿಯಾಗಲು ಸಹಕಾರಿಯಾಗಿತ್ತು. ಜೊತೆ ಜೊತೆಗೆ ಹಳೆಯ ಪಠ್ಯ ಚಟುವಟಿಕೆಗಳ ಸರ್ವಾಂಗೀಣ ಬುದ್ಧಿ ವಿಕಾಸಕ್ಕೆ ಪೂರಕವಾಗಿತ್ತು. ಹೇಗೆಂದರೆ ಪಠ್ಯದಲ್ಲಿ ಸಮಗ್ರ ಜ್ಞಾನ ಒದಗಿಸುವ ಹಾಗೆ ವಿಕಾಸಕ್ಕೆ ಪೂರಕವಾಗಿತ್ತು. ಪ್ರಥಮ ಡಿ.ಎಂ.ಸಿ. ವರ್ಗದಲ್ಲಿ ಮತ್ತು ದ್ವಿತೀಯ ವರ್ಗದಲ್ಲಿ ಪಾಠ ಬೋಧನೆಯ ವಿವರಣೆಯನ್ನು ಬೋಧಿಸಲಾಗುತ್ತಿತ್ತು. ಜೊತೆಗೆ ಪ್ರಾಥಮಿಕ ಮತ್ತು ಪ್ರೌಢ ಶಾಲಾ ವರ್ಗಗಳಿಗೆ ಪಾಠ ಬೋಧನೆ ಮಾಡಲು ಅವಕಾಶವಿತ್ತು. ಈಗಿನ ಕಾಲಘಟ್ಟದಲ್ಲಿ ಯಾವುದೇ ನಿಯಮಿತ ಅನುಬಂಧವಿಲ್ಲದ ಬೋಧನೆಯ ಪ್ರತಿಫಲವಾಗಿ ಮಕ್ಕಳಲ್ಲಿ ಬೌದ್ಧಿಕ ವಿಕಾಸ ಅಥವಾ ಬೆಳವಣಿಗೆ ಕುಂಠಿತಗೊಳ್ಳುತ್ತಿದೆ. ಅದೇ ರೀತಿ ಇವತ್ತಿನ ಒಂದು ವಿದ್ಯುನ್ಮಾನದಲ್ಲಿ ಕಲೆಗೆ ಒಂದು ವೇದಿಕೆ ನಿರ್ಮಾಣಗೊಂಡಂತಾಗಿದೆ. ಹಾಗೆ ಕಲಿಕಾ ಹಂಬಲ ಕಡಿಮೆಯಾಗಿದೆಯೆಂದು ಹೇಳಬಹುದು. ಜೊತೆಗೆ ವಿಶ್ವವಿದ್ಯಾಲಯದ ಅಡಿಯಲ್ಲಿ ಬಂದು ಕೆಲವು ಗೊಂದಲಗಳಿಗೆ ಸಮಸ್ಯೆ ಕಂಡುಕೊಳ್ಳುವುದಕ್ಕೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಉನ್ನತ ಶಿಕ್ಷಣ ಸಚಿವರಿಂದ ಸಮಸ್ಯೆ ಬಗೆಹರಿಸಿಕೊಳ್ಳಬೇಕು. ಏಕೆಂದರೆ ಇವತ್ತು ಕಲಾ ವಿದ್ಯಾರ್ಥಿಗಳ ಭವಿಷ್ಯ ಚಿಂತಾಜನಕ ಸ್ಥಿತಿಯಲ್ಲಿದೆ.

ಪ್ರಾಥಮಿಕ, ಪ್ರೌಢಶಾಲೆ ಇಲ್ಲದಿದ್ದರೆ ವಿಶ್ವವಿದ್ಯಾಲಯಗಳಲ್ಲಿ ಅಭ್ಯಸಿಸಿದ ವಿದ್ಯಾರ್ಥಿಗಳು ಚಿತ್ರಕಲಾ ಶಿಕ್ಷಕರಾಗಲು ಅನುಕೂಲತೆಗಳು ಹೆಚ್ಚಾಗಿದ್ದವು. ತದನಂತರ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯಿಂದ ೨೦೦೧-೨೦೧೨ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಚಿತ್ರಕಲಾ ಮಹಾವಿದ್ಯಾಲಯ ನಿರ್ವಹಣಾ ಕೇಂದ್ರಕ್ಕೆ ವರ್ಗಾಯಿಸಲಾಯಿತು. ವರ್ಗಾವಣೆಗೊಂಡ ನಂತರ ಅಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಸುಮಾರು ಹನ್ನೆರಡು ವರ್ಷಗಳ ಕಾಲ ಇದ್ದ ವಿಷಯವನ್ನು ಮುಂದುವರೆಸಿ ತದನಂತರ ವಿಷಯ ಪಠ್ಯಾವಳಿಯನ್ನು ಬದಲಾವಣೆಗೊಳಿಸಲಾಯಿತು. ಟಿ.ಪಿ. ಇಸ್ಸಾರ್ ವರದಿಯ ಪ್ರಕಾರ ಹೊಸ ಪಠ್ಯಕ್ರಮದ ರೂಪರೇಷೆಗಳಾದ ಕಲಾಮೂಲ ಪ್ರಥಮ, ದ್ವಿತೀಯ ವಿಶೇಷ ಪರಿಣಿತ ಮೂರನೆಯ, ನಾಲ್ಕನೆಯ, ಐದನೆಯ ವರ್ಷದ ತರಗತಿಗಳೆಂದು ಬದಲಾವಣೆಗೊಳಿಸಿತು. ನಂತರದಲ್ಲಿ ವಿಶ್ವವಿದ್ಯಾಲಯದ ಅಧೀನದಲ್ಲಿರುವಂತಹ ಚಿತ್ರಕಲಾ ಶಾಲೆಗಳಲ್ಲಿನ ಕೋರ್ಸ್‌ಗಳನ್ನು ಪದವಿ ವರ್ಗಗಳನ್ನಾಗಿ ಮಾರ್ಪಡಿಸಲಾಯಿತು. ಪದವಿ ವರ್ಗಗಳೆಂದರೆ ಬಿ.ವಿ.ಎ. ಪದವಿ ಪ್ರಥಮ, ದ್ವಿತೀಯ, ತೃತೀಯ ಇಷ್ಟಾಗಿ ವಿಶೇಷ ಪರಿಣಿತಿ

ಪಡೆದಂತಹ ಹಿಂದಿನ ವಿದ್ಯಾರ್ಥಿಗಳಿಗಾಗಿ ಬಿ.ವಿ.ಎ. ಅಂತಿಮ ವರ್ಷದ ಬಿಡ್ಜ್ ಕೋರ್ಸ್‌ನ್ನು ಮಾಡಲಾಯಿತು. ಈ ರೀತಿಯಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವಂತಹ ಚಿತ್ರಕಲಾ ಮಹಾವಿದ್ಯಾಲಯವನ್ನಾಗಿ ಮತ್ತು ಪದವಿ ಕೋರ್ಸ್‌ಗಳನ್ನಾಗಿ ವಿಶ್ವವಿದ್ಯಾಲಯ ಬದಲಾವಣೆಗೊಳಿಸಿತು. ಇದರ ನಂತರ ವಿಶ್ವವಿದ್ಯಾಲಯ ಮಟ್ಟದಲ್ಲಿ ಎಂ.ವಿ.ಎ. ಕೋರ್ಸ್‌ಗಳನ್ನು ಆಗಲೇ ಪ್ರಾರಂಭಿಸಿತು. ಎಲ್ಲಾ ವ್ಯವಸ್ಥೆಗಳು ಬಂದ ಮೇಲೆ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಉದ್ಯೋಗ ಎಂಬುದು ಮರೀಚಿಕೆಯಾಯಿತು. ಉದ್ಯೋಗಾವಕಾಶಗಳು ಕಡಿಮೆಯಾದವು. ಆದರೆ ಕಲೆಯ ಜೊತೆಗೆ ಇವತ್ತಿನ ನವಯುಗದಲ್ಲಿ ಕಂಪ್ಯೂಟರ್‌ನಂತಹ ಜ್ಞಾನವನ್ನು ವಿದ್ಯಾರ್ಥಿಗಳು ಅಳವಡಿಸಿಕೊಂಡಲ್ಲಿ ವಿದ್ಯಾರ್ಥಿಗಳಿಗೆ ಉದ್ಯೋಗದ ಬರವಿಲ್ಲ. ಜೊತೆಗೆ ಕನ್ನಡ, ಇಂಗ್ಲೀಷ್ ವಿಷಯಗಳ ಪರಿಚಯವಿರುವುದರಿಂದ ವಿದ್ಯಾರ್ಥಿಗಳ ಜೀವನಕ್ಕೆ ಯಾವುದೇ ತೊಂದರೆಗಳಿರುವುದಿಲ್ಲವೆಂದು ಹೇಳಬಹುದು.

ವಿಶ್ವವಿದ್ಯಾಲಯ ಗೊತ್ತುಪಡಿಸಿದ ಪಠ್ಯಕ್ರಮಗಳು ಮತ್ತು ವೇಳಾಪಟ್ಟಿ, ಪರೀಕ್ಷೆ, ಫಲಿತಾಂಶ, ಅಂಕಪಟ್ಟಿ ನೀಡುವಿಕೆ

ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಪಠ್ಯಕ್ರಮವು ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲಕರವಾಗಿದ್ದು ಮಕ್ಕಳ ಹಿತದೃಷ್ಟಿಯಿಂದ ಪಠ್ಯಕ್ರಮ, ಪರೀಕ್ಷೆಗಳು ಕೂಡ ಒಳ್ಳೆಯ ರೀತಿಯಿಂದ ನಡೆಸಲಾಗುತ್ತದೆ. ಪ್ರಾಯೋಗಿಕ ಮತ್ತು ಇತಿಹಾಸಕ್ಕೆ ಸಂಬಂಧಿಸಿದಂತೆ ಕಲಾಶಾಸ್ತ್ರದ ಬಗ್ಗೆ ತಿಳುವಳಿಕೆಯನ್ನು ನೀಡುತ್ತದೆ.

ಕರ್ನಾಟಕದ ಹಲವು ಚಿತ್ರಕಲಾ ಮಹಾವಿದ್ಯಾಲಯಗಳು ಹಂಪಿ ಕನ್ನಡ ವಿಶ್ವವಿದ್ಯಾಲಯದ ಆಡಳಿತ ನಿರ್ವಹಣೆಯಲ್ಲಿ ಬರುತ್ತವೆ. ಇದು ಅಲ್ಲದೆ ಆಯಾ ಪ್ರಾದೇಶಿಕ ವಿಶ್ವವಿದ್ಯಾಲಯದ ಅಡಿಯಲ್ಲಿ ಕೂಡ ಕೆಲವು ಚಿತ್ರಕಲಾ ಶಾಲೆಗಳು ನಡೆಯುತ್ತವೆ. ಹೀಗಾಗಿ ಏಕರೂಪದ ಪಠ್ಯಕ್ರಮ ಹಾಗೂ ಶಿಕ್ಷಕರು ಪರೀಕ್ಷೆಗಳು ನಡೆಯದೇ ಇರುವುದು ಸ್ವಲ್ಪಮಟ್ಟಿಗೆ ಗೊಂದಲ ತಂದಿದೆ. ಚಿತ್ರಕಲಾ ಶಿಕ್ಷಣವನ್ನು ಉನ್ನತ ಮಟ್ಟಕ್ಕೇರಿಸುವ ಮುಂದಾಲೋಚನೆಯ ಕೆಲವು ಅಂಶಗಳನ್ನು ಪ್ರೌಢ ಶಿಕ್ಷಣ ಇಲಾಖೆಯಲ್ಲಿರುವ ಪಠ್ಯಾವಳಿಯಲ್ಲಿರುವಂತಹ ವಿಷಯಗಳನ್ನು ಕೈಬಿಟ್ಟಿರುವುದು ಚಿತ್ರಕಲಾ ಬೆಳವಣಿಗೆಗೆ ತೊಂದರೆಯಾಗಿದೆ. ತಮ್ಮ ಅಧೀನದಲ್ಲಿ ನಡೆಯುತ್ತಿರುವ ಕಾರ್ಯ ತೃಪ್ತಿಕರ, ಆದಾಗ್ಯೂ ಕಳೆದ ಪಠ್ಯದಲ್ಲಿರುವ ಹಾಗೆ ಮೌಲ್ಯಮಾಪನದ ಕಾರ್ಯ ಅನ್ಯ ವಿದ್ಯಾಲಯಗಳಿಂದಲೇ ನಡೆಯುವಂತಿರಬೇಕಿತ್ತು. ಕಾರಣ ಆ ಒಂದು ಭಯ ಇವತ್ತಿನ ವಿದ್ಯಾರ್ಥಿಗಳಲ್ಲಿ ಇಲ್ಲದಾಗಿ ಹಾಜರಾತಿಯಲ್ಲಿಯೂ ಸಹ ನಮ್ಮ ಶಾಲೆಯ ಶಿಕ್ಷಕರು ನಮಗೇನು ತೊಂದರೆ ಮಾಡುವುದಿಲ್ಲ ಎಂದು ಭಯಪಡದೇ ಪದವಿಯನ್ನು ಪಡೆಯಬಹುದೆಂದು ತಿಳಿದಿರುವುದು ಮತ್ತು ಪ್ರಸ್ತುತ ಸಂದರ್ಭದಲ್ಲಿ ಇದೇ ರೀತಿಯ ಶಿಕ್ಷಣ ನಡೆಯುತ್ತಿರುವುದನ್ನು ಕಾಣಬಹುದು.

ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆಯುವಂತಹ ಬೋಧನೆಯ ಪಠ್ಯಕ್ರಮಗಳು, ಪರೀಕ್ಷೆಗಳು ಫಲಿತಾಂಶಗಳು ಒಂದು ರೀತಿಯ ಹೊಸತನವನ್ನು ಸೂಚಿಸುತ್ತದೆ. ಇದರಲ್ಲಿ ಒಂದು ಸರಳೀಕರಣ ವೇನೆಂದರೆ ವಿದ್ಯಾರ್ಥಿಗಳು ಇಡೀ ವರ್ಷದಲ್ಲಿ ಅಭ್ಯಾಸಗೈದು ವಾರ್ಷಿಕ ಪತ್ರಿಕೆಗಳಿಗೆ ಆಂತರಿಕ ಮೌಲ್ಯಮಾಪನ ಮತ್ತು ಬಾಹ್ಯ ಪರೀಕ್ಷೆಗಳು ನಲವತ್ತು ಮತ್ತು ಅರವತ್ತು ಈ ರೀತಿ ಇರುವುದರಿಂದ ಮಕ್ಕಳಿಗೆ ಫಲಿತಾಂಶ ಪಡೆದುಕೊಳ್ಳಲು ಬಹು ಸುಲಭ ಎಂದು ತಿಳಿಯಬಹುದು. ಅದೇ ರೀತಿಯಾಗಿ ಸ್ನಾತಕೋತ್ತರ ಪದವಿಯಲ್ಲಿಯೂ ಕೂಡ ಅದೇ ಹಳೆಯ ಶಿಕ್ಷಣದ ಪದ್ಧತಿಯಲ್ಲಿಯೂ ಕೂಡ ಆಂತರಿಕ ಮೌಲ್ಯಮಾಪನಕ್ಕೆ ಬೇರೆ ಬೇರೆ ಶಾಲೆಗಳಿಂದ ಮೌಲ್ಯಮಾಪಕರು ಆಗಮಿಸಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ಭಯದ ವಾತಾವರಣ ಕಾಣುತ್ತಿತ್ತು. ಆದರೆ ಇಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದವರೇ ಆದ ಪ್ರಾಚಾರ್ಯರು, ಉಪನ್ಯಾಸಕರು ಕೂಡಿಕೊಂಡು ಆಂತರಿಕ ಮೌಲ್ಯಮಾಪನ ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಭಯ ಇರುವುದಿಲ್ಲ. ಆದರೆ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಲಾಭದಾಯಕವೇನೆಂದರೆ ಸಂಶೋಧನಾತ್ಮಕವಾದ ಗ್ರಂಥಗಳ ಬರವಣಿಗೆಯ ಅಭಿರುಚಿ ಹುಟ್ಟಿಸುತ್ತಿದೆ. ವಿದ್ಯಾರ್ಥಿಗಳನ್ನು ಉನ್ನತ ಮಟ್ಟಕ್ಕೆ ಒಯ್ಯುವ, ಎಚ್ಚರಿಕೆಯ ಕೆಲಸವನ್ನು ವಿಶ್ವವಿದ್ಯಾಲಯಗಳು ಮಾಡಿವೆ. ಗಣಕಯಂತ್ರದ ಮೂಲಕ ಅಂತರ್ಜಾಲ ದಲ್ಲಿ ಫಲಿತಾಂಶವನ್ನು ನೋಡಬಹುದು. ವಿಶ್ವವಿದ್ಯಾಲಯಗಳ ಅಧೀನದಲ್ಲಿ ನಡೆಯುತ್ತಿರುವ ಕಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಂದೊಂದು ವಿಶ್ವವಿದ್ಯಾಲಯವು ಬೇರೆ ಬೇರೆ ಪಠ್ಯಕ್ರಮವನ್ನು ಅನುಸರಿಸುತ್ತಿರುವುದು ಮಾತ್ರ ಕಂಡು ಬರುತ್ತದೆ.

ವಿಶ್ವವಿದ್ಯಾಲಯಗಳು ಬೇರೆ ಬೇರೆ ಪಠ್ಯಕ್ರಮ ಅನುಸರಿಸುವುದು ಸೂಕ್ತವಾಗಿದ್ದರೂ ನಮ್ಮ ಅಭಿಪ್ರಾಯದಲ್ಲಿ ಹೇಳುವುದಾದರೆ ಪ್ರಾಂತೀಯ ಮಟ್ಟದಲ್ಲಿ ಏಕರೂಪದ ಪಠ್ಯಕ್ರಮ ಅನುಸರಿಸಬೇಕು. ಅದರ ವಿಧಿ - ವಿಧಾನಗಳನ್ನು ಸೂಕ್ತ ಸಮಿತಿಗಳಿಂದ ವಿಮರ್ಶೆಗೊಳಪಟ್ಟು ಕಾರ್ಯರೂಪಕ್ಕೆ ತರಲು ಸೂಕ್ತಕ್ರಮ ಕೈಗೊಳ್ಳಬೇಕು. ಬೇರೆ ಬೇರೆ ಪಠ್ಯಕ್ರಮದ ಕಲಿಕೆಯಿಂದ ಸಮಗ್ರ ಕಲಾ ಸಾಹಿತ್ಯದಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ವಿಭಾಗವಾಗಿ ವಿಂಗಡಣೆಯಾಗಿ ಪಡೆದುಕೊಂಡ ಶಿಕ್ಷಣದಿಂದ ಪರಿಪೂರ್ಣತೆಯ ಕೊರತೆ ಅನುಭವಿಸಬೇಕಾಗುವುದು. ಇದಕ್ಕೆ ಏಕರೂಪದ ಪಠ್ಯಕ್ರಮವೇ ಹೆಚ್ಚು ಸೂಕ್ತವೆಂಬುದು ನಮ್ಮ ಅಭಿಪ್ರಾಯವಾಗಿದೆ.

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ,

ಬೆಂಗಳೂರು-೧

ಸಂಖ್ಯೆ: ಚಿತ್ರಕಲೆ.೧.ರಾಚಿಕಶಾ.ಕವಿ.ವಿ.೨೦/೨೦೦೨-೨೦೦೩ ದಿನಾಂಕ ೨೮-೧೨-೨೦೦೨

"**ವಿಷಯ:-** ರಾಜ್ಯದಲ್ಲಿನ ಚಿತ್ರಕಲಾ ಮಹಾವಿದ್ಯಾಲಯಗಳನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ವಹಿಸಿಕೊಡುವ ಬಗ್ಗೆ

ಉಲ್ಲೇಖ:- ಕುಲಪತಿಗಳ ಪತ್ರ ಸಂಖ್ಯೆ: ಕವಿಹಂ.ಕುಪ.೩೨೨/೨೦೦೨-೦೩, ದಿನಾಂಕ ೨೬-೧೧-೨೦೦೨

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ೮೦ ಚಿತ್ರಕಲಾ ಶಾಲೆಗಳು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ನಡೆಯುತ್ತಿದ್ದು, ಅವುಗಳಲ್ಲಿ ೨ ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯಗಳು, ೨೨ ಅನುದಾನಿತ ಚಿತ್ರಕಲಾ ಮಹಾವಿದ್ಯಾಲಯಗಳು ಮತ್ತು ಉಳಿದ ೫೬ ಚಿತ್ರಕಲಾ ಶಾಲೆಗಳು ಶಾಶ್ವತ ಅನುದಾನರಹಿತವಾಗಿರುತ್ತವೆ. ಸದರಿ ಚಿತ್ರಕಲಾ ಶಾಲೆಗಳ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ. ನಂತರ ೫ ವರ್ಷದ ವ್ಯಾಸಂಗವಾಗಿರುತ್ತದೆ. ಆದರೆ, ಸದರಿ ವಿದ್ಯಾರ್ಥಿಗಳ ಪರೀಕ್ಷೆಗಳನ್ನು ನಮ್ಮ ಇಲಾಖೆಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುತ್ತಿದ್ದು, ಸದರಿ ವಿದ್ಯಾರ್ಥಿಗಳ ಪ್ರಮಾಣ ಪತ್ರಗಳು ಇತರೆ ರಾಜ್ಯದಲ್ಲಿ ಮಾನ್ಯತೆ ಮಾಡುವುದಿಲ್ಲ. ಆದುದರಿಂದ ವಿದ್ಯಾರ್ಥಿಗಳು ಆತಂಕ ಮತ್ತು ನಿರಾಸೆಯಲ್ಲಿದ್ದಾರೆ. ಆದರೆ, ಇದೇ ರೀತಿಯ ಪದವಿ ಹಾಗೂ ಪರೀಕ್ಷೆಗಳು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ನಡೆಯುತ್ತಿದ್ದು, ಅವುಗಳ ಪ್ರಮಾಣ ಪತ್ರಗಳಿಗೆ ಎಲ್ಲಾ ಕಡೆಯಲ್ಲಿ ಮಾನ್ಯತೆ ಇರುತ್ತದೆ. ಆದುದರಿಂದ ರಾಜ್ಯದಲ್ಲಿನ ಎಲ್ಲಾ ಕಲಾ ಶಾಲೆಗಳನ್ನು ವಿಶ್ವವಿದ್ಯಾಲಯ ವ್ಯಾಪ್ತಿಗೆ ಬರುವಂತೆ ಆದೇಶ ಹೊರಡಿಸಬೇಕೆಂದು ಅನೇಕ ಸಂಘ ಸಂಸ್ಥೆಗಳು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಮನವಿಗಳನ್ನು ಸಲ್ಲಿಸಿರುತ್ತಾರೆ. ಅವರುಗಳ ವಿನಂತಿಯ ಮೇರೆಗೆ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳು ಉಲ್ಲೇಖ ಪತ್ರದಲ್ಲಿ ಸದರಿ ಕಲಾ ವಿದ್ಯಾಲಯಗಳಿಗೆ ಕನ್ನಡ ವಿಶ್ವವಿದ್ಯಾಲಯ ಸಾಂಗ್ಯತೆ ನೀಡಿ ಪರೀಕ್ಷೆ ಮಾಡುವ ಮತ್ತು ಪ್ರಮಾಣ ಪತ್ರವನ್ನು ಕೊಡುವ ಜವಾಬ್ದಾರಿಯನ್ನು ವಿಶ್ವವಿದ್ಯಾಲಯಕ್ಕೆ ನೀಡಿತು."[೧೮]

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ ೪೦೫ ಯೋಯೋಕ ೨೦೦೭ ದಿನಾಂಕ ೨೧-೦೩-೨೦೦೯

"**ವಿಷಯ:-** ರಾಜ್ಯದಲ್ಲಿರುವ ಚಿತ್ರಕಲಾ ಶಾಲೆಗಳ ಪರೀಕ್ಷೆಗಳನ್ನು ಹಂಪಿ ವಿಶ್ವವಿದ್ಯಾಲಯದಿಂದ ಹೊರತಂದು ಕರ್ನಾಟಕ ಆರ್ಟ್ ಬೋರ್ಡ್ ರಚಿಸಿ ೨೦೦೮-೨೦೦೯ನೇ ಸಾಲಿಗೆ ಪರೀಕ್ಷೆ ನಡೆಸುವ ಬಗ್ಗೆ

ಉಲ್ಲೇಖ:- ೧. ಕರ್ನಾಟಕ ಚಿತ್ರಕಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟ (ನೋಂ) ಬೆಂಗಳೂರುರವರ ಪತ್ರ ಸಂಖ್ಯೆ: ಕೆಸಿಎಸ್‌ಎಸ್‌ಒ ಸಂಖ್ಯೆ: ೨೫/೦೮-೦೯ ದಿನಾಂಕ: ೨೦-೦೧-೨೦೦೯.

೨. ನಿರ್ದೇಶಕರು (ಪ್ರೌಢ ಶಿಕ್ಷಣ)ರವರ ಪತ್ರ ದಿನಾಂಕ: ೧೮-೦೩-೨೦೦೯ರ ಪತ್ರ ಸಂಖ್ಯೆ: ಚಿ.ಕ-೦೧/ರಾ.ಚಿ.ಮಂ. ಕವಿವಿ.ಪರೀಕ್ಷೆ-೮/೨೦೦೮-೦೯

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (೨)ರ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಅದರಲ್ಲಿ ಕರ್ನಾಟಕ ಚಿತ್ರಕಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟವು

ರಾಜ್ಯದಲ್ಲಿರುವ ಚಿತ್ರಕಲಾ ಶಾಲೆಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳಲು ಕರ್ನಾಟಕ ಆರ್ಟ್ ಬೋರ್ಡ್ ರಚಿಸುವಂತೆ ಕೋರಿರುತ್ತಾರೆ. ಈ ಬಗ್ಗೆ ಆಡಳಿತ ಮಂಡಳಿಗಳ ಪ್ರಾಂಶುಪಾಲರು ಹಾಗೂ ಇಲಾಖಾ ಅಧಿಕಾರಿಗಳ ಸಭೆಯನ್ನು ಕರೆದು ಚರ್ಚಿಸಿರುವ ವರದಿಯನ್ನು ನಿರ್ದೇಶಕರು, ಪ್ರೌಢ ಶಿಕ್ಷಣ ಇವರು ನೀಡಿದ್ದಾರೆ. ಈ ವಿಷಯವಾಗಿ ನಿಮ್ಮ ಸ್ಪಷ್ಟ ಅಭಿಪ್ರಾಯವನ್ನು ಎರಡು ದಿನಗಳೊಳಗೆ ಕಳುಹಿಸುವಂತೆ ಕೋರಲು ನಾನು ನಿರ್ದೇಶಿತನಾಗಿದ್ದಾನೆ."[೯]

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,

ನೃಪತುಂಗ ರಸ್ತೆ, ಬೆಂಗಳೂರು-೦೧

ಸಂಖ್ಯೆ: ಚಿ.ಕ-೦೧/ರಾ.ಚಿ.ಮಂ.ಕ.ವಿ.ವಿ.ಪರೀಕ್ಷೆ-೮/೨೦೦೮-೦೯ ದಿನಾಂಕ ೧೮-೦೩-೨೦೦೯

"**ವಿಷಯ:-** ರಾಜ್ಯದಲ್ಲಿರುವ ಚಿತ್ರಕಲಾ ಶಾಲೆಗಳ ಪರೀಕ್ಷೆಗಳನ್ನು ಹಂಪಿ ವಿಶ್ವವಿದ್ಯಾಲಯದಿಂದ ಹೊರತಂದು ಕರ್ನಾಟಕ ಆರ್ಟ್ ಬೋರ್ಡ್ ರಚಿಸಿ ೨೦೦೮-೦೯ನೇ ಸಾಲಿಗೆ ಪರೀಕ್ಷೆ ನಡೆಸುವ ಬಗ್ಗೆ

ಉಲ್ಲೇಖ:- ಸರ್ಕಾರದ ಪತ್ರ ಸಂಖ್ಯೆ: ಇ.ಡಿ.೪೦೫,ಯೋ.ಯೋ.ಕ-೨೦೦೭, ದಿನಾಂಕ: ೦೫-೦೩-೨೦೦೯

***

ಪ್ರಸ್ತುತ ವಿಷಯ ಉಲ್ಲೇಖದನ್ವಯ ದಿನಾಂಕ: ೧೭-೦೩-೨೦೦೯ರಂದು ರಾಜ್ಯದ ಪ್ರಮುಖ ಕಲಾಶಾಲೆಯ ಪ್ರಾಂಶುಪಾಲರು ಹಾಗೂ ರಾಜ್ಯದ ವಿವಿಧ ಕಲಾಸಂಘಗಳ ಪದಾಧಿಕಾರಿಗಳ ಸಭೆ ಕರೆದು ಉಲ್ಲೇಖಿತ ಪತ್ರದಲ್ಲಿನ ಎರಡೂ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಜೊತೆಗೆ ಇತರೆ ಕೆಲವು ವಿಷಯಗಳು ಚರ್ಚೆಗೆ ಬಂದಿರುತ್ತವೆ.

ಈ ಸಭೆಯಲ್ಲಿ ಮೂಡಿಬಂದ ಒಮ್ಮತದ ಅಭಿಪ್ರಾಯಗಳ ವಿವರ ಈ ಕೆಳಗಿನಂತಿದೆ.

ಪ್ರಮುಖ ವಿಷಯ-೧:- ಕರ್ನಾಟಕ ಆರ್ಟ್ ಬೋರ್ಡ್ ರಚನೆ ಬಗ್ಗೆ:- ಚರ್ಚೆ:-

ಈ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು. ಕರ್ನಾಟಕ ಆರ್ಟ್ ಬೋರ್ಡ್ ರಚನೆ ಮಾಡಲು ಅಧಿನಿಯಮಗಳು ಮಾದರಿ ಲಭ್ಯವಿಲ್ಲದ ಕಾರಣ ಈ ಬಗ್ಗೆ ಸುದೀರ್ಘವಾದ ಚರ್ಚೆ ನಡೆದಿರುವುದಿಲ್ಲ. ಅಲ್ಲದೇ ಇಲ್ಲಿಯೂ ಸಹ ಕೆಲವರು ಲಲಿತಕಲಾ ವಿಶ್ವವಿದ್ಯಾಲಯ ಸ್ಥಾಪನೆ ಬಗ್ಗೆ ಒಲವು ತೋರಿದರೆ ಇನ್ನು ಕೆಲವರು ಕರ್ನಾಟಕ ದೃಶ್ಯಕಲಾ ಮಂಡಳಿ ರಚಿಸುವ ಬಗ್ಗೆ ಒಲವು ತೋರಿರುತ್ತಾರೆ. ಇದೊಂದು ಗಹನವಾದ ವಿಷಯವಾದ್ದರಿಂದ ಈ ಬಗ್ಗೆ ಯಾವುದೇ ಚರ್ಚೆ ಆಗಲಿ ಶಿಫಾರಸ್ಸುಗಳಾಗಲಿ ನೀಡಲು ಸಾಧ್ಯವಾಗಿರುವುದಿಲ್ಲ. ಅದಕ್ಕೆ ಕಾಲಾವಕಾಶದ ಅವಶ್ಯಕತೆ ಇರುತ್ತದೆ. ಆದ್ದರಿಂದ ಉಲ್ಲೇಖದಲ್ಲಿ ಸೂಚಿಸಿರುವಂತೆ ಕರ್ನಾಟಕ ಆರ್ಟ್ ಬೋರ್ಡ್‌ಯಿಂದ ಪರೀಕ್ಷೆ ನಡೆಸುವುದು ಸದ್ಯದ ಪರಿಸ್ಥಿತಿಯಲ್ಲಿ ಸಿಂಧುವಾಗಿರುವುದಿಲ್ಲ ಹಾಗೂ ಈಗ ತಕ್ಷಣ ಸಾಧ್ಯವಾಗದು.

ಪ್ರಮುಖ ವಿಷಯ-೨:- ಚಿತ್ರಕಲಾ ಶಾಲೆಯ ಪರೀಕ್ಷೆಗಳನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಹೊರತಂದು ಕರ್ನಾಟಕ ಆರ್ಟ್ ಬೋರ್ಡ್ ಅಥವಾ ಕ.ಪ್ರೌ.ಶಿ.ಪ. ಮಂಡಳಿಯಿಂದ ಪರೀಕ್ಷೆ ನಡೆಸುವ ಬಗ್ಗೆ:-

ಈ ಸಭೆಯಲ್ಲಿ ಈ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆದು, ಈ ಕೆಳಗಿನ ಅಭಿಪ್ರಾಯಗಳು ಸಭೆಯಲ್ಲಿ ಹಾಜರಿದ್ದ ಸದಸ್ಯರಿಂದ ಮೂಡಿಬಂದಿರುತ್ತದೆ.

೧. ಶ್ರೀಮತಿ ಮಮತಾ ಶ್ರೀಕಾಂತ್, ಸಂಕೇಶ್ವರ:- ರಾಜ್ಯದಲ್ಲಿ ೧೦+೨+೩ ಮಾದರಿ ಶಿಕ್ಷಣವನ್ನು ಅಳವಡಿಸಲಾಗಿದ್ದು ಈ ಕ್ರಮವನ್ನು ಕಲಾಶಾಲೆಗಳಿಗೂ ಸಹ ಅನ್ವಯಿಸಲು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ವೈಜ್ಞಾನಿಕವಾಗಿ ಪರೀಕ್ಷಾ ಕೇಂದ್ರಗಳ ರಚನೆ ಆಗುತ್ತಿಲ್ಲ ಎಂದು ಸೂಚಿಸಿರುತ್ತಾರೆ.

೨. ಶ್ರೀಮತಿ ಗಾಯಿತ್ರಿ ಗೌಡ, ಧಾರವಾಡ:- ಇವರು ಮಾತನಾಡಿ ಮೇಲಿನಂತೆ ರಾಜ್ಯದ Pattern ಹಾಗೂ ಸಮಸ್ಯೆಗಳ ಬಗ್ಗೆ ವಿಶ್ವವಿದ್ಯಾಲಯದ ಹಂತದಲ್ಲಿಯೇ ಪರಿಹಾರ ಕಂಡುಕೊಳ್ಳುವ ಬಗ್ಗೆ ನಿವೇದಿಸಿರುತ್ತಾರೆ.

೩. ಶ್ರೀ ಹನುಮಂತ ಮಲ್ಲತಟ್ಟಿ:- ಇವರು ಮಾತನಾಡಿ, ಹಂಪಿ ಕನ್ನಡ ವಿಶ್ವವಿದ್ಯಾಲಯ ದವರು ೨೦೦೩ರಿಂದ ಇಲ್ಲಿಯವರೆಗೆ ಪರೀಕ್ಷೆಗಳನ್ನು ನಡೆಸುತ್ತಿದ್ದು, ಅಲ್ಲಿಯ ಕುಂದುಕೊರತೆಗಳು ಈ ಕೆಳಗಿನಂತೆ ಇರುತ್ತವೆಂದು ವ್ಯಕ್ತಪಡಿಸಿರುತ್ತಾರೆ.

೧. ಹಂಪಿ ಕನ್ನಡ ವಿಶ್ವವಿದ್ಯಾಲಯವು ಒಂದು ಸಂಶೋಧನಾ ಕೇಂದ್ರವಾಗಿದೆ.

೨. ಪರೀಕ್ಷೆ ನಡೆಸಲು ಶಕ್ತಿ ಹಾಗೂ ಸಾಮರ್ಥ್ಯ ಹೊಂದಿರುವುದಿಲ್ಲ.

೩. ಚಿತ್ರಕಲಾ ವಿಷಯದ ಬಗ್ಗೆ ಸರಿಯಾದ ಕಲ್ಪನೆ ಅವರಿಗಿಲ್ಲ.

೪. ೨೦೦೮-೦೯ನೇ ಸಾಲಿಗೆ ಪರೀಕ್ಷೆಗೆ ಇನ್ನು ೨೮ ಕಲಾಶಾಲೆಗಳು ವಿದ್ಯಾರ್ಥಿಗಳ ಹೆಸರನ್ನು ನೋಂದಾಯಿಸಿರುವುದಿಲ್ಲ.

೫. ಬಿವಿಎ, ಎಂವಿಎ ಕೋರ್ಸ್‌ಗಳಿಗಾಗಿ ಯಾವುದೇ ಪಠ್ಯವಸ್ತು ಯುಜಿಸಿ ಆಕ್ಟ್‌ನಲ್ಲಿ ಒಳಗೊಂಡಿರುವುದಿಲ್ಲ. ವಿಶ್ವವಿದ್ಯಾಲಯ ಹಂತದಲ್ಲಿಯೇ ತಾತ್ಕಾಲಿಕವಾಗಿ ತೀರ್ಮಾನಿಸಿ ಕೆಲವರು ೧೦೦ ಅಂಕಗಳಿಗೆ ಕೆಲವರು ೫೦ ಅಂಕಗಳಿಗೆ ಪರೀಕ್ಷೆ ನಡೆಸುತ್ತಿರುವ ನ್ಯೂನತೆ ಎದ್ದು ಕಾಣುತ್ತದೆ. ಪರೀಕ್ಷಾ ದೃಷ್ಟಿಯಿಂದ ಯಾವುದೇ ಸಮರ್ಪಕ ವ್ಯವಸ್ಥೆ ಇಲ್ಲದಿರುವುದು ಸ್ಪಷ್ಟವಾಗಿದೆ.

೪. ಡಾ. ಡಿ.ಎ. ಉಪಾಧ್ಯಾಯ:- ಇವರು ಮಾತನಾಡಿ, ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುವ ಪರೀಕ್ಷೆಗಳು ಅನೇಕ ಅವಾಂತರಕ್ಕೆ ಕಾರಣವಾಗಿದೆ. ಅದಕ್ಕೆ ಈ ಕೆಳಗಿನ ತೊಂದರೆಗಳಿವೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯವು ಸಂಶೋಧನೆಗೆ ಸೀಮಿತವಾಗಿದ್ದು ಪರೀಕ್ಷೆಗಳನ್ನು ನಡೆಸುವ ಉದ್ದೇಶವನ್ನು ಹೊಂದಿಲ್ಲದಿದ್ದುದರಿಂದ ವೈಜ್ಞಾನಿಕವಾಗಿ ಪರೀಕ್ಷೆಗಳನ್ನು ನಡೆಸಲು ಇರಬೇಕಾದ Evaluation Registar ಇರುವುದಿಲ್ಲ.

೨. ನಿಖರವಾದ ನಿಯಮಗಳು ಇರುವುದಿಲ್ಲ. ಇದಕ್ಕಾಗಿ ಪ್ರತ್ಯೇಕ ಸಿಬ್ಬಂದಿ ವರ್ಗ ಇರುವುದಿಲ್ಲ. ಬೋಧಕ ಸಿಬ್ಬಂದಿಯೇ ಪರೀಕ್ಷಾ ಸಿಬ್ಬಂದಿಯಾಗಿರುತ್ತಾರೆ.

೩. ಗೋಪ್ಯತೆ ಬಗ್ಗೆ ದೃಢತೆ ಇಲ್ಲದೇ ಇರುವುದು, ಉದಾ:- Fax ಮೂಲಕ ಕೈ ಬರಹದ ಪ್ರಶ್ನೆ ಪತ್ರಿಕೆಯನ್ನು ಕಳುಹಿಸಿರುವುದು.

೪. ಒಂದು ವಿದ್ಯಾರ್ಥಿಗೆ ಅವರ ಬೇಡಿಕೆಯಂತೆ ಪ್ರಮಾಣ ಪತ್ರ ನೀಡಿರುವುದು ಕಂಡುಬಂದಿರುತ್ತದೆ.(ಅಭ್ಯರ್ಥಿಯ ನೋಂದಣಿ ಸಂಖ್ಯೆ: ೧೦೫೧೦೧೩೧೨೨೩೫ ಪ್ರಮಾಣ ಪತ್ರದ ಪ್ರತಿ ಲಗತ್ತಿಸಿದೆ.).

೫. ಹಂಪಿ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಹೊಸಪೇಟೆಯಲ್ಲಿಯ ಒಂದು ಚಿತ್ರಕಲಾ ಮಹಾವಿದ್ಯಾಲಯವು ಧಾರವಾಡ ವಿಶ್ವವಿದ್ಯಾಲಯದ ಮೂಲಕ ಪರೀಕ್ಷೆ ನಿಯಮಕ್ಕೆ ಒಳಪಟ್ಟು ಪ್ರಮಾಣ ಪತ್ರ ಪಡೆಯುತ್ತಿದೆ. ಇದರಿಂದ ಹಂಪಿ ಕನ್ನಡ ವಿಶ್ವವಿದ್ಯಾಲಯವು Affiliation ನೀಡುವ ಸಂಸ್ಥೆ ಅಲ್ಲವೆಂದು ತಿಳಿದುಬರುತ್ತದೆ.

೬. ಶ್ರೀ ಬಾಬುರಾವ್, ಶ್ರೀ ಬಿ.ಎಂ. ಪಾಟೀಲ್ ಮತ್ತು ಶ್ರೀ ಲಮಾಣಿರವರು ಈ ವಾಸ್ತವವನ್ನು ಒಪ್ಪಿರುತ್ತಾರೆ. ಅಲ್ಲದೇ ಈ ಬಗ್ಗೆ ಸೂಕ್ತ ಪರಿಹಾರಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಕ್ರಮವಹಿಸುತ್ತದೆಯೆಂದು ಅಭಿಪ್ರಾಯಪಟ್ಟಿರುತ್ತಾರೆ.

ಅಭಿಪ್ರಾಯ:- ಮೇಲೆ ವಿವರಿಸಿದ ಹಲವಾರು ಅಂಶಗಳು ಪರೀಕ್ಷೆಯ ಪಾವಿತ್ರ್ಯತೆಗೆ ಹಿಡಿದ ಕೈಗನ್ನಡಿಯಾಗಿದೆ. ಈ ಎಲ್ಲಾ ಅಂಶಗಳನ್ನು ಸರಿಪಡಿಸಿಕೊಂಡು ಪರೀಕ್ಷೆಗಳನ್ನು ಅತ್ಯಂತ ಚಾಕಚಕ್ಯತೆಯಿಂದ ನಡೆಸುವುದಾದರೆ ಅದು ಯಾವುದೇ ಸಂಸ್ಥೆಯಾಗಬಹುದು. ಉದಾ:- ಹಂಪಿ ಕನ್ನಡ ವಿಶ್ವವಿದ್ಯಾಲಯ ಅಥವಾ ಇತರೆ ಪರೀಕ್ಷಾ ಮಂಡಳಿ ಇಲ್ಲವಾದರೆ ಪರೀಕ್ಷೆಯು ತನ್ನ ಪಾವಿತ್ರತೆಯನ್ನು ಕಳೆದುಕೊಂಡು ಈ ಲೋಪದೋಷಗಳ ಅಪವಾದಗಳಿಗೆ ಇಲಾಖೆಯು ಗುರಿಯಾಗುತ್ತದೆ. ಇದಕ್ಕಾಗಿ ಪರೀಕ್ಷೆ ನಡೆಸುವಲ್ಲಿ ನಿಪುಣತೆ ಹಾಗೂ ಪರಿಣಿತಿ ಹೊಂದಿದ ಸಂಸ್ಥೆ ಅದಾಗಬೇಕು. ಅದಕ್ಕಾಗಿ ಸರ್ಕಾರ ಈ ಬಗ್ಗೆ ತಕ್ಷಣದ ಕ್ರಮ ಜರುಗಿಸ ಬೇಕಾಗುತ್ತದೆ.

ಇತರೆ ವಿಷಯ-೧:- ನೋಂದಣಿ ಹಾಗೂ ವಿವಿಧ ಶುಲ್ಕಗಳು:-

ಚರ್ಚೆ:- ಮಮತಾ ಶ್ರೀಕಾಂತ್ ಹಾಗೂ ನೀಲಮ್ಮ: ಇವರು ಮಾತನಾಡಿ, ನೋಂದಣಿ, ಅಫಿಲೇಶನ್, ಪರ್ಮಿಶನ್ ಮಾನ್ಯತೆ ನವೀಕರಣ, ಈ ಶಬ್ದಗಳು ವಿಭಿನ್ನವಾಗಿ ಅವರವರಿಗೆ

ಇಷ್ಟಬಂದಂತೆ ಬಳಸಿದ ಅಂಶ ಚರ್ಚೆಯಲ್ಲಿ ಬೆಳಕಿಗೆ ಬಂದಿರುತ್ತದೆ. ಇದಕ್ಕೊಂದು ನಿಖರತೆ ಇಲ್ಲ. ಈ ಅಂಶ ಮೊದಲು ನಿರ್ಧರಿಸಬೇಕೆಂದು ಅಭಿಪ್ರಾಯ ವ್ಯಕ್ತವಾಯಿತು.

ಶುಲ್ಕ:- ೧. Renewal Fee - ಪ್ರತೀ ವರ್ಷಕ್ಕೆ ರೂ. ೫೦೦೦/- ಒಂದು ಕಲಾಶಾಲೆಗೆ

೨. ಪರೀಕ್ಷಾ ಶುಲ್ಕ ಪ್ರತಿ ವಿದ್ಯಾರ್ಥಿಗೆ ರೂ. ೫೦೦/-

೩. Registration Fee ಪ್ರತಿ ವರ್ಷಕ್ಕೆ ಪ್ರತಿ ವಿದ್ಯಾರ್ಥಿಗೆ ರೂ. ೨೦೦/-

೪. ಪ್ರಮಾಣ ಪತ್ರ ನೀಡಲು ಪ್ರತಿ ವಿದ್ಯಾರ್ಥಿಗೆ ರೂ. ೫೦೦/-

೫. ಕ್ರೋಡೀಕೃತ ಪ್ರಮಾಣ ಪತ್ರಕ್ಕೆ ಪ್ರತಿ ಪರೀಕ್ಷೆಗೆ ರೂ. ೫೦೦/-

ಈ ರೀತಿಯಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಹೆಚ್ಚಿನ ಶುಲ್ಕ ಸಂಗ್ರಹ ಮಾಡಲಾಗುತ್ತಿದೆ. ಇದರ ತದ್ವಿರುದ್ಧವಾಗಿ, ಕರ್ನಾಟಕ ಪ್ರೌಢಶಿಕ್ಷಣ ಮಂಡಳಿಯಿಂದ:- ೧. Admission Fee ರೂ. ೮೦+೧೦ =೯೦/- (ಪ್ರಥಮ ಹಾಗೂ ದ್ವಿತೀಯ ವರ್ಷಕ್ಕೆ), ೨. ಡಿಪ್ಲೊಮಾ ಪರೀಕ್ಷೆಗೆ ಪ್ರತಿ ವಿದ್ಯಾರ್ಥಿಗೆ ೧೧೦/- ರೂ. ಮಾತ್ರ ಸಂಗ್ರಹಿಸಲಾಗುತ್ತಿತ್ತು. ಉಳಿದ ಯಾವುದೇ ಶುಲ್ಕ ಸಂಗ್ರಹ ಮಾಡುತ್ತಿರಲಿಲ್ಲ.

ಅಭಿಪ್ರಾಯ:- ಈ ವಿಭಿನ್ನ ಶುಲ್ಕ ಆಕರಣೆಯ ಕ್ರಮವು ಕಲಾಶಾಲೆಗಳಲ್ಲಿ ಸಮಸ್ಯೆ ಉದ್ಭವವಾಗಲು ಕಾರಣವಾಗಿದೆ. ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳು ಈ ಭಾರವನ್ನು ಹೊರಲು ಶಕ್ತರಾಗಿರುವುದಿಲ್ಲ. ಆದ್ದರಿಂದ ಈ ಸಮಸ್ಯೆ ಇನ್ನೂ ಜಟಿಲವಾಗಿರುತ್ತದೆ. ಈ ಸಮಸ್ಯೆಗೆ ಪರಿಹಾರವೆಂದರೆ, ಶುಲ್ಕ ಸಂಗ್ರಹದಲ್ಲಿ ಏಕರೂಪತೆ ತರುವುದು ಹಾಗೂ ಶುಲ್ಕದ ಭಾರ ಕಡಿಮೆ ಮಾಡುವುದು ತುರ್ತು ಅವಶ್ಯವಾಗಿದೆ.

ಇತರೆ ವಿಷಯ-೨:- ಚಿತ್ರಕಲಾ ಶಾಲೆಗಳಿಗೆ ಅನುದಾನ ನೀಡುವ ಬಗ್ಗೆ:- ಇತರೆ ಶಾಲೆಗಳಿಗೆ ನೀಡುವಂತೆ ಅನುದಾನವನ್ನು ಈ ಕಲಾಶಾಲೆಗಳಿಗೂ ಸಹ ವಿಸ್ತರಿಸುವುದು ಸಮಂಜಸ ಎಂಬ ಅಭಿಪ್ರಾಯಗಳು ಮೂಡಬಂದಿದೆ. ಅರ್ಹತೆ ಆಧಾರದ ಮೇಲೆ ವೇತನ ಶ್ರೇಣಿ ನೀಡುವುದು ನೇಮಕಾತಿ ಪ್ರಕ್ರಿಯೆಗೆ ATC ಮತ್ತು AED ಹಾಗೂ ಇತರೆ ಅರ್ಹತೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳಲು ಪ್ರಸ್ತಾಪಿಸಲಾಗಿದೆ.

ಇತರೆ ವಿಷಯ-೩:- ರಾಜ್ಯದ ಚಿತ್ರಕಲಾ ಶಾಲೆಗಳಲ್ಲಿ ಕೆಲವು ಶಾಲೆಗಳು ಮಾನ್ಯತೆ ನವೀಕರಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆದುಕೊಂಡಿರುತ್ತಾರೆ. ಕೆಲವು ಶಾಲೆಗಳು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪಡೆದಿರುತ್ತಾರೆ. ಇನ್ನೂ ಕೆಲವು ಶಾಲೆಗಳು ಮಾನ್ಯತೆ ನವೀಕರಣವನ್ನೇ ಪಡೆದಿರುವುದಿಲ್ಲ. ಆದರೆ ಮಾನ್ಯತೆ ನವೀಕರಣ ಪಡೆಯದೇ ಇರುವ ಶಾಲೆಗಳ ವಿದ್ಯಾರ್ಥಿಗಳನ್ನು ಕೂಡ ಹಂಪಿ ಕನ್ನಡ ವಿಶ್ವವಿದ್ಯಾಲಯವು ಪರೀಕ್ಷೆಗೆ ಹಾಜರುಪಡಿಸಿ

ಫಲಿತಾಂಶ ನೀಡುತ್ತಿದ್ದು ಕಡ್ಡಾಯವಾಗಿ ಮಾನ್ಯತೆ ನವೀಕರಣ ಪಡೆದಿದ್ದಲ್ಲಿ ಮಾತ್ರ ಪರೀಕ್ಷೆಗೆ ಹಾಜರುಪಡಿಸಬೇಕೆಂಬ ನಿಯಮವನ್ನು ಉಲ್ಲಂಘಿಸಿದೆ ಎಂಬ ಅಂಶವು ಸಭೆಯ ಗಮನಕ್ಕೆ ಬಂದಿರುತ್ತದೆ.

ಒಟ್ಟಾರೆ ಅಭಿಪ್ರಾಯ:- ಮೇಲಿನ ಎಲ್ಲಾ ಅಭಿಪ್ರಾಯ ಹಾಗೂ ಸೂಚನೆಗಳನ್ನು ಅವಲೋಕಿಸಿದಾಗ ಸರ್ಕಾರದ ಹಂತದಲ್ಲಿ ಇಲಾಖೆಯ ಹಾಗೂ ಸಂಬಂಧಿಸಿದ ವಿಶ್ವವಿದ್ಯಾಲಯದ ಉನ್ನತ ಅಧಿಕಾರಿಗಳ ಸಭೆ ಕರೆದು ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಹಾಗೂ ಎಲ್ಲಾ ಕಲಾಶಾಲೆಗಳು ಒಂದೇ ನಿಯಮವನ್ನು ಪಾಲಿಸುವಂತೆ ಏಕರೂಪತೆಯ ಅಂತಿಮವಾದ ರೂಪುರೇಷೆ ನೀಡಿ ಸದರಿ ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಅನುಕೂಲವಾಗುವಂತೆ ತುರ್ತಾಗಿ ಕ್ರಮ ಕೈಗೊಳ್ಳುವುದು ಅನಿವಾರ್ಯ ಅಗತ್ಯವೆಂದು ನಾನು ಭಾವಿಸಿರುತ್ತೇನೆ. ೨೦೦೮-೦೯ರ ಪರೀಕ್ಷೆಗಳು ಇನ್ನೂ ನಡೆದಿರುವುದಿಲ್ಲ."[೨೦]

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು

ಸಂಖ್ಯೆ: ಕರಾಉಶಿಪ/ಆನ್‌ಲೈನ್/೪೦/೨೦೧೫-೧೬/೧೩೯ ದಿನಾಂಕ ೦೧-೦೬-೨೦೧೫

"**ವಿಷಯ:-** ವಿಶ್ವವಿದ್ಯಾಲಯ/ಕಾಲೇಜುಗಳ ವಿದ್ಯಾರ್ಥಿಗಳ ಪರೀಕ್ಷಾ ಆಂತರಿಕ ಅಂಕಗಳನ್ನು/ ಹಾಜರಾತಿಯನ್ನು ಆನ್‌ಲೈನ್ ಮೂಲಕ ದಾಖಲಿಸುವ ಕುರಿತು

ಉಲ್ಲೇಖ:- ದಿನಾಂಕ: ೧೩-೦೫-೨೦೧೫ರಂದು ನಡೆದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಾಮಾನ್ಯ ಸಭೆಯ ನಡವಳಿಗಳು

***

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ: ೧೩-೦೫-೨೦೧೫ರಂದು ನಡೆದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಾಮಾನ್ಯ ಸಭೆಯಲ್ಲಿ, ವಿಶ್ವವಿದ್ಯಾಲಯ/ಕಾಲೇಜುಗಳ ವಿದ್ಯಾರ್ಥಿಗಳ ಪರೀಕ್ಷಾ ಆಂತರಿಕ ಅಂಕಗಳನ್ನು/ಹಾಜರಾತಿಯನ್ನು ಆನ್‌ಲೈನ್ ಮೂಲಕ ದಾಖಲಿಸುವ ವಿಷಯವನ್ನು ವಿಷಯ ಸೂಚಿಯಾಗಿ ಮಂಡಿಸಲಾಗಿದ್ದು ನಿರ್ಣಯ ಈ ಕೆಳಕಂಡಂತೆ ಇದೆ.

ಮುಂದಿನ ಶೈಕ್ಷಣಿಕ ವರ್ಷದಿಂದ ವಿಶ್ವವಿದ್ಯಾಲಯ/ಕಾಲೇಜುಗಳ ವಿದ್ಯಾರ್ಥಿಗಳ ಆಂತರಿಕ ಪರೀಕ್ಷಾ ಅಂಕಗಳನ್ನು/ಹಾಜರಾತಿಯನ್ನು ಆನ್‌ಲೈನ್ ಮೂಲಕ ದಾಖಲಿಸಲು ಸಭೆಯು ನಿರ್ಣಯಿಸಿತು. ಮೇಲ್ಕಂಡ ಮಾಹಿತಿಯನ್ನು ಮುಂದಿನ ಕ್ರಮಕ್ಕಾಗಿ ನಿರ್ಣಯದ ಪ್ರತಿಯೊಂದಿಗೆ ಲಗತ್ತಿಸಿ ಕಳುಹಿಸಿದೆ."[೨೧]

ಕರ್ನಾಟಕ ರಾಜ್ಯ ಚಿತ್ರಕಲಾ ಪದವೀಧರರ ಸಂಘ,

ಕೇರಾಫ್ ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು,

ಸಂಖ್ಯೆ: ೫೬/ ದಿನಾಂಕ ೦೬-೦೨-೨೦೧೭

"ವಿಷಯ:- ಚಿತ್ರಕಲೆಯಲ್ಲಿ ಪದವಿ ಶಿಕ್ಷಣ ನೀಡುತ್ತಿರುವ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಅಡಿಯಲ್ಲಿ ಪಠ್ಯಕ್ರಮ ಹಾಗೂ ನಿಯಮಾವಳಿಗಳಲ್ಲಿರುವ ತಪ್ಪುಗಳನ್ನು ಕೂಡಲೇ ಸರಿಪಡಿಸಿ ಯುಜಿಸಿ ನಿಯಮಾವಳಿಗನುಗುಣವಾಗಿ ಕಡ್ಡಾಯವಾಗಿ ಪಾಲಿಸಲು ಮಾರ್ಗಸೂಚಿ ಮತ್ತು ವಿಶೇಷ ಅನುದಾನವನ್ನು ನೀಡುವ ಕುರಿತು.

***

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರಾದ ಶ್ರೀಯುತ ಬಸವರಾಜ ರಾಯರೆಡ್ಡಿ, ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀಮತಿ ಮಲ್ಲಿಕಾ. ಎಸ್. ಘಂಟಿ ಮತ್ತು ಕುಲಸಚಿವರಾದ ಡಾ. ಪಾಂಡುರಂಗ ಬಾಬು ಅವರು ಈ ಮೂರು ಮಹನೀಯರು ಅತ್ಯಂತ ಪ್ರಾಮಾಣಿಕತೆಗೆ ಹೆಸರಾದವರು. ಕನ್ನಡ ವಿಶ್ವವಿದ್ಯಾಲಯದಲ್ಲಿ ಕಳೆದ ೧೪ ವರ್ಷಗಳಿಂದ ೨ ಸರ್ಕಾರಿ, ೨೩ ಅನುದಾನಿತ ಸುಮಾರು ೪೦ ಅನುದಾನರಹಿತ ಚಿತ್ರಕಲಾ ಕಾಲೇಜುಗಳು ನಡೆಯುತ್ತಲಿವೆ. ಈ ಕಾಲೇಜುಗಳು ವಿಶ್ವವಿದ್ಯಾಲಯದಿಂದ ಮತ್ತು ಉನ್ನತ ಶಿಕ್ಷಣ ಇಲಾಖೆಯಿಂದ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿ ಇಂದು ಇಲ್ಲಿನ ವಿದ್ಯಾರ್ಥಿಗಳು, ಸಿಬ್ಬಂದಿಗಳು ಮತ್ತು ಸಂಸ್ಥೆಗಳು ಅಧೋಗತಿಗೀಡಾಗಿವೆ.

ಕರ್ನಾಟಕ ಚಿತ್ರಕಲಾ ಪರಿಷತ್ ಮತ್ತು ಕರ್ನಾಟಕ ಸರ್ಕಾರದಿಂದ ಕಳೆದ ಒಂದು ವರ್ಷದಲ್ಲಿ ಕಿನ್ನಾಳ ಸಾಂಪ್ರದಾಯಿಕ ಕಾರ್ಯಗಾರ, ಚಿತ್ರ ಸಂತೆ, ಪೋಲೆಂಡ್ ಕಲಾವಿದರ ಅಂತರರಾಷ್ಟ್ರೀಯ ಕಾರ್ಯಾಗಾರ ಕಾರ್ಯಕ್ರಮಗಳಲ್ಲಿ ಕನ್ನಡ ವಿಶ್ವವಿದ್ಯಾಲಯದ ಅಡಿಯಲ್ಲಿರುವ ಸುಮಾರು ೬೦ ಕಾಲೇಜುಗಳು ೫೦೦ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳ ಜೊತೆ ಸಂವಾದ ಮಾಡಲಾಗಿದೆ. ಖಾಸಗಿ ಸಂಸ್ಥೆಯಾದ ಚಿತ್ರಕಲಾ ಪರಿಷತ್‌ಗೆ ಇದುವರೆಗೂ ನೂರಾರು ಕೋಟಿ ಹಣ ಮತ್ತು ಡಿಜಿಟಲ್ ಆರ್ಟ್ ಸಂಸ್ಥೆಗಳಿಗೆ ಕರ್ನಾಟಕ ಸರ್ಕಾರ ನೂರಾರು ಕೋಟಿ, ಉನ್ನತ ಶಿಕ್ಷಣ ನೀಡಲು ಕರ್ನಾಟಕ ಸರ್ಕಾರ ಸಾವಿರಾರು ಕೋಟಿ ಖರ್ಚು ಮಾಡುವ ಈ ಸರ್ಕಾರ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ ಡಿಸೈನ್ ಶಿಕ್ಷಣ ನೀಡುತ್ತಿರುವ ಈ ಸಮಗ್ರ ಕರ್ನಾಟಕದಲ್ಲಿರುವ ಈ ಕಾಲೇಜುಗಳ ಉಳಿವಿಕೆ ಹಾಗೂ ಬೆಳವಣಿಗೆಯೂ ತುಂಬಾ ಅವಶ್ಯಕತೆ ಇದೆ ಎಂದು ಪರಿಗಣಿಸಬೇಕಾದುದು ಪ್ರಜಾಪ್ರಭುತ್ವದ ಸಿದ್ಧಾಂತವಾಗಿದೆ ಎಂಬುದು ತಿಳಿದ ವಿಷಯ.

ಕನ್ನಡ ವಿಶ್ವವಿದ್ಯಾಲಯದಿಂದ ಕೂಡಲೇ ತಿದ್ದುಪಡಿ ಮಾಡಿಕೊಳ್ಳಬೇಕಾದ ಅಂಶಗಳು:-

೧. ಯುಜಿಸಿ ನಿಯಮಾವಳಿಗಳ ಪ್ರಕಾರ ೧೦+೨ ವಿದ್ಯಾರ್ಹತೆ ಹೊಂದಿರುವ ವಿದ್ಯಾರ್ಥಿಗಳು ನಾಲ್ಕು ವರ್ಷದ ಚಿತ್ರಕಲಾ ಶಿಕ್ಷಣ ಪಡೆಯಲು ಮಾತ್ರ ಅವಕಾಶವಿದೆ. ಆದೇಶದ ಪ್ರತಿ ಲಗತ್ತಿಸಿದೆ. ಎಸ್.ಎಸ್.ಎಲ್.ಸಿ. ಪಾಸಾದವರಿಗೆ ಈ ಪದವಿ ಶಿಕ್ಷಣ ನೀಡಲು ಪ್ರವೇಶ ನೀಡಿ, ವಿದ್ಯಾರ್ಥಿಗಳಿಗೆ ಮೋಸ ಮಾಡುತ್ತಿರುವುದು ಕೈ ಬಿಡಬೇಕು.

೨. ಅನುದಾನಿತ ಪದವಿ ಕಾಲೇಜುಗಳ ನಿಯಮಾನುಸಾರ ಸರ್ಕಾರದ ವೇತನಾನುದಾನ ಪಡೆಯಲು ಮೊದಲನೇ ವರ್ಷದ ಪದವಿ ಶಿಕ್ಷಣಕ್ಕೆ ಕನಿಷ್ಠ ೧೫ ವಿದ್ಯಾರ್ಥಿಗಳು ಪ್ರವೇಶ ಪಡೆಯಲೇಬೇಕು. ಇಲ್ಲದಿದ್ದರೆ ಅನುದಾನ ಸಹಿತ ಮಾನ್ಯತೆ ನವೀಕರಣ ಮಾಡುವಂತಿಲ್ಲ. ಕಾಲೇಜು ಶಿಕ್ಷಣ ಇಲಾಖೆಯನ್ನು ಸಂಪರ್ಕಿಸಿ ಮಾಹಿತಿ ಪಡೆಯಿರಿ.

೩. ಕರ್ನಾಟಕ ಸರ್ಕಾರದ ಸಚಿವಾಲಯ ಪತ್ರದ ಕ್ರಮಾಂಕ ಇಡಿ ೧೮ ಕೆ.ಯು.ವಿ. ೨೦೧೬ ದಿನಾಂಕ ೧೭-೧೧-೨೦೦೬ರ ಪ್ರಕಾರ ಪ್ರತಿ ತರಗತಿಗೆ ೧೦ ವಿದ್ಯಾರ್ಥಿಗಳು ಇರಬೇಕು, ಅದಕ್ಕಿಂತ ಕಡಿಮೆ ಪ್ರವೇಶ ಇದ್ದರೆ, ಅದಕ್ಕೆ ವಿಶ್ವವಿದ್ಯಾಲಯ ನೋಂದಣಿ ನೀಡುವುದಿಲ್ಲವೆಂದು ನಿಯಮ-೩ರಲ್ಲಿ ತಿಳಿಸಿದೆ. ಸರ್ಕಾರದ ಪತ್ರ ತಮ್ಮ ಗಮನಕ್ಕಾಗಿ ಲಗತ್ತಿಸಿದೆ.

ಆದರೆ ವಿಶ್ವವಿದ್ಯಾಲಯಕ್ಕೆ ಈ ಸರ್ಕಾರದ ನಿಯಮಗಳನ್ನು ಸಡಿಲಿಸಲು ಯಾರು ಅಧಿಕಾರ ನೀಡಿದರು. ಈ ನಿಯಮಗಳನ್ನು ಇದುವರೆಗೂ ಏಕೆ ಪಾಲಿಸುತ್ತಿಲ್ಲ. ಕನಿಷ್ಠ ವಿದ್ಯಾರ್ಥಿಗಳ ಸಂಖ್ಯೆ ಇಲ್ಲದಿದ್ದರೂ ಕೋರ್ಸ್‌ನ್ನು ರದ್ದು ಮಾಡದೇ ಶೇ. ೯೦ರಷ್ಟು ಕಾಲೇಜುಗಳಿಗೆ ನೋಂದಣಿ ಮತ್ತು ಮಾನ್ಯತೆ ನೀಡುತ್ತಿರುವುದಕ್ಕೆ ಕಾರಣವೇನು.

೪. ಕರ್ನಾಟಕ ಸರ್ಕಾರದ ಪತ್ರದ ಸಂಖ್ಯೆ: ಕಾ.ಶಿ.ವಿ/ಶೈ.ವಿ/೨೩೬/ಕಾ.ಬಾ.ಅ/೨೦೧೨-೧೩, ದಿನಾಂಕ ೦೧-೦೮-೨೦೧೩ರನ್ವಯ ವಾರಕ್ಕೆ ಕನಿಷ್ಠ ೪೦ ಗಂಟೆಯ ಕಾರ್ಯಭಾರ ನಿರ್ವಹಿಸತಕ್ಕದ್ದೆಂದು ಸುತ್ತೋಲೆ ಇದ್ದರೂ ಕನ್ನಡ ವಿಶ್ವವಿದ್ಯಾಲಯ ವಾರಕ್ಕೆ ೩೬ ಗಂಟೆ ಮಾಡಿರುವುದಕ್ಕೆ ಕಾರಣವೇನು. ಸರ್ಕಾರದ ಸುತ್ತೋಲೆ ಲಗತ್ತಿಸಿದೆ.

೫. ಯು.ಜಿ.ಸಿ. ನಿಯಮಾವಳಿಗನುಗುಣವಾಗಿ ಶೇ. ೮೦ ಪರೀಕ್ಷಾ ಶೇ. ೨೦ ಆಂತರಿಕ ಅಂಕಗಳು ಇದ್ದರೂ ಕನ್ನಡ ವಿಶ್ವವಿದ್ಯಾಲಯ ಬದಲಾವಣೆ ಮಾಡಿಕೊಳ್ಳದೇ ಇರುವುದಕ್ಕೆ ಕಾರಣವೇನು.

೬. ಕಾಲೇಜು ವಿದ್ಯಾರ್ಥಿಗಳು ಪರೀಕ್ಷಾ ಆಂತರಿಕ ಅಂಕಗಳನ್ನು, ಹಾಜರಾತಿಯನ್ನು ಆನ್‌ಲೈನ್ ಮೂಲಕ ದಾಖಲಿಸಲು ಕರ್ನಾಟಕ ಸರ್ಕಾರದ ಪತ್ರದ ಸಂಖ್ಯೆ: ಇಡಿ೨೮೦/ ಯುಎನ್‌ಇ/೨೦೧೫, ದಿನಾಂಕ ೩೦-೦೬-೨೦೧೫ ಕನ್ನಡ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಿಗೆ ತಿಳಿಸಿದ್ದರೂ ಪ್ರಯೋಜನವಾಗಿರುವುದಿಲ್ಲ. ಯಾವುದೇ ಕಾಲೇಜುಗಳಲ್ಲಿ ಸಿಸಿ ಕ್ಯಾಮರಾಗಳಿಲ್ಲ,

ಬಯೋಮೆಟ್ರಿಕ್ ಇರುವುದಿಲ್ಲ. ಯುವಕ ಯುವತಿಯರ ಸ್ವೇಚ್ಛಾಚಾರದ ಕೂಪಗಳಾಗಿವೆ. ಕನ್ನಡ ವಿಶ್ವವಿದ್ಯಾಲಯವಾಗಲಿ, ತಾಂತ್ರಿಕ ಶಿಕ್ಷಣ ಇಲಾಖೆಯಾಗಲೀ ಯಾವುದನ್ನು ನೋಡದೆ ತಪಾಸಣೆಯನ್ನೂ ಮಾಡದೇ ಉತ್ಪ್ರೇಕ್ಷೆಗೆ ಒಳಗಾಗಿವೆ. ಆದೇಶದ ಪ್ರತಿ ಲಗತ್ತಿಸಿದೆ.

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರು ಮತ್ತು ಅಧಿಕಾರಿ ವರ್ಗದವರಲ್ಲಿ:- ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಬೆಳೆಸಲು ಸಾವಿರಾರು ಕೋಟಿ ಖರ್ಚು ಮಾಡುತ್ತಲಿದೆ. ಆದರೆ ಸಮಗ್ರ ಕರ್ನಾಟಕದಲ್ಲಿ ಚಿತ್ರಕಲೆ, ಶಿಲ್ಪಕಲೆ ಮತ್ತು ಡಿಜಿಟಲ್ ಆರ್ಟ್ ಬೆಳೆಸುವುದು ಅತ್ಯವಶ್ಯಕವಾಗಿದೆ. ಕಲೆ ಮತ್ತು ಸಂಸ್ಕೃತಿ ಈ ನಾಡಿನ ಸಂಪತ್ತು.

೧. ೧೯೯೦ಳರ ಪೂರ್ವದಲ್ಲಿ ಚಿತ್ರಕಲಾ ಕಾಲೇಜುಗಳು ಪ್ರಾರಂಭವಾಗಿ ಸರ್ಕಾರದ ಯಾವುದೇ ಸೌಲತ್ತುಗಳಿಲ್ಲದೆ ಸುಮಾರು ೪೦ ಕಾಲೇಜುಗಳಿಗೆ ಕೂಡಲೇ ಅನುದಾನಕ್ಕೊಳಪಡಿಸಬೇಕು. ಅಲ್ಲಿಯವರೆವಿಗೂ ಅಡಾಕ್ ಗ್ರ್ಯಾಂಟ್ ಬೆಂಗಳೂರಿನ ಚಿತ್ರಕಲಾ ಪರಿಷತ್ತಿಗೆ ನೀಡುವಂತೆ ನೀಡಬೇಕು.

೨. ಎರಡು ಸರ್ಕಾರಿ ಕಾಲೇಜುಗಳಿದ್ದು, ಅವುಗಳನ್ನು ಚಿತ್ರಕಲಾ ಪರಿಷತ್‌ನಂತೆ ಎಲ್ಲಾ ಸೌಲಭ್ಯಗಳನ್ನು ನೀಡಿ ಬೆಳೆಸಬೇಕು. ಏಕರೂಪದ ಶುಲ್ಕಗಳನ್ನು ನಿಗದಿಪಡಿಸಬೇಕು.

೩. ೨೩ ಅನುದಾನಿತ ಚಿತ್ರಕಲಾ ಕಾಲೇಜುಗಳಿದ್ದು, ಕಾಲೇಜುಗಳಲ್ಲಿಯ ಬೋಧಕರಿಗೂ, ಕಾಲೇಜಿನ ವೇತನ ಶ್ರೇಣಿ, ಅತಿಥಿ ಉಪನ್ಯಾಸಕರ ನೇಮಕಾತಿ, ಆರ್ಥಿಕ ಸೌಲಭ್ಯಗಳು ಏಕರೂಪದಲ್ಲಿ ದೊರೆಯುವಂತಾಗಬೇಕು.

೪. ಯುಜಿಸಿ ನಿಯಮಗಳನ್ನು ಎಲ್ಲಾ ಕಾಲೇಜುಗಳು ಕಡ್ಡಾಯವಾಗಿ ಪಾಲಿಸಿ ವಿದ್ಯಾರ್ಥಿಗಳಿಗೆ ಆಧುನಿಕ ಶ್ರೇಷ್ಠ ಶಿಕ್ಷಣ ದೊರೆಯುವಂತಾಗಬೇಕು.

೫. ಉನ್ನತ ಶಿಕ್ಷಣ ಇಲಾಖೆಯ ನಿಯಮಾನುಸಾರ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳ ಸೇವಾ ನಿಯಮಾವಳಿಗಳನ್ವಯ ಇಲ್ಲಿಯ ಸಿಬ್ಬಂದಿಗಳ ಪದೋನ್ನತಿ, ವೇತನ ಶ್ರೇಣಿ, ಬೋಧಕ-ಬೋಧಕೇತರ ನೌಕರರಿಗೆ ಕರ್ನಾಟಕ ಸರ್ಕಾರವು ನಿಯಮಾನುಸಾರ ನೀಡಬೇಕಾಗಿರುವ ಯಾವುದೇ ಸೌಲಭ್ಯಗಳು ನೀಡದೇ ಇರುವುದಕ್ಕೆ ಕಾರಣವೇನು.

ವಿದ್ಯಾರ್ಹತೆ ಇರುವ ಕಲಾ ಇತಿಹಾಸ, ಸೌಂದರ್ಯಶಾಸ್ತ್ರ, ಕನ್ನಡ ಮತ್ತು ಇಂಗ್ಲೀಷ್ ಭಾಷಾ ವಿಷಯಗಳು, ಕಂಪ್ಯೂಟರ್ ಶಿಕ್ಷಣ, ಪರಿಸರ ವಿಜ್ಞಾನ, ಗ್ರಂಥಪಾಲಕರ ನೇಮಕಾತಿಗಳು ಈ ಕಾಲೇಜುಗಳಲ್ಲಿ ಯಾವುದೂ ನಡೆದಿರುವುದಿಲ್ಲ. ನೇಮಕಾತಿ ಆದವರಿಗೆ ಸರ್ಕಾರದಿಂದ ಸಂಭಾವನೆ ಕೊಡುವ ನಿಯಮ, ಸರ್ಕಾರಿ ಮತ್ತು ಅನುದಾನಿತ ಚಿತ್ರಕಲಾ ಕಾಲೇಜುಗಳೇ ಪಾಲಿಸುತ್ತಿಲ್ಲ ಅಂದಮೇಲೆ ಇಲ್ಲಿನ ವಿದ್ಯಾರ್ಥಿಗಳಿಗೆ ಯಾವ ರೀತಿಯ ಬೋಧನೆ ದೊರೆಯುತ್ತಲಿದೆ. ಈ ವಿಷಯ ಕನ್ನಡ ವಿಶ್ವವಿದ್ಯಾಲಯ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ತಿಳಿದರೂ ಸಹ ಕಾಲೇಜುಗಳಿಗೆ ಮಾನ್ಯತೆ ದೊರೆಯುತ್ತಲಿದೆ.

೬. ಕನ್ನಡ ವಿಶ್ವವಿದ್ಯಾಲಯವು ಈ ಪದವಿ ಕಾಲೇಜುಗಳ ಪರೀಕ್ಷೆಗಳನ್ನು ಸುಮಾರು ೨೦ ಕೇಂದ್ರಗಳಲ್ಲಿ ನಡೆಸುತ್ತಲಿದೆ ಎಂದು ಇಂತಹ ಪರೀಕ್ಷಾ ಕೇಂದ್ರಗಳಿಗೆ ಸಿಸಿ ಕ್ಯಾಮೆರಾಗಳನ್ನು ಅಳವಡಿಸಬೇಕೆಂಬ ಕಾಲೇಜು ಶಿಕ್ಷಣ ಇಲಾಖೆಯ ನಿಯಮವಿದ್ದರೂ ಪಾಲಿಸುತ್ತಿಲ್ಲ. ಈ ಪರೀಕ್ಷಾ ಕೇಂದ್ರಗಳು ನಕಲು ಮಾಡಿಸುವ ಕೇಂದ್ರಗಳಾಗಿವೆ ಎಂದು ಪ್ರತಿ ವರ್ಷದ ಪರೀಕ್ಷಾ ಸಮಯದಲ್ಲಿ ಮಾಧ್ಯಮಗಳಲ್ಲಿ ಕಾಣುತ್ತೇವೆ. ಆದುದರಿಂದ ವಿಶ್ವವಿದ್ಯಾಲಯವು ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಿ, ಅದನ್ನು ವಿಶ್ವವಿದ್ಯಾಲಯದಲ್ಲಿ ವೀಕ್ಷಿಸುವಂತಹ ವೈಜ್ಞಾನಿಕ ಸಲಕರಣೆಗಳನ್ನು ಅಳವಡಿಸಿ ದಕ್ಷ ಅಧಿಕಾರಿಗಳಿಂದ ಮೇಲ್ವಿಚಾರಣೆ ಮಾಡಿಸಲೇಬೇಕು.

೭. ಕರ್ನಾಟಕ ಸರ್ಕಾರದ ಪತ್ರದ ಕ್ರಮಾಂಕ ಇಡಿ ೧೮/ಕೆವಿವಿ/೨೦೦೬, ದಿನಾಂಕ ೧೭-೧೧-೨೦೦೬, ನಿಯಮ-೭ರ ಅನ್ವಯ ಮಾನ್ಯ ಕುಲಪತಿಗಳು ಮತ್ತು ಕುಲಸಚಿವರು ಮೇಲ್ಕಂಡ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಲು ಸರ್ಕಾರ ತಮಗೆ ಅವಕಾಶ ನೀಡಿರುವ ನಿಷ್ಪಾಂತ ಮತ್ತು ಪ್ರಜ್ಞಾವಂತ ಒಂದು ಆಡಳಿತ ಸಮಿತಿಯನ್ನು ರಚಿಸಬೇಕು. ಕರ್ನಾಟಕದ ಯಾವುದೇ ಚಿತ್ರಕಲಾ ಕಾಲೇಜಿನಲ್ಲಿರುವವರನ್ನು ದೂರವಿಟ್ಟು ಯುಜಿಸಿ ನಿಯಮಾವಳಿ ಪಾಲಿಸುವ ಬೇರೆ ರಾಜ್ಯದ ಚಿತ್ರಕಲಾ ಕಾಲೇಜಿನ ಒಬ್ಬ ಪರಿಣಿತರನ್ನು, ನ್ಯಾಕ್-ಎ ಗ್ರೇಡ್ ಪಡೆದ ಸಾಮಾನ್ಯ ಶಿಕ್ಷಣದ ಈ ರಾಜ್ಯದ ಪದವಿ ಕಾಲೇಜಿನ ಒಬ್ಬ ಪರಿಣಿತರನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಒಬ್ಬ ಅಧಿಕಾರಿಯನ್ನು ಮತ್ತು ತಾವು ಸಮಿತಿ ರಚಿಸಿ ಸಮಗ್ರ ಸುಧಾರಣೆಗೆ ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು ಸೂಕ್ತವಾಗಿರುತ್ತದೆ.

ಇದಾವುದೂ ಆಗದೇ ಹೀಗೇ ಮುಂದುವರೆದರೆ ಸಮಗ್ರ ತನಿಖೆಗಾಗಿ ಯುಜಿಸಿಗೆ ಈ ಎಲ್ಲಾ ಮಾಹಿತಿಗಳು ಮತ್ತು ಇನ್ನುಳಿದ ಮಾಹಿತಿಯನ್ನು ನೀಡಿ ವಿದ್ಯಾರ್ಥಿಗಳಿಗೆ ಅನ್ಯಾಯ ವಾಗದಂತೆ ತಿಳಿಸಲಾಗುವುದು."

ಶಿಕ್ಷಣದಲ್ಲಿ ಕಲಾಶಿಕ್ಷಣದ ಅವಶ್ಯಕತೆ

ಶಿಕ್ಷಣದ ಮೂಲ ಅರ್ಥವೇನೆಂದರೆ ಮಾನವನ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ ನೀಡುವ ಪ್ರೇರಣಾ ಶಕ್ತಿ ಒಳಗೊಂಡಿರುವಂಥದ್ದು. ಹೀಗಾಗಿ ಶಿಕ್ಷಣಕ್ಕೆ ಮೆರಗು ತರುವುದೇ ಕಲಾ ಶಿಕ್ಷಣ. ಇದು ಇಲ್ಲದೆ ಹೋದರೆ ಮನುಷ್ಯ ಮನುಷ್ಯನಾಗಿರದೆ ವಿಕೃತ ಮನಸ್ಸಿನ ಮೃಗವಾಗುತ್ತಾನೆ. ಕಾರಣ ಅವನಲ್ಲಿ ಸೌಂದರ್ಯ ಪ್ರಜ್ಞೆ ಇಲ್ಲದಿದ್ದರೆ ಉಳಿದ ಶೈಕ್ಷಣಿಕ ವಿಷಯಗಳಿಗೆ ದೊಡ್ಡ ಹೊಡೆತ ಬೀಳುತ್ತದೆ. ಶಿಕ್ಷಣದಲ್ಲಿ ಅಷ್ಟೇ ಅಲ್ಲ, ಇಡೀ ಬದುಕಿನಲ್ಲಿ ಬೆಳಗ್ಗೆಯಿಂದ ಸಾಯಂಕಾಲದವರೆಗೆ ಪ್ರತಿಕ್ಷಣವೂ ನಮಗೆ ತಿಳಿದೋ ಅಥವಾ ತಿಳಿಯದೋ ಪ್ರೇರಣಾ ಶಕ್ತಿಯಾಗಿ ಕಲಾ ರಸಗ್ರಹಿಕೆಯಾಗುತ್ತಲೇ ಇರುತ್ತದೆ. ಉದಾ:- ನಮ್ಮ ಉಡುಗೆ ತೊಡುಗೆಗಳಲ್ಲಾಗಬಹುದು, ಊಟೋಪಚಾರಗಳಲ್ಲಾಗಬಹುದು. ನಮ್ಮ ಶಿಸ್ತನ್ನು ಕಾಪಾಡಿಕೊಂಡಿ ರುವುದರಲ್ಲಿ ಬೇರೊಬ್ಬರೊಂದಿಗೆ ನಮ್ಮ ವರ್ತನೆಯಲ್ಲಿ ಸೌಂದರ್ಯದ ಪರಿಕಲ್ಪನೆ ಆಗಿರಬಹುದು.

ಹೀಗೆ ನಮ್ಮ ಬದುಕಿನ ಪ್ರತಿಕ್ಷಣದ ಪಾತ್ರಧಾರೆಯಲ್ಲಿ ಕಲಾಶಿಕ್ಷಣ ಅಡಗಿದೆ. ಭೂಮಿ, ಜಲ, ಆಕಾಶ, ಇವುಗಳ ಗರ್ಭದಲ್ಲಿರುವ ಎಲ್ಲಾ ಜೀವರಾಶಿಗಳ ಪರಿಕಲ್ಪನೆ ಮಾಡುವುದೇ ಕಲಾಶಿಕ್ಷಣದಿಂದ. ಹೀಗಾಗಿ ಶಿಕ್ಷಣದಲ್ಲಿ ತಾಯಿ ಬೇರಿನಂತೆ ಕೆಲಸ ಮಾಡುವುದೇ ಕಲಾಶಿಕ್ಷಣ, ಕಾಡಿನಲ್ಲಿ ಅನೇಕ ಮರಗಳು, ಹೂಬಳ್ಳಿಗಳು, ಹಣ್ಣುಗಳನ್ನು ಕಾಣುತ್ತೇವೆ. ಹೊರಗೆ ಅದರ ಸೌಂದರ್ಯವನ್ನು ಸಂಬಂಧಿಸಿದಂತೆ ನಮ್ಮ ದೃಷ್ಟಿಯಿಂದ ಕಾಣುತ್ತೇವೆ. ಆದರೆ ಒಳವಲಯಕ್ಕೆ ಸಂಬಂಧಿಸಿದಂತೆ ತಾಯಿಬೇರಿನಿಂದ ಇಷ್ಟೊಂದು ಸಮೃದ್ಧವಾಗಿ ಬೆಳೆದದ್ದನ್ನು ಆಲೋಚನೆ ಮಾಡುವುದೇ ಇಲ್ಲ. ಅದೇ ರೀತಿ ಶಿಕ್ಷಣ ಕ್ಷೇತ್ರದಲ್ಲಿ ಸರ್ವಾಂಗೀಣ ಬೆಳವಣಿಗೆಯಾಗಬೇಕಾದರೆ, ಸುಂದರವಾಗಬೇಕಾದರೆ ಮೂಲಭೂತವಾಗಿ ಹಾಸುಹೊಕ್ಕಾಗಿರುವ ತಾಯಿ ಬೇರಿನಿಂದ ಮಾತ್ರ ಸಾಧ್ಯ ಅನ್ನುವುದಾದರೆ ಕಲಾಶಿಕ್ಷಣ ಮಹತ್ವವನ್ನು ಹೊಂದಿದೆ. ಹೀಗಾಗಿ ಮಾನವನ ಹುಟ್ಟಿನಿಂದ ಇಲ್ಲಿಯವರೆಗೆ ಆಯಾ ಸಂದರ್ಭಗಳನ್ನು ಅವಲೋಕಿಸಿದಾಗ ನಮ್ಮ ಪರಂಪರೆ ಬಗ್ಗೆ ಗಾಢವಾಗಿ ಆಲೋಚಿಸಿದಾಗ ನಮ್ಮ ಇತಿಹಾಸದ ಬಗ್ಗೆ ತಿಳಿಸಿಕೊಡುವಂತಹುದರಲ್ಲಿ ಕಲಾ ಶಿಕ್ಷಣದ ಪಾತ್ರ ಬಹುದೊಡ್ಡದು ಎನ್ನುವುದು ತಿಳಿದುಬರುತ್ತದೆ.

ಕಲಾಶಿಕ್ಷಣ ವಿವಿಧ ಅಂತರ್‌ಶಿಸ್ತುಗಳಿಗೆ ಉಪಯೋಗವಾಗುತ್ತದೆ ಮತ್ತು ವಿಶಾಲವಾದಂತಹ ಅರಿವನ್ನು ಮೂಡಿಸುತ್ತದೆ. ಕಲಾಶಿಕ್ಷಣವು ತನ್ನ ಅಂತರ್‌ಶಿಸ್ತಿನಿಂದ ಇತರ ವಿಷಯಗಳಿಗೆ ಪ್ರಾಯೋಗಿಕವಾಗಿ ಜ್ಞಾನ ನೀಡುತ್ತದೆ ಮತ್ತು ತನ್ನ ಸಾಧ್ಯತೆಗಳ ಅರಿವು ಮೂಡಿಸುತ್ತದೆ. ಉದಾ:- ಮೆಡಿಕಲ್, ಇಂಜಿನಿಯರಿಂಗ್, ಕೃಷಿ ಶಿಕ್ಷಣ, ಗಣಿತ, ವಿಜ್ಞಾನ, ಸಮಾಜಶಾಸ್ತ್ರ, ವಾಸ್ತುಶಿಲ್ಪ, ಶಿಲ್ಪ, ಚಿತ್ರಕಲೆಗಳಲ್ಲಿ ಆಧುನಿಕವಾಗಿ ಕಲೆಗಳಲ್ಲಿ ಹೆಚ್ಚು ಮಹತ್ವದ ಜ್ಞಾನ ಸಂಪಾದಿಸಿಕೊಡುತ್ತದೆ.

ಚಿತ್ರಕಲಾ ಶಿಕ್ಷಣ ಹಾಗೂ ಶಿಕ್ಷಣ ಎರಡನ್ನು ಬೇರೆ ಬೇರೆಯಾಗಿ ನೋಡುವಂತಿಲ್ಲ. ಮಕ್ಕಳ ಕಲಿಕೆಯ ಆರಂಭವು ಚಿತ್ರಗಳಿಂದಲೇ ಆಗುತ್ತದೆ. ಅಕ್ಷರಗಳನ್ನು ಕೂಡ ಮಗು ಒಂದು ಚಿತ್ರವೆಂದು ಭಾವಿಸಿ ಕಲಿಯಲು ಆರಂಭಿಸುತ್ತದೆ. ಆದ್ದರಿಂದ ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಹಂತದವರೆಗೂ ಶಿಕ್ಷಣದಲ್ಲಿ ಕಲಾಶಿಕ್ಷಣದ ಅವಶ್ಯಕತೆಯಿದೆ. ನೂರಾರು ಪುಟದ ಪುಸ್ತಕ ಹೇಳುವ ವಿಷಯವನ್ನು ಕೇವಲ ಒಂದು ಚಿತ್ರವು ಪುಸ್ತಕಕ್ಕಿಂತಲೂ ಬಹು ಪರಿಣಾಮ ಕಾರಿಯಾಗಿ ನೋಡುಗನಿಗೆ ತಿಳಿಸುತ್ತದೆ. ಯಾಕೆಂದರೆ ಇದು ದೃಶ್ಯ ಮಾಧ್ಯಮವಾಗಿದೆ. ಓದು ಊಹಿಸಲು ತೊಡಗಿಸಿದರೆ ಚಿತ್ರಕಲೆ ಪ್ರತ್ಯಕ್ಷ ಜ್ಞಾನವನ್ನು ನೀಡುತ್ತದೆ. ಚಿತ್ರಕಲೆಯು ಮಾನವನನ್ನು ಸುಸಂಸ್ಕೃತನನ್ನಾಗಿಸುತ್ತದೆ. ಚಿತ್ರಕಲೆ ಕಲಿಯುವಿಕೆಯಿಂದ ವಿದ್ಯಾರ್ಥಿಯ ಸ್ಮರಣಶಕ್ತಿ ಹೆಚ್ಚುತ್ತದೆ. ಸೌಂದರ್ಯ ಪ್ರಜ್ಞೆ ಹೆಚ್ಚುತ್ತದೆ, ಶಿಸ್ತು ಸಂಯಮ, ಮಾನವೀಯ ಗುಣಗಳು ವಿದ್ಯಾರ್ಥಿಗಳಲ್ಲಿ ಬೆಳೆಯುತ್ತವೆ. ಆದ್ದರಿಂದ ಶಿಕ್ಷಣದಲ್ಲೂ ಕಲಾಶಿಕ್ಷಣದ ಅವಶ್ಯಕತೆಯಿದೆ ಮತ್ತು ಅವಶ್ಯಕತೆ ಇರಲೇಬೇಕು.

ಪ್ರಾಥಮಿಕ ಹಂತದಲ್ಲಿ ಮಕ್ಕಳ ಬೌದ್ಧಿಕ ಬೆಳವಣಿಗೆಯಲ್ಲಿ ಕಲಾಶಾಲೆ ಪ್ರಮುಖ ಪಾತ್ರವಹಿಸುತ್ತದೆ. ಪ್ರಾಥಮಿಕ ಹಂತದಲ್ಲಿ ಶಾಬ್ದಿಕ ಭಾಷೆ ಗೊತ್ತಿರುವುದಿಲ್ಲ. ಮಗು ಒಂದು ಚಿತ್ರ ನೋಡಿ ಆ ವಸ್ತುವಿನ ಬಗ್ಗೆ ತಿಳಿದುಕೊಳ್ಳುತ್ತದೆ. ಮಗುವಿನ ಬುದ್ಧಿ ವಿಕಾಸವಾಗಬೇಕಾದರೆ ಚಿತ್ರಕಲೆಯು ಪ್ರಮುಖ ಪಾತ್ರವಹಿಸುತ್ತದೆ. ಆ ಕಾರಣದಿಂದ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆ ಕಲಾಶಿಕ್ಷಣ ಅವಶ್ಯಕತೆ ಇದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಹೊಸ ಚೈತನ್ಯ ಉಂಟಾಗುತ್ತದೆ. ಮಗುವಿನ ಕ್ರಿಯಾಶೀಲತೆ ಹೆಚ್ಚಿಸಲು ಮತ್ತು ಮಕ್ಕಳಲ್ಲಿ ಭೌತಿಕ ಆನಂದ ಮತ್ತು ಎಲ್ಲಾ ವಿಷಯಗಳ ಮೇಲೆ ಹಿಡಿತ ಸಾಧಿಸಲು ಕಲಾಶಿಕ್ಷಣ ಶಿಕ್ಷಣದ ಹಂತಗಳಲ್ಲಿ ಒಂದು ಪ್ರಮುಖ ಪಾತ್ರವಹಿಸುತ್ತದೆ.

ಕಲಾಶಿಕ್ಷಣ ಮತ್ತು ಚಿತ್ರಕಲೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಕಲೆಯ ವಿಮರ್ಶೆ, ವಿವರಣೆ, ಪರಿಚಯ ಇವೆಲ್ಲವುಗಳ ಪರಿಕಲ್ಪನೆಗಾಗಿ ಒಂದು ಚಿತ್ರದ ಪೂರ್ಣ ತಿಳುವಳಿಕೆಗಾಗಿ, ನಿರ್ಮಾಣಕ್ಕಾಗಿ ಕಲಾಶಿಕ್ಷಣ ಅತ್ಯಾವಶ್ಯಕವಾದ ಒಂದು ಶಕ್ತಿ. ಚಿತ್ರಕಲೆಯ ಪೂರಕ ರೂಪವೇ ಕಲಾಶಿಕ್ಷಣ ಎಂದು ಹೇಳಬಹುದು.

ಕಲಾಶಿಕ್ಷಣದಲ್ಲಿ ಬೋಧನಾ ಪದ್ಧತಿ

ಕಲಾಶಿಕ್ಷಣದಲ್ಲಿ ಬೋಧನಾ ಪದ್ಧತಿ ಒಂದು ಮಹತ್ತರವಾದ ಪಾತ್ರ ವಹಿಸುವುದರಲ್ಲಿ ಸಂದೇಹವಿಲ್ಲ. ಕಲಾವಿದರುಗಳು ತಮ್ಮ ಕಲಾಕೃತಿ ರಚನೆ ಮಾಡುವುದರಲ್ಲಿ ನಿರತರಾದರಷ್ಟೇ ಸಾಲದು, ಅವರು ಕಲಾ ಇತಿಹಾಸ, ಕಲಾ ಪಂಥಗಳು, ಇಂದಿನ ಸಮಕಾಲೀನ ಕಲಾವಿದರ ಪರಿಚಯವನ್ನು ಹಾಗೂ ಅವರ ಉನ್ನತ ಕಲಾಕೃತಿಗಳನ್ನು ವಿವರಿಸಲು ಸಮರ್ಥರಾಗಿರಬೇಕು. ಬೋಧನಾ ಪದ್ಧತಿ ಇಲ್ಲದಿದ್ದರೆ ಕಲೆ ವಿಕಾಸಗೊಳ್ಳುವುದಿಲ್ಲ. ಇತಿಹಾಸದ ಅರಿವಿದ್ದಾಗ ಮಾತ್ರ ಸಮಕಾಲೀನ ಕಲೆಯು ವಿಕಾಸಗೊಳ್ಳುತ್ತದೆ. ಹೀಗಾಗಿ ಬೋಧನಾ ಶಿಕ್ಷಣ ಅತ್ಯಂತ ಅವಶ್ಯಕವಾಗಿ ಬೇಕಾಗುತ್ತದೆ. ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಉಳಿದ ಶಿಕ್ಷಣಕ್ಕೆ ಬೋಧನಾ ಪದ್ಧತಿಯ ಅವಶ್ಯಕತೆ ಇರುವಂತೆ ಕಲಾಶಿಕ್ಷಣಕ್ಕೂ ಬೋಧನಾ ಪದ್ಧತಿ ಅವಶ್ಯಕತೆ ಇದೆ. ಅದನ್ನು ನಾವು ಕಂಡುಕೊಳ್ಳದೇ ಹೋದರೆ ಅದರ ಬಗ್ಗೆ ತಿಳುವಳಿಕೆ ಇಲ್ಲದಿದ್ದರೆ ಮುಂದುವರಿಯಲು ಅಸಾಧ್ಯ. ನಮ್ಮ ಕಲಾಶಿಕ್ಷಣದಲ್ಲಿ ಎಲ್ಲಾ ವಿಷಯಗಳು ಹೆಚ್ಚಾಗಿ ಪ್ರಾಯೋಗಿಕವಾಗಿರುವುದರಿಂದ ನಮಗೆ ಆ ಕಲ್ಪನೆ ಬರುವುದು ಸಹಜ. ಆದರೆ ಪ್ರತಿಯೊಂದು ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ಬೋಧನಾ ಕ್ರಮದ ಬಗ್ಗೆ ತಿಳುವಳಿಕೆ ಮೂಡಿಸುವುದು ಕಲಾಶಿಕ್ಷಣದಲ್ಲಿ ಮುಖ್ಯವಾಗಿದೆ. ಕ್ರಮಬದ್ಧವಾದ ಬೋಧನೆ ಇಲ್ಲದೆ ಯಾವ ಶಿಕ್ಷಣವೂ ಪರಿಪೂರ್ಣತೆ ಪಡೆಯುವುದಿಲ್ಲ. ರೇಖೆ, ಆಕಾರ, ಬಣ್ಣಗಳ ಬಗ್ಗೆ ಹಾಗೂ ಷಡಂಗಗಳ ಬಗ್ಗೆ, ನವರಸಗಳ ಬಗ್ಗೆ, ಖ್ಯಾತ ಕಲಾವಿದರು ಮತ್ತು ಅವರ ಸಾಧನೆಗಳ ಬಗ್ಗೆ ಹೀಗೆ ಹಲವು ಹಂತಗಳಲ್ಲಿ ಕಲಾಶಿಕ್ಷಣದಲ್ಲಿ ಬೋಧನಾ ಶಿಕ್ಷಣದ ಅವಶ್ಯಕತೆ ಇದೆ ಎಂಬುದು ಅದರಲ್ಲಿ ಯಶಸ್ಸು ಕಂಡ ಉಪನ್ಯಾಸಕರುಗಳಿಗೆ, ಶಿಕ್ಷಕರುಗಳಿಗೆ ಗೊತ್ತಾಗುತ್ತದೆ.

ಒಂದು ಪಠ್ಯಕ್ರಮ ಪ್ರಾಯೋಗಿಕವಾಗಿರುವುದರಿಂದ ಕಲಾಶಿಕ್ಷಣ ಬೋಧನೆ ಕೂಡ ಪೂರಕವಾದ ಪದ್ಧತಿ. ಹಾಗಾಗಿ ಇಂದಿನ ದಿನಗಳಲ್ಲಿ ಚಿತ್ರಕಲೆಯ ಜೊತೆಗೆ ಕಲಾಶಿಕ್ಷಣದ ಬೋಧನೆಯನ್ನು ಸೇರ್ಪಡೆಗೊಳಿಸುವುದು ಅತಿ ಸೂಕ್ತವಾದ ವಿಧಾನ ಎನ್ನಬಹುದು. ಪ್ರತಿಯೊಂದು ಕಲಿಕಾ ವಿಷಯಗಳಿಗೆ ಬೋಧನಾ ಸಿದ್ಧಾಂತವಿರುವಂತೆ ಶಿಕ್ಷಣ ಕ್ಷೇತ್ರದಲ್ಲಿ ಮನೋವಿಜ್ಞಾನದ ತಳಹದಿಯ ಕಲಾಶಿಕ್ಷಣಕ್ಕೂ ಬೋಧನಾ ಶಿಕ್ಷಣ ಅಗತ್ಯವಾಗಿದೆ. ಪ್ರತಿಯೊಂದು ಮಗುವಿನಲ್ಲಿ ಸುಪ್ತ ಪ್ರತಿಭೆ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಅದನ್ನು ಉದ್ದೀಪನಗೊಳಿಸಲು ಒಬ್ಬ ಉತ್ತಮ ಶಿಕ್ಷಕನ ಅವಶ್ಯಕತೆ ಇರುತ್ತದೆ. ಚಿತ್ರಕಲಾ ಶಿಕ್ಷಕನಾಗುವವನಿಗೂ ಬೋಧನಾ ಶಿಕ್ಷಣದ ತರಬೇತಿ ಕಡ್ಡಾಯ ವಾಗಿರಬೇಕು. ಕಲಿಸುವಿಕೆಯು ಒಂದು ವಿಜ್ಞಾನ, ಕಲೆ ಆಗಿರುವುದರಿಂದ ಚಿತ್ರಕಲೆ ಬೋಧನೆಯನ್ನು ಹೊರತುಪಡಿಸಬೇಕೆಂದು ಸಂಶೋಧನೆಯ ಅಭಿಪ್ರಾಯವಾಗಿದೆ.

ಕಲಾಶಿಕ್ಷಣದಲ್ಲಿ ಪರಿಣಾಮಕಾರಿಯಾದ ಬೋಧನೆಯು ಅವಶ್ಯಕವಾಗಿ ಬೇಕು. ದೇಶದಲ್ಲಿ ಎಲ್ಲಾ ಕಡೆಗಳಲ್ಲೂ ನಡೆಯುವಂತಹ ವಿಷಯಗಳನ್ನು ಸಹ ತಿಳಿದುಕೊಳ್ಳಲು ಮತ್ತು ತಾವು ರಚಿಸಿದಂತಹ ಕಲಾಕೃತಿಯಲ್ಲಿನ ವಿಮರ್ಶೆಯನ್ನು ಮಾಡುವ ನಿಟ್ಟಿನಲ್ಲಿ ಕಲಾ ಶಿಕ್ಷಣದಲ್ಲಿ ಪರಿಣಾಮಕಾರಿಯಾದ ಬೋಧನಾ ಪದ್ಧತಿ ಅವಶ್ಯಕವಾಗಿ ಬೇಕಾಗುತ್ತದೆ. ಪ್ರಸ್ತುತವಾಗಿ ಒಂದು ಕಲಾಕೃತಿಯ ಬಗ್ಗೆ ವಿಮರ್ಶೆ ಮಾಡಬೇಕಾದರೆ ಅದರಲ್ಲೂ ಶಾಬ್ದಿಕ ಭಾಷೆಯಲ್ಲಿ ಹೇಳಬೇಕಾದರೆ ಬೋಧನೆ ಬಹಳ ಪ್ರಮುಖ ಪಾತ್ರವಹಿಸುತ್ತದೆ. ಜಗತ್ತಿನ ಪ್ರಖ್ಯಾತ ಕಲಾವಿದರ ಬಗ್ಗೆ ತಿಳಿದುಕೊಳ್ಳಬೇಕಾದರೆ ಅವರ ಕಲೆಯ ಬಗ್ಗೆ ಹೆಚ್ಚು ಹೆಚ್ಚಾಗಿ ಅಭ್ಯಾಸ ಮಾಡಬೇಕಾಗುತ್ತದೆ. ತನ್ಮೂಲಕ ಕಲಾಜಗತ್ತಿನ ಇತಿಹಾಸದ ಪುಟಗಳು ನಮ್ಮ ಅರಿವಿಗೆ ಬರುತ್ತವೆ. ಒಂದು ಕಲೆ ಬೇರೆಯವರಿಗೆ ತಿಳಿಸಲು ನಮಗೆ ಶಾಬ್ದಿಕ ಭಾಷೆ ಅಗತ್ಯವೆನಿಸುತ್ತದೆ. ಬೋಧನೆ ಇಲ್ಲವಾದರೆ ಕಲೆಯ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳಲು ಆಗುವುದಿಲ್ಲ. ಮಕ್ಕಳ ಬುದ್ಧಿ ವಿಕಾಸವಾಗಬೇಕಾದರೆ ಬೋಧನೆ ಅಗತ್ಯ ಎಂದು ಹೇಳಬಹುದು. ಪ್ರಾಯೋಗಿಕವಾಗಿ ಒಂದು ಕೃತಿ ಎಷ್ಟು ಮುಖ್ಯವೋ ಬೋಧನೆ ಕೂಡ ಅಷ್ಟೇ ಮುಖ್ಯವಾಗಿರುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಕಲಾ ಇತಿಹಾಸದ ಬಗ್ಗೆ, ಕಲಾ ಪ್ರಪಂಚದ ಬಗ್ಗೆ ಸರಿಯಾದ ಜ್ಞಾನ ಮೂಡುತ್ತದೆ.

ಕಲೆಯ ಇತಿಹಾಸವನ್ನು ಅರಿಯಲು ಸರಿಯಾದ ಬೋಧನಾ ಪದ್ಧತಿಯ ಅವಶ್ಯಕತೆಯಿದೆ. ಪ್ರಯೋಗಕ್ಕಿಂತಲೂ ಬೋಧನಾ ಶಿಕ್ಷಣ ಪದ್ಧತಿಯಿಂದ ಮಕ್ಕಳು ಉನ್ನತಿ ಸಾಧಿಸಬಹುದು. ಪಠ್ಯಕ್ರಮ ಪ್ರಾಯೋಗಿಕವಾಗಿರುವುದರಿಂದ ಕಲಾಶಿಕ್ಷಣದ ತಾತ್ವಿಕ ಬೋಧನೆ ಕೂಡ ಪೂರಕವಾದ ಪದ್ಧತಿ. ಹಾಗಾಗಿ ಇಂದಿನ ದಿನಗಳಲ್ಲಿ ಚಿತ್ರಕಲೆಯ ಜೊತೆಗೆ ಕಲಾಶಿಕ್ಷಣದ ಬೋಧನೆ ತರಬೇತಿಯನ್ನು ಸೇರ್ಪಡೆಗೊಳಿಸುವುದು ಅತಿ ಸೂಕ್ತವಾದ ವಿಧಾನ ಎನ್ನಬಹುದು.

ಪ್ರಸ್ತುತ ಕಲಾಶಿಕ್ಷಣ ಪದ್ಧತಿ

ಚಿತ್ರಕಲೆಯ ಅಭ್ಯಾಸವು ಒಂದು ತಪಸ್ಸು; ಅದಕ್ಕಾಗಿ ವಿದ್ಯಾರ್ಥಿ ಪೂರ್ಣ ತಯಾರಿ ಯಲ್ಲಿರಬೇಕು ಹಾಗೂ ಗುರುಗಳು ರೂವಾರಿಯಂತಿರಬೇಕು. ಅರ್ಹತೆ ಇದ್ದೋ ಇಲ್ಲದೆಯೋ

ಸರಕಾರಿ ನಿಯಮಗಳಂತೆ ಇಲ್ಲಿ ಯಾವುದೋ ಒಂದು ಮೂಲದಿಂದ ಕಲಾಗುರುಗಳಾಗಿ ಕೈತುಂಬಾ ಸಂಬಳ ಪಡೆದು ಸಾಗುವಂತಹ ವ್ಯವಸ್ಥೆಯೊಂದು ಕಡೆಯಾದರೆ, ಅರ್ಹತೆಯಿದ್ದು, ಉಚ್ಚ ಜಾತಿ, ಬಡತನ, ಕಾರಣಗಳಿಂದ ಕಲಾವಿದರು ನಿರೋದ್ಯೋಗಿಗಳಾಗಿ ಶೋಷಣೆಗೆ ಒಳಗಾಗುತ್ತಿರುವ ವ್ಯವಸ್ಥೆ ಒಂದು ಕಡೆ ಇರುವುದರಿಂದ ಸರಕಾರದವರು ಯಾವುದೇ ರಾಜಕೀಯ ಲಾಭಕ್ಕೆ ಬಾಗದೇ ಕಲಾಶಿಕ್ಷಣ ವ್ಯವಸ್ಥೆಯನ್ನು ಸುವ್ಯವಸ್ಥಿತಗೊಳಿಸಿದರೆ ಯೋಗ್ಯವೆಂಬುದು ಪ್ರಸ್ತುತ ಅಧ್ಯಯನದ ಅಭಿಪ್ರಾಯ. ಯಾಕೆಂದರೆ ಕಲಾವಿದರು, ಕವಿಗಳು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ನಮ್ಮ ನೆಲದ ಸಂಸ್ಕೃತಿಯನ್ನು ಸಾಗಿಸುವ ಹರಿಕಾರರಾಗಿರುತ್ತಾರೆ.

ಪ್ರಸ್ತುತ ಕಲಾಶಿಕ್ಷಣ ಬರೀ ಪದವಿಗಾಗಿ ಮುಗಿಸುವಂತಿರಬಾರದು. ಜೀವನದ ಮೌಲ್ಯವನ್ನು ಅರಿಯುವುದೇ ನಿಜವಾದ ಶಿಕ್ಷಣ. ಹೀಗಾಗಿ ಕಲಾಶಿಕ್ಷಣಕ್ಕೆ ತನ್ನದೇಯಾದಂತಹ ಘನತೆ ಇದೆ. ಈ ಕಲಾ ಶಿಕ್ಷಣದ ಘನತೆ ಜೊತೆಗೆ ವ್ಯಾಪ್ತಿಯು ವಿಸ್ತಾರವಾಗಿದೆ. ಮೌಲ್ಯದ ಜೊತೆಗೆ ಪ್ರಸ್ತುತ ಆಧುನಿಕ ಸಮಕಾಲೀನ ಕಲೆಯನ್ನು ಸಮಾಜಕ್ಕೆ ಬಿಂಬಿಸುವ ಅನಿವಾರ್ಯತೆ ಇದೆ. ಸಮಾಜದಲ್ಲಿ ಕಲಾವಿದರಿಗೆ ಗೌರವ ಸ್ಥಾನ ಸಿಗುತ್ತದೆ. ವಿವಿಧ ರೀತಿಯ ಕಲಾಶಿಕ್ಷಣದಲ್ಲಿ ತೊಡಗಿರುವಂತಹ ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ಬೆಳೆಯಲು ಅನುಕೂಲವಾಗುತ್ತದೆ. ಸ್ವಯಂಉದ್ಯೋಗದಿಂದ ಬದುಕು ಕಟ್ಟಿಕೊಳ್ಳಬಹುದು. ಒಬ್ಬ ಕಲಾವಿದ ದೇಶದ ಆಸ್ತಿಯಾಗುತ್ತಾನೆ. ಅವನು ಮಾಡಿದ ಕಲಾಕೃತಿಗಳು ಹೊಸ ಪೀಳಿಗೆಗಳಿಗೆ ಸೃಜನಶೀಲತೆಯನ್ನು ಬೆಳೆಸುವಲ್ಲಿ ಸಹಕಾರಿಯಾಗುತ್ತವೆ. ಕಲೆಯು ಒಂದು ವಿಶ್ವಭಾಷೆಯಾಗಿದ್ದು ಜಾತಿ ಧರ್ಮಗಳನ್ನು ಮೀರಿ ಬೇಧಭಾವವಿಲ್ಲದೆ ಸಮಾಜಕ್ಕೆ ಒಂದು ಕೊಡುಗೆಯಾಗಿದೆ.

ಆಧುನಿಕ, ಸಮಕಾಲೀನ ಕಲಾವಿದರು ವೈಜ್ಞಾನಿಕವಾಗಿ ಬೆಳೆಯಬೇಕು, ವಿಕಾಸಗೊಳ್ಳಬೇಕು. ಕ್ರಿಯಾಶೀಲತೆ, ರಚನಾಪ್ರವೃತ್ತಿಗಳಲ್ಲಿ ಶಿಕ್ಷಕನ ಪಾತ್ರ ಪ್ರಮುಖವಾಗಿದೆ. ನಮ್ಮ ಸಂಪ್ರದಾಯ ಹಾಗೂ ಪಾರಂಪರಿಕ ವಿಧಾನಗಳ ಅಧ್ಯಯನ ಬೇಕು. ಚಿತ್ರ, ಶಿಲ್ಪ, ವಾಸ್ತುಶಿಲ್ಪಗಳ ಕುರಿತು ಅಧ್ಯಯನಶೀಲರಾಗಬೇಕು. ಸತ್ಯವಾದ ಸಂಶೋಧನೆಗಳು ನಡೆಯಬೇಕು. ಮಾರ್ಗದರ್ಶಕರು ವಿಷಯದ ಬಗ್ಗೆ ಗಂಭೀರವಾಗಿ ಪರಿಪೂರ್ಣತೆ ಹೊಂದಿರಬೇಕು.

ಕಲಾಶಿಕ್ಷಣ ಎಂಬುದೇ ಒಂದು ವಿಶಾಲವಾದ ಇಂದು ಹಲವಾರು ಕೋರ್ಸ್‌ಗಳು ವಿವಿಧ ರೀತಿಯ ಪಠ್ಯಕ್ರಮ ಉದ್ಯೋಗಗಳ ಅನಾನುಕೂಲತೆ ಮತ್ತು ಕಲಾವಿದರಿಗೆ ಅನುಕೂಲಕರ ವಾದಂತಹ ಅವಕಾಶಗಳು ಅಷ್ಟಾಗಿ ಲಭಿಸದೇ ಇರುವುದು ಈ ಕ್ಷೇತ್ರದಲ್ಲಿ ಅಲ್ಪ ಸ್ವಲ್ಪ ಹಿನ್ನಡೆ ಕಾಣುತ್ತಿದೆ. ಈ ಎಲ್ಲಾ ಅಂಶಗಳನ್ನು ಸರಿಪಡಿಸಿಕೊಂಡು ಹೋದರೆ ಉಳಿದ ಎಲ್ಲಾ ಶಿಕ್ಷಣದಂತೆ ಕಲಾಶಿಕ್ಷಣವು ಒಂದು ಮುಖ್ಯ ಸ್ಥಾನದಲ್ಲಿ ಬರುವ ಸಾಧ್ಯತೆ ಇದೆ. ಕಲಾಶಿಕ್ಷಣ ಮತ್ತು ಕಲಾವಿದರು ಸಮಾಜದ ಆಗುಹೋಗುಗಳಿಗೆ ಸ್ಪಂದಿಸಿ ಸಮಾಜಕ್ಕೆ ಅಪಾರವಾದಂತಹ ಕೊಡುಗೆಯನ್ನು ನೀಡಬೇಕಾಗಿದೆ. ಸಮಾಜದಲ್ಲಿ ಕಲಾವಿದರಿಗೆ ಸಿಗುವಂತಹ ಗೌರವ ಸ್ಥಾನ ಸಿಕ್ಕಿದೆ ಅಥವಾ ಸಿಗುತ್ತಿದೆ. ಕಲಾಶಿಕ್ಷಣ ಕೈಗೊಂಡಿರುವಂತಹ ವಿದ್ಯಾರ್ಥಿಗಳಿಗೆ ಸರ್ಕಾರೇತರ

ವಲಯಗಳಲ್ಲಿ ಬೆಳೆಯಲು ಅನುಕೂಲಕರವಾಗಿದೆ. ಒಬ್ಬ ಕಲಾವಿದನು ದೇಶದ ಆಸ್ತಿಯಾಗುತ್ತಾನೆ. ಅವನು ಮಾಡಿದ ಕಲಾಕೃತಿಗಳು ಹೊಸ ಪೀಳಿಗೆಗಳಿಗೆ ಸ್ಫೂರ್ತಿಯಾಗುತ್ತದೆ. ಕಲಾಶಿಕ್ಷಣವಿಲ್ಲದೆ ಸಮಾಜದ ಎಲ್ಲಾ ಕ್ಷೇತ್ರಗಳು ಬೆಳೆಯಲು ಸಾಧ್ಯವಿಲ್ಲ. ಕಲಾಶಿಕ್ಷಣ ಬೇಕೇ ಬೇಕು. ಕಲೆಯು ಒಂದು ವಿಶ್ವಭಾಷೆಯಾಗಿದ್ದು ಜಾತಿ ಧರ್ಮಗಳ ಭೇದಭಾವವಿಲ್ಲದೆ ಸಮಾಜಕ್ಕೆ ಒಂದು ಕೊಡುಗೆಯಾಗಿದೆ.

ಪ್ರಸ್ತುತ ಕಲಾಶಿಕ್ಷಣ (Standerd) ಮೌಲ್ಯಯುತವಾಗಿಲ್ಲ. ಇದರ ಬಗ್ಗೆ ಯಾರೂ ಚಿಂತನೆ ಮಾಡುತ್ತಿಲ್ಲ. ಕಲಾ ಶಿಕ್ಷಣಕ್ಕೋಸ್ಕರ ಒಂದು ಇಲಾಖೆ ಬೇಕು. ಕರ್ನಾಟಕದಲ್ಲಿ ಇರುವಂತಹ ಎಲ್ಲ ಕಾಲೇಜುಗಳು ಅದರ ಅಧೀನದಲ್ಲಿರಬೇಕು. ಅಂತಹ ಇಲಾಖೆಯಲ್ಲಿ ಕಲಾವಿದರೇ ಉನ್ನತ ಹುದ್ದೆಯಲ್ಲಿರಬೇಕು.

ಚಿತ್ರಕಲೆಗೆ ಸಂಬಂಧಿಸಿದ ಆಯಾ ಜಿಲ್ಲೆಯ ವಿಶೇಷತೆ, ಸ್ಥಳೀಯ ಕಲೆಗಳನ್ನು ಪ್ರೋತ್ಸಾಹಿಸುವ ಕಾರ್ಯ ನಡೆಯಬೇಕು. ಸ್ಥಳೀಯ ಹಾಗೂ ದೇಶಿಯ ಕಲೆಗೆ ಹೆಚ್ಚು ಆದ್ಯತೆ ನೀಡಬೇಕು. ಕಲಾಕ್ಷೇತ್ರದ ಹಿರಿಯ ಕಲಾವಿದರ ಪರಿಚಯ ಮಕ್ಕಳಿಗೆ ನೀಡುವಂತಾಗಬೇಕು. ಹೆಚ್ಚಿನ ಕಲಾ ಮಾಹಿತಿಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಬೇಕು.

ಲಲಿತಕಲಾ ವಿಶ್ವವಿದ್ಯಾಲಯದ ಅವಶ್ಯಕತೆ

ಕಲಾಕ್ಷೇತ್ರದಲ್ಲಿರುವ ನಾವುಗಳೆಲ್ಲ ಲಲಿತಕಲೆಯಲ್ಲಿರುವ ಮತ್ತು ಹೊರವಲಯಗಳ ಬಗ್ಗೆ ಬಹಳ ಕುಬ್ಜವಾಗಿ ಆಲೋಚನೆ ಮಾಡುತ್ತಿದ್ದೇವೆ. ಹೀಗಾಗಿ ಲಲಿತಕಲೆಯ ವ್ಯಾಪ್ತಿ ಎಂಥ ಅದ್ಭುತ ಎನ್ನುವುದು ನಮ್ಮ ಅರಿವಿಗೆ ಬಂದಿಲ್ಲ. ಆದ್ದರಿಂದ ಇಂದಿನವರೆಗೂ ನಾವು ಪ್ರೌಢಶಿಕ್ಷಣ ಹಂತದಲ್ಲಿರುವಂತೆ ಆಲೋಚನೆಗಳನ್ನು ಮಾಡಿಕೊಂಡು ಬಂದಿದ್ದೇವೆ. ನಮ್ಮ ಕಲಾಕ್ಷೇತ್ರದಲ್ಲಿ ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಎಂದು ಪರಿಗಣಿಸುವುದಾದರೆ ಲಲಿತಕಲಾ ವಿಶ್ವವಿದ್ಯಾಲಯ ವೊಂದರ ಅವಶ್ಯಕತೆ ಇದೆ. ನಿಜವಾದ ಕಲಾವಿದ ಕಲಾಕ್ಷೇತ್ರದಲ್ಲಿ ಬೆಳೆದಂತೆ ಅವನಲ್ಲಿ ಆಂತರಿಕವಾದ ಭಾವನೆಗಳು ಅಭಿವ್ಯಕ್ತಿಗೊಂಡು ಅನುಭೂತಿಗೊಳಿಸಿ ಇನ್ನೂ ಹೆಚ್ಚಿನ ಅಧ್ಯಯನ ಮಾಡಲು ವಿಶ್ವವಿದ್ಯಾಲಯ ಮಟ್ಟದಲ್ಲಿ ಬೆಳೆಯಬೇಕಾಗುತ್ತದೆ. ಹೀಗಾಗಿ ಅಧ್ಯಯನಶೀಲರಾಗಿ ಬೆಳೆಯಲು ಯೋಗ್ಯವಾದ ವಿಶ್ವವಿದ್ಯಾಲಯದ ಅವಶ್ಯಕತೆ ಇದೆ. ಇಲ್ಲದಿದ್ದರೆ ಅವನ ಅಧ್ಯಯನ ಮೊಟಕುಗೊಂಡು ಪಾಪಸ್‌ಕಳ್ಳಿಯ ಗಿಡದಂತೆ ಎಷ್ಟೇ ಬೆಳೆಯುವ ಸಾಮರ್ಥ್ಯ ಇದ್ದರೂ ಅದಕ್ಕೆ ಮೂಲಭೂತ ಘನತೆ ಗೌರವಗಳು ಸಿಗದಂತಾಗುತ್ತದೆ. ಹೀಗಾಗಿ ಕಲಾವಿದರ, ಕಲಾವಿದ್ಯಾರ್ಥಿಗಳ, ಅಧ್ಯಾಪಕರ ಬದುಕು ಮತ್ತು ಅವರಲ್ಲಿರುವಂತಹ ಸಾಮರ್ಥ್ಯ ಅರಿವಿಗೆ ಬಂದು ಅದ್ಭುತವಾಗಿ ಬೆಳೆಯಲು ಸಾಮರ್ಥ್ಯವುಳ್ಳ, ಒಳ್ಳೆ ವಿಶ್ವವಿದ್ಯಾಲಯಗಳ ಅವಶ್ಯಕತೆ ಇದೆ. ಇಂತಹ ಸಾಮರ್ಥ್ಯ ಬೆಳೆಸಲು ಯೋಗ್ಯವಾದ ಕಲಾವಿದರು ಕಾಯಾ ವಾಚಾ ಮನಸಾ ಬಹಳ ಶ್ರದ್ಧೆಯಿಂದ ಹಗಲಿರುಳು ದುಡಿಯುವ, ಕಲಾಕ್ಷೇತ್ರದ ಬಗ್ಗೆ ಆಲೋಚನೆ ಮಾಡುವ,

ನಿಷ್ಕಲ್ಮಶ ಮನಸ್ಸಿನವರ ಅಗತ್ಯವಿದೆ. ಆಂತರಿಕವಾಗಿ ರಸಗ್ರಹಿಕೆ ಬಗ್ಗೆ ಹಾಗೂ ಕಲೆಯ ತಾಂತ್ರಿಕತೆಯ ಬಗ್ಗೆ ಯಾವತ್ತು ಪ್ರಯೋಗಶೀಲರಾಗಿ ನಿರಂತರವಾಗಿ ಕೆಲಸ ಮಾಡುವ ಅಧ್ಯಯನ ನಿರತ ಮನೋಧರ್ಮವನ್ನು ಹೊಂದಿದವರಾಗಿರಬೇಕು. ಅಂದಾಗ ಲಲಿತಕಲಾ ಕ್ಷೇತ್ರದ ಬಗ್ಗೆ ಸಮಾಜದ ಜನಸಾಮಾನ್ಯರಲ್ಲಿಯೂ ಸಹ ಒಳ್ಳೆಯ ಅಭಿಪ್ರಾಯ ಮೂಡುತ್ತದೆ. ಅದರ ಮೂಲಕ ವಿಶ್ವವಿದ್ಯಾಲಯಗಳ ಬಗ್ಗೆ ಅವರಲ್ಲಿ ಗೌರವ ಹುಟ್ಟಲು ಸಾಧ್ಯವಾಗುತ್ತದೆ. ಲಲಿತಕಲಾ ವಿಭಾಗಗಳ ಬಗ್ಗೆ ಪ್ರೀತಿವಿಶ್ವಾಸಗಳು ತಾನೇ ತಾನಾಗಿ ಹೆಚ್ಚಾಗುತ್ತದೆ.

ಕರ್ನಾಟಕದಲ್ಲಿ ಚಿತ್ರಕಲೆಗೆ ಸಂಬಂಧಿಸಿದಂತೆ ಎಲ್ಲಾ ಕಲಾಶಾಲೆಗಳು ಬೆಳೆಯಬೇಕಾದರೆ ಲಲಿತಕಲಾ ವಿಶ್ವವಿದ್ಯಾಲಯ ಪ್ರಮುಖವಾದ ಪಾತ್ರವಹಿಸುತ್ತದೆ. ಕಲಾವಿದರಿಗೆ ಕಲಾ ವಿದ್ಯಾರ್ಥಿಗಳಿಗೆ ಒಟ್ಟಾರೆ ಕಲಾಕ್ಷೇತ್ರಕ್ಕೆ ಒಂದು ವೇದಿಕೆಯಾಗುತ್ತದೆ ಎಂದು ಹೇಳಬಹುದು. ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮದೇಯಾದ ವಿಶ್ವವಿದ್ಯಾಲಯದ ಪಠ್ಯಕ್ರಮದ ಜೊತೆಗೆ ಗುಣಮಟ್ಟ ಹೆಚ್ಚಿಸಲು ವಿಶ್ವವಿದ್ಯಾಲಯಗಳು ಶ್ರಮಿಸುತ್ತಿವೆ. ಆದರೆ ನಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಇಲ್ಲದಿರುವುದು ಅದರ ಕೊರತೆಯನ್ನು ಹೆಚ್ಚಿಸುತ್ತದೆ. ಕಾಲಾನುಸಾರ ಆದಿಮಾನವನಿಂದ ಜೀವನ, ಅವನ ಉಡುಗೆ-ತೊಡುಗೆ, ಆಚಾರ-ವಿಚಾರಗಳು, ಜೀವನ ಶೈಲಿ ಇವೆಲ್ಲ ಹೇಗೆ ವಿಕಾಸವಾದವು ಇತ್ಯಾದಿ ಅಂಶಗಳನ್ನು ಸುವ್ಯವಸ್ಥಿತವಾಗಿ ತಿಳಿಯಲು ಒಂದು ಜ್ಞಾನಶಾಖೆಯಾಗಿ ಬೆಳೆಯಲು ಪ್ರತ್ಯೇಕವಾದ ಲಲಿತಕಲಾ ವಿಶ್ವವಿದ್ಯಾಲಯ ಅವಶ್ಯಕವಾಗಿ ಬೇಕಾಗುತ್ತದೆ. ಅದರಲ್ಲಿ ನಮ್ಮ ಸಾಂಸ್ಕೃತಿಕವಾದ ಬದುಕಿನ ಬಿಂಬ ಅಡಗಿದೆ.

ನಾಡಿನಲ್ಲಿ ಸಂಸ್ಕೃತ, ಸಂಗೀತ, ಕಾನೂನು, ಪತ್ರಿಕೋದ್ಯಮ, ಧಾರ್ಮಿಕವಾಗಿ ವಿಶ್ವವಿದ್ಯಾಲಯ ಗಳು ಹುಟ್ಟುತ್ತಿವೆ. ಅಂದಮೇಲೆ ಎಲ್ಲದಕ್ಕೂ ಮಿಗಿಲಾಗಿ, ಎಲ್ಲದಕ್ಕೂ ಮೊದಲಾಗಿ ಆ ಎಲ್ಲಾ ಶಿಕ್ಷಣ ವಿಭಾಗದಲ್ಲಿ ಕೂಡ ಚಿತ್ರಗಳಿಲ್ಲದೆ, ಶಿಕ್ಷಣ ಪದ್ಧತಿಗಳು ನಡೆಯುವಂತಿಲ್ಲ. ಮೊಟ್ಟಮೊದಲು ಚಿತ್ರಗಳನ್ನು ಕಂಡು ಹಿಡಿದವನೇ ಆದಿಮಾನವ, ಅವನಿಂದಲೇ ಈ ಚಿತ್ರಗಳಿಗೆ ಒಂದು ರೂಪ, ಒಂದು ಸಂಸ್ಕೃತಿಯನ್ನು ಪಡೆದು ಹಲವಾರು ವಿಧಾನಗಳಲ್ಲಿ ರೂಪುಗೊಂಡಿದೆ. ಅದಕ್ಕಾಗಿ ಎಲ್ಲಾ ವಿಷಯಗಳಿಗೆ ಮೂಲಭಾಷೆ ಎಂದರೆ ಚಿತ್ರಕಲೆ. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಚಿತ್ರವಿಲ್ಲದೆ ಶಿಕ್ಷಣವಿಲ್ಲ. ಆದ್ದರಿಂದಾಗಿ ಕಡ್ಡಾಯವಾಗಿ ಈ ಕಲೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ವನ್ನು ಹುಟ್ಟು ಹಾಕಲೇಬೇಕಾಗುತ್ತದೆ. ಲಲಿತಕಲೆಗಳ ಒಳಸುಳಿಗಳನ್ನು ಆ ಕ್ಷೇತ್ರದವರೇ ಹೆಚ್ಚಾಗಿ ಬಲ್ಲವರಾಗಿದ್ದರಿಂದ ಲಲಿತಕಲೆಗಳಿಗೆ ಪ್ರತ್ಯೇಕವಾದ ವಿಶ್ವವಿದ್ಯಾಲಯದ ಅವಶ್ಯಕತೆ ಇದೆ ಎಂಬುದು ಎಲ್ಲರ ಕೂಗಾಗಿದೆ. ಆದರೆ ಅದನ್ನು ಕಟ್ಟುವ ಕೆಲಸಕ್ಕೆ ಯಾರೂ ಮುಂದೆ ಬರುತ್ತಿಲ್ಲವೆಂಬುದು ವಿಷಾದನೀಯ ಸಂಗತಿಯಾಗಿವೆ.

ಈ ಮೇಲಿನ ಎಲ್ಲಾ ಸಮಸ್ಯೆಗಳು ಕೂಲಂಕಷವಾಗಿ ಬಗೆಹರಿಯಬೇಕಾದರೆ ಲಲಿತಕಲಾ ವಿಶ್ವವಿದ್ಯಾಲಯ ಅವಶ್ಯಕತೆ ಇದೆ. ಈ ವಿಶ್ವವಿದ್ಯಾಲಯದ ಚುಕ್ಕಾಣಿ ಹಿಡಿಯುವವನು ಯೋಗ್ಯ

ವ್ಯಕ್ತಿ ಇರಬೇಕು. ಅವನಲ್ಲಿ ನಿಸ್ವಾರ್ಥ ಭಾವನೆ ಇರಬೇಕು. ಲಲಿತಕಲೆಗಳಿಗೆ ಪ್ರೋತ್ಸಾಹ ನೀಡಬೇಕು. ಪ್ರಾಯೋಗಿಕ ಮತ್ತು ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಪ್ರಾವೀಣ್ಯತೆಯನ್ನು ಹೊಂದಿರಬೇಕು. ಇದರಿಂದ ನಮ್ಮ ರಾಜ್ಯದಲ್ಲಿರುವ ಕಲಾಶಿಕ್ಷಣಕ್ಕೆ ಒಂದು ಸ್ಪಷ್ಟ ರೂಪ ಕೊಡಲು ಸಾಧ್ಯ ಏಕರೂಪದ ಪಠ್ಯಕ್ರಮ ಮತ್ತು ಪ್ರಮಾಣಪತ್ರಗಳು ಸಿಗುತ್ತದೆ. ಉದ್ಯೋಗಾವಕಾಶಕ್ಕೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಲೂ ಸಾಧ್ಯ, ಕಲಾಶಾಲೆಗಳ ಬೆಳವಣಿಗೆ, ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟ ಸುಧಾರಿಸಲು ಲಲಿತಕಲಾ ವಿಶ್ವವಿದ್ಯಾಲಯ ಪೂರಕವಾಗಿ ಕೆಲಸ ಮಾಡುತ್ತದೆ.

ಕರ್ನಾಟಕದ ಎಲ್ಲಾ ಭಾಗದಲ್ಲಿನ ಕಲಾವಿದರು, ಶಿಕ್ಷಕರು, ವಿದ್ಯಾರ್ಥಿಗಳು ಲಲಿತಕಲಾ ವಿಶ್ವವಿದ್ಯಾಲಯ ಅವಶ್ಯಕವಿದೆ ಎಂದು ಹೇಳುತ್ತಿದ್ದಾರೆ. ಇದರಲ್ಲಿ ಒಬ್ಬರಾದಂತಹ ವಿ.ಜಿ. ಅಂದಾನಿಯವರು ಲಲಿತಕಲಾ ವಿಶ್ವವಿದ್ಯಾಲಯದ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ಕಾರಣ ಈಗ ನಡೆಯುತ್ತಿರುವ ಹಾಗೂ ನಡೆಸುತ್ತಿರುವಂತಹ ವಿಶ್ವವಿದ್ಯಾಲಯಗಳಿಂದ ಕಲಾಶಾಲೆಗಳು ಮುನ್ನಡೆದುಕೊಂಡು ಹೋಗುತ್ತಿವೆ. ಇವೆಲ್ಲ ವ್ಯವಸ್ಥೆಗಳು ನಮಗೆ ಸಿಗುತ್ತಿರುವಾಗ ನಮಗೇಕೆ ಮತ್ತೊಂದು ವಿಶ್ವವಿದ್ಯಾಲಯ ಎಂದು ಹೇಳಿದರು.

ಕಲಾವಿದರಿಗೆ, ಕಲಾಶಾಲೆಗಳಿಗೆ, ಕಲಾ ವಿದ್ಯಾರ್ಥಿಗಳಿಗೆ ಒಟ್ಟಾರೆಯಾಗಿ ಕಲಾಕ್ಷೇತ್ರವು ಉತ್ತಮವಾಗಿ ಬೆಳೆಯಲು ತನ್ನದೇ ಆದಂತಹ ಲಲಿತಕಲಾ ವಿಶ್ವವಿದ್ಯಾಲಯದ ಅತ್ಯಾವಶ್ಯಕವಾಗಿದ್ದು, ಅತಿ ಬೇಗನೆ ಸ್ಥಾಪಿತವಾದರೆ ಕಲಾಕ್ಷೇತ್ರಕ್ಕೆ ಅನುಕೂಲವಾಗುತ್ತದೆ. ಆಡು ಮುಟ್ಟದ ಸೊಪ್ಪಿಲ್ಲ, ಚಿತ್ರವಿಲ್ಲದ ಶಿಕ್ಷಣವಿಲ್ಲ. ಆದ್ದರಿಂದ ಕಡ್ಡಾಯವಾಗಿ ದೃಶ್ಯಕಲೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ವೊಂದು ತಲೆಯೆತ್ತಬೇಕಿದೆ. ಈಗಾಗಲೇ ಸರಕಾರ ಅಧಿಕೃತವಾಗಿ ಬಾದಾಮಿಯಲ್ಲಿ ನಾಲ್ಕು ನೂರು ಎಕರೆ ಜಮೀನು ನೀಡಿದೆ, ಅದನ್ನು ಉಳಿಸಿ ಬೆಳೆಸಬೇಕಿದೆ.

ವಾರ್ತಾಪತ್ರಿಕೆ, ಗದಗ, ದಿನಾಂಕ ೧೯-೧೨-೨೦೧೮

"ಲಲಿತಕಲಾ ವಿಶ್ವವಿದ್ಯಾಲಯ ಬಾಗಲಕೋಟೆ ಜಿಲ್ಲೆಯಲ್ಲಿ ಸ್ಥಾಪಿಸುವ ಬಗ್ಗೆ ಸರಕಾರ ಮರುಚಿಂತನೆ ಆರಂಭಿಸಿದ್ದು ಖಂಡನೀಯ ಎಂಬ ಮಾತನ್ನು ವಿಧಾನ ಪರಿಷತ್ತು ಸದಸ್ಯ ಎಸ್.ವಿ. ಸುಂಕನೂರು ಹೇಳಿದ್ದಾರೆ. ರಾಜ್ಯದಲ್ಲಿ ಈಗಾಗಲೇ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆ ವಿಶ್ವವಿದ್ಯಾಲಯ ಸ್ಥಾಪಿತವಾಗಿರುವ ಹಿನ್ನೆಲೆಯಲ್ಲಿ ಲಲಿತಕಲೆಗಾಗಿ ಒಂದು ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸುವ ಅವಶ್ಯಕತೆ ಬಗ್ಗೆ ಸರಕಾರ ಮರುಪರಿಶೀಲನೆ ಮಾಡುತ್ತದೆ ಎಂದು ಸದನದಲ್ಲಿ ಉನ್ನತ ಶಿಕ್ಷಣ ಸಚಿವರಾದ ಜಿ.ಟಿ. ದೇವೇಗೌಡ ಅವರು ಲಿಖಿತ ಹೇಳಿಕೆ ನೀಡಿದ್ದನ್ನು ವಿಧಾನ ಪರಿಷತ್ತಿನ ಸದಸ್ಯ ಎಸ್.ವ್ಹಿ. ಸಂಕನೂರು ಅವರು ಖಂಡಿಸಿದ್ದಾರೆ.

ರಾಜ್ಯದಲ್ಲಿ ಸುಮಾರು ೭೬ ಚಿತ್ರಕಲಾ ಮಹಾವಿದ್ಯಾಲಯಗಳಿದ್ದು ಇವುಗಳ ನಿರ್ವಹಣೆ ಮತ್ತು ಲಲಿತಕಲೆಗಳ ಅಭಿವೃದ್ಧಿಗಾಗಿ ಗಣ್ಯರ, ವಿದ್ವಾಂಸರ ಮತ್ತು ಲಲಿತಕಲಾ ತಜ್ಞರ ಜೊತೆಗೆ

ಸಮಾಲೋಚನೆ ಮಾಡಿ ೨೦೧೩-೧೪ನೇ ಸಾಲಿನಲ್ಲಿ ಲಲಿತಕಲಾ ವಿಶ್ವವಿದ್ಯಾಲಯ ಸ್ಥಾಪನೆ ಕುರಿತು ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ನಿರ್ಣಯ ಕೈಗೊಳ್ಳಲಾಗಿದೆ. ಅದರಂತೆ ಜಗದೀಶ್ ಶೆಟ್ಟರ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಿ, ಬಾಗಲಕೋಟೆ ಜಿಲ್ಲೆಯ ಬಾದಾಮಿ ಸಮೀಪದ ಖ್ಯಾಡ ಗ್ರಾಮದಲ್ಲಿ ಸುಮಾರು ೪೩೦ ಎಕರೆ ಜಮೀನನ್ನು ಗುರುತಿಸಲಾಗಿದೆ. ಈಗ ಇನ್ನೊಬ್ಬರು ವಿಶೇಷಾಧಿಕಾರಿಯನ್ನಾಗಿ ನೇಮಿಸಲಾಗಿದೆ. ೨೦೧೩ರಿಂದ ೨೦೧೮ರವರೆಗೆ ಒಟ್ಟು ೧ ಕೋಟಿ ೧೯ ಲಕ್ಷಗಳನ್ನು ಈಗಾಗಲೇ ಇದಕ್ಕೆ ಖರ್ಚು ಮಾಡಲಾಗಿದೆ.

ಹೀಗಾಗಿ ಇಷ್ಟೆಲ್ಲಾ ಪೂರ್ವಭಾವಿ ಕೆಲಸಗಳು ಆಗಿರುವುದರಿಂದ ಲಲಿತಕಲಾ ವಿಶ್ವವಿದ್ಯಾಲಯವನ್ನು ಬಾಗಲಕೋಟೆ ಜಿಲ್ಲೆಯಲ್ಲಿ ಸ್ಥಾಪನೆ ಮಾಡಿ ಉತ್ತರ ಕರ್ನಾಟಕಕ್ಕೆ ನ್ಯಾಯ ಒದಗಿಸಿಕೊಡಬೇಕೆಂದು ವಿಧಾನ ಪರಿಷತ್ ಸದಸ್ಯ ಎಸ್.ವಿ. ಸುಂಕನೂರು ಅವರು ಹೇಳಿಕೆ ನೀಡಿರುವರು."[೨೩]

ಕರ್ನಾಟಕ ಸರ್ಕಾರ

ಕ್ರಮಾಂಕ: ಇಡಿ ೧೮ ಕೆವಿವಿ ೨೦೦೬ ದಿನಾಂಕ ೧೭-೧೧-೨೦೦೬

"**ವಿಷಯ:-** ರಾಜ್ಯದಲ್ಲಿರುವ ಚಿತ್ರಕಲಾ ಮಹಾವಿದ್ಯಾಲಯಗಳನ್ನು ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿಯೇ ಮುಂದುವರೆಸುವ ಕುರಿತು

ಉಲ್ಲೇಖ:- ತಮ್ಮ ಫ್ಯಾಕ್ಸ್ ಪತ್ರ ದಿನಾಂಕ ೨೧-೦೯-೨೦೦೬

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಉಲ್ಲೇಖಿತ ತಮ್ಮ ಫ್ಯಾಕ್ಸ್ ಪತ್ರ ದಿನಾಂಕ ೨೧-೦೯-೨೦೦೬ಕ್ಕೆ ಚಿತ್ರಕಲಾ ಶಾಲೆಗಳಿಗೆ ಸಂಬಂಧಿಸಿದ ನಿಯಮಾವಳಿ ೨೦೦೬ನ್ನು ಅನುಬಂಧಿಸಲಾಗಿತ್ತು. ತಾವು ಅನುಬಂಧಿಸಿದ ಈ ಕೆಳಕಂಡ ನಿಯಮಾವಳಿಯ ೧ ರಿಂದ ೧೧ನ್ನು ಒಪ್ಪಲಾಗಿದೆ.

೧. ಈಗಿರುವ ಐದು ವರ್ಷಗಳ ಡಿಪ್ಲೊಮಾ ಶಿಕ್ಷಣವನ್ನು ೨೦೦೬-೦೭ಕ್ಕೆ ಮಾತ್ರ ನಡೆಸುತ್ತದೆ. ೨೦೦೭-೦೮ನೇ ಸಾಲಿನಿಂದ ಚಿತ್ರಕಲಾ ಶಾಲೆಗಳು ಬಿವಿಎ ಪದವಿ ಶಿಕ್ಷಣವನ್ನು ಆರಂಭಿಸಬೇಕು. ಇದು ಹಂತ ಹಂತವಾಗಿ ಮುಂದುವರೆಯುತ್ತದೆ. ಇದಕ್ಕೆ ಸಂಬಂಧಿಸಿದ ಪಠ್ಯಕ್ರಮ, ಪಠ್ಯಗಳು ಪರೀಕ್ಷಾ ವಿಧಾನ ಮುಂತಾದವುಗಳಿಗೆ ವಿಶ್ವವಿದ್ಯಾಲಯವು ಕ್ರಮ ತೆಗೆದುಕೊಳ್ಳುತ್ತದೆ.

೨. ಚಿತ್ರಕಲಾ ಶಾಲೆಗಳ ಕಟ್ಟಡ, ತರಗತಿ ಕೋಣೆಗಳು, ಅಧ್ಯಾಪಕರು, ಗ್ರಂಥಾಲಯ, ಸ್ಟುಡಿಯೋ, ಪೀಠೋಪಕರಣ ಮುಂತಾದ ಸಂಗತಿಗಳ ಬಗ್ಗೆ ವಿಶ್ವವಿದ್ಯಾಲಯವು ಪರಿಶೀಲಿಸುವ ಅಧಿಕಾರ ಹೊಂದಿರುತ್ತದೆ. ನಿಯಮಾನುಸಾರ ಇವುಗಳನ್ನು ಶಾಲೆಗಳು ವ್ಯವಸ್ಥೆ ಮಾಡಿಕೊಳ್ಳಬೇಕು.

೩. ಪ್ರತಿ ತರಗತಿಗೆ ಕನಿಷ್ಠ ೧೦ ವಿದ್ಯಾರ್ಥಿಗಳಿರಬೇಕು, ಅದಕ್ಕಿಂತ ಕಡಿಮೆ ಪ್ರವೇಶವಿದ್ದರೆ ಅದಕ್ಕೆ ವಿಶ್ವವಿದ್ಯಾಲಯವು ನೋಂದಣಿ ನೀಡುವುದಿಲ್ಲ.

೪. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಾಗೂ ಪ್ರವರ್ಗ ೧ಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಶಾಸನಬದ್ಧ ಅನುಕೂಲಗಳನ್ನು ಕಡ್ಡಾಯವಾಗಿ ನೀಡಬೇಕು.

೫. ಕನ್ನಡ ವಿಶ್ವವಿದ್ಯಾಲಯವು ಸಂಬಂಧಿಸಿದ ತರಗತಿಗಳಿಗೆ ಪ್ರಕಟಿಸುವ ಪಠ್ಯ ಹಾಗೂ ಇತರೆ ಕೃತಿಗಳನ್ನು ಪ್ರತಿಯೊಂದು ಶಾಲೆಯೂ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಖರೀದಿಸಬೇಕು.

೬. ೨೦೦೯-೧೦ರೊಳಗೆ ಚಿತ್ರಕಲಾ ಶಾಲೆಯ ಅಧ್ಯಾಪಕರೆಲ್ಲರೂ ಎಂ.ವಿ.ಎ. ಪದವಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು.

೭. ಕರ್ನಾಟಕ ಚಿತ್ರಕಲಾ ಶಾಲೆಗಳ ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ಸರ್ಕಾರವು ವಾರ್ಷಿಕ ರೂ. ೨೦ ಲಕ್ಷ ಅನುದಾನ ವಿಶ್ವವಿದ್ಯಾಲಯಕ್ಕೆ ನೀಡಬೇಕು.

೮. ವಿಶ್ವವಿದ್ಯಾಲಯವು ನಿರ್ಧರಿಸುವ ವೇಳಾಪಟ್ಟಿಯಂತೆ ಚಿತ್ರಕಲಾ ಶಾಲೆಗಳು ಕೆಲಸ ನಿರ್ವಹಿಸಬೇಕು; ಇದರಲ್ಲಿ ವ್ಯತ್ಯಯವಾದರೆ ಚಿತ್ರಕಲಾ ಶಾಲೆಗಳು ಜವಾಬ್ದಾರಿಯಾಗುತ್ತವೆ.

೯. ಚಿತ್ರಕಲಾ ಶಾಲೆಗಳ ಕಾರ್ಯನಿರ್ವಹಣೆಗಾಗಿ ಒಂದು ಆಡಳಿತ ಸಮಿತಿಯನ್ನು ರಚಿಸಲಾಗುವುದು. ಇದರಲ್ಲಿ ಚಿತ್ರಕಲಾ ಶಾಲೆಗಳ ಅಧ್ಯಾಪಕರು, ಕಲಾ ವಿದ್ವಾಂಸರು ಹಾಗೂ ವಿಶ್ವವಿದ್ಯಾಲಯದ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಇದನ್ನು ಮಾನ್ಯ ಕುಲಪತಿ ಅವರು ರಚಿಸುತ್ತಾರೆ. ಇದರಲ್ಲಿ ಕನಿಷ್ಠ ೬ ಸದಸ್ಯರಿರುತ್ತಾರೆ.

೧೦. ಚಿತ್ರಕಲಾ ಶಾಲೆಗಳಿಗೆ ಮನ್ನಣೆ ನೀಡುವ, ಹೊಸ ಅಧ್ಯಯನಗಳನ್ನು ಆರಂಭಿಸಲು ಅನುಮತಿ ನೀಡುವ, ಮುನ್ನಣೆ ನವೀಕರಿಸುವ ಎಲ್ಲಾ ಅಧಿಕಾರಿಗಳನ್ನು ವಿಶ್ವವಿದ್ಯಾಲಯವು ಪಡೆದಿರುತ್ತದೆ. ಇದರಲ್ಲಿ ಯಾವುದೇ ರೀತಿ ಮಧ್ಯ ಪ್ರವೇಶವನ್ನು ವಿಶ್ವವಿದ್ಯಾಲಯವು ಮಾನ್ಯ ಮಾಡಿರುವುದಿಲ್ಲ.

೧೧. ಈಗಿರುವ ಶುಲ್ಕಗಳನ್ನು ಮೂರು ವರ್ಷಗಳ ಹಿಂದೆ ನಿಗದಿಪಡಿಸಲಾಗಿತ್ತು. ಅದನ್ನು ೨೦೦೬-೦೭ರಲ್ಲಿ ಪರಿಷ್ಕರಿಸಲಾಗುವುದು. ಇದನ್ನು ಮುಂದೆ ತಿಳಿಸಲಾಗುವುದು ವಿಶ್ವವಿದ್ಯಾಲಯವು ನಿಗದಿಪಡಿಸುವ ಶುಲ್ಕಗಳನ್ನು ಚಿತ್ರಕಲಾ ಶಾಲೆಗಳು ಒಪ್ಪಿಕೊಳ್ಳಬೇಕು.

೧೨ನೇ ಅಂಶ ಚಿತ್ರಕಲಾ ಶಾಲೆಗಳಿಗೆ ಸಂಬಂಧಿಸಿದಂತೆ, "ಅಂತಿಮ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಮಾನ್ಯ ಕುಲಪತಿಯವರಿಗೆ ಹಾಗೂ ಕಾರ್ಯಕಾರಿ ಮಂಡಳಿಗಿರುತ್ತದೆ" ಎಂಬ ಅಂಶಕ್ಕೆ ಬದಲಾಗಿ "ಅಂತಿಮ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಸರ್ಕಾರ ಹೊಂದಿರುತ್ತದೆ" ಎಂದು ಮಾರ್ಪಾಡಿಸಿ/ತಿದ್ದುಪಡಿ ಮಾಡಿರುತ್ತದೆ ಎಂದು ತಿಳಿಸಲು ಹಾಗೂ

ಉಳಿದಂತಹ ಇತರೆ ನಿಯಮಗಳನ್ನು ಒಪ್ಪಲಾಗಿದೆ ಎಂದು ತಿಳಿಸಲು ನಾನು ನಿರ್ದೇಶಿತ ನಾಗಿದ್ದೇನೆ."[೨೪]

*****

೧. ಅನುಬಂಧಿತ ನಿಯಮ:- ಐದು ವರ್ಷಗಳ ಡಿಪ್ಲೊಮಾ ಶಿಕ್ಷಣವು ೨೦೦೬-೦೭ಕ್ಕೆ ಮಾತ್ರ ನಡೆಸುತ್ತದೆ. ೨೦೦೭-೦೮ನೇ ಸಾಲಿನಿಂದ ಚಿತ್ರಕಲಾ ಶಾಲೆಗಳ ಬಿವಿಎ ಪದವಿ ಶಿಕ್ಷಣವನ್ನು ಅವಲಂಬಿಸಬೇಕು ಎಂದು ಹೇಳಿದ್ದೀರಿ. ಆದರೂ ಕರ್ನಾಟಕ ಇನ್ನೂ ಕೆಲವು ಚಿತ್ರಕಲಾಶಾಲೆಗಳಲ್ಲಿ ಡಿಪ್ಲೊಮಾ ಶಿಕ್ಷಣವನ್ನು ಪ್ರಸ್ತುತ ಸಂದರ್ಭದಲ್ಲೂ ನೀಡುತ್ತಿರುವುದನ್ನು ಕಾಣುತ್ತೇವೆ. ಈ ಕಲಾಶಾಲೆಯವರು ಸರ್ಕಾರದ ಆದೇಶವನ್ನು ಪಾಲಿಸುವುದಿಲ್ಲವೆ?

೨. ಮೂಲಭೂತ ಸೌಕರ್ಯಗಳ ವಿಚಾರದಲ್ಲಿ ವಿಶ್ವವಿದ್ಯಾಲಯವು ಪರಿಶೀಲಿಸುವ ಅಧಿಕಾರ ಹೊಂದಿರುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಅನೇಕ ಶಾಲೆಗಳಲ್ಲಿ ಮೂಲಭೂತ ಸಮಸ್ಯೆಗಳು ಎದ್ದು ಕಾಣುತ್ತಿದ್ದು, ವಿಶ್ವವಿದ್ಯಾಲಯದ ಅಧಿಕಾರಿಗಳು ಕಲಾಶಾಲೆಯ ತಪಾಸಣೆಗೆ ಹೋದಾಗ ಇವುಗಳ ಬಗ್ಗೆ ಸರಿಯಾಗಿ ಪರಿಶೀಲಿಸುವುದಿಲ್ಲ, ಕಣ್ಣು ಹಾಯಿಸಲಾಗಿಲ್ಲ ಎಂದು ನಾನು ಕ್ಷೇತ್ರಕಾರ್ಯಕ್ಕೆ ಹೋದಾಗ ತಿಳಿದುಬಂದಿದೆ.

೩. ಪ್ರತಿ ತರಗತಿಗೆ ಕನಿಷ್ಠ ೧೦ ವಿದ್ಯಾರ್ಥಿಗಳಿರಬೇಕು. ಅದಕ್ಕಿಂತ ಕಡಿಮೆ ಪ್ರವೇಶವಿದ್ದರೆ ಅದಕ್ಕೆ ವಿಶ್ವವಿದ್ಯಾಲಯ ನೋಂದಣಿ ನೀಡಿಲ್ಲವೆಂದು ನಿಯಮಾವಳಿಯಲ್ಲಿ ಹೇಳಿದೆ. ಆದರೆ ಪ್ರಸುತ್ತ ಸಂದರ್ಭದಲ್ಲಿ ಅನೇಕ ಕಲಾಶಾಲೆಯ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹತ್ತಕ್ಕಿಂತ ಕಡಿಮೆ ಇರುವುದು ಕ್ಷೇತ್ರಕಾರ್ಯಕ್ಕೆ ಹೋದಾಗ ಕಂಡುಬಂದ ಸಂಗತಿ.

೪. ೨೦೦೯-೧೦ರೊಳಗೆ ಚಿತ್ರಕಲಾ ಶಾಲೆಯ ಅಧ್ಯಾಪಕರೆಲ್ಲರೂ ಎಂ.ವಿ.ಎ. ಪದವಿ ಕಡ್ಡಾಯವಾಗಿ ಪಡೆದುಕೊಳ್ಳಬೇಕು ಎಂದು ಅನುಬಂಧಿಸಿದ ನಿಯಮದಲ್ಲಿ ಹೇಳಿರುತ್ತಾರೆ. ಆದರೆ ಇನ್ನೂ ಕೆಲವೊಂದು ಕಲಾಶಾಲೆಗಳಲ್ಲಿ ಬೋಧನೆ ಮಾಡುತ್ತಿರುವಂತಹ ಅಧ್ಯಾಪಕರು ಎ.ಎಂ. ಜಿ.ಡಿ. ಕೋರ್ಸ್‌ನ್ನು ಮುಗಿಸಿಕೊಂಡು ಪಾಠ ಬೋಧನೆ ಮಾಡುತ್ತಿದ್ದಾರೆ.

ಕರ್ನಾಟಕ ಸರ್ಕಾರದ ನಡವಳಿಗಳು

ಸಂಖ್ಯೆ: ತಾಂಶಿನಿ /೦೧/ಚಿ.ಕ.ಫ ದಿನಾಂಕ ೧೫-೦೩-೨೦೧೨

"ವಿಷಯ:- ರಾಜ್ಯದಲ್ಲಿನ ಚಿತ್ರಕಲಾ ಮಹಾವಿದ್ಯಾಲಯಗಳನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರಿಂದ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಇವರಿಗೆ ವರ್ಗಾಯಿಸುವ ಬಗ್ಗೆ.

ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ: ಇಡಿ ೨೨೫ ಯುಎನ್ಇ ೨೦೧೧, ದಿನಾಂಕ ೨೪-೧೨-೨೦೧೧

***

ಮೇಲೆ ಓದಲಾಗಿರುವ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿನ ಚಿತ್ರಕಲಾ ಮಹಾವಿದ್ಯಾಲಯಗಳ ಶೈಕ್ಷಣಿಕ ಮತ್ತು ಪರೀಕ್ಷಾ ಕಾರ್ಯಗಳನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರಿಂದ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಇವರಿಗೆ ವರ್ಗಾಯಿಸಲಾಗಿತ್ತು. ಆದರೆ, ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು ಇತ್ತೀಚೆಗೆ ಮೈಸೂರಿನಲ್ಲಿ ಪ್ರಾರಂಭವಾಗಿದ್ದು, ಸದರಿ ವಿಷಯದಲ್ಲಿ ಮೂಲಭೂತ ಸೌಲಭ್ಯಗಳು ಇನ್ನೂ ಪೂರ್ಣಗೊಳ್ಳ ಬೇಕಾಗಿರುವುದರಿಂದ, ಈ ವಿಶ್ವವಿದ್ಯಾಲಯಕ್ಕೆ ಚಿತ್ರಕಲಾ ಮಹಾವಿದ್ಯಾಲಯಗಳ ಶೈಕ್ಷಣಿಕ ಮತ್ತು ಪರೀಕ್ಷಾ ಕಾರ್ಯಗಳನ್ನು ತಕ್ಷಣವೇ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ ಮತ್ತು ಕನ್ನಡ ವಿಶ್ವವಿದ್ಯಾಲಯ, ಹಂಪಿಯು ಕಳೆದ ಒಂದು ದಶಕದಿಂದ ಚಿತ್ರಕಲಾ ವಿಷಯದಲ್ಲಿನ ಶೈಕ್ಷಣಿಕ ಮತ್ತು ಪರೀಕ್ಷಾ ಕಾರ್ಯಗಳಲ್ಲಿ ಈಗಾಗಲೇ ಪರಿಣತಿ ಹೊಂದಿ, ಅಗತ್ಯ ಸಿಬ್ಬಂದಿಯೊಂದಿಗೆ ಈ ವಿಷಯದಲ್ಲಿ ಪ್ರತ್ಯೇಕವಾದ ಲಲಿತಕಲಾ ವಿಭಾಗವನ್ನು ಹೊಂದಿರುವುದರಿಂದ ಹಾಗೂ ಪರೀಕ್ಷೆಗಳನ್ನು ನಡೆಸಲು ಈಗಾಗಲೇ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಪಡೆದಿರುವುದ ರಿಂದ, ಉಲ್ಲೇಖಿತ ಆದೇಶವನ್ನು ತಾತ್ಕಾಲಿಕವಾಗಿ ತಡೆಹಿಡಿದು, ಚಿತ್ರಕಲಾ ವಿಷಯಗಳ ಶೈಕ್ಷಣಿಕ ಮತ್ತು ಪರೀಕ್ಷೆ ಕಾರ್ಯಗಳನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಮತ್ತೇ ವಹಿಸುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರಿ ಆದೇಶ ಸಂ. ಇಡಿ ೧೦೪ ಯುಎನ್‌ಇ ೨೦೧೨, ಬೆಂಗಳೂರು,</u>

<u>ದಿನಾಂಕ: ೦೮-೦೩-೨೦೧೨</u>

ರಾಜ್ಯದಲ್ಲಿನ ಚಿತ್ರಕಲಾ ಮಹಾವಿದ್ಯಾಲಯಗಳ ಶೈಕ್ಷಣಿಕ ಮತ್ತು ಪರೀಕ್ಷಾ ಕಾರ್ಯಗಳನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರಿಂದ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಇವರಿಗೆ ವರ್ಗಾಯಿಸಲಾಗಿದ್ದ ಸರ್ಕಾರಿ ಆದೇಶ ಸಂಖ್ಯೆ : ಇಡಿ ೨೨೫ ಯುಎನ್‌ಇ ೨೦೧೧, ದಿನಾಂಕ: ೨೪-೧೨-೨೦೧೧ ಅನ್ನು ತಡೆಹಿಡಿದು ಈ ಹಿಂದೆ ಇದ್ದ ವ್ಯವಸ್ಥೆಯನ್ನೇ ಈ ಮೂಲಕ ಮುಂದುವರಿಸಿ ಆದೇಶಿಸಲಾಗಿದೆ."[೨೫]

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ,

ನೃಪತುಂಗ ರಸ್ತೆ, ಬೆಂಗಳೂರು-೧

ಸಂಖ್ಯೆ: ಚಿತ್ರಕಲೆ ೧ ರಾ ಚಿ ಕ ಶಾ ಕವಿವಿ ೨೦/೨೦೦೨-೦೩ ದಿನಾಂಕ ೦೬-೧೧-೨೦೦೪

"**ವಿಷಯ:-** ರಾಜ್ಯದಲ್ಲಿನ ಚಿತ್ರಕಲಾ ಮಹಾವಿದ್ಯಾಲಯಗಳನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ವ್ಯಾಪ್ತಿಗೆ ಒಳಪಡಿಸಿರುವ ಆಡಳಿತಾತ್ಮಕ ಸಮಸ್ಯೆಗಳ ಬಗ್ಗೆ.

ಉಲ್ಲೇಖ:- ೧. ಕಾರ್ಯದರ್ಶಿ, ಕರ್ನಾಟಕ ಚಿತ್ರಕಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟ (ನೋಂ) ಬೆಂಗಳೂರು ರವರ ಪತ್ರದ ಸಂಖ್ಯೆ: ೫೧/೨೦೦೪-೦೫, ದಿನಾಂಕ: ೨೯-೧೦-೨೦೦೪

೨. ಗಿರಿನಗರ, ಚೇತನ ವಿದ್ಯಾಸಂಸ್ಥೆ(ರಿ)ಯ ಕಾರ್ಯದರ್ಶಿಗಳ ವಕೀಲರ ನೋಟೀಸ್ ದಿನಾಂಕ: ೨೬-೧೦-೨೦೦೪

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ಇಡಿ ೦೮ ಕ ವಿ ವಿ ೨೦೦೩ ದಿನಾಂಕ: ೧೬-೧೦-೨೦೦೩ರಲ್ಲಿ ರಾಜ್ಯದಲ್ಲಿನ ಚಿತ್ರಕಲಾ ಮಹಾವಿದ್ಯಾಲಯಗಳ ಪಠ್ಯಕ್ರಮವನ್ನು ನಿಗದಿಗೊಳಿಸಿ ಸರ್ಕಾರ ಅನುಮೋದನೆ ಪಡೆದು ಪರೀಕ್ಷೆಗಳನ್ನು ನಡೆಸಿ ಪ್ರಮಾಣ ಪತ್ರವನ್ನು ನೀಡುವುದಕ್ಕೆ ಮಾತ್ರ ಸೀಮಿತಗೊಳಿಸಿ ಸದರಿ ಸಂಸ್ಥೆಗಳ ಹೊಣೆಯನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ ಅವರಿಗೆ ನೀಡಲಾಗಿದ್ದು, ಅದರಂತೆ ಪರೀಕ್ಷೆಗಳನ್ನು ೨೦೦೩-೦೪ರಲ್ಲಿ ನಡೆಸಲಾಗಿದೆ.

ಆದರೆ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರುಗಳು ಅನೇಕ ಸುತ್ತೋಲೆಗಳನ್ನು ಚಿತ್ರಕಲಾ ಶಾಲೆಗೆ ಕಳುಹಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಇರುವ ಆಡಳಿತಾತ್ಮಕ ಅಧಿಕಾರಗಳನ್ನು ಚಲಾಯಿಸಿ ತಾವುಗಳೇ ವಿದ್ಯಾರ್ಥಿಗಳ ಪ್ರವೇಶ ಅರ್ಹತೆ ನಿಗದಿಗೊಳಿಸುವುದು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ನಿಗದಿಪಡಿಸಲಾಗಿರದ ಅನೇಕ ರೀತಿಯ ಶುಲ್ಕಗಳನ್ನು ವಿಧಿಸಿ ಚಿತ್ರಕಲಾ ಶಾಲೆಗಳ ಆಡಳಿತಾತ್ಮಕ ಸಮಸ್ಯೆಗಳನ್ನು ಒಡ್ಡಿರುತ್ತಾರೆ ಎಂದು ಚಿತ್ರಕಲಾ ಶಾಲೆಗಳ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ವಕೀಲರಿಂದ ಶಿಕ್ಷಣ ಇಲಾಖೆಗೆ ನೋಟಿಸ್‌ಗಳನ್ನು ನೀಡಿರುತ್ತಾರೆ. ಆದುದರಿಂದ ಈ ಸಮಸ್ಯೆ ಜಟಿಲಗೊಂಡು ನ್ಯಾಯಾಲಯದ ಮೆಟ್ಟಿಲು ಏರುವ ಪ್ರಸಂಗ ಒದಗಿರುತ್ತದೆ. ಈ ಮೇಲಿನ ಸಮಸ್ಯೆಗಳ ಬಗ್ಗೆ ಕುಲಪತಿಗಳ ಕೋರಿಕೆಯಂತೆ ಕನ್ನಡ ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಒಳಗೊಂಡಂತೆ ದಿನಾಂಕ: ೧೧-೦೮-೨೦೦೪ ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಮುಖ್ಯ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಸದರಿ ಸಮಸ್ಯೆ ಬಗ್ಗೆ ಸಕಾರ್ರದ ಹಂತದಲ್ಲಿ ಸಭೆ ನಡೆಸಿ ಕೂಲಂಕಷವಾಗಿ ಚರ್ಚಿಸಿ ತೀರ್ಮಾನಿಸ ಬೇಕಾಗಿದೆ. ಸರ್ಕಾರ ಸಭೆ ನಡೆಸಿ ತೀರ್ಮಾನ ತೆಗೆದುಕೊಂಡು ಆದೇಶ ಹೊರಡಿಸಿದ ನಂತರವೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು. ಆಯುಕ್ತರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಸಭೆಯನ್ನು ಏರ್ಪಡಿಸಲು ಕೋರಿರುತ್ತಾರೆ. ಸದರಿ ಸಭೆಯು ಅತಿ ಶೀಘ್ರದಲ್ಲಿ ನಡೆಸಿ ಅಂತಿಮ ನಿರ್ಣಯ ತೆಗೆದುಕೊಳ್ಳಲಾಗುವುದು. ಅಲ್ಲಿಯವರೆಗೂ ಕನ್ನಡ ವಿಶ್ವವಿದ್ಯಾಲಯದ ಅಧಿಕಾರಿಗಳು ಹಾಗೂ ರಾಜ್ಯದಲ್ಲಿನ ಎಲ್ಲಾ ಚಿತ್ರಕಲಾ ಶಾಲೆಯ ಪ್ರಾಂಶುಪಾಲರುಗಳು ಮತ್ತು ಚಿತ್ರಕಲಾ ಶಿಕ್ಷಣ ಸಂಸ್ಥೆಗಳವರು ಚಿತ್ರಕಲಾ ಶಾಲೆಗಳ ಹಾಗೂ

ವಿದ್ಯಾರ್ಥಿಗಳ ಶೈಕ್ಷಣಿಕ, ಆರ್ಥಿಕ, ಮಾನಸಿಕ ಹಿತದೃಷ್ಟಿಯಿಂದ ಸರ್ಕಾರ ಅಂತಿಮ ಆದೇಶ ನೀಡುವವರೆಗೂ ೨೦೦೩-೦೪ನೇ ಸಾಲಿನಂತೆ ಯಥಾಸ್ಥಿತಿಯನ್ನು ಕಾಯ್ದುಕೊಂಡು ಬರಲು ಕೋರಿದೆ."[೨೨]

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,

ನೃಪತುಂಗ ರಸ್ತೆ, ಬೆಂಗಳೂರು-೧

ಸಂಖ್ಯೆ: ಚಿತ್ರಕಲೆ-೧_ಕಿ.ಮೂ.ವಿ-ಭಾ-೨೪:೦೨-೦೩ ದಿನಾಂಕ ೧೪-೦೧-೨೦೦೩

"**ವಿಷಯ:-** ಕಿವುಡ ಮತ್ತು ಮೂಗ ವಿದ್ಯಾರ್ಥಿಗಳಿಗೆ ಭಾಷಾ ವಿಷಯದಲ್ಲಿ ವಿನಾಯತಿಯನ್ನು ನೀಡುವ ಬಗ್ಗೆ

ಉಲ್ಲೇಖ:- ೧. ಪ್ರಾಚಾರ್ಯರು ಕೆನ್ ಕಲಾ ಶಾಲೆಯ ಪತ್ರ ಸಂಖ್ಯೆ: ೨೯೮, ೦೨-೦೩, ದಿನಾಂಕ: ೩೦-೧೧-೨೦೦೨

೨. ಸರ್ಕಾರಿ ಆದೇಶ ಸಂಖ್ಯೆ: ಇಡಿ ೬೪-ಎಸ್.ಎಕ್ಸ್ ಎಂ. ೭೬, ದಿನಾಂಕ: ೨೬-೧೦-೨೦೦೪

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಚಿತ್ರಕಲಾ ಶಾಲೆಗಳಲ್ಲಿ ಕಿವುಡ ಮತ್ತು ಮೂಗ ವಿದ್ಯಾರ್ಥಿಗಳಿಗೆ ಭಾಷಾ ವಿಷಯದ ವಿನಾಯಿತಿಯನ್ನು ನೂತನ ಪಠ್ಯಾವಳಿಯಲ್ಲಿ ಸ್ಪಷ್ಟಪಡಿಸಿರುವುದಿಲ್ಲ ಎಂದು ಮನವಿಗಳನ್ನು ಸಲ್ಲಿಸುತ್ತಿದ್ದು, ಸದರಿ ಮನವಿಗಳನ್ನು ಪರಿಶೀಲಿಸಿ ಉಲ್ಲೇಖ-೨ರ ಸರ್ಕಾರದ ಆದೇಶದಂತೆ ಕಿವುಡ ಮತ್ತು ಮೂಗ ವಿದ್ಯಾರ್ಥಿಗಳಿಗೆ ದ್ವಿತೀಯ ಮತ್ತು ತೃತೀಯ ಭಾಷೆಗಳಿಗೆ ವಿನಾಯಿತಿಯನ್ನು ನೀಡಬಹುದು ಎಂದು ತಿಳಿಸಿರುತ್ತಾರೆ. ಆದರೆ ಚಿತ್ರಕಲಾ ಶಾಲೆಗಳ ನೂತನ ಪಠ್ಯಾವಳಿಯಲ್ಲಿ ಮೂರು ಭಾಷಾ ವಿಷಯಗಳನ್ನು ನೀಡಿ ಅವುಗಳಲ್ಲಿ ಕನ್ನಡ ಮತ್ತು ಇಂಗ್ಲೀಷ್ ಅಥವಾ ಹಿಂದಿಯನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿರುತ್ತದೆ. ಆದರೆ ಕಿವುಡ ಮತ್ತು ಮೂಗ ವಿದ್ಯಾರ್ಥಿಗಳಿಗೆ ಯಾವುದಾದರೂ ಒಂದು ಭಾಷೆಯನ್ನು ಮಾತ್ರ ತೆಗೆದುಕೊಂಡು ಉಳಿದ ಒಂದು ಭಾಷೆಗೆ ವಿನಾಯಿತಿಯನ್ನು ನೀಡಬಹುದು."[೨೩]

ದೂರಶಿಕ್ಷಣದ ಅಡಿಯಲ್ಲಿ ನಡೆಯುತ್ತಿರುವ ಕಲಾಶಿಕ್ಷಣ

"ಒಂದು ಸಾಂಪ್ರದಾಯಿಕ ಶಿಕ್ಷಣದ ಕ್ರಮಕ್ಕಿಂತ ಭಿನ್ನವಾದಂತಹ ಧ್ಯೇಯೋದ್ದೇಶಗಳಿಂದ ಕೂಡಿ ರೂಪಿತವಾಗಿರುವ ವಿಶಿಷ್ಟ ಅಧ್ಯಯನದ ಶಿಕ್ಷಣ ಪದ್ಧತಿಯೇ ದೂರಶಿಕ್ಷಣ."[೨೪] ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯಲ್ಲಿ ಒಬ್ಬ ವಿದ್ಯಾರ್ಥಿಯಾದವನು ನಿರ್ದಿಷ್ಟ ಸ್ಥಳ, ಕಾಲ, ವಯಸ್ಸು ಈ ಒಂದು ಚೌಕಟ್ಟಿನೊಳಗೆ ತನ್ನ ವಿದ್ಯಾಭ್ಯಾಸವನ್ನು ಮುಗಿಸಬೇಕೆನ್ನುವುದು ಅನಿವಾರ್ಯ. ಒಬ್ಬ ವ್ಯಕ್ತಿ ತನ್ನ ವಿದ್ಯಾಭ್ಯಾಸವನ್ನು ಇಪ್ಪತ್ತೈದು ವರ್ಷಗಳೊಳಗೆ ತನಗೆ ಅಗತ್ಯವೆನ್ನುವ ಶಿಕ್ಷಣವನ್ನು

ಪಡೆಯಬೇಕಾಗುತ್ತದೆ. ದೂರಶಿಕ್ಷಣದ ಅಡಿಯಲ್ಲಿ ಇಂತಹದ್ದು ಯಾವುದೇ ಅಡ್ಡಿ ಬರುವುದಿಲ್ಲ. ತಾವು ದೂರಶಿಕ್ಷಣದ ಅಡಿಯಲ್ಲಿ ಕಲಿಯಲು ಇಚ್ಛಿಸುವವರಿಗೆ ಒಂದು ನಿರ್ದಿಷ್ಟ ವಯಸ್ಸಿನ ಮಿತಿ ಇಲ್ಲ. ಅವರು ಇರುವ ಸ್ಥಳದಿಂದ ತಾನು ಬಯಸಿದಂತಹ ಉನ್ನತ ಶಿಕ್ಷಣವನ್ನು ಮುಕ್ತವಾಗಿ ಪಡೆದುಕೊಳ್ಳಬಹುದು ಎಂಬುದು ಈ ಪದ್ಧತಿಯನ್ನು ಬೆಂಬಲಿಸುವವರ ವಾದ.

ಆದರೆ ದೂರಶಿಕ್ಷಣದ ಪದ್ಧತಿಯಲ್ಲಿ ಸಾಂಪ್ರದಾಯಿಕ ಪದ್ಧತಿಯಂತೆ ಹೊಸ ರೀತಿಯ ಕಲಿಕೆ ಮತ್ತು ವಿಷಯಗಳನ್ನು ಕ್ರಮಬದ್ಧ ಕಲಿಯುವುದಕ್ಕೆ ಅವಕಾಶಗಳೇ ಸಿಗುವುದಿಲ್ಲ. ಇಲ್ಲಿ ಕಲಿಯುವಂತಹ ವಿದ್ಯಾರ್ಥಿ ಸಮಾಜದ ಬೇರೆ ಬೇರೆ ಸ್ತರಗಳ ಸಂಬಂಧವನ್ನು ಹೊಂದಿರುವ ನಾದ್ದರಿಂದ ಅವನು ಒಂದು ಶೈಕ್ಷಣಿಕ ಶಿಸ್ತಿನ ಅಧ್ಯಯನ ಕ್ರಮದಿಂದ ದೂರ ಉಳಿಯುತ್ತಾನೆ. ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯಲ್ಲಿ ಅನೇಕ ಪರಾಮರ್ಶನ ಗ್ರಂಥಗಳ ಅಧ್ಯಯನ, ವಿಚಾರಗೋಷ್ಠಿ, ಗುಂಪು ಚರ್ಚೆ, ವ್ಯಾಪಕವೂ, ಆಳವೂ ಆದ ಒಂದು ಪರಂಪರೆಯ ವಿದ್ವತ್ತಿನ ಪರಿಚಯ ಆಗುತ್ತದೆ. ಆದರೆ ದೂರಶಿಕ್ಷಣಾರ್ಥಿಗಳಿಗೆ ಇವೆಲ್ಲ ಇರುವುದಿಲ್ಲವೆಂದು ಅನೇಕರ ಆಕ್ಷೇಪಾರ್ಹ ಮಾತುಗಳು ಶಿಕ್ಷಣದಲ್ಲಿ ಕೇಳಿಬಂದಿರುವುದುಂಟು"[೨೫]

ಚಿತ್ರಕಲೆಯು ದೂರಶಿಕ್ಷಣದಿಂದ ರೆಗ್ಯುಲರ್ ವಿದ್ಯಾರ್ಥಿಗಳಿಗೆ ಹೊಡೆತ

ದೂರಶಿಕ್ಷಣದ ಮೂಲಕ ಚಿತ್ರಕಲೆಯನ್ನು ಕಲಿಸುತ್ತಿರುವಂತಹ ಮಕ್ಕಳು ಸತತವಾಗಿ ಕಲಾಕೃತಿಗಳ ರಚನೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಯಾಕೆಂದರೆ ದೂರಶಿಕ್ಷಣದಲ್ಲಿ ಸೀಮಿತ ಅವಧಿ ಮತ್ತು ಬೇರೊಂದು ಕಡೆಗಳಲ್ಲಿ ಉದ್ಯೋಗ ಮಾಡುತ್ತಿರುವುದರಿಂದ ಅವರಿಗೆ ಸಮಯದ ಅಭಾವ ಹೆಚ್ಚಾಗಿರುತ್ತದೆ. ಅದರಿಂದ ಮನೆಯಲ್ಲೂ ಕಲಿಯಲು ಸಾಧ್ಯವಿಲ್ಲ. ಇನ್ನೂ ಹದಿನೈದು ದಿನಗಳಿಂದ ಇಪ್ಪತ್ತು ದಿನಗಳವರೆಗೆ ತರಗತಿಗಳನ್ನು ನಡೆಸಿದರೆ ಅವರು ಕಲಿಯುವುದಾದರೂ ಹೇಗೆ? ಇಂತಹ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದು ಅವರ ಫಲಿತಾಂಶ ಪ್ರಥಮ ಸ್ಥಾನ, ದ್ವಿತೀಯ ಸ್ಥಾನವೆಂದು ಬರುತ್ತದೆ. ಆದರೆ ವರ್ಷವಿಡಿ ಕಾಲೇಜಿಗೆ ಹೋಗುವಂತಹ ಮಕ್ಕಳಿಗೆ ಶೇ. ೭೫, ಶೇ. ೮೦ರ ತನಕ ಶೇಕಡವಾರು ನೀಡುತ್ತಾರೆ. ಹೀಗಿರುವಾಗ ದೂರಶಿಕ್ಷಣದಲ್ಲಿ ಕಲಿಯುವಂತಹ ವಿದ್ಯಾರ್ಥಿಗಳಿಗೂ ವರ್ಷವಿಡೀ ಕಲಿಯುವಂತಹ ವಿದ್ಯಾರ್ಥಿಗಳಿಗೂ ಶೇಕಡ ವಾರುವಿನಲ್ಲಿ ಸ್ವಲ್ಪ ಅಂತರವಿರುವುದರಿಂದ ವಿದ್ಯಾರ್ಥಿಗಳು ವರ್ಷವಿಡೀ ಕಲಿತರೂ ಶೇಕಡವಾರು ಕಡಿಮೆ ಇರುವುದರಿಂದ ದೂರಶಿಕ್ಷಣದ ಮೂಲಕ ಪದವಿಗಳನ್ನು ಪಡೆಯುವುದನ್ನು ನಾವು ನೋಡಬಹುದು. ಸಾಮಾನ್ಯವಾಗಿ ಈ ಪ್ರಕ್ರಿಯೆಯಿಂದ ರೆಗ್ಯುಲರ್ ವಿದ್ಯಾರ್ಥಿಗಳಿಗೆ ಶೇಕಡ ವಾರುವಿನಲ್ಲಿ ಸಮಸ್ಯೆಯಾಗಿರುವುದನ್ನು ಕಾಣುತ್ತೇವೆ.

ಚಿತ್ರಕಲಾ ಶಾಲೆಗಳಿಗೆ ಪೆಟ್ಟು

ದೂರಶಿಕ್ಷಣದ ಮೂಲಕ ಕಲಾ ಶಿಕ್ಷಣವನ್ನು ನೀಡುತ್ತಿರುವುದರಿಂದ ವಿದ್ಯಾರ್ಥಿಗಳು ಅದರಲ್ಲಿ ಪ್ರವೇಶ ಪಡೆದು ಬೇರೆ ಬೇರೆ ಕಡೆಗಳಲ್ಲಿ ಕೆಲಸಕ್ಕೆ ಹೋಗಿ ವರ್ಷದ ಕೊನೆಯಲ್ಲಿ

ಪರೀಕ್ಷೆ ಬರೆದು ಪ್ರಮಾಣ ಪತ್ರವನ್ನು ತೆಗೆದುಕೊಂಡು ಹೋಗುತ್ತಾರೆ. ಆದರೆ ರೆಗ್ಯುಲರ್ ವಿದ್ಯಾರ್ಥಿಗಳು ವರ್ಷಪೂರ್ತಿ ಶಾಲೆಯಲ್ಲಿ ಕಲಿತು ಜ್ಞಾನವನ್ನು ಸಂಪಾದಿಸಿ ಪ್ರಮಾಣ ಪತ್ರ ಮತ್ತು ಅಂಕಪಟ್ಟಿಯನ್ನು ಪಡೆದುಕೊಂಡು ಹೋಗುತ್ತಿರುವುದನ್ನು ಕಾಣುತ್ತೇವೆ. ಈ ನಿಟ್ಟಿನಲ್ಲಿ ಯೋಚಿಸಿದರೆ ಅತಿ ಕಡಿಮೆ ಕಲಿಕೆಗಳ ಹಾಗೂ ಕಡಿಮೆ ಸಮಯದಲ್ಲಿ ಒಂದು ಪದವಿಯನ್ನು ಸರಳವಾಗಿ ಪಡೆದುಕೊಳ್ಳುತ್ತಿರುವುದು ನಮಗೆ ಗೊತ್ತಿರುವಂತಹ ವಿಷಯವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣವನ್ನು ನೀಡಿದರೆ ರೆಗ್ಯೂಲರ್ ವಿದ್ಯಾರ್ಥಿಗಳೆಲ್ಲ ದೂರಶಿಕ್ಷಣದಲ್ಲಿ ಕಲಿಯಲು ಮುಗಿ ಬೀಳುತ್ತಾರೆ. ಈ ಕ್ರಮದಿಂದ ಚಿತ್ರಕಲಾ ಶಾಲೆಗಳಿಗೆ ವಿದ್ಯಾರ್ಥಿಗಳು ಬಾರದೆ ಅವು ಮುಚ್ಚುವ ಸ್ಥಿತಿಗೆ ಬರುತ್ತವೆ.

ಚಿತ್ರಕಲಾ ಶಾಲೆಗಳ ಗುಣಮಟ್ಟ ಕಡಿಮೆಯಾಗುತ್ತಿರುವುದು

ಚಿತ್ರಕಲಾ ಶಾಲೆಗಳ ವಿದ್ಯಾರ್ಥಿಗಳಲ್ಲಿ ಬೋಧನೆಯನ್ನು ಚೆನ್ನಾಗಿ ಒದಗಿಸಿ, ಮೂಲಭೂತ ಸೌಕರ್ಯಗಳನ್ನು ಕೆಲವು ಕಲಾಶಾಲೆಯ ವಿದ್ಯಾರ್ಥಿಗಳಿಗೆ ನೀಡುತ್ತಿದ್ದಾರೆ. ದೂರಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣವನ್ನು ನೀಡುತ್ತಿರುವುದರಿಂದ ಚಿತ್ರಕಲಾ ಶಾಲೆಗಳ ಗುಣಮಟ್ಟ ಕಡಿಮೆ ಯಾಗುತ್ತಿರುವುದನ್ನು ದೃಶ್ಯಕಲಾ ಶಿಕ್ಷಣದಲ್ಲಿ ಕಾಣಬಹುದು.

ದೂರಶಿಕ್ಷಣದ ಅಡಿಯಲ್ಲಿ ಚಿತ್ರಕಲಾ ಶಿಕ್ಷಣ ನಡೆಯುವುದು ತಪ್ಪು; ಯಾಕೆಂದರೆ ಅದು ಅಂಚೆ ಶಿಕ್ಷಣದಲ್ಲಿ ಓದಿ ಈಜು ಕಲಿತು ಸರ್ಟಿಫಿಕೇಟ್ ಪಡೆದುಕೊಂಡಂತೆ ಇದು ಪ್ರಾಯೋಗಿಕ ವಿಷಯವಾಗಿರುವುದರಿಂದ(ಕೌಶಲ್ಯ ಅಭಿವೃದ್ಧಿ) ಪಠ್ಯಕ್ರಮದ ಅಡಿಯಲ್ಲಿ ಗುರು ಪರಂಪರೆಯಲ್ಲಿ ಕಲಿಯಬೇಕಾದ ಶಿಕ್ಷಣ ಇದಾಗಿರುವುದರಿಂದ ದೂರಶಿಕ್ಷಣದಿಂದ ಕಲಿಯುವುದು ತಪ್ಪಾಗುತ್ತದೆ. ಒಬ್ಬ ಪರಿಪೂರ್ಣ ಕಲಾವಿದನಾಗಬೇಕಾದರೆ ಕನಿಷ್ಠ ಐದು ವರ್ಷದ ರೆಗ್ಯುಲರ್ ಶಿಕ್ಷಣ ಅತ್ಯಗತ್ಯವಾಗಿ ಬೇಕಾಗುತ್ತದೆ. ಇದನ್ನು ಕಲಾಗುರುಗಳ ಮಾರ್ಗದರ್ಶನದಲ್ಲಿ ಕಲಾಶಾಲೆಯಿಂದ ಕಲಿತಾಗ ಮಾತ್ರ ಆ ಕಲಾವಂತಿಕೆ ವಿದ್ಯಾರ್ಥಿಗಳಲ್ಲಿ ಮೈಗೂಡುತ್ತದೆ. ಹಾಗಾಗಿ ದೂರಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣವೆಂಬುದು ಅಪ್ರಸ್ತುತವಾದುದು ಎಂದು ಹೇಳಬಹುದು. ಉದ್ಯೋಗದಲ್ಲಿ ಇದ್ದು ಹೆಚ್ಚಿನ ಶೈಕ್ಷಣಿಕ ಅರ್ಹತೆಗಾಗಿ ಕೇವಲ ಸರ್ಟಿಫಿಕೇಟ್ ಪಡೆಯುವ ಸಲುವಾಗಿ ಮಾತ್ರ ದೂರಶಿಕ್ಷಣ ಸೀಮಿತವಾಗಿದೆ. ಇದರಿಂದ ಯಾವ ಪ್ರಯೋಜನವಿಲ್ಲ.

ದೂರಶಿಕ್ಷಣದ ಅಡಿಯಲ್ಲಿ ನಡೆಯುವ ಚಿತ್ರಕಲಾ ಶಿಕ್ಷಣದ ಬಗ್ಗೆ ಹಿರಿಯ ಕಲಾವಿದರು, ವಿದ್ವಾಂಸರುಗಳ ಅಭಿಪ್ರಾಯಗಳು.

ವಿ.ಜ್ಞಿ. ಅಂದಾನಿ: ಕಲಾವಿದ / ನಿವೃತ್ತ ಪ್ರಾಚಾರ್ಯರು / ನಿರ್ದೇಶಕರು, ಕಲಬುರ್ಗಿ

"ವಿದ್ಯಾರ್ಥಿಗಳಿಗೆ ದಾರಿ ತಪ್ಪಿಸುವ ದೂರಶಿಕ್ಷಣ - ಪ್ರಾಯೋಗಿಕ ಮತ್ತು ಕ್ರಿಯಾಶೀಲ ಶಿಕ್ಷಣಕ್ಕೆ ಮಾರಕವಾಗಿರುತ್ತದೆ. ದೂರಶಿಕ್ಷಣದ ಫಲಿತಾಂಶ ಬರಿ ಸರ್ಟಿಫಿಕೇಟ್‌ಗೆ ಸೀಮಿತವಾಗಿರುತ್ತದೆ. ವಿದ್ಯಾರ್ಥಿಗಳ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರುತ್ತದೆ. ಕಾರಣ ದೃಶ್ಯಕಲೆಗೆ ದೂರಶಿಕ್ಷಣ ಪದ್ಧತಿ ನಿರುಪಯುಕ್ತವಾಗಿದೆ.

ಎ.ಎಂ. ಪ್ರಕಾಶ್ ಕಲಾಮಂದಿರ ಕಲಾಶಾಲೆ, ಬೆಂಗಳೂರು

ದೂರಶಿಕ್ಷಣ ಹಾಗೂ ಚಿತ್ರಕಲಾ ಶಿಕ್ಷಣ ಎರಡು ವಿರುದ್ಧ ದಿಕ್ಕುಗಳು ಪ್ರಾಯೋಗಿಕ ವಿಷಯಗಳು ಬಹಳ ಇರುವುದರಿಂದ ದೂರಶಿಕ್ಷಣದ ಮೂಲಕ ಶಿಕ್ಷಣ ಎನ್ನುವುದು ಅಪರಾಧ. ಈಗ ಇದೊಂದು ದಂಧೆಯಾಗಿದೆ. ನಿಜವಾಗಲೂ ದೂರಶಿಕ್ಷಣ ಕೆಲವು ಕೋರ್ಸ್‌ಗಳಿಗೆ ಮಾತ್ರ ಸೂಕ್ತ. ಪ್ರಾಯೋಗಿಕವಾಗಿರುವ ಚಿತ್ರಕಲಾ ಶಿಕ್ಷಣಕ್ಕೆ ಅಲ್ಲ. ಇದರಿಂದ ಕಲಾ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಕಡಿಮೆಯಾಗುತ್ತದೆ. ಇಂತಹ ಶಿಕ್ಷಣಗಳಿಂದ ಹಲವಾರು ಡೋಂಗಿ ಕಲಾವಿದರು ಹೊರಬಂದು ಕಲಾಶಾಲೆಗಳಿಗೆ ಕೆಟ್ಟ ಹೆಸರು ಬರುತ್ತದೆ ಮತ್ತು ಇಂಥಲ್ಲಿ ಕಲಿತವರು ಸಮಾಜಕ್ಕೆ ಮಾರಕವಾಗುತ್ತಾರೆ.

ಆರ್.ಎಲ್. ಜಾಧವ, ಭವಾನಿ ಲಲಿತಕಲಾ ಮಹಾವಿದ್ಯಾಲಯ, ಬಳ್ಳಾರಿ

ಚಿತ್ರಕಲಾ ಶಿಕ್ಷಣದಲ್ಲಿ ಪ್ರಾಯೋಗಿಕ ವಿಷಯ ಬಹಳವಾಗಿ ಅಧ್ಯಯನ ಮಾಡುವುದು ಸಾಧ್ಯವಿಲ್ಲದಿರುವುದರಿಂದ ದೂರಶಿಕ್ಷಣ ಸರಿಯಲ್ಲ ಎನಿಸುತ್ತದೆ. ಆದರೆ ಹಾಲಿ ಚಿತ್ರಕಲಾ ಶಿಕ್ಷಕರಿಗೆ ಎಂ.ಎಫ್.ಎ.ವರೆಗೆ ಹೆಚ್ಚಿನ ವಿದ್ಯಾಭ್ಯಾಸ ಮಾಡಿಕೊಳ್ಳಲು ಸಮಸ್ಯೆಯಿರುವುದಿಲ್ಲ. ಒಂದು ರೀತಿಯಲ್ಲಿ ನೋಡಿದರೆ ಬಿವಿಡಿ ಕೂಡ ದೂರಶಿಕ್ಷಣದಲ್ಲಿ ಪಡೆಯುವವರಿದ್ದಾರೆ. ಇದರಿಂದ ದೃಶ್ಯಕಲಾ ಶಿಕ್ಷಕರ ತರಬೇತಿ ಶಿಕ್ಷಣದ ವ್ಯವಸ್ಥೆಯನ್ನೇ ಹಾಳು ಮಾಡಿದಂತಾಗಿದೆ.

ಉಡುಪಿರಾವ್ ಕುಲಕರ್ಣಿ, ನಿವೃತ್ತ ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರು, ಗದಗ

ಪ್ರತ್ಯಕ್ಷ ಶಿಕ್ಷಣವೇ ಚಿತ್ರಕಲೆಗೆ ಉತ್ತಮ ಮಾಧ್ಯಮಗಳಾಗಿವೆ. ಚಿತ್ರಕಲೆಗೆ ಯಾವ ಗುರು ಬೇಕಿಲ್ಲವೆಂಬ ಹಳೆಯ ಮಾತಿದೆ. ಆದರೆ ಕಲೆಗೆ ತನ್ನದೇಯಾದ ಸಿದ್ಧಾಂತ, ತಂತ್ರಗಾರಿಕೆ ಇದೆ. ಇವೆಲ್ಲವನ್ನು ನಾವು ದೂರಶಿಕ್ಷಣದಿಂದ ಸಮರ್ಪಕವಾಗಿ ಪಡೆಯಲು ಸಾಧ್ಯವೇ ಇಲ್ಲ. ಗುರುಮುಖೇನ(ಉಪನಿಷತ್) ಕಲಿಯುವುದೇ ಯೋಗ್ಯ ವಿಧಾನ, ಚಿತ್ರಕಲೆ ಪ್ರಾಯೋಗಿಕವಾಗಿ ಕಲಿಯುವಂತಹ ಒಂದು ವಿಶಿಷ್ಟ ಗಂಧರ್ವ ವಿದ್ಯೆಯಾಗಿದೆ. ಒಂದು ಯೋಗ್ಯ ಕಲಾಶಾಲೆ ಉತ್ತಮವಾದ ಕಲಾ ಪರಿಸರವನ್ನು ಹೊಂದಿದ್ದು ಕಲಾವಿದನಲ್ಲಿ ಕಲಿಕೆಯ ಹಸಿವೆಂಬುವುದು ಮನದುಂಬಿ ತಣಿಸುತ್ತದೆ. ಇಂತಹ ಸೌಭಾಗ್ಯವು ದೂರಶಿಕ್ಷಣ ವಿದ್ಯಾರ್ಥಿಗಳಿಗೆ ಹೇಗೆ ಲಭ್ಯ? ಚಿತ್ರಕಲೆಯೂ ಒಂದು ವಿಜ್ಞಾನವಾಗಿ ಈಗ ಹೊರಹೊಮ್ಮಿದೆ. ಮೊದಲನೆಯ ಸಾಂಪ್ರದಾಯಿಕ ಕಲೆಯೊಂದನ್ನು ಈಗ ಕಲಾಶಾಲೆಗಳಲ್ಲಿ ಬೋಧಿಸುತ್ತಿಲ್ಲ. ಆದುದರಿಂದ ಪ್ರತ್ಯಕ್ಷ ಶಿಕ್ಷಣವೇ ಚಿತ್ರಕಲೆಗೆ ಅರ್ಥಪೂರ್ಣವಾದ ಮಾಧ್ಯಮವಾಗಿದೆ.

ಬಸವರಾಜ ಎಲ್. ಜಾನೆ., ಹಿರಿಯ ಕಲಾವಿದರು, ನಿವೃತ್ತ ಉಪನ್ಯಾಸಕರು, ಕಲಬುರ್ಗಿ

ಚಿತ್ರಕಲಾ ಕ್ಷೇತ್ರ ಮಾನವೀಯತೆಯ ಮೌಲ್ಯಗಳಿಂದ ಕೂಡಿರುವಂತಹದ್ದು. ಅಲ್ಲದೆ ಕಾಯಾ ವಾಚಾ ಮನಸ್ಸಾ, ಶ್ರದ್ಧೆಯಿಂದ, ಏಕಾಗ್ರತೆಯಿಂದ ಒಂದೆಡೆ ಕೂತು ಮೌನವಾಗಿ ಕಲಿಯುವಾಗ ಗುರು-ಶಿಷ್ಯರ ನಡುವಿನ ಅವಿನಾಭಾವ ಸಂಬಂಧವಿದೆ. ಏಕಾಗ್ರತೆಯಿಂದ ರಚನೆ ಮಾಡುವ

ಸಂಭ್ರಮಿಸುವ ಕಲಾಕ್ಷೇತ್ರವಾಗಿದೆ. ಇದನ್ನು ದೂರಶಿಕ್ಷಣದ ಅಡಿಯಲ್ಲಿ ಕಲಿಸುವ ಕ್ರಮ ಹಣಗಳಿಕೆಗೆ ಸಂಬಂಧಪಟ್ಟಿರುವಂಥದ್ದಾಗಿದೆ ಹಾಗೂ ಏನೂ ಕಲಿಯದೆ ಹಣದಿಂದ ಶಿಕ್ಷಣ, ಸರ್ಟಿಫಿಕೇಟ್ ಪಡೆಯುವ ವಿಕೃತ ಮನಸ್ಸಿದ್ದವರಿಗೆ ಮಾತ್ರ ನಡೆಯುವ ಚಿತ್ರಕಲಾ ಶಿಕ್ಷಣವು ದೂರಶಿಕ್ಷಣದಿಂದ ಬೋಧಿಸಬೇಕಾಗಿದೆ. ಈ ಬಗೆಯಲ್ಲಿ ಚಿತ್ರಕಲಾ ಶಿಕ್ಷಣ ನೀಡುವ ಕ್ರಮ ವಿದ್ಯಾರ್ಥಿಗಳಿಗೆ ಹಾಳು ಮಾಡಿ ಅಡ್ಡದಾರಿ ಹಿಡಿಸುವ ಮತ್ತು ತಪ್ಪು ದಾರಿ ಕಡೆಗೆ ಕೊಂಡೊಯ್ದು ದೃಶ್ಯಕಲಾ ಶಿಕ್ಷಣದ ಮೌಲ್ಯಕ್ಕೆ ಧಕ್ಕೆ ತರುವಂತಹ ಕೆಲಸ ಮಾಡಿದಂತಾಗುತ್ತದೆ.

ಒಟ್ಟಾರೆಯಾಗಿ ಹೇಳಬೇಕಾದರೆ ದೂರಶಿಕ್ಷಣ ಭಾಷಾ ವಿಷಯಕ್ಕೆ ಪೂರಕವಾದಂತಹದ್ದು. ಚಿತ್ರಕಲಾ ಶಿಕ್ಷಣದಲ್ಲಿ ಪ್ರಾಯೋಗಿಕ ವಿಷಯಗಳು ಹೆಚ್ಚಾಗಿರುವುದರಿಂದ ದೂರಶಿಕ್ಷಣದಲ್ಲಿ ನಡೆಸುವುದು ಸರಿಯಲ್ಲ. ಕೆಲವು ಹಿರಿಯರು ದೂರಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣವನ್ನು ಕಲಿಯಲು ಬರುವವರು. ಹವ್ಯಾಸಿ ಕಲಾವಿದರು ಮತ್ತು ಉದ್ಯೋಗದಲ್ಲಿರುವವರು ಎಂದು ಹೇಳುತ್ತಾರೆ. ಜನರು ಕೆಲವೊಂದು ದೂರಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣವನ್ನು ಹೀಗೆ ನೀಡುತ್ತಿದ್ದಾರೆ? ಎಂದು ಕೇಳುತ್ತಾರೆ. ಇನ್ನೊಂದೆಡೆ ಪದವಿ ಸರ್ಟಿಫೀಕೆಟ್‌ಗಾಗಿ ಹಲವಾರು ವಿದ್ಯಾರ್ಥಿಗಳು ದೂರಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣವನ್ನು ಪಡೆಯುತ್ತಿರುವುದನ್ನು ಕಾಣುತ್ತೇವೆ. ಇದು ಚಿತ್ರಕಲೆಯ ನಿಜವಾದ ಶಿಕ್ಷಣ ಪಡೆಯುವಂತಹ ಇಚ್ಛೆಯುಳ್ಳವರಿಗೆ ಯಾವ ಪ್ರಯೋಜನವೂ ಇಲ್ಲ. ಹಾಗಾಗಿ ಈ ರೀತಿಯಾಗಿ ಶಿಕ್ಷಣ ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಮಾರಕ ಎಂದು ಹೇಳಬಹುದು.

ಮೂಲಭೂತ ಸಮಸ್ಯೆಗಳು

ಅಂತರ್ಜಾಲದ ಕೊರತೆ

ಪ್ರಸ್ತುತ ಸಂದರ್ಭದಲ್ಲಿ ಪ್ರಪಂಚದ ಮೂಲೆ ಮೂಲೆಗಳಲ್ಲಿ ಕಲೆಯ ಕುರಿತು ಅನೇಕ ಕಾರ್ಯಕ್ರಮಗಳು ನಡೆಯುವುದನ್ನು ನೋಡುತ್ತೇವೆ. ಕಲಾ ವಿದ್ಯಾರ್ಥಿಗಳು ಕಲೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿದುಕೊಂಡರೆ ಉತ್ತಮ. ಅದೇ ಯಾವುದೋ ಒಂದು ಸ್ಥಳದಲ್ಲಿ ಹೆಸರಾಂತ ಕಲಾವಿದರ ಕಲಾಕೃತಿಗಳ ಪ್ರದರ್ಶನಗಳು ನಡೆಯುತ್ತಿರುತ್ತವೆ. ಅನೇಕ ಕಲಾವಿದರಿಗೆ ಅದನ್ನು ನೋಡುವ ಆಸೆ ಇದ್ದರೂ ಸಹಿತ ಆರ್ಥಿಕ ಪರಿಸ್ಥಿತಿಯಿಂದ ಅಥವಾ ಸಮಯದ ಕೊರತೆಯಿಂದ, ಇನ್ನಾವುದೇ ಕಾರಣದಿಂದ ಹೋಗುವುದಕ್ಕಾಗುವುದಿಲ್ಲ. ಈ ನಿಟ್ಟಿನಲ್ಲಿ ಅಂತರ್ಜಾಲದ ಮುಖಾಂತರ ಅವರು ಆ ಕಲಾ ಪ್ರದರ್ಶನವನ್ನು ನೋಡಬಹುದು. ಅದರಂತೆ ಚಿತ್ರಕಲಾ ಶಿಕ್ಷಣದ ಬಗ್ಗೆ ಯಾವುದೇ ಹೊಸ ಪುಸ್ತಕ ಹಾಗೂ ಲೇಖನಗಳು ಬಂದರೆ ಅವುಗಳನ್ನು ಸಹಿತ ನಾವು ಅಂತರ್ಜಾಲದಿಂದ ತಿಳಿದುಕೊಳ್ಳಬಹುದು. ಇಂತಹ ಕಾರಣಗಳಿಂದಾಗಿ ಕಲಾಶಾಲೆಗಳಲ್ಲಿ ಅಂತರ್ಜಾಲದ ವ್ಯವಸ್ಥೆ ಇರಬೇಕಾಗುತ್ತದೆ. ಕೆಲವೊಂದು ಶಾಲೆಗಳಲ್ಲಿ ಅಂತರ್ಜಾಲವು ಇದ್ದರೂ ಸಹಿತ ವಿದ್ಯಾರ್ಥಿಗಳಿಗೆ ಸಿಗದಂತೆ ಕೇವಲ ಉಪನ್ಯಾಸಕರು, ಪ್ರಾಚಾರ್ಯರುಗಳು ಬಳಕೆ ಮಾಡಿಕೊಳ್ಳುತ್ತಿರುವುದನ್ನು ಕಾಣಬಹುದು. ಇನ್ನೂ ಕೆಲವು ಶಾಲೆಗಳಲ್ಲಿ

ಕಂಪ್ಯೂಟರ್‌ಗಳಿದ್ದರೂ ಅವುಗಳಿಗೆ ಅಂತರ್ಜಾಲದ ವ್ಯವಸ್ಥೆ ಅಳವಡಿಸಿಕೊಂಡಿರುವುದಿಲ್ಲ. ಹೀಗೆ ಅನೇಕ ಕಾರಣಗಳಿಂದಾಗಿ ನಮ್ಮ ಚಿತ್ರಕಲಾ ಅಭ್ಯಾಸ ಮಾಡಲು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದನ್ನು ಕಾಣುತ್ತೇವೆ.

ಸಂವಹನದ ಕೊರತೆ

ಕರ್ನಾಟಕದಲ್ಲಿರುವ ಕೆಲವೊಂದು ಕಲಾಶಾಲೆಯ ವಿದ್ಯಾರ್ಥಿಗಳನ್ನು ಬಿಟ್ಟರೆ ಇನ್ನೂ ಅನೇಕ ಕಲಾ ಶಾಲೆಗಳ ವಿದ್ಯಾರ್ಥಿಗಳನ್ನು ಸಂವಹನದ ಕೊರತೆಯು ಕಾಡುತ್ತಿರುವುದನ್ನು ನೋಡುತ್ತೇವೆ. ಯಾವುದೇ ವಿದ್ಯಾರ್ಥಿಯು ಒಂದು ವಿಷಯದ ಬಗ್ಗೆ ಚರ್ಚಿಸುವಂತಹ ಭಾವನೆಯನ್ನು ಬೆಳೆಸಿಕೊಳ್ಳಬೇಕು. ಇದರಿಂದ ಹಿರಿಯರು, ಕಿರಿಯ ಕಲಾವಿದರು, ಕಲಾ ವಿಮರ್ಶಕರೊಂದಿಗೆ ವಿಷಯ ಕುರಿತು ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಚರ್ಚಿಸಬಹುದು. ಇದರಿಂದಾಗಿ ಒಬ್ಬರಿಂದ ಒಬ್ಬರು ಪರಿಚಯವಾಗಿ ನಮ್ಮ ಕಲಾ ಕ್ಷೇತ್ರದಲ್ಲಿ ಚಿತ್ರಕಲೆಯ ವಿಷಯದ ಬಗ್ಗೆ ಅಧಿಕೃತವಾಗಿ ಮಾತನಾಡಬಹುದು. ಈ ರೀತಿಯಲ್ಲಿ ಹಲವರು ಪರಿಚಯರಾದರೆ ಅವರಿಂದ ಮತ್ತೊಬ್ಬರು ಪರಿಚಯವಾಗಿ ಒಟ್ಟಾರೆಯ ಸಮಾಜದೊಂದಿಗೆ ಸಂವಹನವು ಬೆಳೆಯುತ್ತದೆ. ಆದರೆ ಕಲಾ ವಿದ್ಯಾರ್ಥಿಗಳು ಬಣ್ಣ, ಕ್ಯಾನ್ವಾಸ್ ಜೊತೆ ಜೊತೆಯಲ್ಲಿದ್ದರೆ ಅದಕ್ಕೆ ಮಾತ್ರ ಸೀಮಿತವಾಗಿದ್ದು ತನ್ನ ಕಲಾಕೃತಿ ರಚನೆಯಲ್ಲಿ ತೊಡಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಕ್ಯಾನ್ವಾಸ್‌ನ ಜೊತೆಗೆ ಹಿರಿಯ ಕಲಾವಿದರು, ಸಾಹಿತಿಗಳು, ವಿಮರ್ಶಕರೊಂದಿಗೆ ಚರ್ಚಿಸುವುದರಿಂದ ಅವರ ಸಂಪರ್ಕವೂ ಬೆಳೆಯುತ್ತದೆ. ಇಲ್ಲದಿದ್ದರೆ ವಿದ್ಯಾರ್ಥಿಗೆ ಸಂವಹನದ ಕೊರತೆಯು ಎದ್ದು ಕಾಣುತ್ತದೆ.

ಗ್ರಂಥಾಲಯ ವ್ಯವಸ್ಥೆ

ನಮ್ಮ ದೃಶ್ಯಕಲಾ ಶಿಕ್ಷಣ ವ್ಯವಸ್ಥೆಯಲ್ಲಿ ತೀರಾ ನಿರ್ಲಕ್ಷ್ಯಕ್ಕೆ ಒಳಗಾದದ್ದು ಎಂದರೆ ಗ್ರಂಥಾಲಯ. ಕರ್ನಾಟಕದಲ್ಲಿರುವ ಅನೇಕ ಕಲಾಶಾಲೆಗಳಲ್ಲಿ ಗ್ರಂಥಾಲಯಕ್ಕೆ ನಿರ್ದಿಷ್ಟವಾದಂತಹ ಸ್ಥಳಾವಕಾಶ ಇಲ್ಲದಿರುವುದನ್ನು ಕಾಣುತ್ತೇವೆ. ಕೆಲವೊಂದು ಕಾಲೇಜುಗಳಲ್ಲಿ ಇರುವ ಕೆಲವೇ ಪುಸ್ತಕಗಳನ್ನು ಮರದ ಕಪಾಟುಗಳಲ್ಲಿ ಸಂಗ್ರಹಿಸಿ ಬೀಗ ಹಾಕುತ್ತಾರೆ. ಗ್ರಂಥಾಲಯದ ಹೆಚ್ಚುವರಿ ಹೊಣೆ ಹೊತ್ತಂತಹವರು "ಪುಸ್ತಕದ ಬಗ್ಗೆ ಕೇಳಿದಾಗ" ಅವರು ಸುಳ್ಳು ಮಾಹಿತಿ ಹೇಳಿ ಬಾಯ್ಮುಚ್ಚಿಸುತ್ತಾರೆ. ಕೆಲವೊಂದು ಕಲಾ ಶಾಲೆಗಳಲ್ಲಿ ಕಲಾಶಿಕ್ಷಣಕ್ಕೆ ಅಥವಾ ಕಲೆಯ ಕ್ಷೇತ್ರಕ್ಕೆ ಸಂಬಂಧಿಸಿದಂತಹ ಪುಸ್ತಕಗಳು ಬಹಳ ಕಡಿಮೆ ಇರುವುದನ್ನು ಕಾಣುತ್ತೇವೆ.

ದಾಸ್ತಾನು ಕೊಠಡಿಯಾಗಿ ಕೆಲವೊಂದು ಶಾಲಾ ಗ್ರಂಥಾಲಯವನ್ನು ಬಳಸಿಕೊಂಡಿದ್ದಾರೆ. ಅದೇ ರೀತಿ ಕೆಲವೊಂದು ಕಲಾಶಾಲೆಗಳಲ್ಲಿ ಪ್ರಾಚಾರ್ಯರ ಕಛೇರಿಯಲ್ಲಿ ಮಾತ್ರ ಕೆಲವು ಪುಸ್ತಕಗಳು ಇರುತ್ತವೆ. ಇನ್ನೂ ಕೆಲವು ಕಲಾಶಾಲೆಗಳಲ್ಲಿ ತರಗತಿ ಕೊಠಡಿಯಲ್ಲಿ ಪುಸ್ತಕಗಳನ್ನು ಸಂಗ್ರಹಿಸಿಟ್ಟಿರುವುದನ್ನು ನಾವು ನೋಡುತ್ತೇವೆ. ಈ ರೀತಿಯ ಕೆಲವು ಕೊಠಡಿಗಳಿಗೆ ವಿದ್ಯಾರ್ಥಿಗಳು

ಹೋಗಿ ಪುಸ್ತಕ ನೋಡಲು ಅಥವಾ ಓದಲು ಸಾಧ್ಯವಿಲ್ಲದಂತಾಗಿದೆ. ಕೆಲವು ಕಲಾಶಾಲೆಗಳು ಈ ರೀತಿಯಾಗಿ ಸಂಗ್ರಹಿಸಿದಂತಹ ಪುಸ್ತಕಗಳ ಕೊಠಡಿಯೊಳಗೆ ಪ್ರವೇಶಿಸಿದರೆ ಅಲ್ಲಿಂದ ಮರಳಿ ಹೊರಗೆ ಹೋಗುವಂತಹ ಆತುರದಲ್ಲಿರುವುದನ್ನು ನೋಡಬಹುದು. ಏಕೆಂದರೆ ಗ್ರಂಥಾಲಯ ದಲ್ಲಿ ಸರಿಯಾದಂತಹ ಕೊಠಡಿ ಇಲ್ಲದಿರುವುದು. ಕೆಲವೊಂದು ಗ್ರಂಥಾಲಯಗಳು ಒಳ್ಳೆಯ ರೀತಿಯಲ್ಲಿ ಕಾರ್ಯ ನಿರ್ವಹಿಸಿದರೂ ಸಹ ಅಂತಹ ಸ್ಥಳಗಳಿಗೆ ಹೋಗುವಂತಹ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ. ವಿದ್ಯಾರ್ಥಿಗಳಲ್ಲಿ ಸ್ವಂತ ಅಧ್ಯಯನ, ಓದುವ ಅಭಿರುಚಿ ಇತ್ಯಾದಿ ಪರಿಕಲ್ಪನೆಗಳೆಲ್ಲ ಬದಿಗೆ ಒತ್ತಿದಂತಾಗಿದೆ.

ಇದಕ್ಕೆ ಸಂಬಂಧಿಸಿದ ಕಾರಣಗಳು

ಗ್ರಂಥಾಲಯದಲ್ಲಿ ವಿಷಯಕ್ಕೆ ಸಂಬಂಧಿಸಿದ ಪಠ್ಯಪುಸ್ತಕಗಳು ಇಲ್ಲದಿರುವುದು, ಓದಿನ ಕಡೆ ಗಮನವಿಲ್ಲದಂತಹ ಕೆಲವು ಶಿಕ್ಷಕರು ಆಸಕ್ತಿ ಇಲ್ಲದ ಗ್ರಂಥಪಾಲಕರು ಮುಖ್ಯ ಕಾರಣ ಮತ್ತು "ಸಿದ್ಧಾಂತ ಪತ್ರಿಕೆ"ಗೆ ಸಂಬಂಧಿಸಿದಂತೆ ಗ್ರಂಥಾಲಯವು ತುಂಬಾ ಮಹತ್ವದ ಪಾತ್ರ ವಹಿಸುತ್ತದೆಂದು ಕೆಲವರಿಗೆ ಅರಿವಿಲ್ಲದಂತಾಗಿದೆ.

ಕರ್ನಾಟಕದ ಬಹುತೇಕ ಎಲ್ಲಾ ಕಲಾಶಾಲೆಗಳಲ್ಲಿ (ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿ) ಗ್ರಂಥಪಾಲಕರೇ ಇಲ್ಲ. ಇದಕ್ಕೆ ಸಂಬಂಧಿಸಿದಂತೆ ಗ್ರಂಥಪಾಲಕನ ಜವಾಬ್ದಾರಿಯನ್ನು ಒಬ್ಬ ಗುಮಾಸ್ತನಿಗೆ ಹೊರಿಸಿರುತ್ತಾರೆ. ಅಕ್ಷರ ಕೂಡ ಗೊತ್ತಿಲ್ಲದಂತಹವನನ್ನು ಗ್ರಂಥಾಲಯವನ್ನು ನೋಡಿಕೊಳ್ಳುವುದಕ್ಕಾಗಲಿ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ನೀಡುವುದಾಗಲಿ, ಹೇಗೆ ಸಾಧ್ಯ? ಎಂಬಂತಹ ಹಲವಾರು ಪ್ರಶ್ನೆಗಳು ಕಾಡುತ್ತವೆ.

ಕಲಾಶಾಲೆಗಳಲ್ಲಿನ ವಿದ್ಯಾರ್ಥಿಗಳಿಂದ ಸಂಗ್ರಹಿಸಿದಂತಹ ಶುಲ್ಕಗಳಿಂದ ಅಥವಾ ಆಡಳಿತ ಮಂಡಳಿಯವರಿಂದ ಅಂದರೆ ಸುಮಾರು ಶೇ. ೯೫ರಷ್ಟು ಕಲಾಶಾಲೆಗಳಲ್ಲಿ ಕಲೆಗೆ ಸಂಬಂಧಿಸಿ ದಂತಹ ಪತ್ರಿಕೆ ತರಿಸುವುದು ಕಷ್ಟಕರವಾಗಿದೆ. ಹಣಕಾಸಿನ ಕೊರತೆಯಿಂದಾಗಿ ಹಲವಾರು ಕಲಾಶಾಲೆಗಳಲ್ಲಿ ಗ್ರಂಥಾಲಯಗಳ ಬೆಳವಣಿಗೆ ಕುಂಠಿತಗೊಂಡಿದೆ.

ಏಕೋಪಾಧ್ಯಾಯ ಕಲಾಶಾಲೆಗಳು

ಕರ್ನಾಟಕದಲ್ಲಿ ಕೆಲವು ಕಲಾಶಾಲೆಗಳಲ್ಲಿ ಹೆಸರಿಗಷ್ಟೇ ಮೂರು-ನಾಲ್ಕು ಜನರು ಉಪನ್ಯಾಸಕ ರಿರುತ್ತಾರೆ. ಆದರೆ ಕೆಲವೊಂದು ಕಲಾ ಶಾಲೆಯಲ್ಲಿ ಕೆಲಸ ಮಾಡುವವರು ಅಂದರೆ ಕಸ ಹೊಡೆಯುವುದರಿಂದ ಹಿಡಿದು ಪ್ರಾಚಾರ್ಯರ ತನಕ ಒಬ್ಬನೇ ತನ್ನ ಜವಾಬ್ದಾರಿಯನ್ನು ತೆಗೆದುಕೊಂಡಿರುತ್ತಾನೆ. ಇಂತಹ ವ್ಯವಸ್ಥೆಯಲ್ಲಿ ಉಪನ್ಯಾಸಕನಾದವನು ಅನೇಕ ಕೆಲಸಗಳನ್ನು ಒಂದೇ ವೇಳೆಯಲ್ಲಿ ನಿರ್ವಹಿಸಬೇಕಾಗುತ್ತದೆ. ಬೇರೆ ಬೇರೆ ತರಗತಿಗಳಿಗೆ ಪಾಠ ಹೇಳಬೇಕಾಗುತ್ತದೆ. ಕಲಾಶಾಲೆಯ ಪ್ರತಿಯೊಂದು ಕೆಲಸಗಳಾದ ವೇಳಾಪಟ್ಟಿ ತಯಾರಿ, ವೇಳಾಪಟ್ಟಿಯಲ್ಲಿರುವಂತಹ ಮಕ್ಕಳ ಅವರವರ ಕಾರ್ಯದಲ್ಲಿ ಮಗ್ನನಾಗಿರುವರೋ ಅಥವಾ ಇಲ್ಲವೋ ಎಂಬುದನ್ನು ನೋಡಿಕೊಳ್ಳಬೇಕು. ಜೊತೆಗೆ ಇಲಾಖೆಯ ವ್ಯವಹಾರಗಳನ್ನು ನೋಡಿಕೊಳ್ಳಬೇಕು. ಇದೆಲ್ಲ

ಮಾಡಿಕೊಂಡಿದ್ದರೆ ಪಾಠ ಮಾಡುವುದು ಯಾವಾಗ. ಇದರಿಂದಾಗಿ ಹಲವಾರು ಸಮಸ್ಯೆಗಳು ಎದುರಾಗುತ್ತವೆ.

ಒಬ್ಬರೇ ಉಪನ್ಯಾಸಕರಿರುವಂತಹ ಕಲಾಶಾಲೆಗಳಲ್ಲಿ ಅವರಿಗೆ ಅನಿವಾರ್ಯ ಕೆಲಸ ಬಂದಾಗ ಅಥವಾ ಆ ದಿನಗಳಂದು ಕಲಾಶಾಲೆಯನ್ನು ಮುಚ್ಚಿರಬೇಕಾಗುತ್ತದೆ. ಇಂತಹ ಕಲಾಶಾಲೆಗಳಲ್ಲಿ ಪ್ರಾಯೋಗಿಕ ಹಾಗೂ ಸಿದ್ಧಾಂತ ಪತ್ರಿಕೆಗಳ ಬೋಧನೆಯನ್ನು ಒಬ್ಬರೇ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಶಾಲೆಗಳಲ್ಲಿ ಬೆಳಿಗ್ಗೆಯಿಂದ ಸಂಜೆಯತನಕ ವಿದ್ಯಾರ್ಥಿಗಳಿಗೆ ಪಾಠ ಹೇಳುವುದು ತುಂಬಾ ಕಠಿಣವಾದ ಕೆಲಸವಾಗುತ್ತದೆ. ಇದರಿಂದಾಗಿ ಶಿಕ್ಷಕ ಮತ್ತು ವಿದ್ಯಾರ್ಥಿಗಳಿಬ್ಬರಿಗೂ ಸಮಸ್ಯೆಯಾಗುತ್ತದೆ.

ಕರ್ನಾಟಕದ ಕಲಾಶಾಲೆಗಳಲ್ಲಿ ಹಲವೆಡೆ ಕೇವಲ ಒಬ್ಬರೇ ಉಪನ್ಯಾಸಕರಿರುವುದನ್ನು ಕಾಣಬಹುದು. ಹೆಸರಿಗೆ ಮೂರು-ನಾಲ್ಕು ಜನ ಉಪನ್ಯಾಸಕರಿದ್ದರೂ ತರಗತಿಯಲ್ಲಿ ಬೋಧಿಸುವವರು ಒಬ್ಬರೇ. ಅಂದರೆ ಕಲಾಶಾಲೆಯಲ್ಲಿ ಕಲಾಮೂಲ ಎರಡು ವರ್ಷ. ಡಿಪ್ಲೋಮಾ ಚಿತ್ರಕಲೆ ಮೂರು ವರ್ಷ ಅಥವಾ ಕಲಾಮೂಲ ಎರಡು ವರ್ಷ. ಬಿ.ವಿ.ಎ. ಎರಡು ವರ್ಷವಿರುವಂತಹ ಕಲಾಶಾಲೆಗಳಲ್ಲಿ ಒಬ್ಬನೆ ಶಿಕ್ಷಕ, ಎಲ್ಲಾ ತರಗತಿಗಳಿಗೂ ಎಷ್ಟರಮಟ್ಟಿಗೆ ಕಲಿಸುತ್ತಾರೆ? ಈ ರೀತಿಯಾಗಿ ನಮ್ಮ ಕರ್ನಾಟಕದ ಕೆಲವು ಕಲಾಶಾಲೆಗಳು ನಡೆದುಕೊಂಡು ಹೋಗುತ್ತಿರುವುದನ್ನು ಕಾಣುತ್ತೇವೆ. ವಿದ್ಯಾರ್ಥಿಗಳು ಇಂತಹ ಕಲಾಶಾಲೆಗಳಲ್ಲಿ ಕಲಿತು ಮುಂದೆ ಅಚಾನಕ್ ಎಲ್ಲಿಯಾದರೂ ಶಿಕ್ಷಕರಾಗಿ ಅಥವಾ ಉಪನ್ಯಾಸಕರಾಗಿ ಕೆಲಸ ಸಿಕ್ಕಿದರೆ ಅವರು ವಿದ್ಯಾರ್ಥಿಗಳಿಗೆ ಏನನ್ನು ಕಲಿಸಬಲ್ಲರು? ವಿದ್ಯಾರ್ಥಿಗಳು ಇಂಥವರಿಂದ ಏನನ್ನೂ ನಿರೀಕ್ಷಿಸುತ್ತಾರೆ? ಎಂಬಂತಹ ಹಲವಾರು ಪ್ರಶ್ನೆಗಳು ಉದ್ಭವವಾಗುತ್ತವೆ.

ನಾಯಕತ್ವದ ಕೊರತೆ

ಕರ್ನಾಟಕದ ಚಿತ್ರಕಲಾ ಶಾಲೆಗಳಲ್ಲಿನ ಎಲ್ಲಾ ಪ್ರಾಚಾರ್ಯರು, ಉಪನ್ಯಾಸಕರುಗಳು ಒಂದೆಡೆ ಸೇರಿ ಚಿತ್ರಕಲಾ ಶಾಲೆಗಳು ಮತ್ತು ಕ್ಷೇತ್ರದಲ್ಲಿನ ಕುಂದುಕೊರತೆಗಳನ್ನು ನೀಗಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಸಮಸ್ಯೆ ಬಗೆಹರಿಯಬೇಕಾದರೆ ಚಿತ್ರಕಲಾ ಶಾಲೆಗಳ ಪ್ರಾಚಾರ್ಯರು ಮತ್ತು ಉಪನ್ಯಾಸಕರಿಗೆ ಒಬ್ಬ ನಾಯಕನನ್ನಾಗಿ ನೇಮಿಸಿದರೆ ಚಿತ್ರಕಲೆಯ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಒಂದು ಅಂತಿಮ ನಿರ್ಧಾರಕ್ಕೆ ಬರುತ್ತಾರೆ. ಆದರೆ ಇಲ್ಲಿ ಆ ವ್ಯವಸ್ಥೆ ಇಲ್ಲದಂತಾಗಿದೆ. ಪ್ರಾಚಾರ್ಯರ ಸಭೆಯನ್ನು ಕರೆದರೆ ಎಲ್ಲರಲ್ಲೂ ಒಂದೇ ರೀತಿಯ ಒಮ್ಮತ ಅಭಿಪ್ರಾಯವಿಲ್ಲ. ಉಪನ್ಯಾಸಕರಲ್ಲಿಯೂ ಕೂಡ ಸರಿಯಾದಂತಹ ಹೊಂದಾಣಿಕೆ ಇಲ್ಲದಿರುವುದು ಒಂದು ನಿರ್ಧಾರಕ್ಕೆ ಬರಲು ಅಡ್ಡಿಗಳಾಗುತ್ತಿವೆ. ಇದರಿಂದ ಈ ವ್ಯವಸ್ಥೆಯನ್ನು ಸರಿಪಡಿಸಲು ಒಬ್ಬ ನಾಯಕನ ಕೊರತೆ ಇದ್ದು, ಅದು ಎದ್ದು ಕಾಣುತ್ತದೆ.

ಚಿತ್ರಕಲಾ ಕೊಠಡಿ

ಚಿತ್ರಕಲಾ ವಿಷಯಕ್ಕೆ ಸಂಬಂಧಿಸಿದಂತೆ ಸುಸಜ್ಜಿತವಾದ ಪ್ರಾಯೋಗಿಕ ಕೊಠಡಿ ಇರಬೇಕು. ಬೆಳಕು, ವಿಶಾಲವಾದ ಸ್ಥಳವಕಾಶ. ನಿಶ್ಯಬ್ಧವಾದ ವಾತಾವರಣ, ಚಿತ್ರಕಲಾ ಶಾಲೆಯ ಮುಂದೆ ಹಸಿರಿನಿಂದ ತುಂಬಿದಂತಹ ಬಣ್ಣ ಬಣ್ಣದ ಹೂಗಳಿಂದ ಕೂಡಿರದ ಪರಿಸರವಿರಬೇಕು. ಚಿತ್ರಕಲಾ ವಿಷಯದ ತಾತ್ವಿಕ ಪರಿಕಲ್ಪನೆಗಳನ್ನು ತನ್ನ ಭಾವನೆಗಳ ಆಧಾರದ ಮೇಲೆ ರಚನಾತ್ಮಕವಾಗಿ ಸೃಷ್ಟಿಸುವ ಸ್ಥಳವೇ ಚಿತ್ರಕಲಾ ಕೊಠಡಿ ಎನಿಸುತ್ತದೆ.

ಚಿತ್ರಕಲಾ ಕೊಠಡಿಯ ಜವಾಬ್ದಾರಿಯನ್ನು ತರಗತಿಯ ಶಿಕ್ಷಕರು ನೋಡಿಕೊಳ್ಳಬೇಕಾಗುತ್ತದೆ. ಕೊಠಡಿಯು ಅತ್ಯಂತ ಸುಂದರವಾಗಿ, ಸ್ವಚ್ಛವಾಗಿ ಇರುವಂತೆ ನೋಡಿಕೊಳ್ಳಬೇಕು. ಕಲಾಶಾಲೆಯ ಗೋಡೆಗಳ ಮೇಲೆ ವಿವಿಧ ವಿನ್ಯಾಸದಿಂದ ಕೂಡಿದಂತಹ ಕಲಾಕೃತಿಗಳನ್ನು ರಚಿಸಬೇಕು ಮತ್ತು ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ಸಿದ್ಧಾಂತ ಪತ್ರಿಕೆಗೆ ಕರಿಹಲಗೆ ಅಥವಾ ಬಿಳಿಹಲಗೆ ಹೊಂದಿದಂತಹ ಅನುಕೂಲಕರವಾದ ಆಸನಗಳುಳ್ಳ ತರಗತಿಯನ್ನು ಹೊಂದಿರಬೇಕು.

ಚಿತ್ರಕಲಾ ಶಾಲೆಗಳಲ್ಲಿ ತರಗತಿಗಳಿಗೆ ತಕ್ಕಂತೆ ವೇಳಾಪಟ್ಟಿಯನ್ನು ತಯಾರು ಮಾಡಬೇಕು. ಯಾಕೆಂದರೆ ಶಿಕ್ಷಕರುಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ದಿನನಿತ್ಯ ನಡೆಯುವ ವಿಷಯಗಳ ಬಗ್ಗೆ ಗೊಂದಲವಿರಬಾರದು. ಪಠ್ಯಬೋಧನೆ ಮಾಡಬೇಕೆಂದು ಶಿಕ್ಷಕರ ಗಮನಕ್ಕೆ ಬರುತ್ತದೆ. ವಿದ್ಯಾರ್ಥಿಗಳು ವೇಳಾಪಟ್ಟಿಗೆ ತಕ್ಕಂತೆ ಅಧ್ಯಯನ ಮಾಡಲು ಅನುಕೂಲವಾಗುತ್ತದೆ. ಆದರೆ ಕೆಲವೊಂದು ಕಲಾಶಾಲೆಗಳಲ್ಲಿ ವೇಳಾಪತ್ರಿಕೆ ಸೂಚನಾ ಫಲಕದಲ್ಲಿ ಕಾಣಿಸುವುದಿಲ್ಲ.

ಯಾವುದೇ ಕಲಾಶಾಲೆಗೆ ಸೂಚನಾ ಫಲಕ ಬೇಕೇ ಬೇಕು. ಏಕೆಂದರೆ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಮಾಹಿತಿಯನ್ನು ಪ್ರತಿಯೊಬ್ಬರಿಗೂ ತಿಳಿಸಲು ಆಗುವುದಿಲ್ಲ. ಅದರಿಂದ ಮಾಹಿತಿಯನ್ನು ಸೂಚನಾ ಫಲಕಕ್ಕೆ ಅಂಟಿಸಬಹುದು. ಕೆಲವೊಂದು ಚಿತ್ರಕಲಾ ಶಾಲೆಗಳಲ್ಲಿ ಕ್ಷೇತ್ರಕಾರ್ಯಕ್ಕೆ ಹೋದಾಗ ಸೂಚನಾ ಫಲಕಗಳು ಇಲ್ಲದೇ ಇರುವುದನ್ನು ನಾವು ಕಾಣಬಹುದು.

ಚಿತ್ರಕಲಾ ಕಾಲೇಜುಗಳಲ್ಲಿ ನೀರಿನ ವ್ಯವಸ್ಥೆಯು ಮೂಲಭೂತವಾದುದು. ಏಕೆಂದರೆ ವಿದ್ಯಾರ್ಥಿಗಳು ತಮ್ಮ ಕಲಾಕೃತಿಯನ್ನು ರಚನೆ ಮಾಡಬೇಕಾದರೆ ನೀರಿನ ಅನಿವಾರ್ಯತೆ ಬೇಕಾಗಿರುತ್ತದೆ. ಬಣ್ಣಗಳ ಪ್ಯಾಲೆಟ್ ಮತ್ತು ಬ್ರಶ್ ಕಲಾಕೃತಿಯು ಮುಗಿಸಿದ ನಂತರ ಕೈ ತೊಳೆಯಲು ಸ್ಥಳಾವಕಾಶವಿರಬೇಕಾಗುತ್ತದೆ. ಮುಖ್ಯವಾಗಿ ವಿದ್ಯಾರ್ಥಿ, ಶಿಕ್ಷಕರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಬೇಕಾಗುತ್ತದೆ. ನೀರಿಲ್ಲದೇ ಹೋದರೆ ಶಿಕ್ಷಕರು, ವಿದ್ಯಾರ್ಥಿಗಳು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ.

ಚಿತ್ರಕಲಾ ಶಾಲೆ ಅಥವಾ ಕೊಠಡಿಗೆ ಮುಖ್ಯವಾಗಿ ಬೆಳಕಿನ ವ್ಯವಸ್ಥೆ ಇರಬೇಕಾಗುತ್ತದೆ. ಚಿತ್ರಕಲಾ ಕೊಠಡಿಗೆ ಸೂರ್ಯನ ಬೆಳಕು ಬೀಳುವಂತಿರಬೇಕು. ಅಗಲವಾದ ಬಾಗಿಲು, ಕಿಟಕಿಗಳಿಂದ ಕೂಡಿರಬೇಕು. ಸೂರ್ಯನ ಬೆಳಕು ಸರಿಯಾಗಿ ಬೀಳದಿದ್ದಾಗ, ಲೈಟಿಂಗ್

ವ್ಯವಸ್ಥೆಯನ್ನು ಮಾಡಿಕೊಂಡಿರಬೇಕಾಗುತ್ತದೆ. ಕೆಲವು ಸಮಯದಲ್ಲಿ ರಾತ್ರಿಯ ವೇಳೆಯಲ್ಲಿ ಸಮಾರಂಭ, ವಾರ್ಷಿಕೋತ್ಸವ ಅಥವಾ ಕಲಾ ಚಟುವಟಿಕೆಗಳಿಗೆ ಸಂಬಂಧಿಸಿದಂತಹವುಗಳನ್ನು ನಡೆಸಲು ವಿದ್ಯುತ್ ಬೆಳಕಿನ ವ್ಯವಸ್ಥೆ ಬೇಕು. ಪ್ರಸಿದ್ಧ ಕಲಾವಿದರ ಕಲಾಕೃತಿಗಳನ್ನು ಸ್ಲೈಡ್ ಪ್ರದರ್ಶನದ ಮೂಲಕ ತೋರಿಸಬೇಕಾಗುತ್ತದೆ. ಇದು ತುಂಬಾ ವಿದ್ಯಾರ್ಥಿಗಳಿಗೆ ಅನುಕೂಲಕರ ವಾಗಿದೆ. ಆದರೆ ಕರ್ನಾಟಕದ ಅನೇಕ ಕಲಾ ಶಾಲೆಗಳಲ್ಲಿ ಬೆಳಕಿನ ಅಭಾವ ಕಡಿಮೆ ಸ್ಲೈಡ್ ಷೋ ಮಾಡುವುದಕ್ಕೆ ಸ್ಲೈಡ್‌ಗಳು ಇರುವುದಿಲ್ಲ. ಇದರಿಂದ ವಿದ್ಯಾರ್ಥಿಗಳು ಇಂತಹ ವ್ಯವಸ್ಥೆಯಿಂದ ವಂಚಿತರಾಗಿದ್ದಾರೆ. ಇದು ವಿದ್ಯಾರ್ಥಿಗಳಿಗೆ ಪ್ರಸ್ತುತ ಸಂದರ್ಭದಲ್ಲಿ ಪಠ್ಯ ಬೋಧನೆಗೆ ಬಹುದೊಡ್ಡ ಸಮಸ್ಯೆಯಾಗಿದೆ.

ಚಿತ್ರಕಲಾ ಕೊಠಡಿಯ ಒಳಾಂಗಣದ ಗೋಡೆಯ ಮೇಲೆ ಸರಿಯಾದ ಬೆಳಕಿನ ವ್ಯವಸ್ಥೆ ಇರುವಲ್ಲಿ ಕರಿಹಲಗೆ ಅಥವಾ ಬಿಳಿಹಲಗೆಯನ್ನು ತೂಗು ಹಾಕಬೇಕು. ಈ ಕರಿಹಲಗೆಯು ಪಾಠದ ಬೋಧನೆಯ ಸಂದರ್ಭದಲ್ಲಿ ಪ್ರಮುಖವಾದ ಪಾತ್ರವಹಿಸುತ್ತದೆ. ಹಿಂದಿನ ಕಾಲದಲ್ಲಿ ಹಾಗೂ ಈಗಿನ ಕೆಲವು ಕಾಲೇಜುಗಳಲ್ಲಿ ಸಿಮೆಂಟ್‌ನಿಂದ ಮಾಡಿ ಅದಕ್ಕೆ ಕಪ್ಪುಬಣ್ಣವನ್ನು ಹಚ್ಚಿ ಬಳಸುತ್ತಿದ್ದರು. ಇದು ಶಿಕ್ಷಕರು ಹೇಳುವಂತಹ ಅಥವಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಲು ಕೆಲವೊಂದು ಸಮಯದಲ್ಲಿ ಉಪನ್ಯಾಸಕರ ಅಥವಾ ಶಿಕ್ಷಕರು ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಇರುವಂತಹ ಒಂದು ಮಾರ್ಗ. ಇತ್ತೀಚಿನ ದಿನಗಳಲ್ಲಿ ಕಪ್ಪು ಹಲಗೆಯ ಬದಲಿಗೆ ಬಿಳಿ ಹಲಗೆ, ಹಸಿರು ಹಲಗೆಯನ್ನು ಪ್ರಸ್ತುತ ಸಂದರ್ಭದಲ್ಲಿ ಕೆಲವು ಕಲಾಶಾಲೆಯ ಕೊಠಡಿಗಳಲ್ಲಿ ಬಳಕೆ ಮಾಡುವುದನ್ನು ಕಾಣುತ್ತೇವೆ. ಇಂತಹ ಸೌಕರ್ಯಗಳು ಕರ್ನಾಟಕದ ಎಲ್ಲಾ ಚಿತ್ರಕಲಾ ಶಾಲೆಗಳಲ್ಲಿ ಕಾಣುವುದಿಲ್ಲ. ಕೆಲವೊಂದರಲ್ಲಿ ಮಾತ್ರ ಕಾಣಬಹುದು.

ಚಿತ್ರಕಲಾ ಶಾಲೆಗಳ ಕೊಠಡಿಗಳಲ್ಲಿ ವಿದ್ಯಾರ್ಥಿಗಳಿಗೆ ಬೆಂಚು, ಡೆಸ್ಕ್, ಕುರ್ಚಿ, ಕಪಾಟುಗಳ ವ್ಯವಸ್ಥೆ ಇರಬೇಕು. ಒಬ್ಬ ವಿದ್ಯಾರ್ಥಿಯ ಆಸನದಿಂದ ಇನ್ನೊಬ್ಬ ವಿದ್ಯಾರ್ಥಿಯ ಆಸನಕ್ಕೆ ಅಂತರವಿರಬೇಕು. ಕೊಠಡಿಯ ಎರಡು ಭಾಗದ ಮಧ್ಯದಲ್ಲಿ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ವಿದ್ಯಾರ್ಥಿಗಳ ಕೃತಿಯನ್ನು ವೀಕ್ಷಿಸಲು ದಾರಿ ಅಥವಾ ಸ್ಥಳ ಬಿಟ್ಟಿರಬೇಕು. ಚಿತ್ರಕಲಾ ಕೊಠಡಿಯ ಎರಡು ಕಡೆ ಇರುವ ವಿದ್ಯಾರ್ಥಿಗಳು ಕಾಣುವಂತೆ ಶಿಕ್ಷಕರ ಅಥವಾ ಉಪನ್ಯಾಸಕರ ಆಸನ ಇರಬೇಕು. ಕೆಲವೊಂದು ಕಲಾಶಾಲೆಗಳಲ್ಲಿ ಈ ತೆರನಾದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

ಚಿತ್ರಕಲಾ ಕೊಠಡಿಗಳಲ್ಲಿ ಅಮರವಾಣಿ. ಕಲೆಗೆ ಸಂಬಂಧಿಸಿದ ವಿಷಯಗಳು ಹಾಗೂ ವಿದ್ಯಾರ್ಥಿಗಳು ರಚಿಸಿರುವಂತಹ ಕಲಾಕೃತಿಗಳಲ್ಲಿ ಉತ್ತಮವಾದವುಗಳನ್ನು ಆರಿಸಿಕೊಳ್ಳಬೇಕು. ಚಿತ್ರಕಲಾ ಕೊಠಡಿಯ ಖಾಲಿ ಇರುವಂತಹ ಜಾಗದಲ್ಲಿ ಕಲಾಕೃತಿಗಳನ್ನು ತೂಗಿ ಹಾಕಬೇಕು. ಈ ರೀತಿಯ ವ್ಯವಸ್ಥೆಯು ಕರ್ನಾಟಕದ ಕೆಲವೊಂದು ಕಾಲೇಜುಗಳಲ್ಲಿ ನೋಡಬಹುದು. ಇನ್ನು ಕೆಲವು ಕಾಲೇಜುಗಳಲ್ಲಿ ಅನೇಕ ಕಲಾಕೃತಿಗಳಿದ್ದು ಅದನ್ನು ಒಂದು ವ್ಯವಸ್ಥಿತವಾಗಿ

ಇಡದೇ ಹಾಳಾಗುತ್ತಿರುವುದನ್ನು ನಾವು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಒಳ್ಳೆಯ ಕಲಾಕೃತಿಗಳನ್ನು ಆರಿಸಿ ಗೋಡೆಗೆ ತೂಗುಹಾಕಬೇಕು. ಇದರಿಂದ ಕಲಾ ಶಾಲೆಯ ಸೌಂದರ್ಯ ಆಕರ್ಷಣೆ ಹೆಚ್ಚಾಗುತ್ತದೆ. ಜೊತೆಗೆ ವಿದ್ಯಾರ್ಥಿಗಳಿಗೆ ಪಠ್ಯಬೋಧನೆಗೆ ಪೂರಕವಾಗಿ ಮಾರ್ಗದರ್ಶನ ಮಾಡುತ್ತವೆ. ಇಂತಹ ಪದ್ಧತಿಯೂ ಕರ್ನಾಟಕದಲ್ಲಿ ಹಲವು ಕಲಾಶಾಲೆಗಳಲ್ಲಿ ಇಲ್ಲದಿರುವುದನ್ನು ಗಮನಿಸ ಬಹುದು.

ಸಂಸ್ಥಾಪಕರ ಸಮಸ್ಯೆಗಳು

ಇರುವಂತಹ ಹಾಗೂ ಅಪೇಕ್ಷಿತ ಗುರಿಗಳ ಸಾಧನೆಗಾಗಿ ಮನುಷ್ಯನು ತನ್ನ ಬುದ್ಧಿಶಕ್ತಿಯ ಸಂಪತ್ತನ್ನು ಗುಂಪುಗಟ್ಟಿಸುವ, ಅದನ್ನು ನಿರ್ದೇಶಿಸುವ ಮತ್ತು ಅಳವಡಿಸುವ ಒಂದು ಕ್ರಿಯೆಯೇ ಆಡಳಿತ. ಆಡಳಿತಕ್ಕೆ ಬಂದ ನಂತರ ಜವಾಬ್ದಾರಿಗಳನ್ನು ನಿರ್ವಹಣೆ ಮಾಡುವುದು ಕಷ್ಟ ಸಾಧ್ಯವಾದಂತಹ ಮಾತು. ಏಕೆಂದರೆ ನಿರ್ವಹಣೆ ಎಂಬುದು ಎರಡು ಮುಖಗಳಿಂದ ಕೂಡಿದ್ದಾಗಿದೆ. ಅದರ ದೃಷ್ಟಿ ಭವಿಷತ್ ಕಾಲದಲ್ಲಿ ನೆಲೆ ನಿಂತಿದೆ. ಗುಂಪುಗಾರಿಕೆ, ಆಡಳಿತ, ಗುರಿಗಳು ಸಂಪನ್ಮೂಲಗಳು ಮೇಲ್ವಿಚಾರಣೆ ಚಟುವಟಿಕೆಗಳು ಆರ್ಥಿಕ ದಕ್ಷತೆ ಹಾಗೂ ಉತ್ಕೃಷ್ಟತೆ, ಅಂಶಗಳನ್ನು ನಿರ್ವಹಣೆಯು ಒಳಗೊಂಡಿದೆ. ಇದನ್ನು ಒಳಗೊಂಡಂತೆ ಯೋಜನೆ ಹಾಗೂ ನಾಯಕತ್ವವನ್ನು ಅದು ಒಳಗೊಂಡಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಆಡಳಿತ ನಿರ್ವಹಣೆಯ ಜವಾಬ್ದಾರಿಗಳೇ ಒಂದು ಉದ್ಯಮದ ಸಾಫಲ್ಯ-ವೈಫಲ್ಯಗಳನ್ನು ನಿರ್ಧರಿಸುತ್ತವೆ. ಅದು ಒಂದು ಉದ್ಯಮ, ನಿರ್ದಿಷ್ಟ ಸಾಧನ ಎಂದರೂ ತಪ್ಪಾಗಲಾರದು.

ಸಂಸ್ಥಾಪಕರಾದವರು ಸದಸ್ಯರೊಂದಿಗೆ ವಿನಯದಿಂದ, ವಿಶ್ವಾಸಗಳಿಂದ ನಡೆದುಕೊಳ್ಳುವ ಒಳ್ಳೆಯ ನಡವಳಿಕೆಗಳನ್ನು ರೂಢಿಸಿಕೊಳ್ಳಬೇಕು. ಸಂಸ್ಥಾಪಕರಲ್ಲಿ ಶಕ್ತಿ ಬರಬೇಕಾದರೆ ಮನಸ್ಸು ಎಷ್ಟೇ ಒಳ್ಳೆಯದಿದ್ದರೂ ಅವನ ನಡವಳಿಕೆ ಸೌಜನ್ಯಶೀಲತೆಯಿಂದ ಕೂಡಿರಬೇಕು. ಯಾಕೆಂದರೆ ಒಬ್ಬ ಮನುಷ್ಯನ ಮನಸ್ಸಿನಲ್ಲಿರುವ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟ. ಅವನ ವರ್ತನೆಯ ಮುಖಾಂತರ ಲಕ್ಷಣಗಳನ್ನು ತಿಳಿಯಬಹುದು. ಹೀಗಿರುವಾಗ ಸಾಕಷ್ಟು ಸೌಜನ್ಯಶೀಲತೆಯಿಂದ ಇರಬೇಕಾಗುತ್ತದೆ.

ಸೌಜನ್ಯಶೀಲತೆಯೆಂದರೆ ಎಲ್ಲಾ ವಿಷಯಕ್ಕೂ ಸರಿ ಎನ್ನುವುದಲ್ಲ. ಕೆಲವೊಂದು ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದರೆ ಆಲೋಚನಾ ಶಕ್ತಿಯಿಂದ ಕಠಿಣವಾದಂತಹ ದಿಟ್ಟವಾದಂತಹ ನಿರ್ಧಾರ ಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಆ ವಿಷಯವನ್ನು ಹೊರಹಾಕುವಾಗ ಉತ್ತಮ ಸೌಜನ್ಯಶೀಲತೆ ಪ್ರದರ್ಶಿಸಬೇಕು. ಗಟ್ಟಿಯಾದಂತಹ ನಿರ್ಧಾರಗಳನ್ನು ಸೂಚಿಸುವಂತಹ ಧೈರ್ಯ ವಿರಬೇಕು, ದೂರದೃಷ್ಟಿ ಇರಬೇಕು. ಬಹಳಷ್ಟು ಜನರಲ್ಲಿ ಇದು ಕಾಣುವುದಿಲ್ಲ.

ಉಳಿದ ಸದಸ್ಯರು ಹಾಗೂ ಉಪನ್ಯಾಸಕರು, ಪ್ರಿನ್ಸಿಪಾಲರು ಸಂಸ್ಥಾಪಕನ ಮೇಲೆ ತೋರುವಂತಹ ವಿಶ್ವಾಸವು ಸಂಸ್ಥಾಪಕರ ಪ್ರಾಮಾಣಿಕತೆಯನ್ನು ಅವಲಂಬಿಸಿದೆ. ಇಡೀ

ಕಲಾಶಾಲೆಯ ಭವಿಷ್ಯ ನಿಂತಿರುವುದು ಪ್ರಾಮಾಣಿಕ ಸಂಸ್ಥಾಪಕರ ಮೇಲೆ; ಅವನ ಕರ್ತೃತ್ವ ಶಕ್ತಿಯ ಮೇಲೆ ಎಂಬುದು ಖಚಿತ.

ಸದಸ್ಯರಲ್ಲಿ ಹಲವಾರು ವ್ಯತ್ಯಾಸಗಳನ್ನು ಕಾಣುತ್ತೇವೆ. ಕೆಲವು ಸಂಸ್ಥಾಪಕರಿಗೆ ಹತ್ತಿರವಾಗಿಯೂ, ಕೆಲವರು ದೂರವಾಗಿಯೂ ಇರುವುದನ್ನು ಸಾಮಾನ್ಯವಾಗಿ ನೋಡುತ್ತೇವೆ. ಕೆಲವು ಸಂಸ್ಥೆಯ ಸದಸ್ಯರುಗಳು ಸಂಸ್ಥಾಪಕರುಗಳು ಸಂಬಂಧಿಕರಾಗಿದ್ದರೂ ಅವರು ತೆಗೆದುಕೊಳ್ಳುವ ತೀರ್ಮಾನಗಳು ವಸ್ತುನಿಷ್ಠೆಗೆ ಒತ್ತು ನೀಡಬೇಕಾಗಿರುವುದು ಬಹುಮುಖ್ಯವಾದ ಸಂಗತಿಯಾಗಿದೆ.

ತನಗೆ ಮೆಚ್ಚುಗೆ ಪಡೆಯುವಂತಹುದನ್ನು ಮಾಡಲು ಸಾಧ್ಯವಿಲ್ಲ ಎನ್ನುವ ದೌರ್ಬಲ್ಯವೂ ಅಸೂಯೆಯಾಗಿ ಹೊರಹೊಮ್ಮುತ್ತದೆ. ಸ್ವಭಾವವನ್ನು ಮತ್ತು ಆತ್ಮವಿಶ್ವಾಸವನ್ನು ಬದಲಾಯಿಸಿ ಕೊಳ್ಳಬೇಕಾದರೆ ನಮ್ಮ ಬಗ್ಗೆ ನಾವು ಮೊದಲು ನಂಬಿಕೆಯನ್ನು ತಳೆಯಬೇಕು.

ಸಂಸ್ಥಾಪಕನಿಗೆ ಬಹುಮುಖ್ಯವಾಗಿರಬೇಕಾದಂತಹ ಲಕ್ಷಣಗಳಲ್ಲಿ ದೂರದೃಷ್ಟಿಯುಳ್ಳ ಚಿಂತನೆಯೂ ಸೇರಿದೆ. ಯಾವುದೇ ಒಂದು ವಿಷಯದ ಬಗ್ಗೆ ವಿಚಾರ ಮಾಡುವ ಹಾಗೂ ಚಿಂತಿಸುವಂತಹ ಸಹನೆ ಇರಬೇಕು. ಅವನು ಯಾವುದೇ ವಿಚಾರವನ್ನು ತೆಗೆದುಕೊಳ್ಳಬೇಕಾದರೂ ಬಹಳಷ್ಟು ಯೋಚಿಸಿ ಸಂಸ್ಥೆಯ ಹಿತದೃಷ್ಟಿಯಿಂದ ಆಲೋಚನೆ ಮಾಡಿ ತನಗಿರುವಂತಹ ಅಧಿಕಾರವನ್ನು ಉಪಯೋಗಿಸಿಕೊಳ್ಳಬಹುದು.

ಒಂದು ಕಲಾಶಾಲೆಯನ್ನು ನಡೆಸಬೇಕಾದರೆ ಮುಖ್ಯವಾಗಿ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಬೇಕು. ಕರ್ನಾಟಕದ ಕೆಲವು ಕಲಾಶಾಲೆಗಳಲ್ಲಿ ಈ ರೀತಿಯ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ನಾವು ನೋಡುತ್ತೇವೆ. ಕಲಾಶಾಲೆಯ ಪ್ರತಿಯೊಂದು ಕೆಲಸಕ್ಕೂ ಆರ್ಥಿಕವಾಗಿ ಸಹಾಯ ಬೇಕಾಗಿರುತ್ತದೆ. ಕರ್ನಾಟಕದ ಕಲಾಶಾಲೆಗಳಲ್ಲಿ ಅತಿಥಿ ಉಪನ್ಯಾಸಕರಿಗಾಗಲಿ ಅಥವಾ ಖಾಯಂ ಉಪನ್ಯಾಸಕರಿಗಾಗಲಿ ಸರಿಯಾದ ರೀತಿಯಲ್ಲಿ ಸಂಬಳ ಕೊಡದ ಹಿನ್ನೆಲೆಯಲ್ಲಿ ಕಲಾ ಶಾಲೆಗಳಲ್ಲಿ ಮುಖ್ಯವಾಗಿ ಉಪನ್ಯಾಸಕರು ಬೋಧನೆ ಮಾಡುವುದನ್ನು ನಿಲ್ಲಿಸುವಂತಹ ವ್ಯವಸ್ಥೆ ಇದೆ. ಇದರಿಂದಾಗಿಯೇ ವಿದ್ಯಾರ್ಥಿಗಳಿಗೆ ತೊಂದರೆಯಾಗಿ ವಿದ್ಯಾರ್ಥಿಗಳು ಸರಿಯಾಗಿ ಶಾಲೆಗೆ ಬಾರದೇಹೋದರೆ ಸಂಸ್ಥಾಪಕರು ಕಲಾಶಾಲೆಯನ್ನು ಮುಚ್ಚುವಂತಹ ಹಂತಕ್ಕೆ ಹೋಗಬೇಕಾಗುತ್ತದೆ. ಈ ರೀತಿಯಾಗಿ ಸಮಸ್ಯೆಗಳು ಉದ್ಭವಿಸಿ ಸಂಸ್ಥಾಪಕರನ್ನು ಸಮಸ್ಯೆಯ ಭೂತ ಬೆನ್ನೇರಿರುತ್ತವೆ.

ಚಿತ್ರಕಲಾ ಶಾಲೆಯ ಸಂಸ್ಥಾಪಕನು ಸರಿಯಾದ ಶಿಕ್ಷಣವನ್ನು ಪಡೆದುಕೊಂಡರೆ ಅವರುಗಳಿಗೆ ಸರಿ, ತಪ್ಪುಗಳ ಬಗ್ಗೆ ಅರಿವಿರುತ್ತದೆ. ಶಿಕ್ಷಕರನ್ನು ಅಥವಾ ಉಪನ್ಯಾಸಕರನ್ನು, ವಿದ್ಯಾರ್ಥಿಗಳನ್ನು ಹೇಗೆ ಮಾತನಾಡಿಸಬೇಕು ಎಂಬ ಅರಿವು ಸಂಸ್ಥಾಪಕರಲ್ಲಿ ಇರುತ್ತದೆ. ಆದರೆ ವಿದ್ಯಾಭ್ಯಾಸ ಪಡೆಯದೇ ಇರುವವರು ಸಂಸ್ಥೆಯನ್ನು ನಡೆಸುವುದು ಬಹಳ ಕಷ್ಟಕರವಾದಂತಹ ಮಾತು.

ಸಂಸ್ಥಾಪಕರಾದವರು ಮೊದಲು ಕಟ್ಟಡಗಳನ್ನು ಸರಿಯಾಗಿ ನೋಡಿಕೊಳ್ಳಬೇಕಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಪೋಷಕರು ತಮ್ಮ ಮಕ್ಕಳನ್ನು ಮೂಲಭೂತ ಸೌಕರ್ಯಗಳಿರುವ

ಕಡೆಗೆ ಸೇರಿಸಲು ಬಯಸುತ್ತಾರೆ. ಮೊದಲ ಪ್ರಾಧಾನ್ಯತೆಯನ್ನು ಶಾಲೆಯ ಕೊಠಡಿಗೆ ನೀಡುತ್ತಾರೆ. ಈ ಹಿನ್ನೆಲೆಯಲ್ಲಿ ಸಂಸ್ಥಾಪಕರು ಶಾಲಾ ಕಟ್ಟಡಗಳನ್ನು ಸರಿಯಾಗಿ ನೋಡಿಕೊಳ್ಳಬೇಕಾಗುತ್ತದೆ. ಆದರೆ ಅನೇಕ ಕಲಾಶಾಲೆಗಳಲ್ಲಿ ಬೋಧನಾ ಕೊಠಡಿಗಳೇ ಇರುವುದಿಲ್ಲ.

ಸಂಸ್ಥಾಪಕನು ಶಾಲೆಯಲ್ಲಿ ಬೇಕಾಗುವಂತಹ ಪೀಠೋಪಕರಣಗಳನ್ನು ಒದಗಿಸಬೇಕಾಗುತ್ತದೆ. ಕರ್ನಾಟಕದ ಕೆಲವು ಕಲಾಶಾಲೆಗಳಲ್ಲಿ ಯಾವುದೇ ರೀತಿಯಾದ ಅನುದಾನವಿಲ್ಲವೆಂದು ಉಪಕರಣ ಗಳನ್ನು ತರಿಸಲಾಗದೇ ಇರುವುದನ್ನು ಕಾಣುತ್ತೇವೆ. ಅನುದಾನವಿದ್ದರೂ ಕೆಲವು ಶಾಲೆಗಳಲ್ಲಿ ಇಚ್ಛಾಶಕ್ತಿಯ ಕೊರತೆಯಿದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಿ ಬೇರೊಂದು ಶಾಲೆಗೆ ಹೋಗಿ ಕಲಿಯಲು ಬಯಸುತ್ತಾರೆ. ಇದರಿಂದ ಸಂಸ್ಥಾಪಕರು ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ.

ಉಪನ್ಯಾಸಕರ ಸಮಸ್ಯೆಗಳು

ಕರ್ನಾಟಕದ ಕಲಾಶಾಲೆಗಳಲ್ಲಿ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಬೋಧನೆ ಮಾಡುವ ಸಂದರ್ಭದಲ್ಲಿ ಅಲ್ಲಿನ ಅಸ್ತವ್ಯಸ್ತವಾಗಿರುವಂತಹ ಪಠ್ಯಗಳ ಅಡಚಣೆಗಳು ಕಂಡುಬರುತ್ತವೆ. ಅವುಗಳಿಂದ ಸರಿಯಾದ ರೀತಿಯ ಶಿಕ್ಷಣ ಧೋರಣೆಯಿಂದ ಸಮರ್ಥ ರೂಪದಲ್ಲಿ ಸಂಬಂಧಿಸಿದ ಶಿಕ್ಷಣವು ಕಠಿಣವಾದ ಮಾರ್ಗದರ್ಶನವಾಗಿರುತ್ತದೆ. ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಅವರ ಅಧ್ಯಯನಕ್ಕೆ ಸಂಬಂಧಿಸಿದಂತಹ ಸ್ಥಳೀಯ ಉಪಕರಣಗಳು ಅಸ್ತವ್ಯಸ್ತವಾಗಿ ಕೂಡಿರುವುದರಿಂದ ಶಿಕ್ಷಣವನ್ನು ನೀಡುವುದರಲ್ಲಿ ತರಗತಿ ಗುರುಗಳಿಗೆ ಒಂದು ನಿದರ್ಶನಗಳು ಅಡ್ಡಿಯಾಗುವುದನ್ನು ನಾವು ನೋಡಬಹುದು.

ಚಿತ್ರಕಲಾ ಶಿಕ್ಷಕನು ವಿದ್ಯಾರ್ಥಿಗಳನ್ನೊಳಗೊಂಡು ಅವರ ಬೋಧನೆಗಳಲ್ಲಿ ವಿಶಿಷ್ಟತೆಯನ್ನು ನೀಡುವುದರ ಕ್ರಿಯೆಯಲ್ಲಿ ಶಿಕ್ಷಕನಿಗೆ ಖಾಸಗಿ ವಲಯದವರು ಸರಿಯಾದ ರೀತಿ ವೇತನ ನೀಡದೇ ಶಿಕ್ಷಣಕ್ಕೆ ಮತ್ತು ಶಿಕ್ಷಕರುಗಳಿಗೆ ತುಂಬಾ ಸಮಸ್ಯೆಗಳಾಗಿರುತ್ತದೆ. ಒಬ್ಬ ಶಿಕ್ಷಕನು ತನ್ನದೇ ಆದ ನೆಲೆಯಲ್ಲಿ ಶಿಕ್ಷಣವನ್ನು ಧಾರೆ ಎರೆಯುತ್ತಾನೆ. ಸಮಯಾನುಸಾರವಾಗಿ ಶಿಕ್ಷಕನಿಗೆ ಬೇಕಾಗಿರುವ ಬೋಧನೆಯ ಪಾಠ ಕ್ರಮಗಳಲ್ಲಿ ಆಧುನಿಕ ಮತ್ತು ಸಾಮಾಜಿಕವಾದ ಅಂಶಗಳನ್ನು ಅವಲಂಬಿಸಿದೆ. ಸಮಾಜದಲ್ಲಿ ಬದುಕುವ ದಾರಿಯು ತುಂಬಾ ಕಠಿಣವಾಗಿರುವುದರಿಂದ ಶಿಕ್ಷಕನು ತನ್ನದೇ ಆದಂತಹ ಮಾನಸಿಕ ಹಿಂಸೆಗೆ ಒಳಗಾಗುತ್ತಾನೆ. ಸಮಾಜದಲ್ಲಿನ ಕೆಲವೊಂದು ರಾಷ್ಟ್ರೀಯ ಕಲಾಶಿಬಿರಗಳನ್ನು ಆಧರಿಸಿ ತನ್ನ ಜೀವನಾರ್ಥಕ್ಕೆ ಶಿಬಿರಗಳಲ್ಲಿ ಭಾಗವಹಿಸಿ ಅಲ್ಲಿನ ಜೀವನಾಧಾರಕ್ಕೆ ಬೇಕಾಗುವ ಆರ್ಥಿಕ ನೆರವನ್ನು ಪಡೆದುಕೊಳ್ಳುವುದಕ್ಕೆ ಶಿಕ್ಷಕನ ಒಂದು ನಡೆಯಾಗಿರುತ್ತದೆ. ಕೆಲವು ಶಿಕ್ಷಕರು ಅನೇಕ ವರ್ಷಗಳಿಂದ ಚಿತ್ರ ಕಲಾಶಿಕ್ಷಣದ ಬೋಧನೆಗಳಿಂದ ಆರ್ಥಿಕ ನೆರವಾಗುವಲ್ಲಿ ಹಿಂದುಳಿಯುತ್ತ ಸಮಾಜದಲ್ಲಿನ ಜನಸಾಮಾನ್ಯರಿಗೆ ತನ್ನ ಕುಂಚಗಳಲ್ಲಿ ಚಿತ್ರಿಸುತ್ತಾ ಅವುಗಳ ಪ್ರದರ್ಶನಗಳಿಂದ ಬರುವ ಪುರಸ್ಕಾರ ಮತ್ತು ಆರ್ಥಿಕ ನೆಲೆ, ಸಾಮಾಜಿಕ ಗೌರವ ಇವೆಲ್ಲವನ್ನು ಈಗಿನ ಆಧುನಿಕ ದಿನಗಳಲ್ಲಿ ಕಲಾಶಿಕ್ಷಕನಿಗೆ ಜೀವನ ಒಂದು ದಾರಿದೀಪವಾಗಿದೆ.

ಕೆಲವೊಂದು ಕಾಲೇಜುಗಳಲ್ಲಿ ಪ್ರಾಯೋಗಿಕ ವಿಷಯಗಳು ವಿದ್ಯಾರ್ಥಿಗಳಿಗೆ ಹೇಳಬೇಕಾದ ಸಂದರ್ಭ ಬಂದಾಗ ಶಿಕ್ಷಕರು ಹೇಳುವಂತಹ ವಿಷಯದ ಬಗ್ಗೆ ಸಂಪೂರ್ಣವಾಗಿ ತಿಳಿದು ಕೊಂಡಿರಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ಹೇಳುವಂತಹ ವಿಷಯದ ಬಗ್ಗೆ ಸರಿಯಾದ ಮಾಹಿತಿ ಯನ್ನು ತಿಳಿದುಕೊಳ್ಳದೇ ಬೋಧನೆ ಮಾಡುವುದು ಹೇಗೆ? ಇಂತಹ ಶಿಕ್ಷಣವನ್ನು ನೀಡುವಂತಹ ಅಥವಾ ಹೇಳುವಂಥದ್ದನ್ನು ವಿದ್ಯಾರ್ಥಿಗಳು ಹೇಗೆ ಅರ್ಥ ಮಾಡಿಕೊಳ್ಳಬೇಕು?

ಚಿತ್ರಕಲಾ ಶಾಲೆಗಳಲ್ಲಿ ವಿಷಯವನ್ನು ಬೋಧಿಸುವ ಜೊತೆಗೆ ಇನ್ನೂ ಹಲವು ಅನ್ಯ ವಿಷಯಗಳ ಜ್ಞಾನವನ್ನು ತಿಳಿದುಕೊಂಡಿರುವಂತಹ ಪ್ರತಿಭಾವಂತ ಮೇಧಾವಿ ಶಿಕ್ಷಕರು ಇರುತ್ತಾರೆ. ಆದರೆ ಕಲಾಶಾಲೆಗಳಲ್ಲಿ ಅವರನ್ನು ಗೌರವಯುತವಾಗಿ ಬಳಸಿಕೊಳ್ಳುವುದಿಲ್ಲ. ಅವರಿಗೆ ಕೆಲಸಕ್ಕೆ ತಕ್ಕಂತಹ ಸಂಬಳವನ್ನು ನೀಡುವುದಿಲ್ಲ. ಇವರು ಈ ಒಂದೇ ಕೆಲಸವನ್ನು ನಂಬಿಕೊಂಡಿರುತ್ತಾರೆ. ಅವರು ತಮ್ಮ ಜೀವನವನ್ನು ನಡೆಸುವುದಾದರೂ ಹೇಗೆ? ಈ ಒಂದು ಕಾರಣದಿಂದಾಗಿ ಚಿತ್ರಕಲಾ ಶಿಕ್ಷಕ ಅಥವಾ ಉಪನ್ಯಾಸಕರಾದವರು ಕಾಲೇಜಿನ ಅವಧಿಯಲ್ಲಿ ಮತ್ತಿತರ ಬೇರೆ ಬೇರೆ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡು ಬದುಕ ಬೇಕಾದ ಅನಿವಾರ್ಯತೆಯಿದೆ. ಈ ರೀತಿಯಾದ ಒಂದು ಕಲಾಶಿಕ್ಷಣವನ್ನು ನೀಡಿದರೆ ಮುಂದಿನ ವಿದ್ಯಾರ್ಥಿಗಳ ಭವಿಷ್ಯದ ಗತಿಯೇನು? ಇಂತಹ ವಾತಾವರಣದಲ್ಲಿ ಕಲಿತು ಬಂದವರು ಮುಂದಿನ ದಿನಗಳಲ್ಲಿ ಕಲಿಸುವಂತಹ ಶಿಕ್ಷಕರಾದರೆ ಅವರಿಂದ ಕಲಿಯುವಂತಹ ವಿದ್ಯಾರ್ಥಿಗಳ ಗತಿಯೇನು? ಇಡೀ ಪೀಳಿಗೆಯೇ ಹಾಳಾಗಿ ಹೋಗುತ್ತದೆ. ಹೀಗೆ ಹಲವಾರು ಸಮಸ್ಯೆಗಳು ನಮ್ಮ ಎದುರಿಗೆ ಬಂದು ನಿಲ್ಲುವಂತಾಗಿವೆ.

ಸರ್ಕಾರದಿಂದ ಅನುಮೋದನೆಗೊಂಡು ಸರ್ಕಾರದ ಸಂಬಳವನ್ನು ಪಡೆದುಕೊಳ್ಳುತ್ತಿರುವಂತಹ ಕಲಾಶಾಲೆಯ ಶಿಕ್ಷಕರುಗಳು ಶಾಲೆಯಲ್ಲಿ ವಿದ್ಯಾರ್ಥಿಗಳಿಲ್ಲದೆ ಖಾಲಿ ಕುಳಿತಿರುವುದನ್ನು ಕಾಣುತ್ತೇವೆ. ಇನ್ನೂ ಕೆಲವು ಕಲಾಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದರೂ ಸಹ ಶಾಲೆಗೆ ಬರುವ ವಿದ್ಯಾರ್ಥಿಗಳಿಗಿಂತ ಶಿಕ್ಷಕರುಗಳ ಸಂಖ್ಯೆ ಹೆಚ್ಚಾಗಿ ಇರುವುದನ್ನು ಕಾಣುತ್ತೇವೆ. ಈ ನಿಟ್ಟಿನಲ್ಲಿ ಹೆಚ್ಚುವರಿ ಇರುವಂತಹ ಶಿಕ್ಷಕರುಗಳನ್ನು ಖಾಲಿ ಇರುವಂತಹ ಕಲಾಶಾಲೆಗಳಿಗೆ ವರ್ಗಾವಣೆ ಮಾಡಬೇಕಾಗುತ್ತದೆ. ಸರ್ಕಾರಿ ಮತ್ತು ಅನುದಾನಿತ ಕಲಾಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವಂತಹ ಶಿಕ್ಷಕರುಗಳಿಗೆ ಐದಾರು ತಿಂಗಳುಗಳ ಕಾಲ ವೇತನ ಬಾರದೇ ಇದ್ದ ನಿಟ್ಟಿನಲ್ಲಿ ಅಂತಹ ಉಪನ್ಯಾಸಕರು ತಮ್ಮ ಜೀವನವನ್ನು ನಡೆಸುವುದಾದರೂ ಹೇಗೆ? ಈ ಕಾರಣದಿಂದಾಗಿ ಬಿಡುವಿನ ವೇಳೆಯಲ್ಲಿ ಬೇರೆ ಬೇರೆ ಕೆಲಸಗಳನ್ನು ಹಿಡಿದುಕೊಂಡು ಅವರು ತಮ್ಮ ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಕೆಲವೊಂದು ಕಲಾಶಾಲೆಗಳಲ್ಲಿ ನುರಿತ ಮತ್ತು ಅನುಭವ ಹೊಂದಿದ್ದಂತಹ ಉಪನ್ಯಾಸಕರಿದ್ದರೂ ಕೂಡ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತಹ ಸರಿಯಾದ ಪಠ್ಯಪುಸ್ತಕಗಳಿಲ್ಲದಿರುವುದು. ಇಂದಿನ ಚಿತ್ರಕಲಾ ಶಿಕ್ಷಕರಿಗೆ ದೊಡ್ಡ ಸಮಸ್ಯೆಯಾಗಿದೆ. ಹೀಗೆ ಒಂದಲ್ಲ ಒಂದು ಸಮಸ್ಯೆ ಶಿಕ್ಷಕರು ಅಥವಾ ಉಪನ್ಯಾಸಕರುಗಳನ್ನು ಕಾಡುತ್ತಿರುವುದನ್ನು ಗಮನಿಸಬಹುದಾಗಿದೆ.

ಕಲಾ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವಂತಹ ಉಪನ್ಯಾಸಕರುಗಳು ಅವಧಿ ಮುಗಿದು ನಿವೃತ್ತಿಯಾದರೂ ಸಹ ಖಾಲಿ ಇರುವಂತಹ ಹುದ್ದೆಗೆ ಮತ್ತೊಬ್ಬ ಚಿತ್ರಕಲಾ ಉಪನ್ಯಾಸಕರನ್ನು ಸೇರಿಸಿಕೊಳ್ಳದೇ ಇರುವುದರಿಂದ ಆ ಚಿತ್ರಕಲಾ ಶಾಲೆಯಲ್ಲಿನ ಮಕ್ಕಳಿಗೆ ತೊಂದರೆಯಾಗುತ್ತದೆ. ಏಕೆಂದರೆ ವಿದ್ಯಾರ್ಥಿಗಳಿಗೆ ಸರಿಯಾದ ರೀತಿಯಲ್ಲಿ ಶಿಕ್ಷಕರ ನಿಯೋಜನೆ ಇಲ್ಲ. ಆದರೆ ಎಲ್ಲಾ ತರಗತಿಗಳಿಗೆ ಒಬ್ಬ ಶಿಕ್ಷಕರೇ ಎಲ್ಲವನ್ನು ಬೋಧಿಸುವುದಕ್ಕಾಗುವುದಿಲ್ಲ. ಇದರಿಂದ ಚಿತ್ರಕಲಾ ಶಿಕ್ಷಕನಿಗೆ ತೊಂದರೆಯಾಗುತ್ತದೆ. ಇದಲ್ಲದೆ ವಿದ್ಯಾರ್ಥಿಗಳಿಗೂ ಸಮಸ್ಯೆಯಾಗುತ್ತಿರುವುದನ್ನು ನೋಡುತ್ತೇವೆ.

ಇನ್ನು ಕೆಲವು ಚಿತ್ರಕಲಾ ಶಾಲೆಗಳಲ್ಲಿ ಹೆಸರಿಗೆ ಹಲವಾರು ಶಿಕ್ಷಕರಿದ್ದರೂ ಚಿತ್ರಕಲಾ ಶಾಲೆಯಲ್ಲಿ ಒಬ್ಬ ಶಿಕ್ಷಕರೇ ಕೆಲವು ಗಂಟೆಗಳ ಕಾಲ ಶಾಲೆಯನ್ನು ತೆರೆದು ನಂತರ ಮುಚ್ಚಿಕೊಂಡು ಹೋಗುವಂತಹದ್ದನ್ನು ಗಮನಿಸಬಹುದು. ಇದರಿಂದಾಗಿ ಪ್ರಾಚಾರ್ಯರನ್ನು ಹೊರತುಪಡಿಸಿ ಉಳಿದ ಎಲ್ಲಾ ಚಿತ್ರಕಲಾ ಶಿಕ್ಷಕರುಗಳಿಗೆ ಇಂತಹ ಶಾಲೆಗಳಲ್ಲಿ ಸಮಸ್ಯೆಗಳಾಗುವುದನ್ನು ಕಾಣಬಹುದು.

ಪೂರ್ಣಕಾಲಿಕ ಉಪನ್ಯಾಸಕರ ಕೊರತೆ: ಕರ್ನಾಟಕದ ಅನೇಕ ಕಲಾಶಾಲೆಗಳಲ್ಲಿ ಉಪನ್ಯಾಸಕರು ಅನೇಕ ವರ್ಷಗಳಿಂದ ದುಡಿಯುತ್ತಿದ್ದರೂ ಪೂರ್ಣಕಾಲಿಕ ಉಪನ್ಯಾಸಕರನ್ನು ನೇಮಿಸಿ ಕೊಂಡಿರುವುದಿಲ್ಲ. ಅನೇಕರು ಇದೇ ರೀತಿ ಕೆಲಸ ಮಾಡಿ ನಿವೃತ್ತಿಯನ್ನು ಪಡೆದಿರುವುದನ್ನು ಕಾಣಬಹುದು. ಇದರಿಂದ ಅವರಿಗೆ ಬರುವಂತಹ ಸಂಬಳವೂ ಕಡಿಮೆಯಿರುತ್ತದೆ. ಸರಿಯಾದ ಸಮಯಕ್ಕೆ ಸಂಬಳವೂ ಆಗುವುದಿಲ್ಲ. ಇದರಿಂದ ಕೆಲವರು ಆ ಉದ್ಯೋಗವನ್ನು ಬಿಟ್ಟು ಹೋಗುತ್ತಾರೆ. ಕಲಾಶಾಲೆಯಲ್ಲಿದ್ದು ಅವರು ನಿವೃತ್ತಿ ಹೊಂದಿದ್ದರೂ ಕೂಡ ಖಾಲಿ ಇರುವಂತಹ ಜಾಗಗಳಿಗೆ ಅಥವಾ ಹುದ್ದೆಗಳಿಗೆ ಹೊಸದಾಗಿ ಮತ್ತೊಬ್ಬರನ್ನು ನೇಮಿಸಿಕೊಳ್ಳುವುದಿಲ್ಲ. ಇದರಿಂದಾಗಿ ಕಲಾಶಾಲೆಗಳಲ್ಲಿ ಉಪನ್ಯಾಸಕ ಹುದ್ದೆಗಳು ಖಾಲಿಯಿರುವುದನ್ನು ನೋಡುತ್ತೇವೆ. ಆರ್ಥಿಕ ತೊಂದರೆ ಕಾರಣವೋ ಅಥವಾ ತಾತ್ಕಾಲಿಕವಾಗಿ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದೋ ಅನಿವಾರ್ಯವಾಗಿ ಅರೆಕಾಲಿಕ ಉಪನ್ಯಾಸಕರನ್ನು ನೇಮಿಸಿಕೊಳ್ಳುತ್ತಾರೆ.

ಸಿದ್ಧಾಂತ ಪತ್ರಿಕೆ ಬೋಧಿಸುವ ಉಪನ್ಯಾಸಕರ ಕೊರತೆ: ಯಾವುದೇ ಒಂದು ವಿಷಯಕ್ಕೆ ಸಂಬಂಧಿಸಿದ ಹಾಗೆ ಒಂದೊಂದು ವಿಷಯದಲ್ಲೂ ಪರಿಣಿತರಿರುತ್ತಾರೆ. ಉದಾ:- ಕನ್ನಡ, ಇಂಗ್ಲೀಷ್, ಹಿಂದಿ ಮತ್ತು ಗಣಿತ ಇತ್ಯಾದಿ ವಿಷಯಗಳು. ಆದರೆ ನಮ್ಮ ಚಿತ್ರಕಲೆಯಲ್ಲಿ ಎಲ್ಲ ಉಪನ್ಯಾಸಕರು ಪ್ರಾಯೋಗಿಕವಾದಂತಹ ವಿಷಯಗಳನ್ನು ಬೋಧಿಸುತ್ತಿದ್ದಾರೆ. ಕಲಾಶಿಕ್ಷಣ ಪಡೆಯುತ್ತಿರುವಂತಹ ವಿದ್ಯಾರ್ಥಿಗಳಿಗೆ ಕಲಾ ಇತಿಹಾಸ ವಿಷಯದ ಬಗ್ಗೆ ಪ್ರತ್ಯೇಕವಾದಂತಹ ಅಧ್ಯಯನಗಳು ನಡೆದಿರುವುದಿಲ್ಲ. ನಮ್ಮ ಕರ್ನಾಟಕದ ಕೆಲವು ಚಿತ್ರಕಲಾ ಶಾಲೆಗಳನ್ನು ಬಿಟ್ಟರೆ ಉಳಿದಂತೆ ಎಲ್ಲಿಯೂ ಸಿದ್ಧಾಂತ ಪತ್ರಿಕೆ ಬೋಧಿಸುವ ಉಪನ್ಯಾಸಕರು ಇಲ್ಲದಂತಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಸಿದ್ಧಾಂತ ಪತ್ರಿಕೆಯ ಅಧ್ಯಯನಕ್ಕೆ ದೊಡ್ಡ ಸಮಸ್ಯೆಯಾಗಿದೆ.

ವಿದ್ಯಾರ್ಥಿಗಳ ಪಠ್ಯಕ್ರಮ ಸರಿಯಾದ ರೀತಿಯಲ್ಲಿ ಅಳವಡಿಸಿದರೂ ಕೂಡ ಉಪನ್ಯಾಸಕರಿಗೆ ತರಬೇತಿಯನ್ನು ಕೊಡದೆ ಕಂಗಾಲಾಗುತ್ತಿರುವುದು. ಹೊಸದಾಗಿ ಮಾಡಿದಂತಹ ಪಠ್ಯಕ್ರಮ ತರಬೇತಿಯನ್ನು ನೀಡಿದೆಯಾದರೂ ಚಿತ್ರಕಲಾ ಶಾಲೆಯ ಪ್ರತಿಯೊಬ್ಬ ಉಪನ್ಯಾಸಕರಿಗೂ ತರಬೇತಿ ಮುಟ್ಟಿಲ್ಲದಂತಾಗಿದೆ. ಕೆಲವೊಂದು ಉಪನ್ಯಾಸಕರು ಇದರ ಪ್ರಯೋಜನವನ್ನು ಪಡೆದಿದ್ದರೂ ಇನ್ನುಳಿದಂತಹ ಹಲವಾರು ಉಪನ್ಯಾಸಕರುಗಳು ಹೊಸ ಪಠ್ಯಕ್ರಮ ತರಬೇತಿಯಿಂದ ವಂಚಿತರಾಗಿ ಕಂಗಾಲಾಗುತ್ತಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ಚಿತ್ರಕಲಾ ಉಪನ್ಯಾಸಕರುಗಳು ಬೇರೆಯವರ ಕಲಾ ಪ್ರದರ್ಶನಗಳನ್ನು ನೋಡದಿರುವುದು ಹಾಗೂ ಸಮಕಾಲೀನ ಸಂದರ್ಭದಲ್ಲಿನ ಕಲೆಯ ವಿಕಾಸದ ಬದಲಾವಣೆಗಳ ಬಗ್ಗೆ ತಿಳಿದುಕೊಳ್ಳುವಂತಹ ಆಸಕ್ತಿಗಳಿಲ್ಲದಿರುವುದನ್ನು ಕಾಣುತ್ತೇವೆ.

ಸಂಸ್ಥಾಪಕರಿಂದ, ಮುಖ್ಯಸ್ಥರಿಂದ ಅನಗತ್ಯ ಕಿರುಕುಳ: ಕಲಾಶಾಲೆಯಲ್ಲಿ ಬೋಧನೆ ಮಾಡುತ್ತಿರುವಂತಹ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಕಲಿಸಿಕೊಡಲು ಹೋಗುತ್ತಿರುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಸಂಸ್ಥಾಪಕರು ಬೇರೆ ಕೆಲಸ ಮಾಡುವಂತೆ ಹೇಳುತ್ತಾರೆ. ಅವರು ಹೇಳಿದ ಕಾರ್ಯವನ್ನು ಮಾಡದಿದ್ದರೆ ಯಾವುದೋ ಒಂದು ಕಾರಣವನ್ನು ಹೇಳಿ ಕಲಾಶಾಲೆಯಿಂದ ಹೊರಹಾಕುತ್ತಾರೆ. ಮುಖ್ಯಸ್ಥರು ಹೇಳಿದಂತೆ ಉಪನ್ಯಾಸಕರು ಕೇಳಬೇಕಾಗುತ್ತದೆ. ತರಗತಿಗಳ ಪಾಠ ಬೋಧನೆಯಾಗಿರಬಹುದು. ಕಲಾಶಾಲೆಯ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತಿರ ಬಹುದು. ಅವರು ಹೇಳಿದಂತಹ ಕೆಲಸವನ್ನು ಮಾಡದಿದ್ದರೆ ಅನಧಿಕೃತವಾಗಿ ತೊಂದರೆ ಕೊಡುವುದನ್ನು ಕೆಲವು ಕಲಾಶಾಲೆಗಳಲ್ಲಿ ಗಮನಿಸಬಹುದಾಗಿದೆ.

ಉಪನ್ಯಾಸಕರ ನೇಮಕಾತಿ: ಉಪನ್ಯಾಸಕರಿಲ್ಲದ ಕಲಾಶಾಲೆ ದೇವರಿಲ್ಲದ ಗುಡಿಯಿದ್ದಂತೆ. ಶಿಕ್ಷಕರ ಹುದ್ದೆ ಎಲ್ಲೆಲ್ಲಿ ಖಾಲಿ ಇದೆಯೋ ಅವೆಲ್ಲವನ್ನು ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಬೇಕು. ಅಂತೆಯೇ ಯಾವ ಶಾಲೆಯಲ್ಲಿ ಯಾವುದೇ ಉಪನ್ಯಾಸಕ ನಿವೃತ್ತಿಯಾದರೆ, ಆ ನಿವೃತ್ತಿಯಾದ ದಿನವೇ ಅವರ ಜಾಗಕ್ಕೆ ಮತ್ತೊಬ್ಬ ಹೊಸ ಉಪನ್ಯಾಸಕರನ್ನು ನೇಮಕಾತಿ ಯಾಗುವಂತೆ ಮಾಡಬೇಕು. ಈ ಪದ್ಧತಿಯು ಸರ್ಕಾರಿ ಕಲಾಶಾಲೆಗಳಿಗಷ್ಟೇ ಅಲ್ಲ, ಅನುದಾನಿತ ಹಾಗೂ ಅನುದಾನರಹಿತ ಕಲಾಶಾಲೆಗಳಿಗೂ ವಿಸ್ತರಿಸಬೇಕೆಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ.

ಈ ಎಲ್ಲ ಸಮಸ್ಯೆಗಳು ಶೀಘ್ರದಲ್ಲಿ ಬಗೆಹರಿಯಲು ಸಾಧ್ಯವಿಲ್ಲ ಎಂಬ ಸತ್ಯ ಎಲ್ಲರಿಗೂ ತಿಳಿದಿದೆ. ಆದರೆ ಒಂದೊಂದಾಗಿ ಸಮಸ್ಯೆಗಳನ್ನು ಬಗೆಹರಿಸುತ್ತ ಹೋಗುವ ಸಂಕಲ್ಪ ಇಂದು ಎಲ್ಲರೂ ಮಾಡಬೇಕಾದುದು ತುರ್ತು ಇದೆ ಎಂಬುದನ್ನು ಮನಗಾಣಬೇಕಿದೆ.

ಕೊನೆ ಟಿಪ್ಪಣಿಗಳು

೧. ಅನಂತನ್ ವಿ.ಆರ್., ರಾಮಕೃಷ್ಣಪ್ಪ ಎಂ.(ಸಂ), **ಶಿಕ್ಷಣ ಭಾರತಿ,** ಸುವರ್ಣ ಮಹೋತ್ಸವ ಸ್ಮರಣೆ ಸಂಚಿಕೆ, ೨೦೧೨, ಪು. ೫೩.

೨. ಕೃಷ್ಣಯ್ಯ ಎಂ.ಎಚ್.(ಸಂ), **ಕಲೆ ಮತ್ತು ರಸಾಸ್ವಾದನೆ,** ೧೯೮೯, ಪು. ೧.

೩. ಅನಂತನ್ ವಿ.ಆರ್., ರಾಮಕೃಷ್ಣಪ್ಪ ಎಂ.(ಸಂ), **ಶಿಕ್ಷಣ ಭಾರತಿ,** ಸುವರ್ಣ ಮಹೋತ್ಸವ ಸ್ಮರಣೆ ಸಂಚಿಕೆ, ೨೦೧೨, ಪು. ೫೩.

೪. ಅಕ್ಕಿ ಟಿ.ಪಿ., **ಕರ್ನಾಟಕ ರಾಜ್ಯ ಕಲಾಶಿಕ್ಷಣ ಅಭಿವೃದ್ಧಿ(ಲೇಖನ),** ೧೯೮೨, ಪು. ೧೫.

೫. ಅನಂತನ್ ವಿ.ಆರ್., ರಾಮಕೃಷ್ಣಪ್ಪ ಎಂ.(ಸಂ), **ಶಿಕ್ಷಣ ಭಾರತಿ,** ಸುವರ್ಣ ಮಹೋತ್ಸವ ಸ್ಮರಣೆ ಸಂಚಿಕೆ, ೨೦೧೨, ಪು. ೨೩.

೬. ಅದೇ, ಪು. ೨೩.

೭. ವೀರಭದ್ರಪ್ಪ ವಿ.ಬಿ.(ಸಂ), **ಶಿಕ್ಷಣ ಮತ್ತು ಸಂಸ್ಕೃತಿ,** ಪು. ೧೧-೧೨.

೮. ಅದೇ, ಪು. ೧೨.

೯. ಮಂಜುನಾಥ ಕೆ. ಮಾನೆ., **ಚಿತ್ರಕಲಾ ಶಿಕ್ಷಣ,** ೨೦೦೧, ಪು. ೨೪.

೧೦. ಅದೇ, ಪು. ೨೪.

೧೧. ಎಂ.ಎಸ್. ತಳವಾರ, **ಕರ್ನಾಟಕದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ,** ಪು. ೫೨.

೧೨. ಕನ್ನಡ ಪ್ರಭ, ಮಂಗಳವಾರ, ದಿನಾಂಕ ೧೦-೦೧-೨೦೧೨.

೧೩. ಪರಶುರಾಮ ಸಿ.(ಸಂ), **ದೃಶ್ಯ ಬೆಳಕು,** ೨೦೧೫, ಪು. ೩.

೧೪. ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ದಿನಾಂಕ ೨೯-೦೧-೨೦೦೩.

೧೫. ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ದಿನಾಂಕ ೨೯-೦೫-೨೦೦೩.

೧೬. ಕರ್ನಾಟಕ ಸರ್ಕಾರ ನಡಾವಳಿಗಳು, ದಿನಾಂಕ ೨೦-೧೧-೨೦೦೦.

೧೭. ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ದಿನಾಂಕ ೩೧-೧೦-೨೦೦೧.

೧೮. ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ದಿನಾಂಕ ೨೮-೧೨-೨೦೦೨.

೧೯. ಕರ್ನಾಟಕ ಸರ್ಕಾರ, ದಿನಾಂಕ ೨೧-೦೩-೨೦೦೯.

೨೦. ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ದಿನಾಂಕ ೧೮-೦೩-೨೦೦೯.

೨೧. ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ದಿನಾಂಕ ೦೧-೦೬-೨೦೧೫.

೨೨. ಕರ್ನಾಟಕ ರಾಜ್ಯ ಚಿತ್ರಕಲಾ ಪದವೀಧರರ ಸಂಘ, ಕೇರಾಫ್ ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು, ದಿನಾಂಕ ೦೬-೦೨-೨೦೧೭.

೨೩. ವಾರ್ತಾಪತ್ರಿಕೆ, ಗದಗ, ದಿನಾಂಕ ೧೯-೧೨-೨೦೧೮.

೨೪. ಕರ್ನಾಟಕ ಸರ್ಕಾರ, ದಿನಾಂಕ ೧೭-೧೧-೨೦೦೬.

೨೫. ಕರ್ನಾಟಕ ಸರ್ಕಾರದ ನಡಾವಳಿಗಳು, ದಿನಾಂಕ ೧೫-೦೩-೨೦೧೬.

೨೬. ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ದಿನಾಂಕ ೦೬-೧೧-೨೦೦೪.

೨೭. ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ದಿನಾಂಕ ೧೪-೦೧-೨೦೦೩.

೨೮. ಅನಂತನ್ ವಿ.ಆರ್., ರಾಮಕೃಷ್ಣಪ್ಪ ಎಂ.(ಸಂ), **ಶಿಕ್ಷಣ ಭಾರತಿ,** ಸುವರ್ಣ ಮಹೋತ್ಸವ ಸ್ಮರಣೆ ಸಂಚಿಕೆ, ೨೦೧೨, ಪು. ೫೩.

೨೯. ಅದೇ, ಪು. ೫೩.

❖❖❖

ಅಧ್ಯಾಯ : ಐದು

ದೃಶ್ಯಕಲಾ ಶಿಕ್ಷಣದ ಸವಾಲುಗಳು/ ಪರಿಹಾರೋಪಾಯಗಳು

ಅಧ್ಯಾಯ : ಐದು

ದೃಶ್ಯಕಲಾ ಶಿಕ್ಷಣದ ಸವಾಲುಗಳು/ ಪರಿಹಾರೋಪಾಯಗಳು

"ಒಂದು ಭಿತ್ತಿದ ಬೀಜ ಸಸಿಯಾಗಿ ಬೆಳೆದು ದೊಡ್ಡ ಮರವಾಗಿ ಬೆಳೆಯಬೇಕಾದರೆ ಇದಕ್ಕೆ ಫಲವತ್ತತೆಯಿಂದ ಕೂಡಿದಂತಹ ನೆಲವಿರಬೇಕು. ಅದಕ್ಕೆ ತಕ್ಕಂತೆ ಸಾರಸತ್ವ ಬೇಕು, ಸೂರ್ಯನ ಬೆಳಕು ಬೇಕು ಮತ್ತು ಅದಕ್ಕೆ ಪೂರಕವಾದ ವಾತಾವರಣವಿರಬೇಕು. ನಮ್ಮ ಕಲೆಯ ಹುಟ್ಟು ಸಹ ಈ ರೀತಿಯಾಗಿಯೇ ಇದೆ. ಜೀವನದ ಪ್ರಮುಖವಾದಂತಹ ಅನುಭವವೇ ಅದರ ಪಾಲಿನ ಪರಮ ಬೀಜ".[೧] ಈ ಕಲೆ ಎಂಬ ಬೀಜವು ಕಲಾವಿದನ ಮನವೆಂಬ ಫಲವತ್ತಾದ ಕ್ಷೇತ್ರದಲ್ಲಿ ಶಾಂತಿ ಸಮಾಧಾನ ಒದಗಿದಾಗ, ಜ್ಞಾನ ಪೋಷಣೆ ದೊರೆತಾಗ ಅಂತರಂಗದಲ್ಲಿ ಹುದುಗಿದ ಅನುಭವದ ಈ ಕಲಾಬೀಜ ಮೊಳಕೆಯೊಡೆದು, ಜೀವತಾಳಿ ಸಸಿಯಾಗಿ, ಗಿಡವಾಗಿ ಬೆಳೆದು ವಿಶ್ವದ ವಿಶಾಲ ವೃಕ್ಷವಾಗುತ್ತದೆ ಇದೇ ಕಲೆ.

ನಮ್ಮ ದೃಶ್ಯಕಲಾ ಶಿಕ್ಷಣದ ಇಂದಿನ ವ್ಯವಸ್ಥೆಯು ಅವ್ಯವಸ್ಥೆಯ ಆಗರವಾಗಿದೆ. ಈ ರೀತಿಯ ಅವ್ಯವಸ್ಥೆಯಿಂದ ಕೂಡಿರುವ ಸವಾಲುಗಳ ಹಿಂದೆ ಹೋಗುವುದೆಂದರೆ ಬಹಳ ಕಷ್ಟಕರವಾದಂತಹದ್ದು. "ಒಂದು ಸವಾಲಿನ ಹಿಂದೆ ಬೆನ್ನತ್ತಿ ಹೋದರೆ ಮತ್ತೊಂದು ಸವಾಲು ಎದುರಾಗುತ್ತಿರುವುದನ್ನು ನೋಡುತ್ತೇವೆ. ಈ ರೀತಿಯಾದ ಒಂದು ಜಾಡನ್ನು ಪ್ರಯತ್ನಿಸುತ್ತಲೇ ಇರಬೇಕಾಗುವುದು ಅನಿವಾರ್ಯ".[೨] ಕರ್ನಾಟಕದಲ್ಲಿ ದೃಶ್ಯಕಲಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸರಕಾರ ನಡೆಸುವಂತಹ ಕಲಾಶಾಲೆಗಳು ಒಂದೆಡೆಯಾದರೆ ಖಾಸಗಿ ಕಲಾಶಾಲೆಗಳು ಮತ್ತೊಂದೆಡೆಯಾಗಿವೆ. ಮತ್ತೆ ಖಾಸಗಿ ಶಾಲೆಗಳಲ್ಲಿ ಅನುದಾನಿತ ಮತ್ತು ಅನುದಾನ ರಹಿತ ಸಂಸ್ಥೆಗಳು ಇರುವಂತಹದ್ದನ್ನು ನಾವು ನೋಡುತ್ತೇವೆ. ಕರ್ನಾಟಕದ ಕೆಲವು ಖಾಸಗಿ ಕಲಾಶಾಲೆಗಳು ಯಾವ ರೀತಿ ಇವೆ ಎಂದರೆ, ಹಣವಿರುವವರಿಂದ ಹಣವಿರುವವರಿಗಾಗಿ ನಡೆಸುತ್ತಿರುವಂತಹ ಕಲಾಶಾಲೆಗಳಾಗಿ ಈ ಕಲಾಶಾಲೆಗಳು ಪರೋಕ್ಷವಾಗಿ ವಿದ್ಯಾರ್ಥಿಗಳಲ್ಲಿ ವರ್ಗವನ್ನು ಸೃಷ್ಟಿಸುತ್ತವೆ. ಈ ಉದ್ದೇಶವೇ ಒಂದು ಪ್ರಶ್ನಾರ್ಹವಾದದ್ದು. ಪ್ರತಿಭಾವಂತರನ್ನು ಇತರರಿಂದ ಪ್ರತ್ಯೇಕಿಸಿ ವಿಶೇಷವಾದ ಶಿಕ್ಷಣವನ್ನು ಒದಗಿಸಿ ಉತ್ಕೃಷ್ಟರನ್ನು ರೂಪಿಸುತ್ತೇವೆ ಎಂದು ಹೊರಡುವ ಇವು ಅದಕ್ಕನುಸಾರವಾಗಿಯೇ ತಮ್ಮೆಲ್ಲ ವ್ಯವಸ್ಥೆಗಳನ್ನು ರೂಪಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಚಿತ್ರಕಲಾ ಶಾಲೆಗಳ ಮೇಲೆ ಈ ಸರಕಾರವು ಮಾಡುತ್ತಿರುವ. ವೆಚ್ಚದಲ್ಲಿರುವ ವ್ಯತ್ಯಾಸಗಳನ್ನು ಗಮನಿಸಬಹುದು. ಕೆಲವು ಶಾಲೆಗಳನ್ನು ಹೊರತುಪಡಿಸಿ ಸುಂದರವಾದ, ಭವ್ಯವಾದಂತಹ ಕಟ್ಟಡ, ವಿಶಾಲವಾದ ಆಟದ ಮೈದಾನ, ಕೆಲವೊಂದು ಕಡೆ ವಸತಿ ಸೌಲಭ್ಯವನ್ನು ಸಹ ಹೊಂದಿರುತ್ತವೆ. ಇನ್ನು ಕೆಲವು ಕಲಾ ಶಾಲೆಗಳು ಚಿಕ್ಕ ಕೊಠಡಿ ಹೊಂದಿರುತ್ತವೆ. ಒಟ್ಟಾರೆ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರುವುದು ಕಂಡು ಬರುತ್ತದೆ. ಇದರಿಂದಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ಅಸಮಾನತೆಯನ್ನು ಸೂಚಿಸಿದಂತಾಗುತ್ತದೆ. ಈ ಅಸಮಾನತೆಯು ಕೆಲವು ವಿಚಾರಗಳಿಗೆ ಸಂಬಂಧಿಸಿರುವುದಿಲ್ಲ. ಇದು ಕಲಾಶಾಲೆಗಳಲ್ಲಿ ನಡೆಯುತ್ತಿರುವಂತಹ ಬೋಧನಾ ವಿಧಾನದಲ್ಲಾಗಬಹುದು, ಶಿಕ್ಷಕರ ಕೊರತೆ, ಶಿಕ್ಷಕರ ಅರ್ಹತೆ, ಪಠ್ಯಕ್ರಮ, ಪಠ್ಯೇತರ, ಸಹಪಠ್ಯ ಚಟುವಟಿಕೆಗಳು ಇತ್ಯಾದಿಗಳೆಲ್ಲವುಗಳಿಗೂ ಅನ್ವಯವಾಗುತ್ತದೆ.

ಚಿತ್ರಕಲಾ ಶಾಲೆಗಳಲ್ಲಿ ಬೋಧನೆ ಮಾಡುತ್ತಿರುವಂತಹ ಕಲಾ ಶಿಕ್ಷಕರ ಅರ್ಹತೆಯ ಬಗ್ಗೆ ಹೇಳಬೇಕಾದರೆ; ಪದವಿ ಮಟ್ಟದಲ್ಲಿರುವಂತಹ ವಿದ್ಯಾರ್ಥಿಗಳಿಗೆ ಬೋಧನೆ ಮಾಡಬೇಕಾದರೆ ಶಿಕ್ಷಕರ ಅರ್ಹತೆ ಪ್ರಮುಖವಾದಂತಹ ಅಂಶವಾಗಿದೆ. ಕರ್ನಾಟಕದ ಕೆಲವು ಕಲಾಶಾಲೆಗಳಲ್ಲಿ ಅರ್ಹತೆ ಹೊಂದಿರದಿದ್ದರೂ ಸಹ ಅಂತಹ ಶಿಕ್ಷಕರು ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿರುವುದು ಕಂಡು ಬರುತ್ತದೆ. ಇನ್ನು ಪಠ್ಯವಸ್ತುವಿನ ಬಗ್ಗೆ ಹೇಳಬೇಕೆಂದರೆ ಪಠ್ಯವಸ್ತುವಿನ ತಾರತಮ್ಯವಿರುವುದು ವಿದ್ಯಾರ್ಥಿಗಳ ವ್ಯಕ್ತಿ ಭಿನ್ನತೆಯನ್ನು ಎದುರಿಸುವುದಕ್ಕಲ್ಲ, ಬದಲಿಗೆ ಭಿನ್ನಮಟ್ಟದ ವ್ಯಕ್ತಿಗಳನ್ನು ಬೆಳೆಸುವುದರ ಮೂಲಕ ಈಗಿರುವಂತಹ ಬೌದ್ಧಿಕ ಮಟ್ಟದ ವ್ಯತ್ಯಾಸಗಳನ್ನು ಸಮಾಜದ ಸ್ಥಿತಿಗಳನ್ನು ಮುಂದುವರೆಸಿಕೊಂಡು ಹೋಗುವುದಾಗಿದೆ ಎನಿಸುತ್ತದೆ.

ಶಿಕ್ಷಕರ ವೇತನದಲ್ಲಿನ ತಾರತಮ್ಯದ ದೃಷ್ಟಿಯಿಂದ ನೋಡಿದರೆ ಸಾಮಾನ್ಯ ಶಿಕ್ಷಣ ಕ್ಷೇತ್ರಕ್ಕೆ ಹೋಲಿಸಿಕೊಂಡರೆ ಉನ್ನತ ಮಟ್ಟದಲ್ಲಿ ನಡೆಯುವಂತಹ ತಾರತಮ್ಯ ನಮ್ಮ ಕಣ್ಣಿಗೆ ಗೋಚರಿಸುತ್ತದೆ. ಸರ್ಕಾರಿ ಅಥವಾ ಅನುದಾನಿತ ಕಾಲೇಜುಗಳಲ್ಲಿ ಯು.ಜಿ.ಸಿ. ಪಡೆಯುತ್ತಿರುವ ಅಧ್ಯಾಪಕರಿಗೂ, ರಾಜ್ಯ ಸರಕಾರದಲ್ಲಿ ಸೇವೆ ಸಲ್ಲಿಸುತ್ತಿರುವಂತಹ ಅಧ್ಯಾಪಕರಿಗೂ ಇವರನ್ನೊಳಗೊಂಡಂತೆ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವಂತಹ ಅಧ್ಯಾಪಕರುಗಳನ್ನು ಗಮನಿಸಬಹುದು. ಇವರುಗಳೆಲ್ಲರ ವಿದ್ಯಾರ್ಹತೆ ಒಂದೇ ಆಗಿದ್ದರೂ ಕೂಡ ಕೆಲಸ ಕಾರ್ಯಗಳು ಒಂದೇ. ಅವರ ಸ್ಥಾನಮಾನ ಒಂದೇ. ಆದರೆ ಆರ್ಥಿಕವಾಗಿ ಅಸಮಾನತೆಯಿಂದ ಕೂಡಿರುವುದರಿಂದ ಅವರ ಮಾನಸಿಕ ಸ್ಥಿತಿ ಮತ್ತು ಅವರ ವ್ಯಕ್ತಿತ್ವದ ಮೇಲೆ ಅನೇಕ ಪರಿಣಾಮಗಳು ಬೀರುತ್ತವೆ. ಇದು ಕಲಿಕೆಯ ಮಟ್ಟದ ಮೇಲೆ ಬೀರುವ ಪ್ರಭಾವದ ಪ್ರಮಾಣ ತೀವ್ರವಾದದ್ದು. ಅನುದಾನವಿಲ್ಲದಂತಹ ಚಿತ್ರಕಲಾ ಅಧ್ಯಾಪಕರುಗಳ ಸ್ಥಿತಿಗತಿಗಳನ್ನು ಪರಿಗಣಿಸಿದರೆ ಈ ಸಮಸ್ಯೆ ತಂದೊಡ್ಡುವಂತಹ ಸವಾಲುಗಳು ಮತ್ತಷ್ಟು ಕಷ್ಟಕರವೆನಿಸುತ್ತವೆ.

“ಭಾರತದ ಉದ್ದಗಲಕ್ಕೂ ಪ್ರಾದೇಶಿಕ ಅಸಮಾನತೆ ಕಾಡುತ್ತಿರುವುದು ಮತ್ತೊಂದು ಜ್ವಲಂತ ಸಮಸ್ಯೆಯಾಗಿದೆ. ರಾಜ್ಯ ರಾಜ್ಯಗಳ ನಡುವೆ, ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ,

ವಿಶ್ವವಿದ್ಯಾಲಯಗಳ ನಡುವೆ - ಹೀಗೆ ಸಮಾನವಿಲ್ಲದಂತಹ ವಿವಿಧ ಬಗೆಯ ಶೈಕ್ಷಣಿಕ ಅಂಶಗಳಿಂದ ಕೂಡಿದೆ".[೩] ಕರ್ನಾಟಕದಲ್ಲಿ ಗ್ರಾಮೀಣ ಪ್ರದೇಶದ ಚಿತ್ರಕಲಾ ಕಾಲೇಜುಗಳಲ್ಲಿ ಅಲ್ಲಿನ ಶೈಕ್ಷಣಿಕ ವಲಯಕ್ಕೆ ಸಂಬಂಧಿಸಿದಂತಹ ಎಲ್ಲಾ ವಿಷಯಗಳು ಸುಸೂತ್ರದಲ್ಲಿ ನಡೆದರೂ ಕೂಡ ನಗರ ಪ್ರದೇಶದಲ್ಲಿರುವಂತಹ ಚಿತ್ರಕಲಾ ಕಾಲೇಜುಗಳ ಶೈಕ್ಷಣಿಕ ಸ್ಥಿತಿಗತಿ ಒಂದೇ ಆಗಿದ್ದರೂ ಆ ಪ್ರಾದೇಶಿಕತೆಯನ್ನು ತೋರುತ್ತದೆ. ಪರೀಕ್ಷೆ ಮತ್ತು ಫಲಿತಾಂಶವನ್ನು ನೋಡಿದರೆ ಅವುಗಳ ನಡುವಿನ ವ್ಯತ್ಯಾಸಕ್ಕೆ ಕಾರಣವಾದ ಶಿಕ್ಷಣ ಸವಲತ್ತುಗಳು, ಶಿಕ್ಷಣದ ಕ್ರಮ ಮತ್ತು ಅದರ ಗುಣಮಟ್ಟದಲ್ಲಿ ಕಂಡುಬರುವ ವ್ಯತ್ಯಾಸಗಳು ನಮ್ಮನ್ನು ಎದೆಗುಂದುವಂತೆ ಮಾಡುತ್ತವೆ.

ಭಾರತದಲ್ಲಿ ಶಿಕ್ಷಣ ಕ್ಷೇತ್ರವು ವೇಗವಾಗಿ ಬೆಳೆಯುತ್ತಿರುವುದನ್ನು ಗಮನಿಸಬಹುದು. ಶಿಕ್ಷಣ ವ್ಯವಸ್ಥೆ ಪ್ರಸ್ತುತ ಸಂದರ್ಭದಲ್ಲಿ ಒಂದು ಮನೆಯ ಮೆಟ್ಟಿಲಿನಂತೆ ಇರುವುದು. ಪ್ರತಿಯೊಂದು ಮೆಟ್ಟಿಲೂ ತನ್ನದೇ ಆದ ಅಂತರದಿಂದ ಕೂಡಿರುತ್ತದೆ. ಪ್ರಾಥಮಿಕ, ಪ್ರೌಢ ಹಾಗೂ ಪದವಿಯನ್ನು ಪಡೆಯುತ್ತಿದ್ದಾಗ ಗ್ರಂಥಾಲಯ ಎಂದರೇನೆಂದು ತಿಳಿದಿರದ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಬಂದಾಗ ವಿದ್ಯಾರ್ಥಿಗಳು ಗ್ರಂಥಾಲಯವನ್ನು ತನ್ನ ಓದಿಗೆ ಎಷ್ಟರಮಟ್ಟಿಗೆ ಉಪಯೋಗ ವಾಗುವುದೆಂದು ಈ ಹಂತದಲ್ಲಿ ಅರಿಯಬಹುದು. ನಮ್ಮ ಕೆಲವೊಂದು ಚಿತ್ರಕಲಾ ಶಾಲೆಗಳಲ್ಲಿ ಗ್ರಂಥಾಲಯದ ವ್ಯವಸ್ಥೆ ಲಭ್ಯವಿದ್ದು, ಇನ್ನೂ ಅನೇಕ ಚಿತ್ರಕಲಾ ಶಾಲೆಗಳಲ್ಲಿ ಈ ವ್ಯವಸ್ಥೆ ಇಲ್ಲವಾಗಿದೆ. ಕೆಲವೊಂದು ಪುಸ್ತಕಗಳನ್ನು ಮಾತ್ರ ಈ ಕಲಾಶಾಲೆಗಳಲ್ಲಿ ಕಾಣಬಹುದು. ಈ ಕಲಾಶಾಲೆಗಳಲ್ಲಿ ಪ್ರತ್ಯೇಕವಾದಂತಹ ಗ್ರಂಥಾಲಯಗಳಿಲ್ಲದೆ ಇರುವುದು ವಿದ್ಯಾರ್ಥಿಗಳ ಓದಿಗೆ ತೊಂದರೆಯಾಗಿದೆ. ಹಾಗೂ ಪ್ರಚಲಿತ ವಿದ್ಯಮಾನಗಳ ಬಗ್ಗೆ ತಿಳಿಯಲು ದಿನನಿತ್ಯ ನಡೆಯುವಂತಹ ಕಲಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ನಿಯತಕಾಲಿಕೆಗಳು, ಪತ್ರಿಕೆಗಳನ್ನು ದಿನನಿತ್ಯ ಓದಿದರೆ ಪ್ರಪಂಚದಲ್ಲಾಗುತ್ತಿರುವ ಚಿತ್ರಕಲಾ ಕ್ಷೇತ್ರದ ಬೆಳವಣಿಗೆ ಕುರಿತು ಅನೇಕ ವಿಚಾರಗಳು ತಿಳಿಯುತ್ತವೆ. ಇದರಿಂದ ವಿದ್ಯಾರ್ಥಿಗಳಿಗೆ ಒಳ್ಳೆಯ ವಿಷಯಗಳು ಅರಿವಾಗುತ್ತವೆ.

"ಗುರು ಮುಖೇನವೇ ಕಲಿಯಬೇಕಾಗಿರುವ ರಾಚನಿಕ ವಿದ್ಯೆಯಾಗಿರುವ ದೃಶ್ಯಕಲೆಯನ್ನು (ಚಿತ್ರಕಲೆ ಮತ್ತು ಶಿಲ್ಪಗಳು) ದೂರಶಿಕ್ಷಣದ ಮೂಲಕ ಕಲಿಸಲಾಗಿದೆ. ಅಂದರೆ ಕೇವಲ ಪದವಿ ಪ್ರಮಾಣ ಪತ್ರಗಳನ್ನು ಹಂಚಿಕೆ ಮಾಡಲಾಗಿದೆ. ಈ ರಾಜ್ಯದಲ್ಲಿ ದೃಶ್ಯಕಲೆಯಲ್ಲಿ ಪ್ರಯೋಗಗಳನ್ನು ಮಾಡುವ ಬದಲು, ದೃಶ್ಯಕಲಾ ಶಿಕ್ಷಣ ಕ್ಷೇತ್ರದಲ್ಲಿ ಪದವೀಧರರನ್ನು ಹೆಚ್ಚು ಮಾಡುವ, ಕೇವಲ ಸರ್ಟಿಫಿಕೇಟ್‌ಗಳನ್ನು ಹಂಚುವ ಈ ತರಹದ ಪ್ರಯೋಗಗಳನ್ನು ಮಾಡಿಯಾಗಿದೆ. ಈಚೆಗೆ ಪ್ರಶಸ್ತಿ - ಪುರಸ್ಕಾರಗಳು ಹರಾಜಾಗುತ್ತಲಿವೆ ಎಂಬ ಕೂಗು ಕೇಳಿಬರುತ್ತಿದೆ. ಜಾತಿಯ ಕೊಳಕು ತೊಳೆದರೂ ಹೋಗದಷ್ಟು ಅಂಟಿಕೊಂಡು ಬಿಟ್ಟಿದೆ."[೪] ದೂರಶಿಕ್ಷಣದಲ್ಲಿ ಕಲಿಸುತ್ತಿರುವ ದೃಶ್ಯಕಲಾ ಶಿಕ್ಷಣದಿಂದಾಗಿ ವಿದ್ಯಾರ್ಥಿಗಳಿಗೆ ಸರಿಯಾದಂತಹ ಮಾರ್ಗವನ್ನು ತಪ್ಪಿಸಿದಂತಾಗಿದೆ. ಈ ರೀತಿಯ ಶಿಕ್ಷಣವು ಅಂಕಪಟ್ಟಿ ಮತ್ತು ಪ್ರಮಾಣ ಪತ್ರಕ್ಕೆ ಸೀಮಿತವಾಗಿವೆ. ಈ ರೀತಿಯಾದ ಕೋರ್ಸ್‌ಗಳಿಗೆ ಅನುಮತಿಯನ್ನು ನೀಡುವಾಗ ಆ ವಿಷಯದ ಬಗ್ಗೆ ಸಂಪೂರ್ಣವಾಗಿ

ತಿಳಿದುಕೊಂಡು, ಯಾವ ವಿಷಯವನ್ನು ದೂರಶಿಕ್ಷಣದಿಂದ ಕಲಿಸಲು ಸೂಕ್ತವೆಂಬುದನ್ನು ತಿಳಿದು ಅನುಮತಿಯನ್ನು ಕೆಲವು ಕೋರ್ಸ್‌ಗಳಿಗೆ ನೋಡಬೇಕಾಗುತ್ತದೆ. ಅದೇ ರೀತಿಯಾಗಿ ಪ್ರಶಸ್ತಿ - ಪುರಸ್ಕಾರಗಳು ಹರಾಜಾಗುತ್ತಿರುವುದನ್ನು ಪ್ರಸ್ತುತ ಸಂದರ್ಭದಲ್ಲಿ ನೀಡಬಹುದು. ಪ್ರಸ್ತುತ ಸಂದರ್ಭದಲ್ಲಿ ಮಾಡುವಂತಹ ಕೆಲಸಕ್ಕೆ ಬೆಲೆ ಇಲ್ಲದಂತಾಗಿದೆ. ಯಾಕೆಂದರೆ ಈ ಹುದ್ದೆ/ಅಧಿಕಾರಿ, ಪ್ರಶಸ್ತಿ - ಪುರಸ್ಕಾರಗಳು ಒಂದು ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿದಂತಹ ವ್ಯಕ್ತಿಗೆ ಅಥವಾ ಆ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದಂತಹ ವ್ಯಕ್ತಿಗೆ ದೊರೆಯಬೇಕಾಗುತ್ತದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಯಾವುದೇ ಕ್ಷೇತ್ರದಲ್ಲಿ ಹೆಚ್ಚು ಪರಿಣಿತ ಅಥವಾ ಸಾಧನೆ ಮಾಡದವರು ಪ್ರಶಸ್ತಿಗಳನ್ನು ಪಡೆಯುತ್ತಿರುವುದನ್ನು ನೋಡುತ್ತೇವೆ. ಸದ್ಯದ ಪರಿಸ್ಥಿತಿಯಲ್ಲಿ ಪ್ರಶಸ್ತಿ - ಪುರಸ್ಕಾರಗಳು ದೊರೆಯುತ್ತಿರುವುದು ಜಾತಿಯ ಹಿನ್ನೆಲೆಯಲ್ಲಿ. ಈ ರೀತಿಯ ಅನೇಕ ಸವಾಲುಗಳನ್ನು ಎದುರಿಸುತ್ತಿರುವುದನ್ನು ದೃಶ್ಯಕಲಾ ಕ್ಷೇತ್ರದಲ್ಲಿ ಕಾಣಬಹುದು.

"ವಾಸ್ತವವಾಗಿ ಕಲಾಶಿಕ್ಷಣ/ಶಾಲೆಗಳು ಸರ್ವರನ್ನು ಸಮಾನವಾಗಿ ಕಾಣುವ ಕಲಿಕಾ ಕೇಂದ್ರಗಳಾಗಬೇಕು. ಶಿಕ್ಷಕ ಉನ್ನತ ಧ್ಯೇಯ, ನಿಷ್ಠೆ, ಪ್ರಾಮಾಣಿಕತೆಗಳನ್ನು ರೂಢಿಸಿಕೊಂಡಿರಬೇಕು. "ಟೀಚರ್ ಈಸ್ ಎ ಫ್ರೆಂಡ್, ಫಿಲಾಸಫರ್ ಅಂಡ್ ಗೈಡ್" ಆಗಿರಬೇಕು ಎನ್ನುತ್ತೇವೆ. ಆದರೆ ಇಂತಹ ಆದರ್ಶಗಳು ಇಂದು ಅಪಮೌಲ್ಯೀಕರಣಗೊಂಡು ಅರ್ಥವಿಲ್ಲದ ಪದಗಳಾಗಿವೆ. ವಿದ್ಯಾರ್ಥಿಗಳಲ್ಲಿ ತನ್ನ ಶಿಕ್ಷಕ ಅಥವಾ ಗುರುವಿನ ಬಗ್ಗೆ ಮುಖ್ಯವಾಗಿ ಆತನ ವಿದ್ವತ್ತಿನ ಬಗ್ಗೆ ಗೌರವದ ಭಾವನೆ ಮೂಡುತ್ತಿರಬೇಕು. ಗುರುವಿನಲ್ಲೂ ಆ ತೇಜಸ್ಸು, ಓಜಸ್ಸುಗಳು ಕಾಣಬೇಕು. ಆದರೆ ಇಂತಹ ಗುರುಗಳ ಸಂಖ್ಯೆ ಈಗ ಎಷ್ಟಿದೆ? ತುಂಬಾ ವಿರಳ."[೫] ಪ್ರಸ್ತುತ ಸಂದರ್ಭದಲ್ಲಿ ಕರ್ನಾಟಕದ ಚಿತ್ರಕಲಾ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಅನೇಕ ಚಿತ್ರಕಲಾ ಶಿಕ್ಷಕರು ವಿದ್ಯಾರ್ಥಿಗಳಿಗೆ ಕಲಾ ಇತಿಹಾಸದ ಬಗ್ಗೆ ಸಂಪೂರ್ಣವಾದಂತಹ ಮಾಹಿತಿಯನ್ನು ತಿಳಿಯುವ ಹಾಗೆ ಪಾಠ ಬೋಧಿಸುತ್ತಿಲ್ಲ. ಏಕೆಂದರೆ ಈ ಕ್ಷೇತ್ರದಲ್ಲಿ ಹೆಚ್ಚು ಪ್ರಾಯೋಗಿಕ ವಿಷಯಗಳು ಇರುವುದರಿಂದ ಕಲಾ ಇತಿಹಾಸ, ಕಲಾಕ್ಷೇತ್ರಕ್ಕೆ ಸಂಬಂಧಿಸಿರುವಂತಹ ಪುಸ್ತಕಗಳನ್ನು ಓದುವ, ತಿಳಿದುಕೊಳ್ಳುವ, ಹೊಸ ಹೊಸ ವಿಚಾರಗಳನ್ನು ತಿಳಿದುಕೊಳ್ಳುವಂತಹ ಗೋಜಿಗೆ ಹೋಗುತ್ತಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ಕಲಾಶಿಕ್ಷಣದ ಇತಿಹಾಸವನ್ನು ಅರಿಯುವುದು ಕಷ್ಟಸಾಧ್ಯ. ಇದು ಒಂದು ನಮ್ಮ ಕ್ಷೇತ್ರದಲ್ಲಿ ದೊಡ್ಡ ಸವಾಲಾಗಿ ನಿಂತಿರುವಂತಹ ಅಂಶವಾಗಿದೆ.

"ದೃಶ್ಯಕಲೆಯ ಆಳ ಅಗಲಗಳನ್ನು ಅರಿಯದ ವಿದ್ಯಾರ್ಥಿಗಳನ್ನು ಅಧ್ಯಯನಮುಖಿಯಾಗಿ ಬೆಳೆಸುವ ಬದಲಾಗಿ ಪ್ರದರ್ಶನಮುಖಿಯಾಗಿ ಕೆಲವು ಕಲಾಶಿಕ್ಷಕರು ಬೆಳೆಸುತ್ತಿರುವರು. ಪ್ರದರ್ಶನಗಳಲ್ಲೂ ಕಲಾಕೃತಿಗಳ ಮಾರಾಟವೇ ಮುಖ್ಯ ಉದ್ದೇಶವೆಂದೇ ಮಕ್ಕಳ ತಲೆಯಲ್ಲಿ ತುಂಬುತ್ತಿರುವರು. ಕಲಾಕೃತಿಗಳ ಮಾರಾಟವನ್ನು ತಪ್ಪು ಎಂದು ಹೇಳಲಾಗದು. ಆದರೆ ಕಲಾಶಿಕ್ಷಣ ಪ್ರಕ್ರಿಯೆಯಲ್ಲಿ ಇದು ಸಾಧುವೇ ಎಂಬುದು ಪ್ರಶ್ನೆ."[೬] ಎಸ್.ಎಸ್.ಎಲ್.ಸಿ. ಮುಗಿಸಿ

ಕೊಂಡು ಚಿತ್ರಕಲಾ ಶಿಕ್ಷಣವನ್ನು ಪಡೆವ ಬಯಸುವಂತಹ ವಿದ್ಯಾರ್ಥಿಗಳಿಗೆ ಚಿತ್ರಕಲಾ ಶಿಕ್ಷಣ ಇತಿಹಾಸದ ಬಗ್ಗೆ ಅರಿವು ಮೂಡಿಸದೇ ಬರಿ ಕಲಾಕೃತಿಯ ರಚನೆ ಮತ್ತು ಕಲಾಕೃತಿಯ ಮಾರಾಟದ ದೃಷ್ಟಿಯನ್ನಿಟ್ಟುಕೊಂಡು ಕಲಾಶಿಕ್ಷಣವನ್ನು ನೀಡುತ್ತಿರುವುದನ್ನು ಕಾಣಬಹುದು.

ಕರ್ನಾಟಕದ ಕಲಾಕ್ಷೇತ್ರದಲ್ಲಿ ಒಂದು ವಿಚಿತ್ರ ಸ್ಥಿತಿ ಉದ್ಭವವಾಗಿದೆ. ಕಲಾಶಾಲೆಗಳ ಸಂಖ್ಯೆ ಹೆಚ್ಚಿದ್ದರೂ ಬಂದು ಸೇರುವಂತಹ ವಿದ್ಯಾರ್ಥಿಗಳು ನಗರ ಪ್ರದೇಶದಲ್ಲಿ ಹೆಚ್ಚು. ಆದರೆ ಗ್ರಾಮೀಣ ಪ್ರದೇಶದಲ್ಲಿ ತೀರ ಕಡಿಮೆ ಎಂದು ಹೇಳಬಹುದು. "ಪ್ರತಿವರ್ಷವೂ ತಮ್ಮ ಕೋರ್ಸ್‌ಗಳನ್ನು ಮುಗಿಸಿ ಹೊರಬರುತ್ತಿದ್ದಾರೆ. ಹೀಗೆ ಅಭ್ಯಾಸ ಮುಗಿಸಿ ಪದವಿ/ಡಿಪ್ಲೋಮಾ ಮುಗಿಸಿ ಹೊರಬರುತ್ತಿರುವ ನೂರಾರು ಜನ ಕಲಾವಿದರಿಗೆ ಕೆಲಸ ಎಲ್ಲಿಂದ ದೊರಕಿತು ಎಂದು ಯಾರೂ ಪ್ರಶ್ನಿಸಿಕೊಂಡಿಲ್ಲ."[೬] ಪದವಿ/ಡಿಪ್ಲೋಮಾ ಪದವಿಯನ್ನು ಮುಗಿಸಿದವರ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಎಲ್ಲಿಯೂ ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಹೀಗೆಲ್ಲ ಆದರೆ ಪದವಿ/ಡಿಪ್ಲೋಮಾ ಮುಗಿಸಿದವರ ಗತಿಯೇನು? ಸರ್ಕಾರವು ಇವರ ಬಗ್ಗೆ ಕಾಳಜಿ ವಹಿಸಿ ವೃಂದ ಮತ್ತು ನೇಮಕಾತಿಯೊಳಗೆ ಸೇರ್ಪಡೆಗೊಳಿಸುವುದು ಒಂದು ದೊಡ್ಡ ಸವಾಲಾಗಿದೆ.

ಇಂದಿನ ಶಿಕ್ಷಣದಲ್ಲಿ ನಾನಾ ಬಗೆಯ ವಿಶ್ವವಿದ್ಯಾಲಯಗಳು ಇರುವುದರಿಂದ ಕಲಾಶಿಕ್ಷಣದಲ್ಲಿ ಸಂಶೋಧನೆ ಹಾಗೂ ಕಲಾವಿದರ ಶೈಕ್ಷಣಿಕ ಮಟ್ಟ ಬೆಳೆಯಬೇಕಾದರೆ ಲಲಿತಕಲಾ ವಿಶ್ವವಿದ್ಯಾಲಯ ಅತ್ಯಾವಶ್ಯಕವಾಗಿ ಬೇಕಾಗುತ್ತದೆ. ಈಗಾಗಲೇ ಲಲಿತಕಲಾ ವಿಶ್ವವಿದ್ಯಾಲಯ ಸ್ಥಾಪನೆಗೆ ಬಾಗಲಕೋಟೆ ಜಿಲ್ಲೆಯ ಬಾದಾಮಿ ಸಮೀಪ ಖ್ಯಾಡ ಎಂಬ ಗ್ರಾಮದಲ್ಲಿ ಸುಮಾರು ೪೩೦ ಎಕರೆ ಜಮೀನನ್ನು ಗುರುತಿಸಿದ್ದು, ಈಗಾಗಲೇ ೨೦೧೩ರಿಂದ ೨೦೧೮ರವರೆಗೆ ಒಟ್ಟು ೧ ಕೋಟಿ ೧೯ ಲಕ್ಷ ರೂ.ಗಳನ್ನು ಈಗಾಗಲೇ ಖರ್ಚು ಮಾಡಲಾಗಿದೆ. ಇಷ್ಟೆಲ್ಲ ಪೂರ್ವಭಾವಿ ಕೆಲಸಗಳಾಗುತ್ತಿದ್ದರೂ ಇನ್ನೂ ವಿಶ್ವವಿದ್ಯಾಲಯದ ಕೆಲಸ ನಿಧಾನಗತಿಯಲ್ಲಿ ಸಾಗುತ್ತಿರುವುದನ್ನು ನಾವು ಕಾಣಬಹುದು. ಲಲಿತಕಲಾ ವಿಶ್ವವಿದ್ಯಾಲಯ ಬೇಗ ಆಗಬೇಕು, ಕರ್ನಾಟಕ ಕಲಾಶಿಕ್ಷಣದಲ್ಲಿ ಆಗಿರುವಂತಹ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ಲಲಿತಕಲಾ ವಿಶ್ವವಿದ್ಯಾಲಯ ಸ್ಥಾಪನೆ ಆಗಬೇಕೆಂಬುದು ಸರ್ವವಿಧಿತ.

ನಮ್ಮ ಕನ್ನಡ ನಾಡಿನಲ್ಲಿ ಚಿತ್ರಕಲಾ ಶಿಕ್ಷಣ ಪಡೆದವರು ಹಾಗೂ ಹೊರರಾಜ್ಯದಲ್ಲಿ ಹೋಗಿ ಅಲ್ಲಿ ಚಿತ್ರಕಲಾ ಶಿಕ್ಷಣವನ್ನು ಪಡೆದವರು ಅನೇಕರಿದ್ದಾರೆ. ಹೆಚ್ಚಿನ ವಿದ್ಯಾಭ್ಯಾಸ ಪಡೆದವರು ಸಾಹಿತಿಗಳಾಗಿ, ಕಲಾವಿದರಾಗಿ, ಕಲಾ ವಿದ್ವಾಂಸರುಗಳಾಗಿ, ಹಲವಾರು ಪುಸ್ತಕಗಳನ್ನು, ಲೇಖನಗಳನ್ನು ಬರೆದು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅಷ್ಟೆಲ್ಲ ಆಗಿದ್ದರೂ ನಮ್ಮ ಚಿತ್ರಕಲಾ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ದೃಷ್ಟಿಯಿಂದ ಪಠ್ಯ ಪುಸ್ತಕಗಳನ್ನು ರಚನೆ ಮಾಡುವುದು ಕರ್ನಾಟಕ ದಲ್ಲಿರುವಂತಹ ಕಲಾ ವಿದ್ವಾಂಸರಿಗೆ ಒಂದು ಸವಾಲಾಗಿರುವುದನ್ನು ಕಾಣಬಹುದು.

ಪರಿಹಾರೋಪಾಯಗಳು

ಕರ್ನಾಟಕದಲ್ಲಿನ ಪ್ರಾಥಮಿಕ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಚಿತ್ರಕಲಾ ಶಿಕ್ಷಕರನ್ನು ಒಂದುಗೂಡಿಸಿ, ಜಿಲ್ಲಾ ಮಟ್ಟದಲ್ಲಿ, ತಾಲೂಕು ಮಟ್ಟದಲ್ಲಿ ಅವರುಗಳಿಗೆ ಅಲ್ಪಾವಧಿಯಲ್ಲಿ ಕಲಾಶಿಕ್ಷಣಕ್ಕೆ ಸಂಬಂಧಿಸಿದಂತೆ ಪಾಠ ಹೇಳುವಂತಹ ತರಬೇತಿಯನ್ನು ನೀಡಬೇಕು. ಇದೇ ರೀತಿಯ ಮೂರು ತಿಂಗಳು ಇಲ್ಲವೇ ಆರು ತಿಂಗಳಿಗೊಂದು ಸಾರಿ ಇಂತಹ ತರಬೇತಿಯನ್ನು ಸುಮಾರು ವರ್ಷಗಳ ಕಾಲ ನಡೆಸಿದಲ್ಲಿ ಅನೇಕ ಚಿತ್ರಕಲಾ ಶಿಕ್ಷಕರು ತರಬೇತಿಯು ಲಾಭ ಪಡೆದು ತಮ್ಮ ವಿದ್ಯಾರ್ಥಿಗಳಿಗೂ ತಿಳುವಳಿಕೆ ನೀಡಲು ಸಾಧ್ಯವಾಗುತ್ತದೆ.

ಪ್ರಾಥಮಿಕ ಶಾಲೆಗಳಲ್ಲಿ ತರಬೇತಿ ಪಡೆದಂತಹ ಚಿತ್ರಕಲಾವಿದರನ್ನು ನೇಮಿಸಿಕೊಳ್ಳಬೇಕು ಮತ್ತು ಇತರೆ ವಿಷಯಗಳಂತೆ ಚಿತ್ರಕಲಾ ವಿಷಯವನ್ನು ಎಲ್ಲ ಮಟ್ಟದಲ್ಲಿಯೂ ವಾರ್ಷಿಕ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಜಾರಿಗೆ ತರಬೇಕು.

ಪ್ರಾಥಮಿಕ ಶಾಲೆಯ ವೇಳಾಪಟ್ಟಿಯಲ್ಲಿ ಕಲಾ ಅಭ್ಯಾಸವನ್ನು ಕಡ್ಡಾಯವಾಗಿ ಕಲಿಸುವಂತೆ ಮಾಡಬೇಕು.

ಸಮಸ್ಯೆಗಳಿಲ್ಲದ ಕ್ಷೇತ್ರ ಯಾವುದೂ ಇಲ್ಲ. ಅದರಲ್ಲೂ ದೃಶ್ಯಕಲಾ ಶಿಕ್ಷಣ ಸಮಸ್ಯೆಗಳ ಆಗರವಾಗಿದೆ ಎಂಬುದು ಎಲ್ಲರಿಗೂ ಮನವರಿಕೆಯಾಗಿರುವ ಸಂಗತಿಯಾಗಿದೆ. ಆದರೆ ಆ ಸಮಸ್ಯೆಗಳು ಯಾವ ಕಾಲಕ್ಕೂ ಪರಿಹಾರವಾಗುವುದಿಲ್ಲ ಎಂದುಕೊಳ್ಳುವುದು ತಪ್ಪು. ದೂರದೃಷ್ಟಿ, ಸಮಾಲೋಚನೆ, ಚರ್ಚೆ ಮೊದಲಾದ ಕ್ರಮಗಳಿಂದ ಹಂತ ಹಂತವಾಗಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ. ಆದರೆ ಸಂಬಂಧಪಟ್ಟವರಲ್ಲಿನ ಇಚ್ಛಾಶಕ್ತಿಯು ಮುಖ್ಯವಾಗಿ ಇರಬೇಕಾಗುತ್ತದೆ. ಕಲಾಕ್ಷೇತ್ರವಾಗಲಿ, ಕಲಾಶಾಲೆಯಾಗಲಿ ಇವುಗಳ ಬೆಳವಣಿಗೆಯಾಗಬೇಕಾದರೆ ಕಲಾಶಾಲೆಯಲ್ಲಿರುವಂತಹ ಪ್ರತಿಯೊಬ್ಬರೂ ಕೂಡ ಕಲೆಯ ಮೌಲ್ಯಕ್ಕೆ ಒತ್ತುಕೊಟ್ಟು ಕೆಲಸ ಮಾಡಿದರೆ ಮಾತ್ರ ಅಭಿವೃದ್ಧಿಯಾಗುತ್ತದೆ. ಇದನ್ನು ತಿಳಿದುಕೊಂಡು ಪ್ರಾಚಾರ್ಯರು ಎಲ್ಲರೊಂದಿಗೆ ಸಹಮತದಿಂದ ಇರಬೇಕಾಗುತ್ತದೆ. ಇಲ್ಲದಿದ್ದರೆ ಕಲಾಶಾಲೆಯಲ್ಲಿ ಸಮಸ್ಯೆ ಉದ್ಭವವಾಗುತ್ತದೆ.

ಕಲಾಶಿಕ್ಷಣದ ಗುರಿ ಎಂದರೆ ಕಲಿಯಲು ಬಂದ ವಿದ್ಯಾರ್ಥಿಗಳು, ಉಪಾಧ್ಯಾಯರು ಹೇಳಿದಂತೆ ಕೇಳಬೇಕಾಗುತ್ತದೆ. ಅಂದಾಗ ಮಾತ್ರ ಕಲಾಶಾಲೆಯನ್ನು ಉನ್ನತವಾಗಿ ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ. ಆಧುನಿಕ ಯುಗದಲ್ಲಿ ಪ್ರತಿಯೊಬ್ಬ ವ್ಯಕ್ತಿಯಲ್ಲಿ ನೈತಿಕ, ಭಾವನಾತ್ಮಕ, ಸಾಮಾಜಿಕ, ಶೈಕ್ಷಣಿಕ, ಕಲಾತ್ಮಕ ವಿಕಾಸವನ್ನುಂಟುಮಾಡುವುದು ಉತ್ತಮವಾದಂತಹ ಅಂಶಗಳಾಗಿವೆ. ವಿಚಾರವಂತರನ್ನಾಗಿ ಮಾಡುವುದು ಅಗತ್ಯವಿದೆ. ತನ್ನ ಭಾವನೆಗಳ ಅಭಿವ್ಯಕ್ತಿಗೆ ಸ್ವಾತಂತ್ರ್ಯ ನೀಡಬೇಕಾಗುತ್ತದೆ. ಇದರೊಂದಿಗೆ ಮನುಷ್ಯನಲ್ಲಿ ಸೌಂದರ್ಯ ಪ್ರಜ್ಞೆ ಮೂಡಿಸಬೇಕಾಗುತ್ತದೆ. ಕಷ್ಟಕರವಾದಂತಹ ವಿಷಯಗಳನ್ನು ಸರಳೀಕರಿಸಿ ತಿಳಿಹೇಳಬೇಕಾಗುತ್ತದೆ. ಇದರಿಂದ ಸರಳವಾಗಿ ಸುಲಲಿತ ರೀತಿಯಿಂದ ದೃಶ್ಯಕಲೆ ಕಲಿಕೆ ಸಾಧ್ಯವಾಗುತ್ತದೆ.

ಒಂದು ಚಿತ್ರಕಲಾ ಸಂಸ್ಥೆಯು ಉತ್ತಮವಾಗಿ ನಡೆದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತಹ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡರೆ ಮಾತ್ರ ಒಂದು ಉತ್ತಮ ಸಂಸ್ಥೆಯಾಗಿ ಬೆಳೆಯುತ್ತದೆ. ಚಿತ್ರಕಲಾ ಸ್ಪರ್ಧೆಗಳನ್ನು ಕೈಗೊಳ್ಳಬೇಕು. ಜೊತೆಗೆ ಕಲಾ ಪ್ರದರ್ಶನ, ಕಲಾ ಪ್ರಾತ್ಯಕ್ಷಿಕೆ, ಚಿತ್ರಕಲಾ ಉಪನ್ಯಾಸ, ಕಲಾಶಿಬಿರ, ಶೈಕ್ಷಣಿಕ ಕಲಾ ಪ್ರವಾಸ, ಕಲಾಮೇಳ, ಚಿತ್ರಸಂತೆ ಕಲೆಗೆ ಸಂಬಂಧಿಸಿದಂತೆ ಕ್ವಿಜ್ ಈ ರೀತಿಯಾಗಿ ಅನೇಕ ಕಾರ್ಯಕ್ರಮಗಳನ್ನು ಪ್ರತಿಯೊಂದು ಕಲಾಶಾಲೆಯಲ್ಲಿ ಮಾಡಬೇಕಾಗುತ್ತದೆ.

ಎಲ್ಲಾ ಕಲಾಶಾಲೆಗಳು ಒಗ್ಗಟ್ಟಿನಿಂದ ಒಬ್ಬರ ನಾಯಕತ್ವದಲ್ಲಿ ಮುಂದುವರೆದು ದೃಶ್ಯಕಲಾ ಶಿಕ್ಷಣದ ಜೊತೆಗೆ ಕ್ಯಾಂಪಸ್ ಉದ್ಯೋಗ ಮೇಳಗಳನ್ನು ಎಲ್ಲಾ ಕಾಲೇಜಿನ ಅಧ್ಯಾಪಕರುಗಳು ಸೇರಿ ಆಯೋಜನೆ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಗೊಂದಲಗಳಿಗೆ ಅಂತ್ಯ ಹೇಳಬೇಕು. ಆಗ ಮಾತ್ರ ಕಲಾಶಿಕ್ಷಣ ಪಡೆದವರಿಗೆ ಮತ್ತು ಕಲಾವಿದರಿಗೆ ಉದ್ಯೋಗ ದೊರೆತು ಬದುಕಿನ ಆಧಾರವಾಗುವ ಭರವಸೆ ಬಂದಾಗ ಕಲೆಯ ಬೆಳವಣಿಗೆ ಸಾಧ್ಯ.

ಪಠ್ಯಕ್ರಮ, ಪರೀಕ್ಷೆ, ಫಲಿತಾಂಶಗಳ ಸುಧಾರಣೆ, ಪದವಿ ಶಿಕ್ಷಣದ ನಿಯಮಾವಳಿಗಳು ಸುಧಾರಣೆಯಾಗಬೇಕಾದರೆ ತಮ್ಮದೇಯಾದ ಲಲಿತಕಲಾ ವಿಶ್ವವಿದ್ಯಾಲಯದ ಸ್ಥಾಪನೆಯಾಗಿ ಏಕರೂಪದ ಪಠ್ಯ, ಪರೀಕ್ಷೆ ಮತ್ತು ಮೌಲ್ಯಮಾಪನವಾದರೆ ಸರಿಯಾದ ಉತ್ತರವೆಂದು ಹಲವರ ಅಭಿಪ್ರಾಯವಾಗಿದೆ.

ಪ್ರತಿಯೊಂದು ಕಲಾಶಾಲೆಯಲ್ಲಿ ಒಂದು ಪ್ರತ್ಯೇಕವಾದ ಪುಟ್ಟ ಗ್ರಂಥಾಲಯವಿರಬೇಕು. ನಮ್ಮ ವಿಷಯಕ್ಕೆ ಸಂಬಂಧಿಸಿದಂತಹ ಪುಸ್ತಕಗಳ ಜೊತೆಗೆ ಚಿತ್ರಕಲೆಗೆ ಪೂರಕವಾದಂತಹ ವಿಷಯಗಳಿರುವ ಪುಸ್ತಕಗಳಿರಬೇಕು. ಎಲ್ಲಾ ಕಲಾಶಾಲೆಗಳಲ್ಲಿ ಗ್ರಂಥಾಲಯ ಪ್ರತ್ಯೇಕವಾದಂತಹ ಕೊಠಡಿಗಳಾಗಬೇಕು. ಕಲಾಶಿಕ್ಷಣಕ್ಕೆ ತಕ್ಕಂತೆ ಪುಸ್ತಕಗಳಿರಬೇಕು. ಆ ಗ್ರಂಥಾಲಯಗಳಿಗೆ ಪ್ರತ್ಯೇಕ ವಾದಂತಹ ಗ್ರಂಥಪಾಲಕರನ್ನು ನೇಮಕ ಮಾಡಬೇಕು.

ದೃಶ್ಯಕಲಾ ಶಾಲೆ/ಕಾಲೇಜುಗಳು ಯು.ಜಿ.ಸಿ. ನಿಯಮದಂತೆ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆಯಲು ವಿಧಿಸುವ ಷರತ್ತುಗಳಿಗೆ ಒಳಪಡಬೇಕು. ಮೂಲಭೂತ ಸೌಕರ್ಯ, ಕೊಠಡಿ, ಶೈಕ್ಷಣಿಕ ಅರ್ಹತೆಯ ಅಧ್ಯಾಪಕರು, ಗ್ರಂಥಾಲಯ ಮತ್ತು ಗಣಕ ಯಂತ್ರಗಳು, ಅಂತರ್ಜಾಲ ಮುಂತಾದ ಸೌಕರ್ಯ ಕಲ್ಪಿಸುವಂತಾಗಬೇಕು. ವಿಶೇಷವಾಗಿ ಗ್ರಂಥಾಲಯದಲ್ಲಿ ಕಲಾ ಶಿಕ್ಷಣಕ್ಕೆ ಪೂರಕವಾಗಿ ಪ್ರಕಟವಾಗುವ ಪತ್ರಿಕೆ, ನಿಯತಕಾಲಿಕೆ ಮುಂತಾದವು ಪೂರೈಕೆಯಾದಲ್ಲಿ ವಿದ್ಯಾರ್ಥಿಗಳು ಇವುಗಳನ್ನು ಬಳಸಿಕೊಂಡು ಪರಿಪೂರ್ಣ ವ್ಯಕ್ತಿತ್ವ ಹೊಂದಿ ಸಫಲತೆ ಕಂಡುಕೊಳ್ಳುವಂತಾಗುತ್ತದೆ. ಪ್ರಸ್ತುತದಲ್ಲಿ ಲಭ್ಯವಿರುವ ಅವಕಾಶಗಳನ್ನು ಶಿಕ್ಷಕರು ಪಟ್ಟಿ ಮಾಡಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ ಬೆಳೆಸುವಂತಹ ವಾತಾವರಣ ಸೃಷ್ಟಿಸಬೇಕು.

ಕನ್ನಡ ವಿಶ್ವವಿದ್ಯಾಲಯದ ಅಡಿಯಲ್ಲಿ ನಡೆಯುತ್ತಿರುವಂತಹ ಕಲಾಶಾಲೆಗಳಿಗೆ ಚಿತ್ರಕಲಾ ಮಹಾವಿದ್ಯಾಲಯಗಳ ನಿರ್ವಹಣಾ ಕೇಂದ್ರದಿಂದ ಆ ಗ್ರಂಥಾಲಯಗಳಿಗೆ ಪುಸ್ತಕಗಳನ್ನು

ವಿತರಿಸಲಾಗಿದೆ. ಗಣಕಯಂತ್ರ, ಛಾಯಾಪ್ರತಿ ಯಂತ್ರಗಳನ್ನು ಕೊಟ್ಟು ಒಂದು ಸಣ್ಣದಾದ ಸಮಸ್ಯೆಯನ್ನು ಬಗೆಹರಿಸಿದಂತಾಗಿದೆ. ಇದರಿಂದಾಗಿ ಹಲವಾರು ವಿದ್ಯಾರ್ಥಿಗಳಿಗೆ ಅನುಕೂಲ ವಾದಂತಾಗಿದೆ. ಆದರೆ ಕೆಲವು ಕಲಾಶಾಲೆಗಳಲ್ಲಿ ಅಧ್ಯಾಪಕರು, ಆಡಳಿತ ಮಂಡಳಿಗಳು, ತಮ್ಮ ಸ್ವಂತ ಸಂಪಾದನೆಯ ಲಾಭಕ್ಕಾಗಿ ಮಾತ್ರ ಬಳಸಿಕೊಳ್ಳುತ್ತಿರುವುದು ವಿಷಾದನೀಯ.

ವಿದ್ಯಾರ್ಥಿಗಳ ಸಂಖ್ಯೆಯ ಕೊರತೆಯಿರುವಂತಹ ಕಲಾಶಾಲೆಗಳನ್ನು ರದ್ದುಗೊಳಿಸುವುದು. ಕಲಾಶಾಲೆಗಳಲ್ಲಿ ದಾಖಲಾಗಿರುವಂತಹ ವಿದ್ಯಾರ್ಥಿಗಳ ಸಂಖ್ಯೆ ಕರ್ನಾಟಕದ ಕೆಲವು ಕಲಾಶಾಲೆಗಳಲ್ಲಿ ಕಡಿಮೆಯಾಗುತ್ತಿರುವುದು ಕ್ಷೇತ್ರಕಾರ್ಯದಿಂದ ಬೆಳಕಿಗೆ ಬಂದಿದೆ. ಕೆಲವು ಕಲಾಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿದ್ದರೆ ಬೇರೆ ಬೇರೆ ಕಡೆ ಕೆಲಸ ಮಾಡುವಂತಹ ವಿದ್ಯಾರ್ಥಿಗಳಿಂದ ದಾಖಲಾತಿ ಮಾಡಿಸಿ, ಇಂಥವರನ್ನು ಆಂತರಿಕ ವಿದ್ಯಾರ್ಥಿಯೆಂದು ತೋರಿಸುವುದು ಹಲವು ಶಾಲೆಗಳವರು ಮಾಡುವುದುಂಟು. ಹಾಗಾಗಿ ಕಲಾಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೆ ಅಂತಹ ಕಲಾಶಾಲೆಗಳ ಮಾನ್ಯತೆ ಎರಡು ಅಥವಾ ಮೂರು ವರ್ಷದ ಅವಧಿ ನೀಡಿ ನಂತರ ಸರಿಹೋಗದಿದ್ದಲ್ಲಿ ರದ್ದುಗೊಳಿಸಿದರೆ ಉತ್ತಮ.

ಒಬ್ಬರೇ ಉಪನ್ಯಾಸಕರಿರುವಂತಹ ಕಲಾಶಾಲೆಗಳನ್ನು ರದ್ದುಗೊಳಿಸುವುದು ಅವಶ್ಯ: ಕರ್ನಾಟಕದ ಕೆಲವೊಂದು ಕಲಾಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಿದ್ದರೂ ಕಲಾಶಾಲೆಗಳಲ್ಲಿ ಒಬ್ಬರೇ ಉಪನ್ಯಾಸಕರಿರುವುದನ್ನು ಕಾಣುತ್ತೇವೆ. ಇದರಿಂದಾಗಿ ಎಲ್ಲಾ ತರಗತಿಯ ವಿದ್ಯಾರ್ಥಿಗಳಿಗೆ ಪಾಠ ಬೋಧನೆಯ ಸಂದರ್ಭದಲ್ಲಿ ಕಷ್ಟವಾಗುತ್ತದೆ. ಸರಕಾರದಲ್ಲಿ ವಿದ್ಯಾರ್ಥಿ ಮತ್ತು ಅಧ್ಯಾಪಕರ ಅನುಪಾತದಡಿಯಲ್ಲಿ ಕಲಾಶಾಲೆ ನಡೆಸುವುದು ಎಂಬ ನಿಯಮದಡಿಯಂತೆ ಅದನ್ನು ಬಿಗಿಗೊಳಿಸಿ ಒಬ್ಬರೇ ಉಪನ್ಯಾಸಕರಿರುವ ಶಾಲೆಯನ್ನು ರದ್ದುಗೊಳಿಸಬೇಕು.

ಕಲಾಶಾಲೆಗಳಲ್ಲಿ ಸಾಮರ್ಥ್ಯ ಮತ್ತು ತರಬೇತಿ ಹೊಂದಿದಂತಹ ಉಪನ್ಯಾಸಕರನ್ನು ನೇಮಿಸುವುದು. ಯು.ಜಿ.ಸಿ. ನಿಯಮಾವಳಿಯಡಿಯಲ್ಲಿ ಮುಂದುವರಿಸಿಕೊಂಡು ಅದಕ್ಕೆ ತಕ್ಕ ಅಧ್ಯಾಪಕರನ್ನು ನೇಮಕ ಮಾಡಿಕೊಳ್ಳಬೇಕು.

ಕಲಾಶಾಲೆಗಳಲ್ಲಿನ ಉಪನ್ಯಾಸಕರ ಸಾಮರ್ಥ್ಯದ ಬಗ್ಗೆ ಹೇಳುವುದಾದರೆ ಕಲಾಶಾಲೆಗಳಲ್ಲಿ ಉಪನ್ಯಾಸ ಮಾಡುವಂಥವರು ಅದರ ಬಗ್ಗೆ ತರಬೇತಿ ಹೊಂದಿ ಎಲ್ಲ ವಿಷಯಗಳನ್ನು ತಿಳಿದುಕೊಂಡಿರಬೇಕಾಗುತ್ತದೆ. ಕರ್ನಾಟಕದ ಅನೇಕ ಕಲಾಶಾಲೆಗಳಲ್ಲಿ ಕಲಾಶಾಲೆಯ ಶಿಕ್ಷಕರುಗಳಿಗೆ ಅಥವಾ ಉಪನ್ಯಾಸಕರಿಗೆ ತರಬೇತಿ ನೀಡದೆ ಕೆಲವು ಶಿಕ್ಷಕರು ಬೋಧನೆ ಮಾಡುತ್ತಿರುವುದನ್ನು ಕಾಣಬಹುದು. ಇಲ್ಲಿ ಮುಖ್ಯವಾಗಿ ಪ್ರಾಯೋಗಿಕವಾದಂತಹ ವಿಷಯಗಳಿದ್ದರೂ ಸಹ ಒಬ್ಬ ಉಪನ್ಯಾಸಕನಿಗೆ ಕಲಾಶಾಲೆಗಳಲ್ಲಿ ಪಾಠ ಮಾಡುವ ಸಾಮರ್ಥ್ಯದ ಜೊತೆಗೆ ಉತ್ತಮ ತರಬೇತಿಯನ್ನು ಪಡೆದವರು ಯು.ಜಿ.ಸಿ. ನಿಯಮಾನುಸಾರ ವಿದ್ಯಾರ್ಹತೆಯನ್ನು ಹೊಂದಿದವರನ್ನು ಮಾತ್ರ ಉಪನ್ಯಾಸಕರನ್ನಾಗಿ ನೇಮಕ ಮಾಡಿಕೊಳ್ಳುವುದು ಉತ್ತಮ.

ಗುಣಾತ್ಮಕವಾದಂತಹ ಶಿಕ್ಷಣ ಮತ್ತು ಪದವಿಗಳನ್ನು ನೀಡುವುದು: ಕರ್ನಾಟಕದ ಕಲಾಶಾಲೆಗಳಲ್ಲಿ ಪದವಿ ತರಗತಿಗಳನ್ನು ಆರಂಭಿಸಿದ್ದು ಎಲ್ಲರಿಗೂ ಗೊತ್ತಿರುವಂತಹ ವಿಷಯ. ಕಲಾಶಾಲೆಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಎಲ್ಲ ವಿದ್ಯಾರ್ಥಿಗಳನ್ನು ಉತ್ತೀರ್ಣ ಮಾಡಿ ಪದವಿಗಳನ್ನು ಕೊಡುತ್ತಿದ್ದಾರೆ. ಅಲ್ಲದೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕಡಿಮೆ ಅಂಕಗಳನ್ನು ನೀಡುವುದು, ಸಾಧಾರಣ ವಿದ್ಯಾರ್ಥಿಗಳಿಗೆ ಹೆಚ್ಚು ಅಂಕಗಳನ್ನು ನೀಡುವುದು ಕಂಡುಬರುತ್ತಿದೆ. ಪ್ರಭಾವಿ ವಿದ್ಯಾರ್ಥಿಗಳಿಗೆ ಮತ್ತು ಸ್ವಜನ ಪಕ್ಷಪಾತದಿಂದ, ಪ್ರತಿಭಾವಂತ ವಿದ್ಯಾರ್ಥಿಗಳು ಹೆಚ್ಚಿನ ಅಂಕ ಪಡೆಯುವಲ್ಲಿ ವಂಚಿತರಾಗುತ್ತಿದ್ದಾರೆ. ಈ ನೀತಿಯಿಂದ ಅಸಮಾನತೆ ಹೆಚ್ಚಾಗಿ ಕಷ್ಟಪಟ್ಟು ಓದಿದಂತಹ ವಿದ್ಯಾರ್ಥಿಗೆ ಅನ್ಯಾಯವಾಗುತ್ತದೆ. ಅಲ್ಲದೆ ಉನ್ನತ ಶಿಕ್ಷಣಕ್ಕೆ ಕಡಿಮೆ ಅಂಕಗಳನ್ನು ಪಡೆದು ಪಾಸಾದವರಿಗೆ ಪ್ರವೇಶ ಪರೀಕ್ಷೆ, ಸಂದರ್ಶನ ಇತ್ಯಾದಿಗಳನ್ನು ಮಾಡಿ ಶೇಕಡವಾರು ಅಂಕಗಳನ್ನು ಹೆಚ್ಚು ಮಾಡಿ ಪ್ರವೇಶ ನೀಡುತ್ತಾರೆ. ಇದು ಆಗಬಾರದು. ಈ ಹಿನ್ನೆಲೆಯಲ್ಲಿ ಗುಣಾತ್ಮಕವಾದಂತಹ ಪದವಿಗಳನ್ನು ನೀಡಿದರೆ ಉತ್ತಮ.

ವಿಶ್ವವಿದ್ಯಾಲಯಗಳು ಪರೀಕ್ಷಾ ಪದ್ಧತಿಯನ್ನು ಬಿಗಿಗೊಳಿಸುವುದು: ಕರ್ನಾಟಕದಲ್ಲಿರುವಂತಹ ಕಲಾಶಾಲೆಗಳಲ್ಲಿನ ಪರೀಕ್ಷಾ ಪದ್ಧತಿ ಬಿಗಿಗೊಳಿಸಬೇಕು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಯಾಕೆಂದರೆ ಪರೀಕ್ಷಾ ಪದ್ಧತಿಯನ್ನು ಬಿಗಿಗೊಳಿಸದಿದ್ದರೆ ವಿಷಯದ ಬಗ್ಗೆ ಅರಿವಿಲ್ಲದಂತಹವರೂ ಕೂಡ ಪಾಸಾಗಿ ಮುಂದೆ ಅವರಿಗೆ ತೊಂದರೆಯಾಗುವುದು. ಪ್ರತಿ ಪರೀಕ್ಷೆ ಕೇಂದ್ರದಲ್ಲಿ ಮೌಲ್ಯಮಾಪನ ರಿಜಿಸ್ಟ್ರಾರ್ ಅವರು ದೃಶ್ಯಕಲಾ ಕ್ಷೇತ್ರದವರನ್ನೇ ನೇಮಿಸುವುದು ಸೂಕ್ತ.

ಆಧುನಿಕ ಹಾಗೂ ಸಮಕಾಲೀನ ದೃಶ್ಯಕಲಾ ಬೆಳವಣಿಗೆಯ ಬಗ್ಗೆ ಉಪನ್ಯಾಸಕರುಗಳು ತಿಳಿದುಕೊಳ್ಳಬೇಕು. ಲಲಿತಕಲಾ ಅಕಾಡೆಮಿಯವರು ನಡೆಸುವಂತಹ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಟ್ರನಾಲೆ, ಬಿನಾಲೆಗಳಿಂದ ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬಬೇಕು. ಇದರಿಂದ ಕಲಾ ಪ್ರಕಾರಗಳ ಭಾವನೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಯವಾಗುತ್ತದೆ. ಕಲಾ ಪತ್ರಿಕೆಗಳಿಂದ ಪರಿಚಿತಗೊಳ್ಳುವುದರಿಂದ ಕೆಲವು ಕಲಾಕೇಂದ್ರಗಳಿಂದ ದೃಶ್ಯಕಲಾ ಇತಿಹಾಸದ ಅರಿವು ಮೂಡುತ್ತದೆ.

ಕಲಾಶಾಲೆಯ ಆರಂಭದಲ್ಲಿ ಸಂಸ್ಥಾಪಕರಾದವರು ಅಥವಾ ಪ್ರಾಚಾರ್ಯರು ಉತ್ತಮ ಶಿಕ್ಷಣ ಪಡೆದರೆ ಅದರಿಂದಾಗಬಹುದಾದಂತಹ ಲಾಭಗಳು, ಅಲ್ಲಿರುವಂತಹ ನುರಿತ ಶಿಕ್ಷಕರುಗಳ ಬಗ್ಗೆ ಶಾಲೆಯು ಆರಂಭವಾಗುವುದಕ್ಕೆ ಹಿಂದಿನ ದಿನಗಳಲ್ಲಿ ಪ್ರಚಾರವನ್ನು ಕೈಗೊಳ್ಳಬೇಕಾಗಿರುವುದು. ಇದರಿಂದ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತದೆ. ಇದರಿಂದ ಕಲಾಶಾಲೆಯೂ ಉಳಿಯುತ್ತದೆ. ಪ್ರಚಾರಕ್ಕಿಂತ ಮುಖ್ಯವಾಗಿ ವಿದ್ಯಾರ್ಥಿಗಳು ಕಲಿಯಲು ಉತ್ತಮ ವಾತಾವರಣ ನಿರ್ಮಾಣ ಮಾಡಿದರೆ ಖಂಡಿತ ಪ್ರವೇಶ ಬಯಸಿ ವಿದ್ಯಾರ್ಥಿಗಳು ಬರುತ್ತಾರೆ.

ಕಲಾಶಾಲೆಯಲ್ಲಿ ಕಲಿಯಲಿಕ್ಕೆ ಬಂದಂತಹ ವಿದ್ಯಾರ್ಥಿಗಳಲ್ಲಿ ಕೆಲವು ವಿದ್ಯಾರ್ಥಿಗಳು ಯಾವುದಾದರೂ ಕಾರಣದಿಂದ ಶಾಲೆಯನ್ನು ಬಿಟ್ಟಿರುತ್ತಾರೆ. ಇಂತಹ ಸಂದರ್ಭದಲ್ಲಿ ಆ

ವಿದ್ಯಾರ್ಥಿಗೆ ಮನವೊಲಿಸಿ ಸಂಸ್ಥೆಯ ಕಡೆಯಿಂದ ಅವನಿಗೆ ಸಹಾಯ ಮಾಡಿ ಓದಲು ತೊಡಗಿಸಬೇಕಾಗುತ್ತದೆ ಹಾಗೂ ಅವರ ಬಗ್ಗೆ ಹೆಚ್ಚಿನ ಗಮನವಹಿಸಿ ಅಭ್ಯಾಸ ಮಾಡಿಸುವುದು ಮುಖ್ಯವಾಗಿದೆ.

ಚಿತ್ರಕಲಾ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿಸಬೇಕು. ಯಾಕೆಂದರೆ ವಿದ್ಯಾರ್ಥಿಗಳಿದ್ದರೆ ಶಾಲೆ ಉಳಿಯುತ್ತದೆ. ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡ ಮೇಲೆ ಅವರಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿರುತ್ತದೆ. ಕಲಿಕೆಯ ದೃಷ್ಟಿಕೋನದ ಬಗ್ಗೆ ಹೇಳಬೇಕಾಗುತ್ತದೆ. ಇದರಿಂದಾಗಿ ಕಲಿಯಲು ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತದೆ.

ಕಲಾಶಾಲೆಗೆ ಸೂಕ್ತವಾದಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗುವುದು. ಉದಾ:- ಶಾಲೆಯ ಒಳಗೆ ವಿದ್ಯಾರ್ಥಿಗಳಿಗೆ ಕಲಿಯಲು ಅನುಕೂಲಕರವಾದಂತಹ ವಾತಾವರಣ ವಿರಬೇಕಾಗುತ್ತದೆ. ಕೊಠಡಿಯಲ್ಲಿ ಬೆಳಕಿನ, ಚಿತ್ರಕಲಾ ಉಪಕರಣಗಳನ್ನು ಇಡುವುದಕ್ಕೆ ಜಾಗ, ಮೇಜು, ನೀರಿನ ಸೌಲಭ್ಯ, ಶೌಚಾಲಯದ ಸೌಲಭ್ಯಗಳನ್ನು ಒದಗಿಸಿರಬೇಕು.

ಉಪನ್ಯಾಸಕರನ್ನು ವಿಳಂಬ ಮಾಡದೇ ನೇಮಿಸಿಕೊಳ್ಳಬೇಕು. ಪ್ರತಿಯೊಂದು ಕಲಾಶಾಲೆಯಲ್ಲಿ ಪ್ರಾರಂಭವಾದಾಗಿನಿಂದಲೂ ನಡೆದುಬಂದಂತಹದ್ದು, ಶಿಕ್ಷಕರು ಅಥವಾ ಉಪನ್ಯಾಸಕರುಗಳಿಗೆ ವಯಸ್ಸಾದ (ಸೇವಾ ನಿವೃತ್ತಿಯಾದ) ಮೇಲೆ ಅವರ ಜಾಗಕ್ಕೆ ತಕ್ಷಣ ಮತ್ತೊಬ್ಬ ಶಿಕ್ಷಕನನ್ನು ನೇಮಿಸಬೇಕಾಗುತ್ತದೆ. ಇದರಿಂದಾಗಿ ಅವರು ಹೇಳುತ್ತಿದ್ದ ಪಾಠವನ್ನು ಅವರ ಅವಧಿ ಮುಗಿದ ಮೇಲೆ ಮತ್ತೊಬ್ಬರನ್ನು ಆ ಜಾಗಕ್ಕೆ ನೇಮಕ ಮಾಡಿಲ್ಲವೆಂದರೆ ತೊಂದರೆಯಾಗುತ್ತದೆ. ಅದಕ್ಕಾಗಿ ಸೇವಾನಿವೃತ್ತಿಯಾದ ಕೂಡಲೇ ಆ ಜಾಗಕ್ಕೆ ಮತ್ತೊಬ್ಬರನ್ನು ನೇಮಿಸಬೇಕು. ಇಲ್ಲದಿದ್ದರೆ ಮಕ್ಕಳಿಗೆ ಸರಿಯಾದ ಸಮಯ ವೇಳಾಪಟ್ಟಿಯಂತೆ ತರಗತಿಯನ್ನು ನಡೆಸಲು ಸಾಧ್ಯವಾಗುವುದಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಕಲಿಸುವ ಅಧ್ಯಾಪಕರು ಇರುವುದಿಲ್ಲ ಎಂದು ಅರ್ಧಕ್ಕೆ ನಿಲ್ಲಿಸಿ ಬೇರೆ ವಿಷಯ ವಿದ್ಯಾಭ್ಯಾಸಕ್ಕೆ ಪ್ರವೇಶ ಪಡೆದುಕೊಳ್ಳುತ್ತಾರೆ.

ಕಲಾಶಿಕ್ಷಣದಲ್ಲಿ ಕಲಿಕೆಯೊಂದಿಗೆ ಗಳಿಕೆ ಹಾಗೂ ಜೀವನಮುಖಿ ಶಿಕ್ಷಣವನ್ನು ನೀಡಬೇಕು. ಕಲಿಕೆ ಆನಂದದಾಯಕವಾಗಿರುವಂತೆ ನೋಡಿಕೊಳ್ಳಬೇಕು. ಕಲಾಶಿಕ್ಷಣ ಪಡೆಯುತ್ತಿರುವಂತಹ ಹಾಗೂ ಪಡೆಯುವಂಥವರಿಗೆ ಲಾಭವೇನು ಎಂಬುದನ್ನು ಅರಿತು ಶಿಕ್ಷಣವನ್ನು ಕಲಿಯುವಾಗ ಆನಂದದಾಯಕವಾಗಿ ಕಲಿತರೆ ದೃಶ್ಯಕಲಾ ಶಿಕ್ಷಣದ ಪ್ರತಿಫಲ ದೊರೆಯುತ್ತದೆ ಎಂದು ತಿಳಿಸಿ ಅವರಿಗೆ ಶಿಕ್ಷಣವನ್ನು ನೀಡಬೇಕಾಗುತ್ತದೆ.

ಎಲ್ಲಾ ಸರ್ಕಾರಿ ಅನುದಾನಿತ ಮತ್ತು ಖಾಸಗಿಯಾಗಿ ನಡೆಸುವಂತಹ ಕಲಾಶಾಲೆಗೆ ಸವಲತ್ತುಗಳು ಸಿಗುವಂತಾಗಬೇಕು ಮತ್ತು ಕಲಾಶಿಕ್ಷಣಕ್ಕೆ ಸರ್ಕಾರದಿಂದ ಅಧಿಕ ಹಣ ಹೂಡಿಕೆ ಯಾಗಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕೆಲವು ಕಲಾ ಶಾಲೆಗಳು ಮಾತ್ರ ಸಹಾಯಧನ ಪಡೆಯುತ್ತಿವೆ. ಉಳಿದ ಕಲಾಶಾಲೆಗಳಿಗೂ ಸಹಾಯಧನ ಬರುವಂತೆ ಕ್ರಮವಹಿಸಬೇಕು.

ಗುಣಮಟ್ಟದ ಶಿಕ್ಷಣ ನೀಡುವುದು, ಶಿಕ್ಷಕರ ದಕ್ಷತೆ ಹೆಚ್ಚಿಸುವುದು, ಪಠ್ಯಕ್ರಮವನ್ನು ಜೀವನಮುಖಿಯಾಗಿಸುವುದು. ಕಲಿತ ಪದವಿಗಳನ್ನು ವೃಂದ ಮತ್ತು ನೇಮಕಾತಿಗೆ ಸೇರಿಸುವಂತಹ ಕೆಲಸ ಬಹುಮುಖ್ಯವಾಗಿ ಮಾಡಬೇಕಾದುದಾಗಿದೆ.

ವಿದ್ಯಾರ್ಥಿಗಳು ಕಾಲೇಜಿಗೆ ಬರುವಂತೆ ಮಾಡಲು ಹಲವಾರು ರೀತಿಯ ಪ್ರೋತ್ಸಾಹಗಳನ್ನು ಒದಗಿಸುವುದು ಮತ್ತು ಪಾಲಕರಲ್ಲಿ ಶಿಕ್ಷಣದ ಅಗತ್ಯದ ಬಗ್ಗೆ ಅರಿವು ಮೂಡಿಸುವುದು. ವಿದ್ಯಾರ್ಥಿಗಳು ವರ್ಷದ ಮಧ್ಯದಲ್ಲಿಯೇ ಕಲಾಶಾಲೆಯನ್ನು ಬಿಡದಂತೆ ನೋಡಿಕೊಳ್ಳುವುದು ಮತ್ತು ಅದಕ್ಕೆ ಪೂರಕವಾದಂತಹ ವಾತಾವರಣವನ್ನು ನಿರ್ಮಿಸುವುದು. ನಾಡಿನ ಸಂಸ್ಕೃತಿಯ ಅರಿವು ಮೂಡಿಸಿ, ನಾಡಿನ ಬಹುದೊಡ್ಡ ಕಲಾವಿದನಾಗಿ ಬೆಳೆಸಿ ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವಂತೆ ಕಲಾ ಶಿಕ್ಷಕರು ಶ್ರಮವಹಿಸಿ ವಿದ್ಯಾರ್ಥಿಗಳನ್ನು ಬೆಳೆಸಿದರೆ ಮಾತ್ರ ದೃಶ್ಯಕಲಾ ಶಿಕ್ಷಣಕ್ಕೆ ಮಹತ್ತರವಾದ ಮೌಲ್ಯವನ್ನು ತಂದುಕೊಡುವಂತಾಗುತ್ತದೆ.

ಇಂತಹ ಕಾರ್ಯಕ್ಕೆ ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅಕಾಡೆಮಿ, ಉನ್ನತ ಶಿಕ್ಷಣ ಇಲಾಖೆ, ಪದವಿಪೂರ್ವ ಶಿಕ್ಷಣ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮಂಡಳಿಗಳ ಸಹಕಾರ ಬಹುಮುಖ್ಯವಾಗಿದೆ. ಜೊತೆಗೆ ನಾಡಿನ ಹಿರಿಯ ಕಲಾವಿದರು, ಕಲಾ ವಿಮರ್ಶಕರು, ಕಲಾ ಸಂಶೋಧಕರು, ಕಲಾ ಇತಿಹಾಸಕಾರರು ಹಾಗೂ ಎಲ್ಲ ಕಲಾ ಶಾಲೆಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸೇರಿ ಚರ್ಚಿಸಿ, ರೂಪುರೇಷೆಗಳನ್ನು ಕಂಡುಕೊಂಡಾಗ ಮಾತ್ರ ದೃಶ್ಯಕಲಾ ಶಿಕ್ಷಣದ ಸಮಸ್ಯೆಗಳ ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಸೂಕ್ಷ್ಮವಾಗಿ ಗಮನಿಸಿದರೆ ನಮ್ಮ ಕರ್ನಾಟಕದಲ್ಲಿರುವ ಪ್ರತಿಭಾವಂತರು ಹಲವಾರು ದಶಕಗಳಿಂದ ಹೊರರಾಜ್ಯ, ದೇಶಗಳಿಗೆ ಹೋಗುತ್ತಿರುವುದನ್ನು ನೋಡಬಹುದು. ಇದು ಉಳಿದ ಕ್ಷೇತ್ರಗಳಿಗಿಂತ ನಮ್ಮ ಕ್ಷೇತ್ರದಲ್ಲಿ ಹೆಚ್ಚಾಗಿ ನೋಡಬಹುದು. ಯುವ ಕಲಾವಿದರು ಹಾಗೂ ವಿದ್ಯಾರ್ಥಿಗಳು ಒಳ್ಳೆಯ ವ್ಯಾಸಂಗ ಮತ್ತು ವೃತ್ತಿಯ ಅವಕಾಶಗಳ ಬೆನ್ನತ್ತಿ ಮುಂಬಯಿ, ಪುನಾ, ಬರೋಡ, ದೆಹಲಿ ಮುಂತಾದ ಸ್ಥಳಗಳಿಗೆ ತೆರಳುತ್ತಿರುವುದನ್ನು ಕಾಣುತ್ತೇವೆ. ಇಲ್ಲಿ ಒಂದು ಬೇಸರವಾಗುವಂತಹ ವಿಷಯವೆಂದರೆ ಎಲ್ಲರಿಗೂ ಗೊತ್ತಿರುವ ಹಾಗೆ ಕರ್ನಾಟಕವೂ ಕಲೆಗಳ ನಾಡು ಎಂಬ ಹೆಸರು ಪಡೆದರೂ ಕೂಡ ಹಲವಾರು ಕಲಾಪ್ರಕಾರಗಳನ್ನು ಗುರುತಿಸಿಕೊಂಡಿದೆ. ಆದರೂ ಕೂಡ ಪ್ರಸ್ತುತ ಸಂದರ್ಭದಲ್ಲಿ ಉತ್ತಮ ವ್ಯಾಸಂಗ ಹಾಗೂ ಉನ್ನತ ವ್ಯಾಸಂಗಕ್ಕೆ ಹೊರರಾಜ್ಯಗಳಿಗೆ ಹೋಗುವಂತಹ ಸಂಖ್ಯೆ ಕಡಿಮೆಯಾಗಿದೆ. ಯಾಕೆಂದರೆ ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲೂ ಸಹ ಉತ್ತಮವಾದ ಹಾಗೂ ಉನ್ನತ ಶಿಕ್ಷಣವನ್ನು ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಟ್ಟಿದ್ದಾರೆ. ಆದರೆ ಉದ್ಯೋಗಾವಕಾಶಗಳು ಮಾತ್ರ ಮರೀಚಿಕೆಯಾಗಿವೆ.

"ದೃಶ್ಯ ಕಲೆಯ ಶಿಕ್ಷಣ ಹಿಂದಿನಂತೆ ನಿಧಾನಗತಿಯಲ್ಲಿಲ್ಲ. ಆಧುನಿಕ ಕಲಾ ಶಿಕ್ಷಣದ ತೀವ್ರತೆ ಹೆಚ್ಚಿದೆ. ಇಂದಿನ ವಾಸ್ತವ ಸ್ಥಿತಿಯಲ್ಲಿ ಹೊಸ ಅವಿಷ್ಕಾರಗಳು, ತಂತ್ರಜ್ಞಾನಗಳು

ಗೊಂದಲ ಮೂಡಿಸಿ ಹೊಸ ಸವಾಲುಗಳನ್ನು ಸೃಷ್ಟಿ ಮಾಡುತ್ತಿವೆ. ಎಲ್ಲ ಸವಾಲುಗಳನ್ನು ಎದುರಿಸಿ ನಿಲ್ಲುವ ಸಾಮರ್ಥ್ಯ ಪ್ರಯೋಗ ಪ್ರಧಾನವಾದ ಕಲೆಯಾಗಿರುವುದರಿಂದ ಶ್ರೇಷ್ಠ ಮಟ್ಟದ ಕಲಾಕೃತಿಗಳು ರಚನೆಗೊಂಡಿವೆ.

ಕಲೆಯನ್ನು ಹೇಗೆ ಕಲಿಸಬೇಕು ಎಂಬ ವಾದವು ಪ್ರಾಥಮಿಕ ಶಾಲಾ ಶಿಕ್ಷಣದಿಂದ ವಿಶ್ವವಿದ್ಯಾಲಯದವರೆಗೆ ಚರ್ಚೆಯ ವಿಷಯವಾಗಿದೆ. ಪ್ರಾಥಮಿಕ ಮಟ್ಟದಲ್ಲಿ ವಿದ್ಯಾರ್ಥಿಗಳು ಕಲಾ ಶಿಕ್ಷಣದ ಬಗ್ಗೆ ತಳೆದಿರುವ ಮನೋಭಾವ, ಪೋಷಕರು ತಮ್ಮ ಮಕ್ಕಳ ಮೇಲೆ ತರುವ ಒತ್ತಡ ಕಲಾ ಶಿಕ್ಷಣವನ್ನು ಕಡೆಗಣಿಸುವಲ್ಲಿ ಯಶಸ್ವಿಯಾಗಿದೆ.

ಆಧುನಿಕ ದೃಶ್ಯಕಲಾ ಶಿಕ್ಷಣ ಮುಕ್ತ ವಾತಾವರಣಕ್ಕೆ ಒಳಪಟ್ಟು ಶಿಕ್ಷಣದ ವ್ಯವಸ್ಥೆ ಸಂಪೂರ್ಣವಾಗಿ ವಿದ್ಯಾರ್ಥಿ ಕೇಂದ್ರಿತವಾಗಬೇಕು. ಶಿಕ್ಷಕ ಕೇಂದ್ರಿತವಾಗಬಾರದು. ವಿದ್ಯಾರ್ಥಿಗಳ ಇಚ್ಛಾನುಸಾರ ಅವಶ್ಯಕತೆಗನುಗುಣವಾಗಿ ಕಲಾಕೃತಿ ರಚನೆಯಾಗಬೇಕು. ನಿರ್ಬಂಧಗಳಿಗೆ ಒಳಪಡದೆ, ಶೈಕ್ಷಣಿಕ ಬೆಳವಣಿಗೆಗೆ ಪೂರಕವಾಗಿ ಸವಾಲುಗಳನ್ನು ಎದುರಿಸುವ ಮನಸ್ಸುಗಳು ನಿರ್ಮಾಣವಾಗಬೇಕು. ಕಲಾವಿದನಾಗುವುದು ಒಂದು ನಿರಂತರ ಪ್ರಕ್ರಿಯೆ, ಸತತ ಕ್ರಿಯಾತ್ಮಕತೆಯಿಂದಾಗಿ ಇದು ಸಾಧ್ಯ. ಪ್ರಯೋಗಶೀಲ ಕಲಾಸಕ್ತ ವಿದ್ಯಾರ್ಥಿಯ ಪ್ರತಿಭೆ ಪ್ರಸ್ತುತ ಕಾಲಘಟ್ಟದ ಪರಿಸ್ಥಿತಿಯ ಮತ್ತು ಸ್ಥಳಾವಕಾಶದ ಹಾಗೂ ಪ್ರದರ್ಶನಗಳ ಪ್ರತಿಫಲನವಾಗಿರುತ್ತದೆ. ಅಲ್ಲದೆ ವಾಸ್ತವ ಸ್ಥಿತಿಯ ಅರಿವಾಗುತ್ತದೆ. ಬೇರೆ ಬೇರೆ ಶಿಸ್ತಿನ ವಿಷಯಗಳಾದ ಶಿಲ್ಪ, ಚಿತ್ರಕಲೆ, ಅನ್ವಯಕಲೆ, ಛಾಯಾಚಿತ್ರ, ಡಿಸೈನ್, ಅನುಷ್ಠಾಪನ ಕಲೆ, ವೀಡಿಯೋ ಮುಂತಾದ ಕಲಾ ಪ್ರಕಾರಗಳಲ್ಲಿ ಆಸಕ್ತಿ ವಹಿಸಿ ಕಲಿಕೆಯ ಕಾರ್ಯಕ್ಷೇತ್ರವಾಗಬೇಕು. ವಿದ್ಯಾರ್ಥಿಗಳ ಅವಶ್ಯಕತೆಗಳನ್ನು ಪಟ್ಟಿ ಮಾಡಿ ತಮ್ಮ ಕಲಾಕೃತಿಗೆ ರಚನೆಗೆ ಪೂರಕವಾದ ಸ್ಥೈರ್ಯ ಮತ್ತು ವಾತಾವರಣ ನಿರ್ಮಿಸಬೇಕು. ನಿರಂತರ ಕಲಿಕೆ, ನಿರಂತರ ಪ್ರತಿಕ್ರಿಯೆ ಮತ್ತು ನಿರಂತರವಾಗಿ ವಿದ್ಯಾರ್ಥಿಯಾಗಿ ಸ್ವೀಕರಿಸುವ ಮನೋಭಾವ ವಿದ್ಯಾರ್ಥಿ ಹೊಂದಿರಬೇಕು. ಪಾರದರ್ಶಕತೆ, ತೆರೆದ ಮನಸ್ಸು ಮತ್ತು ನಿರ್ಣಾಯಕ ಚಿಂತನೆಗಳಿಗೆ ಶಿಕ್ಷಕ, ಸ್ನೇಹಿತ ಹಾಗೂ ಸಮಾಜ ಸ್ವೀಕರಿಸಲು ಸದಾ ಸಿದ್ಧವಿರುತ್ತದೆ. ಇಂತಹ ಮುಕ್ತ ಮನಸ್ಸಿನ ವಾತಾವರಣ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ನಮ್ಮ ಕಲಾ ವಿದ್ಯಾಲಯಗಳಲ್ಲಿ ಆಗಬೇಕಿದೆ. ಈ ತರಹದ ಪ್ರಯೋಗಗಳಿಂದ ಆಧುನಿಕ ಕಲಾಶಿಕ್ಷಣ ಕ್ಷೇತ್ರದಲ್ಲಿ ಸಂಪೂರ್ಣವಾಗಿ ಒಂದು ಉಲ್ಲಾಸಭರಿತ ತಾಜಾತನ ತರಲು ಸಾಧ್ಯವಾಗುತ್ತದೆ.

ಇಂದಿನ ನಮ್ಮ ವಿಶ್ವವಿದ್ಯಾಲಯಗಳು ದೃಶ್ಯಕಲಾ ವಿದ್ಯಾರ್ಥಿಗಳಿಗೆ ಸ್ವತಂತ್ರ ಮತ್ತು ಮುಕ್ತವಾದ ವೇದಿಕೆಯನ್ನು ಕಲ್ಪಿಸಿ, ಎಲ್ಲಾ ಪ್ರಕಾರದ ಕಲೆಯನ್ನು ಅನ್ವೇಷಿಸಲು ಹಾಗೂ ಸ್ವಂತ ಆಲೋಚನೆಗಳಿಗೆ ಅವಕಾಶ ನೀಡಬೇಕು. ಕಲಾ ವಿದ್ಯಾರ್ಥಿ ಸಮುದಾಯಕ್ಕೆ ವಿಶೇಷವಾಗಿ ಕಾರ್ಯಾಗಾರ, ಚರ್ಚೆ, ವಿಮರ್ಶೆ, ಸಂವಹನ ಕೌಶಲ್ಯ ಮತ್ತು ವಿಷಯ ವಿನಿಮಯದಂತಹ ಪ್ರಕ್ರಿಯೆಗೆ ಒಳಪಡಿಸಿ ಕಲಿಕೆಗೆ ಪ್ರೋತ್ಸಾಹಿಸಬೇಕು. ಕಲಿಯೂ ಸಹ ಒಂದು ಕಲೆ. ವಿಷಯ ಗ್ರಹಿಸುವ, ಸಂಗ್ರಹಿಸುವ ಮತ್ತು ಅನುಭವಿಸುವ ವಾತಾವರಣ ಸೃಷ್ಟಿಯಾಗಬೇಕು. ಇತರೆ

ವಿಶೇಷ ಪರಿಣಿತಿಯ ಅಂದರೆ ಸಂಗೀತ, ನೃತ್ಯ, ಸಾಹಿತ್ಯ, ವಿಜ್ಞಾನ, ಇತಿಹಾಸಕಾರ, ಸಮಾಜಜ್ಞಾನಿ, ಚಿಂತಕ ಪ್ರಖ್ಯಾತರನ್ನು ಆಹ್ವಾನಿಸಿ ವಿವಿಧ ವಿಧಾನಗಳಿಂದ ಕಲಿಯುವ ಪ್ರಕ್ರಿಯೆಯಾಗಬೇಕೆ ಹೊರತು ಕಲಿಸುವ ಕಾರ್ಯಗಾರವಾಗಬಾರದು. ಕಲೆಯು ಪ್ರಯೋಗ ಪ್ರಧಾನವಾದ ಪ್ರಕ್ರಿಯೆ, ನಿರಂತರ ಪ್ರತಿಕ್ರಿಯೆಯೇ ಅದರ ಜೀವಾಳ. ಶ್ರೇಷ್ಠ ಕಲಾಕೃತಿಯ ರಚನೆ ಕಾರ್ಯ ಮತ್ತು ಸಾಧನೆ ಅಪೂರ್ಣ ಹಾಗೂ ಅನುಭವಗಳ ಮುಂದುವರಿಕೆಯೇ ಕಲೆ[೨೨] ಎಂಬುದನ್ನು ವಿವರಿಸುತ್ತಾರೆ.

ದೃಶ್ಯಕಲಾ ಕ್ಷೇತ್ರದಲ್ಲಿನ ಶಿಕ್ಷಕರು, ಪ್ರಾಚಾರ್ಯರು, ಪೋಷಕರುಗಳು ಹೀಗೆ ಹಲವಾರು ಜನ ಒಗ್ಗೂಡಿ ಚಿಂತಿಸಿ, ಚರ್ಚಿಸಿ ಕರ್ನಾಟಕದಲ್ಲಿ ನಡೆಯುವಂತಹ ಶಿಕ್ಷಣದ ಕ್ರಮವನ್ನು ಸರಿಯಾಗಿ ರೂಪಿಸಬೇಕಾಗಿದೆ. ಕರ್ನಾಟಕದ ಕೆಲವು ಕಲಾಶಾಲೆಗಳು ಪ್ರೌಢ ಶಿಕ್ಷಣದ ಆಶಯಗಳನ್ನೆಲ್ಲ ಪೂರೈಸುವ ಕೇಂದ್ರಗಳಾಗಿವೆ. ದೃಶ್ಯಕಲಾ ಮಹಾವಿದ್ಯಾಲಯಗಳು ಅಥವಾ ಲಲಿತಕಲಾ ವಿಶ್ವವಿದ್ಯಾಲಯ ರೂಪರೇಷೆಗಳು, ಆರ್ಥಿಕ ಅನುದಾನವು ಬಂದಿದ್ದರೂ ಸಹಿತ ಅವರ ಕೆಲಸ ಆಮೆಯ ಗತಿಯಲ್ಲಿ ನಡೆದುಕೊಂಡು ಹೋಗುತ್ತಿರುವುದನ್ನು ಕಾಣಬಹುದು. ಅದೇ ರೀತಿಯಾಗಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತಗಳಲ್ಲಿ ಕಲಾಶಿಕ್ಷಣದ ಮಹತ್ವ ಉಳಿಸಿಕೊಂಡು ಬರುವುದು ಕಷ್ಟದಾಯಕವಾಗಿದೆ.

ಕರ್ನಾಟಕ ಕಲೆಯು ಸಂಪಾದನೆ ಒದಗಿಬರದ ನಿರರ್ಥಕ ಹವ್ಯಾಸ ಎಂಬ ತಪ್ಪು ಭಾವನೆ ಸಮಾಜ ಮತ್ತು ಸರ್ಕಾರದಲ್ಲಿ ಉಂಟಾಗಿದೆ. ಇಲ್ಲಿ ಕಲಾವಿದರು ಆದರೂ ಕೂಡ ತಮ್ಮ ಸಮಾಜದಲ್ಲಿನ ಪಾತ್ರವನ್ನು ಸಾಮಾಜಿಕವಾಗಿ ಪ್ರಯೋಜನಕರವಾಗುವಂತೆ ಅವರೂ ರೂಪಿಸಿಕೊಂಡಿಲ್ಲವೆನ್ನಬಹುದು. ಕಲೆಯ ಬಗ್ಗೆ ಇರುವಂತಹ ಪ್ರೀತಿ, ಅನುಬಂಧಗಳು ಸಾಮಾಜಿಕ ವಾಗಿ ಬೆಳೆದುಬಂದಂತಹ ಶಿಸ್ತು, ಸಂಯಮ, ಮನಃಶಾಂತಿ ಇನ್ನು ಹಲವಾರು ವಿಷಯಗಳು ಕಾಲ ಕಳೆದಂತೆಲ್ಲಾ ಆ ಕಾಲಕ್ಕೆ ಹೊಂದಿಕೊಂಡಿರುವ ಹಾಗೆ ಹಣಕಾಸು ವಿಷಯಗಳಿಗಿಂತ ತಮ್ಮಲ್ಲಿರುವ ಮಾನಸಿಕ ಮೌಲ್ಯಗಳು ಎಷ್ಟು ಪ್ರಧಾನ ಅಂಶಗಳು ಎಂಬುದು ನಮಗೆ ಅರಿವಿಲ್ಲದಂತಾಗಿದೆ.

ಭಾರತದ ಪ್ರಸ್ತುತ ಸಂದರ್ಭದಲ್ಲಿ ಶಿಕ್ಷಣದ ಹೆಸರಿನಲ್ಲಿ ಮಕ್ಕಳಿಗೆ ಹೊರಲಾಗದ ಹೊರೆ ಹೊರಿಸುತ್ತಿದ್ದೇವೆ. ಇಲ್ಲಿ ಮುಖ್ಯವಾಗಿ ಪುಸ್ತಕ, ಪಠ್ಯವಿಷಯಗಳು ಮಿಗಿಲಾಗಿ ಹಣಕಾಸಿನ ವಿಷಯಕ್ಕೆ ಸುಲಭವಾಗಿ ದಾರಿ ನೋಡುವ ಕೆಲಸಗಳು ಪ್ರಸ್ತುತ ಸಂದರ್ಭದಲ್ಲಿ ನಡೆಯುತ್ತಿವೆ. ಎಲ್ಲ ವಿಷಯಗಳಲ್ಲಿಯೂ ಕೂಡ ಧೈರ್ಯವಾಗಿ ಮಾಡುವವರ ಸಂಖ್ಯೆ ಹೆಚ್ಚಾಗಿರುವುದನ್ನು ನಾವು ನೋಡುತ್ತೇವೆ. ಇವೆಲ್ಲ ಕೆಲಸಗಳು ಮಾಡುವ ಬದಲು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯನ್ನು ಬೆಳೆಸುವುದಕ್ಕೆ ದಾರಿ ಮಾಡಿಕೊಡುವಂತಿರಬೇಕು. ವ್ಯಕ್ತಿಯ ಬೆಳವಣಿಗೆಗೂ ಸಮಾಜದ ಅಭಿವೃದ್ಧಿಗೂ ಹೊಂದುವಂತೆ ಶಿಕ್ಷಣವಿದ್ದಲ್ಲಿ ನಮ್ಮ ವಿದ್ಯಾರ್ಥಿಗಳಲ್ಲಿ ಇಂದಿನ ಅನುಪಯುಕ್ತವಾಗುವ ಆಸ್ಪದಕ್ಕೆ ದಾರಿ ನೀಡುತ್ತಿರಲಿಲ್ಲ.

ಕರ್ನಾಟಕದಲ್ಲಿ ನೀಡುತ್ತಿರುವ ಕಲಾಶಿಕ್ಷಣ ಹೇಗಿದೆ ಅಂದರೆ ನಮ್ಮ ಕಲಾಶಾಲೆಗಳಲ್ಲಿ ವಿದ್ಯಾರ್ಥಿಗಳು ರಚಿಸಿದ ಕೃತಿಗಳನ್ನು ನೋಡಿದರೆ ಒಂದು ರೀತಿಯ ಉದಾಸೀನತೆಯನ್ನು ಅನುಭವಿಸುವಂತೆ ಭಾಸವಾಗುತ್ತದೆ. ಕಲಾಶಾಲೆಯಲ್ಲಿ ಕಲಿಸುವಂತಹದ್ದು ಒಂದು ಉದ್ಯೋಗಕ್ಕೆ ಅನುಕೂಲವಾಗುವಂತಹ ರೀತಿಯಲ್ಲಿ ಬೋಧನೆಯನ್ನು ಕೈಗೊಂಡರೆ ಸಾಮಾಜಿಕವಾಗಿ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗುತ್ತಿತ್ತು. ವ್ಯಕ್ತಿಯ ಬೆಳವಣಿಗೆಗೆ ಅವಕಾಶವಾಗದಂತಹ ರೀತಿಯಲ್ಲಿ ನಡೆಯುತ್ತಿರುವಂತಹ ಇಂದಿನ ಕಲಾಶಿಕ್ಷಣ ಅಥವಾ ಇಂದು ವಿದ್ಯಾರ್ಥಿಗಳಿಗೆ ನೀಡುತ್ತಿರುವಂತಹ ಕಲಾಶಿಕ್ಷಣದ ಕ್ರಮವು ಕಲೆಗೆ ಅಪಚಾರ ಮಾಡುತ್ತಿದೆ. ಏಕೆಂದರೆ ಕಲಾಶಿಕ್ಷಣ ಕಲಿತಂತಹ ಅನೇಕ ವಿದ್ಯಾರ್ಥಿಗಳು ಸರಕಾರದ ಕೆಲಸವನ್ನು ನಂಬಿಕೊಂಡು ಮೋಸ ಹೋಗುತ್ತಿದ್ದಾರೆ. ಇದಕ್ಕೆ ಸರಕಾರ ವಿದ್ಯಾರ್ಥಿಗಳಿಗೆ ಅನುವಾಗುವಂತಹ ರೀತಿಯಲ್ಲಿ ಕೆಲಸಗಳನ್ನು ಮಾಡಬೇಕಿದೆ.

ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆ ಅಥವಾ ಪದವಿ ಹಂತದವರೆಗೂ ಕೂಡ ಏಕಕಾಲದಲ್ಲಿ ಕಲಾಶಿಕ್ಷಣದ ಪುನರ್‌ರಚನೆಯ ಕಡೆಗೆ ಗಮನ ಕೊಡಬೇಕಾದುದು ಅನಿವಾರ್ಯವಾಗಿದೆ. ಈ ಕಾರ್ಯ ಕೇವಲ ನಮ್ಮ ಕಲಾವಿದರ ಸಂಕುಲದಿಂದ ಅಲ್ಲದೆ ಇಡೀ ಸಮಾಜ ಒಳಗೊಂಡು ಅದನ್ನು ಕಲೆಯಿಂದ ಶ್ರೀಮಂತಗೊಳಿಸಬಲ್ಲರು. ಕಲೆ ಎಂಬ ಹಸಿವನ್ನು ತೃಪ್ತಿಪಡಿಸುವ ನಿಟ್ಟಿನಲ್ಲಿ ನಾನಾ ರೀತಿಗಳಲ್ಲಿ ಸಮಾಜದಲ್ಲಿ ಭಿತ್ತರಿಸಬೇಕು. ಜನರಲ್ಲಿ ದೃಶ್ಯ ಸೌಂದರ್ಯ ಅಭಿವ್ಯಕ್ತಿಸುವುದೋ ಮತ್ತು ಸಮಾಜವನ್ನು ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸಬಲ್ಲವು; ಅಂತಹ ಕಲೆಗಳನ್ನು ಕಲಾಶಿಕ್ಷಣದಲ್ಲಿ ಕಡ್ಡಾಯವಾಗಿ ಸೇರಿಸಬೇಕು. ಇದರೊಂದಿಗೆ ವಿವಿಧ ಕಲಾಶೈಲಿಗಳ ಬಗ್ಗೆ ಸಮಾಜಕ್ಕೆ ಪರಿಚಯ ಮಾಡಿಸಿ ಸಮಾಜದಲ್ಲಿ ಕಲಾಭಿರುಚಿಯನ್ನು ಹುಟ್ಟಿಸಬೇಕು. ವಿದ್ಯಾರ್ಥಿಗಳಿಗೆ ಒಳ್ಳೆಯ ಗುಣಮಟ್ಟದ ಅಂಶಗಳನ್ನು ಕಲಾಶಿಕ್ಷಣದಲ್ಲಿ ಅಳವಡಿಸಿ ಕಲಾಭಿರುಚಿಯನ್ನು ಬೆಳೆಸಲು ಕಾರಣವಾಗುವಂತಹ ಎಲ್ಲ ಕ್ರಮಗಳನ್ನು ಕಲಾ ಶಿಕ್ಷಣದಲ್ಲಿ ಸೇರಿಸಬೇಕು.

ಪ್ರತಿಯೊಂದು ವಿಷಯದಲ್ಲೂ ಅನೇಕ ಸಮಸ್ಯೆಗಳಿರುತ್ತವೆ. ಅವುಗಳಿಗೆ ತಕ್ಕಂತೆ ಒಂದು ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಕೊಳ್ಳುವ ಮಾರ್ಗಗಳು ಅನೇಕ ರೀತಿಯಲ್ಲಿರುತ್ತವೆ. ಚಿತ್ರಕಲಾ ಶಿಕ್ಷಕರ ದೃಷ್ಟಿಯಿಂದ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಲವಾರು ಕಲಾವಿದರು, ವಿಮರ್ಶಕರು, ವಿದ್ವಾಂಸರು, ಮನೋವಿಜ್ಞಾನಿಗಳು, ತತ್ವಜ್ಞಾನಿಗಳು ಸೇರಿ ವಿಷಯವಾರು ಪಠ್ಯಕ್ರಮವನ್ನು ರಚಿಸಿದರೆ ಅದಕ್ಕೆ ಒಂದು ಪರಿಹಾರ ದೊರಕಿಸಿಕೊಟ್ಟಂತಾಗುತ್ತದೆ.

ಕರ್ನಾಟಕದ ಕಲಾಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಗಬೇಕು. ಇದರಿಂದ ಕಲಾಶಾಲೆಗಳು ಉಳಿಯುತ್ತವೆ. ಇದರಿಂದ ಬೋಧನೆ ಮಾಡುವ ಶಿಕ್ಷಕರಿಗೂ ಉಳಿಗಾಲ ಸಾಧ್ಯವಾಗುತ್ತದೆ.

ಪಠ್ಯಕ್ರಮಾನುಸಾರವಾಗಿ ಬೋಧಿಸಲು ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ತರಬೇತಿಗಳನ್ನು ನೀಡುತ್ತಿದ್ದರೆ ಒಳ್ಳೆಯದು. ಚಿತ್ರಕಲಾ ಶಿಕ್ಷಕರಿಗೆ ತರಬೇತಿಗಳನ್ನು ನೀಡುವುದರಿಂದ ಅವರಿಗೆ ಬೋಧನಾ ವಿಧಾನಗಳು ತಿಳಿಯುತ್ತವೆ. ಇದರಿಂದ ವಿದ್ಯಾರ್ಥಿಗಳಿಗೆ ಒಳ್ಳೆಯದಾಗುತ್ತದೆ.

ಕರ್ನಾಟಕದ ಪ್ರತಿಯೊಂದು ಕಲಾಶಾಲೆಯಲ್ಲಿಯೂ ಸಹ ತರಗತಿಗೆ ತಕ್ಕಂತೆ ಒಂದೊಂದು ಪ್ರತ್ಯೇಕ ಕೊಠಡಿಯಿದ್ದರೆ ಕಲಾಶಿಕ್ಷಕರಿಗೆ ಪಾಠ ಬೋಧಿಸಲು ಸಹಕಾರಿಯಾಗುತ್ತದೆ. ಎಲ್ಲ ಅವರವರ ತರಗತಿಯಲ್ಲಿ ಆ ತರಗತಿಗೆ ಸಂಬಂಧಿಸಿದಂತಹ ವಿದ್ಯಾರ್ಥಿಗಳು ಇರುವುದರಿಂದ ಶಿಕ್ಷಕರಿಗೆ ಯಾವುದೇ ರೀತಿಯ ತೊಂದರೆಗಳಿರುವುದಿಲ್ಲ.

ಲಲಿತಕಲಾ ವಿಶ್ವವಿದ್ಯಾಲಯ ಕರ್ನಾಟಕದಲ್ಲಿ ನಡೆಯುತ್ತಿರುವಂತಹ ಹಲವಾರು ಕಲಾಶಾಲೆ ಗಳಿಗೆ ಕೇಂದ್ರವಾಗಬೇಕು. ಈ ಕಾರಣಕ್ಕಾಗಿ ಲಲಿತಕಲಾ ವಿಶ್ವವಿದ್ಯಾಲಯ ಅವಶ್ಯಕವಾಗಿ ಬೇಕಾಗಿದೆ. ಈ ವಿಶ್ವವಿದ್ಯಾಲಯವು ಪ್ರಾರಂಭವಾದರೆ ಕಲಾಶಾಲೆಯ ಸಮಸ್ಯೆಗಳು, ನೇಮಕಾತಿಯ ವಿಷಯಕ್ಕೆ ಸಂಬಂಧಿಸಿದಂತೆ, ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಹಲವಾರು ಬಗೆಯ ಸಮಸ್ಯೆಗಳು ಬಂದರೆ ಸಮಾನವಾಗಿ ಬಗೆಹರಿಸಲು ಸಾಧ್ಯವಾಗುತ್ತದೆ. ಮುಂದಿನ ದಿನಗಳಲ್ಲಿ ದೃಶ್ಯಕಲಾ ಶಿಕ್ಷಣ ಕ್ಷೇತ್ರ ಈ ಎಲ್ಲ ಬಗೆಯ ಸಮಸ್ಯೆಗಳಿಂದ ಮುಕ್ತವಾಗಿ ಸುಂದರ ವಲಯವಾಗಿ ಮಾರ್ಪಾಡಲಿ ಎಂದು ಆಶಿಸೋಣ.

ಕೊನೆ ಟಿಪ್ಪಣಿಗಳು

೧. ಶಿವರಾಮ ಕಾರಂತ, **ಕಲೆಯ ದರ್ಶನ**, ೧೯೬೫, ಪು. ೯೫.

೨. ಅನಂತನ್ ವಿ.ಆರ್., ರಾಮಕೃಷ್ಣ ಎಂ.(ಸಂ), **ಶಿಕ್ಷಣ ಭಾರತಿ**, ೨೦೧೨, ಪು. ೫೩.

೩. ಅದೇ, ಪು. ೫೫.

೪. ಶಿವಾನಂದ ಎಚ್. ಬಂಟನೂರ, **ಶೈಕ್ಷಣಿಕ ನೆಲೆಗಳು ಮತ್ತು ದೃಶ್ಯಕಲೆಯ ಸೃಜನಶೀಲ ಆಯಾಮಗಳು(ಲೇಖನ)**, ೨೦೧೭-೧೮, ಪು. ೧೨.

೫. ಅದೇ, ಪು. ೧೨.

೬. ಅದೇ, ಪು. ೧೨.

೭. ರವಿಕುಮಾರ ಕಾಶಿ, **ಕಣ್ಮೆಲೆ**, ೨೦೧೨, ಪು. ೮೧.

೮. ಲಕ್ಷ್ಮಣಸಿಂಗ್ ಆರ್. ರಾಥೋಡ್, **ದೃಶ್ಯಕಲಾ ಶಿಕ್ಷಣ ಮತ್ತು ಆಧುನಿಕತೆ**, ಪ್ರಬಂಧ ಮಂಡನೆ, ೨೦೧೫, ಪು. ೩.

❖❖❖

ಅಧ್ಯಾಯ : ಆರು

ಸಮಾರೋಪ

ಅಧ್ಯಾಯ : ಆರು

ಸಮಾರೋಪ

ಚಿತ್ರಕಲೆಯು ಒಂದು ನಾಡಿನ, ಪ್ರದೇಶದ, ಜನಾಂಗದ ಹಿಂದಿರುವ ಕಥೆಯನ್ನು ತಿಳಿಸುವ ಒಂದು ಸಾಧನವಾಗಿದೆ. ಪ್ರಾಚೀನ ಕಾಲದ ಸಂಸ್ಕೃತಿಯನ್ನು ನೆನಪಿಸುವಂತಹ ಒಂದು ಚಿತ್ರ ಅಥವಾ ಶಿಲ್ಪ ಸಾವಿರಾರು ವರ್ಷಗಳ ಚರಿತ್ರೆಯ ಚೌಕಟ್ಟನ್ನು ಕಟ್ಟುವುದಕ್ಕೆ ಸಹಾಯಕವಾಗುತ್ತದೆ. ಮನುಷ್ಯನ ಮೊಟ್ಟಮೊದಲ ಪಾಠ ಚಿತ್ರಕಲೆಯಿಂದ ಪ್ರಾರಂಭವಾಗಿದೆ. ಅಕ್ಷರಗಳು ಹುಟ್ಟುವುದಕ್ಕಿಂತ ಮುಂಚೆಯೇ ನಮ್ಮ ಚಿತ್ರಕಲೆಯು ಬಳಕೆಯಲ್ಲಿತ್ತೆಂದು ಹೇಳಬಹುದು. "ಭಾಷೆ ಮತ್ತು ಸಾಹಿತ್ಯಗಳು ಕ್ರಮೇಣ ಉದ್ಭವವಾಗಿ ಪ್ರವರ್ಧಮಾನಕ್ಕೆ ಬಂದಂತೆ ಚಿತ್ರಕಲೆಯೂ ತನ್ನದೇ ಆದ ಸ್ಥಾನವನ್ನು ಉಳಿಸಿಕೊಂಡು, ಬೆಳೆದುಕೊಂಡು ಬಂದಿದೆ. ಹಲವು ಶತಮಾನಗಳ ಅವಧಿಯಲ್ಲಿ ರೂಪುಗೊಳ್ಳುತ್ತ ಅನೇಕ ಪ್ರಕಾರಗಳಲ್ಲಿ ತನ್ನ ಬಳ್ಳಿಗಳನ್ನು ಚಾಚಿ ವೈವಿಧ್ಯಮಯವಾಗಿ, ಪೂರ್ಣವಾಗಿ ಚಿತ್ರಕಲೆಯು ತನ್ನ ಪ್ರಭಾವವನ್ನು ಬೀರುತ್ತಾ ಬಂದಿದೆ."[೧] ಪ್ರಾಚೀನ ಕರ್ನಾಟಕದಲ್ಲಿ ಚಿತ್ರಕಲಾ ಶಿಕ್ಷಣದ ಪ್ರಗತಿಯು ಹಂತ ಹಂತವಾಗಿ ಆಗಿದೆ. ಪ್ರಸ್ತುತ ಮಹಾಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳಲ್ಲಿ ದೃಶ್ಯಕಲಾ ಶಿಕ್ಷಣದ ಸಮಸ್ಯೆ ಮತ್ತು ಸವಾಲುಗಳನ್ನು ಹಲವು ಆಯಾಮಗಳಲ್ಲಿ ವಿವೇಚಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಅಧ್ಯಯನದ ಸ್ವರೂಪ ಮತ್ತು ಅಧ್ಯಯನದ ವ್ಯಾಪ್ತಿಯನ್ನು ಅವಲೋಕಿಸಲಾಗಿದೆ. ಹಾಗೆಯೇ ಇದುವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ ಮಾಡಲಾಗಿದೆ. ಅಧ್ಯಯನಕ್ಕೆ ಅನುಸರಿಸಿದ ವಿಧಾನಗಳನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ ಎರಡರಲ್ಲಿ ದೃಶ್ಯಕಲಾ ಶಿಕ್ಷಣದ ವ್ಯವಸ್ಥೆಯನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ಗಮನಿಸುತ್ತಾ, ಮಾನವನು ಶಿಕ್ಷಣದ ಮೂಲಕ ಅತ್ಯಂತ ಉತ್ತಮವಾದ ಸಂಸ್ಕಾರವನ್ನು ರೂಪಿಸಿಕೊಂಡು ಸಾಗಿ ಬಂದು ಈ ನವೀನ ಯುಗದಲ್ಲಿ ಬುದ್ಧಿಶಾಲಿಯಾಗಿದ್ದಾನೆ ಎಂಬುದನ್ನು ಚರ್ಚಿಸಲಾಗಿದೆ ಹಾಗೂ ಶಿಕ್ಷಣ ಎಂಬ ಪದವನ್ನು ಇಂದು ನಾವು ಯಾವ ಅರ್ಥದಲ್ಲಿ ಉಪಯೋಗಿಸಿಕೊಳ್ಳುತ್ತಿದ್ದೇವೆ? ಈ ಶಿಕ್ಷಣ ಪದದ ಅರ್ಥವೇನು? ಇತ್ಯಾದಿ ಹಲವಾರು ವಿಷಯಗಳನ್ನು ಚರ್ಚಿಸಲಾಗಿದೆ.

---

೧. ಮಲ್ಲಿಕಾರ್ಜುನ ಕೆ.ಜಿ., ವಿಜಯನಗರ ಚಿತ್ರಕಲೆ ಪರಂಪರೆ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪು. ೧.

ಪುರಾತನ ಕಾಲದಿಂದ ಹಿಡಿದು ವೇದಕಾಲದವರೆಗಿನ ಶಿಕ್ಷಣದಲ್ಲಿ ಲಲಿತಕಲೆಗಳು ಗುರುಕುಲ ಪದ್ಧತಿಯಲ್ಲಿ ಕಲಿಸಲ್ಪಡುತ್ತಿದ್ದವು. ಗುರು ಮತ್ತು ಶಿಷ್ಯರ ಇಬ್ಬರ ನಡುವೆ ನಡೆಯುವ ಒಂದು ಪ್ರಕ್ರಿಯೆ ಎಂದು ಗುರುತಿಸಲಾಗಿದೆ ಹಾಗೂ ಅದು ಬ್ರಾಹ್ಮಣರ ಸಾಹಿತ್ಯದ ಬೆಳವಣಿಗೆಗೂ ಅನುಕೂಲವಾಯಿತು. ವೇದಗಳು ಪ್ರಾರಂಭಗೊಂಡಾಗ ಬ್ರಾಹ್ಮಣಗಳು, ಅರಣ್ಯಕಗಳು, ಉಪನಿಷತ್ತುಗಳು, ಧರ್ಮ ಮತ್ತು ಸಾಹಿತ್ಯ ಸ್ವರೂಪ ಹಾಗೂ ಸ್ಥಾನಮಾನ ಪಡೆದುಕೊಂಡಿದ್ದವು. ನಂತರದಲ್ಲಿ ಯಜ್ಞಕುಂಡಗಳು ಸೃಷ್ಟಿಯಾದವು. ಈ ಯುಗವನ್ನು ಬ್ರಾಹ್ಮಣೀಯ ಶಿಕ್ಷಣ ಯುಗವೆಂದು ಕರೆಯುತ್ತಾರೆ. ಈ ಕಾಲಘಟ್ಟದ ಸಾಹಿತ್ಯ ಗ್ರಂಥಗಳಲ್ಲಿ ಚಿತ್ರಕಲೆಯ ಬಗೆಗಿನ ಉಲ್ಲೇಖಗಳನ್ನು ನೋಡಬಹುದು. ಇತಿಹಾಸ ಪೂರ್ವ ಹಾಗೂ ಆರಂಭ ಕಾಲಘಟ್ಟದಲ್ಲಿನ ಶೈಕ್ಷಣಿಕ ಪರಿಕಲ್ಪನೆ ಆ ಬಳಿಕ ರಾಜಮನೆತನಗಳಲ್ಲಿನ ಚಿತ್ರಕಲೆಗಳ ಹಾಗೂ ಸಿಂಧೂ ಕಣಿವೆಯ ಕಲೆ ಮಧ್ಯಕಾಲೀನ ಸಂದರ್ಭ ಶೈಕ್ಷಣಿಕ ವ್ಯವಸ್ಥೆಯನ್ನು ಕುರಿತು ವಿವರಿಸಲಾಗಿದೆ. ವಸಾಹತುಶಾಹಿ ಸಂದರ್ಭದಲ್ಲಿ ಶೈಕ್ಷಣಿಕ ವ್ಯವಸ್ಥೆ, ಸ್ವರೂಪದ ಬಗ್ಗೆ ವಿವರವಾಗಿ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿನ ಶೈಕ್ಷಣಿಕ ವ್ಯವಸ್ಥೆಯ ಬಗ್ಗೆ, ಕಲಾಶಿಕ್ಷಣದ ಕುರಿತು ರಚಿಸಲ್ಪಟ್ಟ ಆಯೋಗಗಳನ್ನು ಪ್ರಸ್ತಾಪಿಸಲಾಗಿದೆ. ಶಿಕ್ಷಣ ಸೌಲಭ್ಯಗಳ ಬಗ್ಗೆ ಹಾಗೂ ಕರ್ನಾಟಕದ ದೃಶ್ಯಕಲಾ ಮಹಾವಿದ್ಯಾಲಯಗಳ ಹುಟ್ಟು ಮತ್ತು ಬೆಳವಣಿಗೆಯ ಹಲವಾರು ಸೂಕ್ಷ್ಮ ಸಂಗತಿಗಳನ್ನು ವಿವರಿಸಲಾಗಿದೆ. ಮೊದಲಿಗೆ ತಾನೊಬ್ಬ ಆದರ್ಶ ವಿದ್ಯಾರ್ಥಿ ಎಂಬ ಭಾವನೆ ಶಿಕ್ಷಕನಲ್ಲಿರಬೇಕು, ಅಂದಾಗ ಒಳ್ಳೆಯ ಶಿಕ್ಷಕನಾಗಬಲ್ಲ ಹಾಗೂ ಒಳ್ಳೆಯ ಸಂಸ್ಥೆಯನ್ನು ಕಟ್ಟಬಲ್ಲ ಎಂಬುದನ್ನು ಒತ್ತಿ ಹೇಳಲಾಗಿದೆ. ಕರ್ನಾಟಕದಲ್ಲಿರುವ ಚಿತ್ರಕಲಾ ಶಾಲೆಗಳ ಬಗ್ಗೆ ವಿವರಿಸಲಾಗಿದೆ. ಮೊದಲಿಗೆ ಕಲಾಶಾಲೆಯ ಹುಟ್ಟು, ಬೆಳವಣಿಗೆ ಮತ್ತು ಕಲಾಶಾಲೆಯ ಉದ್ದೇಶ, ಕಲಾಶಾಲೆಯಲ್ಲಿ ನಡೆಯುತ್ತಿರುವಂತಹ ಕೋರ್ಸ್‌ಗಳು, ನೀಡುವ ಪದವಿಗಳ ಬಗ್ಗೆ ಸ್ಥೂಲವಾಗಿ ಹಾಗೂ ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ.

ಚಿತ್ರಕಲೆಯಲ್ಲಿ ಐಚ್ಛಿಕವಾಗಿ ಕಲಿಸುತ್ತಿರುವ ಚಿತ್ರಕಲಾ ವಿಭಾಗಗಳ ಸ್ಥಾಪಕರಾರು, ಸ್ಥಾಪನೆಗೆ ಕಾರಣಗಳೇನು? ಪ್ರಸ್ತುತ ಪರಿಸ್ಥಿತಿಗಳು ಹೇಗಿವೆ? ಎಂಬ ವಿಷಯಗಳನ್ನು ಚರ್ಚಿಸಲಾಗಿದೆ. ಸಾರ್ವತ್ರಿಕವಾಗಿ ಕಲೆಯ ಜ್ಞಾನ ಪ್ರಸಾರ ಮಾಡುವ ಹಿನ್ನೆಲೆಯಲ್ಲಿ ಅಂಚೆ ಮೂಲಕ ಚಿತ್ರಕಲೆಯನ್ನು ಪ್ರಾರಂಭಿಸಿದ ಉದ್ದೇಶದ ಕುರಿತು ವಿವರಿಸಲಾಗಿದೆ.

ದೂರಶಿಕ್ಷಣದ ಮೂಲಕ ನಡೆಯುತ್ತಿರುವಂತಹ ಕಲಾ ಸಂಸ್ಥೆಗಳನ್ನು ಸಹ ಪ್ರಸ್ತಾಪಿಸಲಾಗಿದೆ. ಪ್ರತ್ಯಕ್ಷ ಶಿಕ್ಷಣವೇ ಚಿತ್ರಕಲೆಗೆ ಉತ್ತಮ ದಾರಿ ಮತ್ತು ಮಾಧ್ಯಮವಾಗಿದ್ದು, ಕಲೆಗೆ ತನ್ನದೇ ಆದಂತಹ ಸಿದ್ಧಾಂತ, ತಂತ್ರಗಾರಿಕೆ ಇರುವುದರಿಂದ ದೂರಶಿಕ್ಷಣದಿಂದ ಸಮರ್ಪಕವಾದ ಶಿಕ್ಷಣ ನೀಡಲು ಸಾಧ್ಯವಿಲ್ಲ, ಈ ಪದ್ಧತಿಯಲ್ಲಿ ಕಲಿಯುವುದು ಯೋಗ್ಯವಲ್ಲ, ಚಿತ್ರಕಲೆ ಇಂದು ಒಂದು ವಿಜ್ಞಾನವಾಗಿ ಹೊರಹೊಮ್ಮಿದೆ. ಆದುದರಿಂದ ಪ್ರತ್ಯಕ್ಷ ಶಿಕ್ಷಣವೇ ಚಿತ್ರಕಲೆಗೆ ಅರ್ಥಪೂರ್ಣವಾದ ಸೂಕ್ತವಾದ ಮಾಧ್ಯಮವಾಗಿದೆ ಎಂಬುದನ್ನು ವಿವರಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ದೃಶ್ಯಕಲಾ ಕ್ಷೇತ್ರದಲ್ಲಿ ಕಾಡುತ್ತಿರುವ ಹಲವಾರು ಸಮಸ್ಯೆಗಳನ್ನು ಕುರಿತು ವಿವರವಾಗಿ ಚರ್ಚಿಸಲಾಗಿದೆ. ಕೆಲವೊಂದು ಸಮಸ್ಯೆಗಳು ಅಷ್ಟೇನೂ ಶಾಶ್ವತವಾದಂಥವುಗಳಲ್ಲ ಎಂಬುದನ್ನು ಹೇಳುತ್ತದೆ. ಆದರೆ ಸಮಾಜದ ವ್ಯವಸ್ಥೆಯೊಳಗಡೆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಕಷ್ಟಕರವಾಗುತ್ತಿರುವುದರ ಬಗ್ಗೆ ಚರ್ಚಿಸಲಾಗಿದೆ.

ಇಂದಿನ ವಿದ್ಯಾರ್ಥಿಗಳು ಪಡೆಯುತ್ತಿರುವಂತಹ ಕಲಾಶಿಕ್ಷಣವನ್ನು ನೋಡಿದರೆ ಜೀವನಕ್ಕೂ ಶಿಕ್ಷಣ ಮತ್ತು ಕಾಲೇಜುಗಳಿಗೂ ಒಂದಕ್ಕೊಂದು ಸಂಬಂಧವಿಲ್ಲದಂತಾಗಿರುವುದನ್ನು ಗಮನಿಸಬಹುದು. ಕರ್ನಾಟಕ ಸರ್ಕಾರವು ಎಂಜಿನಿಯರ್ ಮತ್ತು ವೈದ್ಯಕೀಯ ಕಾಲೇಜುಗಳಿಗೆ ಸೇರಿದಂತೆ ಲಕ್ಷಗಟ್ಟಲೇ ಹಣವನ್ನು ಕಲಾಶಿಕ್ಷಣಕ್ಕೆ ಸುರಿಯುವುದಕ್ಕೆ ಸಾಧ್ಯವಿಲ್ಲವಾಗಿದೆ ಏಕೆ? ಇಂಜಿನಿಯರ್ ಮತ್ತು ವೈದ್ಯಕೀಯ ಶಿಕ್ಷಣಕ್ಕೆ ಅರ್ಹನಾಗುತ್ತಾನೆ. ಇಲ್ಲಿ ಕಲಿಯುವಂತಹ ವಿದ್ಯಾರ್ಥಿಗಳು ಶ್ರೀಮಂತ ವರ್ಗದವರಾಗಿದ್ದು ಇದು ಸಮಾಜಕ್ಕೂ ಗೊತ್ತಿರುವಂತಹ ವಿಷಯವಾಗಿದೆ. ಇದಕ್ಕೆ ಸಂಬಂಧಿಸಿದಂತಹ ಕಾನೂನು ಸಹ ಕಪಿಮುಷ್ಠಿಯಲ್ಲಿದ್ದು ವಿಶ್ವವಿದ್ಯಾಲಯ ಗಳು ಹಾಗೂ ಶಿಕ್ಷಣ ಪಡೆದವರು ಉನ್ನತ ಶಿಕ್ಷಣದ ಮೇಲಾಗುತ್ತಿರುವ ಈ ಅನ್ಯಾಯವನ್ನು ನೋಡಿಯೂ ನೋಡದಂತಿರುವ ಬಗೆಗೆ ವಿಶ್ಲೇಷಿಸಲಾಗಿದೆ.

ಮುಖ್ಯವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಚಿತ್ರಕಲಾ ಶಿಕ್ಷಕರ ಸಮಸ್ಯೆಗಳನ್ನು ಕುರಿತು ವಿವರಿಸಲಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಚಿತ್ರಕಲೆಯ ಅಂಶವು ಒಳಗೊಂಡಿದ್ದರೆ ಮಕ್ಕಳಿಗೆ ಬಣ್ಣ ಗೀಚಾಡುವಿಕೆಯಿಂದ ಶಿಕ್ಷಣಕ್ಕೆ ಸಂಬಂಧಿಸಿದಂತಹ ಚಟುವಟಿಕೆಗಳನ್ನು ಕಲಿಯಲು ಆಸಕ್ತಿ ಹೆಚ್ಚಾಗುತ್ತದೆ. ಮಕ್ಕಳು ಚಿತ್ರ ರಚನೆ ಮಾಡುವಾಗ ಅವರಿಗೆ ಇಷ್ಟ ಬಂದ ಹಾಗೆ ಚಿತ್ರ ರಚನೆ ಮಾಡಲು ಅಥವಾ ಗೀಚಲು ಸಂಪೂರ್ಣವಾದಂತಹ ಸ್ವಾತಂತ್ರ್ಯವನ್ನು ನೀಡಬೇಕು. ಪ್ರಾಥಮಿಕ ಮತ್ತು ಪ್ರೌಢಶಾಲಾ, ಚಿತ್ರಕಲಾ ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆಗಳು, ಪದವಿ ನಂತರದ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು ಎದುರಿಸುವ ಸಮಸ್ಯೆಗಳು, ಮೂಲಭೂತ ಸಮಸ್ಯೆಗಳು, ಸಂಸ್ಥಾಪಕರ ಸಮಸ್ಯೆಗಳು, ಉಪನ್ಯಾಸಕರ ಸಮಸ್ಯೆಗಳ ಕುರಿತು ಸುಸಂಬದ್ಧವಾಗಿ ವಿಂಗಡಿಸಿಕೊಂಡು ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಕೆಲವು ದಶಕಗಳಿಂದ ಕರ್ನಾಟಕದಲ್ಲಿರುವಂತಹ ಪ್ರತಿಭಾವಂತ ಕಲಾವಿದರು ಬೇರೆ ಬೇರೆ ರಾಜ್ಯಗಳಿಗೆ ಹೋಗುವುದನ್ನು ನಮ್ಮ ಕ್ಷೇತ್ರದಲ್ಲಿ ಅತಿ ಹೆಚ್ಚು ಕಾಣಬಹುದು. ಯುವ ಕಲಾವಿದರು ಅಥವಾ ಕಲಾ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ, ವೃತ್ತಿಯ ಅವಕಾಶಗಳಿಗಾಗಿ ಮುಂಬಯಿ, ಬರೋಡಾ, ದೆಹಲಿ ಮುಂತಾದ ಸ್ಥಳಗಳಿಗೆ ತೆರಳುತ್ತಿದ್ದಾರೆಂಬುದನ್ನು ಪ್ರಸ್ತಾಪಿಸಲಾಗಿದೆ. ಕರ್ನಾಟಕ ಕಲೆಗಳ ನಾಡು ಎಂದು ಹೆಸರು ಪಡೆದಿದ್ದರೂ ನಾನಾ ರೀತಿಯ ಭವ್ಯ ಸಂಪ್ರದಾಯವಿದ್ದರೂ ಈ ಕಲಾವಿದರ ವಲಸೆಯನ್ನು ತಪ್ಪಿಸಲು ಸಾಧ್ಯವಿಲ್ಲವೆಂಬುವುದರ ಬಗ್ಗೆ ವಿಶ್ಲೇಷಿಸಲಾಗಿದೆ. ಕರ್ನಾಟಕ ದೃಶ್ಯಕಲಾ ಶಿಕ್ಷಣದ ಸವಾಲುಗಳಿಗೆ ಸಂಬಂಧಿಸಿದಂತೆ ಪಠ್ಯಕ್ರಮ, ವಿದ್ಯಾರ್ಥಿ ಕಲಿಕೆ, ಶಿಕ್ಷಕರ ನೇಮಕಾತಿ, ದೂರಶಿಕ್ಷಣದಲ್ಲಿ

ನೀಡುತ್ತಿರುವ ಚಿತ್ರಕಲಾ ಶಿಕ್ಷಣ, ಲಲಿತಕಲಾ ವಿಶ್ವವಿದ್ಯಾಲಯದ ಸ್ಥಾಪನೆ ಇಂತಹ ಶೋಧನೆಗಳಿಗೆ ತೊಡಗಿದಾಗ ಆತಂಕ ಅನುಮಾನಗಳು ಇದ್ದರೂ ಅವುಗಳನ್ನು ಯಾವ ರೀತಿಯಲ್ಲಿ ಪರಿಹರಿಸಿ ಕೊಳ್ಳಬೇಕೆಂಬುದರ ಬಗ್ಗೆ ಈ ಅಧ್ಯಾಯದಲ್ಲಿ ಹೇಳಲಾಗಿದೆ.

ಬಹುಶಃ ಇಂದಿನ ಚಿತ್ರಕಲಾ ಶಾಲೆಗಳಲ್ಲಿ ಕಾಣುವಂತಹ ಕೃತಿಗಳಲ್ಲಿ ಈ ರೀತಿಯ ಉದಾಸೀನತೆ ಅನುಭವವಾಗುವುದು, ಕಲಾಶಾಲೆಗಳಲ್ಲಿ ಉದ್ಯೋಗಮುಖಿಯಾದ ರೀತಿಯಲ್ಲಿ ಬೋಧಿತವಾಗಿದ್ದಲ್ಲಿ ಇವರಲ್ಲಿ ಅನೇಕರುಗಳು ವೃತ್ತಿ ಭಾಗವೂ ಸುಗಮವಾಗಿ ಸಾಮಾಜಿಕವಾಗಿಯೂ ಅವರ ಪ್ರಯತ್ನವು ಪ್ರಯೋಜನಕರವಾಗುತ್ತಿದ್ದಿತು. ಒಂದೇ ನಳಿಗೆಯಲ್ಲಿ ತುರುಕಿದಂತೆ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವುದರಿಂದ ಇಂದಿನ ಕಲಾಶಿಕ್ಷಣದ ಕ್ರಮವೂ ಕಲೆಗೆ ಅಪಚಾರ ಮಾಡುವಂತಿದೆ. ದೃಶ್ಯಕಲಾ ವಿಷಯಗಳಿಗೆ ಸಂಬಂಧಿಸಿದಂತೆ ಅದರದೇ ಆದಂತಹ ಇನ್ನೂ ಹಲವು ಪರಿಹಾರಗಳನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

ಅಧ್ಯಾಯ ಆರು ಸಮಾರೋಪವಾಗಿದ್ದು, ಮೇಲಿನ ಒಟ್ಟು ಐದು ಅಧ್ಯಾಯಗಳಲ್ಲಿ ಕಂಡು ಬರುವಂತಹ ವಿಶೇಷ ಸಂಗತಿಗಳನ್ನು ಹಾಗೂ ಕೆಲವು ಪ್ರಮುಖ ಫಲಿತಗಳನ್ನು ಈ ಪ್ರಸ್ತುತ ಆರನೇ ಅಧ್ಯಾಯದ ಕೊನೆಯಲ್ಲಿ ನೀಡಲಾಗಿದೆ. ಅನುಬಂಧದಲ್ಲಿ ಸಂಕ್ಷೇಪಗಳು, ವಕ್ತೃವಿವರ ಮತ್ತು ಪರಾಮರ್ಶನ ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ.

ಅಧ್ಯಯನದ ಫಲಿತಗಳು

* ವೇದಪೂರ್ವ, ವೇದಕಾಲೀನ ಹಾಗೂ ವೇದೋತ್ತರ ಕಾಲದ ದೃಶ್ಯಕಲಾ ಶಿಕ್ಷಣದ ಸ್ಥಿತಿ-ಗತಿಗಳನ್ನು, ಸ್ವರೂಪಗಳನ್ನು ಪ್ರಸ್ತುತ ಅಧ್ಯಯನದ ಮೂಲಕ ತಿಳಿಯಲಾಗಿದೆ.
* ರಾಜರ ಆಳ್ವಿಕೆಯ ಕಾಲದಲ್ಲಿ ಚಿತ್ರಕಲಾ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದಂತಹ ಸಂಗತಿಯನ್ನು ತಿಳಿದು ಇಲ್ಲಿ ಕಟ್ಟಿಕೊಡಲಾಗಿದೆ.
* ಕರ್ನಾಟಕದ ದೃಶ್ಯಕಲಾ ಶಿಕ್ಷಣದ ಬಗ್ಗೆ ಪ್ರಾಚೀನ ಗ್ರಂಥ, ಶಾಸನಶಿಲ್ಪ, ಭಿತ್ತಿಚಿತ್ರಗಳ ರಚನೆಗಳೊಂದಿಗೆ ಶಿಕ್ಷಣ ಆರಂಭವಾದ ವಿಷಯವನ್ನು ಅಧ್ಯಯನ ನಡೆಸಿ ಕಲಾಶಿಕ್ಷಣದ ಸ್ಪಷ್ಟೀಕರಣ ಕಟ್ಟಿಕೊಡಲಾಗಿದೆ.
* ಕರ್ನಾಟಕದಲ್ಲಿ ಹಲವಾರು ಕಾರಣಗಳಿಂದ ಕಲಾಶಾಲೆಗಳು ಮುಚ್ಚುತ್ತಿರುವುದು ತಿಳಿದು ಬಂದಿದೆ.
* ಕರ್ನಾಟಕ ಸರ್ಕಾರವು ಶಿಕ್ಷಣ ಕ್ಷೇತ್ರದ ಉಳಿದ ಎಲ್ಲಾ ವಿಷಯಗಳಿಗೆ ಶಿಕ್ಷಕರನ್ನು ಆಹ್ವಾನಿಸುತ್ತಾರೆ, ನೇಮಿಸುತ್ತಾರೆ. ಆದರೆ ಚಿತ್ರಕಲಾ ಶಿಕ್ಷಕರ ನೇಮಕಾತಿಯು ನಡೆಯುತ್ತಿಲ್ಲ ಏಕೆ? ಎಂಬುದನ್ನು ಪ್ರಸ್ತಾಪಿಸಲಾಗಿದೆ.
* ಚಿತ್ರಕಲಾ ಶಿಕ್ಷಕರ ನೇಮಕಾತಿಯ ವಿಷಯವು ಗೊಂದಲಮಯವಾದಂತಹ ಪರಿಸ್ಥಿತಿಯಲ್ಲಿದೆ ಎಂಬುದು ತಿಳಿದುಬಂದಿದೆ.

* ಪದವಿ, ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿರುವಂತಹ ಉಪನ್ಯಾಸಕರಿಗೆ ಪ್ರೌಢಶಾಲೆಯ ಶಿಕ್ಷಕರಿಗಿಂತಲೂ ಕಡಿಮೆ ವೇತನವನ್ನು ನೀಡುತ್ತಿದ್ದಾರೆ. ಇದರಿಂದ ಶಿಕ್ಷಕರ ಬದುಕು ಡೋಲಾಯಮಾನವಾಗಿದೆ ಎಂಬುದು ಅರಿವಿಗೆ ಬಂದಿದೆ.
* ಕರ್ನಾಟಕದಲ್ಲಿ ಅನೇಕ ವಿಶ್ವವಿದ್ಯಾಲಯಗಳಿದ್ದು ಅಲ್ಲಿ ನೀಡುತ್ತಿರುವಂತಹ ಕಲಾಶಿಕ್ಷಣದ ಪರೀಕ್ಷೆಗಳು ಏಕರೂಪಿಯಾಗಿಲ್ಲ. ಆದರೆ ಒಂದು ವಿಶ್ವವಿದ್ಯಾಲಯವು ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಿಕೊಂಡಿದ್ದರೆ ಮತ್ತೊಂದು ವಿಶ್ವವಿದ್ಯಾಲಯವು ನಾನ್ ಸೆಮಿಸ್ಟರ್ ಪದ್ಧತಿಯನ್ನು ಅನುಸರಿಸುವುದನ್ನು ಕಾಣುತ್ತೇವೆ. ಕೆಲವು ಸಿ.ಬಿ.ಸಿ.ಎಸ್. ಪಠ್ಯಾವಳಿಯನ್ನು ಕೂಡ ವಿನೂತನವಾಗಿ ಕೆಲವೆಡೆ ಅಳವಡಿಸಿಕೊಂಡಿದ್ದಾರೆ ಎಂದು ತಿಳಿದುಬರುತ್ತದೆ.
* ಚಿತ್ರಕಲಾ ಶಿಕ್ಷಣದ ಜೊತೆಗೆ ವಾಣಿಜ್ಯ ಕಲೆಯ ಕಲಿಕೆಗೆ ಕರ್ನಾಟಕದ ಕೆಲವು ಕಲಾ ಶಾಲೆಗಳಲ್ಲಿ ಹೆಚ್ಚಿನ ಪ್ರಾತಿನಿಧ್ಯ ದೊರೆತಿದೆ. ಬಹುತೇಕ ಕಾಲೇಜುಗಳಲ್ಲಿ ಈ ಅವಕಾಶ ಲಭ್ಯವಿಲ್ಲ.
* ಕರ್ನಾಟಕದಲ್ಲಿರುವಂತಹ ಅನುದಾನರಹಿತ ಕಲಾಸಂಸ್ಥೆಗಳು ಹಣಕಾಸಿನ ಕೊರತೆಯಿಂದಾಗಿ ಬೆಳವಣಿಗೆ ಕುಂಠಿತಗೊಂಡಿದ್ದರೆ ಇನ್ನೂ ಕೆಲವೊಂದು ಕಲಾಸಂಸ್ಥೆಗಳು ಸ್ಥಗಿತಗೊಂಡಿರುವುದನ್ನು ಕಾಣಬಹುದು.
* ೨೦೦೮ರಿಂದ ಪಠ್ಯಕ್ರಮ ಸಿದ್ಧಗೊಂಡ ನಂತರ ಐದು ವರ್ಷದ ಶಿಕ್ಷಣವನ್ನು ನೀಡಿ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮತ್ತು ಪ್ರಮಾಣ ಪತ್ರ ನೀಡಲಾಗುತ್ತಿದೆ. ಆದರೆ ಇದುವರೆಗೂ ವೃಂದ ಮತ್ತು ನೇಮಕಾತಿಗೆ ಸೇರಿಸಿಲ್ಲದಿರುವುದು ತಿಳಿದುಬಂದಿದೆ.
* ಪಿ.ಯು.ಸಿ., ಪದವಿ ಹಂತಗಳಲ್ಲಿ ನಿಗದಿಯಾದ ವಿಷಯಗಳ ಬಗ್ಗೆ ಪಠ್ಯಪುಸ್ತಕಗಳು ಇರುತ್ತವೆ. ಆದರೆ ಕಲಾಶಿಕ್ಷಣಕ್ಕೆ ಬಂದಾಗ ಮೇಲಿನ ಸೌಲಭ್ಯಗಳ ಕೊರತೆಯು ಎದ್ದು ಕಾಣುತ್ತದೆ.
* ಕರ್ನಾಟಕದಲ್ಲಿ ಮೊದಲು ಖಾಸಗಿಯಾಗಿ ಪ್ರಾರಂಭವಾದಂತಹ ಕಲಾಶಾಲೆ. ಬೆಂಗಳೂರಿನ ಅ.ನ. ಸುಬ್ಬರಾಯರ ಕಲಾಮಂದಿರ ಎಂಬುದು ತಿಳಿಯುತ್ತದೆ.
* ಅನಾನುಕೂಲಕರ ಸ್ಥಿತಿಯಲ್ಲಿರುವಂತಹ ಕಲಾಸಂಸ್ಥೆಗಳಿಗೆ ಸರ್ಕಾರವು ಅಗತ್ಯ ಸೌಲಭ್ಯಗಳನ್ನು ಒದಗಿಸಿದರೆ ಅವುಗಳ ಸ್ಥಿತಿ ಉತ್ತಮಗೊಳ್ಳುವುದು. ಕಲಾ ಶಿಕ್ಷಣ ಪಡೆಯಲು ನಮ್ಮಲ್ಲಿ ವಿದ್ಯಾರ್ಥಿಗಳು ಹೊರರಾಜ್ಯಗಳಿಗೆ ಹೋಗುವುದನ್ನು ತಪ್ಪಿಸಬಹುದು ಎಂಬುದನ್ನು ಒತ್ತಿ ಹೇಳಲಾಗಿದೆ.
* ಚಿತ್ರಕಲಾ ಶಿಕ್ಷಣವು ವಿದ್ಯಾರ್ಥಿಯೊಬ್ಬನಿಗೆ ಅವನಿಗರಿವಿಲ್ಲದಂತೆಯೇ ಅವನೊಳಗೆ ಹುದುಗಿರುವ ಸೃಜನಶೀಲ ಮನಸ್ಸನ್ನು ಎಚ್ಚರಗೊಳಿಸುವಲ್ಲಿ ತುಂಬಾ ಗಮನಾರ್ಹ ಪಾತ್ರವಹಿಸುತ್ತದೆ ಎಂಬುದು ತಜ್ಞರ ಸಂದರ್ಶನದಲ್ಲಿ ತಿಳಿದುಬಂದಿದೆ.

* ಚಿತ್ರಕಲಾ ವಿದ್ಯಾಲಯಗಳ ಆಡಳಿತ, ಪರೀಕ್ಷೆಗಳ ಜವಾಬ್ದಾರಿಯನ್ನು ಎಸ್.ಎಸ್.ಎಲ್.ಸಿ. ಬೋರ್ಡ್‌ನಿಂದ ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿದಾಗ ಟಿ.ಪಿ. ಇಸ್ಸಾರ್ ವರದಿಯ ಬಗ್ಗೆ ಕೆಲವು ಶಾಲಾ ಆಡಳಿತ ಮಂಡಳಿಯವರ ಒಮ್ಮತವಿರಲಿಲ್ಲ ಇದು ಒಂದು ಪ್ರಧಾನ ಸಮಸ್ಯೆಯಾಗಿ ಕಾಡಿದೆ.

* ಕನ್ನಡ ವಿಶ್ವವಿದ್ಯಾಲಯವು ಕಲಾಶಾಲೆಯ ಎಲ್ಲಾ ಅಧ್ಯಾಪಕರಿಗೆ ಪುನರ್‌ಮನನ ಶಿಬಿರ, ಪಠ್ಯ, ಅಭಿಶಿಕ್ಷಣ ತರಬೇತಿ, ಕಾರ್ಯಾಗಾರ, ಪಠ್ಯ ಪರಿಷ್ಕರಣೆ ಕಾರ್ಯಕ್ರಮಗಳನ್ನು ಮೂವತ್ತು ಸ್ಥಳಗಳಲ್ಲಿ ೩೦ ಬಾರಿ ಕರ್ನಾಟಕದ ಎಲ್ಲಾ ಕಲಾಶಾಲೆಗಳನ್ನು ಕೆಲವು ಅಧ್ಯಾಪಕರು ಮತ್ತು ಪ್ರಾಚಾರ್ಯರುಗಳನ್ನು ಸೇರಿಸಿ ಮಾಡಿದೆ ಹಾಗೂ ಅಂತಿಮವಾಗಿ ಎಲ್ಲಾ ಪ್ರಾಂಶುಪಾಲರನ್ನು ಎರಡು ಬಾರಿ ವೃಂದ ಮತ್ತು ನೇಮಕಾತಿಯ ಬಗ್ಗೆ ಚರ್ಚೆಗೆ ಒಳಪಡಿಸಿದೆ. ಆದರೆ ಅವರೆಲ್ಲರಲ್ಲಿ ಒಮ್ಮತದ ಅಭಿಪ್ರಾಯ ಮೂಡದಿರುವುದು ಬೇಸರದ ಸಂಗತಿಯಾಗಿದೆ.

* ಇತರ ವಿಷಯಗಳಾದ ಪಿ.ಯು.ಸಿ. ಪದವಿಗಳ (ಬಿ.ಎಸ್.ಸಿ., ಬಿ.ಬಿ.ಎಂ., ಬಿ.ಎ.) ಹಂತಗಳಲ್ಲಿ ನಿಗದಿತವಾದ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳಿರುತ್ತವೆ. ಆದರೆ ಚಿತ್ರಕಲಾ ಕ್ಷೇತ್ರದಲ್ಲಿ ಇಂತಹ ವ್ಯವಸ್ಥೆ ಸರಿಯಾಗಿಲ್ಲದಿರುವುದನ್ನು ಕಾಣುತ್ತೇವೆ. ಈ ಸಮಸ್ಯೆಯ ಕುರಿತು ಕರ್ನಾಟಕ ಸರಕಾರ ಮತ್ತು ಶಿಕ್ಷಣ ಇಲಾಖೆಯು ಕೂಡ ಗಮನಹರಿಸ ದಂತಾಗಿರುವುದು ವಿಷಾದದ ಸಂಗತಿಯಾಗಿದೆ.

* ದೃಶ್ಯಕಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪಠ್ಯಪುಸ್ತಕ ರಚನಾ ಸಮಿತಿಯ ಅಗತ್ಯವಿದೆ.

* ಬಹುತೇಕ ಖಾಸಗಿ ಪ್ರಾಥಮಿಕ, ಪ್ರೌಢಶಾಲೆ ಹಾಗೂ ವಸತಿ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರನ್ನು ನೇಮಿಸಿಕೊಳ್ಳುತ್ತಾರೆ. ಆದರೆ ಸರ್ಕಾರಿ ಶಾಲೆಗಳಲ್ಲಿ ಇಂತಹ ಪ್ರಕ್ರಿಯೆ ಇಲ್ಲದಾಗಿದ್ದು ನೇಮಕ ಮಾಡಿಕೊಳ್ಳಬೇಕಿದೆ.

* ಗುರುವಿನ ಮುಖಾಂತರವೇ ಕಲಿಯಬೇಕಾಗಿರುವ ರಾಚನಿಕ ವಿದ್ಯೆಯಾಗಿರುವ ದೃಶ್ಯಕಲೆಯನ್ನು (ಚಿತ್ರಕಲೆ ಮತ್ತು ಶಿಲ್ಪಕಲೆ) ದೂರಶಿಕ್ಷಣದ ಮೂಲಕ ಕಲಿಸಲಾಗುತ್ತಿದೆ. ಇದರಿಂದ ಕೌಶಲ್ಯದ ಬೆಳವಣಿಗೆಯಾಗುವುದಿಲ್ಲವೆಂಬ ಸತ್ಯವನ್ನು ಕಂಡುಕೊಳ್ಳಲಾಗಿದೆ.

* ಕರ್ನಾಟಕ ರಾಜ್ಯದಲ್ಲಿ ದೃಶ್ಯಕಲೆಯಲ್ಲಿ ಪ್ರಯೋಗಗಳನ್ನು ಮಾಡುವ ಬದಲು ದೃಶ್ಯಕಲಾ ಶಿಕ್ಷಣ ಕ್ಷೇತ್ರದಲ್ಲಿ ಪದವೀಧರರನ್ನು ಹೆಚ್ಚು ಮಾಡುವ ಈ ತರಹದ ಶುಷ್ಕ ಪ್ರಯೋಗಗಳನ್ನು ಮಾಡಿಯಾಗಿದೆ.

* ಇತ್ತೀಚೆಗೆ ಪ್ರಶಸ್ತಿ - ಪುರಸ್ಕಾರಗಳು ಹರಾಜಾಗುತ್ತಲಿವೆ ಎಂಬ ಕೂಗು ಕೇಳಿಬರುತ್ತಿದೆ ಹಾಗೂ ಜಾತಿಯ ಕೊಳಕು ತೊಳೆದರೂ ಹೋಗದಷ್ಟು ಅಂಟಿಕೊಂಡುಬಿಟ್ಟಿದೆ.

❖❖❖

ಅನುಬಂಧ

೧. ಸಂಕ್ಷೇಪಗಳು
೨. ವಕ್ತೃಗಳು
೩. ಪರಾಮರ್ಶನ ಗ್ರಂಥಗಳು
೪. ಛಾಯಾಚಿತ್ರಗಳು

ಅನುಬಂಧ

೧. ಸಂಕ್ಷೇಪಗಳು

೧. ಪು.ಸಂ.	:	ಪುಟ ಸಂಖ್ಯೆ
೨. ಪ್ರ.ಸಂ.	:	ಪ್ರಧಾನ ಸಂಪಾದಕರು
೩. ಮು.ಸಂ.	:	ಮುಖ್ಯ ಸಂಪಾದಕರು
೪. ಸಂ.	:	ಸಂಪಾದಕರು
೫. ಸಂ. ವಿದ್ಯಾರ್ಥಿ	:	ಸಂಶೋಧನ ವಿದ್ಯಾರ್ಥಿ
೬. ಕಿ.ಪ್ರ.	:	ಕಿರು ಪ್ರಬಂಧ
೭. ಸಂ.ಪ್ರ.	:	ಸಂಪ್ರಬಂಧ
೮. ಮ.ಪ್ರ.	:	ಮಹಾಪ್ರಬಂಧ
೯. ಚಿ.ಸಂ.	:	ಚಿತ್ರಸಂಖ್ಯೆ
೧೦. ಅ.ಪ್ರ.	:	ಅಪ್ರಕಟಿತ
೧೧. ಪ್ರ.	:	ಪ್ರಕಟಿತ
೧೨. ಯೋ.ವ.	:	ಯೋಜನಾ ವರದಿ
೧೩. ಕ.ಸಾ.ಪ.	:	ಕನ್ನಡ ಸಾಹಿತ್ಯ ಪರಿಷತ್ತು
೧೪. ಕ.ಲ.ಅ.ಬೆಂ.	:	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೧೫. ಕ.ಚಿ.ಪ.ಬೆಂ.	:	ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಂಗಳೂರು
೧೬. ಕ್ರಿ.ಪೂ.	:	ಕ್ರಿಸ್ತಪೂರ್ವ
೧೭. ಕ್ರಿ.ಶ.	:	ಕ್ರಿಸ್ತಶಕ
೧೮. ಅನು	:	ಅನುವಾದ

೧೯. ಪ್ರೊ. : ಪ್ರೊಫೆಸರ್

೨೦. ಬೆಂ.ವಿ.ವಿ. : ಬೆಂಗಳೂರು ವಿಶ್ವವಿದ್ಯಾಲಯ

೨೧. ಮೈ.ವಿ.ವಿ. : ಮೈಸೂರು ವಿಶ್ವವಿದ್ಯಾಲಯ

೨೨. ಕ.ವಿ.ಹಂ. : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೩. ಕ.ವಿ.ವಿ. : ಕರ್ನಾಟಕ ವಿಶ್ವವಿದ್ಯಾಲಯ

೨೪. ಗು.ವಿ.ವಿ. : ಗುಲಬರ್ಗಾ ವಿಶ್ವವಿದ್ಯಾಲಯ

೨೫. ಕ.ಶಿ.ಅ.ಬೆಂ. : ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು

೨೬. ಕ.ಪ್ರೌ.ಶಿ.ಪ.ಮಂ. : ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ.

೨೭. ಕ.ರಾ.ಮು.ವಿ.ವಿ.ಮೈ. : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

❖❖❖

೨. ವಕ್ತೃಗಳು

ದೃಶ್ಯಕಲಾ ಶಿಕ್ಷಣ ಕುರಿತಂತೆ ಮಾಹಿತಿ ನೀಡಿದವರು

ಕ್ರಸಂ.	ಹೆಸರು	ವಯಸ್ಸು	ವೃತ್ತಿ	ಊರು
೧.	ಖಂಡೇರಾವ್ ಜೆ.ಎಸ್.	೮೭	ಹಿರಿಯ ಕಲಾವಿದರು	ಕಲಬುರ್ಗಿ
೨.	ಪ್ರೊ. ಅಂದಾನಿ ವಿ.ಜಿ.	೭೨	ಹಿರಿಯ ಕಲಾವಿದರು/ ಸಂಸ್ಥೆಯ ನಿರ್ದೇಶಕರು	ಕಲಬುರ್ಗಿ
೩.	ಪಾಟೀಲ ಎ.ಎಸ್.	೭೬	ಹಿರಿಯ ಕಲಾವಿದರು	ಕಲಬುರ್ಗಿ
೪.	ಬಾಳೇಕಾಯಿ ಎಂ.ಆರ್.	೮೮	ಹಿರಿಯ ಕಲಾವಿದರು	ಧಾರವಾಡ
೫.	ಡಾ. ಉಪಾಧ್ಯ ಡಿ.ಎ.	೭೦	ಸಂಸ್ಥೆಯ ಡೀನರು	ಮೈಸೂರು
೬.	ಬಸವರಾಜ ಎಲ್. ಜಾನೆ	೬೯	ಹಿರಿಯ ಕಲಾವಿದರು/ ನಿವೃತ್ತ ಉಪನ್ಯಾಸಕರು	ಕಲಬುರ್ಗಿ
೭	ಉಮೇಶ ಹಡಪದ	೫೯	ಪ್ರಾಚಾರ್ಯರು	ಬೆಂಗಳೂರು
೮.	ಬಸವರಾಜ ಮುಸಾವಳಗಿ	೬೧	ಡೀನರು	ಮೈಸೂರು
೯.	ಕಡೇಮನಿ ಪಿ.ಎಸ್.	೬೭	ಕಲಾ ಶಾಲೆಯ ಮ್ಯಾನೇಜ್‌ಮೆಂಟ್	ವಿಜಯಪುರ
೧೦.	ಶಾಂತಲ ಬ.ಅಪ್ಪ	೫೬	ಮುಖ್ಯಸ್ಥರು	ಕಲಬುರ್ಗಿ
೧೧.	ಡಾ. ಬಸವರಾಜ ಗವಿಮಠ	೫೯	ಪ್ರಾಚಾರ್ಯರು	ಇಲಕಲ್
೧೨.	ಬಸವರಾಜ ಕೆ. ಕೋರಕರ್	೩೬	ಉಪನ್ಯಾಸಕರು	ಕಲಬುರ್ಗಿ
೧೩.	ಬೆಳಮಗಿ ಎಂ.ಎಚ್	೫೮	ಪ್ರಾಚಾರ್ಯರು	ಕಲಬುರ್ಗಿ
೧೪.	ರಾಜಶೇಖರ್ ಎಸ್.	೫೭	ಪ್ರಾಚಾರ್ಯರು	ಕಲಬುರ್ಗಿ
೧೫.	ಮಹಾದೇವ ಶೆಟ್ಟಿ ಕೆ.ಸಿ.	೫೬	ಪ್ರಾಚಾರ್ಯರು	ಮೈಸೂರು
೧೬.	ಡಾ. ಶಿವಾನಂದ ಎಚ್. ಬಂಟನೂರು	೪೬	ಸಹಾಯಕ ಪ್ರಾಧ್ಯಾಪಕರು	ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೭	ಡಾ. ಮೋಹನ್‌ರಾವ್ ಬಿ. ಪಂಚಾಳ	೪೬	ಮುಖ್ಯಸ್ಥರು ಸಹಾಯಕ ಪ್ರಾಧ್ಯಾಪಕರು	ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೮.	ಹೇಮಂತ್‌ಕುಮಾರ	೪೪	ಪ್ರೌಢ ಶಾಲಾ ಶಿಕ್ಷಕರು	ಮಾಲೂರು
೧೯.	ಗಣೇಶ್ ಎಚ್.	೩೮	ಪ್ರಾಥಮಿಕ ಶಾಲಾ ಚಿತ್ರಕಲಾ ಶಿಕ್ಷಕರು	ಗೋಕಾಕ
೨೦.	ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ	೪೮	ಸಹಾಯಕ ಪ್ರಾಧ್ಯಾಪಕರು	ಕಲಬುರ್ಗಿ ವಿಶ್ವವಿದ್ಯಾಲಯ
೨೧.	ಡಾ. ಕೃಷ್ಣೇಗೌಡ ಹೆಚ್.ಎನ್.	೪೨	ಸಹಾಯಕ ಪ್ರಾಧ್ಯಾಪಕರು	ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೨.	ನಂದಿಹಳ್ಳಿ ಎನ್.ಎ.	೭೮	ಕಲಾ ಶಾಲೆಯ ಪ್ರಾರಂಭಕರ್ತರು	ರಟ್ಟೀಹಳ್ಳಿ
೨೩.	ಪ್ರಕಾಶ್ ಎ.ಎಂ.	೫೫	ಪ್ರಾಚಾರ್ಯರು	ಬೆಂಗಳೂರು
೨೪.	ಉಮೇಶ್ ಎಸ್.	೩೬	ಉಪನ್ಯಾಸಕರು ಹಾಗೂ ಯುವ ಕಲಾವಿದರು	ಬೆಂಗಳೂರು
೨೫.	ಯುಸೆಫ್ ಆಲಿ ಖಸಾಸಿ	೩೯	ಚಿತ್ರಕಲಾ ಶಿಕ್ಷಕರು	ಧಾರವಾಡ
೨೬	ಜಾದವ ಆರ್.ಬಿ.	೭೨	ಕಲಾ ಶಾಲೆಯ ಸಂಸ್ಥಾಪಕರು	ಬಳ್ಳಾರಿ
೨೭	ಡಾ. ಪಾಟೀಲ ಬಿ.ಎಂ.	೫೩	ಉಪನ್ಯಾಸಕರು	ಧಾರವಾಡ
೨೮.	ಬಾರಕೇರ ಸಿ.ಸಿ.	೪೮	ಉಪನ್ಯಾಸಕರು	ಧಾರವಾಡ
೨೯.	ಕುರಿಯವರ ಬಿ.ಎಚ್.	೪೯	ಉಪನ್ಯಾಸಕರು	ಧಾರವಾಡ
೩೦.	ಕಡ್ಲಿಕೊಪ್ಪ ಆರ್.ಡಿ.	೬೨	ನಿವೃತ್ತ ಉಪನ್ಯಾಸಕರು	ಗದಗ
೩೧.	ಡಾ. ಚವ್ಹಾಣ ಬಿ.ಎಲ್.	೫೬	ಪ್ರಾಚಾರ್ಯರು	ಗದಗ
೩೨.	ಪ್ರಹ್ಲಾದ ಬಾಳಪ್ಪ ಸಾಬಣ್ಣವರ	೫೫	ಪ್ರಾಚಾರ್ಯರು	ಬೆಳಗಾವಿ
೩೩.	ವೀರಭದ್ರಪ್ಪ ಸಾಲಿ	೪೮	ಪ್ರಾಚಾರ್ಯರು	ರಾಯಭಾಗ
೩೪.	ಮಠಪತಿ ಬಿ.ಎಸ್.	೪೪	ಉಪನ್ಯಾಸಕರು	ಅಥಣಿ
೩೫.	ಹಿರೇಮಠ ವಿ.ವಿ.	೫೬	ಪ್ರಾಚಾರ್ಯರು	ಬಿಜಾಪೂರ
೩೬	ಸಾಸನೂರು ಆರ್.ಎಚ್.	೫೨	ಉಪನ್ಯಾಸಕರು	ಹೂವಿನ ಹಿಪ್ಪರಗಿ
೩೭	ಪ್ರಭುಲಿಂಗಯ್ಯ	೫೦	ಪ್ರಾಚಾರ್ಯರು	ಬೀದರ್
೩೮.	ಜಾಧವ್ ವಿ.ಎನ್.	೫೨	ಪ್ರಾಚಾರ್ಯರು	ಹುಮನಾಬಾದ್
೩೯.	ಯೋಗೇಶ ಚ. ಮಠದ	೪೬	ಪ್ರಾಚಾರ್ಯರು	ಬೀದರ್

೪೦.	ಬಡಿಗೇರ್ ಬಿ.ಕೆ.	೫೪	ಉಪನ್ಯಾಸಕರು	ಬೀದರ್
೪೧.	ನೀಲಪ್ಪ ಎಸ್.	೩೯	ಉಪನ್ಯಾಸಕರು	ಹೊಸಪೇಟೆ
೪೨.	ವೀರಾಚಾರಿ ಬಿ.	೫೨	ಕಲಾಶಾಲೆಯ ಸಂಸ್ಥಾಪಕರು	ಹೂವಿನಹಡಗಲಿ
೪೩.	ಪ್ರಭು ಹರಸೂರು	೫೫	ಉಪನ್ಯಾಸಕರು/ ಹಿರಿಯ ಕಲಾವಿದರು	ತುಮಕೂರು
೪೪.	ಬಾಬುರಾವ್	೫೮	ಪ್ರಾಚಾರ್ಯರು	ತುಮಕೂರು
೪೫.	ಉಡುಪಿರಾವ್ ಕುಲಕರ್ಣಿ	೭೨	ನಿವೃತ್ತ ಪ್ರೌಢ ಶಾಲಾ ಚಿತ್ರಕಲಾ ಶಿಕ್ಷಕರು	ಗದಗ
೪೬	ಶಾಹಿದ್ ಪಾಷ	೩೭	ಉಪನ್ಯಾಸಕರು	ಗುಲಬರ್ಗಾ ವಿಶ್ವವಿದ್ಯಾಲಯ
೪೭	ಶಿವಕುಮಾರ ಕೆಸರಮಾಡು	೪೫	ಪ್ರಾಚಾರ್ಯರು	ಮೈಸೂರು
೪೮.	ಕೃಷ್ಣಮೂರ್ತಿ.ಎಚ್.	೪೦	ಪ್ರಾಚಾರ್ಯರು	ಮೈಸೂರು
೪೯.	ಡಾ. ಸಂತೋಷಕುಮಾರ್ ನಾಗರಾಳ	೩೪	ಕಲಾವಿದರು	ವಿಜಯಪುರ
೫೦.	ರಮೇಶ್ ಸಜ್ಜನ	೪೨	ಪ್ರಾಚಾರ್ಯರು	ಸಿಂಧನೂರು
೫೧.	ಡಾ. ಪಿ.ಬಿ. ಗವಾನಿ	೪೭	ಉಪನ್ಯಾಸಕರು	ರಾಯಭಾಗ
೫೨.	ಶ್ರೀಮತಿ ಎ.ಎಸ್. ಸುತಾರ	೪೫	ಉಪನ್ಯಾಸಕರು	ಗೋಕಾಕ್
೫೩.	ಡಾ. ಬಿ.ಎಲ್. ಚವ್ಹಾಣ	೫೨	ಪ್ರಾಚಾರ್ಯರು	ಗದಗ
೫೪.	ಕಡ್ಲಿಕೊಪ್ಪ ಆರ್.ಡಿ.	೬೩	ನಿವೃತ್ತ ಉಪನ್ಯಾಸಕರು	ಗದಗ
೫೫.	ಉಮೇಶ್ ಎಸ್. ಹಿರೇಮಠ	೫೬	ಪ್ರಾಚಾರ್ಯರು	ಧಾರವಾಡ
೫೬	ಮಹಾದೇವಪ್ಪ ಸಣತಂಗಿ	೩೨	ಚಿತ್ರಕಲಾ ವಿದ್ಯಾರ್ಥಿ	ವಿಜಯಪುರ
೫೭	ಅನಿಲ್ ಪ್ರಕಾಶ್	೬೪	ನಿವೃತ್ತ ಉಪನ್ಯಾಸಕ	ಬೆಳಗಾವಿ
೫೮.	ಸೋಮಶೇಖರ್.ಸಿ.ಬಿ.	೭೬	ಹಿರಿಯ ಕಲಾವಿದರು	ಬೀದರ್
೫೯.	ರವಿಕುಮಾರ್ ಎಚ್.ಎನ್.	೩೨	ಕಲಾ ವಿದ್ಯಾರ್ಥಿ	ತುಮಕೂರು
೬೦.	ಲಕ್ಷ್ಮಣ್ ಶಾಂತಪ್ಪಗೋಳ	೩೨	ಕಲಾ ವಿದ್ಯಾರ್ಥಿ	ಗೋಕಾಕ್
೬೧.	ರವೀಂದ್ರ ಹಡಪದ	೫೭	ಉಪನ್ಯಾಸಕರು	ಬೆಂಗಳೂರು
೬೨.	ವೆಂಕಟೇಶ್	೩೪	ತಾತ್ಕಾಲಿಕ ಉಪನ್ಯಾಸಕರು	ಧಾರವಾಡ
೬೩.	ಮೋಹನ್ ಜಿ.	೩೬	ತಾತ್ಕಾಲಿಕ ಉಪನ್ಯಾಸಕರು	ತುಮಕೂರು

❖❖❖

೩. ಪರಾಮರ್ಶನ ಗ್ರಂಥಗಳು

೧. ಅನಂತನ್ ವಿ.ಆರ್., ರಾಮಕೃಷ್ಣಪ್ಪ ಎಂ. (ಸಂ), **ಶಿಕ್ಷಣ ಭಾರತಿ,** ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ, ಭಾರತಿ ಎಜುಕೇಷನ್ ಟ್ರಸ್ಟ್, ಮಂಡ್ಯ, ೨೦೧೨.

೨. ಅರುಣಿ ಎಸ್.ಕೆ. **ದಖನಿ ಚಿತ್ರಕಲೆ,** ಕರ್ನಾಟಕ ಲಲತಕಲಾ ಅಕಾಡೆಮಿ, ಬೆಂಗಳೂರು, ೨೦೦೧,

೩. ಅಶೋಕ ಟಿ. ಅಕ್ಕಿ, **ಕಲಾ ಚರಿತ್ರೆ,** ಎಂ.ಎಸ್. ಶಾಬಾದಿಮಠ ಬುಕ್ ಡಿಪೋ, ಗದಗ, ೨೦೦೩.

೪. ಉಪಾಧ್ಯ ಡಿ.ಎ., **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು,** ಶ್ರೀ ಅಲ್ಲಮಪ್ರಭು ಲಲಿತಕಲಾ ಅಕಾಡೆಮಿ, ಮೈಸೂರು, ೨೦೧೦.

೫ ಎಚ್ಚೆಸ್ಕೆ, **ಶಿಕ್ಷಣ ಸಂಸ್ಕೃತಿ,** ಕಮಲ ಪ್ರಕಾಶನ, ಮೈಸೂರು, ೨೦೦೧.

೬. ಕಾಳೆ ವಿ.ಟಿ., **ಚಿತ್ರಕಲಾ ಪರಿಚಯ,** ವಿಜಯ ಬುಕ್ ಡಿಪೋ, ಗದಗ, ೨೦೧೧.

೭. ಕೃಷ್ಣಯ್ಯ ಎಂ.ಎಚ್., **ಕಲೆ ಮತ್ತು ರಸಾಸ್ವಾದನೆ,** ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು, ೧೯೮೯.

೮. ಕೃಷ್ಣಯ್ಯ ಎಂ.ಎಚ್., **ಕಲಾ ಸಂಸ್ಕೃತಿ,** ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೨.

೯. ಕೃಷ್ಣ ಶೆಟ್ಟಿ ಚಿ.ಸು., **ಎಂ.ಟಿ.ವಿ. ಆಚಾರ್ಯ,** ಕರ್ನಾಟಕ ಲಲತ ಕಲಾ ಅಕಾಡೆಮಿ, ಬೆಂಗಳೂರು, ೧೯೯೦.

೧೦. ಖಂಡೋಬಾ ಪಿ.ಕೆ., ಪಾಟೀಲ ಎಸ್.ಸಿ., **ಹೈದ್ರಾಬಾದ್ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ,** ಲಲಿತ ಕಲೆಗಳ ಸಂಪುಟ, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೨.

೧೧. ಗದಗಕರ ಎಸ್.ಎಸ್., **ಇಂದಿನ ಶಿಕ್ಷಣ(ತತ್ವ-ಸಮಸ್ಯೆ-ಪ್ರಯೋಗ),** ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭.

೧೨. ಗಿರಿಜಾ ರಾವ್ ಎಲ್., **ನಮ್ಮ ಶಿಕ್ಷಣ,** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, ೨೦೧೨.

೧೩. ಗಿಲ್ಬರ್ಟ್ ಸಿಕ್ವೇರಾ, **ಪ್ರಥಮ ಪಿಯುಸಿ ಇತಿಹಾಸ**, ಚೇತನ ಬುಕ್‌ಹೌಸ್, ಮೈಸೂರು, ೨೦೦೪.

೧೪. ತಿಪ್ಪೇರುದ್ರಸ್ವಾಮಿ ಎಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೬೮.

೧೫. ದಮಯಂತಿ ನರೇಗಲ್, **ಕಲಾ ತಪಸ್ವಿ ಡಿ.ವಿ. ಹಾಲಬಾವಿ ಜೀವನ ಚರಿತ್ರೆ**, ಅವನಿ ರಸಿಕರ ರಂಗ ಪ್ರಕಾಶನ, ಬೆಂಗಳೂರು, ೨೦೧೫.

೧೬. ನಂಜುಂಡರಾವ್ ಎಂ.ಎಸ್., **ನಂಜುಂಡ ಸಿರಿ–೨೦೦೩**, ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಂಗಳೂರು, ೨೦೦೩.

೧೭. ನಂಜುಂಡರಾವ್ ಎಂ.ಎಸ್., **ನಂಜುಂಡ ಸಿರಿ**, ಪ್ರೊ. ಎಂ.ಎಸ್. ನಂಜುಂಡರಾವ್ ಅಭಿನಂದನಾ ಸಮಿತಿ, ಬೆಂಗಳೂರು, ೨೦೦೦.

೧೮. ನಂಜುಂಡಸ್ವಾಮಿ ಎಂ.ಎಸ್., **ಚಾಲುಕ್ಯ ಚಿತ್ರಕಲೆ**, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೧,

೧೯. ನರಸಿಂಹನ್ ಅ.ಲ., **ಕರ್ನಾಟಕ ಭಿತ್ತಿಚಿತ್ರ ಪರಂಪರೆ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೮.

೨೦. ನರಸಿಂಹನ್ ಅ.ಲ., ಮರಿಶಾಮಾಚಾರ್ ಎನ್.(ಸಂ), **ಚಿತ್ರಕಲಾ ಪ್ರಪಂಚ**, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೩.

೨೧. ನರಸಿಂಹನ್ ಅ.ಲ., **ಆಲೇಖ್ಯ (ಕಲಾ ಲೇಖನಗಳ ಸಂಗ್ರಹ)**, ಸಂಯೋಜಿತ, ಜಯನಗರ, ಬೆಂಗಳೂರು, ೧೯೯೯.

೨೨. ಪಾಟೀಲ ಎಸ್.ಸಿ., ಸತ್ಯಾನಂದ ಪಾತ್ರೋಟ(ಸಂ), **ನಿಜದ ನೆಲೆ**, ಡಾ. ಬಿ.ಕೆ. ಹಿರೇಮಠ ಅಭಿನಂದನ ಗ್ರಂಥ, ೨೦೦೩.

೨೩. ಪಾಟೀಲ ಎಸ್.ಸಿ., **ದೃಶ್ಯ ಸಂವೇದನೆ**, ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ಧಾರವಾಡ, ೨೦೧೫.

೨೪. ಪಾಟೀಲ ಎಸ್.ಸಿ., **ವರ್ಣಸಂಚಯ**, ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಲಕಲ್, ೨೦೦೧.

೨೫. ಪಾಟೀಲ ಎಸ್.ಸಿ.(ಸಂ), **ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು**, ಸ್ಕೂಲ್ ಆಫ್ ಆರ್ಟ್ ವಜ್ರಮಹೋತ್ಸವ ಸಮಿತಿ, ಧಾರವಾಡ, ೧೯೯೫,

೨೬. ಪಾಟೀಲ ಎಸ್.ಸಿ., **ಕರ್ನಾಟಕದ ಜನಪದ ಚಿತ್ರಕಲೆ**, ವೀರಶೈವ ಅಧ್ಯಯನ ಸಂಸ್ಥೆ, ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೯೩.

೨೭. ಬಾಯಿರಿ ಬಿ.ಪಿ., **ಭಾರತೀಯ ಚಿತ್ರಕಲೆ,** ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೭೯.

೨೮. ಬಿರಾದಾರ ಎಂ.ಜಿ.(ಸಂ), **ಕಲಾ ಗಂಗಾ** (ಗುಲಬರ್ಗಾ ವಿಶ್ವವಿದ್ಯಾಲಯ ಸಂಶೋಧನ ಪತ್ರಿಕೆ), ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೮೯.

೨೯. ಭರತಭೂಷಣ ಬಿ., **ಶಿಕ್ಷಣದ ಆಧಾರಗಳು,** ನವೀನ ಪ್ರಕಾಶನ, ಹರಿಹರ, ೨೦೦೪.

೩೦. ಮಂಜುನಾಥ ಕೆ.ಮಾನೆ, **ಚಿತ್ರಕಲಾ ಶಿಕ್ಷಣ,** ಮಾನೆ ಕ್ರಿಯೇಷನ್, ಬಿಜಾಪುರ, ೨೦೦೧,

೩೧. ಮಧು ದೇಸಾಯಿ(ಸಂ), ಸುರೇಶ್ ವೆಂ. ಕುಲಕರ್ಣಿ, **ಚಿತ್ರಶಾಲ್ಮಲಾ,** ಧಾರವಾಡ ಉತ್ಸವ ಸಮಿತಿ, ಧಾರವಾಡ ಜಿಲ್ಲಾ ಆಡಳಿತ, ಧಾರವಾಡ, ೨೦೦೭.

೩೨. ಮರಿಶಾಮಾಚಾರ್ ಎನ್., **ದೃಶ್ಯಕಲಾ,** ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು, ೨೦೦೧.

೩೩. ಮರಿಶಾಮಾಚಾರ್ ಎನ್., **ಸಾಹಿತ್ಯದಲ್ಲಿ ಚಿತ್ರಕಲೆ,** ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು, ೧೯೮೯.

೩೪. ಮರಿಶಾಮಾಚಾರ್ ಎನ್., **ಕರ್ನಾಟಕ ಚಿತ್ರಕಲಾ ಪರಂಪರೆ,** ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು, ೨೦೧೨.

೩೫. ಮರಿಶಾಮಾಚಾರ್ ಎನ್., **ದೃಶ್ಯಕಲಾ,** ಸಿ.ಎಂ.ಎನ್. ಪ್ರಕಾಶನ, ಹುಬ್ಬಳ್ಳಿ, ೨೦೦೧.

೩೬. ಮಲ್ಲಿಕಾರ್ಜುನ ಸಿ. ಬಾಗೋಡಿ, **ಚಿತ್ರಲೇಖ,** ಸರಚಂದ್ರ ಪ್ರಕಾಶನ, ಚಿತ್ತಾಪೂರ, ೨೦೦೯.

೩೭. ಮಲ್ಲಿಕಾರ್ಜುನ ಸಿ. ಬಾಗೋಡಿ., **ಕಲಾಕಂಪು,** ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಂ, ೨೦೧೨.

೩೮. ಮಲ್ಲಿಕಾರ್ಜುನ ಸಿ. ಬಾಗೋಡಿ, **ಸುರಪುರ ಚಿತ್ರಕಲೆ,** ಸರಚಂದ್ರ ಪ್ರಕಾಶನ, ಚಿತ್ತಾಪೂರ, ೨೦೧೦.

೩೯. ಮಲ್ಲಿಕಾರ್ಜುನ ಸಿ. ಬಾಗೋಡಿ, **ಚಿತ್ರಲೇಖ,** ಸುರಚಂದ್ರ ಪ್ರಕಾಶನ, ಚಿತ್ತಾಪೂರ, ೨೦೦೯.

೪೦. ಮಹಾಬಲೇಶ್ವರ ರಾವ್(ಅನು), **ಭಾರತದಲ್ಲಿ ಶಿಕ್ಷಣ,** ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ೨೦೧೬.

೪೧. ಮಹಾಬಲೇಶ್ವರ ರಾವ್, **ಪ್ರಾಥಮಿಕ ಶಿಕ್ಷಣ: ಸಮಸ್ಯೆ ಸವಾಲುಗಳು,** ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೯.

೪೨. ಮಹಾಬಲೇಶ್ವರ ರಾವ್, **ಪ್ರೌಢ ಶಿಕ್ಷಣ ಸಮಸ್ಯೆ ಸವಾಲುಗಳು,** ಶ್ರುತಿಲೋಕ ಪ್ರಕಾಶನ, ಮೈಸೂರು, ೨೦೧೨.

೪೩. ಮಹಾಬಲೇಶ್ವರ ರಾವ್, **ರಾಷ್ಟ್ರೀಯ ಶಿಕ್ಷಣ ನೀತಿ,** ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೧೯೯೮.

೪೪. ಮಹಾಬಲೇಶ್ವರ ರಾವ್, **ಶಿಕ್ಷಣ ವರ್ತಮಾನ,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೨೦೦೭.

೪೫. ರೀನೆ. ಎಫ್. ಎರ್ಡೋಸ್, (ಅನು) ಜೆ.ಆರ್. ನಂಜುಂಡೇಗೌಡ, **ಅಂಚೆ ಮೂಲಕ ಶಿಕ್ಷಣ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨.

೪೬. ಲಕ್ಷ್ಮಣಸಿಂಗ್ ಆರ್. ರಾಥೋಡ್, **ಕರ್ನಾಟಕದಲ್ಲಿ ಅನ್ವಯಕಲೆ ಐತಿಹಾಸಿಕ ದೃಷ್ಟಿಕೋನ,** ಲಕ್ಷ್ಮಣಸಿಂಗ್ ಆರ್. ರಾಥೋಡ್ ಪ್ರಕಾಶನ, ಮೈಸೂರು, ೨೦೧೭.

೪೭. ವರ್ಮಾ ಕೆ.ಎಸ್., **ಜನತೆಗಾಗಿ ಶೈಕ್ಷಣಿಕ ಪ್ರಕ್ರಿಯೆ ನವಸಹಸ್ರಮಾನದ ಒಂದು ಸವಾಲು ಶಿಕ್ಷಣ ತಜ್ಞರ ಪ್ರಬಂಧ ಸಂಕಲನ,** ಪುರೋಗಾಮಿ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೨೦೦೦.

೪೮. ಶರಣಬಸಪ್ಪ ಕೋಲ್ಕಾರ್, **ಶಿಲಾಯುಗದ ಗವಿಚಿತ್ರಗಳು,** ಬಸವ ಪ್ರಕಾಶನ ಮತ್ತು ವ್ಯಾಪಾರಿಗಳು, ಗುಲಬರ್ಗಾ, ೨೦೧೦.

೪೯. ಶಿವರಾಮಮೂರ್ತಿ ಸಿ.(ಅನು), ತಿಪ್ಪೇಸ್ವಾಮಿ, ಪಿ.ಆರ್., **ಭಾರತೀಯ ಚಿತ್ರಕಲೆ,** ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ೧೯೯೮.

೫೦. ಶಿವರಾಮ ಕಾರಂತ, **ಭಾರತೀಯ ಚಿತ್ರಕಲೆ,** ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೩೦.

೫೧. ಶಿವಾನಂದ ಎಚ್. ಬಂಟನೂರು, **ದೃಶ್ಯ ಪದದೃಶ್ಯ,** ಅಲಕಾ ಪ್ರಕಾಶನ, ಖೈನೂರು, ೨೦೧೩.

೫೨. ಶಂಕರ ಪಾಟೀಲ, **ಚಿತ್ರಾಂತರಂಗ,** ಪ್ರಗತಿ ಪ್ರಕಾಶನ, ದಾವಣಗೆರೆ, ೧೯೯೮.

೫೩. ಶಂಕರ ಪಾಟೀಲ, **ಚಿತ್ರಕಲಾ ಚಿಂತನೆ,** ಪ್ರಗತಿ ಪ್ರಕಾಶನ, ದಾವಣಗೆರೆ, ೧೯೯೫.

೫೪. ಸಿದ್ಧರಾಮ ಬಂಗಾರಿ ಸಿತಿಮಾ ವಜ್ಜಲ, **ಬಂಗಾರ ಬಣ್ಣ (ಜನ್ಮ ಸುವರ್ಣ ಮಹೋತ್ಸವ ಅಭಿನಂದನಾ ಗ್ರಂಥ),** ತರಂಗಿಣಿ ಪ್ರಕಾಶನ, ಇಲಕಲ್, ೨೦೧೪.

೫೫. ಸುಂದರ ಅ., **ಕರ್ನಾಟಕ ಪ್ರಾಗೈತಿಹಾಸಿಕ ಕಲೆ,** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪.

೫೬. ಸುಬ್ರಹ್ಮಣ್ಯಂ ಕೆ.ವಿ., **ಲಲಿತ ಕಲೆಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೫.

೫೭. ಹನುಮಂತರೆಡ್ಡಿ ಜೆ., **ಶೈಕ್ಷಣಿಕ ತತ್ವಗಳು,** ಚೇತನ ಬುಕ್ ಹೌಸ್, ಮೈಸೂರು, ೨೦೦೭.

೫೮. ಹೂಗಾರ ಎಸ್.ಕೆ., **ಕಲೆ ಮತ್ತು ಹಬ್ಬ,** ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭.

೫೯. ಹೆಗಡೆ ಆರ್.ಡಿ.(ಕನ್ನಡಕ್ಕೆ), **ಭಾರತದಲ್ಲಿ ಶಿಕ್ಷಣ,** ಕ್ರಿಯಾ ಪ್ರಕಾಶನ, ಬೆಂಗಳೂರು, ೨೦೦೮.

ಕಿರುಪ್ರಬಂಧಗಳು

೧. ಅನಿಲ್‌ಪ್ರಕಾಶ್ ಎಸ್., **ಬೆನನಸ್-ಸ್ಮಿತ್ ಚಿತ್ರಕಲಾ ಮಹಾವಿದ್ಯಾಲಯ ಬೆಳವಣಿಗೆ ಹೆಜ್ಜೆ ಗುರುತುಗಳು,** ಎಂ.ವಿ.ಎ. ಕಿರುಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೯.

೨. ಉಷಾ ಎ.ಎಲ್., **ಕಲಾವಿದ ಶ್ರೀ ಎಸ್.ಎಮ್. ದಾಟನಾಳ, ಐದನೇ ವರ್ಷದ ವಿಶೇಷ ಪರಿಣಿತಿ ಡಿಪ್ಲೊಮಾ ಕಿರುಪ್ರಬಂಧ,** ಎಂ.ಜೆ.ಎಂ. ಚಿತ್ರಕಲಾ ಮಹಾವಿದ್ಯಾಲಯ, ಚಿತ್ರದುರ್ಗ, ೨೦೦೯.

೩. ಪದ್ಮಾಕರ ಬಿ. ಕುಲಕರ್ಣಿ, **ಅಥಣಿಯ ಶ್ರೀ ಮುರುಘೇಂದ್ರ ಲಲಿತಕಲಾ ಮಹಾವಿದ್ಯಾಲಯ ನಡೆದು ಬಂದ ದಾರಿ,** ಬಿ.ಫ಼ಿ.ಇ.ಡಿ. ಚಿತ್ರಕಲಾ ಶಿಕ್ಷಕರ ಪ್ರೌಢ ಹಂತದ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಕಿರುಪ್ರಬಂಧ, ೨೦೦೭.

೪. ಪೂರ್ಣಿಮಾದೇವಿ ಜಿ., **ಕಲಾಕ್ಷೇತ್ರಕ್ಕೆ ರವೀಂದ್ರ ಕಲಾನಿಕೇತನ ಕೊಡುಗೆ,** ಎಂ.ವಿ.ಎ. ಕಿರುಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೫.

೫. ಪ್ರಕಾಶ ಎ.ಎಂ., **ಬೆಂಗಳೂರು ಕಲಾಮಂದಿರ ಒಂದು ಐತಿಹಾಸಿಕ ಅಧ್ಯಯನ,** ಎಂ.ವಿ.ಎ. ಕಿರುಪ್ರಬಂಧ, ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೧೦.

೬. ಬಂಡಿ ಪಿ.ವಿ. **ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ,** ಎಂ.ವಿ.ಎ. ಕಿರುಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೭.

೭. ರವಿಕುಮಾರ್ ಎಚ್.ಎನ್., **ತುಮಕೂರು ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದ ಕೊಡುಗೆ,** ಎಂ.ವಿ.ಎ. ಕಿರುಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೧೫.

೮. ರಾಥೋಡ್ ಕೆ.ಬಿ., **ಮಹೇಶ್ ಚಿತ್ರಕಲಾ ಮಹಾವಿದ್ಯಾಲಯ, ಜಮಖಂಡಿ,** ಎಂ.ವಿ.ಎ. ಕಿರುಪ್ರಬಂಧ, ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೧೦.

೯. ವಿಜಯಲಕ್ಷ್ಮೀ ಬಿ. ಸತ್ತಿಗೇರಿ, **ಚಿತ್ರಕಲಾ ಕ್ಷೇತ್ರಕ್ಕೆ ಧಾರವಾಡ ಭಾರತೀಯ ಕಲಾಕೇಂದ್ರದ ಕೊಡುಗೆ,** ಎಂ.ಎಫ್.ಎ. ಕಿರುಪ್ರಬಂಧ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, ೨೦೧೩.

೧೦. ಸಾವಿತ್ರಿ ಎಸ್. ಟೆಂಕಲಿ, **ದೃಶ್ಯಕಲಾ ಕ್ಷೇತ್ರಕ್ಕೆ ಶ್ರೀ ಸಿದ್ದೇಶ್ವರ ಕಲಾಮಂದಿರದ ಕೊಡುಗೆ** ಎಂ.ವಿ.ಎ. ಕಿರುಪ್ರಬಂಧ, ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ೨೦೧೩.

ಪಿಎಚ್.ಡಿ. ಮಹಾಪ್ರಬಂಧಗಳು

೧. ಕೃಷ್ಣವೇಣಿ, **ಬಳ್ಳಾರಿ ಜಿಲ್ಲೆಯ ಚಿತ್ರಕಲೆ,** ಪಿಎಚ್.ಡಿ. ಮಹಾಪ್ರಬಂಧ, ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

೨. ಗಿರೀಶ್ ಕುಮಾರ ಎಂ.ಕೆ., **ಕರ್ನಾಟಕ ಬುಡಕಟ್ಟು ಚಿತ್ರಕಲೆ,** ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೩. ಚಿತ್ರಗಾರ ಎಚ್.ಎನ್., **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ,** ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೪. ಮಲ್ಲಿಕಾರ್ಜುನ ಕೆ.ಜಿ., **ವಿಜಯನಗರ ಚಿತ್ರಕಲೆ ಪರಂಪರೆ,** ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭.

೫. ರೇಣುಕಾ ಮಾರ್ಕಾಂಡೆ, **ಕರ್ನಾಟಕ ವೈಷ್ಣವ ಪರಂಪರೆ ಚಿತ್ರಕಲೆ,** ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

೬. ಲಮಾಣಿ ಬಿ.ಎಲ್., **ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ,** ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩.

೭. ವಜೀರ್ ಭಾಷಾ, ಮ. ಭಾಗಯತ್, **ಕರ್ನಾಟಕ ಮುಸ್ಲಿಮ್ ಅರಸರ ಕಾಲದ ಚಿತ್ರಕಲೆ ಒಂದು ಅಧ್ಯಯನ(೧೪೦೦-೧೮೦೦),** ಪಿಎಚ್.ಡಿ. ಮಹಾಪ್ರಬಂಧ, ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೮. ಶರಣಬಸಪ್ಪ ಕೋಲ್ಕಾರ್, **ಕೊಪ್ಪಳ ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ,** ಪಿಎಚ್.ಡಿ. ಮಹಾಪ್ರಬಂಧ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩.

೯. ಸತೀಶ್‌ಕುಮಾರ್ ಪಿ. ವಲ್ಲೇಪುರೆ, **ಮುಂಬಯಿ ಸರ್.ಜೆ.ಜೆ. ಕಲಾಶಾಲೆಯ ಪ್ರಾತಿನಿಧಿಕ ಕರ್ನಾಟಕದ ಕಲಾವಿದರು-ಒಂದು ಅಧ್ಯಯನ,** ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೧೦.

೧೦. ಸಿದ್ಧಲಿಂಗಸ್ವಾಮಿ ಹಿರೇಮಠ, **ಕಲಾವಿದರ ಆರ್.ಎಂ. ಹಡಪದ-ಒಂದು ಅಧ್ಯಯನ,** ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

ಸಂಚಿಕೆಗಳು

೧. ನಾಗರಾಜ ಕಿ.ರಂ., **ಕಲಾಮಂದಿರ ೭೫ : ಅಮೃತ ಮಹೋತ್ಸವ ಸ್ಮರಣ ಸಂಚಿಕೆ,** ಚೈತನ್ಯಶೀಲ ಕಲಾಮೂಲ, ಬೆಂಗಳೂರು, ೧೯೯೪.

೨. ಮಹೇಂದ್ರ ಡಿ., **ಕರ್ನಾಟಕ ಕಲಾವಾರ್ತೆ,** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೯.

೩. ಪರಶುರಾಮ ಪಿ., **ದೃಶ್ಯ ಬೆಳಕು,** ಪರಶುರಾಮ ಪಿ. ಪ್ರಕಾಶನ, ಗುಲಬರ್ಗಾ, ೨೦೧೫.

೪. ಪುಂಡಲೀಕ ಕಲ್ಲಿಗನೂರ, **ಕರ್ನಾಟಕ ಕಲಾವಾರ್ತೆ,** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೭.

೫. ಪಾಟೀಲ ಎಸ್.ಸಿ., **ಚಿತ್ರಾಕ್ಷಿ : ವಜ್ರಮಹೋತ್ಸವ ಸ್ಮರಣ ಸಂಚಿಕೆ,** ಶ್ರೀ ಡಿ.ವ್ಹಿ., ಹಾಲಬಾವಿ ಸ್ಕೂಲ್ ಆಫ್ ಆರ್ಟ್, ವಜ್ರಮಹೋತ್ಸವ ಸಮಿತಿ, ಧಾರವಾಡ, ೧೯೯೫.

೬. ವಿನುತ ಜಿ., **ಟೀಚರ್ ಸಂಚಿಕೆ–೩,** ಭಾರತ ಜ್ಞಾನ ವಿಜ್ಞಾನ ಸಮಿತಿ, ಬೆಂಗಳೂರು, ೨೦೧೬.

೭. ವಿಲ್ಸನ್ ಎಸ್. ಸೋನಗರ್, ಡಾ. ಮೋಹನರಾವ್ ಬಿ. ಪಂಚಾಳ, **ನೆನಪಿನ ಸಂಚಿಕೆ ವಜ್ರ ವಿಜಯ,** ವಿಜಯ ಕಲಾಮಂದಿರ, ವಜ್ರಮಹೋತ್ಸವ ಸಮಿತಿ, ಗದಗ, ೨೦೦೮.

೮. ಶಿವಾನಂದ ಎಚ್. ಬಂಟನೂರು, **ಕರ್ನಾಟಕ ಶಿಲ್ಪ ಸಂಚಲನ, ಸಂಚಿಕೆ–೧, ಸಂಪುಟ–೧,** ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೧೭.

೯. ಸಿದ್ಧನಗೌಡ ಪಾಟೀಲ, **ಹೊಸತು,** ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, ೨೦೧೭.

ಗ್ಯಾಜಿಟಿಯರ್‌ಗಳು

೧. ಸೂರ್ಯನಾಥ ಯು. ಕಾಮತ್, **ಕರ್ನಾಟಕ ರಾಜ್ಯ ಗ್ಯಾಝೆಟಿಯರ್, ಭಾಗ- ಮೂರು,** ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೮೬.

೨. ಸೂರ್ಯನಾಥ ಯು. ಕಾಮತ್, ಎಂ.ಎಚ್. ಕೃಷ್ಣಯ್ಯ (ಸಂ), **ಬೆಂಗಳೂರು ದರ್ಶನ, ಸಂಪುಟ–೨,** ಉದಯಭಾನು ಕಲಾ ಸಂಘ(ನೋಂ), ಬೆಂಗಳೂರು, ೨೦೦೫.

ಎಂ.ಫಿಲ್. ಕಿರುಪ್ರಬಂಧಗಳು

೧. ಉಮೇಶ್ ಎಸ್., **ಕರ್ನಾಟಕ ಜೈನ ಚಿತ್ರಕಲೆ,** ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨. ಗಿರಿಜಾ ಎಸ್. ಬಿರಾದಾರ, **ವಿಜಾಪುರ ಜಿಲ್ಲೆಯ ಚಿತ್ರಕಲೆ,** ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೩. ಬಸವರಾಜ ಕಲೆಗಾರ, **ಯಾದಗಿರಿ ಜಿಲ್ಲೆಯ ಚಿತ್ರಕಲೆ,** ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩.

೪. ಮಹಾಕೂಟೇಶ್ವರ ಗೌಡ ಎಸ್. ಪಾಟೀಲ, **ಬೆಳಗಾವಿ ಜಿಲ್ಲೆಯ ಚಿತ್ರಕಲೆ,** ಎಂ.ಫಿಲ್. ಸಂಪ್ರಬಂಧ, ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೫. ಯೋಗೀಶ್ ಎಚ್., **ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ,** ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮,

೬. ವೈಶಾಲಿಬಾಯಿ ಬಿ. ಕಾಂಬಳೆ, **ಬೀದರ ಜಿಲ್ಲೆಯ ಚಿತ್ರಕಲೆ,** ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

೭. ಸಂತೋಷ ಕುಮಾರ್ ಕುಲಕರ್ಣಿ, **ದಾವಣಗೆರೆ ಜಿಲ್ಲೆಯ ಚಿತ್ರಕಲೆ,** ಎಂ.ಫಿಲ್. ಸಂಪ್ರಬಂಧ, ದೃಶ್ಯಕಲಾ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ಇಂಗ್ಲಿಷ್ ಗ್ರಂಥಗಳು

1. Dollegouoler S.G. (Edited by), **Sharanabasava The Grance Abounding,** Visway Prints, Bangalore, 2015.

2. Goswamy B.N. and Dahman A.L., Dallapicco(Ed), **An Early Document of India Art(The Chiralaksana of Nagnajit),** New Delhi, 1976.

3. Italo L. DE Francesco, **Art Education,** Harper and Row Publishers, New York, 1958.

4. John Juliyaes Narvich, **Axford Ellustrited Ensysopedeya of the Art,** 1879.

5. John Juliyaes Narvich, **Story of its Carees,** Govt. of Maharastra.

6. **Mohan Mohinuddin : Sunset of Srirangapattan,** 2000.

7. Roy C. Caven, **Indaian Art,** A Concise History Indian Art, 1976.

8. Steve Herne, Sue Cox and Robert Watts, **Primary Art Education,** Intellect Books, Chicago, 2009.

❖❖❖

ಛಾಯಾಚಿತ್ರಗಳು




ಕಲಾಮಂದಿರ, ಬೆಂಗಳೂರು



ಜೆ.ಎಸ್.ಎಸ್. ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ



ವಿಜಯ ಕಲಾಮಂದಿರ, ಗದಗ



ವಿಜಯ ಕಲಾಮಂದಿರ, ಗದಗ



ಶ್ರೀ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ, ಹುಬ್ಬಳ್ಳಿ



ಕಾಲೇಜ್ ಆಫ್ ವಿಜ್ಯುವಲ್ ಆರ್ಟ್, ಕಲಬುರ್ಗಿ



ದಿ ಐಡಿಯಲ್ ಫೈನ್ ಆರ್ಟ್ ಇನ್‌ಸ್ಟಿಟ್ಯೂಟ್, ಕಲಬುರ್ಗಿ



ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್, ಮೈಸೂರು



ವಿಶ್ವವಿದ್ಯಾಲಯದ ಲಲಿತಕಲಾ ಮಹಾವಿದ್ಯಾಲಯ, ದಾವಣಗೆರೆ



ಚಿತ್ರಕಲಾ ಪರಿಷತ್ತು, ಬೆಂಗಳೂರು



ಕೆನ್ ಕಲಾಶಾಲೆ, ಬೆಂಗಳೂರು



ಭಾರತೀಯ ಕಲಾ ಕೇಂದ್ರ, ಧಾರವಾಡ



ಬೆನಾನ್‌ಸ್ಮಿತ್ ಕಾಲೇಜ್ ಆಫ್ ಫೈನ್ ಆರ್ಟ್ಸ್, ಬೆಳಗಾವಿ



ಸರಕಾರಿ ಚಿತ್ರಕಲಾ ಮಹಾವಿದ್ಯಾಲಯ, ಧಾರವಾಡ



ವಾಣಿ ಚಿತ್ರಕಲಾ ಕಾಲೇಜು, ಚಿಕ್ಕನಾಯಕನಹಳ್ಳಿ



ಜೆ.ಎಸ್.ಚಿತ್ರಕಲಾ ಮಹಾವಿದ್ಯಾಲಯ, ಗದಗ



ನಿರ್ಮಲಾ ಚಿತ್ರಕಲಾ ಮಹಾವಿದ್ಯಾಲಯ, ಹಾಸನ



ರವೀಂದ್ರ ಕಲಾನಿಕೇತನ, ತುಮಕೂರು



ಸಿದ್ಧೇಶ್ವರ ಕಲಾಮಂದಿರ, ವಿಜಯಪುರ



ಚಾಮರಾಜೇಂದ್ರ ಸರಕಾರಿ ದೃಶ್ಯಕಲಾ ಕಾಲೇಜು, ಮೈಸೂರು



ಯೋಗೀಶ ಚಿತ್ರಕಲಾ ಮಹಾವಿದ್ಯಾಲಯ, ಬೀದರ



ಚಿತ್ರಕಲಾ ಮಹಾವಿದ್ಯಾಲಯ, ಹೂವಿನ ಹಿಪ್ಪರಗಿ



ಶ್ರೀ ಮುರುಘೇಂದ್ರ ಲಲಿತಕಲಾ ಮಹಾವಿದ್ಯಾಲಯ, ಅಥಣಿ



ಶ್ರೀ ವಿವೇಕಾನಂದ ಕಲಾಮಂದಿರ, ರಾಯಬಾಗ



ಶ್ರೀ ವಿವೇಕಾನಂದ ಕಲಾಮಂದಿರ, ರಾಯಬಾಗ (ನೂತನ ಕಟ್ಟಡ)



ಕರ್ನಾಟಕ ಲಲಿತಕಲಾ ಮಹಾವಿದ್ಯಾಲಯ, ಗೋಕಾಕ



ಶ್ರೀ ಗುರು ಕಲಾಮಂದಿರ, ರಾಯಚೂರು



ಚಿತ್ರಕಲಾ ಮಹಾವಿದ್ಯಾಲಯ, ರಟ್ಟಿಹಳ್ಳಿ



ವೈಜಯಂತಿ ಚಿತ್ರಕಲಾ ಮಹಾವಿದ್ಯಾಲಯ, ಮೈಸೂರು



ಲಲಿತಕಲಾ ಮಹಾವಿದ್ಯಾಲಯ, ಚಿಕ್ಕೋಡಿ



ರವೀಂದ್ರ ಚಿತ್ರಕಲಾ ನಿಕೇತನ, ರೋಣ



ನಾಗನೂರು ಡಾ. ಶಿವಬಸವಸ್ವಾಮಿ ಲಲಿತಕಲಾ ಮಹಾವಿದ್ಯಾಲಯ, ಬೆಳಗಾವಿ



ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಳಕಲ್



ಶಿವಯೋಗೇಶ್ವರ ಲಲಿತಕಲಾ ಮಹಾವಿದ್ಯಾಲಯ, ಬೈಲಹೊಂಗಲ



ಕರ್ನಾಟಕ ಗಡಿನಾಡು ಚಿತ್ರಕಲಾ ಮಹಾವಿದ್ಯಾಲಯ. ನಿಪ್ಪಾಣಿ



ಶ್ರೀ ಗುರುಪಾದಪ್ಪ ಚಿತ್ರಕಲಾ ಮಹಾವಿದ್ಯಾಲಯ, ಮುದ್ದೇಬಿಹಾಳ



ರಾಜಾ ರವಿವರ್ಮ ಚಿತ್ರಕಲಾ ಮಹಾವಿದ್ಯಾಲಯ, ಬಸವನ ಬಾಗೇವಾಡಿ



ನೂತನ ಲಲಿತಕಲಾ ಮಹಾವಿದ್ಯಾಲಯ, ಲಿಂಗಸೂರು



ಸರಕಾರಿ ಚಿತ್ರಕಲಾ ಮಹಾವಿದ್ಯಾಲಯ, ತುಮಕೂರು



ನೂತನ ಲಲಿತಕಲಾ ಮಹಾವಿದ್ಯಾಲಯ, ಸಿಂಧನೂರು




ಸೃಜನ ಲಲಿತಕಲಾ ಮಹಾವಿದ್ಯಾಲಯ, ಧಾರವಾಡ



ಬ್ಲೂಸ್ಟಾರ್ ಚಿತ್ರಕಲಾ ಮಹಾವಿದ್ಯಾಲಯ, ಯಾದಗಿರಿ



ಸಿದ್ಧಾರ್ಥ ಲಲಿತಕಲಾ ಫೈನ್ ಆರ್ಟ್ ಕಾಲೇಜ, ಗೋಕಾಕ



ಹಂಪಿ ಲಲಿತಕಲಾ ಮಹಾವಿದ್ಯಾಲಯ, ಹೊಸಪೇಟೆ



ಭವಾನಿ ಲಲಿತಕಲಾ ಮಹಾವಿದ್ಯಾಲಯ, ಬಳ್ಳಾರಿ



ಶ್ರೀ ವೀರಭದ್ರೇಶ್ವರ ಚಿತ್ರಕಲಾ ಮಹಾವಿದ್ಯಾಲಯ, ಹುಮನಾಬಾದ



ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯ, ಬಸವಕಲ್ಯಾಣ



ಡಾ. ಎಸ್.ಎಂ ಪಂಡಿತ್ ಚಿತ್ರಕಲಾ ಮಹಾವಿದ್ಯಾಲಯ, ಬೀದರ್



ದಿ ಆರ್ಟ್ ಇಂಟಿಗ್ರೇಶನ್ ಚಿತ್ರಕಲಾ ಮಹಾವಿದ್ಯಾಲಯ. ಕಲಬುರ್ಗಿ



ಕನ್ನಡ ವಿಶ್ವವಿದ್ಯಾಲಯ ಹಂಪಿ, ಶಿಲ್ಪ ಮತ್ತು ಪ್ರತಿಮಾಶಾಸ್ತ್ರ
ವಿಭಾಗ, ಬಾದಾಮಿ ಬನಶಂಕರಿ



ಶ್ರೀಭುವನೇಶ್ವರಿ ಲಲಿತಕಲಾ ಮಹಾವಿದ್ಯಾಲಯ, ಹೂವಿನ ಹಡಗಲಿ



ದೃಶ್ಯಕಲಾ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ (ಭುವನ ವಿಜಯ)



ದೃಶ್ಯಕಲಾ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ



ಪೂಜ್ಯ ಚನ್ನಬಸವ ಪಟ್ಟದೇವರು
ಚಿತ್ರಕಲಾ ಮಹಾವಿದ್ಯಾಲಯ, ಭಾಲ್ಕಿ



ರವಿವರ್ಮ ಚಿತ್ರಕಲಾಶಾಲೆ, ಮೈಸೂರು



ದಿ ನ್ಯಾಚುರಲ್ ಫೈನ್ ಆರ್ಟ್ ಕಾಲೇಜು, ಬೀದರ್



ಮಹಾದೇವಪ್ಪ ಹಿರೇನೂರು ಕಾಲೇಜ್ ಆಫ್ ವಿಜ್ಯುವಲ್ ಆರ್ಟ್, ಯಾದಗಿರಿ



ದೃಶ್ಯಕಲಾ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು



ಭಾರತ ರತ್ನ ಡಾ. ಎಂ.ಎಸ್.ಸುಬ್ಬಲಕ್ಷ್ಮೀ ಲಲಿತಕಲಾ ವಿಭಾಗ
ತುಮಕೂರು ವಿಶ್ವವಿದ್ಯಾಲಯ, ತುಮಕೂರು



ದೃಶ್ಯಕಲಾ ಅಧ್ಯಯನ ವಿಭಾಗ ಗುಲಬರ್ಗಾ ವಿಶ್ವವಿದ್ಯಾಲಯ. ಕಲಬುರ್ಗಿ



ನೂತನ ಪದವಿ ಮಹಾವಿದ್ಯಾಲಯ ಚಿತ್ರಕಲಾ ವಿಭಾಗ, ಕಲಬುರ್ಗಿ



ದೃಶ್ಯಕಲಾ ವಿಭಾಗ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ



ನೂತನ ಪದವಿ ಮಹಾವಿದ್ಯಾಲಯ ಚಿತ್ರಕಲಾ ವಿಭಾಗ, ಕಲಬುರ್ಗಿ



ಗೋದುತಾಯಿ ದೊಡ್ಡಪ್ಪ ಅಪ್ಪ ಕಲಾ ಹಾಗೂ ವಾಣಿಜ್ಯ
ಮಹಾವಿದ್ಯಾಲಯ ಲಲಿತಕಲಾ ವಿಭಾಗ, ಕಲಬುರ್ಗಿ



ಶರಣಬಸವೇಶ್ವರ ಕಲಾ ಮಹಾವಿದ್ಯಾಲಯ ಲಲಿತಕಲಾ ಕೇಂದ್ರ ಕಲಬುರ್ಗಿ



ಶ್ರೀ ಅಲ್ಲಮಪ್ರಭು ಲಲಿತಕಲಾ ಅಕಾಡೆಮಿ, ಮೈಸೂರು



ಶ್ರೀ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ ಹುಬ್ಬಳ್ಳಿ

